ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು : ಚಾರಿತ್ರಿಕ ಅಧ್ಯಯನ

ಪಿಹೆಚ್. ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾದ
ಮಹಾಪ್ರಬಂಧ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೮

ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು : ಚಾರಿತ್ರಿಕ ಅಧ್ಯಯನ.

ಪಿಹೆಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾದ ಮಹಾಪ್ರಬಂಧ

ಸಂ- M.H ವಿಜಯ್ ಕುಮಾರ್
ಮಾ- ಲಕ್ಷ್ಮಣ ತೆಲಗಾವಿ

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-೫೮೩೨೭೬

೨೦೦೮

ಪರಿವಿಡಿ

ಅಧ್ಯಾಯ-೧

೧.೧. ಪ್ರಸ್ತಾವನೆ./೨

೧.೧.೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ./೪

೧.೧.೨. ಸಾಹಿತ್ಯಕ ಮತ್ತು ಚಾರಿತ್ರಿಕ ಆಧಾರಗಳ ಪರಿಶೀಲನೆ.೧೨

೧.೧.೩. ಭೌಗೋಳಿಕ ವ್ಯಾಪ್ತಿ ಮತ್ತು ಸ್ಮಾರಕಗಳ ಮಹತ್ವ/೨೩

ಅಧ್ಯಾಯ-೨

೨.೨. ಮರುಳಸಿದ್ಧರಿಗೆ ಸಂಬಂಧಿಸಿದ ಕಥೆಗಳು : ಸಮೀಕ್ಷೆ./೩೫

೨.೨.೧. ದೇವಕವಿ ಕೃತ ಮರುಳಸಿದ್ಧ ಕಾವ್ಯ/೩೭

೨.೨.೨. ಕವಿ ರೇವಣಸಿದ್ಧ ವಿರಚಿತ ಮರುಳಸಿದ್ಧ ದೇವರ ಚರಿತ್ರೆ/೫೬

೨.೨.೩. ರಾಮಗಿರಿಯ ನಾಗಭೂಷಣನ ಕವಿಯ ಸಾಂಗತ್ಯ/೬೫

೨.೨.೪. ಉಜ್ಜಯಿನಿಯ ಗೊಂಗಡಿ ವೀರಭದ್ರಯ್ಯನ ಸಾಂಗತ್ಯ./೬೬

೨.೨.೫. ಚಿಕ್ಕರಾಚನ ಮಹಾದೇವಿಯಕ್ಕನ ಸಾಂಗತ್ಯ./೬೭

೨.೨.೬. ನಂದೀಶ ಕವಿಯ ಮರುಳಾರಾದ್ಯ ವಿಜಯ ಚರಿತೆ./೬೯

೨.೨.೭. ಪರ್ವತೇಶ ವಿರಚಿತ ಚತುರಾಚಾರ್ಯ ಚಾರಿತ್ರ./೭೨

೨.೨.೮. ಚತುರಾಚಾರ್ಯ ಪ್ರಬಂಧ./೭೩

೨.೨.೯. ಸಂಸ್ಕೃತದಲ್ಲಿರುವ ಆಗಮಗಳು/೭೫

೨.೨.೧೦. ಶ್ರೀ ಮರುಳಸಿದ್ಧ ಸ್ತೋತ್ರ ಸಂಗ್ರಹ./೭೭

೨.೨.೧೧. ಅನುಷಂಗಿಕವಾದ ಕಾವ್ಯಗಳಲ್ಲಿ ಮರುಳಸಿದ್ಧರ ಉಲ್ಲೇಖ./೭೮

೨.೨.೧೨. ಮರುಳಸಿದ್ಧ ವಚನಕಾರರಾಗಿ/೮೧

೨.೨.೧೩. ಮರುಳಸಿದ್ಧರ ಕುರಿತು ಆದಯ್ಯನ ಎರಡು ವಚನಗಳು/೮೨

೨.೨.೧೪. ಮೌಖಿಕ ಆಕಾರಗಳಲ್ಲಿ ಮರುಳಸಿದ್ಧರ ಕುರಿತು ಕಥೆಗಳ ಸಮೀಕ್ಷೆ/೮೩

ಅಧ್ಯಾಯ-೩

೩.೩. ಮರುಳಸಿದ್ಧರ ಜೀವನ ಮತ್ತು ಸಾಧನೆ ಚಾರಿತ್ರಿಕ ನೆಲೆಯಲ್ಲಿ./೧೦೩

೩.೩.೧. ಮರುಳಸಿದ್ಧರ ಮೂಲ ಸ್ಥಳ ಮತ್ತು ಪರಿಸರ/೧೨೭

೩.೩.೨. ಮರುಳಸಿದ್ಧರ ಹುಟ್ಟುಕಾಲ ಮತ್ತು ಜನ್ಮಸ್ಥಳ ಕುರಿತು ಕೆಲವು ಭಿನ್ನಾಭಿಪ್ರಾಯಗಳು./೧೨೯

೩.೩.೩. ಪಂಚಪೀಠಾಧಿಪತಿಗಳಾಗಿ ಮರುಳಸಿದ್ಧರು ಒಂದು ಜಿಜ್ಞಾಸೆ./೧೪೩

೩.೩.೪. ಗುರು ರೇವಣಸಿದ್ಧರಿಂದ ಪಡೆದ ಲಿಂಗ ದೀಕ್ಷೆ./೧೪೯

೩.೩.೫. ಮರುಳಸಿದ್ಧರ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು/೧೫೧

೩.೩.೬. ಮರುಳಸಿದ್ಧ ಶರಣರಾಗಿ/೧೫೯

ಅಧ್ಯಾಯ-೪

೪.೪. ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು/೧೭೨

೪.೪.೧. ದೇವಸ್ಥಾನಗಳು./

೪.೪.೨. ಮಠಗಳು./೧೮೩

೪.೪.೩. ಕರ್ನಾಟಕದ ಇತರ ಸ್ಥಳಗಳಲ್ಲಿನ ಸ್ಮಾರಕಗಳು./೨೦೧

ಅಧ್ಯಾಯ-೫

೫.೫. ಕೆಲವು ಜಿಜ್ಞಾಸೆಗಳು /೨೧೩

೫.೫.೧. ಮರುಳಸಿದ್ಧರು ಧಾರ್ಮಿಕ ಪುರುಷರೇ ಒಂದು ಜಿಜ್ಞಾಸೆ./೨೧೪

೫.೫.೨. ಮರುಳಸಿದ್ಧರ ಚಾರಿತ್ರಿಕತೆ./೨೨೦

೫.೫.೩. ಆರಾಧ್ಯ ದೈವವಾಗಿ ಮರುಳಸಿದ್ಧರು./೨೨೫

ಅಧ್ಯಾಯ-೬

೬.೬. ಸಮಾರೋಪ./೨೩೨

ಅನುಬಂಧಗಳು.

- ಶಾಸನಗಳ ಸೂಚಿ/೨೪೩
- ಶ್ರೀ ಮರುಳಚರಿತ್ರೆ ನೆರಳಚ್ಚು ಪ್ರತಿ/೨೪೫
- ದೇವಕವಿ ಕೃತ 'ಮರುಳಸಿದ್ಧ ಚರಿತೆ'ಯ ಎರಡು ಗರಿಗಳ ಛಾಯಾಚಿತ್ರ./೨೪೬
- ತರಳಬಾಳು ಸಂಸ್ಥಾನ ಮಠದ ಗುರುವರ್ಗದ ಪಟ್ಟವಲ್ಲರಿ./೨೪೭
- ತರಳಬಾಳು ಸಂಸ್ಥಾನ ಮಠದ ಗುರುವರ್ಗದ ಪಟ್ಟವಲ್ಲರಿಯ ಛಾಯಾಚಿತ್ರ ಹಳೆಯ ದಾಖಲೆಯ ನಕಲು ಪ್ರತಿ/೨೪೯
- ಜನಪದ ಹಾಡುಗಳು/೨೫೩–೨೫೫
- ವಕ್ತೃಗಳು/೨೫೬
- ಗ್ರಂಥಋಣ/೨೫೮
- ಛಾಯಾಚಿತ್ರಗಳು/೨೭೪

ದೇವಕವಿಯ ಮರುಳಸಿದ್ಧ ಕಾವ್ಯದಲ್ಲಿ ಸೂಚಿತವಾದ
ವಿಶ್ವಬಂಧು ಮರುಳಸಿದ್ಧನ ಲೀಲಾ (ಪವಾಡ) ಕ್ಷೇತ್ರಗಳು



ಕೃಪೆ ತರಳಬಾಳು ಪಟ್ಟಾಭಿಷೇಕ ಸ್ಮರಣ ಸಂಚಿಕೆ



ಕೃಪೆ: ತರಳಬಾಳು ಪಟ್ಟಾಭಿಷೇಕ ಸ್ಮರಣ ಸಂಚಿಕೆ

ಅಧ್ಯಾಯ ೧

೧.೧. ಪ್ರಸ್ತಾವನೆ.

೧.೧.೧. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.

೧.೧.೨. ಸಾಹಿತ್ಯಕ ಮತ್ತು ಚಾರಿತ್ರಿಕ ಆಧಾರಗಳ ಪರಿಶೀಲನೆ.

೧.೧.೩. ಭೌಗೋಳಿಕ ವ್ಯಾಪ್ತಿ ಮತ್ತು ಸ್ಮಾರಕಗಳ ಮಹತ್ವ

೧.೧ ಪ್ರಸ್ತಾವನೆ :

ಚಾರಿತ್ರಿಕವಸ್ತು ದೃಷ್ಟಿಯಿಂದ ಹೊರತರಬೇಕಾದರೆ ಚರಿತ್ರೆಯ ಅಧ್ಯಯನದ ಪುನರ್ ಮೌಲೀಕರಣ ಆಗಬೇಕು. ಚರಿತ್ರೆಯನ್ನು ಕೆಳವರ್ಗದ ಅಧೀನ ಸಂಸ್ಕೃತಿಗಳ ಅಧ್ಯಯನದ ನೆರವಿನಿಂದ ಪುನರ್ ರಚಿಸಬೇಕಾಗಿದೆ. ಇದಕ್ಕೆ ಚರಿತ್ರೆಯ ವಸ್ತುನಿಷ್ಟ ಅಧ್ಯಯನದ ನೆಲೆಗಳನ್ನು ವರ್ಗ, ವರ್ಣಲಿಂಗಾಧಾರಿತ, ಆರ್ಥಿಕಾಧಾರಿತ, ಸಾಮಾಜಿಕ ಮತ್ತು ಧಾರ್ಮಿಕಾಧಾರಿತ ನೆಲೆಗಳನ್ನು ಅರಿಯಬೇಕಾಗಿದೆ. ಇತಿಹಾಸದುದ್ದಕ್ಕೂ ನಡೆದು ಬಂದಿರುವ ಧಾರ್ಮಿಕ ಮತ್ತು ಸಾಮಾಜಿಕ ಚಳುವಳಿಗಳನ್ನು ಅವಲೋಕಿಸಿದಾಗ ಸಮಾಜ ಒಂದೆಡೆ ಸಂಘಟನೆಯಾಗುತ್ತಾ ಬಂದಿರುವಂತೆ ಕಂಡು ಬಂದರೂ ಮತ್ತೊಂದು ನೆಲೆಯಲ್ಲಿ ಛಿದ್ರಗೊಳ್ಳುತ್ತಲೇ ಬಂದಿರುವುದು ಗೋಚರಿಸುತ್ತದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಶೋಷಣೆ ಗಟ್ಟಿಗೊಳ್ಳುತ್ತಲೇ ಬಂದಿರುತ್ತದೆ. ಪ್ರತಿಷ್ಠಿತವರ್ಗದ ಧಾರ್ಮಿಕ ವಿಸ್ತರಣೆಯ ದಾಹದ ಸಂಚು ಅಪ್ರತಿಷ್ಠತರ ಪ್ರತಿಭಟನೆಗೆ ಪಂಥಾಹ್ವಾನ ನೀಡಿದ್ದು. ಅಧೀನ ವರ್ಗದ ಜನತೆ ಧಾರ್ಮಿಕ ಸವಲತ್ತುಗಳಿಗಾಗಿ ಧಾರ್ಮಿಕ ಸ್ಥಾನಮಾನಗಳನ್ನು ಗಳಿಸಲು ನಡೆಸುತ್ತಿರುವ ನಿರಂತರ ಹೋರಾಟವೇ. ಭಾರತದಂತಹ ದೇಶದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಚರಿತ್ರೆಯಾಗಿ ಪರಿಣಮಿಸಿದೆ. ಬಸವ ಪೂರ್ವಯುಗದಲ್ಲಿಯೂ ಕರ್ನಾಟಕದಲ್ಲಿ ಇಂತಹುದೇ ಧಾರ್ಮಿಕ ಮತ್ತು ಸಾಮಾಜಿಕ ಸಂಘರ್ಷಗಳು ಕಂಡುಬರುತ್ತದೆ. ಶತಮಾನಗಳಿಂದಲೂ ವೈದಿಕ, ಜೈನ, ಬೌದ್ಧ, ಶೈವ ಧರ್ಮಗಳ ನಡುವೆ ಪರಸ್ಪರ ಕಾದಾಟಗಳು ನಡೆದೇ ಇವೆ.

ಹನ್ನೆರಡನೆಯ ಶತಮಾನದ ಆದಿಯಲ್ಲಿ, ಕರ್ನಾಟಕದ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆ ಅನೇಕ ಬಗೆಯಲ್ಲಿ ಶೋಚನೀಯ ಸ್ಥಿತಿಗೆ ಒಳಗಾಗಿತ್ತು. ಧರ್ಮ ದೇವರುಗಳ ಹೆಸರಿನಲ್ಲಿ ನಾನಾಬಗೆಯ ಅಸಹ್ಯ ಆಚರಣೆಗಳು ರೂಢಿಯಲ್ಲಿದ್ದವು. ಒಟ್ಟಾರೆ ಭಾರತದ ಸಾಮಾಜಿಕ ಪರಿಸರವೇ ಜಾತಿ ವಿಂಗಡಣೆಯಿಂದ ಛಿದ್ರವಾಗಿತ್ತು. ಹೀಗಾಗಿ ಮುಗ್ಧರಾದ ಜನರು ಒಂದು ಬಗೆಯ ಗೊಂದಲಕ್ಕೊಳಗಾಗಿದ್ದರು. ಅತ್ಯಂತ ಸೂಕ್ಷ್ಮಜ್ಞರಾದ ವ್ಯಕ್ತಿಗಳಿಗೆ ಇದು ವಿಷಾದದ ಪರಿಸ್ಥಿತಿಯೆನಿಸಿದ್ದರ ಜೊತೆಗೆ ಅದನ್ನು ಹೋಗಲಾಡಿಸಲು ಸಾತ್ವಿಕವಾದ ಜೀವನಪರ ಚಳುವಳಿಯನ್ನು ಮಾಡುವುದರ ಅವಶ್ಯಕತೆಯನ್ನು ಎತ್ತಿ ಹಿಡಿದರು. ಬಸವಾದಿಗಳ ಕಾಲಕ್ಕೆ ಚಳುವಳಿಯು ವ್ಯಾಪಕವಾಗಿ ಬೆಳೆಯಲು ಪರಿಸರವು ಹದಗೊಂಡಿದ್ದು ಪವಾಡ ಸದೃಶ ರೀತಿಯಲ್ಲಿ ಅದು ಹರಡಿತು. ವೀರಶೈವ ಧರ್ಮದಿಂದ ಶರಣರು ತಮ್ಮಿಂದ ಆಕರ್ಷಿತವಾಗಿತಮ್ಮ ತೆಕ್ಕೆಗೆ ಬಂದ ಸಾಮಾನ್ಯ ಜನರನ್ನು ಮತ್ತು ದಲಿತ ಜನರನ್ನು ಹೊಸ ಚೌಕಟ್ಟಿನಲ್ಲಿ ಹೊಂದಿಸುವ ಕೆಲಸಕ್ಕೆ ಶರಣರು ಸಾಕಷ್ಟು ಗಮನ ಹರಿಸಬೇಕಾಯಿತು.

ಈ ದಿಸೆಯಲ್ಲಿ ಹನ್ನೆರಡನೆ ಶತಮಾನದ ಶರಣರು ಕುಲ ಹದಿನೆಂಟು ಜಾತಿಗಳು, ಒಂದೇ ಎಂದು ಸಾರಿದ್ದ ಆಶಯ, ನಂತರದ ಶತಮಾನದಲ್ಲಿ ವೀರಶೈವ ಧರ್ಮದ ಸಾಂಸ್ಥಿಕ ಪ್ರಕ್ರಿಯೆಯಿಂದ ಒಡೆದು ಹೋಯಿತು. ವೀರಶೈವ ಧರ್ಮದ ಆಚಾರ ಮಾರ್ಗದಿಂದ ಅನೇಕ ಸಮುದಾಯ ಹೊರಗುಳಿದವು. ಹೀಗೆ ಹೊರಗುಳಿದ ಸಮುದಾಯಗಳಲ್ಲಿ ಕೆಳವರ್ಗದ ಕಾಯಕ ಜೀವಿಗಳ ಮತ್ತು ಕುಶಲ ಕರ್ಮಿಗಳ ಸಂಖ್ಯೆ ಹೆಚ್ಚಿತು. ಅಂತಹವರಲ್ಲಿ ಮಡಿವಾಳ ಮಾಚಯ್ಯ, ಡೋಹರಕಕ್ಕಯ್ಯ, ಮಾದರ ಚನ್ನಯ್ಯ, ಅಂಬಿಗರ ಚೌಡಯ್ಯ, ಮಾದರ ಧೂಳಯ್ಯ, ಮೊದಲಾದ ಶರಣರು ಆಯಾ ಸಮುದಾಯದಲ್ಲಿ ಗುರುತಿಸಿಕೊಂಡವರು. ಅದೇ ರೀತಿಯಲ್ಲಿ ಇಂತಹ ಸಮುದಾಯದಲ್ಲಿ ಕಾಣಿಸಿಕೊಂಡ ಮತ್ತೊಬ್ಬ ಶರಣರಾದ ಮರುಳಸಿದ್ಧ ದಲಿತವರ್ಗದವ. ಇವರ ಕಾರ್ಯಕ್ಷೇತ್ರ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕ್ ಉಜ್ಜಯಿನಿ ಮರುಳಸಿದ್ಧರು ತೀರ ಕೆಳವರ್ಗದಲ್ಲಿ ಜನ್ಮಪಡೆದು ಆಚಾರ್ಯ ರೇವಣಸಿದ್ಧರಿಂದ ಉಪದೇಶ ಪಡೆದರು. ನಂತರ ಆಚಾರ್ಯ ಪರಂಪರೆಗೆ ಏರಿದ ಮರುಳಸಿದ್ಧರು ಇಂದಿಗೂ ಪ್ರಸಿದ್ಧಿ ಪಡೆದಿರುವ ಉಜ್ಜಯಿನಿ ಸದ್ಧರ್ಮ ಪೀಠದ ಮೂಲಸ್ಥಾಪಕರು ಹೌದು.

ದಲಿತ ವಚನಕಾರರು ತಮ್ಮ ಹಕ್ಕುಗಳಿಗಾಗಿ ಹೋರಾಡುವಂಥವರಾಗಿದ್ದು, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ವೈಚಾರಿಕ, ಮುಂತಾದ ರಂಗದಲ್ಲಿ ಎದುರು ನಿಲ್ಲುವುದಕ್ಕೆ ಹಂಬಲಿಸುತ್ತಾರೆ. ಅಂತವರಲ್ಲಿ ಮರುಳಸಿದ್ಧರು ಸಹ ಒಬ್ಬರು. ಲೋಕದಲ್ಲಿ ತುಂಬಿ ತುಳುಕುತ್ತಿರುವ ಅಂಧಃ ಶ್ರದ್ಧೆ, ಮೂಢ ಭಕ್ತಿ, ಕಂದಾಚಾರಗಳ ಹುಟ್ಟಳಿಸಿ, ಶುದ್ಧಾಂತರ ರಂಗದಲ್ಲಿ ನೈಜಭಕ್ತಿ, ಸಮ್ಯಕ್ ಜ್ಞಾನ, ಶುದ್ಧ ಮಾನವತೆ, ಸಮಾನ ಜೀವನ ಕ್ರಮಗಳು ನೆಲೆಗೊಂಡು ಲೋಕದ ತರಳರೆಲ್ಲರೂ ಸುಖವಾಗಿ ಬಾಳಬೇಕೆಂಬುದೇ ಮರುಳಸಿದ್ಧರ ನೀತಿಯಾಗಿತ್ತು. ದೇವಕವಿಯ ಮರುಳಸಿದ್ಧ ಚರಿತ್ರೆಯಲ್ಲಿ, ಕಂಡು ಬರುವಂತೆ ಮರುಳಸಿದ್ಧರ ತಂದೆ ಕೂಚಿಮಾರ, ತಾಯಿ ಸುಪ್ರಭೆ, ಇವರ ಪುತ್ರರಾಗಿ ಜನ್ಮವೆತ್ತಿದರು. ಊರು ಕಗ್ಗಲ್ಲುಪುರ, ಇವರು ಮಚ್ಚೆ ಕಾಯಕದ ಲಿಂಗವಂತರು. ಮರುಳಸಿದ್ಧರು ಜನನಾ ನಂತರ ತಂದೆ ತಾಯಿಗಳು ಮರಣ ಹೊಂದುತ್ತಾರೆ. ಆ ಕಗ್ಗಲ್ಲುಪುರದ ಪ್ರಭು ಬಾಚನಗೌಡ–ಮಲ್ಲಮ್ಮ ದಂಪತಿಗಳು ಈ ಶಿಶುವನ್ನು ಮನೆಗೆ ತಂದು ಸಾಕಿಕೊಳ್ಳುತ್ತಾರೆ. ಸ್ವಲ್ಪ ದೊಡ್ಡವನಾದ ಮೇಲೆ ಕರುಕಾಯುವ ಕಾಯಕಕ್ಕೆ ಹಚ್ಚುತ್ತಾರೆ. ಊರಿನಲ್ಲಿ ಒಂದು ದಿನ ಮಾರಿಹಬ್ಬ ನಡೆಯುತ್ತದೆ. ಮಾರಿಗಾಗಿ ಪ್ರಾಣಿಬಲಿ ಕೊಡಲು ಸಿದ್ಧತೆ ನಡೆದಿರುತ್ತದೆ. ಮರುಳಸಿದ್ಧರು ಇದನ್ನು ಪ್ರತಿಭಟಿಸಿ ಆ ಊರನ್ನು ಬಿಟ್ಟು ದೇಶ ಸಂಚಾರ ಕೈಗೊಂಡು ಕುರುಡಿ ಬೇತೂರಿಗೆ ಬರುತ್ತಾರೆ. ಅಲ್ಲಿ ಋತ್ವಿಜರು ಯಾಗ ಆರಂಭಿಸಿರುತ್ತಾರೆ.

ಆ ಯಾಗ ಶಾಲೆಯಲ್ಲಿ ಎಲ್ಲರಿಗೂ ಪ್ರವೇಶವಿರುವುದಿಲ್ಲ. ಅದನ್ನು ಪ್ರತಿಭಟಿಸುತ್ತಾರಲ್ಲದೆ ಯಾಗದ ನೆಪದಲ್ಲಿ ಅನ್ನಾಹಾರಾದಿಗಳ ದುರುಪಯೋಗವನ್ನು ಖಂಡಿಸಿ ಋತ್ವಿಜರ ಆಗ್ರಹಕ್ಕೆ ಗುರಿಯಾಗುತ್ತಾರೆ. ಅವರುಗಳಿಂದ ಕೆರೆಗೆ ತಳ್ಳಿಸಿಕೊಂಡು, ಹಗೇವಿಗೆ ಹಾಕಿ ಸುಣ್ಣ ಸುರಿಸಿಕೊಂಡು ಕಷ್ಟನಷ್ಟಗಳನ್ನು ಅನುಭವಿಸಿದರೂ ಈ ಎಲ್ಲ ಹಿಂಸೆಗಳಿಂದ ಪಾರಾಗಿ ಬರುತ್ತಾರೆ. ರಾಜ ಪ್ರಭುತ್ವ, ಧರ್ಮಪ್ರಭುತ್ವ, ಅಂತೆಯೇ ಸಾಮಾಜಿಕ ಪ್ರಭುತ್ವಗಳು ಮರುಳಸಿದ್ಧರನ್ನು ಪ್ರತಿಭಟಿಸಲು ಒಂದುಗೂಡುತ್ತವೆ. ಆನೆಯ ಕಾಲಿಗೆ ಕಟ್ಟಿ ತುಳಿಸಲು ರಾಜಾಜ್ಞೆಯಾದಾಗಲೂ ಅದರಿಂದ ಮರೆಯಾಗಿ ಮುಚ್ಚಿಕೊಳ್ಳುತ್ತಾರೆ. ಆ ಊರು ಇಂದು ಮುಚ್ಚನೂರು ಎಂದು ಕರೆಯಲ್ಪಡುತ್ತದೆ. ನಂತರ ಆನಗೋಡು ಎಂಬ ಸ್ಥಳದಲ್ಲಿ ಆನೆಗೆ ದೂರಾಗಿ ಅದರ ಕೋಡನ್ನು ಮುರಿಯುತ್ತಾರೆ. ಭೈರವಗೊಂಡ ಆತನ ಪತಿ ಲಿಂಗಮ್ಮ ಇವರಿಗೆ ಮಧ್ಯಮಾಂಸಗಳನ್ನು ಬಿಡಿಸಿ, ಲಿಂಗದೀಕ್ಷೆ ಕೊಡುತ್ತಾನೆ. ಗದ್ದುಗೆರಾಮಿತಂದೆಯ ಊರಾದ ರಾಮಶೆಟ್ಟಿ ಕೆರೆಯಲ್ಲಿ ಅವರ ಸ್ನೇಹಭಕ್ತಿ ಸಂಪಾದಿಸುತ್ತಾರೆ. ಅನಂತರ ಕೊಲ್ಲಾಪುರಕ್ಕೆ ಬಂದು ಕರಹಾಡದ ದೊರೆಯ ಮಗಳಾದ ಮಾಯದೇವಿಯ ವಾಮಾಚಾರವನ್ನು ಖಂಡಿಸಿ ಆಕೆಯನ್ನು ಶಿಷ್ಯಳನ್ನಾಗಿ ಮಾಡಿಕೊಳ್ಳುತ್ತಾರೆ. ಒಂಭತ್ತು ಪಾದ ಎಲ್ಲೆಯುಳ್ಳ ಸ್ಥಳವನ್ನು ವಾಸಸ್ಥಾನಕ್ಕೆ ಪಡೆಯುತ್ತಾರೆ. ಈ ಸ್ಥಳವೇ ಇಂದಿನ ಉಜ್ಜಯಿನಿ ಗ್ರಾಮ. ಇಲ್ಲಿ ತೆಲುಗುಬಾಳಿನಿಂದ ಕರೆತಂದಿದ್ದ ತನ್ನ ಶಿಷ್ಯ ಸಿದ್ಧಯ್ಯನನ್ನು ಸದ್ಧರ್ಮ ಗದ್ದುಗೆಯಲ್ಲಿ ಕುಳ್ಳಿರಿಸಿ ಉತ್ತರಾಧಿಕಾರವನ್ನು ಕೊಟ್ಟು ತರಳಬಾಳು ಎಂದು ಆಶೀರ್ವದಿಸುತ್ತಾರೆ. ಅಂತೆಯೇ ಅವರು ತರಳಾಬಾಳು ಸಿದ್ಧೇಶ್ವರನೆಂದು ಉಜ್ಜಯಿನಿ ಸದ್ಧರ್ಮ ಸಿಂಹಾಸನದ ಅಧಿಪತಿಯಾಗುತ್ತಾನೆ. ಇದುವೆ ಶ್ರೀತರಳಬಾಳು ಜಗದ್ಗುರು ಪೀಠ ಎನಿಸಿದೆ. ಕೆಲವರು ಇದು ಪಂಚಪೀಠಗಳಲ್ಲಿ ಒಂದು ಎಂದಿದ್ದಾರೆ.

ಮರುಳಸಿದ್ಧರು ಜಾತಿಯ ತಳಹದಿಯ ಮೇಲೆ ನಡೆದಿರುವ ಧರ್ಮಾಚರಣೆಯು ಕೊನೆಗೊಂಡು ವ್ಯಕ್ತಿಗಳ ಹಿರಿಮೆಯು ಅವರ ಯೋಗ್ಯತೆಯ ಮೇಲಿನಿಂದ ನಿರ್ಣಯಿಸಲ್ಪಡಬೇಕೆಂದು ಹೋರಾಡಿದವರು. ಆ ಕಾರಣಕ್ಕಾಗಿಯೇ ಅವರು ಇಡೀ ಜೀವಮಾನದಲ್ಲಿ ಜಾತಿವಾದಿಗಳಿಂದ ನೋವನ್ನುಂಡು ನಲಿದಾಡಿದನು. ಹಾಲಾಹಲವನ್ನುಂಡು ಹರ್ಷಗೊಂಡನು. ಯಾತನೆಯನ್ನು ಅನುಭವಿಸಿಯೂ ಯತಿಯಾದನು. ಲಿಂಗಾಂಗ ಸಾಮರಸ್ಯ ಸಾಧಿಸಿ ಶಿವಯೋಗಿಯಾದನು.

೧.೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಜಾಗತೀಕರಣ ಪ್ರಜ್ಞಾಲೋಕದ ವಿಕಾಸವಾದ ಇದಕ್ಕೆ ಶರಣರ ಆಶಯದ ನಿರೀಕ್ಷಿತ ಫಲಗಳ ರೀತಿ ಮಹತ್ವದ್ದು. ಶಿವಶರಣರದು ಬಹುಮುಖಿ ವ್ಯಕ್ತಿತ್ವ ಮರೆತ ಮಾನವನನ್ನು ಎಚ್ಚರಿಸಿದ ಅರಿತ

ಶರಣರ ಜೀವನ ಜಾಗತಿಕ ಲೋಕಕ್ಕೆ ಹಿಡಿದ ಕನ್ನಡಿ. ಭಾರತದೇಶದ ತನ್ಮೂಲಕ ಕರ್ನಾಟಕದ ಜನ ಜೀವನದಲ್ಲಿ ನವೋದಯದ ನಾಂದಿ ಹಾಡಿದ ವಿಭೂತಿ ಪುರುಷರು. ಶಿವಶರಣರು ಸರ್ವಸಮಾನತೆ ಅಸ್ಪೃಶೋದ್ಧಾರ ಜಾತಿ, ಲಿಂಗ ಹಾಗೂ ವೃತ್ತಿಭೇದ ನಿವಾರಣೆ ಕಾಯಕ ತತ್ವ ಪ್ರತಿಪಾದನೆ, ಮಹಿಳೆಯರ ಉನ್ನತಿ, ಸಾಮಾಜಿಕ ಸಂಸ್ಕರಣೆ ಸಂಘಟನೆ ಸುಧಾರಣೆಗಳನ್ನು ಕ್ಷಿಪ್ರಕಾಲಾವಧಿಯಲ್ಲಿ ಜಗದ್ವ್ಯಾಪಕವಾಗಿ ಸಾರಿದ ಮಹಾಮಹಿಮರು. ಸಾರ್ವಕಾಲಿಕ ತತ್ವಗಳನ್ನು ಸಾರಿದ ವಿಶ್ವ ಮಾನವರು. ಹನ್ನೆರಡನೆಯ ಶತಮಾನ ಕರ್ನಾಟಕದ ಚರಿತ್ರೆಯಲ್ಲಿಯೇ ಒಂದು ಮುಖ್ಯ ಘಟ್ಟವಾಗಿದ್ದು ಈ ಕಾಲ ಸಂದರ್ಭದಲ್ಲಿ ಬಸವಯುಗದ ಚಾರಿತ್ರಿಕ ಬೆಳವಣಿಗೆಯನ್ನು ಪರಿಪೂರ್ಣವಾಗಿ ಕಟ್ಟಿಕೊಡುವುದಕ್ಕೆ ಅವರ ಹಿರಿಯ ಸಮಕಾಲೀನ ಮತ್ತು ಸಮಕಾಲೀನ ಈ ಮಹನೀಯರ ಚರಿತ್ರೆಯನ್ನು ಅಧ್ಯಯನ ಮಾಡುವುದು ಅಗತ್ಯವಾಗಿದೆ.

ಭಾರತದಲ್ಲಿ ವ್ಯಕ್ತಿಗತ ಕಥನವಾಗಿರುವ ಚರಿತ್ರೆ ಸಮಷ್ಟಿ ಸಂಕಥನವಾಗಿರುವ ಇತಿಹಾಸಗಳು ಪ್ರಭುತ್ವದ ಪಡಿಯಚ್ಚುಗಳಾಗಿವೆ. ಆರಂಭದಿಂದಲೂ ಅಗ್ರಹಾರ ಸಂಸ್ಕೃತಿಯ ವಶದಲ್ಲಿರುವ ಅಕ್ಷರಗಳು ಕೆಲ ಶೂದ್ರ ಸಮುದಾಯಗಳನ್ನು ಚರಿತ್ರೆಯಿಂದ ದೂರವೇ ದಬ್ಬಿದವು. ಇದರಲ್ಲಿ ದಲಿತರೇ ಸಿಂಹಪಾಲು. ಹೀಗಾಗಿ ಮೊದಲಿನಿಂದಲೂ ದಲಿತರದು ಮೌನಚರಿತ್ರೆ. ಇದು ಮಾತಾಡಿದ್ದೇ ಅಪರೂಪ; ಇಂದು ದಲಿತರ ಚರಿತ್ರೆ ರೂಪಿಸಬೇಕಿದೆ. ಜೊತೆಗೆ ಲಿಖಿತ ಆಕರಗಳ ಒಳಗೆ ಅಡಗಿರುವ ಅನೇಕ ಮೌಲ್ಯಗಳನ್ನು ಮಾತಾಡಿಸಬೇಕಿದೆ. ಹೀಗಾಗಿ ದಲಿತ ನಾಯಕರಾದ ಮರುಳಸಿದ್ಧರಂತಹ ವ್ಯಕ್ತಿಯ ಸಾಧನೆ ಕುರಿತು ಪ್ರಸ್ತುತ ಅಧ್ಯಯನವಾದ "ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು: ಚಾರಿತ್ರಿಕ ಅಧ್ಯಯನ" ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಮರುಳಸಿದ್ಧರು ಮಾದಿಗರಲ್ಲಿ ಜನನ ಪಡೆದರೂ ಜಾತಿಯ ಶೃಂಖಲೆಯನ್ನು ಕಳಚಿ ತನ್ನ ತಪಃ ಪ್ರಭಾವದಿಂದ ಆಚಾರ್ಯಪದವಿಗೇರಿದರು. ಅಸ್ಪೃಶ್ಯ ಸಮಾಜದ ಉದ್ಧಾರಕ್ಕೆ ದುಡಿದು ಅವರಿಗೆ ಒಂದು ಅಸ್ತಿತ್ವವನ್ನು ಆತ್ಮಗೌರವವನ್ನುಂಟು ಮಾಡಿಕೊಟ್ಟ ಮಹಾಪುರುಷ ಇವರು. ಇಂಥವರ ಜೀವನಾದರ್ಶಗಳನ್ನು ಅರಿಯುವ, ಸಮಾಜಕ್ಕೆ ವಿವರವಾಗಿ ತಿಳಿಸುವ ಹಿನ್ನಲೆಯಲ್ಲಿ ಅಧ್ಯಯನ ಕೈಗೊಳ್ಳುವ ಜರೂರಿದೆ.

ಪ್ರಸ್ತುತ ಈ ಅಧ್ಯಯನದ ಭೌಗೋಳಿಕ ವ್ಯಾಪ್ತಿ ಯಾವುದು ಎಂಬುದು ಮೊದಲ ಪ್ರಶ್ನೆಯಾಗಿದೆ. "ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು" ಎಂಬ ವಿಷಯ ಅಧ್ಯಯನವಾಗಿರುವುದರಿಂದ ಇಲ್ಲಿ ಭೌಗೋಳಿಕವಾಗಿ ಕರ್ನಾಟಕ ಎಂಬ ಪ್ರಾದೇಶಿಕ ಭೌಗೋಳಿಕ ಮೇರೆಗಳನ್ನು ಗುರುತಿಸುವುದು ಕಷ್ಟ ಸಾಧ್ಯ. ಏಕೆಂದರೆ ಪ್ರಾಚೀನ, ಮಧ್ಯಕಾಲೀನ ಚಾರಿತ್ರಿಕ ಯುಗದ

ರಾಜ ಪ್ರಭುತ್ವಗಳ ಅಧೀನಕ್ಕೊಳಪಟ್ಟ ಭೌಗೋಳಿಕ ಗಡಿಗಳು ಉತ್ತರಭಾರತದವರೆಗೂ ಚಾಚಿವೆ. ಆಧುನಿಕ ಯುಗದಲ್ಲಿ ಏಕೀಕೃತವಾದ ಕರ್ನಾಟಕದ ಭೌಗೋಳಿಕ ಗಡಿಭಾಗದ ವ್ಯಾಪ್ತಿಯನ್ನು ಅಧ್ಯಯನದ ವ್ಯಾಪ್ತಿಗೆ ಅಳವಡಿಸಿದರೆ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು ಹೊರರಾಜ್ಯಗಳಲ್ಲಿಯೂ ಹಬ್ಬಿವೆ. ಹೇಗೆ ನೋಡಿದರು ಕರ್ನಾಟಕದ ಭೌಗೋಳಿಕ ಮೇರೆಗಳನ್ನು ದಾಟಿ ಹೊರಹೋಗುವುದು ಕಂಡು ಬರುತ್ತದೆ. ನನ್ನ ಅಧ್ಯಯನವು ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು; ಕುರಿತಾದುದರಿಂದ ಇಂದಿನ ಕರ್ನಾಟಕ ರಾಜ್ಯ ವ್ಯಾಪ್ತಿಯಲ್ಲಿಯೇ ಮರುಳಸಿದ್ಧರ ನೆಲೆಗಳು, ಸ್ಮಾರಕಗಳನ್ನು ಗುರುತಿಸಿ ಅಧ್ಯಯನ ಮಾಡುವುದು ಉದ್ದೇಶವಾಗಿದೆ.

ಮರುಳಸಿದ್ಧರ ಹುಟ್ಟು, ಬೆಳವಣಿಗೆ, ತತ್ವ ನಿರೂಪಣೆ, ಸಾಧನೆ, ಸಿದ್ಧಿ ಉದ್ದೇಶಗಳು ಕ್ರಮವಾಗಿ ನಿರೂಪಣೆಗೊಳ್ಳುವುದರ ಜೊತೆಗೆ ಈ ವರೆಗಿನ ಅವರ ಜೀವನ ಚರಿತ್ರೆ, ಕಟ್ಟು ಕಥೆಗಳಿಂದ ವಿರೂಪಗೊಂಡಿರುವ ಅಂಶಗಳನ್ನು ಅಧ್ಯಯನ ಮಾಡಿ ಹೊಸ ವಿಷಯಗಳನ್ನು ಬೆಳಕಿಗೆ ತರಲು ಸಾದ್ಯವಿದೆ. ಬಹುಪಾಲು ವೀರಶೈವ ಕವಿ ಸಾಹಿತ್ಯದ ಶರಣರ ಚರಿತ್ರೆಗೆ ಮೀಸಲು. ಅಲ್ಲಿ ಸ್ವತಂತ್ರ ಕೃತಿ ಇಲ್ಲವೆ ಉಪಕಥೆಯ ರೂಪದಲ್ಲಿ ಶರಣರ ಚರಿತ್ರೆ ಅರಳಿ ನಿಂತಿದೆ. ಆದರೆ ಮೂಲ ವಿಗ್ರಹವನ್ನು ಮರೆಗೊಳಿಸುವ ಅಲಂಕಾರದ ಹೊರೆಯಂತೆ ಇಲ್ಲಿ ಶರಣರ ಸುತ್ತ ಪವಾಡಗಳು ಹೆಣೆದು ನಿಂತಿವೆ. ಅಲ್ಲದೆ ಮರುಳಸಿದ್ಧರ ಜೀವನಚರಿತ್ರೆಯನ್ನು ನಿರೂಪಿಸುವ ಕೃತಿಗಳು ಸಾಹಿತ್ಯ ಕೃತಿಗಳು, ಚಾರಿತ್ರಿಕ ದಾಖಲೆ, ದಂತಕಥೆಗಳು, ಸ್ತೂತಿ ಪವಾಡ ಬರಿ ಕಥೆಯಾಗಿಯೇ ನಿರೂಪಿತವಾಗಿವೆ. ಈ ವಿಷಯವಾಗಿ ವಾದ ವಿವಾದ-ಚರ್ಚೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ಮರುಳಸಿದ್ಧರ ಕುರಿತು ಕಥೆಗಳನ್ನು ಸಮೀಕ್ಷಿಸಿ ಆ ಕಥೆಗಳನ್ನು ಇಲ್ಲಿ ಹೆಚ್ಚಿನ ವಿಶ್ಲೇಷಣೆ ಕೈಗೊಳ್ಳುವುದರೊಂದಿಗೆ ಮರುಳಸಿದ್ಧರ ಜೀವನ ಚರಿತ್ರೆಗೆ ಸಂಬಂಧಿಸಿದ ಕಥೆಗಳಲ್ಲಿರುವ ವಾಸ್ತವತೆಯನ್ನು ಕಂಡುಕೊಳ್ಳುವುದು ನನ್ನ ಉದ್ದೇಶವಾಗಿದೆ.

ಈ ಅಧ್ಯಯನದ ಮತ್ತೊಂದು ಉದ್ದೇಶ ಮರುಳಸಿದ್ಧರ ಜೀವನ ಮತ್ತು ಸಾಧನೆಯನ್ನು ಚಾರಿತ್ರಿಕ ನೆಲೆಯಲ್ಲಿ ಅಧ್ಯಯನ ಮಾಡುವುದಾಗಿದೆ. ಹೀಗಾಗಿ ಇದುವರೆಗೆ ಮರುಳಸಿದ್ಧರನ್ನು ಒಬ್ಬ ಪವಾಡಪುರುಷ ಎಂಬುದಾಗಿ ಸಾಹಿತ್ಯ ಕೃತಿಗಳು ಪ್ರತಿಬಿಂಬಿಸುತ್ತಾ ಬಂದಿವೆ. ಆದರೆ ಮರುಳಸಿದ್ಧರು ಚಾರಿತ್ರಿಕ ವ್ಯಕ್ತಿ ಎಂದು ಹೇಳಲು ಸಾಧ್ಯವಿದೆ. ಮರುಳಸಿದ್ಧರ ಜನ್ಮಸ್ಥಳದ ಬಗ್ಗೆ ಇರುವ ಕೆಲವು ಜಿಜ್ಞಾಸೆಗಳು ಹಾಗೂ ಮರುಳಸಿದ್ಧರ ಕಾಲಯಾವುದು ? ಎಂಬುದರ ಬಗ್ಗೆ ಸಂದೇಹಗಳಿವೆ.

ಹೀಗಾಗಿ ಮರುಳಸಿದ್ಧರ ಮೂಲ ಸ್ಥಳ, ಹುಟ್ಟು, ಕುಲ, ಜಾತಿ ಮತ್ತು ಕಾಲಯಾವುದು ಎಂಬ ತಾರ್ಕಿಕ ವಿಚಾರಗಳನ್ನು ಒಂದು ನ್ಯಾಯವಾದ ಕಾಲಘಟ್ಟದಲ್ಲಿ ನಿಲ್ಲಿಸಬೇಕಾಗಿದೆ. ಕಾಲನಿರ್ಣಯ ಮಾಡಿ ಮರುಳಸಿದ್ಧರು ಒಬ್ಬ ಚಾರಿತ್ರಿಕ ವ್ಯಕ್ತಿ ಎಂದು ನಿರೂಪಿಸುವ ಅಗತ್ಯವು ಇದೆ. ಇದುವರೆಗೂ ಮರುಳಸಿದ್ಧರ ಕುರಿತು ಚಾರಿತ್ರಿಕವಾಗಿ ಯಾವುದೇ ಅಧ್ಯಯನಗಳು ಪ್ರಚಲಿತದಲ್ಲಿ ನಡೆದಿರುವುದಿಲ್ಲ. ಆದ್ದರಿಂದ ಪ್ರಸ್ತುತ ಮರುಳಸಿದ್ಧರು ಒಬ್ಬ ಐತಿಹಾಸಿಕ ಪುರುಷ ಎಂಬುದನ್ನು ನಿರೂಪಿಸುವುದು ಈ ಅಧ್ಯಯನದ ಉದ್ದೇಶಗಳಲ್ಲೊಂದಾಗಿದೆ.

ಉಜ್ಜಯಿನಿ ಪೀಠದಲ್ಲಿ ಮರುಳಸಿದ್ಧರಿಗೆ ಸಂಬಂಧಿಸಿದಂತೆ ಅನೇಕ ವಾದ-ವಿವಾದ ಚರ್ಚೆಗಳು ಹುಟ್ಟಿಕೊಂಡಿವೆ. ಆದರೂ ಉಜ್ಜಯಿನಿ ಪೀಠದಲ್ಲಿ ಒಬ್ಬರೇ ಮರುಳಸಿದ್ಧರು, ಅನೇಕರು ಎಂಬ ವಾದವು ಹುಸಿ ಎಂಬ ಬಗ್ಗೆ ಒಂದು ನಿರ್ಣಯಕ್ಕೆ ಬರಲು ಸಾಧ್ಯವಿದೆ, ಈ ಬಗ್ಗೆ ಇರುವ ಅನೇಕ ಜಿಜ್ಞಾಸೆಗಳಲ್ಲಿನ ಸಂದೇಹಗಳನ್ನು ನಿವಾರಿಸುವ ಅಗತ್ಯವಿದೆ.

ಧಾರ್ಮಿಕ ಮಹಾಪುರುಷರ ದಿವ್ಯವ್ಯಕ್ತಿತ್ವ ಮತ್ತು ಅವರು ಗೈದ ಮಹತ್ಕಾಯಗಳ ಹಿಂದೆ ದೈವೀಶಕ್ತಿ ಇರುವುದೆಂದು ನಮ್ಮ ಪ್ರಾಚೀನರು ಭಾವಿಸುತ್ತಾ ಬಂದಿದ್ದಾರೆ. ಹೀಗಾಗಿ ಧಾರ್ಮಿಕ ಮಹಾಪುರುಷರು ಗೈದ ಕಾರ್ಯ-ಸಾಧನೆಗಳು ಪವಾಡಗಳಾಗಿ ಅಸ್ತಿತ್ವದಲ್ಲಿವೆ. ಅತಿಯಾದ ಕಾಲ್ಪನಿ ಕತೆಯಿಂದ ಕೂಡಿದ ಪವಾಡಗಳು ವೈಜ್ಞಾನಿಕವಾಗಿರದೆ ಸಾಂಕೇತಿಕವಾಗಿರುವುದೆಂದು ಹೇಳಬಹುದು. ಮರುಳಸಿದ್ಧರನ್ನು ಕುರಿತು ಉಪಲಬ್ಧವಿರುವ ಹಲವಂದದ ಆಕರ ಸಾಮಗ್ರಿಗಳಲ್ಲಿ ಅವರ ಅನೇಕ ಪವಾಡಗಳಲ್ಲಿ ಪವಾಡ ಕಥೆಗಳ ದೃಷ್ಟಿಕೋನಕ್ಕಿಂತಲು, ತಾತ್ವಿಕ ವಿಚಾರಗಳಿಗೆ ಹೆಚ್ಚು ಮಹತ್ವ ಕೊಡಬೇಕಾಗಿರುವುದರಿಂದ ಪವಾಡಗಳನ್ನು ತಾತ್ವಿಕ ನೆಲೆಯಲ್ಲಿ ಅಧ್ಯಯನ ಮಾಡುವುದು ಈ ನಮ್ಮ ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ.

ಈ ಅಧ್ಯಯನದ ಮತ್ತೊಂದು ಪ್ರಶ್ನೆ ಮರುಳಸಿದ್ಧರ ಅನುಗ್ರಹದಿಂದ ತೆಲಗು ಬಾಳು ಸಿದ್ಧರಿಂದ ಸ್ಥಾಪಿತವಾದ ಉಜ್ಜಯಿನಿಯ ಪೀಠ ಮತ್ತು ಇಂದು ಚಿತ್ರದರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿರುವ ತರಳಬಾಳು ಬೃಹನ್ಮಠ ಸಿರಿಗೆರೆ ಈ ಎರಡು ಮಠಗಳೊಡನೆ ಇರುವ ಭಿನ್ನತೆ ಬಗ್ಗೆ ಚರ್ಚಿಸುವ ಅಗತ್ಯವಿರುವುದರಿಂದ ಈ ಎರಡು ವೀರಶೈವ ಮಠಗಳ ಭಿನ್ನತೆ ಏನು ಎಂಬುದನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು: ಚಾರಿತ್ರಿಕ ಅಧ್ಯಯನ ಎಂಬ ವಿಷಯದ ಹಿನ್ನಲೆಯಲ್ಲಿ ಮರುಳಸಿದ್ಧರಿಗೆ ಸಂಬಂಧಿಸಿದ ಅವರ ನೆಲೆಗಳು ಮತ್ತು ಸ್ಮಾರಕಗಳು, ಕರ್ನಾಟಕ ಹಾಗೂ ಹೊರ ರಾಜ್ಯದಲ್ಲಿಯೂ ಹಂಚಿ ಹೋಗಿವೆ.

ಆದರೆ ಪ್ರಸ್ತುತ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು 'ಕರ್ನಾಟಕ'ದ ವ್ಯಾಪ್ತಿಯನ್ನು ಅನ್ವಯಿಸಿ ಅಧ್ಯಯನ ಮಾಡಲಾಗುವುದು. ಮರುಳಸಿದ್ಧರ ಜೀವನ ವೃತ್ತಾಂತವು ಅತಿಶಯೋಕ್ತಿಗಳಿಗೆ, ಪವಾಡಗಳಿಗೆ, ಹೆಚ್ಚು ಒತ್ತು ನೀಡಲಾಗಿದೆ. ಈ ಹಿನ್ನಲೆಯಲ್ಲಿ ಕಾಡು ಮೇಡುಗಳಲ್ಲಿ ಅಲೆದಾಡಿದಂತಹ ಮರುಳಸಿದ್ಧರ ಕುರುಹುಗಳು ದೇವಾಲಯಗಳು, ಮಠಗಳು, ಗದ್ದುಗೆ ಮೊದಲಾದ ಅವರ ನೆಲೆಗಳು ಮತ್ತು ಸ್ಮಾರಕಗಳು ಕರ್ನಾಟಕದ ಬಹುಭಾಗದಲ್ಲಿ ನೆಲೆಗೊಂಡಿವೆ. ಇದುವರೆಗೆ ಶೋಧಿಸಿದ ಅವರ ನೆಲೆಗಳು ಮತ್ತು ಸ್ಮಾರಕಗಳು ಹಾಗೂ ಹೊಸದಾಗಿಯೂ ಶೋಧಿಸಲಾಗಿ ಸುಪ್ತ-ಗುಪ್ತಸ್ಥಿತಿಯಲ್ಲಿದ್ದ ಅವರ ನೆಲೆಗಳು ಮತ್ತು ಸ್ಮಾರಕಗಳ ಇರುವ ಭಾಗದಲ್ಲಿ ವಾಸಿಸುವ ಜನ ಸಾಮಾನ್ಯರಲ್ಲಿ ಮೌಖಿಕ ಧಾರೆಯಾಗಿ ಹರಿದು ಬರುವ ಕಥೆಗಳ ಆಧಾರದಿಂದಲೂ ಸಹ ಉತ್ತಮವಾದ ಮಹಾಪ್ರಬಂಧವನ್ನು ನಿರೂಪಿಸಬಹುದು ಎಂಬುದು ಈ ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ.

ಪ್ರಸ್ತುತ ಅಧ್ಯಯನದಲ್ಲಿ ಕೆಲವು ಜಿಜ್ಞಾಸೆ ಚರ್ಚಿಸಲಾಗಿದೆ. ಮರುಳಸಿದ್ಧರು ಧಾರ್ಮಿಕ ಪುರುಷರೇ ಇಲ್ಲವೇ ಸಮಾಜ ಸುಧಾರಕರೇ ಎಂಬ ಸಾಮ್ಯತೆಗಳನ್ನು ಚರ್ಚಿಸುವ ಅಗತ್ಯವಿದೆ. ಜೊತೆಗೆ ಮರುಳಸಿದ್ಧರು ಪವಾಡ ಪುರುಷರಲ್ಲ, ಚಾರಿತ್ರಿಕ ವ್ಯಕ್ತಿ ಎಂದು ಕಂಡುಕೊಳ್ಳುವ ಸಾಧ್ಯತೆಗಳಿವೆ. ಈ ಅಧ್ಯಯನದ ಮುಖ್ಯ ವ್ಯಕ್ತಿ 'ಮರುಳಸಿದ್ಧರು' ಅವರ ಜೀವನ ಸಾಧನೆ, ಹಾಗೂ ಇಂದಿನ ಜನಸಮುದಾಯದಲ್ಲಿ ವೀರಶೈವ ಲಿಂಗಾಯಿತ ವರ್ಗದಲ್ಲಿ ಮರುಳಸಿದ್ಧರನ್ನು ಕುಲದೇವರನ್ನಾಗಿ ಆರಾಧಿಸುವ ಪದ್ಧತಿಯು ರೂಢಿಯಲ್ಲಿದೆ. ಅಲ್ಲದೆ ಮರುಳಸಿದ್ಧ ವ್ಯಕ್ತಿತ್ವ ಚಿತ್ರಣವು ಚಾರಿತ್ರಿಕವಾಗಿ ಗುರುತಿಸಲ್ಪಡದೆ ಅಗೋಚರವಾಗಿಯೇ ಇದೆ. ಆ ಕಾರಣದಿಂದ ಪ್ರಸ್ತುತ ಅಧ್ಯಯನದಲ್ಲಿ ಮರುಳಸಿದ್ಧರ ಜೀವನ ಚರಿತ್ರೆ ಮರೆಮಾಚಿಕೊಂಡಿರುವುದು. ಇಂತಹ ಚರಿತ್ರೆಗಳ ಸ್ಪಷ್ಟ ರೂಪವನ್ನು ಇಂದಿನ ಜಾಗತೀಕರಣ ಯುಗದಲ್ಲಿ ಈ ಅಧ್ಯಯನದ ಹಲವು ಸೂಕ್ಷ್ಮತೆಯ ನಿಲುವುಗಳನ್ನು ಗಮನದಲ್ಲಿಟ್ಟುಕೊಂಡು ಚಾರಿತ್ರಿಕ ನೆಲೆಯಲ್ಲಿ ಸೈದ್ಧಾಂತಿಕವಾಗಿ ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ವ್ಯಾಪ್ತಿ :

ಪ್ರಸ್ತುತ ಅಧ್ಯಯನದಲ್ಲಿ 'ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು ; ಚಾರಿತ್ರಿಕ ಅಧ್ಯಯನ' ಎಂಬ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಅಧ್ಯಯನದಲ್ಲಿ ಬಹು ಮುಖ್ಯವಾಗಿ ಗುರುತಿಸಲ್ಪಡುವ ವಿಷಯ 'ಮರುಳಸಿದ್ಧರು'. ಇವರು ೧೨ನೇ ಶತಮಾನದ ವಚನಕಾರರಾದ ಬಸವೇಶ್ವರರ ಸಮಾಕಾಲೀನರು ಅಂತೆಯೇ ರೇವಣಸಿದ್ಧರ ಶಿಷ್ಯ ಮರುಳಸಿದ್ಧ, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಉಜ್ಜಯಿನಿ ಇವರ ಕಾರ್ಯಕ್ಷೇತ್ರ , ದಾವಣಗೆರೆ, ಚಿತ್ರದುರ್ಗ,

ಬಳ್ಳಾರಿ ಜಿಲ್ಲಾ ವ್ಯಾಪ್ತಿಯಲ್ಲಿಯೇ ಇವರ ನೆಲೆ ಮತ್ತು ಸ್ಮಾರಕಗಳ ಕುರುಹುಗಳು ಗುರುತಿಸಲ್ಪಡುತ್ತವೆ. ಮರುಳಸಿದ್ಧರು ೧೨ನೇ ಶತಮಾನದ ವಚನಕಾರರಾದ ಬಸವೇಶ್ವರ ಮತ್ತು ಅವರ ಸಮಕಾಲೀನ ಶಿವಶರಣರಾಗಲಿ ಅಥವಾ ಕಲ್ಯಾಣ ನಗರವನ್ನಾಗಲಿ ಸಂಪರ್ಕಿಸದೆ ದೂರವೇ ಉಳಿದಂತವರು ಮರುಳಸಿದ್ಧರು. ತೀರ ಕೆಳವರ್ಗವಾದ ದಲಿತ ಸಮುದಾಯ ವರ್ಗದ ನಾಯಕ, ಇಂತಹವರ ಸಮಕಾಲೀನ ದಾಖಲೆಗಳು ಲಭ್ಯವಿಲ್ಲ. ಆದರೆ ಮರುಳಸಿದ್ಧರ ಶಿಷ್ಯ ಗದ್ದುಗೆಯ ರಾಮಿತಂದೆಯಿಂದ ರಚಿತವಾದ ಗುರುಬೋಧೆಯ ಮಹಾತ್ಮೆಯೇ ಆಧಾರ. ಇದು (ಉಪಲಬ್ಧವಿಲ್ಲ) ಈ ಕೃತಿಯ ಆಧಾರದ ಮೇಲೆ ೧೫ನೇ ಶತಮಾನದ ದೇವಕವಿ (ದೇಪ ಎಂತಲೂ ಹೇಳಲಾಗುತ್ತದೆ) ಯು 'ಸಿದ್ಧಲಿಂಗ ಚಾರಿತ್ರೆ' ರಚಿತವಾಗಿದ್ದು ಇದು ಮರುಳಸಿದ್ಧರ ಜೀವನ ಚರಿತ್ರೆಯನ್ನು ನಿರೂಪಿಸುವ ಸಾಂಗತ್ಯವಾಗಿದೆ. ಇದನ್ನೇ ಅನುಸರಿಸಿ ೧೯ನೇ ಶತಮಾನದ ಆನಗೋಡು ರೇವಣಸಿದ್ಧ ಕವಿಯ ಮರುಳಸಿದ್ಧ ಸಾಂಗತ್ಯ, ಸಿರಿಗೆರೆಯ ಗುರುಸಿದ್ಧ ಸ್ವಾಮಿಗಳು ಮರುಳಸಿದ್ಧ ಸಾಂಗತ್ಯ, ಸಾಹಿತ್ಯ ಕೃತಿಗಳು ಉಪಲಬ್ದ ಇವೆ. ಆರಂಭಿಕ ಪ್ರಯತ್ನವಾಗಿ ೧೫ನೇ ಶತಮಾನದ ನಂತರ ಮರುಳಸಿದ್ಧರಂತಹ ವ್ಯಕ್ತಿ ಚಿತ್ರಣಗಳು ಗುರುತಿಸಲ್ಪಡುತ್ತವೆ. ೧೯ನೇ ಶತಮಾನದವರೆಗಿನ ಸಾಹಿತ್ಯದಲ್ಲಿಯು ಮರುಳಸಿದ್ಧರ ಚರಿತ್ರೆಯನ್ನು ಚಿತ್ರಿಸಿರುವ ಕೃತಿಗಳು ಉಪಲಬ್ಧವಾಗಿವೆ.

೨೦ನೇ ಶತಮಾನದಲ್ಲಿ ಮರುಳಸಿದ್ಧರ ಚರಿತ್ರೆಯ ಕುರಿತು ಮೊದಲು ಸಾಹಿತ್ಯದಲ್ಲಿ ಗುರುತಿಸುವ ಪ್ರಯತ್ನ ಪ್ರಸಿದ್ಧ ಕನ್ನಡ ಸಾಹಿತಿಗಳಾದ ಅ.ನ.ಕೃಷ್ಣರಾಯರು, ದೇವಕವಿಯ ಸಿದ್ಧಲಿಂಗಾಚಾರಿತ್ರವನ್ನು ಕ್ರಿ.ಶ.೧೯೪೨ರ ಅವಧಿಯಲ್ಲಿ ಸಂಪಾಧಿಸುವ ಮೂಲಕ ಕನ್ನಡ ಸಾಹಿತ್ಯದಲ್ಲಿ ಮರುಳಸಿದ್ಧರ ವಿಷಯ ಬೆಳಕಿಗೆ ಬರುವಂತಾಯಿತು. ಅಂದಿನಿಂದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮರುಳಸಿದ್ಧರ ವಿಚಾರ ಕುರಿತು ಹೆಚ್ಚಿನ ಸಂಶೋಧನೆಗಳಲ್ಲಿ ಆಸಕ್ತಿವಹಿಸಿದರು. ಪ್ರಸಿದ್ಧ ಇತಿಹಾಸಕಾರರಾದ ದಿ.ಹುಲ್ಲೂರು ಶ್ರೀನಿವಾಸ ಜೋಯಿಸ, ಪ್ರಾಚ್ಯ ಸಂಶೋಧಕರಾದ ಹೆಚ್.ದೇವೀರಪ್ಪ, ಪಂಡಿತ್ ಎಸ್.ಬಸಪ್ಪ, ಜರೀಕಟ್ಟೆ ಬಸಪ್ಪ ಹಾಗೂ ಸಿರಿಗೆರೆಯ ತರಳಬಾಳು ಜಗದ್ಗುರು ಶಿವಕುಮಾರ ಮಹಾಸ್ವಾಮಿಗಳವರು ಹೆಚ್ಚಿನ ಶೋಧನೆ ಕೈಗೊಂಡು ಮರುಳಸಿದ್ಧರ ಚರಿತ್ರೆ ಪ್ರಚಾರಪಡಿಸಿದ್ದಾರೆ. ಮಹದೇವ ಬಣಕಾರರು ಸಹ ಮರುಳಸಿದ್ಧರ ಜೀವನ ಚರಿತ್ರೆಯ ಬಗ್ಗೆ ಹೆಚ್ಚಿನ ಸಂಶೋಧನೆಯಿಂದಾಗಿ ನಾಡಿನ ಚರಿತ್ರೆಯಲ್ಲಿ ಮರುಳಸಿದ್ಧರ ಜೀವನ, ಸಾಧನೆ, ಹಾಗೂ ಅವರ ಪವಾಡಕಥೆಗಳು ಕನ್ನಡ ಸಾಹಿತ್ಯ ಚರಿತ್ರೆ ಬೆಳಕಿಗೆ ಬರುವಂತಾಯಿತು.

ಇದುವರೆಗೂ ಸಾಹಿತ್ಯದಲ್ಲಿ ಮರುಳಸಿದ್ಧರ ಜೀವನ ಚರಿತ್ರೆಯನ್ನು ಸಂಗ್ರಹಿಸಿದ ಬಗ್ಗೆ ಈ

ಮೇಲಿನ ಅಧ್ಯಯನ ಆಕಾರಗಳಲ್ಲಿ ಗುರುತಿಸಬಹುದಾಗಿದೆ. ಆದರೆ ಪ್ರಸ್ತುತ ಈ ನಮ್ಮ ಅಧ್ಯಯನವು 'ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು, ಚಾರಿತ್ರಿಕ ಅಧ್ಯಯನ' ಎಂಬ ಅಧ್ಯಯನದ ವ್ಯಾಪ್ತಿಯಲ್ಲಿ ಅಧ್ಯಯನದ ವಸ್ತು-ಸ್ಥಿತಿಯನ್ನು ಇನ್ನೂ ವಿಸ್ತೃತವಾಗಿ ಅಧ್ಯಯನ ಮಾಡಲಾಗುವುದು. ಈ ಅಧ್ಯಯನದಲ್ಲಿ ಮರುಳಸಿದ್ಧರ ಜೀವನದ ವಿವಿಧ ಸನ್ನಿವೇಶಗಳು ಮತ್ತು ಇಂದಿನ ಸಮಕಾಲೀನ ದಲಿತರ ಚರಿತ್ರೆಯ ಅಧ್ಯಯನದ ಪ್ರಸ್ತುತ ಸಂದರ್ಭಕ್ಕೆ ಇಂತಹ ದಲಿತ ನಾಯಕನ ಚರಿತ್ರೆಗೆ ಹೆಚ್ಚಿನ ಮಹತ್ವವಿದೆ.

ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ನನ್ನ ಅಧ್ಯಯನದ ಅನುಕೂಲತೆಗಾಗಿ ಮಹಾ ಪ್ರಬಂಧದಲ್ಲಿನ ವಿಷಯಗಳನ್ನು ಪ್ರಮುಖವಾಗಿ ೬ ಅಧ್ಯಾಯಗಳನ್ನಾಗಿ ವಿಭಾಗಿಸಿಕೊಂಡು ಅಧ್ಯಯನ ಮಾಡಲಾಗುತ್ತದೆ.

ಮೊದಲ ಅಧ್ಯಾಯದಲ್ಲಿ ನಾಲ್ಕು ಉಪಭಾಗಗಳಿದ್ದು, ಮೊದಲನೆ ವಿಭಾಗದಲ್ಲಿ ಪ್ರಸ್ತಾವನೆ, ಮರುಳಸಿದ್ಧರ ಜೀವನ ಅವರ ಬದುಕಿನ ಹೋರಾಟದ ಸ್ವರೂಪವನ್ನು ತಿಳಿಸಲಾಗಿದೆ. ಎರಡನೆ ಭಾಗದಲ್ಲಿ ಅಧ್ಯಯನದ ಉದ್ದೇಶ ಹಾಗೂ ವ್ಯಾಪ್ತಿಯ ಕುರಿತು ವಿವರಿಸಲಾಗಿದೆ. ಮೂರನೆ ಭಾಗದಲ್ಲಿ ಅಧ್ಯಯನಕ್ಕೆ ಸಹಾಯಕವಾಗುವ ಸಾಹಿತಿಕ ಮತ್ತು ಚಾರಿತ್ರಿಕ ಆಧಾರಗಳ ಪರಿಶೀಲನೆ ಇದೆ. ಕೊನೆಯ ಭಾಗದಲ್ಲಿ ಅಧ್ಯಯನದ ಮೇಲೆ ಪ್ರಭಾವಿತವಾದ ಭೌಗೋಳಿಕ ವ್ಯಾಪ್ತಿ ಮತ್ತು ಸ್ಮಾರಕಗಳ ಮಹತ್ವತೆಯನ್ನು ಪರಿಚಯಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಮರುಳಸಿದ್ಧರಿಗೆ ಸಂಬಂಧಿಸಿದ ಕಥೆಗಳ, ಸಮೀಕ್ಷೆ ಇದೆ. ಈ ಅಧ್ಯಾಯದಲ್ಲಿ ಇದುವರೆಗೆ ಲಭ್ಯವಾದ ಸಾಹಿತ್ಯ ಕೃತಿ ಮತ್ತು ಚರಿತ್ರೆಯಲ್ಲಿ ಮರುಳಸಿದ್ಧರ ಜೀವನ, ಸಾಧನೆ ವ್ಯಕ್ತಿತ್ವ ತತ್ವ ನಿರೂಪಣೆ ಹೇಗೆ ಅಭಿವ್ಯಕ್ತವಾಗುತ್ತದೆ ಎಂಬುದನ್ನು ಸಮೀಕ್ಷಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಒಟ್ಟು ಏಳು ವಿಭಾಗಗಳಿವೆ. ಮೊದಲಿಗೆ ಮರುಳಸಿದ್ಧರ ಜೀವನ ಮತ್ತು ಸಾಧನೆ, ಚಾರಿತ್ರಿಕ ನೆಲೆಯಲ್ಲಿ ಮರುಳಸಿದ್ಧರ ಮೂಲ ಸ್ಥಳ ಮತ್ತು ಪರಿಸರದ ಬಗ್ಗೆ ವಿವರಿಸಲಾಗಿದೆ. ಅವರ ಕುಲ ಜನ್ಮಸ್ಥಳ, ಚಾರಿತ್ರಿಕವಾಗಿ ಅವರ ಕಾಲಯಾವುದು ಎಂಬ ಬಗ್ಗೆ ಇರುವ ವಿಭಿನ್ನ ವಾದ, ವಿವಾದ, ಚರ್ಚೆಗಳನ್ನು ಸಹ ವಿಶ್ಲೇಷಿಸಲಾಗಿದೆ. ಮರುಳಸಿದ್ಧರ ಮೂಲಕ್ಷೇತ್ರ ಉಜ್ಜಯಿನಿ ಪರಿಸರದಲ್ಲಿ ಅನೇಕ ಮರುಳಸಿದ್ಧರಿದ್ದ ಬಗ್ಗೆ ಇರುವ ಜಿಜ್ಞಾಸೆಗಳನ್ನು ಇಲ್ಲಿ ಚರ್ಚಿಸಲಾಗಿದೆ. ಅಲ್ಲದೆ ಗುರುರೇವಣಸಿದ್ಧರಿಂದ ಮರುಳಸಿದ್ಧರು ಲಿಂಗ ದೀಕ್ಷೆ ಪಡೆದ ಬಗೆಯನ್ನು

ಇಲ್ಲಿ ವಿವರಿಸಲಾಗಿದೆ. ಅಲ್ಲದೆ ಮರುಳಸಿದ್ಧರ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಅವರ ಕೊಡುಗೆಗಳನ್ನು ಇಲ್ಲಿ ತಿಳಿಸಲಾಗಿದೆ. ಮರುಳಸಿದ್ಧರು ಒಬ್ಬ ಶರಣರು ಎಂಬುದನ್ನೂ ಸಹ ಇಲ್ಲಿ ವಿವರಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಐದು ಉಪವಿಭಾಗಗಳಿವೆ. ಇಲ್ಲಿ ಮುಖ್ಯವಾಗಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು ಈ ವಿಷಯವಾಗಿ ಕರ್ನಾಟಕದಲ್ಲಿ ಮರುಳಸಿದ್ಧರಿಗೆ ಸಂಬಂಧಿಸಿದಂತೆ ಗುರುತಿಸಲ್ಪಡುವ ಅವರ ನೆಲೆಗಳು ಮತ್ತು ಸ್ಮಾರಕಗಳಿಗೆ ಸಂಬಂಧಿಸಿದ ದೇವಾಲಯಗಳು ಮಠಗಳು, ಕಾಡು-ಬೆಟ್ಟಗಳಲ್ಲಿಯ ಅವಶೇಷಗಳು ತುರುಮಂದೆ, ಪೌಳಿ, ಹಗೇವುಗಳು, ಇಂತಹ ಸ್ಮಾರಕಗಳ ವಿಷಯವನ್ನು ಸಂಗ್ರಹಿಸಿ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಕಂಡುಕೊಂಡ ಮಾಹಿತಿಗಳ ವಿಷಯವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಮೂರು ಉಪವಿಭಾಗಗಳಿವೆ. ಮೊದಲನೆ ಭಾಗವು ಮರುಳಸಿದ್ಧರು ಒಬ್ಬ ಧಾರ್ಮಿಕ ವ್ಯಕ್ತಿಯೇ ಎಂಬ ಬಗ್ಗೆ ಹುಟ್ಟಿಕೊಂಡ ಕೆಲವು ಜಿಜ್ಞಾಸೆಗಳು ಮತ್ತು ಚಾರಿತ್ರಿಕ ಪುರುಷರಾಗಿ ಮರುಳಸಿದ್ಧರು ಎಂಬುದನ್ನು ನಿರೂಪಿಸಲಾಗಿದೆ. ಕೊನೆಯದಾಗಿ ಮರುಳಸಿದ್ಧರು ಆರಾಧ್ಯದೈವನಾಗಿ ಪ್ರಸಿದ್ಧಿ ಪಡೆದಿರುವ ವಿಷಯವನ್ನು ಪ್ರಸ್ತಾಪಿಸಲಾಗಿದೆ.

ಕೊನೆಯದಾಗಿ ಆರನೇಯ ಅಧ್ಯಯವು ಸಮಾರೋಪವಾಗಿದ್ದು ಈ ವಿಭಾಗದಲ್ಲಿ ಸಂಶೋಧನೆಯಿಂದ ಕಂಡುಕೊಂಡ ವಿವಿಧ ದೃಷ್ಟಿಕೋನದ; ವಿವಿಧ ನಿಲುವುಗಳಿಗೆ ಸಮರ್ಥನೀಯವಾದ ಉತ್ತರವನ್ನು ಕಂಡುಕೊಳ್ಳಲಾಗಿದೆ.

ಹೀಗೆ ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು, ಚಾರಿತ್ರಿಕ ಅಧ್ಯಯನದ ಸ್ವರೂಪವನ್ನು ಈ ಅಧ್ಯಯನದ ವ್ಯಾಪ್ತಿಯಲ್ಲಿ ಹೇಳಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಮರುಳಸಿದ್ಧನ ಸಾಧನೆಯನ್ನು ಬಹಳ ವೈವಿದ್ಯಮಯವಾಗಿ ವಾಸ್ತವವಾಗಿ ಚಿತ್ರಿಸಲಾಗಿದೆ. ಇಲ್ಲಿ ಭಕ್ತಿ ಇದ್ದರೂ ಭಾವ ವೇಷವಿಲ್ಲ ; ಆಧ್ಯಾತ್ಮವಿದ್ದರೂ ಆಡಂಬರವಿಲ್ಲ. ಮಾದಿಗರ ಹೊಟ್ಟೆಯಲ್ಲಿ ಹುಟ್ಟಿ, ಒಕ್ಕಲಿಗರ ಆಶ್ರಯದಲ್ಲಿ ಬೆಳೆದು, ಆಧ್ಯಾತ್ಮದ ಕ್ಷೇತ್ರದಲ್ಲಿ ಸಾಗಿ, ಅಸಮಾನತೆ ವಿರುದ್ಧ ಬಂಡೆದ್ದ ಮರುಳಸಿದ್ಧ, ಇಂದಿಗೂ ಪ್ರಸುತನಾಗುತ್ತಾನೆ. ಆತನ ನಿಷ್ಠೆ, ಸಾಧನೆ, ಆಲೋಚನೆ ಹೋರಾಟ ಮನೋಬಾವ, ಸಂಘಟನೆ ಇವೆಲ್ಲಾ ಇಂದಿನ ಹೋರಾಟಗಾರರಿಗೆ ಸ್ಫೂರ್ತಿದಾಯಕವಾಗಬಲ್ಲವುಗಳಾಗಿವೆ.

೧.೧.೨ ಸಾಹಿತ್ಯಕ ಮತ್ತು ಚಾರಿತ್ರಿಕ ಆಧಾರಗಳ ಪರಿಶೀಲನೆ :

ಮರುಳಸಿದ್ಧರು ಬಸವಣ್ಣನವರ ಸಮಕಾಲೀನರಾಗಿದ್ದರು ಅನುಭವ ಮಂಟಪದ ವ್ಯಾಪ್ತಿಯಲ್ಲಿ ಬರದೇ ಪ್ರತ್ಯೇಕವಾಗಿ ಜನಸಮೂಹವನ್ನು ಮಾರ್ಗದರ್ಶನ ಮಾಡಿದ ಒಂಟಿ ಸಾದಕರು.ಅನೇಕ ಸಂಪ್ರದಾಯವಾದಿಗಳು, ದಲಿತ ಕುಲದಲ್ಲಿ ಹುಟ್ಟಿದ ಮರುಳಸಿದ್ಧನನ್ನು ಮರೆಮಾಡಿ, ಪಂಚಾಚಾರ್ಯರೆಲ್ಲಾ ಲಿಂಗೋದ್ಭವರೆಂದು ಸೃಷ್ಟಿಸಿ, ನಿಜಸಂಗತಿಯನ್ನು ಮುಚ್ಚಿಡಲು ಪ್ರಯತ್ನಿಸಿದ್ದಾರೆ. ಇಂತವರ ಚರಿತ್ರೆಯನ್ನು ಸಂಗ್ರಹಿಸುವಲ್ಲಿ ಕೆಲವು ಆಧಾರಗಳು ಮಾತ್ರ ದೊರೆಯುತ್ತವೆ. ಮರುಳಸಿದ್ಧರು ಯಾರು ? ಅವರ ಕಾಲ ಯಾವುದು ? ಅವರ ಜೀವನ, ಸಾಧನೆ ಮತ್ತು ವ್ಯಕ್ತಿತ್ವ ಹಾಗೂ ಅವರ ಕೊಡುಗೆಗಳೇನು ? ಎಂಬ ಇತ್ಯಾದಿ ಸಂಗತಿಗಳು ಚಾರಿತ್ರಿಕವಾಗಿ ಅಗೋಚರವಾಗಿದ್ದು; ಅವರ ಬಗ್ಗೆ ಅಲ್ಪವಾದರೂ ಚಾರಿತ್ರಿಕ ದಾಖಲೆಗಳಿಂದ ಮರುಳಸಿದ್ಧರ ಜೀವನ ಚರಿತ್ರೆಯನ್ನು ಸಾಹಿತ್ಯಕ ಮತ್ತು ಚಾರಿತ್ರಿಕ ಆಧಾರಗಳ ಪರಿಶೀಲನೆಯಿಂದ ನಿಜ ಸಂಗತಿ ಬಿಚ್ಚಿಡಲಾಗಿದೆ. ಮರುಳಸಿದ್ಧರ ಜೀವನ ಚರಿತ್ರೆಯನ್ನು ರೂಪಿಸುವಲ್ಲಿ ಅವರ ಯಾವುದೇ ಸ್ವತಂತ್ರ ಕೃತಿಗಳು ಲಭ್ಯವಾಗಿಲ್ಲ. ಆದರೆ ವಚನವೊಂದು ಲಭ್ಯವಾಗಿದೆ. ಅಲ್ಲದೆ ಅವರ ಸಮಕಾಲೀನರ ಕೃತಿಗಳಲ್ಲಿ ಮಾತ್ರ ಮರುಳಸಿದ್ಧರ ಚರಿತ್ರೆಯನ್ನು ಕಟ್ಟಿಕೊಡುತ್ತವೆ. 'ಪವಾಡ' ಪುರುಷರಾಗಿರುವ ಇವರ ಬಗ್ಗೆ ಐತಿಹ್ಯಗಳು ಗುರುತಿಸದೆ ಹೋದುದರಿಂದ ಇಲ್ಲಿಯವರೆಗೆ ಅವು ಅಜ್ಞಾತ-ಅಲ್ಪಜ್ಞಾತ ಪುಟಗಳಾಗಿತೋರಿವೆ. ೧೫ನೇ ಶತಮಾನದ ನಂತರದ ಸಾಹಿತ್ಯ ಕೃತಿಗಳಲ್ಲಿ ಕೆಲವು ಸಂಗತಿಗಳು ಇವರ ಜೀವನ ಚರಿತ್ರೆಗೆ ಸಂಬಂಧಿಸಿದಂತೆ ಉಲ್ಲೇಖಗೊಂಡಿದ್ದರೂ ಅವುಗಳಲ್ಲಿ ವಿಭಿನ್ನಾಭಿಪ್ರಾಯ ವ್ಯಕ್ತವಾಗುತ್ತವೆ. ಈಗ ಉಪಲಬ್ಧವಿರುವ ಆಧಾರಗಳ ಹಿನ್ನಲೆಯಲ್ಲಿಯೇ ಕೆಲವು ಸಂಶೋಧಕರುಗಳು ಇವರ ಜೀವನ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಇದುವರೆಗೆ ದೊರೆತ ಪ್ರಕಟಿತ, ಅಪ್ರಕಟಿತ ಆಕಾರಗಳನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. ಅಲ್ಲದೆ ಸಾಹಿತ್ಯ ಕೃತಿಗಳು, ಚಾರಿತ್ರಿಕ ದಾಖಲೆಗಳು, ಗುಪ್ತಸ್ಥಿತಿಯಲ್ಲಿರುವ ಅವಶೇಷಗಳು, ಸ್ಮಾರಕಗಳು, ಕ್ಷೇತ್ರ ಕಾರ್ಯದ ಮಾಹಿತಿ ಇನ್ನೂ ಮೊದಲಾದ ಆಕಾರಾದಿ ಕೃತಿಗಳನ್ನು ಪ್ರಸ್ತುತ ಅಧ್ಯಯನದ ಸಂಶೋಧನೆಗೆ ಇದುವರೆಗೆ ದೊರೆತ ಎಲ್ಲಾ ಮೂಲ ಆಕಾರಾದಿ ಸಾಹಿತ್ಯಕ ಮತ್ತು ಚಾರಿತ್ರಿಕ ಆಧಾರಗಳನ್ನು ಪರಿಶೀಲಿಸುವುದರೊಂದಿಗೆ ಪ್ರಸ್ತುತ ಈ ಅಧ್ಯಯನವನ್ನು ಚಾರಿತ್ರಿಕ ನೆಲೆಯಲ್ಲಿ ನಿರೂಪಿಸಲಾಗುವುದು.

❖ ಸಾಹಿತ್ಯಕ ಆಕಾರಗಳು

ಮರುಳಸಿದ್ಧನ ನಿಜ ಚರಿತ್ರೆಯೇನೆಂಬುದನ್ನು ತಿಳಿಯುವುದು ಸುಲಭದ ಮಾತಲ್ಲವಾದರೂ ಆತನ ಜೀವನದ ಘಟನೆಗಳಿಗೆ ಸಾಕ್ಷಿಯಾಗಿರುವ ನೂರಾರು ಐತಿಹಾಸಿಕ ಕುರುಹುಗಳಿವೆ.

ಅವು ಆಂಧ್ರಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಪ್ರಾಂತಗಳಲ್ಲಿ ಈಗಲೂ ಕಂಡುಬರುತ್ತವೆ. ಇವುಗಳಿಗೆ ಅನುಗುಣವಾಗಿ ಚಾರಿತ್ರ್ಯವೇ ಈತನ ನಿಜವಾದ ಚಾರಿತ್ರ್ಯವೆಂಬ ನಿರ್ಣಯಕ್ಕೆ ಮೊರೆಹೋಗುವುದು ಇದೀಗ ಸಮುಚಿತವಾಗಿದೆ. ಈ ದೃಷ್ಟಿಯಿಂದ ಮರುಳಸಿದ್ಧನ ಜೀವನದ ಇತಿಹಾಸದ ಬಗ್ಗೆ ರಚಿತವಾಗಿರುವ ಕಾವ್ಯಗಳನ್ನೂ, ಪುರಾಣಗಳನ್ನೂ, ಚರಿತ್ರೆಗಳನ್ನು ಪರಿಶೀಲಿಸಬೇಕಾಗಿದೆ.

❖ ಸಂಸ್ಕೃತದಲ್ಲಿರುವ ಆಗಮಗಳು

ಆಗಮ ಸಾಹಿತ್ಯ ಸಂಸ್ಕೃತ ಭಾಷೆಯಲ್ಲಿ ದೊರೆತಿವೆ, ಇವು ಹರಪ್ಪಾ ಮೊಹೆಂಜೊದಾರೋ ಕಾಲದಲ್ಲಿ ದೊರೆತ ಸುಮಾರು ೫ ಸಾವಿರ ವರ್ಷಗಳಿಗಿಂತಲೂ ಪೂರ್ವದವುಗಳೆಂದು ಅನೇಕ ಇತಿಹಾಸ ತಜ್ಞರ ಅಭಿಪ್ರಾಯವಾಗಿದೆ[೧]. ಸಿದ್ಧಾಂತ ಶಿಖಾಮಣಿಯು ಆಧರಿಸಿರುವ ಆಗಮಗಳೂ ಹಿಂದೂ ಧರ್ಮದ ಪ್ರಮಾಣ ಗ್ರಂಥಗಳೇ, ವೇದಗಳು ಯಜ್ಞ ಸಂಸ್ಕೃತಿಯ ಕೃತಿಗಳಾದರೆ, ಆಗಮಗಳು ದೇವಾಲಯ ಸಂಸ್ಕೃತಿಯ ಪ್ರತಿಪಾದಕಗಳು[೨]. ಈ ಆಗಮಗಳಲ್ಲಿ ಮರುಳಸಿದ್ಧರ ಹೆಸರು ಪ್ರಸ್ತಾಪವಾಗುವುದನ್ನು ಈ ರೀತಿ ವರ್ಣಿಸಿವೆ. ಸುಪ್ರಭೇದಾಗಮದಲ್ಲಿ ಪಂಚಾಚಾರ್ಯರು ಶಿವನ ಪಂಚಮುಖಗಳಿಂದ ನಂದಿ, ಭೃಂಗಿ,ವೀರ,ವೃಷಭ, ಸ್ಕಂದ ಎಂಬ ಐವರು ಗಣಾಧೀಶ್ವರರು ಐದು ಗೋತ್ರ ಪುರುಷರಾಗಿ ಅವತರಿಸಿದರು. ಈ ಪಂಚಾಚಾರ್ಯರು ದಾರುಕ, ಶಂಕುಕರ್ಣ, ಧೇನುಕರ್ಣ ಮತ್ತು ವಿಶ್ವಕರ್ಣ ಎಂಬ ಹೆಸರುಗಳಿಂದ ಅವತರಿಸಿದರೆಂದಿದೆ[೩]. ಈ ವೀರಶೈವ ಮತವನ್ನು ಪಂಚಾಚಾರ್ಯರು ಸ್ಥಾಪಿಸಿದರು. ಶಿವನ ವಾಮದೇವ ಮುಖದಿಂದ ದಾರುಕ ಶಿವಾಚಾರ್ಯರು ದ್ವಾಪರಯುಗದಲ್ಲಿ ಅವತರಿಸಿದರು. ಇವರು ಕೃತ ಯುಗದಲ್ಲಿ ದಿವ್ಯಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ದ್ವಿವಕ್ತ್ರ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ಶ್ರೀಮರಳಾರಾಧ್ಯ ಶಿವಾಚಾರ್ಯ ಎಂಬ ಹೆಸರುಗಳಿಂದ ಅವತರಿಸಿದರು. ಶ್ರೀ ಮರುಳಾರಾಧ್ಯರು ಕ್ಷಿಪ್ರಾ ನದಿಯ ತಟದಲ್ಲಿರುವ ಕ್ಷೇತ್ರದ ಶ್ರೀ ಸಿದ್ಧೇಶ್ವರ ಲಿಂಗದಿಂದ ಅವತರಿಸಿದರು. ಕಾರಣಾಂತರದಿಂದ ಮಧ್ಯ ಭಾರತದ ಉಜ್ಜಯಿನಿಯಲ್ಲಿದ್ದ ಶೀ ಸದ್ಧರ್ಮ ಪೀಠವು ಕರ್ನಾಟಕದ ಬಳ್ಳಾರಿ ಜಿಲ್ಲೆಯ ಉಜ್ಜಯಿನಿಗೆ ಸ್ಥಳಾಂತರವಾಯಿತು[೪]. ಈ ವಿಷಯವು ಕೇವಲ ಕಾಲ್ಪನಿಕವಾಗಿರದೇ ಶಾಸ್ತ್ರೀಯವೂ ವೈಜ್ಞಾನಿಕವೂ ಮತ್ತು ಯೌಗಿಕವೂ ಆಗಿದೆ[೫]. ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರ ಲೀಲೆಯನ್ನು ಅಲ್ಲಗಳೆಯುವುದು ಅಸಂಬದ್ಧವೆನಿಸುವುದು[೬], ಇವುಗಳಲ್ಲಿ ಸಂಸ್ಕೃತ ಆಗಮಗಳು, ಕೇವಲ ಅವತಾರದ ರೀತಿಯನ್ನು ವಿವರಿಸಿವೆಯೇ ವಿನಾ ಚರಿತ್ರೆಯನ್ನು ವಿವರಿಸಿಲ್ಲ.

ಉಜ್ಜಯಿನಿ ಸಿದ್ಧೇಶ್ವರ ಲಿಂಗದಿಂದ ದಾರುಕನೆಂಬ ಹೆಸರಿನಿಂದ ಅವತರಿಸಿದನೆಂದು ಪ್ರತಿ ಯುಗದಲ್ಲೂ ಹೀಗೆಯೇ ಬೇರೆ ಬೇರೆ ಹೆಸರುಗಳಿಂದ ಇದೇ ಸಿದ್ಧೇಶ್ವರ ಲಿಂಗದಿಂದ

ಅವತರಿಸಿದನೆನ್ನಲಾಗಿದೆ. ಅವರು ಪರಮೇಶ್ವರನ ಪಂಚಮುಖಗಳಲ್ಲೊಂದರಿಂದ ಜನಿಸಿದರೆಂದೂ ಕೆಲವರು ತಮ್ಮ ಈ ವಾದಕ್ಕೆ ಅನುಸಾರವಾಗಿ ಕನ್ನಡ ಮತ್ತು ಸಂಸ್ಕೃತಗಳಲ್ಲಿ ಗ್ರಂಥಗಳನ್ನು ಸೃಷ್ಟಿಸಿಕೊಂಡು ಪ್ರಚಾರ ಮಾಡುತ್ತಿದ್ದಾರೆ. ಈ ಗ್ರಂಥಗಳಿಗೆ ಕರ್ತೃಗಳಿಲ್ಲ ಕರ್ತೃಗಳ ನಾಮನಿರ್ದೇಶನ ಮಾಡಿದಲ್ಲಿ ಜನತೆ ನಂಬುವುದಿಲ್ಲವೆಂದು ಪಾರ್ವತಿ ಪರಮೇಶ್ವರ, ಸಂವಾದ ರೂಪದಲ್ಲಿ ರಚಿಸಿ ಇದಕ್ಕೆ ಆಗಮಗಳಲ್ಲಿ ಸ್ಥಾನಗಳನ್ನು ಕಲ್ಪಿಸಿದ್ದಾರೆ. ಎಂದು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಆಗಮಗಳು ವಿವರಿಸಿರುವ ಲಿಂಗೋದ್ಭವತ್ವದ ಲಿಂಗಾವತಾರ ಲೀಲೆಯನ್ನು ಅಲ್ಲಗಳೆಯುತ್ತಾರೆ[೭].

ಆಗಮಗಳೇ ಸ್ಪಷ್ಟಪಡಿಸುವಂತೆ, ಸಿದ್ಧಾಂತ ಶಿಖಾಮಣಿಯಲ್ಲಿಯೂ ಗಮನಿಸಿದಂತೆ ಆಗಮಗಳಿಗೂ ವೇದಗಳಿಗೂ ವಿರೋಧವೇನೂ ಇಲ್ಲ ತಾವು ಹೇಳುವುದೆಲ್ಲ ವೇದ ಸಮ್ಮತವೆಂದೇ ಎಲ್ಲ ಆಗಮಗಳೂ ಮತ್ತೆ ಮತ್ತೆ ಘೋಷಿಸಿವೆ[೮], ಆಗಮಗಳಿಗೆ ಸಿದ್ಧಾಂತ ಶಿಖಾಮಣಿಯೆ ಆದರವಾಗಿರುವುದರಿಂದ ಸಿದ್ಧಾಂತ ಶಿಖಾಮಣಿಯ ಕರ್ತೃ ಬಸವನ ಹಿರಿಯ ಸಮಕಾಲೀನನೆಂದು, ಅದು ಬಸವನ ಕಾಲದಲ್ಲೇ ರಚಿತವಾದುದಾಗಿದ್ದು ಅದರ ಕರ್ತೃ ಶಿವಯೋಗಿ ಶಿವಾಚಾರ್ಯನು[೯] ಎಂಬುದಾಗಿ ಡಾ. ಎಂ ಚಿದನಾಂದಮೂರ್ತಿ ಅವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ ಆಗಮಗಳು ಯಾವ ಕಾಲದಲ್ಲಿ ರಚಿತವಾದವು, ಅವುಗಳ ಕರ್ತೃ ಯಾರು ಎಂಬುದು ತಿಳಿದು ಬರುವುದಿಲ್ಲ. ಆಗಮಗಳಲ್ಲಿ ಕೇವಲ ಕಲ್ಪಿತ ಉಹಾಪೋಹಗಳಿಂದ ಕೂಡಿರುವ ಕಥೆಗಳೆ ಹೇಳಲ್ಪಟ್ಟಿವೆ, ಆದರೂ ಈ ಆಗಮಗಳನ್ನು ಆಧಾರವಾಗಿಟ್ಟು ಕೊಂಡು ಪಂಚಪೀಠಗಳಲ್ಲಿ ಮರುಳಸಿದ್ಧರನ್ನು ಆಚಾರ್ಯ ಪರಂಪರೆಗೆ ಸೇರಿಸಲು ಪ್ರಯತ್ನಿಸಿದ್ದಾರೆ[೧೦]. ಅಂದರೆ ಕೇವಲ ಕೆಲವರು ಮಾತ್ರ ಈ ವಾದಕ್ಕೆ ಒಳಗಾಗಿದ್ದಾರೆ.

❖ ಚತುರಾಚಾರ್ಯರ ಪ್ರಬಂಧ

ಚತುರಾಚಾರ್ಯರ ಪ್ರಬಂಧದ ಕರ್ತೃ ತಿಲಕಪುರದ ಸೋಮ. ತಿಲಕಪುರ ಎನ್ನುವುದು ಈಗಿನ ಗುಲಬರ್ಗಾ ಜಿಲ್ಲೆಯ ಸೇಡಂ ತಾಲೂಕಿಗೆ ಸೇರಿದ ತಿಲಕೂರು. ಈತನ ಕಾಲ ೧೮ನೇ ಶತಮಾನ, ಈತನ ಭಾಷೆ ಸುಲಭವಾಗಿದೆ. ಸಂಸ್ಕೃತ, ಭಾಷೆಯ ಪ್ರಭುತ್ವವನ್ನು ಕಾವ್ಯದಲ್ಲಿ ಹೆಚ್ಚಿಗೆ ತೋರಿಸಿಲ್ಲ, ಈ ಕೃತಿ ಹೆಸರಿಗೆ ಚತುರಾಚಾರ್ಯ ಪ್ರಬಂಧವಾದರೂ ಇದರಲ್ಲಿ ರೇಣುಕ, ಮರುಳಸಿದ್ಧ, ಏಕೋರಾಮ ಮತ್ತು ಪಂಡಿತಾರಾಧ್ಯರ ಚಿತ್ರಗಳು ಸರಿಯಾಗಿ ಮೂಡಿ

ಬಂದಿಲ್ಲವೆನ್ನಬಹುದು. ಅವರು ಜನಿಸಿದ್ದು, ದೀಕ್ಷೆ ಹೊಂದಿದ್ದು, ತಮ್ಮ ಕಾಲದ ದೊರೆಗಳಿಗೆ ಪಟ್ಟ ಕಟ್ಟಿದ್ದು, ಅವರ ಮೂಲಕ ವೀರಶೈವ ಧರ್ಮವನ್ನು ಪ್ರಸಾರ ಮಾಡಿದುದು ಮುಂತಾದ ಬಾಹ್ಯ ಘಟನೆಗಳು ಕಂಡುಬರುತ್ತವೆ. ಆದರೆ ಅವರ ಮಾನಸಿಕ ಒಳತೋಟ, ಹೃದಯಂಗಮ ಭಾವನೆಗಳು ಈ ಕಾವ್ಯದಲ್ಲಿ ಎಡೆಪಡೆದಿಲ್ಲ. ಚತುರಾಚಾರ್ಯರು ಇಲ್ಲಿ ಬರುವ ಕಥೆಗಳಿಗೆ ಸೂತ್ರರೂಪರಾಗಿದ್ದಾರೆ, ಜೈಮಿನಿ ಭಾರತದಂತೆ, ಬಸವ ಪುರಾಣದಂತೆ ಈ ಕೃತಿಯು ಕೂಡ ಒಂದು ಕಥಾಗುಚ್ಚವಾಗಿದೆ. ಆ ಕಾರಣವಾಗಿ ಇಲ್ಲಿ ಬರುವ ಯಾವ ಪಾತ್ರವೂ ಸಂಪೂರ್ಣವಾಗಿ ಬೆಳೆದಿಲ್ಲ[೧೦]. ಚತುರಾಚಾರ್ಯರ ಪ್ರಬಂಧವನ್ನು ಎರಡು ಹಸ್ತ ಪ್ರತಿಗಳಿಂದ ಸಂಪಾದಿಸಲಾಗಿದೆ. ನಗುವನಹಳ್ಳಿ ಪಿ.ರತ್ನ ಅವರು ಚತುರಾಚಾರ್ಯರ ಪ್ರಬಂಧವನ್ನು ಸಂಪಾದಿಸಿರುತ್ತಾರೆ.

❖ ಚತುರಾಚಾರ್ಯರ ಪುರಾಣ

ಇವು ಮರುಳಸಿದ್ಧರ ಜೀವನದ ಪೂರ್ಣ ಭಾಗವನ್ನು ವಿವರಿಸಿಲ್ಲ. ಕಗ್ಗಲ್ಲು ಗೌಡನಿಗೆ ಮಗನಾಗಿ ಸಿಕ್ಕಿದನು, ಜಜ್ಜುಗಂತೆಯ ಧರಿಸಿದನು, ಉಜ್ಜಯಿನಿಯಲ್ಲಿ ಬಯಲಾದನು, ಎಂಬುದನ್ನು ಮಾತ್ರ ವಿವರಿಸಿದೆ. ಈ ಕೃತಿಯಿಂದ ಮರುಳಸಿದ್ಧನ ಜೀವನದ ವಿಸ್ತಾರವು ನಮಗೆ ಪೂರ್ಣವಾಗಿ ದೊರಕುವುದಿಲ್ಲ[೧೧].

❖ ಶ್ರೀ ಕರಭಾಷ್ಯ

ಮರುಳಸಿದ್ಧರನ್ನು ನೆನಪಿಸುವ ಮತ್ತೊಂದು ಕೃತಿ. ಶ್ರೀ ಕರಭಾಷ್ಯ ಕೃತಿಯ ಕರ್ತೃ ಶ್ರೀ ಪತಿ ಪಂಡಿತ, ಈತನು ಸುಮಾರು ಹತ್ತನೆಯ ಶತಮಾನದಲ್ಲಿ ಜೀವಿಸಿದ್ಧಿರಬಹುದೆಂದು ಹೇಳಲಾಗುತ್ತವೆ[೧೨]. ಶ್ರೀ ಕರಭಾಷ್ಯವು ಮರುಳಸಿದ್ಧ ರೇವಣಸಿದ್ಧನ ಶಿಷ್ಯನೆಂದು ಮಾತ್ರ ವಿವರಿಸಿದೆ. ಈ ಗ್ರಂಥದಲ್ಲಿ ಶ್ರೀ ಪತಿಪಂಡಿತನು ಪ್ರಾರಂಭದ ಪೀಠಿಕೆಯಲ್ಲಿ ಈ ರೀತಿ ವರ್ಣಿಸಿದ್ದಾನೆ.

॥ ಶ್ರೀ ಮುದ್ರವಣ ದೇಶಿಕೇಂದ್ರ ವಿಭವಂ ಲಿಂಗಾವಧಾನೋಜ್ವಲಂ॥

ಸಿದ್ಧಾರ್ಯಂ ಮರುಳಪ್ರಭು ಬುಧನುತಂ ತಂಮನ್ಮಹೇ ಶ್ರೇಯಸೇ ॥[೧೩]

ಎಂದು ಪ್ರಾಥಿಸುವ ಮೂಲಕ ಮರುಳಸಿದ್ಧಪ್ರಭು ಎಂದು ಹೇಳಿ ಗೌರವಿಸಿದ್ದಾನೆ.

❖ ಮಹಾದೇವಿಯಕ್ಕನ ಸಾಂಗತ್ಯ :

ಹದಿನಾರನೆ ಶತಮಾನದ ಕವಿ ಚಿಕ್ಕರಾಚಯ್ಯನ "ಮಹಾದೇವಿಯಕ್ಕನ ಸಾಂಗತ್ಯ" ದಲ್ಲಿ ಮಹದೇವಿಯು ಓಂಕಾರ ಸೆಟ್ಟಿ-ಲಿಂಗಮ್ಮ ದಂಪತಿಗಳ ಮಗಳಾಗಿ ಮರ್ತ್ಯದಲ್ಲಿ ಜನಿಸಿದಳು. ಇವಳಿಗೆ

ಆಗಮದೀಕ್ಷಾಚಾರ್ಯರಾದ ಮರುಳಸಿದ್ಧೇಶ್ವರರು ದೀಕ್ಷಾಗುರುಗಳಾದರು[೧೪]. ಚಿಕ್ಕರಾಚನ ಈ ಎರಡೂ ಹೇಳಿಕೆಗಳು ಬಹಳ ಮುಖ್ಯ ಚಿಕ್ಕರಾಚನು ಮಹಾದೇವಿಯ ತಾಯಿಯ ಗರ್ಭದೀಕ್ಷೆ ಯನ್ನು ಮಾಡಿ ಪ್ರಸಾದವನ್ನಿತ್ತರೆಂದೂ ಹೇಳಿರುವನು[೧೫]. ಮೊದಲ ಸಂಧಿಯ ಕೊನೆಯಲ್ಲಿ ಗುರುಗಳಾದ ಮರುಳಸಿದ್ಧೇಶ್ವರರ ಬಗೆಗೆ ಹೆಚ್ಚಿನ ವಿವರಗಳನ್ನು ನೀಡಿರುವನು. ಚಿಕ್ಕರಾಚಯ್ಯನು ಮರುಳಸಿದ್ಧರ ಸಮಕಾಲೀನ ಕವಿಯೆನೋ ಅಲ್ಲ. ಆದರೆ ಆತ ಮರುಳಸಿದ್ಧರಿಗೆ ಸಂಬಂಧಿಸಿದ ಐತಿಹಾಸಿಕ ಮಾಹಿತಿ ಪಡೆದು ಮಹಾದೇವಿಗೆ ದೀಕ್ಷಾ ಗುರುಗಳಾದ ಬಗ್ಗೆ ಈ ಸಾಂಗತ್ಯದಲ್ಲಿ ಅಭಿವ್ಯಕ್ತಗೊಳ್ಳುತ್ತದೆ.

❖ ಸಿದ್ಧಲಿಂಗ ಚಾರಿತ್ರ :

'ವೀರಶೈವಾಚಾರ್ಯ'ರಲೊಬ್ಬರಾದ ಮರುಳಸಿದ್ಧರ ಜೀವನ ಚರಿತ್ರೆಯು ವಾರ್ಧಿಕ ಷಟ್ಪದಿಯಲ್ಲಿದೆ. ಅಲ್ಲಿ ಆರು ಸಂಧಿಗಳಿವೆ, ಒಟ್ಟು ೪೮೪ ಪದ್ಯಗಳಿವೆ. ಇದಕ್ಕೆ 'ಸಿದ್ಧಲಿಂಗ ಚಾರಿತ್ರ' ಎಂದೂ ಹೆಸರುಂಟು ಗದ್ದುಗೆಯ ರಾಮಿತಂದೆಯು ಶರಣ ಸಂತತಿಗೆ ಉದ್ಧರಿಸಿ "ಪೇಳ್ದ ಗುರುಬೋಧೆಯ ಮಹಾತ್ಮೆಯನು ಹೃದ್ಯದೊಳೆ ನೆರೆಭಾವಿಸಿ ಬುದ್ದಿಯಂ ಮನಚಿತ್ತಕರಣ ಕಳೆಯೋಳೀವೆ" ಅವಿರಳ ಪರಬ್ರಹ್ಮಸಿದ್ಧ ಲಿಂಗನ ಕೃತಿಯನೊರೆದೆನೆಂದು ಕವಿ ಹೇಳುತ್ತಾನೆ. ಗ್ರಂಥವು ಶಾಲಿ ವಾಹನಶಕ ೧೫೪೯ನೆಯ ಸರ್ವಜಿತು ಸಂವತ್ಸರ ವೈಶಾಖ ಹುಣ್ಣಿಮೆ ಗುರುವಾರದ(೧೫೮೭) ಶುಭಯೋಗದಲ್ಲಿ ಮುಗಿದಿದೆ. ಎಂದಿರುವುದರಿಂದ ಕವಿಯ ಗುರುವು ಬಾಳ್ಗುಳಿಯ ಕಲಿದೇವನೆಂದೂ ಈ ಗ್ರಂಥವನ್ನು ರಚಿಸಿರುವವನು ದೇವನೆಂದೂ ಗೊತ್ತಾಗುತ್ತದೆ[೧೬]. ದೇಪ ಅಥವಾ ದೇವ ಎಂದು ಅ.ನ.ಕೃಷ್ಣರಾಯರು ಅಭಿಪ್ರಾಯಪಟ್ಟಿರುವಂತೆ ೧-೧೬ನೇ ಪದ್ಯದಲ್ಲಿ ಕವಿಯ ಹೆಸರು ದೇಪ ಎಂದು ಉಕ್ತವಾಗಿದೆ. ಮತ್ತೊಂದೆಡೆ (೬.೮೨) ಪೇಳಿದನು ದೇವಸುತ ಪೇಳೆನುತಲೀ ಕೃತಿಯ, ಅಂದರೆ ದೇವಸುತ ಪೇಳೆನುತಲು ಈ ಕೃತಿಯ (ದೇಪ) ಪೇಳಿದನು ಎಂದು ಅರ್ಥವಾಗುತ್ತದೆ. ದೇವಸುತನೆಂಬುವನ ಪ್ರೇರಣೆಯಿಂದ ದೇಪನು ಈ ಕೃತಿಯನ್ನು ರಚಿಸಿರಬಹುದು ಅಥವಾ ದೇಪನು ದೇವನೆಂಬುವನ ಸುತನಾಗಿರಬಹುದು. ಆದ್ದರಿಂದ ಈ ಕವಿಯ ಹೆಸರು ದೇಪಕವಿ, ದೇವಕವಿಯಲ್ಲ ಎಂದು ಅ.ನ.ಕೃಷ್ಣರಾಯರು ಸಮರ್ಥಿಸಿಕೊಂಡಿದ್ದಾರೆ. ದಿ.ಹುಲ್ಲೂರು ಶ್ರೀನಿವಾಸ ಜೋಯಿಸರೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪಂಡಿತ್ ಎಸ್.ಬಸಪ್ಪ ದೇವಕವಿ ಕೃತಿ ಮರುಳಸಿದ್ಧ ಕಾವ್ಯ ಎಂದು ಸಂಪಾದಿಸಿದ್ದಾರೆ[೧೭].

ಈತನ ವಿಷಯವಾಗಿ ಕಾವ್ಯಗಳಿಂದಾಗಲಿ, ಅನ್ಯತ್ರವಾಗಲಿ, ಯಾವ ಸಂಗತಿಗಳೂ ತಿಳಿದು ಬಂದಿಲ್ಲ. ದೇವ ಕವಿ ತನ್ನ ಕೃತಿಯಲ್ಲಿ ಹರಿಯಣ್ಣ, ಮಲಹಣ, ಬಾಣ, ಉದ್ಭಟ, ಕೆರೆಯ ಪದ್ಮರಸ,

ಕೇಶಿ, ಹಲಾಯುಧ ಮೊದಲಾದವರನ್ನು ಸ್ತುತಿಸಿದ್ದಾನೆ. ಈತನ ತರುವಾಯದ ಕವಿಗಳಾರೂ ಈತನನ್ನು ಹೆಸರಿಸಿಲ್ಲ. ಅದರೆ ಈತನು ತನ್ನ ಕಾವ್ಯ ರಚನಾಕಾಲವನ್ನು ಹೇಳಿಕೊಂಡಿದ್ದಾನೆ. ಕಾವ್ಯದ ಕರ್ತೃ ದೇವಸೂತ ಈ ಕೃತಿಗೆ ಸಿದ್ಧಲಿಂಗ ಚರಿತ, ಸಿದ್ಧಲಿಂಗ ಕೃತಿ, ಮರುಳಸಿದ್ಧ ಚಾರಿತ್ರ ಎಂಬಪರ್ಯಾಯ ನಾಮಗಳಿರುವುದು ಕಂಡು ಬರುತ್ತದೆ. ಕವಿ ತನ್ನ ಈ ಧೋರಣೆಗಳಲ್ಲಿ ಹರಿಹರ ರಾಘವಂಕ, ಚಾಮರಸರ, ಪ್ರಭಾವವನ್ನು ತೋರಿದ್ದಾನೆ. ಈ ಮರುಳಸಿದ್ಧ ಕಾವ್ಯ ಇತಿಹಾಸ ದೃಷ್ಟಿಯಿಂದಲೂ ಮುಖ್ಯವಾದುದು; ಏಕೆಂದರೆ ಇದರಲ್ಲಿ ಹಲವಾರು ಶಿವಶರಣರ ಹೆಸರುಗಳೂ ೬೩ ಪುರಾತನರ ಹೆಸರುಗಳು ಬಂದಿವೆ[೧೮]. ಅಲ್ಲದೆ ದೇವಕವಿ (ದೇಪ) ಮರುಳಸಿದ್ಧರ ಸಮಕಾಲೀನರಾದ ಗದ್ದುಗೆಯ ರಾಮಿ ತಂದೆಯಿಂದ ರಚಿಸಲ್ಪಟ್ಟ "ಗುರುಬೋಧೆಯ ಮಹಾತ್ಮೆ" ಎಂಬುದರ ಆಧಾರದಿಂದ ರಚಿಸಲ್ಪಟ್ಟಿರುವುದಾಗಿ ಹೇಳಿಕೊಂಡಿದ್ದಾನೆ. 'ಗುರುಬೋಧೆಯ ಮಹಾತ್ಮೆ'ಯು ಉಪಲಬ್ಧವಾಗಿಲ್ಲ. ದೇವಕವಿ (ದೇಪ) ಸಂಪ್ರದಾಯಸ್ಥ ಕವಿ. ಕಾವ್ಯದ ಕಥಾನಾಯಕನ ಹಿರಿಮೆಯನ್ನು ಮರೆಯಲೋಸುಗ ಹಲವಾರು ಪವಾಡಗಳನ್ನು ಸೃಷ್ಟಿಸಿದ್ದಾನೆ. ದೇವಕವಿ (ದೇಪ) ಅಂತಹ ಪ್ರತಿಭಾವಂತನಲ್ಲದಿದ್ದರೂ ಕಳಪೆಯ ಕವಿಯೇನೂ ಅಲ್ಲ. ಈತನಿಗೆ ಕನ್ನಡ ಸಂಸ್ಕೃತ ಭಾಷೆಗಳೆರಡರಲ್ಲಿಯೂ ಪಾಂಡಿತ್ಯವಿರುವುದು ವ್ಯಕ್ತವಾಗುತ್ತದೆ. ಕವಿ ಮರುಳಸಿದ್ಧರ ಸಮಕಾಲೀನ ಕವಿಯೇನೂ ಅಲ್ಲ. ಆದರೆ ಆತನ ಜೀವನ ಚರಿತ್ರೆ ನಿರೂಪಿಸಿರುವುದನ್ನು ನೋಡಿದರೆ ಕೆಲವು ಐತಿಹಾಸಿಕ ಅಂಶಗಳಾನ್ನಧಾರಿಸಿ ಸಿದ್ಧಲಿಂಗ ಚರಿತ್ರೆ ರಚಿಸಿರಬಹುದೆಂಬುದು ವ್ಯಕ್ತವಾಗುತ್ತದೆ.

❖ ಮರುಳಸಿದ್ಧ ದೇವರ ಚರಿತ್ರೆ

ಈ ಕೃತಿಯ ಕರ್ತೃ ರೇವಣಸಿದ್ಧ ಕವಿಯ ಜನ್ಮಸ್ಥಳ ದಾವಣಗೆರೆಯ ಸಮೀಪದ ಆನೆಕೊಂಡ ಕವಿಯು ಕ್ರಿ.ಶ. ೧೮೪೧ರಲ್ಲಿ ಈ ಸಾಂಗತ್ಯ ರಚಿಸಿದ್ದಾಗಿಯೂ ತಿಳಿಸಿದ್ದಾನೆ[೧೯]. ಮರುಳಸಿದ್ಧರ ಚರಿತ್ರೆಗೆ ಸಂಬಂಧಿಸಿದ ಕಥಾ ನಿರೂಪಣೆಯು ದೇವಕವಿ (ದೇಪ) ಕಾವ್ಯದಲ್ಲಿರುವ ಕಥಾವಸ್ತುವನ್ನೇ ಅಕ್ಷರಶಃ ಅನುಸರಿಸಿತ್ತದೆ. ಅಲ್ಲದೆ ಮರುಳಸಿದ್ಧರನ್ನು ಸ್ಮರಿಸಿರುವ ಹಾಗೂ ಕೆಲವು ಘಟನೆಗಳನ್ನು ತಿಳಿಸುವ ಕೃತಿಗಳು ಸಹ ದೊರೆತಿವೆ. ಅವುಗಳಲ್ಲಿ ಗುರುರಾಜ ಚಾರಿತ್ರ ಒಂದು ಇದು ಸಿದ್ಧನಂಜೇಶನ ಕೃತಿ, ಸು. ೧೬೫೦ ರಚಿತವಾಗಿರಬಹುದು[೨೦]. ಈ ಕೃತಿಯಲ್ಲಿ ಮರುಳಸಿದ್ಧರಿಗೆ ಸಂಬಂಧಿಸಿದ ಕಥಾ ನಿರೂಪಣೆಯು ವಿಭಿನ್ನವಾಗಿ ವರ್ಣಿಸಲ್ಪಟ್ಟಿರುವುದು ಕಂಡು ಬರುತ್ತದೆ. ಮರುಳಸಿದ್ಧರನ್ನು ಸ್ಮರಿಸುವ ಬಿಡಿ ವಚನಗಳು ಅಲ್ಲಲ್ಲಿ ಲಭ್ಯವಾಗಿದ್ದು ಸ್ಮರಿಸಿವೆ. ಅಂತಹವುಗಳಲ್ಲಿ ಸಿದ್ಧರಾಮೇಶ್ವರ ವಚನದಲ್ಲಿ ಆದಿಸೆಟ್ಟಿಯ ವಚನದಲ್ಲಿಯೂ, ಮರುಳಸಿದ್ಧರ ಹೆಸರಿದೆ. 'ಮರುಳಸಿದ್ಧಯ್ಯ ದೇವರ ಅದೃಷ್ಟ ಪ್ರಸಾದದನಿಷ್ಟೆ' ಎಂದು ವರ್ಣಿಸಿದೆ. ವೀರಶೈವ ಕವಿಗಳು ತಮ್ಮ ಗ್ರಂಥಗಳಲ್ಲಿ ರೇವಣಸಿದ್ಧ,

[illegible]

ಮರುಳಸಿದ್ಧ, ಏಕೋರಾಮಿತಂದೆ, ಪಂಡಿತರಾಧ್ಯ, ವಿಶ್ವಾರಾಧ್ಯ ಎಂಬ ಐವರು ಆಚಾರ್ಯರನ್ನು ಸ್ಮರಿಸಿದ್ದಾರೆ. ಇವರನ್ನು ಕೆಲವರು ಬಸವನಿಗೆ ಮೊದಲೂ ಕೆಲವರು ಅವನ ಸಮಕಾಲದಲ್ಲಿಯೂ ಇದ್ದಂತೆ ತೋರುತ್ತದೆ[೨೧]. ಗುರುಸಿದ್ಧಸ್ವಾಮಿಗಳ ಸಾಂಗತ್ಯ, ನಾಗಭೂಷಣ ಕವಿಯ ಸಾಂಗತ್ಯ, ಉಜ್ಜಯಿನಿ ಗೊಂಗಡಿ ವೀರಭದ್ರಯ್ಯನವರ ಸಾಂಗತ್ಯ, ಹಾಗೂ ಮರುಳರಾಧ್ಯಾ ವಿಜಯ ಚರಿತ ನಂದೀಶ ಕವಿಯಿಂದ ರಚಿಸಲ್ಪಟ್ಟಿದೆ. ಆದರೆ ಇದು ನಂದೀಶ ಕವಿಯ ಕೃತಿಯಲ್ಲ, ಶ್ರೀ ಶೈಲ ಪೀಠಾಧಿಪತಿಗಳಾದ ವಾಗೀಶಪಂಡಿತಾರಾಧ್ಯರಿಂದ ೧೯೪೬ ರಲ್ಲಿ ರಚಿಸಲ್ಪಟ್ಟಿರುವುದು ಎಂಬುದಾಗಿ ತಿಳಿದುಬರುತ್ತದೆ.

ಈ ಮೇಲೆ ತಿಳಿಸಿದ ಎಲ್ಲಾ ಕೃತಿಗಳು ಮರುಳಸಿದ್ಧರ ಜೀವನ ವೃತ್ತಾಂತ ವಿವರಿಸಲು ಸಹಾಯಕವಾಗಿರುವ ಆಕಾರಾಧಿ ಸಾಹಿತ್ಯ ಕೃತಿಗಳಾಗಿವೆ. ಅವುಗಳಲ್ಲಿ ಮುಖ್ಯವಾಗಿ "ಗದ್ದುಗೆಯ ರಾಮಿತಂದೆಯು" ಶರಣ ಸಂತತಿಗೆ ಉದ್ಧರಿಸಿ ಪೇಳ್ದ ಗುರುಭೋಧೆಯ ಮಹಾತ್ಮೆಯನ್ನು ಅನುಸರಿಸಿ ರಚಿಸಿದ ಸಿದ್ಧಲಿಂಗಚಾರಿತ್ರ್ಯ ಕರ್ತೃ ದೇವಕವಿ. ಈ ಕೃತಿಯು ಮರುಳಸಿದ್ಧರ ಜೀವನ, ಜನ್ಮಸ್ಥಳ ಹಾಗೂ ಅವರ ಪವಾಡ ನಡೆದ ಘಟನೆಗಳನ್ನು ನಿರೂಪಿಸಿರುವುದನ್ನು ಗಮನಿಸಿದರೆ ಇದೆ ಮೊದಲ ಕೃತಿ ಎಂಬುದಾಗಿ ತಿಳಿಯುತ್ತದೆ. ದೇವಕವಿ ಮರುಳಸಿದ್ಧರ ಉಳಿದಂತೆ ಕೃತಿಗಳು ಸು.೧೬-೨೦ ನೇ ಶತಮಾನದ ಮಧ್ಯಾವಧಿಯಲ್ಲಿ ರಚಿಸಲ್ಪಟ್ಟಿರು ಕೃತಿಗಳು. ಈ ಕೃತಿಗಳಲ್ಲಿ ಕೆಲವು ದೇವಕವಿಯ ಸಿದ್ಧಲಿಂಗ ಚಾರಿತ್ರ ಅನುಸರಿಸಿದ ಸಾಂಗತ್ಯ, ಕಾವ್ಯಗಳಾದರೆ ಉಳಿದ ಕೆಲ ಸಾಹಿತ್ಯ ಕೃತಿಗಳು ತಮ್ಮ ಕಲ್ಪನೆಗೆ ತಕ್ಕಂತೆ ಸೃಷ್ಟಿಸಲ್ಪಟ ಕೃತಿಗಳೆಂಬುದು ಗೊತ್ತಾಗುತ್ತದೆ. ದೇವಕವಿಯ ನಂತರ ಸಾಹಿತ್ಯ ಕೃತಿಗಳಲ್ಲಿ ಯಥಾರ್ಥ ಅಂಶಗಳನ್ನು ನಿರ್ಧರಿಸುವುದು ಅಸಾಧ್ಯ. ಆದರೂ ಈ ಸಾಹಿತ್ಯ ಕೃತಿಗಳನ್ನು ನನ್ನ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ವಸಾಹತುಶಾಹಿ ಸಂದರ್ಭದಲ್ಲಿ ಭಾರತೀಯ ಚರಿತ್ರೆ ಮತ್ತು ಸಂಸ್ಕೃತಿ ಕುರಿತು ಆಧುನಿಕ ಸಾಹಿತ್ಯ ಮತ್ತು ಚರಿತ್ರೆಕಾರರು ಹೊಸ ಹೊಸ ಸಂಶೋಧನೆಗಳಲ್ಲಿ ತೊಡಗಿದ ಮೇಲೆ ಅನೇಕ ಕಾವ್ಯಗಳು, ಸಾಂಗತ್ಯಗಳು, ಧಾರ್ಮಿಕ ಪುರಾಣ ಕಥೆಗಳು ಪರಿಚಯವಾಗಲಾರಂಭಿಸಿದವು. ಇಂಥಹ ಸಾಹಿತ್ಯಕ ಮತ್ತು ಚಾರಿತ್ರಿಕ ದಾಖಲೆಗಳಲ್ಲಿ ಮರುಳಸಿದ್ಧ ಸಾಂಗತ್ಯವೂ ಸಹ ಒಂದಾಗಿದೆ. ಈ ಮರುಳಸಿದ್ಧ ಕಾವ್ಯವನ್ನು ಪ್ರಸಿದ್ಧ ಸಾಹಿತಿಗಳಾದ ಅ.ನ.ಕೃಷ್ಣರಾಯರಿಂದ ಸಂಪಾದಿಸಲ್ಪಟ್ಟು ೧೯೪೫ ರಲ್ಲಿ ಪ್ರಕಟವಾಯಿತು. ಇವರು ದೇವಕವಿಯ (ದೇಪ) ಸಿದ್ಧಲಿಂಗ ಚಾರಿತ್ರದ ಹಸ್ತಪ್ರತಿಗಳನ್ನು ಸಂಶೋಧಿಸಿ ನೈಜ ಚರಿತ್ರೆಯನ್ನು ಹೊರತಂದಿದ್ದಾರೆ. ಅನಂತರ ಅನೇಕ ಸಂಶೋಧಕರ ಫಲವಾಗಿ ಕಳೆದ ಶತಮಾನದ ಐವತ್ತರ ದಶಕದಲ್ಲಿ ಮರುಳಸಿದ್ಧರ ಜೀವನ ವ್ಯಕ್ತಿತ್ವ ಆತನ ಸಾಧನೆಯ ಕುರಿತು

ಹೊಸ ಸಂಶೋಧನೆಯ ಕಡೆ ಆಸಕ್ತಿ ತೋರಿದರು. ಇದರ ಫಲವಾಗಿ ಸಂಶೋಧಿತ ಲೇಖನಗಳು,ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿ ಹೊರತಂದಿದ್ದಾರೆ. ಪ್ರಮುಖ ಸಂಶೋಧಕರೂ ಸಾಹಿತಿಗಳೂ ಮತ್ತು ಚರಿತ್ರೆಕಾರರೂ ಆದ ಹೆಚ್.ದೇವೀರಪ್ಪ ಪ್ರಾಚ್ಯವಿದ್ಯಾ ಸಂಶೋಧನಾಲಯ ಮೈಸೂರು ಇವರು ಮರುಳಸಿದ್ಧರ ಜೀವನ ಚರಿತ್ರೆಗೆ ಸಂಬಂಧಿಸಿದಂತೆ ಅನೇಕ ಸಂಶೋಧನ ಲೇಖನಗಳನ್ನು ಪ್ರಕಟಿಸಿದ್ದಾರೆ.

ಇದೇ ರೀತಿ ಇತರ ಸಂಶೋಧಕರಾದ ಎಂ.ಗೋವಿಂದಪೈ, ಹರ್ಡೇಕರ್ ಮಂಜಪ್ಪರವರು ಲೇಖನಗಳು ಪ್ರಕಟವಾಗಿವೆ, ದೇವ ಕವಿ ಕೃತ ಮರುಳಸಿದ್ಧರ ಕಾವ್ಯವನ್ನು ಪಂಡಿತ ಎಸ್. ಬಸಪ್ಪ ಸಂಪಾದಿಸಿ ಪ್ರಕಟಿಸಿದ್ದಾರೆ. ಮರುಳಸಿದ್ಧರ ಪುಣ್ಯಕ್ಷೇತ್ರಗಳು ಎಂಬ ಶೀರ್ಷಿಕೆಯನ್ನು ಜೀರಿಗೆ ಕಟ್ಟೆಬಸಪ್ಪ ಸಂಪಾದಿಸಿ ಪ್ರಕಟಿಸಿದ್ದಾರೆ. ರಾ.ಬ.ಫ.ಗು. ಹಳಕಟ್ಟಿ, ಡಾ. ಆರ್.ಸಿ.ಹಿರೇಮಠ, ದಿ. ಹುಲ್ಲೂರು ಶ್ರೀನಿವಾಸ ಜೋಯ್ಸ್, ಎಸ್. ಆರ್. ಮಲ್ಲಪ್ಪ, ಟಿ.ಹೆಚ್.ಎಂ.ಸದಾಶಿವಯ್ಯನವರು, ಶ್ರೀ ಮಲ್ಲಿಕಾರ್ಜನ ದೇಶಿಕರು, ಮೊದಲಾದ ಸಂಶೋಧಕರು ಮರುಳಸಿದ್ಧರ ಕುರಿತು ಅನೇಕ ಲೇಖನಗಳನ್ನು ಪ್ರಕಟಿಸಿದ್ದಾರೆ. ಶ್ರೀ ಶ್ರೀ ತರಳಬಾಳು ಜಗದ್ಗುರು ಶಿವಕುಮಾರ ಶಿವಾಚಾರ್ಯ ಸ್ವಾಮಿಗಳವರು ಶ್ರೀ ಮರುಳಸಿದ್ಧರ ಕುರಿತು ಅವರ ಮೂಲ ಸ್ಥಳ ಅವರು ಮಾಡಿದ ಪ್ರವಾಸ, ಅವರು ಮೆರೆದ ಪವಾಡ, (ಸಾಧನೆ) ಅವರ ಕಾಲಮಾನ ಮತ್ತು ಇನ್ನಿತರ ವಿಷಯಗಳ ಬಗ್ಗೆ ಅನೇಕ ಸಂಗತಿಗಳನ್ನು ಸಂಶೋಧಿಸಿ ಹಲವು ಲೇಖನಗಳನ್ನು ರಚಿಸಿದ್ದಾರೆ. ಆನಗೋಡು ರೇವಣಸಿದ್ಧ ಕವಿ ವಿರಚಿತ ಮರುಳಸಿದ್ಧ ಕಾವ್ಯ ಸಾಂಗತ್ಯವನ್ನು ತರಳಬಾಳು ಶಿವಮೂರ್ತಿ ಸಂಪಾದಿಸಿದ್ದಾರೆ. ಡಾ. ಹೆಚ್.ತಿಪ್ಪೇರುದ್ರಸ್ವಾಮಿ, ಡಾ. ಎಂ.ಚಿದಾನಂದ ಮೂರ್ತಿ, ಡಾ. ಎಂ.ಎಂ.ಕಲಬುರ್ಗಿ ಅವರ ಲೇಖನ ಪ್ರಕಟಿತ ಕೃತಿಗಳಲ್ಲೂ ಸಹ ಮರುಳಸಿದ್ಧರ ವಿಚಾರಗಳ ಕುರಿತು ಹಲವು ಸಂಗತಿಗಳು ತಿಳಿದುಬರುತ್ತವೆ. ಮಹದೇವ ಬಣಕಾರರು ಸಂಪಾಧಿಸಿರುವ ಮರುಳಸಿದ್ಧರ ಜೀವನ ಚರಿತ್ರೆಗೆ ಸಂಬಂಧಿಸಿದ ಬಿಡಿ ಲೇಖನಗಳು ಪ್ರಕಟವಾಗಿವೆ.

ಜಿ.ಥರಸ್ಟನ್ ತನ್ನ ದಕ್ಷಿಣ ಭಾರತದ ಜಾತಿ ಮತ್ತು ಬಣಗಳು ಎಂಬ ಇಂಗ್ಲೀಷ್ ಕೃತಿಯ ನಾಲ್ಕನೇ ಭಾಗದಲ್ಲಿ ಐವರು ಗೋತ್ರಕಾರರು ಭಾರತದ ವಿವಿಧೆಡೆಗಳಲ್ಲಿ ಐದು ದೊಡ್ಡ ಧಾರ್ಮಿಕ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ ಎಂಬುದಾಗಿ ತಮ್ಮ ಕೃತಿಯಲ್ಲಿ ತಿಳಿಸಿದ್ದಾರೆ. ಡಾ॥ ಜೆ. ಎನ್. ಪಾರ್ಕಹಾರ್ ತನ್ನ 'ದಿ ರಿಲಿಜೆಯಸ್ ಕ್ವೆಸ್ಟ್ ಆಫ್ ಇಂಡಿಯಾ' ಎಂಬ ಕೃತಿಯಲ್ಲಿ ಪಂಚಪೀಠಗಳ ಪರಂಪರೆಯ ಬಗ್ಗೆ ತಿಳಿಸಿದ್ದಾರೆ. ಸಿ. ಪಿ. ಬ್ರೌನ್ ತನ್ನ ಮದ್ರಾಸ್ ಸಾಹಿತ್ಯ ಮತ್ತು ವಿಜ್ಞಾನ ಎಂಬ ಇಂಗ್ಲೀಷ್ ಪತ್ರಿಕೆಯಲ್ಲಿ ಈ ಪಂಚಪೀಠಗಳಲ್ಲಿ ನಾಲ್ಕು ಜನ ಆಚಾರ್ಯರ ಹೆಸರುಗಳನ್ನು

ಪ್ರಸ್ತಾಪಿಸಿದ್ದಾರೆ. ಹಿರೇಹಡಗಲಿ ಪುರಾಣಿಕ ಮಠದ ವಿರೂಪಾಕ್ಷ ಶಾಸ್ತ್ರಿಯವರು ೧೯೪೪ರಲ್ಲಿ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ವಿಜಯ ಎಂಬ ಕೃತಿಯನ್ನು ಮತ್ತು ೧೯೫೬ರಲ್ಲಿ ಶ್ರೀ ಜಗದ್ಗುರು ಪಂಚಪೀಠಗಳ ಪರಿಚಯ ಎಂಬ ಕೃತಿಯನ್ನು ರಚಿಸಿದ್ದಾರೆ. ಡಾ. ಸರ್ ಆರ್.ಜಿ.ಭಂಡಾರಕರ್ ರವರ 'ವೈಷ್ಣವಿಸಂಶೈವಿಜಂ ಆಂಡ್ ಮೈನರ ರಿಲಿಜಿಯಸ್ ಸಿಸ್ಟಮ್ಸ್' ಎಂಬ ಕೃತಿಯಲ್ಲಿ ಪಂಚಪೀಠಗಳ ಬಗ್ಗೆ ತಿಳಿಸಿದ್ದಾರೆ. ರಾ.ಬ.ಎಲ್.ಕೆ ಅನಂತಕೃಷ್ಣಅಯ್ಯರ್‌ರವರು 'ಮೈಸೂರು ಟ್ರೈಬ್ಸ್ ಆಂಡ್ ಕ್ಯಾಸ್ಟ್'ನಲ್ಲಿ ಪಂಚಪೀಠಾಧಿಪತಿಗಳ ಬಗ್ಗೆ ತಿಳಿಸಿದ್ದಾರೆ. ಡಾ. ವಿ.ಶಿವಾನಂದ ಸಂಪಾದಿಸಿರುವ ಗುಂಡಬ್ರಹ್ಮಯ್ಯಗಳ ಚರಿತ್ರೆ ಕೃತಿಯಲ್ಲಿ ಮರುಳಸಿದ್ಧರ ಪ್ರಸ್ತಾಪವನ್ನು ವಿವರಿಸಿರುವುದು ತಿಳಿದುಬರುತ್ತದೆ. ಶ್ರೀ ಪೀಠದ ಮರುಳಸಿದ್ಧ ದೇವಾಲಯದ ವಾಸ್ತು ಶಿಲ್ಪ ಕುರಿತು ಕರ್ನಾಟಕ ಗ್ಯಾಸಟಿಯರ ಹಾಗೂ ಪ್ರಕಟಿತ ಅನೇಕ ಬಿಡಿ ಲೇಖನಗಳು ಉಪಲಬ್ಧ. ಮರುಳಸಿದ್ಧರು ಸಂಚರಿಸಿದ ಕ್ಷೇತ್ರಗಳಿಂದ ತಿಳಿದು ಬರುವ ಸ್ಥಳೀಯರು ಹೇಳುವ ಕಥೆ, ಸೋಬಾನ ಪದ, ಡೊಳ್ಳು ಕುಣಿತ, ವೀರಗಾಸೆ, ಭಜನೆ ಪದ, ಹಾಗೂ ಮರುಳಸಿದ್ಧರ ಕುರಿತು ಆಚರಿಸುವ ಸಾಂಸ್ಕೃತಿಕ ಹಬ್ಬಗಳ ರಥತ್ಸೋವ ಜಾತ್ರೆ ಹಬ್ಬಗಳ ಆಚರಣೆಯಲ್ಲಿ ಆಚರಿಸುವ ಸಂಪ್ರದಾಯಗಳಲ್ಲಿ ಮರುಳಸಿದ್ಧರಿಗೆ ಸಂಬಂಧಿಸಿದ ಸಂಗತಿಗಳು ನಮ್ಮ ಅಧ್ಯಯನಕ್ಕೆ ಹೆಚ್ಚಿನ ನೆರವಾಗಿವೆ.

❖ ಚಾರಿತ್ರಿಕ ಆಧಾರಗಳ ಪರಿಶೀಲನೆ

ಇದುವರೆಗೆ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು: ಚಾರಿತ್ರಿಕ ಅಧ್ಯಯನ ವಿಷಯದ ಸಂಶೋಧನೆಗೆ ನೆರವಾಗುವ ಸಾಹಿತ್ಯದ ಆಧಾರಗಳನ್ನು ಪರಿಶೀಲಿಸಲಾಯಿತು. ಅದೇ ರೀತಿ ಕರ್ನಾಟಕದ ಶಿವಶರಣರ ಐತಿಹ್ಯಗಳಿಗೆ ಕೇವಲ ಪುರಾಣ ಕಾವ್ಯಗಳು ಮಾತ್ರ ಆಧಾರವಾಗಲಾರವು. ಅವುಗಳ ಜೊತೆಗೆ ಅತ್ಯಮೂಲ್ಯ ಐತಿಹಾಸಿಕ ಸಾಮಾಗ್ರಿಗಳೆನ್ನಿಸುವ ಶಾಸನ ಕೈಪಿಯತ್ತು, ಶಿಲಾವಿಗ್ರಹಗಳಿವೆ. ಅಲ್ಲದೆ ಅವರ ಕುರುಹಿನ ನೆಲೆಗಳಾದ ಗವಿ, ಮಠ, ಮಂಟಪ ಸಮಾಧಿ ಮುಂತಾದ ಸ್ಥಳ-ನಿವೇಶನಗಳು ದೊರಕಿರುವುದರಿಂದ ಅವರ ಚರಿತ್ರೆಗೆ ಇತಿಹಾಸದಲ್ಲಿ ನಿಷ್ಕಳಂಕವಾದ ಸ್ಥಾನ ಸಿಕ್ಕಿದಂತಾಗುತ್ತದೆ. ಹೀಗಾಗಿ ಮರುಳಸಿದ್ಧರ ಚರಿತ್ರೆ ಇದಕ್ಕೆ ಹೊರತಾಗಿಲ್ಲ. ಆದ್ದರಿಂದ ಮರುಳಸಿದ್ಧರ ಚರಿತ್ರೆಗೆ ಸಂಬಂಧಿಸಿದಂತೆ ಚಾರಿತ್ರಿಕ ದಾಖಲೆಗಳನ್ನು ಪರಿಶೀಲಿಸಲಾಗುವುದು. ಅವುಗಳಲ್ಲಿ ಮುಖ್ಯವಾಗಿ ಶಾಸನಗಳಲ್ಲಿ ಮರುಳಸಿದ್ಧರ ಹೆಸರು ಪ್ರಸ್ತಾಪವಾಗಿಲ್ಲ. ಆದರೂ ಮರುಳಸಿದ್ಧರ ಕುರಿತು ಸ್ಥಳೀಯ ರಾಜಪ್ರಭುತ್ವದ ಅಧೀನಕ್ಕೊಳಪಟ್ಟ ಸಮಕಾಲೀನವಾದ ಅಥವಾ ಸಮಕಾಲೀನವಲ್ಲದೆ ಇರುವ, ನಂತರ ದೊರೆಯಬಹುದಾದ ಹಲವು ಶಾಸನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಮೊದಲನೆಯದಾಗಿ ಉಜ್ಜನಿಯ (ಕೂಡ್ಲಿಗಿ ತಾಲ್ಲೂಕು ಬಳ್ಳಾರಿ ಜಿಲ್ಲೆ) ಸಿದ್ದೇಶ್ವರ ದೇವಾಲಯದ ಗರ್ಭಗೃಹದ ಗೋಡೆಯ ಪಕ್ಕದಲ್ಲಿ ಬಿದ್ದಿರುವ ಶಾಸನ[೨೨], ಇದು ಕ್ರಿ.ಶ. ಸು. ೧೫೩೯ರಲ್ಲಿ ವಿಜಯನಗರ ಅರಸ ಅಚ್ಯುತದೇವಮಹಾರಾಯನ ದಾನ ಶಾಸನವಾಗಿದೆ. ಅಲ್ಲದೆ ಸಿದ್ದೇಶ್ವರ ದೇವಾಲಯದ ಪೌಳಿಯಲ್ಲಿರುವ ಮತ್ತೊಂದು ಶಾಸನ ದೊರೆತಿದೆ. ಇದು ಸು.ಕ್ರಿ ೧ ಶ ೧೨ ನೇ ಶತಮಾನ ಈ ತುಂಡು ಶಾಸನದಲ್ಲಿ ಜಗದ್ದಳ ಪಾಂಡ್ಯ ದೇವನ ಪ್ರಶಸ್ತಿಯಿದೆ. ಕೋಗಳಿ ನಾಡನ್ನು ಆಳುತ್ತಿದ್ದ ಕದಂಬ ಕುಲದ ಜಗದ್ದಳಪಾಂಡ್ಯ ಅರಸನು ಕಲಿದೇವರಿಗೆ ಕೋಗಳಿಯಲ್ಲಿ ೪೦೦ ಕಮ್ಮ ಭೂಮಿಯನ್ನು ದಾನ ನೀಡಿದನೆಂದು ಹೇಳಲಾಗಿದೆ[೨೩]. ಈ ಶಾಸನ ಉಜ್ಜಯಿನಿಗೆ ಸಂಬಂಧಿಸಿದ್ದಲ್ಲವೆಂದು ಕಾಣುತ್ತದೆ. ಅದೇ ದೇವಾಲಯದ ಬಲ ಕಂಬದ ಮೇಲಿರುವ ಶಾಸನ ತೃಟಿತ ಯಾದವ ಅರಸು ಮಹಾದೇವನು ಮಲ್ಲಿನಾಥ ದೇವರ ನಂದಾದೀವಿಗೆಗೆ ದಾನ ನೀಡಿದ ಉಲ್ಲೇಖವಿದೆ. ಶಾಸನದಲ್ಲಿ ಸರ್ವಾಧಿಕಾರಿ ತಿಪ್ಪರಸ, ಭಮ್ಮರಸ, ಚವುಡರ್ಸರ ಉಲ್ಲೇಖವಿದೆ[೨೪]. ಅಂದರೆ ಇದರಿಂದ ತಿಳಿದು ಬರುವ ಅಂಶವೆನೆಂದರೆ ಯಾದವರಾಜಕೀಯ ಮನೆತನಕ್ಕೆ ಒಳಪಟ್ಟಿದ್ದ ಉಜ್ಜಯಿನಿಯಲ್ಲಿ ಮರುಳಸಿದ್ಧ ದೇವರ ಹೆಸರಿಗೆ ಬದಲಾಗಿ ಮಲ್ಲಿನಾಥ ದೇವರು ಎಂದು ಪ್ರಸ್ತಾಪವಾಗಿರುವುದು ತಿಳಿದು ಬರುತ್ತದೆ. ಅದೇ ದೇವಾಲಯದಲ್ಲಿರುವ ಗಂಟೆಯ ಮೇಲಿರುವ ಶಾಸನ. ಈ ಶಾಸನದಲ್ಲಿ ಬಾಗಳಿಯ ಇಮ್ಮಡಿ ಬಸವಂತರಾಯರ ಮಗ ಮುಮ್ಮಡಿ ಬಸವಂತರಾಯರ ಮಗ ಮುಮ್ಮಡಿ ಈಶ್ವರಪ್ಪ ನಾಯಕನು ಉಜ್ಜಯಿನಿ ಸಿದ್ದೇಶ್ವರ ದೇವರಿಗೆ ಗಂಟೆಯನ್ನು ಮಾಡಿಸಿ ಸಮರ್ಪಿಸಿದರೆಂದು ಹೇಳಲಾಗಿದೆ. ಅದರ ಕಾಲ ಸು.ಕ್ರಿ ಶ ೧೮೧೨ ಆಗಿದೆ[೨೫]. ಅದೇ ಗ್ರಾಮದ ಸಿದ್ಧೆಲಿಂಗೇಶ್ವರ ದೇವಾಲಯದ ಗರ್ಭಗೃಹದ ಮುಂಭಾಗದ ಸಭಾಂಗಣದಲ್ಲಿರುವ ಶಾಸನದ ಸಾರಾಂಶವೆಂದರೆ ಯಾದವ ವೀರ ಮಹಾದೇವ ರಾಯನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದೆ. ಈ ಶಾಸನವು ಉಜ್ಜಯನಿಯ ಮಲ್ಲಿಕಾರ್ಜುನ ದೇವರಿಗೆ ಸುಂಕವನ್ನು ಮಾನ್ಯ ವಾಗಿ ಬಿಟ್ಟಿರುವ ವಿಷಯ ತಿಳಿದುಬರುತ್ತದೆ[೨೬]. ಮರುಳಸಿದ್ಧರ ಉಲ್ಲೇಖ ಕ್ರಿ. ಶ ೧೧೯೩ ರ ಅವ್ವೆಯರ ಹಳ್ಳಿಯ ಶಾಸನವೊಂದರಲ್ಲಿ ಮರುಳಸಿದ್ಧರ ಉಲ್ಲೇಖವಿದೆ. ಇದು ರೇವಣಸಿದ್ಧರ ಶಿಷ್ಯ ಮರುಳಸಿದ್ಧರ ಪವಾಡ ಎಂಬ ಶಬ್ದ ಎಂಬ ಉಲ್ಲೇಖವನ್ನು ಕಾಣಬಹುದು.[೨೭] ಲಕ್ಷ್ಮೀಶ್ವರದ ಶಾಸನ ಕ್ರಿ.ಶ. ೧೫೧೩ರಲ್ಲಿ ದೊರೆತ್ತಿದ್ದು ಇದು ದಾರುಕರ ಕಥೆ, ರೇವಣಸಿದ್ಧರ ಅವತಾರ ಹಾಗೂ ಶ್ರೀ ಮರುಳಸಿದ್ಧರ ಲಿಂಗಾವತಾರ ಮುಂತಾದ ವಿಷಯಗಳನ್ನು ಉಲ್ಲೇಖಿಸುತ್ತದೆ[೨೮].

ಕುರುವತ್ತಿಯ ಶಾಸನದಲ್ಲಿ ಉಜ್ಜಯಿನಿ ಪುರವರಾಧೀಶ್ವರರೆಂಬ ಪ್ರಶಸ್ತಿ ಇದ್ದು ಅದು ಉತ್ತರ ಭಾರತದಲ್ಲಿ ಆಳುತ್ತಿದ್ದ ಗುಪ್ತ ಮನೆತನಕ್ಕೆ ಸೇರಿದ ಗುತ್ತವೊಳಲಿನ ಗುತ್ತರದ್ದಾಗಿದೆ. ಕ್ರಿ.ಶ ೧೩೧೫ರ

ಮಂಡ್ಯ ಜಿಲ್ಲೆಯ ಮರಡಿಪುರದ ಶಾಸನದಲ್ಲಿ ದಾರುಕ ಮುಂತಾದವರ ಹೆಸರುಗಳನ್ನು ಉಲ್ಲೇಖಿಸುತ್ತದೆ[೨೯]. ಆನಗೋಡು (ದಾವಣಗೆರೆ ತಾಲ್ಲೂಕು) ಹಳ್ಳಿಯಲ್ಲಿ ದೊರೆತಿರುವ ಶಾಸನ ಕಾಲ ೧೮ ನೇ ಶತಮಾನದ ಅಂತ್ಯ ಅಥವಾ ೧೯ ನೇ ಶತಮಾನ ಆದಿ ಆ ತರಳವಾಳಚರಮೂರ್ತಿ ಸಿದ್ಧಪ್ಪ ದೇವರ ಮಠ ಎಂದಿದೆ[೩೦]. ಇಲ್ಲಿ ಮರುಳಸಿದ್ಧರು ಪವಾಡ ಮೆರೆದ ಸ್ಥಳವಾಗಿದೆ. ಉಜ್ಜಪ್ಪವಡೇರಹಳ್ಳಿಯ (ಜಗಳೂರು ತಾಲ್ಲೂಕು) ಗ್ರಾಮದ ನಿವೇಶನದಲ್ಲಿ ನೆಟ್ಟಕಲ್ಲು ಕಾಲ ಕ್ರಿ ಶ ೧೬೫೮ ಉಜ್ಜಯಿನಿಯ ತೆಲಗುಬಾಳ ಉಜ್ಜಪ್ಪ ದೇವನ ಮೊಮ್ಮಗ ಸಿದ್ಧಪ್ಪ ಭಾವಿ ತೆಗೆಸಲು ಅರ್ಧಮಾನ್ಯ ಕೊಟ್ಟಿದ್ದು[೩೧] ಎಂದಿದೆ. ಇದರಿಂದ ಮರುಳಸಿದ್ಧರ ಉತ್ತಾರಾಧಿಕಾರಿ ತೆಲಗು ಬಾಳು ಸಿದ್ದೇಶ್ವರರ ಜನ್ಮಸ್ಥಳಕ್ಕೆ ಸಂಬಂಧಿಸಿದ ವಿವರ ದೊರೆಯುತ್ತದೆ.

ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕಿನಲ್ಲಿರುವ ಮುಚ್ಚನೂರು ಗ್ರಾಮದ ಮರುಳಸಿದ್ಧೇಶ್ವರ ದೇವಾಲಯದ ಗರ್ಭ ಗೃಹದಲ್ಲಿ ಒಂದು ಸ್ತಂಭ ಶಾಸನ ಶೋಧಿಸಲಾಗಿದೆ.(ಇದು ಅಪ್ರಕಟಿತ ಶಾಸನ) ಅದು ದಾನ ಕೊಟ್ಟ ಬಗ್ಗೆ ವಿವರವನ್ನು ನೀಡುತ್ತದೆ. ಪ್ರಸ್ತುತ ಶಾಸನವು ಲಿಪಿ ಲಕ್ಷಣದಿಂದ ಕ್ರಿ.ಶ. ಸು ೧೦ ನೇ ಶತಮಾನದ ಪೂರ್ವಾರ್ಧಕಾಲವೆಂದು ಹೇಳಬಹುದು. ಇದು ಆ ಕಾಲದ ಕರ್ನಾಟಕದ ಹಾಗೂ ಪ್ರಾದೇಶಿಕ ಇತಿಹಾಸಕ್ಕೆ ಸಂಬಂಧಿಸಿದಂತ ಕೆಲವು ಹೊಸ ಸಂಗತಿಗಳನ್ನು ಹೇಳುತ್ತದೆ. ಆದರೆ ತರುವಾಯ ಸು ೫ ಶತಮಾನಗಳ ನಂತರ ಮಲ್ಲಿಕಾರ್ಜುನ ದೇವರು ಎಂದು ಅದರ ತರುವಾಯದ ಕಾಲದಲ್ಲಿ ಮರುಳಸಿದ್ದೇಶ್ವರ ಎಂದು ಕರೆಯಲ್ಪಟ್ಟಿರುವಂತೆ ಕಾಣುತ್ತದೆ[೩೨]. ಇಲ್ಲಿಯು ಮರುಳಸಿದ್ಧರ ಪವಾಡ ಮೆರೆದ ಸ್ಥಳವಾಗಿದೆ. ಇಲ್ಲಿ ಮರುಳಸಿದ್ಧರ ಸ್ಮಾರಕವಿದೆ. ಶ್ರೀಪೀಠದ ಜಗದ್ಗುರುಗಳ ಪಟ್ಟವಲ್ಲರಿ ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಗುರುಪರಂಪರೆ ಅಥವಾ ಪಟ್ಟವಲ್ಲರಿ ಎಂಬ ಹಸ್ತಪ್ರತಿ ಉಲ್ಲೇಖವಿದ್ದು, ಅದು ಉಜ್ಜಯಿನಿಯ ಪೀಠದ ಪಟ್ಟವಲ್ಲವರಿಯಂತೆ ಉಜ್ಜಯಿನಿ ಸದ್ಧರ್ಮ ಪೀಠದಲ್ಲಿ ಇಂದಿನವರೂ ಸೇರಿ ಒಟ್ಟು ೧೧೧ ಜಗದ್ಗುರುಗಳ ಪಟ್ಟಿಯನ್ನು ಇದು ಅನುಮೋದಿಸುತ್ತದೆ[೩೩]. ಅದೇ ರೀತಿ ಹೆಚ್.ದೇವೀರಪ್ಪ ಸಂಪಾದಿಸಿರುವ ತರಳಬಾಳು ಪಟ್ಟವಲ್ಲರಿ ಇದು ಮರುಳಸಿದ್ಧರು ತೆಲಗುಬಾಳಿನ ಸಿದ್ಧೇಶ್ವರರನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದ ಸಂಗತಿಯನ್ನು ಕುರಿತು ಹೇಳುತ್ತದೆ[೩೪]. ಅಲ್ಲದೆ ತೆಲಗುಬಾಳು ಸಿದ್ಧೇಶ್ವರರ ನಂತರ ಪೀಠಪಂಪರೆ ಮುಂದುವರೆದ ವಿವರವು ಲಭ್ಯವಾಗುತ್ತದೆ.

ಮರುಳಸಿದ್ಧರು ಸಂಚರಿಸಿದ ಕರ್ನಾಟಕದ ಬಹುಭಾಗದಲ್ಲಿ ಐತಿಹಾಸಿಕ ಕುರುಹುಗಳು ಕರ್ನಾಟಕ ರಾಜ ಮನೆತನಗಳ ಆಳ್ವಿಕೆಯ ಪ್ರಭಾವಕ್ಕೆ ಒಳಪಟ್ಟಿರುವವು. ಜೆ.ಎಫ.ಫ್ಲೀಟ್. ಬಿ. ಎಲ್. ರೈಸ್, ಆರ್.ನರಸಿಂಹಾಚಾರ್ಯ, ಎಂ.ಹೆಚ್.ಕೃಷ್ಣ, ಆರ್.ಎಸ್.ಪಂಚಮುಖಿ, ಪಿ.ಬಿ.ದೇಸಾಯಿ,

ಕೆ.ವಿ. ರಮೇಶ್, ಎಸ್.ಎಚ್. ರಿತ್ತಿ, ಬಿ.ಆರ್. ಗೋಪಾಲ, ಸೀತಾರಾಮ ಜಾಗೀರದಾರ, ಎಂ. ಎಂ. ಕಲಬುರ್ಗಿ ಮೊದಲಾದವರು ಈ ಕ್ಷೇತ್ರದಲ್ಲಿ ಸತತವಾಗಿ ಶಾಸನಗಳ ಶೋಧನೆ, ಪರಿಶೋಧನೆ, ಅಧ್ಯಯನವನ್ನು ಮಾಡಿ ಶಾಸನ ಅಧ್ಯಯನವು ಒಂದು ಗಟ್ಟಿನೆಲೆಯಲ್ಲಿ ನಿಲ್ಲುವ ಹಾಗೆ ಮಾಡಿದ್ದಾರೆ. ಇಷ್ಟಾದರೂ ಇಂದಿಗೂ ಹೊಸ ದೃಷ್ಟಿ ಕೋನದಲ್ಲಿ ಪುನಃ ಪುನಃ ವಿಮರ್ಶಿಸಲಾಗುತ್ತಿದೆ. ಇವೆಲ್ಲವೂ ಶಾಸನ ಅಧ್ಯಯನದಲ್ಲಿ ಸದಾ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಇರುವುದನ್ನು ಸೂಚಿಸುತ್ತವೆ. ಈ ವರೆಗಿನ ಶಾಸನಗಳನ್ನು ಗಮನಿಸಿದಾಗ ಕಂಡುಕೊಳ್ಳುವ ಅಂಶವೆನೆಂದರೆ, ಇದುವರೆಗೆ ದೊರೆತ ಶಾಸನಗಳು ಮರುಳಸಿದ್ಧರ ಹೆಸರನ್ನು ಎಲ್ಲೂ ಪ್ರಸ್ತಾಪಿಸಿಲ್ಲ. ಆದರೆ ಅವ್ವೆಯರಹಳ್ಳಿ ಮತ್ತು ಸಿರಿವಾಳ ಶಾಸನಗಳಲ್ಲಿ ಮಾತ್ರ ರೇವಣ ಮತ್ತು ಮರುಳಸಿದ್ಧ ಪಂಚಚಾರ್ಯರೆಂದು ಮಾತ್ರ ಉಲ್ಲೇಖಿಸಿದೆ. ಉಳಿದಂತೆ ಬೇರೆ ಎಲ್ಲೊ ಈ ದಲಿತ ಶಿವಶರಣ ಮರುಳಸಿದ್ಧರ ಸ್ವತಂತ್ರ ಜೀವನ ಚರಿತ್ರೆಗೆ ಸಂಬಂಧಿಸಿದ ಯಾವ ಶಾಸನಗಳು ಉಲ್ಲೇಖಿಸುವುದಿಲ್ಲ. ಈ ಎಲ್ಲಾ ಶಾಸನಗಳು ಮರುಳಸಿದ್ಧರ ಪೂರ್ವಕಾಲದಲ್ಲಿ ರಚಿತವಾಗಿರುವುದು, ಸಮಕಾಲೀನವಾದವು ಮತ್ತು ನಂತರದ ಕಾಲದಲ್ಲಿ ರಚಿಸಲ್ಪಟ್ಟವಾಗಿರುವವು, ಈ ಎಲ್ಲಾ ಶಾಸನಗಳು ಪ್ರಾದೇಶಿಕ ರಾಜ್ಯ ಆಳ್ವಿಕೆಗೆ ಒಳಪಟ್ಟ ಅರಸರು ದೇವಾಲಯಕ್ಕೆ ಉಂಬಳಿಕೊಟ್ಟಿರುವ ವಿವರಗಳನ್ನು ಮಾತ್ರ ತಿಳಿಸುತ್ತವೆ. ಹೀಗಾಗಿ ಮರುಳಸಿದ್ಧರ ಬಗ್ಗೆ ನಿಖರವಾದ ಚರಿತ್ರೆಯನ್ನು ತಿಳಿಯಲು ಗುಪ್ತ ಸ್ಥಿತಿಯಲ್ಲಿರುವ ಚಾರಿತ್ರಿಕ ದಾಖಲೆಗಳು ಅಲ್ಪಸ್ವಲ್ಪ ಮಾಹಿತಿಯನ್ನು ಒದಗಿಸುತ್ತವೆ.

೧.೧.೩. ಭೌಗೋಳಿಕ ವ್ಯಾಪ್ತಿ ಮತ್ತು ಸ್ಮಾರಕಗಳ ಮಹತ್ವ

ಆಧುನಿಕ ಯುಗದ ಕರ್ನಾಟಕದ ಭೌಗೋಳಿಕ ವ್ಯಾಪ್ತಿಯನ್ನು ಅವಲೋಕಿಸಿದಲ್ಲಿ ಪ್ರಸ್ತುತ ಅಧ್ಯಯನದ ಪ್ರಾದೇಶಿಕ ವ್ಯಾಪ್ತಿಯು ಭಿನ್ನವಾಗಿ ಗುರುತಿಸಲ್ಪಡುತ್ತದೆ. ಈ ಅಧ್ಯಯನವನ್ನು ಹೇಗೆ ಅಳವಡಿಸಿಕೊಂಡರು ಅಧ್ಯಯನದಲ್ಲಿ ಗುರುತಿಸಲ್ಪಡುವ ನೆಲೆಗಳು ಮತ್ತು ಸ್ಮಾರಕಗಳು ಇಂದಿನ ಭೌಗೋಳಿಕ ವ್ಯಾಪ್ತಿಯನ್ನು ಮೀರಿ ಹೊರಗೆ ಹಬ್ಬಿರುವುದರಿಂದ ಪ್ರಸ್ತುತ ಕರ್ನಾಟಕದ ಪ್ರಾಚೀನತೆ ಹಾಗೂ ಅದರ ಭೌಗೋಳಿಕ ವ್ಯಾಪ್ತಿಯ ವಿಸ್ತಾರವನ್ನು ಹೇಗೆ ಗುರುತಿಸುವುದು ಎಂಬುದು ಒಂದು ಪ್ರಶ್ನೆಯಾಗಿದೆ. ಈಗಿನ ಕರ್ನಾಟಕದ ರಾಜಕೀಯ ಭೌಗೋಳಿಕತೆಗೂ ಈ ಹತ್ತು ಶತಮಾನಗಳ ಹಿಂದೆ ಇಡೀ ಸೀಮೆಯ ತುಂಬ ಅಲೆದಾಡಿ ಕೊಂಡಿದ್ದ ಮರುಳಸಿದ್ಧರ ಕಾರ್ಯ ಚಟುವಟಿಕೆಯ ಕ್ಷೇತ್ರ ವ್ಯಾಪ್ತಿಯ ಪ್ರದೇಶ ಪರಿಕಲ್ಪನೆಗೂ, ಬಹು ಅಂತರದ ಸಂಭಂದವಿದೆ. ರಾಜಕೀಯ ಗಡಿಯನ್ನು ಮೀರಿ ಹರಡಿಕೊಂಡಿರುವ ಈ ಚಾರಿತ್ರಿಕ ಅಧ್ಯಯನದ ಸಂಗತಿಗಳನ್ನು ಈಗಿನ ರಾಜ್ಯ ಜಿಲ್ಲೆಗಳ ಪರಿಕಲ್ಪನೆಯ ಒಳಗೆ ಹುದುಗಿಸಿ ನೋಡುವಾಗ ಸಮಸ್ಯೆಯಾಗುತ್ತದೆ. ಹೇಗೆ ನೋಡಿದರು 'ಕರ್ನಾಟಕ'ದಲ್ಲಿಯ

ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳ: ಚಾರಿತ್ರಿಕತೆಯ ಬೇರುಗಳು ಮಧ್ಯಪ್ರದೇಶದ ಉಜ್ಜಯಿನಿಯಿಂದ ಮಹಾರಾಷ್ಟ್ರದ ಇಂದಿನ ಕೊಲ್ಲಾಪುರ, ರೇಣಾವಿ, ಸಿದ್ಧನಗಿರಿ, ಆಂಧ್ರಪ್ರದೇಶದ ಕೋಲ್ಲಿಪಾಕಿ, ಪಾಲ್ಕುರಿಕೆ ಮೊದಲಾದ ಅನ್ಯರಾಜ್ಯಗಳಿಗೆ ಚಾಚುತ್ತದೆ. ಹೀಗಾಗಿ ಮರುಳುಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು: ಬಹು ಮಹತ್ವವೆನಿಸಿವೆ. ಈ ಚರ್ಚೆ ಈಗಿನ ಕರ್ನಾಟಕದ ರಾಜಕೀಯ ಭೌಗೋಳಿಕ ಗಡಿಗೆ ಸೀಮಿತವಾಗಿರಬೇಕೆ ಇಲ್ಲವೇ ಮಧ್ಯಪ್ರದೇಶದ ಉಜ್ಜಯಿನಿಯಿಂದ ಇಂದಿನ ಕರ್ನಾಟಕ ರಾಜ್ಯವನ್ನು ಅಧ್ಯಯನಕ್ಕೆ ಸೀಮಿತಗೊಳಿಸಬೇಕೊ ಎಂಬುದು ಒಂದು ಮುಖ್ಯ ಪ್ರಶ್ನೆಯಾಗಿದೆ. ಆದರೆ ಅಧ್ಯಯನದ ದೃಷ್ಟಿಯಿಂದ ಮರುಳುಸಿದ್ಧರು ಜೀವಿಸಿದ್ದ ಅಂದಿನ ಸಮಕಾಲೀನ ರಾಜ್ಯದ ಭೌಗೋಳಿಕ ವಿಸ್ತಾರ ಅವಲೋಕಿಸುವುದಕ್ಕಿಂತಲೂ ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಇಂದಿನ ಕರ್ನಾಟಕದ ಭೌಗೋಳಿಕ ವ್ಯಾಪ್ತಿಯಲ್ಲಿಯೇ ಹರಡಿರುವ ಅವರ ಸ್ಮಾರಕಗಳ ಮಹತ್ವವನ್ನು ತಿಳಿಯಲಾಗುವುದು.

ನರ್ಮದಾ ನದಿಯ ದಕ್ಷಿಣಕ್ಕಿರುವ ಕ್ಷೇತ್ರ ಭಾರತದ ದ್ವೀಪ ಕಲ್ಪದ ಪಶ್ಚಿಮ ಭಾಗದಲ್ಲಿರುವ ಕರ್ನಾಟಕವು ಉತ್ತಮ ಭೌಗೋಳಿಕ ಸ್ಥಾನದಲ್ಲಿದೆ. ವಾಯವ್ಯದ ಗಡಿಯಲ್ಲಿ ಗೋವೆ, ಉತ್ತರದ ಗಡಿಯಲ್ಲಿ ಮಹಾರಾಷ್ಟ್ರ, ಪೂರ್ವಗಡಿಯಲ್ಲಿ ಆಂಧ್ರಪ್ರದೇಶ, ದಕ್ಷಿಣ ಬದಿಯಲ್ಲಿ ಕೇರಳ ಹಾಗೂ ತಮಿಳುನಾಡು ಪ್ರದೇಶಗಳಿವೆ. ಪಶ್ಚಿಮಕ್ಕೆ ಅರಬ್ಬೀ ಸಮುದ್ರದ ಗಡಿಯನ್ನಾಗಿ ಹೊಂದಿದೆ.

ಭೂ ಸ್ವರೂಪ, ಮಳೆ ಪ್ರಮಾಣ ಹಾಗೂ ಸಸ್ಯವರ್ಗ ಇವುಗಳನ್ನಾಧರಿಸಿ ಕರ್ನಾಟಕವನ್ನು ರೇಖಾಂಶಾತ್ಮಕವಾಗಿ ಈ ನಾಲ್ಕು ಪ್ರಾಕೃತಿಕ ಕ್ಷೇತ್ರ ನೆಲೆವರ್ಗಗಳನ್ನಾಗಿ ವಿಂಗಡಿಸಬಹುದು. ಕರಾವಳಿ, ಕರಾವಳಿಯು ಉತ್ತರದಿಂದ ದಕ್ಷಿಣಕ್ಕೆ ೩೫೦ ಕಿ.ಮೀ. ಗಳುದ್ದ ಚಾಚಿ ಕೊಂಡಿದೆ ಹಾಗೂ ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳನ್ನು ಒಳಗೊಂಡಿದೆ[೩೫]. ಈ ಭಾಗದಲ್ಲಿ ಪಾಳ, ಸಿದ್ಧಪುರ, ಬೆಣ್ಣೂರ, ಅಂಬಳೆ ಎಂಬಲ್ಲಿ ಮರುಳಸಿದ್ಧರ ಸ್ಮಾರಕಗಳಿವೆ. ಈ ಭಾಗದಲ್ಲಿ ಅವರು ತಪಸ್ಸು ಮಾಡಿ ಧಾನಾಸಕ್ತರಾಗಿದ್ದರೆಂದೂ ಜನ ಹೇಳುತ್ತಾರೆ.

ಮಲೆನಾಡು ಪಶ್ಚಿಮದಲ್ಲಿನ ಸಹ್ಯಾದ್ರಿ ಶ್ರೇಣಿ ಹಾಗೂ ಪೂರ್ವಕ್ಕಿರುವ ತಪ್ಪಲು ಪ್ರದೇಶದ ನಡುವಿನ ಭೂ ಪ್ರದೇಶ. ಇದು ಸಹ್ಯಾದ್ರಿಯ ಪೂರ್ವದ ಅಂಚಿನುದ್ದಕ್ಕೂ ಸುಮಾರು ೭೫೦ ಕಿ.ಮೀ. ಉತ್ತರ-ದಕ್ಷಿಣವಾಗಿ ಹಬ್ಬಿದ್ದು, ಬೆಳಗಾವಿ, ಧಾರವಾಡ, ಉತ್ತರಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ದಕ್ಷಿಣ ಕನ್ನಡ, ಕೊಡಗು ಹಾಗೂ ಮೈಸೂರು ಜಿಲ್ಲೆಗಳನೊಳಗೊಂಡಿದೆ. ಗುಡ್ಡ, ಕಣಿವೆ, ಹಚ್ಚ ಹಸಿರಾದ ಅರಣ್ಯಗಳಿಂದಾವರಿಸಿದ ಕಾಡುಗಳು ಈ ಪ್ರದೇಶ[೩೬] ಈ ಭಾಗದಲ್ಲಿ ಹರಡಿರುವ ಮರುಳಸಿದ್ಧರ ಸ್ಮಾರಕಗಳಾದ ಮುಳ್ಳತ್ತಗಿರಿ ಇಲ್ಲಿ ರಸಸಿದ್ಧರೊಡಗೂಡಿ ಬಂದಿದ್ದರು. ಪುಷ್ಪಗಿರಿ

(ಬೇಲೂರು ತಾ) ಮಲ್ಲಿಕಾರ್ಜುನ ದೇವಾಲಯವಿದೆ. ಯಲಂಕದಲ್ಲಿ ತರಳಬಾಳು ಶಾಖಾ ಮಠವಿದೆ, ಕಲ್ಲುಮರಡಿ (ಸಕ್ಕರೆ ಪಟ್ಟಣ) ಭಾಗದ ಕಡೆ ಮರುಳಸಿದ್ಧರು ಬಂದಿದ್ದರೆಂಬುದರ ಕುರುಹುವಾಗಿ ಅಲ್ಲಿ ಒಂದು ಸ್ಮಾರಕವಿದೆ. ಹಳೆಬೀಡು (ದೋರಸಮುದ್ರ)ನಲ್ಲಿ ಪವಾಡ ನಡೆಸಿದ ಬಗ್ಗೆ ಸಾಹಿತ್ಯಿಕ ಪುರಾವೆ ಇದೆ ಆದರೆ ಇಲ್ಲಿ ಯಾವುದೇ ಕುರುಹು ಇಲ್ಲ. ಬಪ್ಪುಣಸೆಯಲ್ಲಿ ಜಟ್ಟಿಗರು, ಮರುಳಸಿದ್ಧರ ಸ್ವಾಮಿಯವರ ಮಠವಿದೆ. ಇದರ ಆವರಣದಲ್ಲಿ ಜಟ್ಟಿಗನ ದೇವಾಲಯವಿದೆ. ಈ ಭಾಗದಲ್ಲಿ ವೀರಶೈವರೇ ಹೆಚ್ಚಿನ ಭಕ್ತಿಯುಳ್ಳವರಾಗಿದ್ದಾರೆ. ಕುಡ್ಲೂರು (ತರೀಕೆರೆ ತಾ||) ಮರುಳಸಿದ್ಧೇಶ್ವರರು ಇಲ್ಲಿಗೆ ಬಂದಾಗ ಕುಲ ಹದಿನೆಂಟು ಜಾತಿ ಜನರನ್ನು ಸೇರಿಸಿ ಸಹ ಪಂಕ್ತಿ ಭೋಜನ ನಡೆಸಿದ್ದರ ಸ್ಮಾರಕವಾಗಿ ಇಲ್ಲಿ ಸಿದ್ಧೇಶ್ವರ ಸ್ವಾಮಿ ದೇವ ದೇವಸ್ಥಾನವು ಇದೆ.

ಅರಸೀಕೆರೆ ಹಾರ್ನಹಳ್ಳಿ ರಸ್ತೆಯಿಂದ ಸುಮಾರು ಗ ಕಿ.ಮೀ. ದೂರದಲ್ಲಿ ಯಾದಪುರ ಜೇನಕಲ್ಲು ಸಿದ್ಧೇಶ್ವರ ದೇವಾಲಯ ಗುಪ್ತಗವಿಗಳು ಕಂಡುಬರುತ್ತವೆ. ಅಂಚೆಕೊಪ್ಪಲಿನಲ್ಲಿ ಇಲ್ಲಿ ಮರುಳಸಿದ್ಧೇಶ್ವರ ದೇವಾಲಯವಿದೆ. ಮಾಲೆಕಲ್, ಉಂಡಿಗನಾಳು, ಕುಪ್ಪೂರು ಗದ್ದಿಗೆ, ಬೆಂಡೇಕೆರೆ ಈ ಭಾಗದಲ್ಲಿ ಮರುಳಸಿದ್ಧೇಶ್ವರರ ಸ್ಮಾರಕಗಳಿವೆ. ಅರಳಿ ಕಟ್ಟೆ (ಅರಸಿಕೆರೆ ತಾ||) ಇಲ್ಲಿ ಸಿರಿಗೆರೆಯ ತರಳಬಾಳು ಶಾಖಾ ಮಠವಿದೆ.

ಮಲೆನಾಡಿನಲ್ಲಿ ಸಿದ್ಧೇಶ್ವರ ದೇವಾಲಯ, ಸಿದ್ಧಪ್ಪನ ಗುಡಿ, ಉಜ್ಜನಿ ಸಿದ್ಧೇಶ್ವರನ ಗುಡಿ ಎಂದು ಕರೆಯುತ್ತಿರುವ ದೇವಸ್ಥಾನಗಳು ಅಸಂಖ್ಯಾತವಾಗಿ ಆಯನೂರು (ಕುಂಶಿ ತಾ||) ಶಿವಮೊಗ್ಗೆಯ ಪ್ರಾಂತದ ಬಿದಿರಹಳ್ಳಿ, ಸೂರಗೊಂಡನಕೊಪ್ಪ, ತುಗ್ಗಹಳ್ಳಿ, ಮಾದನಬಾವಿ, ನೆಳ್ಳಿನಕೊಪ್ಪ, ಅಬ್ಬಲಗೆರೆ, ಬೆನಕನಹಳ್ಳಿ, ಲಿಂಗದಹಳ್ಳಿ ಅಗರದಹಳ್ಳಿ ಕೆಂಚಿಕೊಪ್ಪ ಸೂಳೆಕೆರೆ (ಚನ್ನಗಿರಿ ತಾ||) ಇನಾಂಬೇಗೂರು (ಶಿಕಾರಿಪುರ ತಾ||) ಹಾವೇರಿ ಜಿಲ್ಲೆಯ ಮೂಡೂರು, ನಾಗವಂದ ಮುಂತಾದ ಸ್ಥಳಗಳಲ್ಲಿ ಸಿದ್ಧೇಶ್ವರ ದೇವಾಲಯಗಳಿವೆ. ಈಗಲೂ ಆಯಾ ಸ್ಥಳದ ಜನರು ತಮ್ಮ ಗ್ರಾಮದಲ್ಲಿ ಮರುಳಸಿದ್ಧನು ತೋರಿದ ಪವಾಡ ಕಥೆಗಳನ್ನು ಹೇಳುತ್ತಿದ್ದಾರೆ. ಸಾಧಾರಣ 'ವೈದ್ಯ'ದಿಂದ ಗುಣವಾಗದ ಕಾಯಿಲೆಗಳನ್ನು ಗುಣಪಡಿಸುವುದು, ಸಂತಾನವಿಲ್ಲದವರಿಗೆ ವಿಭೂತಿ ಪತ್ರೆಗಳನ್ನಿತ್ತು ಹರಸುವುದು, ದನಕರುಗಳ ಕಾಯಿಲೆಗಳನ್ನು ಗುಣಪಡಿಸುವುದು ಈ ಬಗೆಯ ಹಲವು ಪವಾಡಗಳನ್ನು ಮರುಳಸಿದ್ಧನು ತೋರಿದನೆಂದು ಪ್ರತೀತಿಯಿದೆ[೩೭].

ಮೈದಾನ ಪ್ರದೇಶ, ಮೈದಾನ ಪ್ರದೇಶವನ್ನು ಉತ್ತರ ಮೈದಾನ ಹಾಗೂ ದಕ್ಷಿಣ ಮೈದಾನ ಪ್ರದೇಶಗಳೆಂದು ಮತ್ತೆ ವಿಂಗಡಿಸಬಹುದು. ಉತ್ತರ ಬಯಲುಸೀಮೆ ಇದು ಭೌಗೋಳಿಕ ದೃಷ್ಟಿಯಿಂದ ಈ ಪ್ರದೇಶ ಹಳೆಯದಾಗಿದ್ದು, ವಿಶಾಲವಾಗಿ ಹರಡಿಕೊಂಡಿರುವ ತಪ್ಪಲು ಪ್ರದೇಶ, ಬೀದರ್,

ಗುಲಬರ್ಗಾ, ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳು ಹಾಗೂ ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಗಳ ಕೆಲವು ಭಾಗಗಳು ಈ ಪ್ರದೇಶದಲ್ಲಿವೆ[೩೮]. ಈ ಭಾಗದ ಪ್ರಮುಖ ಸ್ಮಾರಕಗಳಾದ ತಿಗರಿಹೊಳೆ, ಬಿಸರಹಳ್ಳಿ (ಕೊಪ್ಪಳ ಜಿಲ್ಲೆ) ಹಿರೇಸಿಂದೋಗಿ (ಕೊಪ್ಪಳ ತಾ॥) ಇಲ್ಲಿ ಹರಿಜನರ ಕೇರಿಯಲ್ಲಿ ಮರುಳಸಿದ್ಧರ ದೇವಾಲಯವಿದೆ. ದೇವಸ್ಥಾನದ ಪೌಳಿಯಲ್ಲಿ ಇರುವುದೆಲ್ಲ ಹರಿಜನರ ಮನೆಗಳೇ ದೇವಸ್ಥಾನದ ಪೂಜಾಹಕ್ಕು ಹರಿಜನರದೇ ಯಾವುದೇ ಲಿಂಗ ಅಥವಾ ಮೂರ್ತಿ ಇಲ್ಲ ಒಂದು ಗದ್ದಿಗೆ ಇದೆ. ಮರುಳಸಿದ್ಧರ ಗದ್ದಿಗೆ ಎಂದು ಹೇಳುತ್ತಾರೆ. ಕೊಪ್ಪಳದಲ್ಲಿಯೂ ಗವಿ ಸಿದ್ಧೇಶ್ವರ ಪ್ರತಿಷ್ಠಾಪನೆಯಾಗಿದೆ. ಅಳವಂಡಿ ಸಂಸ್ಥಾನದ ಒಂದು ಮರುಳಸಿದ್ಧರ ಸ್ಮಾರಕವಾಗಿ ಮಠವಿದೆ. ಉತ್ತರ ಕರ್ನಾಟಕದ ಬಯಲು ಸೀಮೆಯ ಇತರ ಭಾಗಗಳಲ್ಲಿ ಮರುಳಸಿದ್ಧರ ಸ್ಮಾರಕಗಳು ಹರಡಿವೆ. ಸಿದ್ಧರಕೊಳ್ಳ (ಹುನಗುಂದ ತಾ॥) ಸೀತಿಮನಿ (ಆಲಮಟ್ಟಿ ಬಳಿ) ಮುದನೂರು, ಕೆಂಭಾವಿ, ಹೆಗ್ಗನದೊಡ್ಡಿ ಸಗರನಾಡು ಸಿದ್ಧಲಿಂಗೇಶ್ವರ ದೇವಾಲಯವಿದೆ, ಬೀದರನಿಂದ ಬಾಲ್ಕಿ ಕಡೆಗೆ ೨೦ ಮೈಲಿ ದೂರದಲ್ಲಿ ಸಿದ್ಧೇಶ್ವರ ಎಂಬ ಊರು ಇದೆ. ಅಲ್ಲಿ ಸಿದ್ಧಲಿಂಗೇಶ್ವರ ದೇವಾಲಯವಿದೆ.

ದಕ್ಷಿಣದ ಬಯಲು ಸೀಮೆ ತುಂಗಭದ್ರಾ ನದಿಯ ಕರ್ನಾಟಕದ ಬಯಲು ಪ್ರದೇಶವನ್ನು ಇಬ್ಭಾಗ ಮಾಡಿದೆ. ದಕ್ಷಿಣ ಬಯಲು ಪ್ರದೇಶ ಹೆಚ್ಚು ಎತ್ತರವಾಗಿದೆ. ತುಮಕೂರು, ಮಂಡ್ಯ, ಬೆಂಗಳೂರು, ಕೋಲಾರ ಮುಂತಾದ ಜಿಲ್ಲೆಗಳನ್ನಲ್ಲದೇ, ಶಿವಮೊಗ್ಗ, ಚಿಕ್ಕಮಂಗಳೂರು, ಹಾಸನ ಹಾಗೂ ಮೈಸೂರು ಜಿಲ್ಲೆಗಳ[೩೯] ಕೆಲವು ಭಾಗಗಳನ್ನು ಈ ಪ್ರದೇಶದ ಭಾಗದಲ್ಲಿಯೂ ಮರುಳಸಿದ್ಧರ ಸ್ಮಾಕರಕಗಳು ಹರಡಿಕೊಂಡಿವೆ. ಗೋಡೆಕೆರೆ (ಚಿಕ್ಕನಾಯಕನಹಳ್ಳಿ ತಾ॥) ಗದ್ದಿಗೆರಾಮಿತಂದೆ, ಮರುಳಸಿದ್ಧರ ಸ್ಮಾರಕವಿದೆ. ದಬ್ಬೆಗಟ್ಟು, ಪಾಲ್ಕುರಿಕೆ (ತಿಪಟೂರು ತಾ॥) ಇಲ್ಲಿ ಸಿರಿಗೆರೆಯ ತರಳಬಾಳು ಶಾಖಾಮಠವಿದೆ. ಕುಪ್ಪೂರು ತಮ್ಮಡಿಹಳ್ಳಿ ವಡ್ಡಿನ ತಿಮ್ಮಲಾಪುರ ಶಿಶುವಾಳ ಇನ್ನೂ ಮೊದಲಾದವು ಈ ಭಾಗದಲ್ಲಿ ಮರುಳಸಿದ್ಧ ಹಾಗೂ ಆತನ ಶಿಷ್ಯ ಜಟ್ಟಿಗನ ಸ್ಮಾರಕಗಳಿವೆ.

ತುಂಗಭದ್ರಾ ನದಿಯ ದಕ್ಷಿಣ ಭಾಗದಲ್ಲಿಯೂ ಸಹ ಮರುಳಸಿದ್ಧರ ಮೂಲ ನೆಲೆಯಾದ ಉಜ್ಜನಿ ಇಂದಿನ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಇದೆ. ಇದು ಮರುಳಸಿದ್ಧರ ಜನ್ಮ ಭೂಮಿಯು ಹಾಗೂ ಐಕ್ಯವಾಗಿ ನೆಲೆಸಿರುವುದು ಇಲ್ಲಿಯೇ. ಹೀಗಾಗಿ ಐತಿಹಾಸಿಕ ಮಹತ್ವ ಪಡೆದಿರುವ ಈ ಮೂಲ ನೆಲೆ ಮರುಳಸಿದ್ಧರ ಕಾರ್ಯ ಕ್ಷೇತ್ರವಾಗಿದ್ದು ಅವರ ಮುಂದಿನ ಕಾರ್ಯ ಚಟುವಟಿಕೆಗಳಿಗೆ ಕೇಂದ್ರವಾಗಿ ಉಜ್ಜನಿ ಬಳ್ಳಾರಿ ಜಿಲ್ಲಾ ಪರಿಸರದಲ್ಲಿ ಒಂದು ಮಹತ್ವ ಪೂರ್ಣ ಕ್ಷೇತ್ರವಾಗಿದೆ.

ಇದು ಚಾರಿತ್ರಿಕ ಮತ್ತು ಧಾರ್ಮಿಕವಾಗಿ ಮಹತ್ವ ಪಡೆದ ಕ್ಷೇತ್ರ ಉಜ್ಜನಿ ವೀರಶೈವರ ಪಂಚಪೀಠಗಳಲ್ಲೊಂದು[೪೦]. ಮರುಳಸಿದ್ಧರು ಈ ಪರಿಸರದಲ್ಲಿ ಜನ್ಮ ಪಡೆದು ಐಕ್ಯವಾದರು. ಅವರು ಬೆಳೆದ ಈ ಪರಿಸರದಲ್ಲಿ ಅವರ ಸ್ಮಾರಕಗಳು ಕಂಡುಬರುತ್ತಿವೆ.

ಉಜ್ಜಿನಿ ಮರುಳಸಿದ್ಧರ ಮೂಲ ನೆಲೆಯಾಗಿರುವುದಲ್ಲದೆ ಈ ಭಾಗದಲ್ಲಿ ಮರುಳಸಿದ್ಧರ ಸ್ಮಾರಕಗಳು ಸಹ ಗೋಚರಿಸುತ್ತವೆ. ಮರುಳಸಿದ್ಧೇಶ್ವರ ದೇವಾಲಯವು ಈ ಭಾಗದ ಒಂದು ಸ್ಮಾರಕವು ಹೌದು. ಈ ದೇವಾಲಯವನ್ನು ಮರುಳಸಿದ್ಧರೇ ಜಕಣಾಚಾರ್ಯ ಎಂಬ ಶಿಲ್ಪಿಯ ಸಹಾಯದಿಂದ ನಿರ್ಮಿಸಿ ಅಲ್ಲಿಯೇ ಐಕ್ಯವಾದರು ಎಂಬ ಐತಿಹ್ಯವುಂಟು. ಮರುಳಸಿದ್ಧರು ಇದೇ ಪರಿಸರದಲ್ಲಿಯ ಕಗ್ಗಲ್ಲಪುರ ಎಂಬುದು ಅವರ ಜನ್ಮ ಸ್ಥಳವಾಗಿದೆ. ಇದು ಈಗ ಬೇಚಾರಕು ನಿವೇಶನವಾಗಿದ್ದು ಅಲ್ಲಿ ಈಗ ಮಠ, ಮನೆಗಳು, ತೇರುಬೀದಿ, ಅವಶೇಷಗಳು ಈಗಲೂ ಕಾಣುತ್ತವೆ. ಮರುಳಸಿದ್ಧನು ಐಕ್ಯ ಹೊಂದಿದ ಸ್ಥಳ 'ಕೇತನಹಳ್ಳಿಚರವು' ಎಂಬ ಹೆಸರಿನ ಸ್ಥಳವು ಈ ಊರಿನ ಪಕ್ಕದಲ್ಲಿದೆ. ಈ ಊರಿಗೆ ಮೊದಲು ಕೇತನಹಳ್ಳಿ ಎಂಬ ಹೆಸರಿತ್ತೆಂದೂ ಮರುಳಸಿದ್ಧನ ಅವತಾರವಾದ ಮೇಲೆ ಉಜ್ಜಿನಿ ಎಂಬ ಹೆಸರು ಬಂದಿತೆದೂ ಐತಿಹ್ಯವಿದೆ. ಉಜ್ಜನಿಯಲ್ಲಿರುವ ಇತರ ಸ್ಮಾರಕಗಳೆಂದರೆ 'ಜಟ್ಟಿಗೇಶ್ವರ ದೇವಸ್ಥಾನ' ಮರುಳಸಿದ್ಧರ ಪರಮ ಶಿಷ್ಯ ನಾದ ಜಟ್ಟಿಗನ ಸ್ಮಾರಕವಾಗಿ ಚಪ್ಪಟೆಯಾದ ಶಿಲೆಗಳು ಸಾಲಾಗಿ ನೆಡಲ್ಪಟ್ಟಿವೆ. ಜಟ್ಟಿಗೇಶ್ವರ ದೇವಾಲಯದ ಪೂಜೆಯನ್ನು ತಳವಾರರು ಮಾಡುತ್ತಾರೆ. ತಳವಾರ ಜಾತಿಗೆ ಸೇರಿದವನು ಜಟ್ಟಿಗ ಎಂಬುದಾಗಿ ತಿಳಿದುಬರುತ್ತದೆ. ಮರುಳಸಿದ್ಧನ ದೇವಸ್ಥಾನಕ್ಕೆ ಪೂಜೆಗಾಗಿ ಹೋಗುವ ಭಕ್ತರು ಮೊದಲು ಜಟ್ಟಿಗೇಶ್ವರನ ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ನಂತರ ಮರುಳಸಿದ್ಧನ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸುವ ವಾಡಿಕೆ ಇದೆ. ಮರುಳಸಿದ್ಧನ ಸ್ಮಾರಕಗಳು ಕಂಡು ಬರುವ ಭಾಗದಲ್ಲಿ ಈ ಜಟ್ಟಿನ ಸ್ಮಾರಕಗಳು ಸಹ ಕಂಡು ಬರುತ್ತವೆ. ಗದ್ದುಗೆಯ ರಾಮಿ ತಂದೆಯು ಮರುಳಸಿದ್ಧನಿಗೆ ಗದ್ದುಗೆಯನ್ನುಹಾಸುವ ಕಾಯಕವನ್ನು ಮಾಡುತ್ತಿದ್ದನೆಂದೂ, ಇವನ ಸ್ಮಾರಕವಾಗಿ ಈ ದೇವಸ್ಥಾನವು ನಿರ್ಮಿಸಲ್ಪಟ್ಟಿತೆಂದೂ ಐತಿಹ್ಯ. ಬ್ರಹ್ಮದೇವರ ಗುಡಿ, ಮರುಳಸಿದ್ಧನ ಶಿಷ್ಯನಾದ ಬ್ರಹ್ಮನಿಗೆ ಸಂಬಂಧ ಪಟ್ಟ ಸ್ಮಾರಕವಾಗಿದೆ. ತರಳಬಾಳು ಸಿದ್ಧ ದೇವಸ್ಥಾನ ಇದು ತೆಲಗು ಬಾಳಿನಿಂದ ಬಂದು ಮರುಳಸಿದ್ಧನ ಕಾರುಣ್ಯವನ್ನುಗಳಿಸಿ ಅವರ ಉತ್ತರಾಧಿಕಾರಿಯಾಗಿ ಅವರಿಂದ 'ತರಳ-ಬಾಳು' ಎಂಬ ಆಶೀರ್ವಾದವನ್ನು ಹೊಂದಿ, ತರಳಬಾಳು ವಂಶದ ಮೂಲ ಪುರುಷನಾದ ಸಿದ್ಧನ ಸ್ಮಾರಕವಾಗಿ ಈ ದೇವಸ್ಥಾನವು ನಿರ್ಮಿಸಲ್ಪಟ್ಟಿತೆಂದೂ ಐತಿಹ್ಯ.

ಮಾದಿಗರ ಕೇರಿಯ ಮರುಳಸಿದ್ಧನ ದೇವಸ್ಥಾನ: ಈ ದೇವಸ್ಥಾನವು ಮಾದಿಗರ ಕೇರಿಯಲ್ಲಿದೆ. ಮಾದಿಗರು ಮರುಳಸಿದ್ಧನ ವಿಚಾರದಲ್ಲಿ ಹೆಚ್ಚಿನ ಭಕ್ತಿಯುಳ್ಳವರಾಗಿರುವುದೂ ಮತ್ತು ಮರುಳಸಿದ್ಧನ ಸಂಬಂಧವಾದ ಉತ್ಸವಾದಿ ಕಾರ್ಯಗಳಲ್ಲಿ ಹೆಚ್ಚಿನ ಹಕ್ಕುನ್ನುಳ್ಳವರಾಗಿರುವುದೂ ಗಮನಾರ್ಹವಾದ ಅಂಶಗಳಾಗಿವೆ. ಮರುಳಸಿದ್ಧ ಮಾದಿಗರಲ್ಲಿ ಜನನ ಪಡೆದರೂ, ಜಾತಿಯ ಶೃಂಖಲೆಯನ್ನು ಕಳಚಿ ತನ್ನ ತಪಃ ಪ್ರಭಾವದಿಂದ ಹೇಗೆ ಆಚಾರ್ಯ ಪದವಿಗೇರಿದ ಎನ್ನುವುದು ಈ ಮಾದಿಗರ ಕೇರಿಯಲ್ಲಿರುವ ಮರುಳಸಿದ್ಧ ದೇವಾಲಯ ಒಂದು ಮಹತ್ವ ಪೂರ್ಣವಾದ ಸ್ಮಾರಕವಾಗಿದೆ. ಇದರ ಸಮೀಪವೆ ಈ ಮರುಳಸಿದ್ಧರ ಪೀಠವಿದೆ.

ಮರುಳಸಿದ್ಧನು ಬಾಲಕನಾಗಿ ದನಗಳನ್ನು ಕಾಯುತ್ತಿದ್ದನಂತೆ. ಇದರ ಸ್ಮಾರಕವಾಗಿ ಇಂದಿನ ಉಜ್ಜಿನಿಗೆ ಸಮೀಪದ ಉತ್ತರ ದಿಕ್ಕಿನಲ್ಲಿ 'ತುರುಮಂದೆ' ಕಲ್ಲುಕಟ್ಟಡದ ಪೌಳಿ ಗೋಡೆ ಸ್ಮಾರಕ ಹಾಗೂ ಕರುವಿನಕಲ್ಲುಗುಡ್ಡ ಎಂದೆ ಹೆಸರಾಗಿರುವ ಈ ಗುಡ್ಡದ ಮೇಲೆ ಒಂದೇ ಅಂಕಣದ ದೇವಾಲಯವಿದೆ. ಈ ದೇವಾಲಯದಲ್ಲಿ ಪ್ರಾಣ ಪೀಠದ ಮೇಲೆ ಲಿಂಗವಿದೆ, ಇದೂ ಸಹ ಮರುಳಸಿದ್ಧರ ಸ್ಮಾರಕವಾಗಿದೆ. ಈ ಕರುಗಲ್ಲು ಗುಡ್ಡದ ಸಮೀಪದಲ್ಲಿಯೇ 'ಮೂಗಣ್ಣನ ದೇವಾಲಯವಿದೆ'. ಇಲ್ಲಿ ಮರುಳಸಿದ್ಧನು ದನಗಳನ್ನು ಕಾಯುತ್ತಿದ್ದಾಗ ಮೂಕನಂತೆ ಕುಳಿತು ಕೊಳ್ಳುತ್ತಿದ್ದುದರಿಂದ ಈ ದೇವಸ್ಥಾನಕ್ಕೆ ಈ ಹೆಸರು ಬಂದಿತೆದು ಐತಿಹ್ಯ[೪೧]. ಇದೇ ರೀತಿ ಉಜ್ಜನಿಗೆ ಹತ್ತಿರದಲ್ಲಿರುವ ಇತರ ಸ್ಮಾರಕಗಳೆಂದರೆ 'ತೂಲಹಳ್ಳಿ' (ಉಜ್ಜಿನಿ ಪರಿಸರದಲ್ಲಿದೆ) ಯಲ್ಲಿ ಮರುಳಸಿದ್ಧರ ದೇವಾಲಯವಿದೆ. 'ಉರ್ಲಕಟ್ಟೆ' (ಜಗಳೂರು ತಾಲೂಕ್) ಯಲ್ಲಿ ಮರುಳಸಿದ್ಧನು ಕರುಗಳನ್ನು (ತುರುಗಳು) ಕಾಯುವಾಗ ಕರುಗಳಿಗೆ ಉರುಲು ಹಾಕಿದ್ದರಿಂದ ಈ ಹೆಸರು ಬಂತೆಂಬ ಐತಿಹ್ಯ. ಇಲ್ಲಿ ಮರುಳಸಿದ್ಧರ ದೇವಾಲಯವಿದೆ. ಜಗಳೂರು ತಾಲೂಕು ಉಜ್ಜಪ್ಪವಡೆರಹಳ್ಳಿ ಸಮೀಪದ ವರವೇನಹಳ್ಳಿ ಎಂಬ ಬೇಚರಾಕು ಗ್ರಾಮದಲ್ಲಿ ಮರುಳಸಿದ್ಧರ ದೇವಾಲಯವಿದೆ. ಪಲ್ಲಾಗಟ್ಟೆ, ಮಸಣಿಕಟ್ಟೆ ಇಲ್ಲಿ ನಾಲ್ಕು ತ್ರಿಶೂಲಗಳ ಗುರುತನ್ನು ಉಳ್ಳ ಎರಡು ಕಲ್ಲುಗಳಿವೆ. ಈ ಗುರುತು ಮರುಳಸಿದ್ಧನಿಗೆ ಸಂಬಂಧ ಪಟ್ಟಿಯೆಂದು ಜನರು ಹೇಳುತ್ತಾರೆ. ಅಸಗೋಡು ಇಲ್ಲಿ ಶಂಭುಲಿಂಗ ದೇವರ ದೇವಸ್ಥಾನವಿದೆ. ಇಲ್ಲಿಗೆ ಮರುಳಸಿದ್ಧರು ಒಮ್ಮೆ ಬಂದು ಹೋಗಿರುವ ಬಗ್ಗೆ ಐತಿಹ್ಯವಿದೆ. ಇದೂ ಸಹ ಅವರ ಸ್ಮಾರಕವಾಗಿದೆ[೪೨].

ಕಗ್ಗಲ್ಲುಪುರದಲ್ಲಿ ಬರಗಾಲ ಬರುತ್ತದೆ. ಮಾರಿಯನ್ನು ಪೂಜಿಸಿ, ನರಬಲಿ ಪ್ರಾಣಿ ಬಲಿಗಳನ್ನಿತ್ತರೆ ಬಂದ ಸಂಕಟವು ದೂರವಾಗುವುದೆಂಬ ಜನರ ನಂಬಿಕೆ[೪೩]. ಮರುಳಸಿದ್ಧ ಇದರ

ವಿರುದ್ಧ ಪ್ರತಿಭಟಿಸುತ್ತಾನೆ. ಧರ್ಮವೆಂದರೇನು ? ಹಿಂಸೆಯು ಧರ್ಮಾಚರಣೆಯೇ? ಎಂದು ಮೂಢನಂಬಿಕೆಗಳನ್ನು ವಿರೋಧಿಸಿ ಹೊರ ನಡೆದ ಮರುಳಸಿದ್ಧರು ಮುಂದೆ ಅವರು ಜನತೆಯಲ್ಲಿ ತುಂಬಿದ್ದ ಅಜ್ಞಾನ, ಅಂಧಶ್ರದ್ಧೆಯನ್ನು ದೂರ ಮಾಡಲು ತನ್ನ ಜನ್ಮಸ್ಥಳ ತೊರೆದು ಗುರುವಿನ ಮಾರ್ಗದರ್ಶನವನ್ನು ಬಯಸಿ ಕಗ್ಗಲ್ಲುಪುರದಿಂದ ದಕ್ಷಿಣಕ್ಕೆ ಚಿನ್ಮೂಲಾದ್ರಿ (ಚಿತ್ರದುರ್ಗ)ಗೆ ಬಂದು ಗುರುವನ್ನು ಕಾಣುತ್ತಾನೆ. ರೇವಣಸಿದ್ಧ ಗುರು ಮರುಳಸಿದ್ಧ ದೀಕ್ಷೆಯನ್ನಿತ್ತು, ಸರ್ವಜ್ಞಾನಗಳ ಮೂಲವನ್ನು ಬೋಧಿಸುತ್ತಾನೆ. ಈ ಗುರು ಶಿಷ್ಯರ ಸ್ಮಾರಕವಾಗಿಯೇ ಚಿತ್ರದುರ್ಗದ ಬೆಟ್ಟದಲ್ಲಿ ಸಂಪಿಗೆ ಸಿದ್ಧೇಶ್ವರನ ದೇವಾಲಯವಿದೆ. ಇಲ್ಲಿಗೆ ಸಮೀಪದ ಹುಲ್ಲೂರು ಗ್ರಾಮದ ಸಿದ್ಧೇಶ್ವರನ ಗುಡಿಯಲ್ಲಿ ಈ ಉಭಯತರ ವಿಗ್ರಹಗಳಿವೆ[೪೪].

ಗುರುವಿನ ಅನುಗ್ರಹ ಪಡೆದ ಮರುಳಸಿದ್ಧರು ದೇಶಾಂತರ ಪ್ರವಾಸಕೈಗೊಂಡ ಮರುಳಸಿದ್ಧನು ವೈದಿಕ ಋತ್ವಿಜರ ಕೇಂದ್ರವಾಗಿದ್ದ ಬೇತೂರು ನಗರಕ್ಕೆ ಬರುತ್ತಾನೆ. ಬೇತೂರು ನಗರವು ಚಾಲುಕ್ಯರ ಸಾಮಂತನಾದ ಉಚ್ಚಂಗಿದುರ್ಗದ ಪಾಂಡ್ಯರಸನ ಆಡಳಿತಕ್ಕೆ ಸೇರಿತ್ತು. ಇಲ್ಲಿ ವೈದಿಕರು ವಿಶೇಷವಾಗಿದ್ದರು. ಯಜ್ಞ ಯಾಗಾದಿಗಳ ಮೂಲಕ ದೇವತೆಗಳು ತಣಿಯುವರೆಂದು ನಂಬಿ ಅಸಂಖ್ಯಾತವಾಗಿ ಧನ–ಧಾನ್ಯವನ್ನು ಸೊರೆ ಮಾಡುತ್ತಿದ್ದರು. ವರ್ಣಾಶ್ರಮದ ಪೋಷಕರಾಗಿ ತಮ್ಮ ಹಿರಿಮೆಯನ್ನು ಬೆಳಸಿಕೊಳ್ಳವ ಮೂಲಕ ಸಮಾಜದ ಬಹುಸಂಖ್ಯಾತರನ್ನು ಹಸಿದ ಜನ ಅನ್ನ ಅನ್ನ ಎಂದು ಹಂಬಲಿಸುತ್ತಿರುವಾಗ ಅದಕ್ಕೆ ನೀಡದೆ ಅಗ್ನಿಯಲ್ಲಿಟ್ಟು ಕಾಣದ ದೇವತೆಗಳ ಹಸಿವನ್ನು ಹಿಂಗಿಸಲುಯತ್ನಿಸುವುದು ಸರಿಯೇ ಎಂದು ದಲಿತನಾದ ಮರುಳಸಿದ್ಧನು ವೈದಿಕರ ಯಾಗವನ್ನು ಪ್ರತಿಭಟಿಸುತ್ತಾನೆ[೪೫]. ಈ ಘಟನೆಯ ಸ್ಮಾರಕವಾಗಿ ಹೆಮ್ಮನಬೇತೂರು (ದಾವಣಗೆರೆ ತಾಲ್ಲೂಕು) ಗ್ರಾಮದಲ್ಲಿ ಯಜ್ಞ ಕುಂಡದ ಸ್ಮಾರಕದ ಅವಶೇಷಗಳು ಹಾಗೂ ಮರುಳಸಿದ್ಧರ ಸ್ಮಾರಕವಾದ ದೇವಾಲಯವಿದೆ.

ವೈದಿಕರ ಯಜ್ಞ ಶಾಲೆಯಲ್ಲಿ ಪ್ರತಿಭಟಿಸಿದ್ದಕ್ಕೆ ಮರುಳಸಿದ್ಧನನ್ನು ಬಂಧಿಸಿ ಸಮೀಪದ ಅಣಜಿ (ದಾವಣಗೆರೆ ತಾಲೂಕು) ಕೆರೆಯಲ್ಲಿ ಹಾಕಿದರು. ಇದರ ಕುರುಹುವಾಗಿ ಗೊಂಗಡಿ ಸಿದ್ಧಪ್ಪನೆಂದು ಹೇಳುವ ಸ್ಮಾರಕವಿದೆ. ಪುನಃ ದಡ ಸೇರಿದ ಮರುಳಸಿದ್ಧ ಮತ್ತೆ ಯಜ್ಞ ಶಾಲೆ ಪ್ರವೇಶಿಸಿ (ಮರುಳಸಿದ್ಧ) ಪ್ರತಿಭಟಿಸಿ ನಿಲ್ಲುತ್ತಾನೆ. ವೈದಿಕರು ಹೇಗೆ ಬಂದನೆಂದು ಚಕಿತರಾದರೂ ಮತ್ತೆ ರೊಚ್ಚಿಗೆದ್ದು ಹಗೇವಿಗೆ ಹಾಕಿ ಸುಣ್ಣವನ್ನು ಸುರಿದು ನೀರನ್ನು ಸುರಿಯುತ್ತಾರೆ. ಈ ಘಟನೆಯು ಬೇತೂರಿನಿಂದ ಉತ್ತರಕ್ಕೆ ಒಂದು ಮೈಲಿ ದೂರದಲ್ಲಿರುವ 'ಕುರುಡಿ' ಎಂಬ ಗ್ರಾಮದಲ್ಲಿ ನಡೆದಿದೆ.

ಈಗಲೂ ಈ ಘಟನೆಯ ಸ್ಮಾರಕವಾಗಿ ಹಗೇವಿನಂತಹ ತಗ್ಗಿನಲ್ಲಿ ಸಿದ್ದೇಶ್ವರ ಲಿಂಗವಿದೆ. ಈಗಲೂ 'ಹಗೇವು ಸಿದ್ದೇಶ್ವರನೆಂದೇ ಕರೆಯುತ್ತಾರೆ[೪೬]. ಹಗೇವಿನಿಂದೆದ್ದ ಮರುಳಸಿದ್ಧನು ಮತ್ತೆ ಯಜ್ಞ ಶಾಲೆಯನ್ನು ಪ್ರವೇಶಿಸಿ ಮಾನವಕುಲವೆಲ್ಲಾ ಒಂದೇ. ನಿಮ್ಮ ಕುಲದ ಹಿರಿಮೆ ಏನು? ಎಲ್ಲೆಲ್ಲಿ ಜೀವನಿದ್ದಾನೊ ಅಲ್ಲಲ್ಲಿ ದೇವನಿದ್ದಾನೆ, ಎಂದು ಸಾರುತ್ತಾ ಜನ ಜಂಗುಳಿಯೊಂದಿಗೆ ಅಲ್ಲಿಯೇ ಕುಳಿತು ಸತ್ಯಾಗ್ರಹ ಹೂಡುತ್ತಾನೆ. ವೈದಿಕರು ದಾರಿಗಾಣದವರಾಗಿ ಪಾಂಡ್ಯರಸನಲ್ಲಿ ಮೊರೆ ಹೊಗುತ್ತಾರೆ. ಕುಪಿತನಾದ ದೊರೆಯು ಮರುಳಸಿದ್ಧನನ್ನು ಆನೆಯ ಕಾಲಿಗೆ ಕಟ್ಟಿ ತುಳಿಸಲು ಆನೆ ಬೆಂಬತ್ತುತ್ತದೆ. ಮರುಳಸಿದ್ಧನು ತನ್ನನ್ನು ರಕ್ಷಿಸಿಕೊಳ್ಳಲು ಮುಚ್ಚಿಕೊಳ್ಳುತ್ತಾನೆ. ಮುಚ್ಚಿಕೊಂಡ ಸ್ಥಳವು 'ಮುಚ್ಚನೂರು' ಎಂಬ ಹೆಸರಿನ ಗ್ರಾಮವಾಗಿದೆ. ಇಲ್ಲಿ ಇಂದೂ ಸಹ ಮರುಳಸಿದ್ಧನ ಸ್ಮಾರಕವಾಗಿ ದೇವಾಲಯವಿದೆ. ನಂತರ ಅಲ್ಲಿಂದ ಮುಂದಕ್ಕೆ ತೆರಳಿ ಉಳಿದು ಕೊಳ್ಳುತ್ತಾನೆ. ಉಳಿದು ಕೊಂಡ ಸ್ಥಳವು 'ಉಳುಪನ ಕಟ್ಟೆ' ಎಂದು ಕರೆಯಲ್ಪಟ್ಟಿದೆ. ಇಲ್ಲಿಂದ ಮುಂದೆ ಸ್ವಲ್ಪ ದೂರದಲ್ಲಿಯೇ ಆನೆಯ ಕೋಡನ್ನು ಕಿತ್ತು ಆಕಾಶಕ್ಕೆ ಎಸೆಯುತ್ತಾನೆ. ಆನೆಯ ಮದವಿಳಿದು ಶರಣಾಗುತ್ತದೆ. ಈ ಸ್ಥಳವು ಆನಗೋಡೆಂಬ ಹೆಸರಿನ ಗ್ರಾಮವಾಗಿದೆ. ಇಲ್ಲಿಯೂ ಮರುಳಸಿದ್ಧರ ದೇವಾಲಯವಿದೆ. ಇಲ್ಲಿಯ ಜನರು ಇಂದೂ ಸಹ ಈ ಕಥೆಯನ್ನು ಹೇಳುತ್ತಿದ್ದಾರೆ. ಕೊನೆಗೆ ವೈದಿಕರು ಮರುಳಸಿದ್ಧನಿಗೆ ಶರಣಾಗಿ ತಾವೇ ಹಿರಿಯರೆಂಬ ಕುಲಮದವನ್ನು ಬಿಟ್ಟು 'ಎಲ್ಲರೊಳು ತಾವೊಬ್ಬರು ಮಾನವ ಕುಲವೆಲ್ಲಾ ಒಂದೇ' ಎಂಬ ತತ್ವವನ್ನೊಪ್ಪಿ ಶಿಷ್ಯರಾಗಿ ಎಲ್ಲರೂ ಒಂದೆಡೆ ಉಣ್ಣುತ್ತಾರೆ. ಹೀಗೆ ಕೂಡಿ ಉಂಡ ಸ್ಥಳವು 'ಕೂಡುಂಡಿ' ಯಾಗಿ 'ಕುರುಡಿ' ಎಂಬ ಗ್ರಾಮವಾಗಿ ಕರೆಯಲ್ಪಡುತ್ತಿದೆ[೪೭]. ಇದರ ಸ್ಮಾರಕವಾಗಿ ಇಲ್ಲಿ ಕೋಪ್ಪರಿಗೆ ಆಕಾರದ ಬಂಡೆ ಇದೆ ಇದರ ಬಗ್ಗೆ ಕಥೆ ಹೇಳುತ್ತಾರೆ.

ಮರುಳಸಿದ್ಧರು ಇಲ್ಲಿಂದ ಮುಂದೆ ಬಾತಿ, ಕುಂಬಳೂರು, ಬನ್ನಿಕೋಡು, ಬೇಗೂರು ಮಾರ್ಗವಾಗಿ ಉಡುತಡಿಗೆ ಬಂದು ಮಹಾದೇಯಕ್ಕಳ ತಾಯಿಗೆ ಗರ್ಭ ದೀಕ್ಷೆ ಅನುಗ್ರಹಿಸಿದ್ದಾಗಿ ತಿಳಿದಿಬರುತ್ತದೆ. ಈ ಸನ್ನಿವೇಶದ ಕುರುಹುವಾಗಿ ಇನಾಂಬೇಗೂರು ಎಂಬಲ್ಲಿ ಮರುಳಸಿದ್ಧರ ಸ್ಮಾರಕವೊಂದಿದೆ. ಈ ಬಗ್ಗೆ ಇಲ್ಲಿನ ಜನಪದರು ಕಥೆ ಹೇಳುತ್ತಾರೆ. ಮಲೆನಾಡ ಭಾಗದಲ್ಲಿ ಮರುಳಸಿದ್ಧರ ಸ್ಮಾರಕಗಳು ಮತ್ತು ಅವರ ಸಂಚಾರ ಮಾರ್ಗದ ಕುರುಹುಗಳನ್ನು ಈ ಹಿಂದೆ ಪ್ರಸ್ತಾಪಿಸಲಾಗಿದೆ. ಇದೇ ರೀತಿ ಮರುಳಸಿದ್ಧರ ಸ್ಮಾರಕಗಳು ಆಂಧ್ರಪ್ರದೇಶ, ಮಹಾರಾಷ್ಟ್ರ ಭಾಗದಲ್ಲಿಯೂ ಚಾಚಿವೆ. ಇದರ ಕುರುಹುವಾಗಿ ಆಂಧ್ರದ ಓರಂಗಲ್ ಪಟ್ಟಣದಲ್ಲಿ ಶಿವಶರಣ ಗುಂಡ ಬ್ರಹ್ಮಯ್ಯನನ್ನು ಸಂದರ್ಶಿಸಿದ್ದಾಗಿ ತಿಳಿದುಬರುತ್ತದೆ. ಅದೇ ರೀತಿ ಮಹಾರಾಷ್ಟ್ರ ಪ್ರಾಂತದ ಕೊಲ್ಲಾಪುರವನ್ನು ಸಂದರ್ಶಿಸುತ್ತಾರೆ. ಅದು ವಾಮಾಚಾರದ ಕೇಂದ್ರವಾಗಿತ್ತು. ಅಲ್ಲಿ ಕರಹಾಡನಾಡ

ದೊರೆಯ ಮಗಳಾದ ಮಾಯಾದೇವಿಯ ಗರ್ವಭಂಗಪಡಿಸಿ ಅವಳನ್ನು ಸದಾಚಾರಿಯಾಗಿ ಪರಿವರ್ತಿಸಿದ್ದಾರೆ. ಈ ಸಂಗತಿಯ ಕುರುಹುವಾಗಿ ಕೊಲ್ಲಪುರ, ರೇಣಾವಿ, ಕಾಗಾತಿ(ಬೆಳಗಾವಿ ಜಿಲ್ಲೆ) ಎಂಬಲ್ಲಿ ಮರುಳಸಿದ್ಧರ ಕುರುಹುಗಳಿವೆ.[೪೮]

ಮಾಯೆಯ ಶರಣಾಗತಿಯಾದ ಮೇಲೆ ಮರುಳಸಿದ್ಧನು ಕಗ್ಗಲ್ಲುಪುರಕ್ಕೆ ಬಂದವನೇ ತನ್ನ ಪ್ರವಾಸದ ಸಿಂಹಾವಲೋಕನವನ್ನು ಮಾಡುತ್ತಾನೆ. ಸಮಾಜದಲ್ಲಿದ್ದ ಮೂಢನಂಬಿಕೆ ಅಜ್ಞಾನ, ಅಂಧ ಶ್ರದ್ಧೆ ಎಂಬ ದುಷ್ಟ ಪದ್ಧತಿಗಳನ್ನು ನಿರ್ಮೂಲ ಮಾಡಿ. ಜೀವನಕ್ಕೆ ಜೀವಾಳವಾದ ವಿಚಾರ ಶಕ್ತಿಯನ್ನು ಮತ್ತು ವಿಚಾರ ಸ್ವಾತಂತ್ರ್ಯವನ್ನು ಬೆಳೆಸುವುದು ಅವಶ್ಯಕವೆಂಬುದನ್ನು ಅದಕ್ಕಾಗಿ ಶಾಶ್ವತ ವ್ಯವಸ್ಥೆಯ ಕನಸೊಂದನ್ನು ಕಾಣುತ್ತಾನೆ. ಆ ಕನಸು ನನಸಾದ ಪ್ರತಿಫಲವೇ ಸದ್ಧರ್ಮ ಪೀಠದ ಸಂಸ್ಥಾಪನೆ. ಇದಕ್ಕಾಗಿ ಸ್ಥಳಪುರದೊಡಯನಾದ ಬಾಚನಗೌಡನಲ್ಲಿ ಪೀಠದ ಸ್ಥಾಪನೆಗೆ ಭೂಮಿ ಕೇಳುತ್ತಾನೆ. ಗೌಡನ ಒಪ್ಪಿಗೆಯಾದೊಡನೆಯೇ ತಾನು ನಿಂತಲ್ಲಿಯೇ ಒಂದು ಪಾದವನ್ನಿಡುತ್ತಾನೆ. ಈ ಪಾದವೇ ಇಂದಿನ ಉಜ್ಜಿನಿ ಗ್ರಾಮದ ದೇವಾಲಯದ ಮೂಲ ಸ್ಥಳದಲ್ಲಿ ಒಂದು ಪಾದವಿದೆ. ಉಳಿದಂತೆ ಈ ಗ್ರಾಮದ ಸುತ್ತ ಎಂಟು ಪಾದಗಟ್ಟೆಗಳಿವೆ.[೪೯] ಕಗ್ಗಲ್ಲುಪುರದಿಂದ ನೈರುತ್ಯಕ್ಕೆ 'ಕೇತನಹಳ್ಳಿಚರವು' ಇದೆ. ಇಲ್ಲಿ ಸದ್ಧರ್ಮ ಪೀಠವಿದ್ದು ಅಲ್ಲಿ ಮರುಳಸಿದ್ಧರು ಐಕ್ಯವಾಗಿದ್ದಾರೆ ಎಂಬುದರ ಸ್ಮಾರಕವಾಗಿ ದೇವಾಲಯವಿದೆ. ಹಾಗೆಯೇ ಅಲ್ಲಿ ಉದ್ಭವ ಲಿಂಗವಿದೆ ಇದು ಪ್ರಸಿದ್ಧವಾದ ಕ್ಷೇತ್ರವಾಗಿದೆ. ಈ ಎಲ್ಲಾ ಘಟನೆ ಮತ್ತು ಆ ಘಟನೇಯ ಸ್ಥಳಗಳು ಮರುಳಸಿದ್ಧನ ಇಡೀ ಬದುಕಿನ ಹೋರಾಟದ ದೃಷ್ಟಿಯಿಂದ ಮಹತ್ವ ಪಡೆದಿವೆ.

ಇಂದಿನ ಜಾಗತಿಕ ಯುಗದಲ್ಲಿಯು ನಾವು 'ಪವಾಡ' ಗಳನ್ನು ನಂಬುವುದು ಅವೈಜ್ಞಾನಿಕ ಕ್ರಮವೇ ಆಗಿದೆ ಆದರೂ ಸಹ ಮರುಳಸಿದ್ಧರ ಸ್ಮಾರಕಗಳು: ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದು ಅವು ಅಡವಿ, ಗುಡ್ಡ-ಬೆಟ್ಟ ಹಳ್ಳಿ ನಗರ ಪ್ರದೇಶಗಳಲ್ಲಿ ಸ್ಮಾರಕಗಳಾಗಿ ಉಳಿದಿವೆ. ಮರುಳಸಿದ್ಧರು ಸಾಮಾಜಿಕ, ಧಾರ್ಮಿಕ ಅಂಧಾನುಕರಣೆಯ ನಿವಾರಣೆಗಾಗಿ ಅಂದಿನ ಸಮಾಜವನ್ನು ತಿದ್ದುವಲ್ಲಿ ಅವರ 'ಪವಾಡ'ಗಳಿಗೆ ವಿಶೇಷ ಮಹತ್ವವಿದೆ. ಇಲ್ಲಿ ಪವಾಡವನ್ನು ತಾತ್ವಿಕವಿಚಾರವಾಗಿ ಅವಲೋಕಿಸಿದಾಗ ಮರುಳಸಿದ್ಧರು ದೀನ-ದಲಿತರ ಏಳಿಗೆಗಾಗಿ ಹೋರಾಡಿದ ಸಂಕೇತವಾಗಿವೆ. ಅಂದರೆ ಜನಮನದಲ್ಲಿ ರೂಪಿತವಾದ ಮರುಳಸಿದ್ಧನ ಪವಾಡಗಳನ್ನು ಒಳಹೊಕ್ಕು ನೋಡಿ,ಪವಾಡಗಳ ಮೇಲ್ಪದರವನ್ನು ಬಿಡಿಸಿ ಆ ಮಹಾಮಹಿಮನ ಸಾಮಾಜಿಕ ಕ್ರಾಂತಿಯ ಸಹಜವಾದ ಘಟನಾವಳಿಗಳಾಗಿರುದನ್ನು ಕಾಣಬಹುದು. ಮರುಳಸಿದ್ಧರ ಸ್ಮಾರಕಗಳು: ಇರುವ ಕಡೆ

ಅಲ್ಲಿನ ಜನ ಸಾಮಾನ್ಯರು ಮರುಳಸಿದ್ಧರು ನಡೆಸಿದ 'ಪವಾಡ' ನಡೆದ ಘಟನೆಯ ಕಥೆಗಳನ್ನು ಯಥಾವತ್ತಾಗಿ ಹೇಳುತ್ತಾರೆ. ಮರುಳಸಿದ್ಧರನ್ನು ದೇವರ ಆರಾಧನೆಯಲ್ಲಿ ಆತನನ್ನು ಪೂಜಿಸುವ ಪದ್ಧತಿ ರೂಢಿಯಲ್ಲಿದೆ. ಅಲ್ಲದೇ ಮರುಳಸಿದ್ಧರ ದೈವ ಆರಾಧನೆ, ಧಾರ್ಮಿಕ ಕ್ರಿಯಾವಿಧಿಗಳ ಆಚರಣೆ ಹೆಚ್ಚು ರೂಢಿಯಲ್ಲಿರುವುದು ಹೆಚ್ಚಿನ ಮಹತ್ವ ಪಡೆದಂತಾಗಿದೆ. ಸಮಾಕಾಲೀನ ಸಮಾಜಕ್ಕೆ, ಮರುಳಸಿದ್ಧನ ಜೀವನ ಚರಿತ್ರೆಯೇ ಒಂದು ದಿವ್ಯ ಸಂದೇಶವಾಗಿದೆ. ಮಾದಿಗರ ಮನೆಯ ಮಗನೊಬ್ಬ, ಜಗದ್ಗುರುವಾಗಿ ಮಾನ್ಯನೆನಿಸಿಕೊಂಡಿರುವುದು, ಭಾರತದ ಸನಾತಾನ ಸಂಸ್ಕೃತಿಯಲ್ಲಿ ಅವಿಸ್ಮರಣೀಯವಾದುದು. ಶರಣರ ಕ್ರಾಂತಿ ಜ್ವಲಂತ ನಿದರ್ಶನವಿದು. ಮಾದಿಗ ಜಾತಿಯವರಾದ ಮರುಳಸಿದ್ಧರೇ ನಮ್ಮ ಮಠದ ಮೂಲ ಗುರು ಎಂದು ಪ್ರಚಾರಪಡಿಸುವ ಸಿರಿಗೆರೆ, ಸಾಣೆಹಳ್ಳಿ, ಪಾಲ್ಕುರಿಕೆ, ಜಾಬಲಿಪುರ, ಭುಜಂಗನಗರ ಇನ್ನೂ ಮೊದಲಾದ ಮಠಗಳ ಭಕ್ತ ಶಿಷ್ಯ ವರ್ಗದ ಸಂಖ್ಯೆ ಹೆಚ್ಚುತ್ತಿದೆ. ಸಿರಿಗೆರೆ ಸಂಸ್ಥಾನ ಮಠದ ವತಿಯಿಂದ ಮರುಳಸಿದ್ಧರ ಜೀವನ ಸಾಧನೆ ಆತನ ವ್ಯಕ್ತಿತ್ವ ಕುರಿತು ಹೆಚ್ಚಿನ ಪ್ರಚಾರ ನೆಡೆಯುತ್ತಿದೆ. ಇಂದು ಅವರ ಆದರ್ಶ ಮೌಲ್ಯಗಳು ಪ್ರೇರಕ ಶಕ್ತಿಯಾಗಿವೆ.

ಅಡಿ ಟಿಪ್ಪಣಿಗಳು

೧. ಶ್ರೀ ಷ// ಬ್ರ/ ಡಾ// ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು, ವೀರಶೈವ ಪಂಚಪೀಠ ಪರಂಪರೆ ೨೦೦೧ ಪುಟ ೪.

೨. ಡಾ. ಎಂ. ಚಿದಾನಂದಮೂರ್ತಿ, ವೀರಶೈವ ಧರ್ಮ: ಭಾರತೀಯ ಸಂಸ್ಕೃತಿ(ಹಿಂದೂ: ಲಿಂಗಾಯಿತ) ೨೦೦೦ ಪುಟ. ೫೪,

೩. ಡಾ. ಆರ್. ಎಮ್. ಷಡಕ್ಷರಯ್ಯ ಉಜ್ಜಯಿನಿಸದ್ಧರ್ಮ ಪೀಠದ ಸಂಸ್ಕೃತಿಕ ಅಧ್ಯಾಯನ೨೦೦೩ ಪುಟ ೩,

೪. ಡಾ. ಆರ್.ಎಂ.ಷಡಕ್ಷರಯ್ಯ, ಪೂರ್ವೋಕ್ತ ಪು.೧೪-೧೫.

೫. ಶ್ರೀ ಷ// ಬ್ರ/ ಡಾ// ಚಂದ್ರಶೇಖರ ಶಿವಾಚಾರ್ಯಸ್ವಾಮಿಗಳು ಪೂರ್ವೋಕ್ತ ಪುಟ.೪.

೬. ಅದೇ ಪುಟ.೪

೭. ಆರ್. ಚಂದ್ರಶೇಖರಪ್ಪ (ಸಂ), ತರಳಬಾಳು ರಜತೋತ್ಸವ ಸಂಚಿಕೆ ೧೯೬೭ ಪುಟ ೩-೪,

೮. ಡಾ. ಎಂ. ಚಿದಾನಂದಮೂರ್ತಿ, ಪೂರ್ವೋಕ್ತ ಪುಟ. ೫೪,

೯. ಅದೇ ಪುಟ ೫೩.

೧೦. ನಗುವನಹಳ್ಳಿ ಪಿ.ರತ್ನ, ಚತುರಾಚಾರ್ಯ ಪ್ರಬಂಧ, ೧೯೮೯ ಪುಟ ೧-೫೪

೧೧. ಆರ್. ಚಂದ್ರಶೇಖರಪ್ಪ (ಸಂ), ಪೂರ್ವೋಕ್ತ ಪುಟ.೩-೪,

೧೨. ಡಾ. ಎಸ್. ವಿದ್ಯಾಶಂಕರ, ವೀರಶೈವ ಪುರಾಣಗಳು ಒಂದು ಅಧ್ಯಯನ ೧೯೮೨. ಪುಟ.೧೩೭

೧೩. ಕರ್ನಾಟಕ ಕವಿಚರಿತೆ ಸಂಪುಟ(ಪರಿಷ್ಕೃತ ಆವೃತ್ತಿ ೧೯೭೨) ಅನುಬಂದ// ಪು ೫೧-೫೨
೧೪. ಡಾ. ಎಸ್. ವಿದ್ಯಾಶಂಕರ (ಸಂ), ಮಹಾದೇವಿಯಕ್ಕನ ಸಾಂಗತ್ಯ ೧೯೮೫ ಪು.೩೩-೩೪.
೧೫. ಅದೇ ಪುಟ.೩೩-೩೪.
೧೬. ಪಂಡಿತ ಎಸ್. ಬಸಪ್ಪ (ಸಂ), ದೇವಕವಿಕೃತ ಮರುಳಸಿದ್ಧ ಕಾವ್ಯ ೧೯೭೭ ಪುಟ 1 ,
೧೭. ಹೆಚ್.ದೇವೀರಪ್ಪ, ಮಹದೇವ ಬಣಕಾರ (ಸಂ) ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ, ೧೯೭೮. ಪು.೮೨,
೧೮. ಡಾ. ರಂ. ಶ್ರೀ ಮುಗಳಿ (ಸಂ), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂ.೪) ಬಾಗ-೨ ೧೯೭೮. ಪು ೭೭೩-೭೭೫,
೧೯. ತರಳಬಾಳು ಶಿವಮೂರ್ತಿ (ಸಂ), ಮರುಳಸಿದ್ಧ ದೇವರ ಚರಿತ್ರೆ (ಸಾಂಗತ್ಯ)೧೯೭೦.ಪು-೧
೨೦. ಬಿ.ಡಿ. ಜತ್ತಿ, ಎಸ್.ಎಸ್.ಮಳೀಮಠ(ಸಂ) ಬಸವೇಶ್ವರರ ಸಮಕಾಲೀನರು ೧೯೭೬ ಪು ೨೩೫-೨೩೬,
೨೧. ಅದೇ ಪುಟ.೨೩೫-೨೩೬.
೨೨. ಡಾ. ದೇವರಕೊಂಡಾರೆಡ್ಡಿ (ಸಂ) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೧, ೧೯೯೮. ಪು.೨೨೭,
೨೩. ಅದೇ ಪುಟ.೨೨೮
೨೪. ಅದೇ ಪುಟ.೨೨೯
೨೫. ಅದೇ ಪುಟ.೨೨೯
೨೬. ಅದೇ ಪುಟ.೨೩೦
೨೭. ಡಾ. ಎಂ.ಎಂ. ಕಲಬುರ್ಗಿ, ಶಾಸನಗಳಲ್ಲಿ ಶಿವಶರಣರು ೧೯೭೦ ಪು ೪೭,
೨೮. ಅದೇ ಪುಟ.೪೮.
೨೯. ಡಾ. ಆರ್. ಎಮ್. ಷಡಕ್ಷರಯ್ಯ(ಲೇ) ಪೂರ್ವೋಕ್ತ, ಪು.೪೭,
೩೦. ಅನ್ನ್ಯೂಯಲ್ ರಿಪೋರ್ಟ್ ಆಪ್ ದಿ ಮೈಸೂರು ಆರ್ಕಿಯಾಲಾಜಿಕಲ್ ಡಿಪಾರ್ಟಮೆಂಟ್ ೧೯೩೯ಪು.೧೨೯,
೩೧. ರೈಸ್.ಬಿ.ಎಲ್. (ಸಂ), ಎಫಿಗ್ರಾಫಿಕ್ ಕರ್ನಾಟಕ ಸಂಪುಟ ೧೧, ೧೯೦೩.ಪು.೮೬-೨೩೦,
೩೨. ಪ್ರೊ. ಬಿ.ರಾಜಶೇಖರಪ್ಪ, ಇತಿಹಾಸ ಕಥನ, ೨೦೦೧. ಪು.೧೩೧-೧೩೨
೩೩. ಡಾ. ಆರ್. ಎಮ್. ಷಡಕ್ಷರಯ್ಯ ಪೂರ್ವೋಕ್ತ, ಪು.೫೪
೩೪. ಹೆಚ್. ದೇವೀರಪ್ಪ, ಮಹದೇವ ಬಣಕಾರ (ಸಂ), ಪೂರ್ವೋಕ್ತ, ಪು.೧೭೬,
೩೫. ಪ್ರೊ. ಬಿ. ಷೇಕ್ ಆಲಿ, ಪ್ರೊ. ಅ. ಸುಂದರ (ಸಂ), ಕರ್ನಾಟಕ ಚರಿತ್ರೆ ಸಂ.೧ ೧೯೯೭ ಪು.೨೮,
೩೬. ಅದೇ ಪುಟ. ೩೦

೩೭. ಹೆಚ್.ದೇವೀರಪ್ಪ, ಮಹದೇವಬಣಕಾರ (ಸಂ), ಪೂರ್ವೋಕ್ತ, ಪು.೧೯೯-೧೭೦.

೩೮. ಪ್ರೊ. ಬಿ.ಷೇಕ್ ಆಲಿ, ಪ್ರೊ. ಅ. ಸುಂದರ(ಸಂ), ಪೂರ್ವೋಕ್ತ, ಸಂ.೧, ಪು.೩೨,

೩೯. ಅದೇ ಪುಟ. ೩೩.

೪೦. ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು೨೦೦೪ ಪು ೪೭,

೪೧. ಪಂಡಿತ್ ಎಸ್. ಬಸಪ್ಪ (ಸಂ) ಪೂರ್ವೋಕ್ತ, ಪು.೩೦,

೪೨. ಅದೇ ಪುಟ. ೩೨.

೪೩. ಹೆಚ್.ದೇವೀರಪ್ಪ, ಮಹದೇವ ಬಣಕಾರ (ಸಂ), ಪೂರ್ವೋಕ್ತ ಪು.೨೪.

೪೪. ಅದೇ ಪುಟ. ೨೬-೨೭

೪೫. ಆರ್. ಚಂದ್ರಶೇಖರಪ್ಪ (ಸಂ), ಪೂರ್ವೋಕ್ತ, ಪು.೮, ೯,

೪೬. ಅದೇ ಪುಟ. ೯.

೪೭. ಅದೇ ಪುಟ..೯.

೪೮. ಅದೇ ಪುಟ. ೧೦,

೪೯. ಅದೇ ಪುಟ. ೧೩.

ಅಧ್ಯಾಯ ೨

೨.೨. ಮರುಳಸಿದ್ಧರಿಗೆ ಸಂಬಂಧಿಸಿದ ಕಥೆಗಳು : ಸಮೀಕ್ಷೆ.

೨.೨.೧. ದೇವಕವಿ ಕೃತ ಮರುಳಸಿದ್ಧ ಕಾವ್ಯ

೨.೨.೨. ಆನಗೊಡು ರೇವಣಸಿದ್ಧ ಕವಿಯ ಮರುಳಸಿದ್ಧ ದೇವರ ಚರಿತ್ರೆ

೨.೨.೩. ರಾಮಗಿರಿಯ ನಾಗಭೂಷಣನ ಸಾಂಗತ್ಯ

೨.೨.೪. ಉಜ್ಜಯಿನಿಯ ಗೊಂಗಡಿ ವೀರಭದ್ರಯ್ಯನ ಸಾಂಗತ್ಯ

೨.೨.೫. ಚಿಕ್ಕರಾಚನ ಮಹಾದೇವಿಯಕ್ಕನ ಸಾಂಗತ್ಯ

೨.೨.೬. ನಂದೀಶ ಕವಿಯ ಮರುಳಾರಾಧ್ಯ ವಿಜಯ ಚರಿತೆ.

೨.೨.೭. ಪರ್ವತೇಶ ವಿರಚಿತ ಚತುರಾಚಾರ್ಯ ಚಾರಿತ್ರ

೨.೨.೮. ಚತುರಾಚಾರ್ಯ ಪ್ರಬಂಧ.

೨.೨.೯. ಸಂಸ್ಕೃತದಲ್ಲಿರುವ ಆಗಮಗಳು

೨.೨.೧೦. ಶ್ರೀ ಮರುಳಸಿದ್ಧ ಸ್ತೋತ್ರ ಸಂಗ್ರಹ.

೨.೨.೧೧. ಅನುಷಂಗಿಕವಾದ ಕಾವ್ಯಗಳಲ್ಲಿ ಮರುಳಸಿದ್ಧರ ಉಲ್ಲೇಖ.

೨.೨.೧೨. ಮರುಳಸಿದ್ಧ ವಚನಕಾರರಾಗಿ

೨.೨.೧೩. ಮರುಳಸಿದ್ಧರ ಕುರಿತು ಆದಯ್ಯನ ಎರಡು ವಚನಗಳು

೨.೨.೧೪. ಮೌಖಿಕ ಆಕಾರಗಳಲ್ಲಿ ಮರುಳಸಿದ್ಧರ ಕುರಿತು ಕಥೆಗಳ ಸಮೀಕ್ಷೆ

೨.೨ ಮರುಳಸಿದ್ಧರಿಗೆ ಸಂಬಂಧಿಸಿದ ಕಥೆಗಳು – ಸಮೀಕ್ಷೆ :

ಹನ್ನೆರಡನೆ ಶತಮಾನದ ಶರಣರು 'ಕುಲ ಏಳು ಹದಿನೆಂಟು ಜಾತಿಗಳು ಒಂದೇ' ಎಂದು ಸಾರಿದ್ದ ಆಶಯ, ನಂತರದ ಶತಮಾನದಲ್ಲಿ ವೀರಶೈವ ಧರ್ಮದ ಸಾಂಸ್ಥಿಕ ಪ್ರಕ್ರಿಯೆಯಿಂದ ಒಡೆದು ಹೋಯಿತು. ವೀರಶೈವ ಧರ್ಮದ ಆಚಾರ ಮಾರ್ಗದಿಂದ ಅನೇಕ ಸಮುದಾಯಗಳು ಹೊರಗುಳಿದವು. ಹೀಗೆ ಹೊರಗುಳಿದ ಸಮುದಾಯಗಳಲ್ಲಿ ಕೆಳವರ್ಗದ ಕಾಯಕ ಜೀವಿಗಳ ಮತ್ತು ಕುಶಲಕರ್ಮಿಗಳ ಸಂಖ್ಯೆ ಹೆಚ್ಚಿದೆ. ಇಂತಹ ಸಂದರ್ಭದಲ್ಲಿ ಕೆಳವರ್ಗದ ಸಾಂಸ್ಕೃತಿಕ ನಾಯಕರಾದ ದಕ್ಷಿಣ ಕರ್ನಾಟಕದ ಮಾದೇಶ್ವರ, ಮಂಟೇಸ್ವಾಮಿಯರಂತೆ, ಮಧ್ಯ ಕರ್ನಾಟಕದಲ್ಲಿ ಮರುಳಸಿದ್ಧರು ದಲಿತ ಸಮುದಾಯದ ಸಾಂಸ್ಕೃತಿಕ ನಾಯಕರಾಗಿ ವೀರಶೈವ ಧಾರ್ಮಿಕ ಪರಂಪರೆಯ ಇತಿಹಾಸದಲ್ಲಿ ಉಜ್ಜಯಿನಿ ಸದ್ಧರ್ಮಪೀಠ ಮತ್ತು ಸ್ಥಾಪಿಸಿದರು. ವೀರಶೈವಾಚಾರ್ಯ ಪಂಚಕರಲ್ಲೊಬ್ಬರಾದ ಇವರು ಹನ್ನೆರಡನೇ ಶತಮಾನದ ವಚನಕಾರರ ಸಮಕಾಲೀನರು ಇವರು ಮಾದೇಶ್ವರ, ಮಂಟೇ ಸ್ವಾಮಿಯವರಿಗಿಂತಲೂ, ಇತಿಹಾಸ ವಿಚಾರದಲ್ಲಿ ಸಂಪೂರ್ಣ ಅಗೋಚರವಾಗಿ ಉಳಿದಿದ್ದಾರೆ. ಇವರನ್ನು ಕುರಿತು ಇತಿಹಾಸ ವಿವರ ನೀಡುವ ಕಾವ್ಯ, ಕಥೆ, ಪವಾಡ ಸಂಬಂಧದ ದಂತಕಥೆಗಳು ಮಾತ್ರ ಹೇರಳವಾಗಿವೆ, ಮರುಳಸಿದ್ಧರು ಮಾದಿಗರಲ್ಲಿ ಜನನಪಡೆದರೂ, ಜಾತಿಯ ಶೃಂಖಲೆಯನ್ನು ಕಳಚಿ ತನ್ನ ತಪಃ ಪ್ರಭಾವದಿಂದ ಆಚಾರ್ಯ ಪದವಿಗೇರಿದರು ಮರುಳಸಿದ್ಧರನ್ನು ಈ ಭಾಗದಲ್ಲಿ ವೀರಶೈವರು ಆರಾಧ್ಯ ದೈವವಾಗಿ ಪೂಜಿಸುತ್ತಾರೆ. ವಚನ ಚಳುವಳಿಯ ಕಾಯಕ ತತ್ವ, ಜಾತಿ ರಹಿತ ಸಮಾಜ ತತ್ವಗಳನ್ನು ಇವರು ಪ್ರತಿಪಾದಿಸಿದ್ದಾರೆ.

ಪ್ರಸ್ತುತ ಮರುಳಸಿದ್ಧರ ಜೀವನ ಚಿತ್ರಣದ ನಿರೂಪಣೆಯನ್ನು ಅವಲೋಕಿಸುವ ಪೂರ್ವದಲ್ಲಿ 'ಮರುಳಸಿದ್ಧ' ಎಂಬ ಹೆಸರಿನ ಪ್ರಸ್ತಾಪವು ಸಿದ್ಧ ಪರಂಪರೆಯಲ್ಲಿ ಗುರುತಿಸಲ್ಪಡುವುದೇ ? ಎಂಬುದನ್ನು ಇಲ್ಲಿ ವಿವೇಚಿಸುವುದು ಸೂಕ್ತ. ೧೨ನೇ ಶತಮಾನದ ಬಸವಾದಿ ಶಿವಶರಣರ ಸಮಕಾಲೀನ ಶಿವಶರಣ ರೇವಣಸಿದ್ಧರ ಶಿಷ್ಯನೇ 'ಮರುಳಸಿದ್ಧ'. ರೇವಣಸಿದ್ಧರು ಸಿದ್ಧ ಪರಂಪರೆಯಲ್ಲಿ ಗುರುತಿಸಲ್ಪಡುವಂತವರು. ಅದೇ ರೀತಿ ಮರುಳಸಿದ್ಧರು ಸಹ ಸಿದ್ಧಪರಂಪರೆಯಲ್ಲಿ ಬರುವರೇ ? ಎಂಬುದನ್ನು ವಿವೇಚಿಸಬೇಕಾಗಿದೆ. 'ಸಿದ್ಧ' ಎನ್ನುವ ಪದ ಬಂದ ತಕ್ಷಣ ಇದರ ಹಿಂದೆ ಒಂದು ದೊಡ್ಡ ಪರಂಪರೆಯೇ ಇದೆ. "ಬೌದ್ಧರಲ್ಲಿ ಹೀನಯಾನ–ಮಹಾಯಾನ ಪಂಥಗಳು ಎಂದು ಎರಡು ಪಂಗಡಗಳಾದವು. ಮಹಾಯನ ಪಂಥದ ಮೂಲ ಪುರುಷನೆನಿಸಿಕೊಳ್ಳುವ ನಾಗಾರ್ಜುನನು ಸಿದ್ಧ ಸಂಪ್ರದಾಯದ ಪ್ರವರ್ತಕನೂ ಅಹುದು. ಮುಂದೆ ಅದೇ ಸಿದ್ಧ ಸಂಪ್ರದಾಯದ ವಜ್ರಯಾನ

ಪಂಥವಾಗಿ ಪರಿಣಮಿಸಿತು. ಇವರಲ್ಲಿ ೮೪ ಸಿದ್ಧರು ಪ್ರಸಿದ್ಧರು. ಆದಿನಾಥ, ಮತ್ಸೇಂದ್ರನಾಥ, ಗೋರಖನಾಥ ಎಂದು ಕ್ರಮವಾಗಿ ನಾಥಸಿದ್ಧ ಪರಂಪರೆ ಪ್ರಾರಂಭವಾಗುತ್ತದೆ. ಮುಂದೆ ಈ ಸಂಪ್ರದಾಯ ಅನೇಕ ಕವಲುಗಳಾಗಿ ತಂತ್ರವಿದ್ಯೆ, ಗುಹ್ಯಸಾಧನೆ, ವಾಮಾಚಾರ ಮುಂತಾದ ಪಂಥಗಳಾಗಿ ಹರಿದು ಹಂಚಿಹೋಗಿ ನಿಗೂಢವಾಗುತ್ತಾ ಹೋಗಿದೆ. ಮತ್ತೆ ನಮಗೆ ಈ ಪರಂಪರೆಯ ಮುಂದುವರಿಕೆ ಕಾಣುವುದು. ೧೧ – ೧೨ನೇ ಶತಮಾನದಲ್ಲಿದ್ದ ರೇವಣಸಿದ್ಧರು ಮತ್ತು ಅಲ್ಲಮಪ್ರಭು ಮುಂತಾದ ಶೈವಸಿದ್ಧರಿಂದ ಇವರು ಶೈವ ವಿರಕ್ತ ಸಿದ್ಧರಾಗಿದ್ದಾರೆ. 'ಹಠಯೋಗ ಪ್ರದೀಪಿಕೆಯ ನಾಥ ಸಿದ್ಧರ ಪಟ್ಟಿಯಲ್ಲಿ ಅಲ್ಲಮ ರೇವಣಸಿದ್ಧರ ಹೆಸರು ಸೇರಿದೆ. 'ನಾಥ ಪರಂಪರೆಯ ಆರ್ಯ ಪ್ರವರ್ತಕರೂ, ಪ್ರಧಾನ ಪುರಸ್ಕೃತರೂ ಮತ್ತು ನಾಮಾಂಕಿತ ಸತ್ಪುರುಷರು ಇವರೆಲ್ಲಾ ಉಗ್ರವಾದ ಇಂದ್ರಿಯ ನಿಗ್ರಹದಿಂದ ಅದ್ಭುತ ಭೌತಿಕ ವಿಜಯವನ್ನು ಸಂಪಾದಿಸಿದ್ದ ಸಿದ್ಧರೇ ಆಗಿದ್ದರು ಎಂಬುದು ಚರಿತ್ರೆಯಲ್ಲಿ ವ್ಯಕ್ತವಾದ ಪವಾಡಗಳಿಂದ ತಿಳಿದು ಬರುತ್ತದೆ"[೧] ವಚನಕಾರರ ಪೂರ್ವದಲ್ಲಿದ್ದ ರೇವಣಸಿದ್ಧನ (೧೦೪೨-೧೦೭೦) ಜನ್ಮಸ್ಥಳ ಕೊಲ್ಲಿಪಾಕಿ. ನಾಥಸಿದ್ಧರಿಗೂ, ರೇವಣ ಅಲ್ಲಮರೇ ಮುಂತಾದ ಶೈವ ಸಿದ್ಧರಿಗೂ ಸಂಬಂಧವಿದ್ದಿರಬೇಕು. ಇವರೆಲ್ಲರೂ ಹಿಂದೆ ನಾಥಸಿದ್ಧರೇ ಆಗಿದ್ದರೆಂದು ಕಪಟರಾಳ ಕೃಷ್ಣರಾವ್ ಅವರು ಅಭಿಪ್ರಾಯಪಡುತ್ತಾರೆ.[೨] ಒಟ್ಟಿನಲ್ಲಿ ೧೧ – ೧೨ನೇ ಶತಮಾನದಲ್ಲಿ ರೇವಣಸಿದ್ಧ – ಅಲ್ಲಮರಿಂದ ಕಾಣಿಸಿಕೊಳ್ಳುವ ನಾಥಸಿದ್ಧ ಪರಂಪರೆಯಲ್ಲಿ ರೇವಣಸಿದ್ಧರ ಶಿಷ್ಯ ಮರುಳಸಿದ್ಧರನ್ನು ಸಹ ಸಿದ್ಧ ಪರಂಪರೆಯಲ್ಲಿ ಕಾಣಬಹುದಾಗಿದೆ.

ರೇವಣಸಿದ್ಧರ ಶಿಷ್ಯರಾದ ಮರುಳಸಿದ್ಧರು ಸಿದ್ಧ ಪರಂಪರೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಏಕೆಂದರೆ ೧೨ನೇ ಶತಮಾನದ ಪ್ರಸಿದ್ಧ ಶಿವಶರಣ ಉಜ್ಜಯಿನಿಯ ಬಳಿ ಕಗ್ಗಲ್ಲುಪುರದ ಮರುಳಸಿದ್ಧ ದಲಿತರ ಮನೆಯಲ್ಲಿ ಹುಟ್ಟಿಬಂದರು. ಜಾತಿ ಶೃಂಖಲೆಯನ್ನು ಕಳಚಿ ಬಂದ ಮರುಳಸಿದ್ಧ ರೇವಣಸಿದ್ಧರನ್ನು ಸಂದರ್ಶಿಸಿ ಅವರ ಅನುಗ್ರಹ ಪಡೆದು ಶಿಷ್ಯನಾದುದರಿಂದ ರೇವಣಸಿದ್ಧರನ್ನು ಸಿದ್ಧ ಪರಂಪರೆಯಲ್ಲಿ ಕಾಣುವುದರಿಂದ ಮರುಳಸಿದ್ಧರನ್ನು ಸಹ ಅದೇ ಪರಂಪರೆಯಲ್ಲಿ ಕಾಣಬಹುದಾಗಿದೆ.

ಮರುಳಸಿದ್ಧ, ಮರುಳಸಿದ್ಧರು, ಮರುಳಾರಾಧ್ಯ, ಮರುಳಾಚಾರ್ಯ ಎಂಬ ಇತ್ಯಾದಿ ಹೆಸರುಗಳ ಪ್ರಸ್ತಾಪವು ಕರ್ನಾಟಕ ಚರಿತ್ರೆಯಲ್ಲಿ ಗುರುತಿಸಲ್ಪಡುತ್ತವೆ. ಆದರೆ ನಾವು ಇಲ್ಲಿ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕು ವ್ಯಾಪ್ತಿಯಲ್ಲಿರುವ ಉಜ್ಜಯಿನಿಯ ಸದ್ಧರ್ಮ ಪೀಠಸ್ಥರಾದ ಮರುಳಸಿದ್ಧರು ಯಾರು ? ಎಂಬುದನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುವುದು. ಆದರೆ

ಈಗ ನಾವು ಮರುಳಸಿದ್ಧ ಎಂಬ ಹೆಸರಿನ ಔಚಿತ್ಯವೇನು ? ಎಂಬುದನ್ನು ಅರ್ಥೈಸಬೇಕಾಗಿದೆ. ಕನ್ನಡದ ಕಿಟಲ್ ನಿಘಂಟುವಿನ ಶಬ್ಧಕೋಶದಲ್ಲಿ ತಿಳಿದು ಬರುವಂತೆ ಮರುಳಸಿದ್ಧ ಶಬ್ಧದ 'ಮರುಳ'ದ ಅರ್ಥವಿಶ್ಲೇಷಣೆಯು ಈ ರೀತಿ ಇದೆ 'ಮರುಳ' – Marul bewildered, mad foolish man a badly disposed man (ದುಃಶೀಲ) ಪರಪಿನ ನೀಳದ ಕಡೆಯಂಮರುಳಂತವೆ ನೋಡಲಾವಿದಮ್ವರತಳಂ ಕರಿದೆಮ್ಬುತ್ತಿರೆ ತನ್ನ ನೆರಳು ತಾ ಕಣ್ಣು ನರಳುವವ ಮರುಳನಲ್ಲವೆ ? ಮರುಳಗೆ ಇರುಳಿಲ್ಲ ಪಿತ್ತದವರೆ ನಿದ್ರೆಯಿಲ್ಲ ತರ್ಲೆ ಅಂದರೆ ಮರುಳತನ ಮಾಡುವವ ಹುಚ್ಚ ಎಂಬ ಅರ್ಥಗಳಿವೆ.[೩] ಮ.ಸು. ಕೃಷ್ಣ ಮೂರ್ತಿಯವರ 'ಸಿದ್ಧ ಸಾಹಿತ್ಯ'ದಲ್ಲಿ ಸಿದ್ಧರು ಯಾರು ? 'ಸಿದ್ಧ' ಶಬ್ದ–ಷಧು ಎಂದರೆ ಸಂರಾದ್ಧೌ ಸಿಧ್ಯತಿ ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಓದನಃ ಸಿದ್ಧಃ ಸಿದ್ಧಮನ್ನಂ ಪರಿತ್ಯಾಜ್ಯಭಿಷಾಮಟತಿ ದುರ್ಮತಿಃ ಸಿದ್ಧವಾದ ಅಂದರೆ ಯಶಸ್ಸನ್ನು ಸಾಧಿಸಿದವ ಎಂದಾರ್ಥವಾಗುತ್ತದೆ (ತಯಾರಾದ) ಅನ್ನವನ್ನು ಬಿಟ್ಟು ದುರ್ಮತಿ ತಿರುಪೆಗೆ ಹೊರಟ್ಟಿದ್ದಾನೆ[೪] ಎಂದರ್ಥ. ಹೀಗೆ ವಿಭಿನ್ನ ಅರ್ಥಗಳಲ್ಲಿ ಈ ಶಬ್ದರ್ಥವನ್ನು ವಿಶ್ಲೇಷಿಸಬಹುದಾಗಿದೆ. ಸಂಸ್ಕೃತದಲ್ಲಿ ಧಾತುಗಳಿಗೆ ಎರಡು ಅವಸ್ಥೆಗಳನ್ನು ಹೇಳಿದೆ. ಸಿದ್ಧಾವಸ್ಥೆ ಮತ್ತು ಸಾಧ್ಯಾವಸ್ಥೆಪಾಕ: ಮೋನಿಯರ್ ವಿಲಿಯಂಸ್ ಅವರು ತಮ್ಮ ನಿಘಂಟಿನಲ್ಲಿ ಸಿದ್ಧ ಎನ್ನುವುದಕ್ಕೆ proved substantiated demonstrated ಎಂದು ಅರ್ಥ ಹೇಳಿ ತಸ್ಮಾದಿನ್ದ್ರಿಯಂ ಪ್ರತ್ಯಕ್ಷ ಪ್ರಮಾಣ ಮಿತಿ ಸಿದ್ಧ ಎನ್ನುವುದರ ಬಗ್ಗೆ ಈ ಕೆಳಗಿನ ಅರ್ಥಗಳನ್ನು ಗಮನಿಸಬಹುದು.

೧) ಸಿದ್ಧಮ್ (proved) ಎಂದು ಉದಾಹರಣೆ ಕೊಟ್ಟಿದ್ದಾರೆ.

೨) ಸಿದ್ಧ : (Noun) a simidivine with eight supernatural faculties called siddhis.[೫]

ಹರಿಹರ ರಾಘವಾಂಕ ಮೊದಲಾದವರ ಕಾವ್ಯಗಳಲ್ಲಿ ಹಲವು ಸಿದ್ಧರ ಪ್ರಸಂಗಗಳು ಬರುತ್ತವೆ. ರೇವಣಸಿದ್ಧ, ಮರುಳಸಿದ್ಧ, ಸಿದ್ಧರಾಮ ಮೊದಲಾದವರು ಶೈವಸಿದ್ಧ ಪರಂಪರೆಗೆ ಸೇರಿದವರು.[೬]

೨.೨.೧. ದೇವಕವಿ ಕೃತ ಮರುಳಸಿದ್ಧ ಕಾವ್ಯ :

'ವೀರಶೈವಾಚಾರ್ಯ' ರಲ್ಲೊಬ್ಬರಾದ ಮರುಳಸಿದ್ಧರ ಜೀವನ ಚರಿತ್ರೆಯಿದು. ಕೃತಿ ವಾರ್ಧಕ ಷಟ್ಪದಿಯಲ್ಲಿದೆ. ಆರು ಸಂಧಿಗಳಿವೆ. ಇದಕ್ಕೆ 'ಸಿದ್ಧಲಿಂಗ ಚಾರಿತ್ರ' ಎಂದು ಹೆಸರುಂಟು 'ಗದ್ದುಗೆಯ ರಾಮಿತಂದೆಯು ಶರಣ ಸಂತತಿಗೆ ಉದ್ಧರಿಸಿ ಪೇಳ್ದ ಗುರುಬೋಧೆಯ ಮಹಾತ್ಮೆಯನು ಹೃದ್ಯದೊಳೆ

ನೆರೆಭಾವಿಸಿ ಬುದ್ಧಿಯಿಂ ಮನಚಿತ್ತಕರಣ ಕಳೆಯೊಳ್ತೀವೆ"[೭] 'ಗುರು ಬೋಧೆಯ ಮಹಾತ್ಮೆ" ಉಪಲಬ್ಧವಿಲ್ಲ. ಅವಿರಳ ಪರ ಬ್ರಹ್ಮ ಸಿದ್ಧಲಿಂಗನ ಕೃತಿಯ ನೊರೆದೆನೆಂದು ಕವಿ ಹೇಳುತ್ತಾನೆ. ಗ್ರಂಥವು ಶಾಲಿವಾಹನ ಶಕ ೧೫೪೯ನೆಯ ಸರ್ವಜಿತು ಸಂವತ್ಸರ ವೈಶಾಖ ಹುಣ್ಣಿಮೆ ಗುರುವಾರದ (೧೫೮೭ ನೇ ಮೇ) ಶುಭಯೋಗದಲ್ಲಿ ಮುಗಿದಿದೆ.[೮] ಕವಿಯ ಕಾಲಗಣನ ವಿಚಾರವಾಗಿ,ಪಚಿಡಿತ ಎಸ್.ಬಸಪ್ಪ, ಹೆಚ್.ದೇವೀರಪ್ಪರವರ ಸಂಪಾದಿತ ಕೃತಿಗಳಲ್ಲಿ ಕವಿಯಕಾಲ ಶಾಲಿವಾಹನ ಶಕ ೧೫೪೯ನೆಯ ಸರ್ವಜಿತು ಸಂವತ್ಸರ ವೈಶಾಖ ಹುಣ್ಣಿಮೆ ಗುರುವಾರದ (೧೫೮೨ ಎಂಬ ಶಕ ವರ್ಷದ ವ್ಯತ್ಯಾಸವಿರುವುದನ್ನು ವಿದ್ವಾಂಸರು ಪರಿಶೀಲಿಸಬೇಕಿತ್ತು)

ಎಸೆವಷ್ಟೆ ದಶವರ್ಣದರ್ಥಲಂಕಾರಸಸ ।

ಪೊಸ ಕಾವ್ಯ ಚದುರ ಲಕ್ಷಣ ಪ್ರಾಸ ಪದರೀತಿ ।

ವಿಷಮ ಸಮ ಗಣನೇಮವಸೆವ ವರ್ಣಂಗಳೊಳಗೆಸೆವ ಪ್ರಕಾರಂಗಳ ।

ಪಶುಪತಿ ಸ್ವಯಂಭು ಬಾಳ್ಗುಳಿಯ ಕಲಿದೇವನಿಂ ।

ತುಸುರಿದೊಲು ದೇವ ಪೇಳ್ವಂ ಪರನ ಕೃತಿರಸವ ।

-------------------------- ॥

ಎಂದಿರುವುದರಿಂದ ಕವಿಯ ಗುರುವು ಬಾಳ್ಗುಳಿಯ ಕಲಿದೇವನೆಂದೂ ಈ ಗ್ರಂಥವನ್ನು ಬರೆದಿರುವವನು ದೇವನೆಂದೂ ಗೊತ್ತಾಗುತ್ತದೆ.[೯]

ಕರ್ನಾಟಕ ಕವಿ ಚರಿತ್ರೆಯಲ್ಲಿ ಅನುಕ್ತವಾದ ಈ ಕಾವ್ಯದ ಕರ್ತೃ ದೇವಕವಿ ಈತನ ವಿಷಯವಾಗಿ ಕಾವ್ಯಗಳಿಂದಾಗಲಿ ಅನ್ಯತ್ರವಾಗಲಿ ಯಾವ ಸಂಗತಿಗಳೂ ತಿಳಿದು ಬಂದಿಲ್ಲ. ಈತನು ತನ್ನ, ಕಾವ್ಯ ರಚನಾ ಕಾಲವನ್ನು ಹೇಳಿಕೊಂಡಿದ್ದಾನೆ. ಕಾವ್ಯದ ಕರ್ತೃ ದೇವಸುತ ಈ ಕೃತಿಗೆ ಸಿದ್ಧಲಿಂಗ ಚರಿತ, ಮರುಳಸಿದ್ಧ ಚಾರಿತ್ರ ಎಂಬ ಪರ್ಯಾಯ ನಾಮಗಳಿರುವುದು ಕಂಡು ಬರುತ್ತದೆ.[೧೦]

ಗ್ರಂಥದ ಆರಂಭದಲ್ಲಿ ಶ್ರೀ ಗಿರಿಯ ಮಲ್ಲೇಶ, ವಿಘ್ನೇಶ, ವೀರಭದ್ರ, ಷಣ್ಮುಖ ಇವರ ಸ್ತುತಿ ಇದೆ. "ಸುಜ್ಞಾನ ಸನ್ಮತಿಯನಮೃತಗಳೆವೆರೆದ ಸರ್ವಜ್ಞ ಸಮತೆಯ ಕ್ಷಮೆದಯೆ ಶಾಂತಿಯನು ಕೊಡುವ" ನಿರುಪಮ ಮೂರ್ತಿ ಪರಶಿವನ ಅನುಜ್ಞೆಯನ್ನು ಪಡೆದು ಕವಿ ಕಾವ್ಯಾರಂಭ ಮಾಡಿದ್ದಾನೆ.

ಹರ ಭಕ್ತರು, ಕಲ್ಯಾಣದ ಶರಣರು, ಅಲ್ಲಮ, ಅಜಗಣ್ಣ, ಹುಲ್ಲು ಮಾರುವ ಶರಣ, ಬಾಹೂರ ಬೊಮ್ಮಣ್ಣ, ಕಲಕೇತಯ್ಯ, ಬಿಜ್ಜಯ್ಯ, ಗುಂಡ ಬ್ರಹ್ಮಯ್ಯ ಹೆಂಡದ ಮಾರಿತಂದೆಗಳು, ಪಂಡಿತಾರಾಧ್ಯ, ಅಮರಗಂಡದ ಮಲ್ಲಿನಾಥ ಇವರೇ ಮೊದಲಾದ ಶಿವಶರಣರ ಚರಣಕಮಲ ಪರಾಗದಲ್ಲಿ ಕವಿಯ ಮನೋಭೃಂಗವು ತಲ್ಲೀನವಾಗುತ್ತದೆ. ಪೂರ್ವ ಕವಿಗಳಾದ ಹರಿಹರ, ಮಲುಹಣ, ಬಾಣ, ಉದ್ಭಟ, ಕೆರೆಯಪದ್ಮರಸರನ್ನು ಕವಿಯು ಹೆಸರಿಸಿದ್ದಾನೆ.[೧೧] ಈತನ ತರುವಾಯದ ಕವಿಗಳಾರೂ ಈತನನ್ನು ಹೆಸರಿಸಿಲ್ಲ. ಕವಿ ತನ್ನ ಈ ಧೋರಣೆಗಳಲ್ಲಿ ಹರಿಹರ ರಾಘವಾಂಕ, ಚಾಮರಸರ ಪ್ರಭಾವವನ್ನು ತೋರಿದ್ದಾನೆ, ವರ್ಣನೆಗಳಲ್ಲಿಯೂ ದೇವಸುತನ ಕೃತಿಯಲ್ಲಿ ಪೂರ್ವಕವಿ ಪ್ರಭಾವವನ್ನು ಗುರುತಿಸಬಹುದು.

ಗೋಪಗೋಪನು ಗೋಪನತಚರಣನದ್ವಯನು
ಗೋಪಗೋಪ ಕಳಾಪಗೋಪನೆಲೆಯಿಂದೆಸೆವ
ಗೋಪಗೋಪ ಸಹಸ್ರ ಕಿರಣಾಂಶು ಕಳೆವರ ನಿರೂಪ ನಿರವಯ ನಿರುಪಮ
ಗೋಪವಾಹನನೇ ಗೋಪೂಜಿತ ಸರೋಜ ಪದ
ಗೋಪಗೋಪ ಸುರಕ್ಷ ಗೋಪಸುರರ ಮೃತಕರ
ರೂಪ ಸಿದ್ಧೇಶ್ವರನೊಲಿದೆಮ್ಮ ರಕ್ಷಿಸು ತ್ರಿವಿಧತಾಪಹರ ಲಿಂಗಶರಣು[೧೨] ||೩|| (ಮೊದಲನೇ ಸಂಧಿ)

ಹೀಗೆಯೇ ಹರಿಶ್ಚಂದ್ರ ಕಾವ್ಯದಿಂದ, ಭೀಮ ಕವಿಯ ಬಸವ ಪುರಾಣದಿಂದ, ಚಾಮರಸನ ಪ್ರಭುಲಿಂಗಲೀಲೆಯಿಂದ ಮತ್ತು ಕೆಲವು ಪದ್ಯಗಳನ್ನು ಹೋಲಿಸಿ ನೋಡಿದರೆ ದೇವಸುತ ಇವರೆಲ್ಲರ ಕೃತಿಗಳಿಂದ ಪ್ರಭಾವಿತನಾಗಿರುವುದನ್ನು ಕಾಣಬಹುದು.[೧೩] ಈ ಮರುಳಸಿದ್ಧ ಕಾವ್ಯ ಇತಿಹಾಸ ದೃಷ್ಟಿಯಿಂದಲೂ ಮುಖ್ಯವಾದುದು. ಏಕೆಂದರೆ ಇದರಲ್ಲಿ ಹಲವಾರು ಶಿವಶರಣರ ಹೆಸರುಗಳು, ೬೩ ಪುರಾತನರ ಹೆಸರುಗಳು ಬಂದಿವೆ. ಅಲ್ಲದೆ ದೇವಕವಿ ತನ್ನ ಕಾವ್ಯದಲ್ಲಿ ರಾಮಿದೇವನಿಂದ ಷಡುಸ್ಥಳದ ಮಹಿಮೆಯನ್ನು ವರ್ಣಿಸಿದ್ದಾನೆ.

ಗದ್ದುಗೆಯ ರಾಮಿತಂದೆಯು ತನ್ನ ಗುರುವಾದ ಮರುಳಸಿದ್ಧನ ಬಗ್ಗೆ "ಗುರು ಬೋಧೆ" ಎಂಬ ಗ್ರಂಥವನ್ನು ಬರೆದಿದ್ದು ಅದರ ಆಧಾರದ ಮೇಲೆ ಇತಿಹಾಸ, ಸ್ಥಳ ಪುರಾಣ ಮತ್ತು ದಂತ ಕಥೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ದೇವಕವಿಯು ಬಾಳ್ಗುಳಿಯ ಕಲಿದೇವನ ಕೃಪಾಬಲದಿಂದ ಕನ್ನಡ

ಛಂದಸ್ಸಿನಲ್ಲಿ "ಸಿದ್ಧಲಿಂಗ ಚಾರಿತ್ರ"ವೆಂಬ ಈ ಕೃತಿಯನ್ನು ರಚಿಸಿದ್ದಾನೆ.

ಸಿದ್ಧಲಿಂಗನ ಚರಿತ್ರವ ಪೇಳ್ವೆನಿಂತಿದನು

ಗದ್ದುಗೆಯ ರಾಮಿತಂದೆಯು ಶರಣ ಸಂತತಿಗೆ

ಉದ್ಧರಿಸಿ ಪೇಳ್ದ ಗುರು ಬೋಧೆಯ ಮಹಾತ್ಮೆಯನು ಹೃದ್ಯದೊಳ್‌ನೆರೆಭಾವಿಸಿ ।

ಬುದ್ಧಿಯಿಂ ಮನಚಿತ್ರ ಕರಣ ಕಳೆಯೋಳ್ತೀವಿ

ಮದ್ದುಮಂತ್ರವ ಬಲ್ಲ ಸಿದ್ಧಸಾಧಕರ ನೆರೆ

ಗೆದ್ದು ಕೊಲ್ಲಾಪುರದ ಮಾಯನಾಸಿಕವರಿದ ಸಿದ್ಧಲಿಂಗನ ಕೃತಿಯನು[೧೪] ॥೧೩॥(ಮೊದಲನೇ ಸಂಧಿ)

ಕವಿಯು ಆರಂಭದಲ್ಲಿ ಕೈಲಾಸಪುರ ಮಧ್ಯದಲ್ಲಿ ಗಿರಿಜಾಪತಿಯ ಅರಮನೆ ಇದ್ದಿತು. ಹೆಬ್ಬಾಗಿಲನ್ನು ದಾಟಿ ಒಳಹೋದರೆ ಶಶಿ ಜೂಟನ ಸಭಾಗಾರ ಸಂಭ್ರಮದಿಂದ ಕೂಡಿದ ಶಿವಗಂಗೆಯನ್ನು ಧರಿಸಿ ಚಂದ್ರನನ್ನು ಮುಡಿದು ಗಿರಿಜಾ ಸಮೇತನಾಗಿ ಗುಹ ಗಣಪರ ಸಮೂಹದಲ್ಲಿದ್ದನು. ಕವಿಯು ಇಲ್ಲಿ ಕೈಲಾಸದ ವರ್ಣನೆಯನ್ನು ವರ್ಣಿಸಿರುವನು. ಕವಿಯು ಅಲ್ಲಿ ನದಿ, ಸಸ್ಯ, ಪ್ರಾಣಿ, ಪಕ್ಷಿಗಳ ವರ್ಣನೆಯೊಂದಿಗೆ ಕೈಲಾಸದ ವೈಭವದ ವರ್ಣನೆಯನ್ನು ಬಹು ಸೊಗಸಾಗಿ ವರ್ಣಿಸಿದ್ದಾನೆ. ನಮ್ಮ ದೇಶದಲ್ಲಿ ಯಾವುದೇ ಕ್ಷೇತ್ರದ ನಾಯಕನಾಗಿರಲಿ ಶಿವನ ನರ್ತನದೊಂದಿಗೆ ಕಥೆ ಆರಂಭವಾಗುವುದು ವಾಡಿಕೆಯಾಗಿದೆ. ಮರುಳಸಿದ್ಧರ ಕಥೆ ಆರಂಭವಾಗುವುದು ಇದೇ ರೀತಿಯಾಗಿ ಶ್ರೀಗಿರಿಯ ತಪೋಭೂಮಿಯಲ್ಲಿ ಮುನಿ ಕುಲಕಮಲದಿನಪವೆಂದು ಪೆಸರ್ವೆತ್ತ ಮುನಿಶ್ರೇಷ್ಠಶಿಲಾದ. ಅವನ ಪತ್ನಿ ಸುಪ್ರಭೆ. ಸುಪ್ರಭೆಯು ಆದರ್ಶ ಧರ್ಮಪತ್ನಿ. ಪತಿಯ ಸಕಲಕಾರ್ಯಗಳಲ್ಲಿಯೂ ನೆರವಾಗುತ್ತಿದ್ದಳು. ಆದರೆ ಒಂದು ದಿನ ಆಕಸ್ಮಾತ್ ಒಂದು ಅಚಾತುರ್ಯ ನಡೆದು ಮುನಿಗೆ ಕೋಪ ಬರುವುದು ಎಲೆ ನೀರೆ, ಹರಪೂಜೆಯಂ ಮಾಳ್ಪ ಸಮಯದೊಳು

ಕಳೆಯಳಿದು ಕರಮಂಜಿಮಾಶ್ಬರೇನೀನೀಗ

ಹೊಲೆಯಾಗಿ ಹೊಲೆ ಜನ್ಮದಲಿ ಜನಿಸು ಹೋಗೆಂದು ಚಲಿತ ಶಾಪವನೀಯಲು"

ಆ ನೀರೆ ಪಶ್ಚಾತ್ತಾಪಪಟ್ಟು ಪತಿಯಲ್ಲಿ ಕ್ಷಮೆಯಾಚನೆ ಮಾಡಿ "ಶಾಪ ಪರಿಪಡುವುದೆಂತು" ತಿಳಿಸಬೇಕು ಎಂದು ಬೇಡಿಕೊಳ್ಳುವಳು. ಆಗ ಮುನಿಯು ಜನಪದಕ್ಕಧಿಪ ಕಗ್ಗಲ್ಲ ಪ್ರಭು.

"ಬಾಚಣನ ಭೃತ್ಯನೆಂದೆಪ ಕುಲಹೀನ ನೋರ್ವ ಅನಘ"

ನೀನವನಾತ್ಮದೊಳು ಜನನವಾಗಲು ಘನಮಹಿಮ ಪರಶಿವನು ನಿನ್ನ ತನುಮನ ಕೊನೆಯೊಳುದಿಸುವನು. ಅಲ್ಲದೆ ಭೃತ್ಯನೆಂಬ ನನ್ನ ಶಿಷ್ಯನು ಗುರು ವಿರೋಧಗೈದುದರಿಂದ ನನ್ನಿಂದ ಶಿಕ್ಷಿಸಲ್ಪಟ್ಟು ಪ್ರಭು ಬಾಚಣನ ಭೃತ್ಯ ಕೂಗಿಮಾರ (ಕೂಚಿ ಮಾರ) ನೆಂಬ ಹೆಸರಿನಿಂದ ಜನಿಸಿದ್ದಾನೆ. ಅವನಿಗೆ ನೀನು ಸತಿಯಾಗುವೆಯೆಂದು ಹೇಳಿ ಕಳುಹಿಸುವನು.[೧೫] ಅಂದರೆ ರಜಸ್ವಲೆಯಾದ ಸತಿಯನ್ನು ಶಾಪವಿಮೋಚನೆಗಾಗಿ ಭೂಲೋಕದಲ್ಲಿ ಕಗ್ಗಲ್ಲುಪುರದೊಳಗೆ ಮಾದಿಗರ ಮನೆಯಲ್ಲಿ ಜನಿಸಿ ಶಾಪ ಪರಿಹಾರ ಮಾಡಿಕೊಳ್ಳಬೇಕೆಂದು ಶಿಲಾದ ಮುನಿ ಶಾಪವನಿತ್ತನು. ಹೀಗೆ ಮಹಾಪುರುಷರು ಸಂತರ ಶರಣರು ಭೂಲೋಕದಲ್ಲಿ ಹುಟ್ಟಿ ಬರುವ ವರ್ಣನೆಯ ಪೌರಣಿಕ ಕಥೆಗಳು ಹೆಣೆಯಲ್ಪಟ್ಟಿವೆ. ಭೀಮಕವಿಯ 'ಬಸವಪುರಾಣ'ದ ಪ್ರಕಾರ ಎಂಟು ನೂರು ವರ್ಷಗಳಿಗೂ ಹಿಂದೆ ಶಿವನು ಮೊದಲು ರೇಣುಕನನ್ನು ಬೇದ ಬಳಿಕ ವೃಷಭನನ್ನು ಕರೆದು ನೀವಿಬ್ಬರು ಜಾತಿ ಭೇದ ಮುಕ್ತವಾದ ನಿರ್ಮಲ ಶಿವಭಕ್ತಿಯಿಂದ ಬದುಕಿ ಜನತೆಯ ಕಷ್ಟಗಳಿಗೆ ಸ್ಪಂದಿಸಿ ಶಿವಧರ್ಮವನ್ನು ಪ್ರಸಾರ ಮಾಡಿ ಬನ್ನಿರೆಂದು ನಿರ್ದೇಶನ ಮಾಡಿದ್ದರಿಂದ ಒಬ್ಬನು ರೇವಣರೆಂದು, ಇನ್ನೊಬ್ಬನು ಬಸವಣ್ಣನವರೆಂದು ಈ ಮಾನವ ಲೋಕದಲ್ಲಿ ಎಲ್ಲರಂತೆ ಸಹಜವಾಗಿ ಜನಿಸಿದರು. ರೇವಣಸಿದ್ದರೂ ಬಸವಣ್ಣನವರೂ ಹನ್ನೆರಡನೆಯ ಶತಮಾನದಲ್ಲಿ ತಮ್ಮ ಸಾರ್ಥಕ ಜೀವನವನ್ನು ನಡೆಯಿಸಿ ಕೈಲಾಸಕ್ಕೆ ನಡೆದರು. ಬಸವ, ರೇವಣರು ಮೂಲತಃ ಕೈಲಾಸದ ವೃಷಭ ಮತ್ತು ರೇಣುಕರೆಂಬುದು ಶ್ರದ್ಧಾ ಮೂಲವಾದ ಕಲ್ಪನೆ.[೧೬]

ಇತ್ತ ಪರಶಿವನ ಸಭೆಯಲ್ಲಿ ಭೃಂಗಿಯ ನರ್ತನ, ಭೃಂಗಿಯಿಂದ ಶಿವನ ಗುಣಗಾನ 'ಶಿವನನ್ನು ಮಾಯಾಕೋಲಾಹಲನೆಂಬುದು ಹುಸಿ, ಸಕಲ ಸಂಪತ್ತು ನನ್ನಿಂದ; ಈಶನ ಉಸಿರು ನಾನು; ಅವನು ನನ್ನನ್ನು ಬಿಟ್ಟು ಒಂದು ಗಳಿಗೆಯೂ ಇರಲಾರನು ನಾನಿಲ್ಲದಾತನಿಲ್ಲ, ಅನೇಕ ಸ್ಥಳಗಳಲ್ಲಿ ನಾನಾ ನಾಮಗಳಿಂದ ಮೆರೆಯುತ್ತಿದ್ದೇನೆ. ನನ್ನ ಅಪ್ಪಣೆಯಿಲ್ಲದೆ ಒಂದು ಹುಲ್ಲು ಕಡ್ಡಿಯೂ ಅಲುಗಲಾರದು. ಮಾಯಾಕೋಲಾಹಲನೆಂದು ಹೊಗಳುವುದು ನನಗೆ ಸಹಿಸದು" ಎಂದು ಗಿರಿಜೆ ಸಿಡುಕುವಳು, ಪರಶಿವನು ಅವಳನ್ನು ನೋಡಿ ನಗುತ್ತಾನೆ. ಗಿರಿಜೆ ಇನ್ನೂ ಉಗ್ರವಾಗುತ್ತಾಳೆ. ಶಿವನು ಅವಳ ಸ್ಥಿತಿಯನ್ನು ನೋಡಿ ಸಹನೆಯಿಂದ ಸಮಾಧಾನಪಡಿಸುತ್ತಾನೆ. ಆದರೂ ಪಾರ್ವತಿಗೆ ತನ್ನ ಮಹಿಮಾತಿಶಯಗಳನ್ನು ತೋರಿಸಿ ಕೊಡಲಿಚ್ಛಿಸಿ ಆಕೆಯನ್ನು ಕುರಿತು ಕೊಲ್ಲಾಪುರದ ಕರಟನ ಉದರದಲ್ಲಿ ಜನಿಸು, ನಾನು ಬಂದು ನಿನ್ನ ಮದವನ್ನು ಮುರಿಯುತ್ತೇನೆಂದು ಹೇಳುವನು, ಆಗ ಗಿರಿಜೆ ಧರೆಗಿಳಿಯುವಳು.

ಆದಿನಾಥ, ಗೋರಕಸಿದ್ಧ, ಮೀನನಾಥ, ಸೌರಗ, ವಿರೂಪಾಕ್ಷ ಮುಂತಾದ ಸಿದ್ಧರಿಗೆ ನೆಲೆವೀಡಾಗಿದ್ದ ಕೊಲ್ಲಾಪುರದ ರಾಜ ಕರಟಾಸುರ, ಪಾಪವೇ ಮೂರ್ತಿಗೊಂಡಂತಿದ್ದ ಆ ಕರಟನ ಉದರದಲ್ಲಿ ಜನಿಸುವಳು ಮಾಯೆ. ತನ್ನ ರೂಪಲಾವಣ್ಯಗಳಿಂದ ಜಗವನ್ನೇ ಬೆರಗುಗೊಳಿಸುವಳು ಎಂತಹ ಯೋಗಿಗಳನ್ನೂ ಮರುಳು ಮಾಡುವಂತಿತ್ತು ಅವಳ ಸೌಂದರ್ಯ. ಸಾಲದುದಕ್ಕೆ ಅವಳಿಗೆ "ಯುವರಾಜವಂ ಪಟ್ಟ" ಬೇರೆ! ಮಾಯೆಯ ದರ್ಪಕ್ಕೆ ಮೇರೆಯಿಲ್ಲದಂತಾಗುವುದು.

❖ **ಹೊಲೆಯರ ಕುಲದಲ್ಲಿ ಜನ್ಮ ಪಡೆಯುವುದು :**

ಶ್ರೀಗಿರಿಯ ತಪೋಭೂಮಿಯಲ್ಲಿ ಮುನಿ ಕುಲ ಕಮಲದಿನಪನೆಂದು ಪೆಸರ್ವೆತ್ತ ಮುನಿಶ್ರೇಷ್ಠ ಶಿಲಾದನ ಪತ್ನಿ ಸುಪ್ರಭೆಯು ಆದರ್ಶ ಪತಿ–ಪತ್ನಿಯ ಪತಿಯ ಸಕಲಕಾರ್ಯಗಳಲ್ಲಿಯೂ ನೆರವಾಗುತ್ತಿದ್ದಳು. ಆದರೆ ಒಂದು ದಿನ ಆಕೆ ಶಿವನ ಪೂಜೆಗೈಯುತ್ತಿರುವಾಗ ಆಕಸ್ಮಾತ್ ರಜಸ್ವಲೆಯಾಗಲು ಅದನ್ನು ಅವಳ ಮುಖಭಾವದಿಂದರಿತ ಮುನಿಗೆ ಮುನಿಸೇರುವುದು "ಎಲೆ ನೀರೆ ಹರಪೂಜೆಯಂ ಮಾಳ್ಪ ಸಮಯದೊಳು ಕಳೆಯಳಿದು ಕರಮಾಜಿಮಾಳ್ವರ ? ನೀನೀಗ ಹೊಲೆಯಾಗಿ ಹೊಲೆ ಜನ್ಮದಲಿ ಜನಿಸು ಹೋಗೆಂದ ಚಲಿತ ಶಾಪವನೀಯಲು" ಆ ನೀರೆ ಪಶ್ಚಾತ್ತಪ ಪಟ್ಟು ಪತಿಯಲ್ಲಿ ಕ್ಷಮೆಯಾಚನೆ ಮಾಡಿ "ಶಾಪ ಪರಿಪಡುವುದೆಂತು" ತಿಳಿಸಬೇಕು ಎಂದು ಬೇಡಿಕೊಳ್ಳುವಳು.

ಆದಿಯೊಳು ಶಿಲಾದಮುನಿ ವೃಷಭೇಶ್ವರನು
ಭೇದಮಿಲ್ಲದೆ ಸುತನುಮಾದ ಕಾರಣದಿಂ ಶಿ
ಲಾದಮುನಿಪತಿಯ ಸತಿ ಸುಪ್ರಭೆಯ ಹೃದಯದೊಳಗುದಿದೆಪೆನನನಲು
ಆ ದೇವಿ ಬಂದು ಕಗ್ಗಲ್ಲ ಪುರವರದೊಳಗೆ
ಮಾದಿಗರ ಜನ್ಮವಾದವರ್ಗೆ ಸತಿಯೆನಿಸಿರಲು
ಭೇದವಿಲ್ಲದವರಮನದನುಭವದೊಳಿಂತುವೇದಿಸುವೆಮೆನುತಮಿರಲು ।

॥ ೫೧ ॥ (ಎರಡನೆಯ ಸಂಧಿ)

ಕಗ್ಗಲ್ಲಪುರದ ಗೌಡನ ಭೃತ್ಯನೆಂದೆನಿಪ
ನುಗ್ಗು ದಾನ್ವರಗಂಡ ನೂರ್ದ್ವಕಾಲನು ಅಧಮ
ಭರ್ಗನ ಮನೋರಥನ ಭಾವವಳವಟ್ಟಿರಲು ಹೆಗ್ಗಡೆಯ ಕುಲಜಗತನು ।

ಹಗ್ಗಹುರಿನೇಣು ಮಿಣಿಪಾದುಕೆಯ ಮಾಡುತಿರ

ಲೊರ್ಗುಣದೊಲೈತಂದು ಮರುಳಸಿದ್ಧೇಶ್ವರನು

ಜಜ್ಜುಗಂಥೆಯು ಭಾರಿದಂಡದೊಡನೈತಂದು ನಿರ್ಗಮನ ನಿತನಾಗಿ

॥ ೫೨ ॥ (ಎರಡನೆಯ ಸಂಧಿ)

ಪಾರ್ವತಿಗೆ ಬ್ರಹ್ಮಾಂಡವನ್ನೇ ಅಲ್ಲೋಲ ಕಲ್ಲೋಲ ಮಾಡುವ ಶಕ್ತಿಯಿದೆಯೆಂಬುದು ಪರಮೇಶ್ವರನಿಗೆ ಗೊತ್ತು. ಆದುದರಿಂದ ಒಬ್ಬ ಚರಲಿಂಗ ಮೂರ್ತಿಯನ್ನು ಕರೆದು ಭುವಿಯಲ್ಲಿ ಅವತರಿಸಿ 'ಮಾಯೆಯನಿರಿ' ಎಂದು ಬೆಸಸಿ ತಾನೇ ರೇವಣ್ಣನಾಗಿ ಬಂದು ನೆರವಾಗುವೆನೆಂದು ಅಭಯವಿತ್ತು ಹರಸಿ ಅವನನ್ನು ಭೂಲೋಕಕ್ಕೆ ಕಳುಹಿಸುವನು. ಚರಲಿಂಗಮೂರ್ತಿಯೊಬ್ಬ ಬಾಚಣನ ಭೃತ್ಯ ಕೂಗಿಮಾರನೆಡೆಗೆ ಬಂದು "ರಾಚಮಲ್ಲಣನ ಸುಯಾತ್ರೆ ಬರುತಿದೆ, ಮುಂದೆ ಭೂ ಚಕ್ರದೊಳು ಚರಿಪ ಮನಸೊದಗುತಿದೆ", ಶ್ರೀಗಿರಿಗೆ ಯಾತ್ರೆ ಹೋಗಬೇಕು; ನನಗೆ ಮಾನವರ ಚರ್ಮದಿಂದ ಮಾಡಿದ ಪಾದುಕೆಯನ್ನು ಹೊಲಿದುಕೊಡು ಎಂದು ಅಪ್ಪಣೆಯೀಯುವನು.[೧೭] ಕೂಗಿಮಾರನು ಒಪ್ಪಿಕೊಂಡು ಮನೆಗೆ ಬರುವನು. ಮಾನವರ ಚರ್ಮವನ್ನು ಎಲ್ಲಿಂದ ತರುವುದು ? ಎಂದು ಚಿಂತೆ ಮಾಡುತ್ತಿರುವ ಕೂಗಿಮಾರನನ್ನು ನೋಡಿ ಅವನ ಸಹಧರ್ಮಿಣಿಯು ಕಾರಣವನ್ನು ಕೇಳುವಳು ಕೂಗಿಮಾರ ಕಾರಣವನ್ನು ವಿವರಿಸುವನು.

"ಯುವತಿ ನುಡಿದಳು ತನ್ನ ಮೊಲೆಗಳಂ ಕುಯ್ದೀಗ ಶಿವಗೆ ಪಾದುಕೆಯ ಮಾಡೆಂದು"

ಆ ವೀರ ಶಿವಭಕ್ತೆಯು ತನ್ನ ಸ್ತನಗಳನ್ನೇ ಕೊಯ್ದು ಕೊಡುವಳು, ಶಿವನ ಪಾದುಕೆಯ ಚರ್ಮಕ್ಕೆ ಪಾದುಕೆಗಳು ಸಿದ್ಧವಾಗಲು, ಗುರು ಬಂದು ನೋಡಿ, ಸತಿಪತಿಗಳ ಅಚಲ ಭಕ್ತಿಗೆ ಮೆಚ್ಚಿ ಸಂತುಷ್ಟನಾಗಿ, ನಿಮಗೆ ಬೇಕಾದ ವರಗಳನ್ನು ಬೇಡಿರಿ ಎನ್ನುವನು. ಆ ದಂಪತಿಗಳು ಪುತ್ರಸಂತಾನವನ್ನು ಕೇಳುವರು. ಗುರುವು ಪುತ್ರ ಸಂತಾನವಾದೊಡನೆಯೇ ನಿಮ್ಮೀರ್ವರ ಮರಣ ಸಂಭವಿಸುವುದು ; ಬೇರೆ ವರವನ್ನು ಕೇಳಿರಿ ಎಂದು ಎಚ್ಚರಿಸುವನು. ಅವರು, ಮರಣ ಬಂದರೂ ಬರಲಿ, ನಮಗೆ ನೀನೇ ಸುತನಾಗಿ ಜನಿಸೆನಲು "ತಥಾಸ್ತು" ಎಂದು ಗುರುವು ಮರೆಯಾಗುತ್ತಾನೆ.

ಆ ನುಡಿಯ ಕೇಳುತರೇನು ಬಂದರು ಬರಲಿ

ನೀನೆ ಮಗನೆಮಗಾಗೆ ಮೇಲೆ ಮರಣಂಬರಲಿ

ಹೀನ ಮನಸಿಲ್ಲ ನಿಮ್ಮಾಣೆ ಪುನರಪಿಯಾಣೆ ಮಾನವರ ಮದವಳಿಯಲಿ ।

ಏನಾದಡೆಂಬ ಮನಸಿನ ಕಲೆಯನುಳಿದಾಗ

ನಾನೆ ಮಗನಹೆನೆಂಬ ಘನಶಂಕೆ ವಿಡಿದಾಗ

ಭಾನು ತೇಜಸನವರ ಬೀಳ್ಕೊಟ್ಟು ಗಮನಿಸಿದನೇನೆಮಬೆನವರಿತ್ತಲು[೧೮] ॥೫೯॥ (ಎರಡನೇ ಸಂಧಿ)

ಒಳ್ಳೆಯ ಗಳಿಗೆಯಲ್ಲಿ ಮಗುವು ಜನಿಸುವುದು ಸುಪ್ರಭೆ ಎಲ್ಲರ ಕಣ್ಣಿಗೂ ಬೀಳುವಡೆ ಮಗುವನ್ನಿರಿಸಿ ಮರಳಿ ಶಿಲಾದನೆಡೆಗೆ ಹೋಗುತ್ತಾಳೆ. ಕೂಗಿಮಾರನ ಮರಣ.ಅನಂತರ ಇಪ್ಪತ್ತೊಂದು ದಿವಸ ಕಳೆದವು. ಬಾಚನಗೌಡನ ಮನೆಯ ಕೊಟ್ಟಿಗೆಯಲ್ಲಿ ಮಗುವು ಹೇಗೋ ಕಣ್ಣಿಗೆ ಬಿದ್ದ ಮಗುವನ್ನು ತೆಗೆದುಕೊಂಡು ಹೋಗಿ ಹೆಂಡತಿ ಮಲ್ಲಮ್ಮನಿಗೆ ಕೊಡುತ್ತಾನೆ. ಆಕೆಗೆ ಆ ಮಗುವು ನಿಜವಾದ ಕೂಸೋ, ಭೂತಾದಿಗಳ ಚೇಷ್ಟೆಯೋ ಎಂಬ ಸಂಶಯ. ಆದುದರಿಂದ ಮಗುವನ್ನು ಮನೆಯ ಮುಂದೆಸೆಯ ನಿಟ್ಟಿನಲ್ಲೇ ಬಿಡುತ್ತಾಳೆ, ಆದರೆ ನಿಶಾವಸಾನ ಸಮಯದಲ್ಲಿ ಅವರಿಗೊಂದು ದಿವ್ಯ ದೃಶ್ಯವು ಕಣ್ಣಿಗೆ ಬೀಳುವುದು. ಪರಶಿವನ ಊಳಿಗದವರೆಲ್ಲಾ ಬಂದು ಆ ಶಿಶುವನ್ನು ಓಲೈಸುತ್ತಿರುವುದು ಆ ದಂಪತಿಗಳನ್ನು ಸ್ತಂಭೀಭೂತರನ್ನಾಗಿ ಮಾಡುತ್ತದೆ. ಆಮೇಲೆ ಮಗುವು ಆ ದಂಪತಿಗಳ ಮಡಿಲಿನಲ್ಲಿ ಬೆಳೆಯುತ್ತದೆ.

ಇನಿತಾಹ ತರುಣನಂ ಕಂಡು ಅಚ್ಚರಿ ಬಡುತೆ

ತನು ಕರಗದುಂ ಬಡವನಾಗದುಂ ಎನುತಾಗ

ಮನೆಗೆ ಕೊಂಡೊಯ್ದು ಬಾಚಣ್ಣನಾ ತರುಣರತ್ನವಾವನಿತೆಗೀಯಲಾಗ ।

ವನಿತೆ ಮಲ್ಲಮ್ಮ ಮನವೊಲಿದು ಹರುಷದೊಳಾಗ

ತನುಜನೆಲ್ಲಿಹನೆಂದು ಘನಶಂಕೆವಿಡಿದಾಗ

ಮನೆಯ ಮುಂದಿಹ ಭವನದೊಳಗಿರಿಸಿಯನೆ ಕೇಳಿ

ಅನುಪಮನ ಇರಿಸುತಾಗ[೧೯] ॥೫॥ (ಮೂರನೇ ಸಂಧಿ)

ಶಿವಶಿಶುವು ಬಾಚನಗೌಡನ ಮನೆಯನ್ನು ಹೊಕ್ಕದ್ದು ಸರ್ವಸಂಪತ್ತೇ ಹೊಕ್ಕಂತಾಯಿತು. ದನಕರುಗಳ ಸಂಖ್ಯೆ ಮಿತಿ ಮೀರಿತು. ಬೆಳೆಯು ಒಂದಕ್ಕೆ ಹತ್ತರಷ್ಟಾಯಿತು. ಗೌಡನ ನೆಂಟರಿಷ್ಟರು ಬಂದು ಆ ತೇಜೋಮೂರ್ತಿಯೂ, ಶಿವಕಳೆಯುಳ್ಳವನೂ ಆದ ಮಗುವನ್ನು ನೋಡಿ ಆನಂದಪಟ್ಟು

"ಬಲವಂತ"ನೆಂದು ಹೆಸರಿಟ್ಟು ಹೋಗುವರು.

ನೆಲದೊಳೊಂದೊಂದು ಹೋಟೆಯೊಳೊಂದು ಬೆಳವುತಿರೆ

ಫಲಸದಮ ಬಂದು ಗೌಡಂಗೆ ಸಿದ್ಧಿಸುತಿರಲು

ಬಲವಂತನೆಂದು ತರುಣನ ಸಾಕುತಾಮೇಲೆ ಪಲವುದಿವಸವ ಕಳೆಯುತ ॥೧೫॥

(ಮೂರನೇ ಸಂಧಿ)

❖ **ಕರುಕಾಯುವ ವೃತ್ತಿ**

ಕರುವ ಕಾಯೆಂಬುದನು ತರುಣನಾಲಿಸಿಕೇಳಿ

ಕರಿಯ ಕಂಬಳಿ ಕಲ್ಲಿ ಬುತ್ತಿ ಕೋಲ್ವಿಡಿದಾಗ

ಹೊರಗೆ ಬಂದಾ ಬಾಚಿಗೌಡನೊಳು ನುಡಿದನು ಕರುಗಳಂಕೂಡಿಸೆನುತ ।

ತುರುಮಂದೆಯೊಳಗಿರ್ದ್ದ ಕರುವ ಕೂಡಿಸಿಗೌಡ

ನಿರದೆ ಸಂತರಿನಿಸಿ ಕಳುಹಲು ಮುಂದೆ ಮರುಳನಂ

ಕರುಗಾಯ್ವನೆಂಬ ಪೆಸರಂ ಸೂಚಿಸುತ ತಾನು ನೆರೆದ ಬಾಲರೊಳ್ಕೊಡಲು[20]

॥ ೧೭ ॥ (ಮೂರನೇ ಸಂಧಿ)

ಮಗುವು ಎಂಟು ವರುಷದವನಾದಾಗ ನೆರೆಯ ಮಕ್ಕಳೊಂದಿಗೆ ಕರುಗಳನ್ನು (ತುರುಗಳನ್ನು) ಆಡಿಸುವುದಕ್ಕೆ ಅಡವಿಗೆ ಹೋಗುತ್ತಾನೆ. ಇನ್ನೂ ಎಳೆಯ ತರಳನಾಗಿದ್ದಾಗಲೇ ತನ್ನ ಅನೇಕ ಅದ್ಭುತ ಪವಾಡಗಳಿಂದ ಕರುಗಾಹಿಗಳನ್ನು ಮರುಳು ಮಾಡುತ್ತಾನೆ. ಒಂದು ದಿನ, ಕರುಗಾಹಿಗಳೆಲ್ಲಾ ಸತ್ತಂತೆ ಬಿದ್ದಿರಲು ಕರುಗಾಹಿಗಳ ಬಂಧುಗಳಾದ ಕುಂಚಿಟಿಗರಾಮ, ಕುಡಿಯೊಕ್ಕಲಿಗ ಮುದ್ದಯ್ಯ, ಪಂಚಮರ ಪರಮಯ್ಯ ಪಡಿಹಾರ ಬಸವಣ್ಣನು, ಕಂಚುಗಾರರ ಶಿವನ ಕರಿಕುಲದ ಮಹದೇವ ನಂಚಕಟ್ಟುವಶರ್ವನು ಪಂಚವರ್ಣವನಾಂತ ಪರಮಋಷಿಯಾನತನು.

ವಂಚನೆಯ ಚೋರವಿದ್ಯದಮಲ್ಲ ಮಾದನುರೆ

ಹಂಚಮಾಡುವ ಚಕ್ರಿಕುಲಹೀನ ಚನ್ನರಿವರುಂ ಚಹಡದೂರುತಿರಲು. ನೊಣಬಚಕ್ರೇಶ್ವರನಲ್ಲಿ

॥ ೩೨ ॥ (ಮೂರನೇ ಸಂಧಿ)

ತರಿತರಿದು ಬಿಸುಟಿದನೆಂದು ದೂರುವರು. ದೊರೆಯು ಬಂದು ನೋಡುವಲ್ಲಿ ಬಾಲಕರೆಲ್ಲರೂ ಮರುಳನೊಂದಿಗೆ ಆಟವಾಡುತ್ತಿದ್ದರು. ಪುರದ ಒಡೆಯ ಮರುಳನ ಮಹಾತ್ಮೆಗೆ ಅಚ್ಚರಿಪಟ್ಟು ಹಿಂತಿರುಗುತ್ತಾನೆ.

❖ **ಮುಳ್ಳಪಲ್ಲಕ್ಕಿಯಂತೇರಿ ಮೆರೆದ**

ಮರುಳನು ಕಗ್ಗಲ್ಲಪುರವನ್ನು ತ್ಯಜಿಸಿ ವಲಸೆ ಹೊರಟು ಗೋವೃಂದಕ್ಕೆ ಅತ್ಯಾವಶ್ಯಕವಾದ ತೃಣಜಲ ಸಮೃದ್ಧಿಯಾದ ಅಡವಿಯನ್ನು ಹುಡುಕುತ್ತಾ ಬಂದು ರಂಗಯ್ಯನ ದುರ್ಗವೆಂಬ ಅರಣ್ಯವನ್ನು ಕಂಡು ಆನಂದದಿಂದ ಅದರ ಪಕ್ಕದಲ್ಲಿಯೇ ಹಟ್ಟಿಯನ್ನು ನಿರ್ಮಿಸಿ ಬೀಡುಬಿಟ್ಟನು. ಈ ಹಟ್ಟಿಗೆ ಪಲ್ಲಾಗಟ್ಟಿ ಎಂದು ಹೆಸರಾಯಿತು.

ಕಲ್ಲಮಗಳ ವಿವಾದ ಬರಲು ಸೌಮ್ಯಾದೊಳರಿದು
ಮಲ್ಲಿಕಾರ್ಜುನಲಿಂಗ ಮರುಳ ಸಲ್ಲೀಲೆಯಂ
ಮೆಲ್ಲೆದೆಯೊಳೈಕ್ಯವಡೆದಂತೆ ಬಂದೇರಿದನು ಬಳ್ಳಿಬಿಗಿವಡೆದ ಮುಳ್ಳ
ಪಲ್ಲಕ್ಕಿಯಂತೇರಿ ತರಳರ್ಕೈ ಹೊರಸಿಕೊಂಡೆಲ್ಲ
ತಾಣುಗಳೊಳು ತಿರುಗಿ ತಳಿರ್ವನವಾಂತು
ಪಲ್ಲವಿಪ ವೃಕ್ಷಗಳ್ನೆಲ ತಂಪಿನೊಳಾಗಲಲ್ಲಿಳಿವುತಾಶ್ರಮದೊಳು[೨೧]॥ ೪೦ ॥ (ಮೂರನೆಯ ಸಂಧಿ)

❖ **ಕೊಡವಿದಾ ಕಡ್ಡಿಯಿಂದ ಎಳ್ಳನುದುರಿಸಿದ್ದು**

ಮರುಳಸಿದ್ಧರು ಮಕ್ಕಳ ಜೋತೆ ಸೇರಿ ಮಸಲತ್ತು ಮಾಡುತ್ತ ಆಡುತ್ತಿದ್ದು ನೆರೆಯಲ್ಲಿನ ಸ್ಥಳವೇ ಮಸಣೀಕಟ್ಟೆ (ಬೇಚಾರಾಕು ಗ್ರಾಮ ಪ್ರಸ್ತುತ ಪಲ್ಲವಗಟ್ಟೆ ಬಳಿಯಿದೆ) ಎಂಬ ಊರಾಯಿತು. ಅಲ್ಲಿ ವಾಸ ಮಾಡುತ್ತಿದ್ದ ಮಲ್ಲಗೌಡ, ಮರುಳಗೌಡರೆಂಬವಕ್ಕಲಿಗರು ತಾವು ಮಾಡಿದ ಋಣವನ್ನು ತೀರಿಸಲಾರದೆ ಗೌಡನ ಮನೆಯಲ್ಲಿ ಆಳುತನ ಮಾಡಿಕೊಂಡು ದುಡಿಯುತ್ತಿದ್ದರು. ಮರುಳಸಿದ್ಧನು ಅವರ ಬಳಿಬಂದು ಭಿಕ್ಷೆ ಬೇಡಿದ. ಆಗ ಆ ಊರಿನ ಗೌಡರು ಕೊಡವಿದಾಕಡ್ಡಿಯಿಂದ ಎಳ್ಳನುದುರಿಸಿದರು. ಒಂದು ಕಾಳೂ ಇಲ್ಲ ನೀನಗೇನು ಕೊಡಲಿ ಎಂದವರು ಹೇಳಿದರು. ಆಗ ಮರುಳಸಿದ್ಧರು ಕೊಡವಿದಾಕಡ್ಡಿಯಿಂದ ಖಂಡುಗ ಎಳ್ಳುನುದುರಿಸಿ ಹೆಚ್ಚಿಸಿದರಂತೆ. ಆ ಊರಿನ ಮಲ್ಲ ಮರುಳಗೌಡರು ಬಾಚಿಗೌಡನ ಬಳಿ ಮಾಡಿದ ಋಣವನ್ನು ಉತ್ತರಿಸಿ ಋಣಮುಕ್ತರನ್ನಾಗಿ ಮಾಡಿದನು.

❖ **ಸೌದೆ ಬಂಡಿಯನು ಎಳೆದಿದ್ದು :**

ಮಸಣಿಕಟ್ಟೆಯ ಒಕ್ಕಲಿಗರು ಆದ ಮಲ್ಲಗೌಡ, ಮರುಳಗೌಡ ರೆಂಬವರು ತಮ್ಮ ಮದುವೆಗಾಗಿ ಗಾಡಿಯಲ್ಲಿ ಕಟ್ಟಿಗೆಯನ್ನು ತೆಗೆದುಕೊಂಡು ಹೋಗಲು ಅರಣ್ಯಕ್ಕೆ ಬಂದರು. "ಹೊತ್ತು ಹೋಯಿತು ಬಂಡಿ ಸಿಕ್ಕಿದುದು ವನದೊಳಗೆ ಎತ್ತುಗಳು ತಪ್ಪಿಹೋದವು" ಅವರ ಒಂದು ಎತ್ತು ಕಳೆದು ಹೋಯಿತು. ಹಾರಕದ (ಒಂದು ಜಾತಿಯಧಾನ್ಯ) ಬುತ್ತಿಯುಂಡು ಜೀವಿಸುವಷ್ಟು ಕಡುಬಡವರಾಗಿದ್ದ ಅವರು ಬೇರೆ ಎತ್ತು ಕೊಂಡುತರಲು ಸಾಧವೇ ? ಮರುಳಸಿದ್ಧರು ಇದನ್ನು ಕಂಡು ಮನಕರಗಿ ಅಡವಿಯಿಂದ ಸೌಧೆ ಗಾಡಿಯನ್ನು ಊರಿನವರೆಗೆ ಸಾಗಿಸಿಕೊಟ್ಟು ಮದುವೆಯ ಕೆಲಸವು ನಿರ್ವಿಘ್ನವಾಗಿ ನಡೆಯುವಂತೆ ಮಾಡಿದನು.

❖ **ಕಗ್ಗಲ್ಲು ಪುರದಿಂದ ನಿರ್ಗಮನ ಘನಕಂತೆಯನು ಧರಿಸಿ ದೇಶಾಂತರಕ್ಕೆ ಪಯಣ**

ಚಿತ್ತದೊಳಗೆಣಿಕೆ ಮಾಡುತ್ತ ಪುರುಜನರೆಲ್ಲ

ಬಿತ್ತು ಬೆಳೆ ಫಲವೃದ್ಧಿ ಹುಲುಸಾಗಬೇಕೆಂದು

ಮತ್ತೆಲ್ಲನಿಂದು ಬಾಚಣಗೌಡರೊಳು ಪೇಳಲತ್ಯಂತ ಹರುಷದಿಂದ ।

ಮೃತ್ಯುಮಾರಿಯ ಮಾಡ ಜನಕೆ ಬಹು ಲೇಸೆಂದು

ಮತ್ತವರ ನುಡಿಗೇಳಿ ಗೌಡ ಹರುಷವ ತಾಳಿ

ಕತ್ತಲ್ಹೊತ್ತಿನಲಿ ಮಾರಿಗೆ ಮೀಸಲನು ಕಟ್ಟಿ ಸತ್ಯಳಸಲಹೆನುತಲಿ[೨೨] ॥೫೦॥ (ಮೂರನೆಯ ಸಂಧಿ)

ಗ್ರಾಮಕ್ಕೆ ಲೇಸಾಗಿ ಶಾಂತಿಯಾಗಲೆಂದು ಬಾಚಿಗೌಡನ ಅಧ್ಯಕ್ಷತೆಯಲ್ಲಿ ಗ್ರಾಮಸ್ಥರು ಪಶುಘಾತಕವಾದ ಮಾರಿ ಹಬ್ಬವನ್ನಾಚರಿಸಿದರು. ಅಲ್ಲಿ ನಡೆದ ಪ್ರಾಣಿ ಹಿಂಸೆಯು ಮರುಳಸಿದ್ಧನಿಗೆ ಸಹಿಸದಾಯಿತು. ಪ್ರಯತ್ನ ಮಾಡಿ ಮಾರಿಹಬ್ಬವು ಮುಂದುವರಿಯದಂತೆ ನಿಲ್ಲಿಸಿ ಪ್ರಾಣಿಗಳನ್ನು ಕೊಲ್ಲುವುದನ್ನು ನಿಲ್ಲಿಸಿದನು. ಈ ಪ್ರಾಣಿಗಳನ್ನು ಕೊಲ್ಲುವುದನ್ನು ನೋಡಿದ ಮೇಲೆ ಇವನ ಮನಸ್ಸೇ ಬದಲಾಯಿತು. ಮೌಢ್ಯದ ಮುಸುಕು ಹರಿದು ಜ್ಞಾನೋದಯವಾಯಿತು. ಈ ವೇಳೆಗೆ ಪ್ರೌಢನಾಗಿದ್ದನು. ಆ ವೇಳೆಗೆ ೧೫–೧೬ ವರ್ಷದವನಾಗಿರಬಹುದು. ಇನ್ನು ಇಲ್ಲಿರಬಾರದೆಂದು ಯೋಚಿಸಿ ಘನಕಂತೆಯನು ಧರಿಸಿ ದೇಶಾಂತರಕ್ಕೆ ಹೊರಡುತ್ತಾನೆ.

❖ **ಬೇತೂರಿನಲ್ಲಿ ಯಜ್ಞಯಾಗಾದಿಯ ಖಂಡನೆ :**

ಮರುಳನು ದೇಶಪರ್ಯಟನದಲ್ಲಿ ಜ್ಞಾನಾರ್ಜನೆ ಮಾಡಿ ಸ್ವದೇಶಕ್ಕೆ ಹಿಂತಿರುಗುವಾಗ ಮಾರ್ಗದಲ್ಲಿದ್ದ 'ಬ್ರಾಹ್ಮಣರು ವಾಸಿಸುತ್ತಿದ್ದ' 'ಬೇತೂರು ವಳಯಾಕರಂ' ತನಗೆ ವಾಸ ಯೋಗ್ಯವೆಂದು ಅಲ್ಲಿ ಕೆಲವು ಕಾಲನಿಂತರು.

ಬೇತೂರು ಎಂಬ ಅನಾಮಧೇಯವಾದ ಎರಡು ಹಳ್ಳಿಗಳು ದಾವಣಗೆರೆಯ ಸಮೀಪದಲ್ಲಿವೆ. ಹೆಮ್ಮನಬೇತೂರು ದಾವಣಗೆರೆಯಿಂದ ಸು. ೨೫ ಕಿ.ಮೀ. ದೂರದಲ್ಲಿದೆ. ಮತ್ತೊಂದು ಎಲೆಬೇತೂರು ಇದು ದಾವಣಗೆರೆಗೆ ಸು. ೩ ಕಿ.ಮೀ. ದೂರದಲ್ಲಿದೆ. ಆದರೆ ೧೨ ನೇ ಶತಮಾನದಲ್ಲಿ ಹೆಮ್ಮನಬೇತೂರು ಒಂದು ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ. ಇಂಥ ಪ್ರಸಿದ್ಧವಾದ ಸ್ಥಳದಲ್ಲಿ ಮರುಳನು ಬಂದಾಗ್ಗೆ ಅಗ್ರಹಾರದ ಬ್ರಾಹ್ಮಣರು ಯಜ್ಞವನ್ನು ಮಾಡತೊಡಗಿದ್ದರು. ಬ್ರಾಹ್ಮಣರ ಸಂತರ್ಪಣೆಯ ಸಮಯದಲ್ಲಿ ಮರುಳನು ಭೀಕ್ಷಬೇಡಿದನು. ಆ ಸಂದರ್ಭದಲ್ಲಿ ಕೀಳುಕುಲದ ಶೂದ್ರನೆಂದು ಊಟದ ಸಮಯದಲ್ಲಿ ಬ್ರಾಹ್ಮಣರು ಒಪ್ಪಲಿಲ್ಲ. 'ಕುಲದಲ್ಲಿ ಮೇಲು ಕೀಳೆಂಬ ಭೇದವಿಲ್ಲ ನಿಮಗೆ ನಿಮ್ಮ ಕುಲದಲ್ಲಿ ಛಲವೇಕೆ ? ಬಹುಕುಲದಲ್ಲಿ ಓರ್ವರು ನೀವು' ಎಂದು ವಾದಿಸುತ್ತಿರಲು, ಬ್ರಾಹ್ಮಣರು ಮುನಿದು ಮರುಳನನ್ನು ಪಾಶದಲ್ಲಿ ಬಂಧಿಸಿ ಅಣಜಿ ಕೆರೆಯ ಕಟ್ಟೆಯ ಹಿಂದಿನ ಗೊಂದಿಯಲ್ಲಿ ಬಿಟ್ಟು ಬಂದರು. ಮತ್ತೆದ್ದು ಪಾಶ ಪರಿದು ಬರೆ ಮರುಳನಂ ಸತ್ತು ಬಂದನು ನೋಡಿರೆನುತ ಭೂಸುರರೆಲ್ಲ ಸುತ್ತುವರಿದು ಕಟ್ಟು ಪರಿದಕಳಂಕ ಮತಿಕಳನು ಮೃತ್ಯುಮಾರಿಯುಯೆನುತಲಿ" ವಿಪ್ರರೆಲ್ಲ ಮಾಡಿದ ಪ್ರಯತ್ನ ವ್ಯರ್ಥವಾಯಿತು, ಪಾಶಬಂಧ ವಿಮೋಚನನಾಗಿ ಪುನಃ ಯಾಗಶಾಲೆಯ ಬಳಿಗೆ ಬಂದು ಬ್ರಾಹ್ಮಣರಲ್ಲಿ ಮತ್ತೆ ಪ್ರಶ್ನಿಸಲಾರಂಭಿಸಿದನು.

❖ **"ಹದಿನೆಂಟು ಜಾತಿಯವರನೆಲ್ಲ ಒಂದೆಡೆ ಬೆರಕೆಯಿಂದುಣಿಸಿದ ಪವಾಡ"**

ಎಡೆಯಾದ ಶಾಕಪಾಕವನೊಂದುಗೂಡುತಲಿ
ಬಿಡದದಂತಂದರೆಯ ಮೇಲಿಟ್ಟು ಷಡುರಸವ
ಹುಡುಗರಂ ಕರೆಕರೆದು ಮುದ್ದೆಗೂಳನು ಮಾಡಿ ಕೊಡುತ್ತಿರ್ದ್ದಶಂಕೆಯುಳಿದು
ಕಡೆಯ ಮಾತೇನು ಹದಿನೆಂಟು ಜಾತಿಯನೆಲ್ಲ
ವೊಡನುಣಿಸಿ ಪಂಚಭೂತಾತ್ಮವದು ಒಂದೆನಿಸಿ
ಒಡಲ್ವಿಡಿದ ಪಂಚೇದ್ರಿಯಗಳೊಂದು ಗೂಡಿಪಿತಮ್ಯಾಡತಾನು ತಾನೆನುತಲಿ[೨೩]॥೮೫॥(ಮೂರನೇ ಸಂಧಿ)

ಪಾಶಬಂಧದಿಂದ ಹೇಗೋ ವಿಮೋಚನನಾಗಿ ಪುನಃ ಯಾಗಶಾಲೆಯ ಕಡೆ ಮರಳಿ ಬಂದು ಕುರುಡಿ ಗ್ರಾಮದಲ್ಲಿ ಹದಿನೆಂಟು ಕುಲದವರನ್ನು ಅಂದರೆ ನಾನಾ ಜಾತಿಯವರ ಒಂದೆಡೆ ಕೂಡಿಸಿ ಅವರು ತಂದ ಅನ್ನ ಆಹಾರದ ಬುತ್ತಿಯನ್ನು ಮರುಳಸಿದ್ಧನು ಕೂಡಿಸಿ ಒಬ್ಬೊಬ್ಬರಿಗೆ ಒಂದೊಂದು ಮಿಟ್ಟೆಗೆಯಂತೆ ಹಂಚಿಕೊಟ್ಟು ತಾನೂ ಊಟ ಮಾಡುತ್ತಿದ್ದ. ಹೀಗೆ ನಾನಾ ಜಾತಿಯವರನ್ನು ಬೆರೆಕೆಯಿಂದುಣಿಸಿದನು.

❖ ಕುದಿಯುವ ಸುಣ್ಣದಿಂದ ಎದ್ದು ಬಂದ ಮರುಳಸಿದ್ಧನ ಪವಾಡ :

ಮರುಳನು ಪುನಃ ಪುರಜನರನ್ನೆಲ್ಲ ಒಂದೆಡೆ ಸೇರಿಸಿಕೊಂಡು ಯಜ್ಞ ಶಾಲೆಯ ಬಳಿಗೆ ಬಂದು ಕುಲವೆಲ್ಲಾ ಒಂದೇ ಎನ್ನುತ್ತಾ ಸತ್ಯಾಗ್ರಹವೆಂಬ ಬ್ರಹ್ಮಾಸ್ತ್ರವನ್ನು ಹೂಡಿ ಯಾಗದ ಬಳಿ ಪುರಜನರೊಡನೆ ಕುಳಿತನು. ಆ ಊರಿನ ಬ್ರಾಹ್ಮಣರು ಕುಲಹದಿನೆಂಟು ಜಾತಿಯವರನ್ನು ಮರುಳಸಿದ್ಧನು ಬೆರಕೆ ಮಾಡಿ ಕೆಡಿಸಿದನೆಂದು ತಿಳಿದು, ಅವನ ಮೇಲೆ ಕುಪಿತರಾಗಿ ಮರುಳಸಿದ್ಧನನ್ನು ಒಂದು ಹಗೇವಿನಲ್ಲಿ ಹಾಕಿ, ಸುಣ್ಣ ತುಂಬಿ, ನೀರನ್ನು ಹೊಯಿದರೆಂದೂ, ಆಗ ಮರುಳಸಿದ್ಧನು ಪವಾಡವನ್ನು ಮೆರೆಸಲು ಆ ಹಗೇವಿನಲ್ಲಿಯೇ ಲಿಂಗ ಉದ್ಭವಿಸಿತೆಂದೂ, ಆ ಲಿಂಗಕ್ಕೆ ಹಗೇವುಸಿದ್ಧೇಶ್ವರ ಎಂದು ಕರೆಯುತ್ತಾರೆ. ಮರುಳಸಿದ್ಧನು ಈ ರೀತಿ ಕುಲ ಹದಿನೆಂಟು ಜಾತಿಯವರನ್ನು ಒಂದುಗೂಡಿಸಿ ಪ್ರತಿಭಟಿಸಿದ್ದರಿಂದ ಮರುಳಸಿದ್ಧನಿಗೆ ಈ ಶಿಕ್ಷೆಯಾಗಿದೆ. "ಸುಣ್ಣದ ಪವಾಡವನು ಗೆಲಿದಚಿದ್ಘನರೂಪ ತಣ್ಣಗ್ಹೊರ ಹೊರಟ". ಹಗೇವು ಸುಣ್ಣದಿಂದ ಎದ್ದು ಬಂದ ಮರುಳಸಿದ್ಧನನ್ನು ಕಂಡ ಬ್ರಾಹ್ಮಣರೆಲ್ಲ ಬೆಚ್ಚಿ ಬೆದರಿದರು. ಪುನಃ ಮರುಳಸಿದ್ಧ ತಮ್ಮ ಯಾಗಕ್ಕೆ ಅಡ್ಡಿ ಪಡಿಸುವನೆಂದು ತಿಳಿದು ಮರುಳನನ್ನು ಹೆಡಮುರಿಗೆ ಕಟ್ಟಿ (ಅಂದಿನ ಕಾಲದಲ್ಲಿ ತಪ್ಪಿತಸ್ಥರನ್ನು ಬೇಡಿ ಹಾಕಿ ಹಿಡಿದುಕೊಂಡು ಹೋಗುವ ವಿಧಾನ) ಬ್ರಾಹ್ಮಣರೂ, ಗೌಡಪ್ರಜೆಗಳೂ, ನೊಣಬ ಚಕ್ರೇಶ್ವರನಾದ ವಿಜಯಪಾಂಡ್ಯ ದೇವನ ಬಳಿಗೆ ಬಂದು ಮರುಳನು ಮಾಡಿದ ದುಷ್ಕಾರ್ಯವನ್ನು ವಿವರಿಸಿ ದೂರು ಹೇಳಿದರು. ವರ್ಣಾಶ್ರಮ ಧರ್ಮಿಯಾದ ರಾಜನು ಕಡುನೊಂದು ತನಗೆ ಪಾಪ ಸಂಭವಿಸಿತೆಂದು ಕೋಪೋದ್ರಿಕ್ತನಾಗಿ ಮರುಳನನ್ನು ಮದದಾನೆಯ ಮುಂದೆ ನೂಕಿರೆಂದು ಚರರಿಗೆ ನೇಮವನ್ನಿತ್ತನು. ಮದಗಜವು ಮರುಳನಿಗೆ ಉಪಹತಿಕೊಡದೆ ಮಸ್ತಕದ ಮೇಲೆ ಮಂಡಿಸಿಕೊಂಡು ಓಡಿತು. ರಾಜನ ಸೈನಿಕರು ಹಿಂಬಾಲಿಸಿದರು ಮರುಳನು "ಮುಂದುಗಾಣದೆ ಮುಚ್ಚನೂರು ಪೊಕ್ಕಂಹರಾನಂದವಾ–ಪೆಸರೂರಿಗೆ ಮಂದಮತಿಗಳು ಹಿಂದಬಿಡದಿರಲು ಮರುಳನಾ ನಂದವಳಿದುಸ್ಸೆನುತ ದಾರಿಯೊಳು ನಿಲಲುತಾ ನಂದ ಉಳುಪನಕಟ್ಟೆಯೊಂದೆಂಬ ಪೆಸರಾಯ್ತು ಮುಂದು ಓಂದೆಡಲಬಲದೊಳು" ಎಂದು ಮರುಳಸಿದ್ಧನು ಮುಚ್ಚನೂರಿನಲ್ಲಿ ಮುಳುಚಿಕೊಂಡು

ಮುಂದೆ ಉಳುಪನಕಟ್ಟೆ ಎಂಬಲ್ಲಿ ಉಳಿದುಕೊಂಡು ಆನಗೋಡ ಪುರದತ್ತ ಪಯಣಿಸಿದ.

❖ **ಆನೆಯನ್ನು ಧರೆಯಲ್ಲಿ ತುಳಿದ ಪವಾಡ :**

ಅಂತ್ಯದಲ್ಲಿ ಮರುಳಸಿದ್ಧ ನೊಣಬಚಕ್ರೇಶ್ವರನ ಸೇನೆ ಬೆಂಬತ್ತಿ ಬರುವುದನ್ನು ಕಂಡು "ಆನೆಯಧರಾತಳಕ್ಕಿಳಿಯೊತ್ತಿ ಕೋಡುಗಳ ತಾನೊಗೆವುತಂಬರಕ್ಕೆ ಮಾನವರಿಗಾದೃಶ್ಯಮಂ ತೋರಿ ಬಯಲಾದ" ಆನೆಯನ್ನು ಧರೆಯಲ್ಲಿ ತುಳಿದ ಎಂಬ ಪ್ರತೀತೆ ಇದೆ ಇಲ್ಲಿಗೆ ಸಮೀಪದ ಸಿದ್ಧನೂರು ಎಂಬಲ್ಲಿ ದೊಣೆ ಎಂಬಕ್ಷೇತ್ರವಿದೆ. "ಮರುಳಸಿದ್ಧೇಶಲಿಂಗನು ನೆಲಸಿ ದಾನೆಗೊಡೆಂಬ ಪೆಸರ್ದು ಪಡೆದು ದಾ ಪುರವ ಮಾನವರು ಪೊಗಳಲಳವೇ". ಅಂದರೆ ಮರುಳಸಿದ್ಧನು ಆನಗೋಡ ಎಂಬ ಪುರದಲ್ಲಿ ನೆಲೆಸಿ ನಂತರ ಮುಂದೆ ಪಯಣವ ಬೆಳೆಸಿದ. ಮುಂದೆ ಮರುಳಸಿದ್ಧನು ಅಂತ್ಯದಲ್ಲಿ ಬನ್ನಿಕೋಡಿಗೆ ಹೋಗಿ ಕೆಲ ಕಾಲತಂಗಿದನು. ಆನಗೋಡಪುರದೊಳುಂ ಸೆಲೆನಿಂದ ಸಿದ್ಧೇಶ ವಸುಮತಿಗೆ ಹೆಸರುವಡೆದು" ಹೆಸರು ಪಡೆದ ಮರುಳಸಿದ್ಧನಿಂದ ಅಸಗೋಡಪುರವು ವಸುಮತಿಯಲ್ಲಿ ಕೀರ್ತಿವೆಸೆದುದು.

❖ **ಹಯನ ಹಳ್ಳ ಹಾಲಿನ ಹಳ್ಳವಾಗಲೆಂದು ಹರಸಿದ**

ಮರುಳಸಿದ್ಧೇಶ್ವರರು ಭಿಕ್ಷಾಟನದಿಂದಲೇ ದೇಶ ಸಂಚಾರಕ್ಕೆ ಹೊರಟು ಮಾರ್ಗದಲ್ಲಿ ತನ್ನ ಜನ್ಮ ಸ್ಥಳವನ್ನು ಸಂದರ್ಶಿಸಿದನು. ಯಾವ ಸೊಕ್ಕೆ ಹಳ್ಳದ ದಂಡೆಯಲ್ಲಿ ಆಕಳ ಹಾಲನ್ನು ಸವಿದು ಬೆಳೆದನೋ ಆ ಹಯನ ಹಳ್ಳವು ಪರಮ ಪವಿತ್ರವಾದುದು ಎಂದು ಹೇಳಿದನು. ಬಾಲಕನಾಗಿದ್ದಾಗ ಮರುಳಸಿದ್ಧರು ಸೊಕ್ಕೆ ಹಳ್ಳದ ದಂಡೆಯ ಒಂದು ಪೆಳೆಯಲ್ಲಿದ್ದನೆಂದೂ ಹಯನುಗಳು ಪ್ರತಿನಿತ್ಯವೂ ಅವರ ಬಳಿಗೆ ಹೋಗಿ ಹಾಲು ಕರೆಯುತ್ತಿದ್ದವೆಂದೂ ಹೇಳಲಾಗಿದೆ. ಯಾವ ಪೆಳೆಯಲ್ಲಿ ಹಯನಗಳು ಹಾಲು ಕರೆದ ಸ್ಥಳದಲ್ಲಿ ಕಮರದ ವೃಕ್ಷ (ಹಾಸಿನ) ಮರವೇ ಬೆಳೆದಿತ್ತು. ಆ ಮರದ ಕೆಳಭಾಗದಲ್ಲಿಯೆ ಮರುಳಸಿದ್ಧೇಶ್ವರ ದೇವಾಲಯವಿದೆ, ಇದು ಉಜ್ಜಯಿನಿ ಸಮೀಪದ ತೂಲಹಳ್ಳಿ ಎಂಬ ಗ್ರಾಮದಲ್ಲಿದೆ, ಬಾಚನ ಗೌಡನು ಬಾಲ ಮರುಳಸಿದ್ಧನನ್ನು ಪೆಳೆಯಲ್ಲಿ ಕಂಡಾಗ ಬಾಲ ಮರುಳಸಿದ್ಧನು ಪ್ರತ್ಯಕ್ಷನಾಗಿ ಈ ಊರು ಹಯನ ಹಳ್ಳಿ ಹಾಲಿನ ಹಳ್ಳವಾಗಲೆಂದು ಹರಸಿದನೆಂದೂ ಐತಿಹ್ಯ.

❖ **ದ್ವಾರಸಮುದ್ರದಲ್ಲಿ ಮಳೆಸುರಿಸಿದ ಮಹಿಮೆ :**

ಹೊಯ್ಸಳರಸ ಬಲ್ಲಾಳನೃಪ ರಾಜ್ಯದ ಅದಿಪತಿ. ಅವರ ಕುದುರೆಗಳಿಗೆ ಹುಲ್ಲುಕೊಯ್ಯುತ್ತಿದ್ದ ಗೋವಳನೊಬ್ಬನು (ಅಶ್ವ ಪಡೆಯ ದಂಡೆ ನಾಯಕ)ಅರಸನ ವಿರುದ್ದ ಬಂಡಾಯವೆದ್ದ ಆ ಸಮಯದಲ್ಲಿ ದ್ವಾರಸಮುದ್ರ-ವನ್ನು ಸಮೀಪಿಸುತ್ತಿದ್ದ ಮರುಳಸಿದ್ಧರನ್ನು ಕಂಡವನೆ ಆತನಲ್ಲಿಗೆ ಓಡಿ

ಹೋಗಿ ಪಾದಕ್ಕೆ ನಮಸ್ಕರಿಸಿ ಅತಿಶಯವಾದ ಆನಂದದಿಂದ ತನ್ನ ಬವಣೆಯನ್ನು ಹೇಳಿಕೊಂಡ. ಉಳಿದ ಪ್ರಜೆಗಳು ಆ ಬಗೆಯ ಪ್ರತಿಭಟನೆಗೆ ಬೆಂಬಲಿಸದೆ ಅವರೆಲ್ಲ ಬಲ್ಲಾಳನೃಪನಲ್ಲಿ ದೂರಿಡುವರು. ಆಗ ದೊರೆಯ ಅಪ್ಪಣೆಯಂತೆ ರಾಜಭಟರು ಆ ಅಶ್ವ ಪಡೆಯ ದಂಡ ನಾಯಕನ ಕೈಗೆ ಕಾದ ಕಬ್ಬಿಣದ ಬಳೆ ಹಾಕುವ ಶಿಕ್ಷೆಯನ್ನು ವಿದಿಸಿದ. ಆಗ ಮರುಳಸಿದ್ಧರ ಮಧ್ಯಸ್ಥಿಕೆಯಿಂದಾಗಿ ಅವರ ಹಿತ ವಚನದಿಂದಾಗಿ ಮರುಳಸಿದ್ಧರ ಮಹಾತ್ಮೆ ದೊರೆಗೆ ಅರಿವಾಗುವುದು.

❖ ಕುಂಬನೀಪುರದಲ್ಲಿ ವಾಮಚಾರಿಯನ್ನು ಸದಾಚಾರಿಯಾಗಿ ಪರಿವರ್ತಿಸಿದ್ದು :

ಕುಂಬಳೂರಿನ ಭೈರವಗೊಂಡ-ಲಿಂಗಮ್ಮ ಎಂಬ ದಂಪತಿಗಳ ವಿವಾದದಲ್ಲಿ ಮರುಳಸಿದ್ಧರು ಭಾಗವಹಿಸುತ್ತಾರೆ. ಗಂಡ ಭೈರವಗೊಂಡ ಭೈರವನ ಭಕ್ತ, ಹೆಂಡತಿ ಲಿಂಗಮ್ಮ ಲಿಂಗಭಕ್ತಳು; ಗಂಡವಾಮಾಚಾರಿ, ಹೆಂಡತಿ ಸದಾಚಾರಿ ಈರ್ವರ ಲೌಕಿಕ ಧಾರ್ಮಿಕ ಮಾರ್ಗಗಳೆರಡರಲ್ಲೂ ವಿರಸವುಂಟಾಗಿತ್ತು. ಗಂಡನು ಹೆಂಡತಿಯ ದಾರಿಗೆ ಬಾರನು. ಹೆಂಡತಿ ಗಂಡನ ದಾರಿಗೆ ಬಾರಳು. ಮದ್ಯ-ಮಾಂಸಗಳಿಂದ ದೇವರನ್ನು ಒಲಿಸುವ ವಾದವು ಗಂಡನದಾಗಿತ್ತು. ಪಾದೋದಕ ಪ್ರಸಾದಗಳಿಂದ ದೇವರನ್ನೊಲಿಸುವ ವಾದವು ಹೆಂಡತಿಯದಾಗಿತ್ತು. ಮರುಳಸಿದ್ಧರಂತಹ ಗುರುವಿನ ಪ್ರವೇಶದಿಂದಾಗಿ ಭೈರವಗೊಂಡನು ವಾಮಾಚಾರಿಯಾದ ಇವನು ಮದ್ಯ-ಮಾಂಸಗಳನ್ನು ತ್ಯಜಿಸಿ ಲಿಂಗದೀಕ್ಷೆ ಪಡೆದು ಸದಾಚಾರಿಯಾಗುತ್ತಾನೆ. ಹೀಗೆ ಸತಿಪತಿಗಳು ಒಂದಾಗಿ ಮರುಳಸಿದ್ಧರ ಶಿಷ್ಯರಾದರು.

❖ ಗುರುರೇವಣಸಿದ್ಧರಿಂದ ಲಿಂಗದೀಕ್ಷೆ :

ಮರುಳಸಿದ್ಧನು ಸ್ವಯಂ ಪ್ರತಿಭೆಯಿಂದ ಶೋಭಿಸುತ್ತಿದ್ದರೂ ಗುರು ಕಾರುಣ್ಯ ದೊರೆತಿರಲಿಲ್ಲವಾದ್ದ-ರಿಂದ ಒಪ್ಪವಿಲ್ಲದ ಚಿನ್ನದಂತಿದ್ದನು. ಅಂದು ಕನ್ನಡ ನಾಡಿನಲ್ಲಿ ಮಹಾ ಪ್ರಭಾವ ಶಾಲಿಗಳಾಗಿದ್ದ ಗುರುಗಳೆಂದರೆ ಶ್ರೀ ರೇವಣಸಿದ್ಧರು, ರಾಜಾಧಿರಾಜರುಗಳಿಂದ ಸನ್ಮಾನಿತರಾಗಿ ಚಿನ್ಮೂಲಾದ್ರಿಯ ಸಿದ್ಧರ ಗವಿಯಲ್ಲಿ ತಪ್ಪಸ್ಸನ್ನಾಚರಿಸುತ್ತಿದ್ದರು. ಮರುಳಸಿದ್ಧರು ಗುರುವನ್ನು ಕಂಡು ಶಾಸ್ತ್ರವಿಧಿಯಾಗಿ ಗುರುದೀಕ್ಷೆಯನ್ನು ಹೊಂದಿ ಗುರುಕರ ಸಂಜಾತನಾಗಿ ದೇಶಸಂಚಾರದಿಂದ ಭಿಕ್ಷೆಯನ್ನು ಸಂಪಾದಿಸಿ ತಂದು ಗುರುವಿಗೆ ಸಮರ್ಪಿಸಿದರು. ರೇವಣ್ಣಸಿದ್ಧರು ಅವನ್ನು ಇಚಿದುಧರನಿಗರ್ಪಿಸಿ ಪ್ರಸಾದವನ್ನು ಭೋಗಿಸಿದರು.

ಉತ್ತರದಿಕ್ಕಿಗೆ ಹೋಗಬೇಡ ಕೊಲ್ಲಾಪುರದಲ್ಲಿ ದುರುಳಸಿದ್ಧರ ತಂಡವಿರುವುದು. ಅವರನ್ನು ನಾನೊಮ್ಮೆ ಭಂಗಪಡಿಸಿದೆನು. ಆದರೂ ರೆಂಬೆಗಳನ್ನು ಕಡಿದ ಮರವು ಇನ್ನೂ ಹುಲುಸಾಗಿ

ಚಿಗುರುವಂತೆ ಆ ಸಿದ್ಧರು ಹೆಚ್ಚಿರುವರು ಅವರ ದುಷ್ಟತನದಿಂದ ಪಾರಾಗಿ ಬರುವುದು ಬಹುಕಷ್ಟ ಎಂದು ಗುರುವು ಎಚ್ಚರಿಸಿದರು. ಮರುಳಸಿದ್ಧರು ಆ ದುರುಳಸಿದ್ಧರನ್ನು ಮುಂದೆ ಬಿಡುವೆನೆಂದು ಶಪಥ ಮಾಡಿ ಗುರುವಿನ ಆಶೀರ್ವಾದವನ್ನು ಹೊಂದಿ ಪ್ರಯಾಣೋನ್ಮುಖನಾದನು. "ಸಿಂಧು ಮಲೆಯಾಳ ಚೋಳ್ದೇಶದೊಳು ಚರಿಸುತಲಿ ಆಂಧ್ರ ದ್ರಾವಿಡ ತುರುಕ ಕರ್ನಾಟದೊಳಗೆಯಾನಂದದೊಳು ಚರಿಸುತ" ಕೊಲ್ಲಾಪುರದ ಕಡೆಗೆ ಸಂಚಾರ ಮಾಡಿದರು.

❖ ಮುದುಕನ ವೇಷದಲ್ಲಿ ಶಿವಭಕ್ತ ರಾಮಿದೇವನಿಗೆ ದರ್ಶನ ನೀಡಿದ್ದು ;

ಅವಿರಳ ಪರಬ್ರಹ್ಮ ಮರುಳಸಿದ್ಧರು ಮಲೆಯಾಳ, ಚೋಳದೇಶ, ಆಂಧ್ರ, ದ್ರಾವಿಡ, ತುರುಕ, ಕರ್ನಾಟ ಮುಂತಾದ ದೇಶಗಳಲ್ಲಿ ಪ್ರವಾಸ ಮಾಡಿ ರಾಮಿಶೆಟ್ಟಿಯ ಕೆರೆಗೆ ಬಂದು ತಲುಪುವರು. ಆಗ ಅವರದೇಹ ರಕ್ತ ಕೀವು ಒಸರುತ್ತಿರುವ, ಕೊಳೆತು ನಾರುತ್ತಿರುವ ಶರೀರದ, ಹಣ್ಣು ಹಣ್ಣು ಮುದುಕನ ವೇಷದಲ್ಲಿ ನರಳುತ್ತಾ ಕುಳಿತಿರುವರು. ಶಿವಭಕ್ತ ರಾಮಿತಂದೆಗೆ ಕಾಣಿಸಿಕೊಳ್ಳುತ್ತಾನೆ, ರಾಮಿತಂದೆಯು ಆ ಕೊಳೆತು ನಾರುವ ಮೈಕೈಗಳನ್ನು ನೋಡಿ ಸ್ವಲ್ಪವೂ ಜಿಗುಪ್ಸೆ ಪಡದೆ ಅವರನ್ನು ತನ್ನ ಹೆಗಲ ಮೇಲೇರಿಸಿ-ಕೊಂಡು ತನ್ನ ಮಠಕ್ಕೆ ಕರೆದೊಯ್ದು ಷೋಡಶೋಪಚಾರಗಳನ್ನು ಮಾಡುತ್ತಾನೆ. ರಾಮಿದೇವನ ಹೆಂಡತಿಗೆ ಮರುಳನನ್ನು ನೋಡಿದೊಡನೆ ಓಕರಿಕೆ ಬರುತ್ತದೆ. ಅಂತಹ ಕೊಳೆತು ನಾರುವ ದೇಹದವರನ್ನು ಕರೆತಂದುದಕ್ಕಾಗಿ ತನ್ನ ಪತಿಯನ್ನು ಆಕ್ಷೇಪಿಸುತ್ತಾಳೆ. ಮರುಳನು ರಾಮಿತಂದೆಯ ಮೆಚ್ಚಿ ತನ್ನ ಶಿಷ್ಯನನ್ನಾಗಿ ಅನುಗ್ರಹಿಸುತ್ತಾರೆ.

ಮರುಳಸಿದ್ಧೇಶ್ವರನೊಳೈಕ್ಯಪದಮಂ ಪಡದು
ಹರನ ಪರಭಾಗದೊಳು ಸ್ಥಿರವಾಗಿ ನಿಂದನಾ
ದುರಿತದುಷ್ಕೃತನಾಶವಹ ರಾಮಿತಂದೆಗಳು ಬೆರೆದು ಶಿವಯೋಗದೊಳಗೆ ।
ಇರುತಿರಲು ಮರುಳಸಿದ್ಧೇಶ್ವರನು ಲೀಲೆಯಂ
ತೆರಲಿ ಕೊಲ್ಲಾಪುರಕೆ ಹೋಹ ಪಥದೊಳು ಮುಂದೆ
ಇರುತಿರ್ದರೊಕ್ಕಲಿಗರಾರುಗಳಿಯಂಗಳಿಂ ಧರೆಯನೊಳುವ ಪಥದೊಳು[೨೪]

॥೩೮॥ (ನಾಲ್ಕನೆ ಸಂಧಿ)

❖ ಗಣಪತಿಯ ರಾಜ್ಯದಲ್ಲಿ ಗುಂಡಬ್ರಹ್ಮಯ್ಯಗಳನ್ನು ಸಂದರ್ಶಿಸಿದ್ದು :

ಕೊಲ್ಲಾಪುರ ಮಾಯೆಯ ಗರ್ವ ಭಂಗಪಡಿಸಲು ಮರುಳಸಿದ್ಧರು ಕೊಲ್ಲಾಪುರಕ್ಕೆ

ಹೋಗುವ ಮಾರ್ಗದ ಮಧ್ಯೆ ಪ್ರಯಾಣ ಮಾಡುತ್ತಾ ತೋರಗಲ್ಲುಪುರದ ಹೊರ ವಲಯದ ಮಠದಲ್ಲಿ ತಂಗುವರು. ಅಲ್ಲಿ ಅಚಲನೇಮಿ ಗುಂಡಬ್ರಹ್ಮಯ್ಯಗಳನ್ನು ಸಂದರ್ಶಿಸಿದರು. ಪ್ರಯಾಣವನ್ನು ಮುಂದುವರಿಸಿ ಗಣಪತಿಯ ರಾಜ್ಯದಲ್ಲಿ ಸಂಚರಿಸಿ ಓರಂಗಲ್ಲುಪುರದ ಶೃಂಗಾರವನ್ನು ನೋಡಿಕೊಂಡು ಶುದ್ಧಶೈವಾಚಾರ–ಶೀಲವ್ರತರನ್ನು, ಶಿವಶರಣರನ್ನು ಸಂದರ್ಶಿಸುತ್ತಾ ಮುಂದಕ್ಕೆ ಸಂಚಾರ ಹೊರಟನು.

❖ ಕೊಲ್ಲಾಪುರದ ಮಾಯೆಯನ್ನು ಗೆಲ್ಲುವುದು :

ಕೊಲ್ಲಾಪುರದ ಸಮೀಪದಲ್ಲಿದ್ದ ಸಿದ್ಧನಗಿರಿಯಲ್ಲಿ ೭೭೩ ಜನಸಿದ್ಧರು ವಾಸಮಾಡುತ್ತಿದ್ದರು. ಕರಟನೆಂಬುವನು ಅವರೆಲ್ಲರಿಗೂ ಮುಖ್ಯನು. ಈ ಸಿದ್ಧರು ಯೋಗಸಾಧನೆಗಳಿಂದಲೂ ಮಂತ್ರ ಮಾಟಗಳಿಂದಲೂ ಗಿಡಮೂಲಿಕೆಗಳ ವಿಶೇಷ ಜ್ಞಾನದಿಂದಲೂ ಅಗ್ನಿಸ್ತಂಭ, ಆಂತರಿಕ್ಷಗಮನ, ಅಜನಸಿದ್ಧಿ ಮುಂತಾದ ಅನೇಕ ಅದ್ಭುತಗಳನ್ನು, ಮಾಡುತ್ತಿದ್ದರು. ಇವರಿಗೆ ಭೂತ ಪಿಶಾಚಿಗಳು ವಶವಾಗಿದ್ದವು. ಇವರು ಶಕ್ತಪೂಜಕರಾಗಿ ನರಬಲಿಗಳನ್ನು ಕೊಡುತ್ತಾ ಮಾಂಸಭಕ್ಷಕರಾಗಿಯೂ ಅಪೇಯ ಪಾನಾಸಕ್ತರಾಗಿಯೂ, ಅನಾಚಾರ ಪ್ರವರ್ತಕರಾಗಿಯೂ ಇದ್ದರು. ಮಾಯೆ ಎಂಬ ಮಾಟಗಾತಿಯು ಎಲ್ಲಾ ಸಿದ್ಧರನ್ನೂ ಮಾಟಗಾತಿಯರನ್ನು ತನ್ನ ಅಂಕೆಯಲ್ಲಿಟ್ಟುಕೊಂಡಿದ್ದಳು, ಇಂಥಾ ದುಷ್ಟರಿಂದ ಪಾರಾಗಿ ಬರುವುದು ಕಷ್ಟ ಎಂದು ರೇವಣಸಿದ್ಧ ಗುರು ಮುಖಾಂತರದಿಂದ ತಿಳಿದಿದ್ದರೂ ಮರುಳಸಿದ್ಧರು ಧೈರ್ಯದಿಂದ ಅಲ್ಲಿಗೆ ಹೋಗಿ ತನ್ನ ಸಿದ್ಧಿಸಾಮರ್ಥ್ಯದಿಂದ ಎಲ್ಲರನ್ನು ಜಯಿಸಿದನು. ಗರುಡನನ್ನು ಕಂಡ ಸರ್ಪಗಳಂತೆ ದುಷ್ಟಸಿದ್ಧರೆಲ್ಲಾ ಹೆದರಿ ಚದರಿ ಓಡಿ ಹೋದರು. ಅಲ್ಲಿದ್ದ ಜಟ್ಟಿಗ, ಬ್ರಹ್ಮ, ಭೈರವ ಎಂಬುವರು ಮರುಳಸಿದ್ಧರ ಶಿಷ್ಯರಾಗಿ ಹಿಂಬಾಲಿಸಿದರು. ಮಾಯೆಯು ಮುಖಭಂಗಿತಳಾದಳು ಮರುಳಸಿದ್ಧನು ಆ ಸಿದ್ಧರ ಬೆಟ್ಟದಲ್ಲಿದ್ದ ಘನಲಿಂಗವನ್ನು ಸ್ವಾಧೀನ ಮಾಡಿಕೊಂಡು ಕಾಳ್ಳುಕಜ್ಜನೆಂದು ಹೆಸರಿನಿಂದ ಕರೆದು ಮುಂದೆ ಸಂಚಾರ ಕೈಗೊಂಡರು.

❖ ತೆಲಗು ಬಾಳು ಸಿದ್ಧಯ್ಯನಿಗೆ ಶಿಷ್ಯತ್ವದ ಅನುಗ್ರಹ :

ಮರುಳಸಿದ್ಧರು ತೆಲಗು ಬಾಳಿಗೆ ಪ್ರವೇಶ ಬಂದು ಒಕ್ಕಲಿಗ ಗೌಡ ಮಕ್ಕಳಲ್ಲಿ ಮೂಕಸಿದ್ಧಯ್ಯನೆಂಬುವವರಿಗೆ ಜ್ಞಾನದ ಅರಿವನ್ನು ಹರಸಿ ಉಜ್ಜಯಿನಿ ಸದ್ಧರ್ಮ ಪೀಠದ ಮಠಾಧಿಪತ್ಯವನ್ನು ವಹಿಸಿರುವಂತೆ ಹರಸಿದನು. ಆನಂತರ ಗುರುವರನಾದ ಮರುಳಸಿದ್ಧರು ರೇವಣಸಿದ್ಧರನ್ನು ಕಂಡು ಚರಣಕ್ಕಭಿವಂದಿಸಿ ಆಶೀರ್ವಾದ ಪಡೆದು ಮಲ್ಲೇಶ್ವರನ ವರಪಡೆದು ಸಾಲು ಶಾಸನ ಲಿಂಗನಾಗಿ ಮೆರೆದನು.

❖ **ಸದ್ಧರ್ಮ ಪೀಠದ ಸ್ಥಾಪನೆ ಮತ್ತು ಸಮಾಧಿಸ್ಥರಾಗುವುದು :**

ಕಗ್ಗಲ್ಲಪುರದ ಕೇತನಹಳ್ಳಿ ಮಧ್ಯದೊಳು

ಭರ್ಗನತ್ಯತಿಷ್ಠ ನಹ ಮರುಳನಿಗೆ ಮನಂ

ವೊಗ್ಗಿ ಈ ಸ್ಥಲಕಾಡು ತನಗೆ ಹಿತಕರವೆಂದು ನಿರ್ಗಮನನಿತ್ಯನಾಗಿ ।

ಅಗ್ರಗಣ್ಯನು ಮಹಾಮಹಿಮ ಸಿದ್ಧೇಶ್ವರನು

ಸ್ವರ್ಗದರು ಪೂಮಳೆಯ ಕರೆವುತಿರಲಾಪುರದ

ಹೆಗ್ಗಡಿಗರ್ನೆಲದಲುದಿಪುದೆ ಸತ್ಯ ತನಗೆಂದು ಹಿಗ್ಗಿದನು ಮರುಳಲಿಂಗಾ[೨೫] ॥೪॥ (ಐದನೇ ಸಂಧಿ)

ತನ್ನ ಜನ್ಮಸ್ಥಳಕ್ಕೆ ಬಂದು ಅಂತ್ಯಕಾಲವನ್ನು ಅಲ್ಲಿಯೇ ಕಳೆಯಬೇಕೆಂದಾಲೋಚಿಸಿ ಕಗ್ಗಲ್ಲುಪುರ ಮತ್ತು ಕೇತನಹಳ್ಳಿ ಎಂಬ ಅರಣ್ಯಪ್ರದೇಶವು ಶಾಂತಮಯವಾಗಿಯೂ, ಹಿತಕರವಾಗಿಯೂ ಇದ್ದುದರಿಂದ ಅಲ್ಲಿಯೇ ಶಿವಾಲಯವನ್ನು, ಮಠವನ್ನು ನಿರ್ಮಿಸಲು ಯೋಚಿಸಿದನು. ಕೇದಾರ, ವಾರಣಾಸಿ, ಕುರುಕ್ಷೇತ್ರ, ರಾಮೇಶ್ವರ ಕ್ಷೇತ್ರಗಳಿಗಿಂತ' ಮರುಳಸಿದ್ಧೇಶ್ವರನಿಗಿದೇ ತನಗೆ ಸ್ಥಳವೆಂದು ಗುರುನಿರೂಪವನಾಂತು ಪುರದೊಡೆಯನಂ ಕರೆದವರ ಕೈಯ್ಯಾಲಿ ಸ್ವತ್ತು ನಾಲ್ಕು ಚೌಕದ ಧರೆಯನುರೆಕೊಂಡು ಪಣವನಿತ್ತು" ಪ್ರಸಿದ್ಧರಾದ ದಕ್ಷಿಣ ದೇಶದ ಶಿಲ್ಪಿ ಜಕ್ಕಣಾಚಾರ್ಯರನ್ನು ಹಳೆಬೀಡು, ಪ್ರಾಂತದಿಂದ ಕರೆಸಿ ಉತ್ಕೃಷ್ಟವಾದ ಶಿಲಾಮಯವಾದ ದೇವಾಲಯವನ್ನು ಉಜ್ಜಯಿನಿಯಲ್ಲಿ. ನಿರ್ಮಿಸಿದರು. ನಂತರ ಅದೊಂದು ಮಹಾಕ್ಷೇತ್ರವಾಯಿತು.

ಇಂತು ಪರಿ ಲೀಲೆಗಳ ನಟಿಸುತ ಸಕಲದೇಶ

ತಾಂತಿರುಗಿ ಬಂದು ತರಳ್ಬಾಳಸಿದ್ಧಯ್ಯನನು

ಮುಂತೆ ತನ್ನಂತೆ ಲೀಲೆಯ ನಟಿಸಿಬಾಳೆಂದು ಶಾಂತನಪ್ಪಣೆಯನಿತ್ತು.

ನಿಂತನುಜ್ಜೆನಿಪುರದಿ ನಿಜವ ಸರ್ವರಿಗರುಹಿ

ಕಂತೆಯಳಿದುದ್ಭವಿಸಿ ಕರುಣಿಸುತ ಸರ್ವರಿಗೆ

ಶಾಂತಮರುಳೇಶ ಮಹಿಮೆಯು ಮೆರುವುತಿರಲಿಲ್ಲಗಾಯಿತೈದನೆಯ[೨೬] ॥೩೨॥ (೫ನೇ ಸಂಧಿ)

ಅಂತ್ಯ ಕಾಲವು ಸಮೀಪಿಸಲು ತೆಲಗು ಬಾಳ ಸಿದ್ಧಯ್ಯನನ್ನು "ತರಳ ಬಾಳು" ಎಂದು ಹರಸಿ

ಮಠದ ಉತ್ತರಾಧಿಕಾರವನ್ನು ವಹಿಸಿ ತಾವು ಸಮಾಧಿಸ್ಥರಾದರು. ಕೊನೆಯ ಸಂಧಿಯಲ್ಲಿ ಉಜ್ಜಯಿನಿಯ ಪುರವನ್ನು ವರ್ಣಿಸುವ ನೆಪದಲ್ಲಿ ವಾರನಾರಿಯರನ್ನು ವರ್ಣಿಸಿ ಕವಿ ತನ್ನ ಚಾಪಲ್ಯವನ್ನು ತೀರಿಸಿಕೊಂಡಿರುವುದು ಸೋಜಿಗವೆನಿಸುವುದು.

ದೇವಕವಿ ಸಂಪ್ರದಾಯಸ್ಥ ಕವಿ ೧೨ನೇ ಶತಮಾನದ ಒಬ್ಬ ಶಿವಶರಣನಾದ ಮರುಳಸಿದ್ಧರ ಜೀವನ ಚರಿತ್ರೆಯನ್ನು "ಸಿದ್ಧಲಿಂಗ ಚಾರಿತ್ರ" ಎಂಬ ಸಾಂಗತ್ಯದಲ್ಲಿ ಚಿತ್ರಿಸಿದ್ದಾನೆ. ದೇವ ಕವಿ ಮರುಳಸಿದ್ಧನ ಸಮಕಾಲೀನ ಕವಿಯಲ್ಲದಿದ್ದರು ಗದ್ದುಗೆಯ ರಾಮಿತಂದೆಯು ತನ್ನ ಗುರುವಾದ ಮರುಳಸಿದ್ಧನ ಬಗ್ಗೆ "ಗುರುಬೋಧೆ" ಎಂಬ ಗ್ರಂಥವನ್ನು ಬರೆದಿದ್ದು, ಅದರ ಆಧಾರದ ಮೇಲೆ, ಇತಿಹಾಸ, ಸ್ಥಳ ಪುರಾಣ ಮತ್ತು ದಂತ ಕಥೆಗಳನ್ನು ಲಕ್ಷದಲ್ಲಿಟ್ಟುಕೊಂಡು ದೇವ ಕವಿಯು ಬಾಳ್ಗುಳಿಯ ಕಲಿದೇವನ ಕೃಪಾಬಲದಿಂದ ಕನ್ನಡ ಛಂದಸ್ಸಿನಲ್ಲಿ ಈಗ ದೊರೆತಿರುವ ಮರುಳಸಿದ್ಧ ಚರಿತ್ರೆಗಳಲ್ಲಿ ಇದೇ ಮೊದಲನೆಯದು ಮತ್ತು ಆಧಾರಭೂತವಾದುದು. ಮರುಳಸಿದ್ಧನ ಒಬ್ಬ ದಲಿತ ಮನೆಯಲ್ಲಿ ಜನನ ಆಗುತ್ತದೆ. ಇವರು ಹುಟ್ಟುವ ಪೂರ್ವದ ಕಥೆ ಕೈಲಾಸದ ವರ್ಣನೆ, ಭೂಲೋಕದಲ್ಲಿ ಹುಟ್ಟುವ ಸಂದರ್ಭ ಕವಿಯ ಅಪ್ರಬುದ್ಧತನ, ಇವುಗಳನ್ನೇ ಕುರಿತಾಗಿದೆ. ಅಂದರೆ ಮಹಾತ್ಮರಾದವರನ್ನು ದೇವಲೋಕದಿಂದ ಧರೆಯಲ್ಲಿ ಅವತರಿಸುವ ವರ್ಣನೆ ಮೊದಲಾದ ಅಸಂಬಂದ್ಧ ಕತೆಗಳನ್ನು ಕಟ್ಟುವುದು ದೇವಕವಿಗೆ ಮೀಸಲಾಗಿಲ್ಲ.[೨೭] ಇಂಥ ಕೈಲಾಸದ ಕಥೆಗಳು, ಜನನದ ಕಥೆಗಳು ಭಾರತೀಯ ಸಂಪ್ರದಾಯದಲ್ಲಿ ಅದ್ಭುತವಾಗಿ, ಅಸಂಬದ್ಧವಾಗಿ ಬರೆಯುವುದು ಒಂದು ವಾಡಿಕೆಯಾಗಿದೆ.

ದೇವಕವಿ ಕಾವ್ಯದ ಕಥಾನಾಯಕನ ಹಿರಿಮೆಯನ್ನು ಮೆರೆಯಲೋಸುಗ ಹಲವಾರು ಪವಾಡಗಳನ್ನು ಸೃಷ್ಟಿಸಿದ್ದಾನೆ. ಇಂದಿನ ಕಾಲಕ್ಕೆ ಅವು ವಿಚಿತ್ರವೆನಿಸಿದರೂ ಅಂದಿನ ಕಾಲಕ್ಕೆ ಅವು ಅನಿವಾರ್ಯವೆನಿಸಿದಂತಿವೆ. ಅಲ್ಲದೆ ಈ ಪವಾಡಗಳು ಇತಿಹಾಸಕ್ಕೆ ಪೂರಕವಾಗಿವೆ. ಅಂದಿನ ಜನತೆಗೆ ಇವುಗಳಲ್ಲಿ ಅಪಾರವಾದ ಶ್ರದ್ಧೆ ನಂಬಿಕೆಗಳಿದ್ದಂತೆ ಕಂಡು ಬರುತ್ತದೆ.[೨೮]

ಈ ಮೇಲೆ ನಿರೂಪಿಸಲ್ಪಟ್ಟ ಮರುಳಸಿದ್ಧ ಕಾವ್ಯದಲ್ಲಿ ಮರುಳಸಿದ್ಧರ ಜೀವನ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ. ಈ ಚರಿತ್ರೆಯು ದೇವಕವಿಯ ಕಾವ್ಯದ ಆಧಾರದ ಮೇಲೆ ಚಿತ್ರಿಸಲ್ಪಟ್ಟಿದೆಯಾದರು, ಕಾವ್ಯದಲ್ಲಿ ನಿರೂಪಿತವಾಗಿದೆ ಎಂಬ ಮಾತ್ರಕ್ಕೆ ಇದನ್ನು ಪ್ರಮಾಣೀಕರಿಸಬೇಕಾಗಿಲ್ಲ. ದೇವಕವಿ ಪ್ರೌಢನಲ್ಲ ಪ್ರಬುದ್ಧನೂ ಅಲ್ಲ. ತನ್ನ ತೊದಲು ನುಡಿಗಳಿಂದ ಈ ಕಾವ್ಯವನ್ನು ಹೆಣೆದು ಇಷ್ಟಾದರೂ ಚರಿತ್ರೆಯನ್ನು ಉಳಿಸಿರುವುದಕ್ಕೆ ಕೃತಜ್ಞರಾಗಿರಬೇಕಾಗುತ್ತದೆ. ಸಾಮಾನ್ಯವಾಗಿ ಧಾರ್ಮಿಕ ಚರಿತ್ರೆಗಳು ಪವಾಡಗಳಿಂದ ದೇವಲೋಕದ ಬಾಂಧವ್ಯದಿಂದ ಕೂಡಿರುವುದು ಜಗತ್ತಿನ ಒಂದು ಸಂಪ್ರದಾಯವೇ

ಆಗಿದೆ. ಇವುಗಳನ್ನು ರೂಢಿಸಲು ಕವಿಗಳು ಕಲ್ಪಿಸುವ ಕಲ್ಪನೆಗಳು ಕೆಲವೊಂದು ಸಮಂಜಸವಾಗಿಯೂ, ಕೆಲವೊಂದು ಅಸಮಂಜಸವಾಗಿರುವುದನ್ನು ಕಾಣುತ್ತಿದ್ದೇವೆ. ದೇವಕವಿಯ ಇಂತಹ ಕಲ್ಪನೆಗಳು ಅಸಮಂಜಸವಾಗಿದೆಯಾದರೂ ಪವಾಡಗಳಿಗೂ ದೇವಲೋಕ ಬಾಂಧವ್ಯಕ್ಕೆ ಮಹತ್ವವಿಲ್ಲದ ಈ ಜಾಗತೀಕರಣ ಯುಗದಲ್ಲಿ ನಾವು ಚಾರಿತ್ರ್ಯ ಸಂಗತಿಗಳಿಗೆ ಮಾತ್ರ ಗಮನವೀಯಬೇಕಾದುದು ಅನಿವಾರ್ಯ. ಈ ದೃಷ್ಟಿಯಲ್ಲಿಯೂ ದೇವ ಕವಿಯು ದುರ್ಬಲನೇ, ಉದಾಹರಣೆಗೆ ತನ್ನ ಜನ್ಮಸ್ಥಳದಲ್ಲಿ ನಡೆದ ಮಾರಿಹಬ್ಬ ಮೂಢನಂಬಿಕೆ ವಿರುದ್ಧ ಮತ್ತು ಬೇತೂರು ಯಜ್ಞ ಯಾಗಾದಿಗಳ ಖಂಡನೆ, ಮುಂತಾದ ಘಟನೆಗಳ ವಿವರಣೆ ಎಲ್ಲವೂ ಅಸ್ಪಷ್ಟತೆಯಲ್ಲೇ ಪೂರ್ಣಗೊಳಿಸಲ್ಪಟ್ಟಿದೆ. ಆದರೆ ಈ ಕಾವ್ಯದ ಪ್ರತಿಪಾದನೆಗೂ, ಮಾರಿಯ ಪೂಜೆಯ ಪ್ರಸಂಗದಲ್ಲಿ ದೇವರು, ಧರ್ಮಗಳ ದುರುಪಯೋಗ, ಪುರೋಹಿತರ ಸ್ವಾರ್ಥ ಸಾಧನೆ, ಮದ್ಯಮಾಂಸಗಳ ನಿಷೇಧ, ಪ್ರಾಣಿಹಿಂಸೆ – ನಿಷೇಧ–ಇವೆಲ್ಲಾ ದುರಾಚಾರಗಳು ಕಂಡುಬರುವವು. ಇವುಗಳನ್ನು ಪ್ರತಿಭಟಿಸುವುದೇ ಮರುಳಸಿದ್ಧರ ಹೋರಾಟದ ಗುರಿಯಾಗಿತ್ತೆಂದು ನಿರ್ಣಯಿಸುವುದು ಸಮಂಜಸವಾಗುತ್ತದೆ. ಹೀಗೆಯೇ ಇನ್ನಿತರ ಪ್ರಸಂಗಗಳಲ್ಲೂ ಅಸ್ಪಷ್ಟತೆಯ ಹಿನ್ನಲೆಯಲ್ಲಿ ಸ್ಪಷ್ಟತೆಯನ್ನು ಮನಗಂಡೇ ಈತನ ಜೀವನ ಚರಿತ್ರೆಯನ್ನು ಇಂತು ರೂಪಿಸಲಾಗಿದೆ.[೨೯] ಒಟ್ಟಿನಲ್ಲಿ ಮರುಳಸಿದ್ಧನ ಜೀವನ ಚರಿತ್ರೆಯಲ್ಲಿ ಅಹಿಂಸೆ ಮೊದಲಾದ ಇಂದಿನ ರಾಷ್ಟ್ರೀಯ ಧ್ಯೇಯ ಧೋರಣೆಗಳನ್ನು ಸಾರುವ ಈ ಕೃತಿ ಅಂದಿಗಿಂತ ಇಂದು ಬಹು ಪ್ರಾಮುಖ್ಯವನ್ನು ಗಳಿಸಬೇಕಾಗಿದೆ.

೨.೨.೨. ಕವಿ ರೇವಣಸಿದ್ಧ ವಿರಚಿತ ಮರುಳಸಿದ್ಧ ದೇವರ ಚರಿತ್ರೆ (ಸಾಂಗತ್ಯ)

ಗ್ರಾಮಾಂತರ ಜನಜೀವನದೊಡನೆ ಹಾಸುಹೊಕ್ಕಾದ ಕಾವ್ಯಪ್ರಕಾರವೆಂದರೆ ತ್ರಿಪದಿ, ಸಾಂಗತ್ಯ ಮತ್ತು ಯಕ್ಷಗಾನ ಕಾವ್ಯಪ್ರಕಾರಗಳು. 'ಬಸವಪುರಾಣ'ದ ಕಥಾ ಭಾಗವನ್ನು ಚೆನ್ನಪ್ಪ ಕವಿ 'ಶರಣಲೀಲಾಮೃತ' ವೆಂಬ ಹೆಸರಿನಿಂದ ಗ್ರಾಮಾಂತರ ಜನಜೀವನಕ್ಕೆ ಹೊಂದಿಕೊಳ್ಳುವಂತೆ ರಚಿಸಿದಂತೆ ಮರುಳಸಿದ್ಧನ ಕಾವ್ಯವನ್ನು ಕವಿ ರೇವಣಸಿದ್ಧನೆಂಬುವನು ಇದೇ ಉದ್ದೇಶವನ್ನಿಟ್ಟುಕೊಂಡೇ ಸಾಂಗತ್ಯ ಛಂದಸ್ಸೆಂಬ ಜನಪ್ರಿಯ ಹಾಡುಗಬ್ಬದಲ್ಲಿ ರಚಿಸಿ ಜನಪ್ರಿಯಗೊಳಿಸಿದ್ದಾನೆ. ತಾನು ಆನೆಕೊಂಡದ ಮಠದ ಮುದಿಬಸಪ್ಪಸ್ವಾಮಿಗಳ ಉದರೋದ್ಭವನಾದ ಗುರುಸಿದ್ಧ ದೇವರ ಮಗನೆಂದೂ ಹದಿನಾರು ವರ್ಷದವನಾಗಿದ್ದಾಗ, ಆನಗೋಡಿಗೆ ಬಂದು ಪರಮೇಶ್ವರ ದೇವರ ಮನೆಯ ಪಡಸಾಲೆಯ ಮೇಲೆ ಪಾಠವನ್ನು ಹೇಳುತ್ತಿದ್ದನೆಂದೂ ಆಕೃತಿಯಿಂದ ಗೊತ್ತಾಗುತ್ತದೆ ಈತನ ಕಾಲ ಕ್ರಿ.ಶ.೧೭೦೦.

ಈತನು ತನ್ನ ಕಾವ್ಯಕ್ಕೆ ಮೂಲವಸ್ತುವನ್ನು ದೇವ (ದೇಪ) ಕವಿರಚಿತ 'ಸಿದ್ಧಲಿಂಗಚಾರಿತ್ರ' ವೆಂಬ ಹೆಸರಿನ, ಮರುಳಸಿದ್ಧನನ್ನು ಕುರಿತಾದ ವಾರ್ಧಕಷಟ್ಪದೀ ಕಾವ್ಯದಿಂದ ತೆಗೆದುಕೊಂಡಿದ್ದಾನೆ. ಅದನ್ನೇ ಸಾಂಗತ್ಯ ರೂಪದಲ್ಲಿ ರಚಿಸಿದುದು ದೈವೀಕೃಪೆಯಿಂದ ಪ್ರೇರಿತವಾಗಿ, ಆನಗೋಡು ಮರುಳಸಿದ್ಧರು ತನ್ನ ಕನಸಿನಲ್ಲಿ ಬಂದು ಮಾಡಿದ ಆಜ್ಞೆಯಂತೆ ಶ್ರೀ ಮದುಜ್ಜಯಿನಿ ಮರುಳಸಿದ್ಧೇಶನ ಪಾದಕಮಲ ಮಧುಕರನೆಂದು ತನ್ನನ್ನು ಹೊಗಳಿಕೊಂಡು "ಮುಕ್ಕಣ್ಣನೇ ತನ್ನ ಹೃದಯದಲ್ಲಿ ಮೂರುತಿಗೊಂಡು ಅಕ್ಕರಿಂದಲಿ ಈ ಕೃತಿಯ ನೊಕ್ಕಣಿಸೆಂದು ನುಡಿಯೆ" ನುಡಿದೆನು ಎಂದು ತನ್ನ ವಿನಯವನ್ನು ತೋರ್ಪಡಿಸಿದ್ದಾನೆ. ಈ ಸಾಂಗತ್ಯದ ವರ್ಣನೆ ಬಹುಮಟ್ಟಿಗೆ ಒಗಟುಗಳ ರೂಪದಲ್ಲಿದೆ.[೩೦]

ಗದ್ದುಗೆಯ ರಾಮಿತಂದೆಯು ಶರಣ ಸಂತತಿಗೆ ಉದ್ಧರಿಸಿ ಹೇಳಿದ 'ಗುರು ಬೋಧೆಯ ಮಹಾತ್ಮೆ'ಯನ್ನು ದೇವಕವಿ 'ಸಿದ್ಧಲಿಂಗಚರಿತ್ರೆ' ರಚಿಸಿದ್ದ ಇದನ್ನೇ ಅನುಸರಿಸಿದ ರೇವಣಸಿದ್ಧ ಕವಿ ತಾನು ಸಾಂಗತ್ಯದಲ್ಲಿ ಹೇಳಿರುವಂತೆ ಯಥಾಸ್ಥಿತಿಯನ್ನು ಅನುಸರಿಸಿದ್ದಾನೆ. ದೇವಕವಿ ಆರು ಸಂಧಿಗಳಲ್ಲಿ ಕಾವ್ಯ ಪೂರ್ಣಗೊಳಿಸಿದ್ದಾನೆ. ಆದರೆ ಇಲ್ಲಿ ರೇವಣಸಿದ್ಧ ಕವಿ, ಏಳು ಸಂಧಿಗಳಲ್ಲಿ ಕಾವ್ಯಪೂರ್ಣಗೊಳಿಸಿ ಕಾವ್ಯರಚನಾತಂತ್ರದಲ್ಲಿ ತನ್ನ ನೈಪುಣ್ಯವನ್ನು ಕೊಂಚಮಟ್ಟಿಗೆ ಪ್ರದರ್ಶಿಸಿದ್ದಾನೆ.

ದೇವಕವಿ ರಚಿಸಿದ 'ಸಿದ್ಧಲಿಂಗ' ಚರಿತ್ರೆ ಅನುಸರಿಸಿ ರೇವಣಸಿದ್ಧ ಕವಿ ಮತ್ತೊಮ್ಮೆ ಮರುಳಸಿದ್ಧರ ಜೀವನ ಚರಿತ್ರೆಯನ್ನು ತನ್ನದೇ ಆದ ದಾಟಿಯಲ್ಲಿ ಚಿತ್ರಿಸುತ್ತಾ ಹೋಗುತ್ತಾನೆ. ಆರಂಭದಲ್ಲಿ ದೇವಕವಿಯಂತೆ ರೇವಣಸಿದ್ಧ ಕವಿಯು ಸಹ ಗುರು ಪಂಡಿತೇಶ, ಪಾಲ್ಕುರಿಕೆಯಾರಾದ್ಯ, ಭೀಮಕವಿ, ಚಾಮರಸ, ಮಯೂರ, ಕೆರೆಯ ಪದ್ಮರಸ, ಮಗ್ಗೆಯ ಮಾಯಿದೇವ, ವರಬಾಣ, ಹರಿಹರ, ರಾಘವಾಂಕ, ಕವಿಗಳನ್ನು ಸ್ಮರಿಸಿ ಹಾಗೂ ಪೂರ್ವ ಕವಿಗಳಾದ ವರಕಾಳಿದಾಸ, ಮಲುಹಣ, ಮಲಯ ರಾಜೇಂದ್ರ ಹಲಧರ, ಉದ್ಭಟ ತ್ವರಿತ ಶಂಕರ ಶಿವಕವಿಗಳ ಚರಣಕ್ಕೆ ಎರಗಿಕೊಂಡಾಡಿ ಕಥೆ ಹೇಳುವೆ[೩೧] ಎಂದು ಆರಂಭಿಸುತ್ತಾನೆ. ದೇವಕವಿಯಂತೆ ಇಲ್ಲಿಯು ಆರಂಭದಲ್ಲಿ ಕವಿಯು ಕೈಲಾಸದ ವರ್ಣನೆ ಗಿರಿಜಾಪತಿಯಾದ ಶಿವನು ಭೂಲೋಕದಲ್ಲಿ ರೇವಣಸಿದ್ಧನಾಗಿ ಜನಿಸುವಂತಹ ವರ್ಣನೆ, ಪಾರ್ವತಿಯ ಮಾಯೆಯಾಗಿ ಕೊಲ್ಲಾಪುರದಲ್ಲಿ ಜನಿಸುವ ಬಗೆ, ಶಿಲಾದಮುನಿಯಿಂದ ಶಾಪಗ್ರಸ್ಥಳಾದ ಸತಿ ಸುಪ್ರಭೆ ಭೂಲೋಕದಲ್ಲಿ, ಕಗ್ಗಲ್ಲು ಪುರದಲ್ಲಿ ಮಚ್ಚೆಕಾಯಕ ವೃತ್ತಿ (ಅಂದರೆ ಚಮ್ಮಾರ, ಅಸ್ಪೃಶ್ಯ ಮಾದಿಗ) ಜಾತಿಯ ಮನೆಯಲ್ಲಿ ಕೂಗಿಮಾರನ ಹೆಂಡತಿಯಾಗಿ ಹೊಂದುವಳು. ಕೈಲಾಸದ ಮುನಿಶ್ರೇಷ್ಠನಾದ ಭೃರ್ಗನಕುವರನು ಜಂಗಮ ವೇಷತಾಳಿ ಭೂಲೋಕದಲ್ಲಿ ಯಾತ್ರೆ ಕೈಗೊಳ್ಳಲು ಭೂಲೋಕದಲ್ಲಿ ಕಗ್ಗಲ್ಲುಪುರದೊಳಗೆ ಕೂಗಿಮಾರ ಸಂಧಿಸಲು ಮುನಿಯು ಹೀಗೆ ಹೇಳುತ್ತಾನೆ.

ಬರಿಯ ಪಾದದಿ ಧರೆಯಲ್ಲವ ತಿರುಗಿನಾ

ಸೊರಗಿ ಕೊರಗಿದೆನೊ ಮಗನೆ

ಚರಣ ರಕ್ಷೆಯ ಮಾಡಿಕೊಡಲು ನಿನಗೆ ಭವ

ಹರನೊಲಿವನು ಎಂದ ಸಿದ್ಧ[೨೨] ॥೩೨॥ (ಎರಡನೇ ಸಂಧಿ)

ಮಾನವ ಚರ್ಮದ ಪಾದರಕ್ಷೆ ಮಾಡಿಕೊಡೆನಲು ಕೂಗಿಮಾರ ಚಿಂತೆಯಾಳಗಿರಲು ಆಗ ಸತಿ ಸುಪ್ರಭೆ ಪತಿಯ ಚಿಂತೆಯನುನಿವಾರಿಸಲು ತನ್ನ ಸ್ತನಗಳೆರಡನು ಕೊಯ್ದು ಪಾದರಕ್ಷೆಗಳನ್ನು ಮಾಡಿಕೊಡಿ ಎಂದು ಪತಿಗೆ ಹೇಳಿದರು. ಮೆಚ್ಚಿದೆ ನಿಮ್ಮ ಭಕ್ತಿಯನ್ನು ಬೇಡಿರಿ ವರವನ್ನು ಕೇಳಿರಿನೇನು ಪುತ್ರಸಂತಾನವಿಲ್ಲದೆ ಬಳಲಿದ ದಂಪತಿಗಳು ಪುತ್ರ ಸಂತಾನವನು ಅನುಗ್ರಹಿಸು, ಎನ್ನಲು ಆಗ ಆ ಮುನಿಯು ಮಕ್ಕಳು ಆದರೆ ದುಃಖವು ಮರಣವು ಬರುವುದು, ಅದನ್ನು ಬಿಟ್ಟು ಬೇರೆ ಕೇಳಿ ಎಂದೆನ್ನಲು ಮರಣವೇ ಬಂದರೆ ಬರಲಿ ತಮಗೆ ಮಕ್ಕಳ ಫಲ ಅನುಗ್ರಹಿಸು ಎಂದಾಗ "ನಾನೆ ನಿಮ್ಮಯ ಮಗನಾಗಿ ಹುಟ್ಟುವನೆಂದು ಆನಂದದಿಂ ಸಿದ್ಧನುಡಿದ" ಎಂದು ನುಡಿದ ಆ ಮುನಿ ಮಾದಿಗ ಜಾತಿಯಲ್ಲಿ ಕಗ್ಗಲ್ಲುಪುರುದೊಳು ಕೂಗಿಮಾರ ಸುಪ್ರಭೆ ದಂಪತಿಗಳಿಗೆ ಮರುಳಸಿದ್ಧನು ಜನಿಸಲು ಈ ದಂಪತಿಗಳಿಗೆ ಮರಣವು ಪ್ರಾಪ್ತವಾಯಿತು. ಬಂದ ಶಾಪದಿಂದ ವಿಮುಕ್ತಿ ಹೊಂದಿ ನರದೇಹವನು ಬಿಟ್ಟು ಕೈಲಾಸ ಸೇರಿದರು. ಆನಂತರ ದೇವಲೋಕದ ಅನುಜೆಯರು ಮರುಳಸಿದ್ಧನಿಗೆ ಲಾಲನೆಯ ಜೋಗುಳವನ್ನು ಹಾಡುತ್ತಾ ಪೋಷಣೆ ಮಾಡುವರು. ಇಪ್ಪತ್ತೊಂದು ದಿವಸ ತುಂಬಲು ಮರುಳನು ಕಗ್ಗಲ್ಲು ಪುರದ ಬಾಚನಗೌಡನ ಮನೆಯ ಕೊಟ್ಟಿಗೆಯ ಕುರುಳ ಬಣವಿಯಲಿ ಅನುಜೆಯರು ಶುಭ ಲಾಲನೆಯಲ್ಲಿ ಹಾಡುತ್ತಿರುವರು. ಅನುಜೆಯರ ರಾಗ ಮಾತ್ರ ಕೇಳುತ್ತದೆ, ನಂತರ ಅದೃಶ್ಯರಾಗಿರುತ್ತಾರೆ. ಮರುಳನು ಮಾತ್ರ ನಗುತ್ತ ಆಡುತ್ತಿರುವ ದೃಶ್ಯವನ್ನು ಕಂಡ ಬಾಚನಗೌಡ ಕಂಡು ಆಶ್ಚರ್ಯ ಪಡುವನು ಸತಿ ಮಲ್ಲಮ್ಮನನ್ನು ಕರೆದು ತೋರಿಸುವನು. ಮಕ್ಕಳಿಲ್ಲದ ಈ ದಂಪತಿಗಳು ಸುಂದರವಾದ ಈ ಮಗುವನ್ನು ಸಾಕಿಕೊಳ್ಳುತ್ತಾರೆ. ಮುಂದೆ ಸಾಕು ಮಗನಾಗಿ ಬೆಳೆಯುತ್ತಾನೆ, ಈ ಘಟನೆಗಳನ್ನು ದೇವಕವಿ ನಿರೂಪಿಸಿರುವಂತೆ ಕಾವ್ಯಕ್ಕೆ ಯಾವುದೇ ಚ್ಯುತಿ ಬಾರದಂತೆ ರೇವಣಸಿದ್ಧ ಕವಿಯು ಇದೇ ಘಟನೆಯನ್ನು ತನ್ನದೇ ಆದ ದಾಟಿಯಲ್ಲಿ ಬಣ್ಣಿಸಿದ್ದಾನೆ. ಮುಂದಿನ ಘಟನೆಗಳೆಲ್ಲ ಇದೇ ರೀತಿ ನಿರೂಪಿತವಾಗುತ್ತ ಬರುತ್ತವೆ.

ಕವಿಯು ಮುಂದಿನ ಘಟನೆಗಳನ್ನು ದೇವಕವಿಯನ್ನು ಅನುಸರಿಸಿ ಮರುಳಸಿದ್ಧನ ಜೀವನದ ಘಟನೆಗಳಲ್ಲಿ ಒಂದಾದ ತುರುಮಂದೆಯೊಳಗಿರ್ದ ಕರುವಕೊಡಿಸಿ ಮಕ್ಕಳೊಳು ಚಂಡಾಟವು ಮತ್ತು

ಅವನ ತುಂಟಾಟಗಳಿಂದ ಬೇಸತ್ತು ಮರುಳನ ಲೀಲೆಗಳ ತೋರಿಸಲು ಬಾಚನಗೌಡನ ಬಳಿ ಪುರಜನರು ದೂರಿಡುವರು. ಬಾಚನಗೌಡ ಅಡವಿಗೆ ಬಂದು ನೋಡಿದರೆ ಕರುಕಾಯುತಿರಲು ಅಚ್ಚರಿಬಟ್ಟು ಹಿಂತಿರುಗುವನು. ಇದೇ ರೀತಿ ಮುಳ್ಳಪಲ್ಲವಕ್ಕಿನೇರಿ ಪಲ್ಲವಗಟ್ಟೆಯದಾಯ್ತು. ಎಲ್ಲಾ ಬಾಲಕರು ಸೇರಿ ಮಸಕದಿಂದಾಡುತಲೊಂದು ಮಸಣಿಯ ಕಟ್ಟೆ ನಿರ್ಮಾಣವ ಮಾಡಿದ ಅದೇ ಮಸಣಕಟ್ಟೆಯಲ್ಲಿ ಒಕ್ಕಲಿಗರಾದ ಮಲ್ಲಗೊಂಡ, ಮರುಳ್ಗೊಂಡರವರ ಮನೆಗೆ ಬಂದು ಭೀಕ್ಷೆ ಬೇಡಲು ಏನು ಇಲ್ಲದ ಒಕ್ಕಲಿಗರು ಹಿಡಿಎಳ್ಳು ನೀಡುತ್ತಿರಲು ನಮಗೆ ಏನು ಇಲ್ಲ. ಗೌಡನ ಮನೆ ಋಣತೀರಿಸಲಾಗದೆ ಬೆಳೆದ ಎಳ್ಳು ಕೈ ಸೇರಿಲ್ಲ ನಿನಗೇನು ಕೊಡಲು ಎನ್ನುತ್ತಿರಲು ಇವರು ಕೊಡವಿದ ಎಳ್ಳು ಕಡ್ಡಿಯಿಂದ ಕೊಡವಿ ಮೂಗಂಡುಗೆಳ್ಳನು ಹೆಚ್ಚಿಸಿ ಕೂಗಿನ ಮಾರನು ಮಾಡಿದ ಋಣವನು ತೀರಿಸಿದ. ಇಲ್ಲಿ ದೇವಕವಿಯ ಕಾವ್ಯದಲ್ಲಿ ಇದೇ ಘಟನೆ ನಿರೂಪಿತವಾಗಿದೆ. ಆದರೆ ರೇವಣಸಿದ್ಧ ಕವಿ ಈ ಸನ್ನಿವೇಶವನ್ನು ಈ ರೀತಿ ವರ್ಣಿಸಿದ್ದಾನೆ. ಕೂಗಿಮಾರನು ಮಾಡಿದ್ದ ಋಣವನ್ನು ಬೇಗ ತೀರಿಸಿ ಎಂದು ಕವಿ ನಿರೂಪಿಸುತ್ತಾನೆ. ಸನ್ನಿವೇಶ ಒಂದೇ ಆಗಿರುತ್ತದೆ. ಆದರೆ ಕೆಲವು ಸನ್ನಿವೇಶಗಳನ್ನು ತನ್ನದೇ ಆದ ದಾಟಿಯಲ್ಲಿ ಹೇಳಲು ಹೊರಟಿದ್ದಾನೆ. ಕೊಡವಿದ ಎಳ್ಳ ಕಡ್ಡಿಯಿಂದ ಎಳ್ಳು ಹೆಚ್ಚಾಗಲು ಕಾರಣವೇನೆಂದು ನಂಬುವುದು ಅಸಾಧ್ಯ. ಮಹಾತ್ಮರು ಪವಾಡಗಳನ್ನು ತಮ್ಮ ಶಕ್ತಿ ಪ್ರದರ್ಶನಕ್ಕಾಗಿ ಮಾಡುವುದಿಲ್ಲ, ಭಕ್ತರನ್ನು ಉದ್ಧರಿಸುವ ಪ್ರಸಂಗಗಳಲ್ಲಿ ಅವು ನಡೆದು ಹೋಗುತ್ತವೆಂಬ ಮಾತೊಂದಿದೆ. ಹೀಗಾಗಿ ಮರುಳಸಿದ್ಧರು ದೃಷ್ಟಿ ಪೌರುಷದಿಂದ ತಮ್ಮ ಕೃಪಾಕಟಾಕ್ಷದಿಂದಲೇ ಕಣ್ಣಿಗೆ ಬಿದ್ದವರ ಮನತಿರುಗಿಸಿ ಅವರಲ್ಲಿ ಸಾತ್ವಿಕತೆಯನ್ನು ತುಂಬುತ್ತಿದ್ದರು[೩೩].

ಮತ್ತೊಂದು ಘಟನೆ ಸೌಧೆ ಬಂಡಿಯನ್ನು ಪುರಕ್ಕೆ ಎಳೆದುಕೊಂಡು ಬಂದಿದ್ದು ರೇವಣಸಿದ್ಧ ಕವಿಯು ದೇವಿಕವಿವರ್ಣಿಸಿರುವ ಈ ಸನ್ನಿವೇಶವನ್ನು ಇಲ್ಲಿ ಯಥಾಸ್ಥಿತಿಯಲ್ಲಿ ವರ್ಣಿಸಿದ್ದಾನೆ. ಇದೇ ರೀತಿ ಮತ್ತೊಂದು ಸನ್ನಿವೇಶದಲ್ಲಿ ಮರುಳಸಿದ್ಧರ ತನ್ನ ಜನ್ಮಸ್ಥಳವಾದ ಕಗ್ಗಲ್ಲುಪುರದೊಳಗೆ ಮಾರಿಯ ಜಾತ್ರೆಯ ಸಮಯದಲ್ಲಿ ಪ್ರಾಣಿಗಳ ಬಲಿ, ಹಿಂಸೆ, ಮೂಢನಂಬಿಕೆ, ಅಜ್ಞಾನ ತುಂಬಿರುವ ಸಾಮಾಜಿಕ ವ್ಯವಸ್ಥೆಯನ್ನು ಖಂಡಿಸುತ್ತಾನೆ. ಇದೇ ಘಟನೆಯೆ ತನ್ನ ಜನ್ಮ ಸ್ಥಳ ಬಿಡಲು ಕಾರಣವಾಗುತ್ತದೆ. ಗುರುವಿನ ಮಾರ್ಗವನ್ನು ಅನುಸರಿಸಿ ದೇಶಾಂತರಕ್ಕೆ ಹೊರಡುತ್ತಾನೆ. ಹೀಗೆ ಪುರ ಬಿಟ್ಟು ಹೊರನಡೆದ ಮರುಳಸಿದ್ಧ[೩೪] ಎಮ್ಮನ ಬೇತೂರೊಳ್ ದ್ವಿಜರು ಮಾಡುವ ಯಜ್ಞವ ನೋಡಿ

ಕಮ್ಮನ್ನೊಟವನುಣ್ಣುತಿರಲು

ಬ್ರಹ್ಮ ನಮಿತನೊಳ ಹೊಕ್ಕನು ಮನೆಯೊಳು

ಗಮ್ಮನೆ ಭಿಕ್ಷವೆಂದೆನಲು

ಮರುಳಸಿದ್ಧ ಬೇತೂರಿನಲ್ಲಿ ಯಜ್ಞಯಾಗಾದಿಯ ಖಂಡನೆ ಮಾಡುತ್ತಾನೆ. ಅಲ್ಲಿನ ಬ್ರಾಹ್ಮಣರು ಮರುಳಸಿದ್ಧರನ್ನು ಕಟ್ಟಿ ಅಣಜಿ ಕೆರೆಯೊಳು ಹಾಕಿ ಬರುತ್ತಾರೆ. ಪುನಃ ಯಜ್ಞ ಶಾಲೆಯ ಕಡೆ ಪ್ರವೇಶಿಸುತ್ತಾನೆ. ಕುಲಹದಿನೆಂಟು ಜಾತಿಯವರನ್ನು ಒಂದುಗೂಡಿಸಿ ಯಜ್ಞ ಶಾಲೆಯ ಮುಂದೆ ಪ್ರತಿಭಟಿಸುತ್ತಾರೆ. ಬಲುಕೋಪ ಮಿಗಿಲಾಗಿ ಬ್ರಾಹ್ಮಣರು ಹಗೇವಿನಲ್ಲಿ ಸಿದ್ಧನ ಹಾಕಿ ಸುಣ್ಣ ಕಲ್ಲನು ಒಟ್ಟಿ ಜಲವ ಸುರಿದು ಮರುಳನೀ ಸಾಯಿ ಎಂದು ಕೂಗುತ್ತಿದ್ದರು. "ನೆಲದ ತಗ್ಗಿನೊಳು ಸುಣ್ಣದಿ ಹಾಕೆ ಸಿದ್ಧನು ನೆಲಸಿದ ಲಿಂಗತಾನಾಗಿ ಉದ್ಭವನಾದ, ವಿಪ್ರರೆಲ್ಲ ಅಚ್ಚರಿಪಟ್ಟು ಯಜ್ಞಕ್ಕೆ ಭಂಗಪಡಿಸುವನೊಬ್ಬನೆಂದು "ಕುಂಭಿನೀಪತಿಗೆ ದೂರು ನೀಡುವರು. (ದೇವ ಕವಿ ಇಲ್ಲಿ ನೋಣಬ ಚಕ್ರೇಶ್ವರನೆಂದು ಹೆಸರಿಸಿರುವನು) ಕುಂಭಿನಿ ಪತಿ ಕೋಪದಿಂದ ಕುಂಭಿಯ ಮುಂದೆ ಹಾಕೆನೆ, ಸಿದ್ಧನ ತಂದು ಕುಂಭಿಯ ಮುಂದೆ ಹಾಕಿದರು". ಆನೆಯ ಕಾಲಿಗೆ ಹಾಕಿ ತುಳಿಸಿರಿ ಎಂದು ರಾಜಾಜ್ಞೆಯಾಗಲು ಆನೆಯನು ಮರುಳನ ಮೇಲೆ ಬಿಡಲು ಆನೆಯು ಮರುಳಸಿದ್ಧರನ್ನು ಬೆನ್ನ ಮೇಲೆ ಕೂರಿಸಿಕೊಂಡು ನಡೆದಿತ್ತು. ಆನೆಯನ್ನು ಹಿಡಿಯಿರಿ ಮರುಳಸಿದ್ಧರನ್ನು ಕೊಲ್ಲಿರಿ ಎಂದು ರಾಜನು ದೂತರನ್ನು ಕಳುಹಿಸುವನು. ಕರಿಯನೇರಿಕೊಂಡು ಮರುಳಸಿದ್ಧೇಶ್ವರ ಪೂರ್ವದಿಕ್ಕಿನಕಡೆ ನಡೆದ. ಮರುಳಸಿದ್ಧರು ಮುಚ್ಚನೂರ ಪುರದೊಳಗೆ ಮುಚ್ಚಿಕೊಳ್ಳಲು ಮುಚ್ಚನೂರಾಯಿತು. ಅಲ್ಲಿಂದ ಮುಂದೆ ಪಯಣ ಉಳುಪನಕಟ್ಟಯಲ್ಲಿ ಉಳಿದುಕೊಂಡ ಹುಳುವಸೊಸುತು ಕುಳಿತಿರಲು ಉಳುಪನಕಟ್ಟೆಯಾಯಿತು.

ದೊರೆ ಬಂದು ತರಳನ ಕರಿಹೋಯ್ತೆ ಕಾಣೆನೆ

ಕರಿಯ ಕಾಣೆನೆನೆ ಪೋಗಲವರು

ಕರಿಯು ಅವರಿಗಿಂತ ಮುಂದೆ ಪೋಗುತಲಿರೆ

ದೊರೆಯ ಬಲವು ಬೆಂಬತ್ತೆ[೩೫] ॥೧೦೪॥ (ನಾಲ್ಕನೇ ಸಂಧಿ)

ಸದ್ದುಮಾಡದೆ ಅಲ್ಲಿದ್ದ ಹನುಮನ ಕಂಡು ಎದ್ದು ನೋಡೆಂದ ಆನೆ ಇತ್ತ ಕಡೆ ಬಂದಿತು ಎಂದು ಹೇಳಲು ಮರುಳಸಿದ್ಧರು ಎದ್ದು ತುಳಿದರಾನೆಯನು ಬಂಡೆಯೊಳು ಕರಿಯು ಚಂಡಡಿಯಾಗಿ ಬೀಳಲು ಬಂಡೆಡೋಣೆಯಸಿದ್ಧನೆಂದು ಮರುಳೇಶ ಭೂಮಂಡಲದೊಳು ಮೆರೆದರು. ಮುಂದೆ ಮರುಳಸಿದ್ಧರು ಮಾನವರಿಗದೃಶರಾಗಿ ಮರುಳೇಶನು ನೆಲಸಲು ಅದು ಆನಗೋಡೆಂಬ ಪುರವಾಯಿತು. ಅಲ್ಲಿಂದ ಮುಂದೆ ಅಸಗೋಡೆಂಬ ಪುರದಲ್ಲಿ ಅಸುರರನ್ನು ನಿಗ್ರಹಿಸಲು ಅದು

[illegible]

ಅಸಗೋಡೆಂಬ ಪುರವಾಯಿತು. ಅಲ್ಲಿಂದ ತುಯ್ಯಲೂರಿಗೆ ಬಂದು ಮತ್ತೆ ಎಳೆವೆರೆದಲೆಯನು ಹಯನ ಹೆಚ್ಚಲಿಯೆಂದುತಳುಹದೆ ಹರಕೆಯನಿತ್ತು ಘಳಿಲನೆ ತುಯ್ಯಲೂರನು ಬಿಟ್ಟು ಬಂದ ಬಲ್ಲಾಳರಾಯನ ಪಟ್ಟಣಕೆ.

ದ್ವಾರಸಮುದ್ರದತ್ತ ಪಯಣ ಅಲ್ಲಿ ಬಲ್ಲಾಳರಾಯನ ಪುರದೊಳಗೆ ಪ್ರಜೆಗಳ ಹಕ್ಕುಗಳನ್ನು ಎತ್ತಿ ಹಿಡಿದ ಮರುಳಸಿದ್ಧ. ಈ ಪ್ರಸಂಗವನ್ನು ಈ ಹಿಂದೆ ತಿಳಿಸಲಾಗಿದೆ. ಅಲ್ಲಿಂದ ಮುಂದೆ ಕುಂಬನೀಪುರದತ್ತ ಪಯಣಬೆಳೆಸಿ ಅಲ್ಲಿದ್ದ ದುರಾಚಾರದ ಭೈರವಗೊಂಡ ಸದಾಚಾರಿಯಾದ ಸತಿ ಲಿಂಗಮ್ಮ ದಂಪತಿಗಳ ನಡುವಿನ ಸಾಮರಸ್ಯವನ್ನು ನಿವಾರಿಸಿ ದುರಾಚಾರದ ಭೈರವಗೊಂಡನನ್ನು ಸದಾಚಾರಿಯಾಗಿ ಪರಿವರ್ತಿಸಿ ಅವನಿಗೆ ಲಿಂಗಧೀಕ್ಷೆ ನೀಡಿ ಕುಂಭೇಶ್ವರನೆಂಬ ನಾಮದಿ ಮೆರೆದು ಮುಂದೆ ನಡೆದ. ಮರುಳಸಿದ್ಧರು ಚಿನ್ಮಯಗಿರಿಯಲ್ಲಿ ಗುರುರೇವಣಸಿದ್ಧರಿಂದ ಲಿಂಗದೀಕ್ಷೆಯ ಅನುಗ್ರಹವ ಪಡೆದ ಮರುಳಸಿದ್ಧ.

ಮುಗ್ಧಭಾವದಿ ಸಿದ್ಧಸದ್ಗುರುವಿನ ಪದಕೆ
ವಾಗ್ದಾನವನು ಮಾಡಿದನು
ಮುಗ್ದನಾಗಿಯೆ ಭಿಕ್ಷೆ ತರಲಿಕ್ಕೆ ಧನದಿಕ್ಕು
ಹೋಗದಿರೆನಲೇಕೆ ಗುರುವೆ[೩೬] ॥೯೨॥ (ಐದನೇ ಸಂಧಿ)

ಎಂದು ಗುರುವಿನ ಆಜ್ಞೆಯನ್ನು ಕೇಳುತ್ತಾನೆ. ಎಲ್ಲಾ ದಿಕ್ಕುಗಳಲ್ಲಿ ಸಂಚರಿಸಿ ಭಿಕ್ಷವತಂದು ವಂದಿಸುವೆ ಎಂದಾಗ ಗುರುರೇವಣಸಿದ್ಧ ಮರುಳಸಿದ್ಧರನ್ನು ಕುರಿತು ನೀನು ಉತ್ತರದಿಕ್ಕಿಗೆ ಮಾತ್ರ ತೆರಳಬೇಡ ಅಲ್ಲಿ ಕೊಲ್ಲಾಪುರ ಎಂಬ ಪುರದಲ್ಲಿ ದೊರೆ ಕರಟಾಸುರನ ಪತ್ನಿಯುದರದಿ ಜನಿಸಿದ ಮಾಯೆ ಅಟ್ಟಹಾಸದಿಂದ ಮೆರೆಯುತಿಹಳು ಅಲ್ಲದೇ ದುರಳಸಿದ್ಧರು ನೆಲೆಸಿರುವರು ದುಷ್ಟರಿಂದ ಕೂಡಿದ ಇಂತಹ ಸ್ಥಳಕ್ಕೆ ನೀನು ಹೋಗಬೇಡೆಂದು ರೇವಣಸಿದ್ಧರು ಮರುಳಸಿದ್ಧರಿಗೆ ಹೇಳಿದರು. ಆದರೆ ಮರುಳಸಿದ್ಧ ದುಷ್ಟರನ್ನು ಸಂಹರಿಸಲು ತನಗೆ ಅನುಮತಿ ನೀಡಬೇಕೆಂದು ಗುರುವಿನ ಅಣತಿಯಂತೆ ತಾನು ಉತ್ತರದ ಕಡೆ ಮಾಯೆಯನ್ನು ನಿಗ್ರಹಿಸಲು ನಡೆದ ಮಾರ್ಗದ ಮಧ್ಯದಲ್ಲಿ ನರಳುವರೋಗದ ವೇಷದಲ್ಲಿ ರಾಮಿಶೆಟ್ಟಿಪುರದಲ್ಲಿ ರಾಮಿತಂದೆಯನ್ನು ಪರೀಕ್ಷಿಸಲು, ರಾಮಿತಂದೆಯು ಮರುಳಸಿದ್ಧರ ಸೇವೆಯ ಮಾಡಿದ್ದರಿಂದ ಗದ್ದುಗೆಯ ರಾಮಯ್ಯನೆಂಬ ಪೆಸರನು ಇಟ್ಟು ಹರಸಿದನು. ಮುಂದೆ ಗದ್ದುಗೆ ರಾಮಿತಂದೆಯು ಮರುಳಸಿದ್ಧನ ಶಿಷ್ಯನಾದನು.

ತೆಲುಗು ಬಾಳಿನತ್ತ ಮರುಳಸಿದ್ಧರ ಸಂಚಾರ ಮಧ್ಯದಲ್ಲಿ "ಹಲದ ಕಾಯಕದಿಂದೊಕ್ಕಲಿಗರ ಮಂದಿಯು ನೆಲವನ್ನು ಉಳುತಿರೆ ಕಂಡು" ಮಾತುಬಾರದ ಹುಡುಗನೊಬ್ಬನನ್ನು ತಮಗೊಪ್ಪಿಸಲು ಕೇಳಿದರು. ಮಾತು ಬಂದರೆ ಕರೆದೊಯ್ಯಿರಿ ಎನ್ನಲು

ತಳುಹದವರ ಕರತಂದು ಮನೆಗೆ ಬಂದು
ಗಳಿಗೆ ತರಿಸಿ ಅದರೊಳಗೆ
ತುಳುಕುವ ಹರುಷದಿ ಪಡಿಬತ್ತವನು ನೀಡೆ
ಗಳಿಗೆ ತುಂಬಲು ಸಿದ್ಧ ನುಡಿದ[೩೭] ॥ ೧೨೪ ॥ (ಆರನೇ ಸಂಧಿ)

ಮಾತುಬಂದ ಸಿದ್ಧನನ್ನು ಕರೆದೊಯ್ದು ತನ್ನ ಶಿಷ್ಯನನ್ನಾಗಿ ಅನುಗ್ರಹಿಸಿ ಮುಂದೆ ಮುಂದೆ ನಡೆದ "ಬಲ್ಲಿದ ಸಿದ್ಧ ಶಿವಕ್ಷೇತ್ರವೆಲ್ಲವ ನೋಡಿ ಅಲ್ಲಿ ಗುಂಡಯ್ಯ ಬ್ರಹ್ಮಯ್ಯ"ರನ್ನು ಮಾರ್ಗಮಧ್ಯದಲ್ಲಿ ಸಂದರ್ಶಿಸಿ ಮುಂದೆ ಕೊಲ್ಲಾಪುರದತ್ತ ನಡೆದ.

ಮರುಳಸಿದ್ಧರು ಕೊಲ್ಲಾಪುರದ ಮಾಯೆಯ ಗರ್ವಭಂಗ ಮಾಡಲು ನಡೆದ ದುಷ್ಟರಿಂದ ಕೂಡಿದ ಆ ಅರಮನೆಯೊಳಗೆ ಮಾಯೆಯ ಸೇವಕರಾದ ಬ್ರಹ್ಮ, ಕಾಲಭೈರವ, ಜಟ್ಟಿಗರನ್ನು ತನ್ನ ವಶವ ಮಾಡಿಕೊಂಡು ತನ್ನ ಅಧೀನದಲ್ಲಿರಬೇಕೆಂದು ಆಜ್ಞೆ ಮಾಡಿ ಮಾಯೆಯತ್ತ ನಡೆದ ಮಾಯೆ ಮರುಳಸಿದ್ಧರಿಗೆ ವಿಷವನೀಡುವಳು "ತರಳೆ ಗರಳ ಬಲು ರುಚಿದೋರುತಿರುವುದು ಇರುವುದೆಲ್ಲ ನೀಡು ಉಣ್ಣುವೆನು" ಎಷ್ಟು ವಿಷವಿಕ್ಕಿದರು ಮರಣವೇ ಬರದ ಮರುಳಸಿದ್ಧರನ್ನು ಕಂಡು ಕೊಲ್ಲುವೆನೆಂದು ಮರುಳನ ಮೇಲೆರಗಿದಳು. ಕೋಪದಿಂದ ಮರುಳಸಿದ್ಧರು ಮಾಯೆಯ ಮೂಗನ್ನು ಕೊಯ್ದು, ಮಾಯೆ ದುಃಖದಿ ಹೊರಳಿದಳು. ಮಾಯೆ ತನ್ನ ತಪ್ಪಿನ ಅರಿವಾಗಿ ಮರುಳಸಿದ್ಧರಲ್ಲಿ ಶರಣಾದಳು, ಮರುಳಸಿದ್ಧರು

ಕೈಯ ಕತ್ತಿಯನಲ್ಲಿ ಹಾಕಿ ಲಿಂಗವಮಾಡಿ
ಪಾಯದಿ ಕಾಳ್ಕುಜ್ಜೆನೆಂಬ
ಒಯ್ಯಾರದ ಪೆಸರಿಟ್ಟಲ್ಲಿ ಸರ್ವಸ-
ಹಾಯ ಮಿಗಲು ಬಂದ ಸಿದ್ಧ ॥೮೦॥
ಸಜ್ಜನರಿಂಗೆಲ್ಲ ಅಜ್ಜನಾಗಿರುತಲಿ
ದುರ್ಜನರಿಗೆ ಹರಿಯಾಗಿ

ಸಜ್ಜೆ ಸಜ್ಜೆಯಲಿ ಮಲ್ಲಿಕಾರ್ಜುನನೆನಿಸಿ

ಕೊಂಡುಜ್ಜಿನಿ ಪುರಕಾಗಿ ಬಂದ[೩೮] ॥೮೧॥ (ಆರನೇ ಸಂಧಿ)

ಮಾಯೆಯನ್ನು ಸೋಲಿಸಿ ಮರುಳ ನಿಂದನು ಉಜ್ಜಿನಿಯಲಿ

ನಿಂದಾಗ ತೆಲಗುಬಾಳಿಂ ತಂದ ಸಿದ್ಧಗೆ

ಅಂದುಪದೇಶವನಿತ್ತು

ಚಂದದಿಂ ಮುರುಮುದ್ರೆಯಿತ್ತರಹು ಕೊಟ್ಟತ್ಯಾ-

ನಂದದಿಂ – ತರಳ ಬಾಳೆಚಿದ ॥೫॥ (ಏಳನೇ ಸಂಧಿ)

ಎಲೆ ದೇವನೀಕೊಟ್ಟ ಪರಿಣಾಮದೊಳು ಬೆನ್ನ

ಅಲಸದೆ ಕಂಥೆಯ ಧರಿಸಿ

ಒಲವಿಂದ ಚಾಂಗು ಭಲರೆಯೆಂದು ಹರಸುವೆವು

ತರಳಬಾಳಿನ ಸಂತತಿಯ[೩೯] ॥೬॥ (ಏಳನೇ ಸಂಧಿ)

ಎಂದು ತರಳಬಾಳ ಸಿದ್ಧನಿಗೆ ಪೀಠಧಿಪತಿಯಾಗಿ ಅನುಗ್ರಹಿಸಿ ತರಳಬಾಳು ಸಂತತಿಯ ಕಾಪಾಡು ಎಂದು ಮರುಳಸಿದ್ಧ ತರಳಬಾಳು ಸಿದ್ಧನಿಗೆ ಉತ್ತರಾಧಿಕಾರವನ್ನು ನೀಡಿದ. ಇಂತಹ ಪರಿಲೀಲೆಗಳಿಂದ ಭೂಲೋಕದಲ್ಲಿ ಮೆರೆದ ಮರುಳಸಿದ್ಧನು

ಉರ್ವಿಯ ಜನಕೆಲ್ಲ ಓರ್ವನೆ ಗುರುವಾಗಿ

ಸಾರ್ವಭೌಮನ ಪೂಜೆಯಿಂದ

ಚಾರ್ವಾಕರಿಗೆ ಬುದ್ಧಿ ನೇರದಿ ಹೇಳೆಂದು

ಪಾರ್ವತಿ ವರಸಿದ್ಧ ನುಡಿದ[೪೦] ॥೭॥ (ಏಳನೇ ಸಂಧಿ)

ತರಳಬಾಳು ಸಿದ್ಧನಿಗೆ ಅನುಗ್ರಹಿಸಿದ ಮರುಳಸಿದ್ಧ ತಾನೂ ಗುರುವಾಗಿ ತರಳಬಾಳು ಸಿದ್ಧನಿಗೆ ಮರುಳಾರಾಧ್ಯರೆಂಬಂಥ ಸೂತ್ರಧಾರಕ ಕೊಟ್ಟ ಪೆಸರ

ಗುರುವೇ ನೀ ಕೊಟ್ಟಂಥ ಎರಡೊಂದು ನಾಮದಿ

ಇರುವೆವು ಧರೆಯೊಳಗೆನುತ

ಗುರುವಿಗೆ ವಂದಿಸೆ ತರಳಬಾಳಿನ ಸ್ವಾಮಿ

ಇರುತಿರ್ದರಾಸ್ಥಾನದೊಳಗೆ[೪೧] ॥೧೨॥ (ಏಳನೇ ಸಂಧಿ)

ಎಂದು ಸಿದ್ಧನು ನುಡಿ ನುಡಿದ, ಮರುಳಸಿದ್ಧರು ಮುಂದೆ ಉಜ್ಜಿನಿ ಪುರುದೊಳಗೆ ತನ್ನ ಒಡೆಯ ಬಾಚನಗೌಡನಿಂದ ಇಪ್ಪತ್ನಾಲ್ಕು ಚೌಕ ನೆಲದಿ ಉಜ್ಜಿನಿ ನಿರ್ಮಾಣವ ಮಾಡಿಸಿ ಆ ಉಜ್ಜಿನಿಪುರದೊಳಗೆ ಮರುಳಸಿದ್ಧರು ಐಕ್ಯವಾದರು.

ಆನಗೋಡು ರೇವಣಸಿದ್ಧ ಕವಿಗಳು ತಮ್ಮ ಮರುಳಸಿದ್ಧ ಸಾಂಗತ್ಯ ರಚಿಸುವಾಗ ದೇವಕವಿ ರಚಿಸಿದ ಸಿದ್ಧಲಿಂಗ ಚರಿತ್ರೆಯ ಕಥಾ ಭಾಗವನ್ನು ಯಥಾ ಪ್ರಕಾರ ಅನುಸರಿಸಿದ್ದಾರೆ. ಕಥೆಗೆ ಚ್ಯುತಿ ಬಾರದೆ ಅಲ್ಲಲ್ಲಿ ಕೆಲವು ಸನ್ನಿವೇಶಗಳು ಬದಲಾಗಿವೆ. ಒಟ್ಟಿನಲ್ಲಿ ಇದು ಸ್ವತಂತ್ರ ಕೃತಿ ಆಗಿರುವುದಿಲ್ಲ, ಆದರೂ ಮರುಳಸಿದ್ಧರ ಜೀವನ ಚರಿತ್ರೆಯನ್ನು ನಿರೂಪಿಸುವಲ್ಲಿ ಒಂದು ಮಹತ್ವ ಪೂರ್ಣವಾದ ಸರಳ ಕನ್ನಡದಲ್ಲಿರುವ ಸಾಂಗತ್ಯವಾಗಿದೆ. ಮರುಳಸಿದ್ಧರಂತಹ ಒಬ್ಬ ದಲಿತ ನಾಯಕನ ಜೀವನ ಸಾಧನೆ ವ್ಯಕ್ತಿತ್ವ ಆತನ ಜೀವನದಲ್ಲಿ ನಿರೂಪಿತವಾಗಿರುವ ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕುವಲ್ಲಿ ಪವಾಡ ಸದೃಶ್ಯ ಸನ್ನಿವೇಶಗಳಲ್ಲಿ ವ್ಯಕ್ತವಾಗುವ ಪಾತ್ರ ಅನುಪಮವಾದುದು. ಆದರೂ ಮಹಾಪುರುಷರ ಜೀವನವನ್ನು ಉದಾತ್ತೀಕರಿಸುವಲ್ಲಿ ಕವಿಗಳು ಅನೇಕ ಅಸಹಜಕಲ್ಪನೆಗಳನ್ನು ಮಾಡಿಕೊಳ್ಳುತ್ತಾರೆ.

ಈ ಇಬ್ಬರ ಕೃತಿಗಳಲ್ಲಿ ಮರುಳಸಿದ್ಧ ನಾಯಕ ಈ ಕೃತಿಯಲ್ಲಿ ಕೆಲವು ಸನ್ನಿವೇಶ ಭಿನ್ನವಾಗಿ ಚಿತ್ರಿಸಲ್ಪಟ್ಟಿವೆ. ಆ ಸನ್ನಿವೇಶಗಳನ್ನು ಇಲ್ಲಿ ಅವಲೋಕಿಸಬಹುದಾಗಿದೆ.

ದೇವಕವಿ ತನ್ನ ಕಾವ್ಯದಲ್ಲಿ ಅರುವತ್ತು ಮೂವರು ಪುರಾತನರು ಜನಿಸಿ ತಮ್ಮ ಭಕ್ತಿ ಪ್ರಭೆಯನ್ನು ನಾಡಿನುದ್ಧಗಲಕ್ಕೂ ಬೀರಿದವರು. ತಮಿಳು ನಾಡಿನಲ್ಲೆ ಅವರು ಕೆಳವರ್ಗದ ಕಾಯಕ ಜೀವಿಗಳು. ಅವರನ್ನು ತನ್ನ ಕಾವ್ಯದಲ್ಲಿ ಸ್ಮರಿಸಿದ್ದಾನೆ ಆದರೆ ರೇವಣಸಿದ್ಧ ಕವಿ ಈ ಸನ್ನಿವೇಶವನ್ನು ಉಲ್ಲೇಖಿಸಿಲ್ಲ. ಉಜ್ಜನಿ ನಿರ್ಮಾಣದ ವಿಷಯದಲ್ಲಿ ಭೂಮಿ ಪಡೆವ ವಿಷಯದಲ್ಲಿ ಮರುಳಸಿದ್ಧರು ಹಾಗೂ ಸಾಕು ತಂದೆ ಬಾಚನಗೌಡನ ವಿರುದ್ಧ ವಿವಾದವಿರುವ ಸನ್ನಿವೇಶವನ್ನು ರೇವಣಸಿದ್ಧಕವಿ ನಿರೂಪಿಸಿದರೆ ದೇವಕವಿ ಆ ಸನ್ನಿವೇಶವನ್ನು ನಿರೂಪಿಸಿಲ್ಲ. ಉಳಿದಂತೆ ಈ ಎರಡು ಕಾವ್ಯಗಳಲ್ಲಿ ಕಥೆ ಯಥಾರೀತಿ ನಿರೂಪಿತವಾಗಿರುವುದನ್ನು ಕಾಣಬಹುದು.

ದೇವಕವಿ ಹಾಗೂ ಆನಗೋಡು ರೇವಣಸಿದ್ಧ[೪೨] ಕವಿ ಇವರಿಂದ ರಚಿತವಾದ ಮರುಳಸಿದ್ಧರ ಜೀವನ ಚರಿತ್ರೆಯಲ್ಲಿ ನಿರೂಪಿತವಾಗಿರುವ ಮರುಳಸಿದ್ಧ ಒಬ್ಬ ಪವಾಡ ಪುರುಷರೆಂದು

ಭಾವಿಸಬಹುದು. ಆದರೆ ಮರುಳಸಿದ್ಧರ ಜೀವನ ಅವರ ಸಾಧನೆಯ ಎಲ್ಲಾ ಘಟನೆಗಳನ್ನು ಪವಾಡಗಳೆಂದು ಭಾವಿಸಬಾರದು. ಆ ಪವಾಡ ಘಟನೆಯ ಹಿನ್ನಲೆಯನ್ನು ತಾತ್ವಿಕವಾಗಿ ಆಲೋಚಿಸಿ ನೋಡುವುದಾದರೆ ಕೆಳವರ್ಗದಲ್ಲಿಯೇ ಜನಿಸಿ ತನ್ನ ಜನ್ಮಸ್ಥಳದಲ್ಲಿ ಕೆಳವರ್ಗದವರು ನಡೆಸುತ್ತಿದ್ದ ಮೂಢನಂಬಿಕೆಯ ಹೆಸರಿನಲ್ಲಿ ಪ್ರಾಣಿಬಲಿ, ಹಿಂಸೆ, ಅನಾಚಾರಗಳ ವಿರುದ್ಧ ಪ್ರತಿಭಟಿಸಿವುದು. ಅದೇರೀತಿ ಬೇತೂರು ಪ್ರಸಂಗದಲ್ಲಿ ಬ್ರಾಹ್ಮಣ ಜಾತಿಯವರ ಯಜ್ಞಯಾಗಾದಿ ಆಚರಣೆಯ ವಿರುದ್ಧ ಪ್ರತಿಭಟಿಸಿ ನಿಂತಿದ್ದು, ದುರ್ಬಲಜನಾಂಗ, ಕುಲ ಹದಿನೆಂಟು ಜಾತಿಯ ಜನಾಂಗದವರನ್ನು ಒಂದುಗೂಡಿಸಿದ ಪ್ರಸಂಗ, ವಾಮಾಚಾರಿಯಾದ ಕಾಳಮುಖ ಪಂಥದ ಭೈರವನನ್ನು ಸದಾಚಾರಿಯಾಗಿ ಪರಿವರ್ತಿಸಿದ ಪ್ರಸಂಗ ಇಂತಹ ಅನೇಕ ಸನ್ನಿವೇಶಗಳಲ್ಲಿ ನಿರೂಪಿತವಾದ ಅಂಶಗಳನ್ನು ಗಮನಿಸಿದರೆ ಮರುಳಸಿದ್ಧ ಒಬ್ಬ ಸಮಾಜ ಸುಧಾರಕನೆ ಹೊರತು ಪವಾಡ ಪುರುಷನಲ್ಲ, ಎಂಬುದು ಈ ಇಬ್ಬರು ಕವಿಗಳ ಸಾಂಗತ್ಯಗಳಲ್ಲಿ ನಿರೂಪಿತವಾಗುತ್ತದೆ. ಧಾರ್ಮಿಕ ಮಹಾಪುರುಷರ ದಿವ್ಯ ವ್ಯಕ್ತಿತ್ವ ಮತ್ತು ಅವರುಗೈದ ಮಹತ್ಕಾರ್ಯಗಳ ಹಿಂದೆ ದೈವಿಶಕ್ತಿ ಇರುವುದೆಂದು ನಮ್ಮ ಪ್ರಾಚೀನರು ಭಾವಿಸುತ್ತಾ ಬಂದಿದ್ದಾರೆ.[೪೩] ಹೀಗಾಗಿ ಮರುಳಸಿದ್ಧರ ಜೀವನಚರಿತ್ರೆಯ ಕಾವ್ಯಗಳು ಇದಕ್ಕೆ ಹೊರತಾಗಿಲ್ಲ.

ಮರುಳಸಿದ್ಧರ ಜೀವನ ಚರಿತ್ರೆ ನಿರೂಪಿಸುವ ಮತ್ತೊಂದು ಸಾಂಗತ್ಯ ರಚಿತವಾಗಿದೆ. ಅದು ಸಿರಿಗೆರೆಯ ಶ್ರೀ ಗುರುಸಿದ್ಧ ಸ್ವಾಮಿಗಳ ಸಾಂಗತ್ಯವು ಕ್ರಿ.ಶ.೧೮೭೪ರಲ್ಲಿ ರಚಿತವಾಗಿದೆ. ಶ್ರೀ ಗುರುಸಿದ್ಧ ಸ್ವಾಮಿಗಳು ರೇವಣಸಿದ್ಧ ಕವಿ ವಿರಚಿತ ಮರುಳಸಿದ್ಧ ದೇವರ ಸಾಂಗತ್ಯ ಕೃತಿಯನ್ನು ಅನುಸರಿಸಿ ರಚಿಸಿರುವುದರಿಂದ, ದೇವಕವಿಯ 'ಸಿದ್ಧಲಿಂಗ ಚರಿತ್ರೆ'ಯನ್ನು ಅನುಸರಿಸಿರುವುದರಿಂದ ಶ್ರೀ ಗುರುಸಿದ್ಧ ಸ್ವಾಮಿಗಳು ಈ ಕವಿಗಳಿಂದ ಪ್ರಭಾವಿತರಾಗಿರುವುದರಿಂದ ಇವರ ಸಾಂಗತ್ಯದಿಂದ ಯಾವ ಹೊಸ ಅಂಶಗಳು ವ್ಯಕ್ತವಾಗುವುದಿಲ್ಲ.

೨.೨.೩.ರಾಮಗಿರಿಯ ನಾಗಭೂಷಣ ಕವಿಯ ಸಾಂಗತ್ಯ :

ರಾಮಗಿರಿಯ ನಾಗಭೂಷಣ ಕವಿಯು ಸು.ಕ್ರಿ.ಶ. ೧೬೫೦ ರಲ್ಲಿ ಜೀವಿಸಿರಬಹುದು. ಇವರ ಮೂಲ ಕಥಾವಸ್ತು 'ಮರುಳಸಿದ್ಧರ ಜೀವನ ಚರಿತ್ರೆ'ಗೆ ಸಂಬಂಧಿಸಿದ ಸಾಂಗತ್ಯಗಳನ್ನು ರಚಿಸಿದ್ದಾರೆ. ನಾಗಭೂಷಣ ಕವಿಯು ಇವನಿಗೆ ದೇವಕವಿಯ ಕಾವ್ಯದ ವಿಷಯಕ್ಕಿಂತ ಭಿನ್ನವಾಗಿ ಚಿತ್ರಿಸಿದ್ದಾನೆ. ಇಲ್ಲಿಯ ಪ್ರಮುಖ ಸನ್ನಿವೇಶವೆಂದರೆ. ಒಂದು ತರಳಬಾಳು ಸಿದ್ಧರ ಪ್ರಸಂಗ ಈ ಬಗ್ಗೆ ಬೇರೆಯವರ ಹೆಸರನ್ನು ಸೂಚಿಸಿದ್ದಾರೆ. ಇನ್ನೊಂದು ದಲಿತ ಶರಣನ ಮನೆಯಲ್ಲಿ ಮರುಳಸಿದ್ಧ ಜನ್ಮ ಪಡೆಯುವ ವಿಷಯ. ಆದರೆ ಅದನ್ನು ತಪ್ಪಿಸಲು ಹೋಗಿ ಜಾರಿಬಿದ್ದಿದ್ದಾನೆ. ಇವರು ಹೇಳುವಂತೆ ಮರುಳಸಿದ್ಧರ

ತಂದೆ ತಾಯಿಗಳು ಮಾರಯ್ಯ ಸೊನ್ನಲೆಯರು, ಕಲ್ಯಾಣದಿಂದ ಬಂದವರು. ಇವರ ಕಾಯಕವನ್ನು ಹೇಳಿಲ್ಲವಾದರೂ ಮರುಳಸಿದ್ಧರು ಇವರಲ್ಲಿ ಬೇಡುವುದು ಪಾದರಕ್ಷೆಗಳನ್ನೇ ಅವರು ಅವರಿಗೆ ಕೊಡುವುದೂ ಪಾದರಕ್ಷೆಗಳನ್ನೇ. ಆ ಪಾದರಕ್ಷೆಗಳಾದರೂ ಸೊನ್ನಲೆಯ ಸ್ತನಗಳ ಚರ್ಮದಿಂದಾದವುಗಳೇ. ಆದರೆ ಮಗನಾಗಿ ಹುಟ್ಟುವುದಾಗಿ ಹೇಳಿದವನು ಇವರ ಗರ್ಭದಿಂದ ಉದಯಿಸುವುದಿಲ್ಲ – ಇವರಿಬ್ಬರ ಮಧ್ಯದಲ್ಲಿ ಉದಯಿಸುತ್ತಾನೆಂದು ಈತ ಹೇಳುತ್ತಾನೆ. ಈ 'ಮಧ್ಯ' ಎಂಬ ಪದಕ್ಕೆ ಇವರಿಬ್ಬರ ಸಂಯೋಗದಿಂದ ಎಂದು ಅರ್ಥ ಮಾಡಿಕೊಳ್ಳಬೇಕೆ ? ಇವರಿಬ್ಬರ ಮಧ್ಯಭಾಗಗಳ ಸಂಯೋಗದಿಂದ ಗರ್ಭಧಾರಣೆಯಾಗಿ ಹುಟ್ಟಿದನೆಂದು ಅರ್ಥೈಸಬೇಕೆ ? ಏನೆಂದು ಅರ್ಥ ಮಾಡಿಕೊಳ್ಳಬೇಕೋ ತಿಳಿಯದು. ಪಾದರಕ್ಷೆಗಳನ್ನು ಕೊಟ್ಟು ಇವರು ತಾವು ಮಾದಿಗರೆಂಬುದನ್ನು ನಿರ್ಣಯಿಸಿರುವಾಗ ಇವರ ಗರ್ಭದಲ್ಲಿ ಬಾರದೆ ಮಧ್ಯದಲ್ಲಿ ಬಂದರೇನು ? ಇವರು ಜೀವಂತವಿರುವ ಮೂರೇ ದಿನಗಳವರೆಗೆ ಇವರ ಪೋಷಣೆಗೊಳಪಟ್ಟಿರುವಾಗ ಈ ಮರುಳಸಿದ್ಧರಿಗೆ ಮಾದಿಗತನವು ಬರಲಿಲ್ಲವೇ? ಮಾದಿಗತನವನ್ನು ತಪ್ಪಿಸಲು ಮಾಡಿದ ಇವರ ಈ ಯತ್ನವೇ ಮರುಳಸಿದ್ಧರು ಮಾದಿಗರ ಮಗನೆಂಬುದನ್ನು ದೃಢೀಕರಿಸಿತೆಂದರೆ ತಪ್ಪಾಗಲಾರದು. ಉಳಿದೆಲ್ಲಾ ವಿಚಾರಗಳಲ್ಲೂ ಈ ಕವಿಯು ದೇವಕವಿಯನ್ನೇ ಅನುಸರಿಸಿದ್ದಾನೆ. ವಿಷಯ ಒಂದೇ, ಆದರೆ ಹೆಸರು, ಸ್ಥಳಗಳು, ಕೆಲವು ಸಂದರ್ಭದಲ್ಲಿ ರೀತಿಗಳೂ, ಬೇರೆ ಬೇರೆ, ಇದೇನನ್ನು ಸೂಚಿಸುತ್ತದೆ ? ದೇವಕವಿಯ ಕಥಾವಸ್ತುವೇ ತನಗನುಕೂಲವಾದ ರೀತಿಯಲ್ಲಿ ಈತನಿಂದ ಮಾರ್ಪಡಿಸಲ್ಪಟ್ಟಿದೆ, ಎಂಬುದು ವ್ಯಕ್ತವಾಗುತ್ತದೆ. [೪೪]

೨.೨.೪. ಉಜ್ಜಯಿನಿ ಗೊಂಗಡಿ ವೀರಭದ್ರಯ್ಯನವರ ಸಾಂಗತ್ಯ

ಉಜ್ಜಯಿನಿ ಗ್ರಾಮವಾಸಿಗಳಾದ ಗೊಂಗಡಿ ವೀರಭದ್ರಯ್ಯ ಇವರು ಸು.ಕ್ರಿ.ಶ. ೧೮೯೯ರಲ್ಲಿ ಜೀವಿಸಿದ್ದರು. ಇವರ ಸಾಂಗತ್ಯದಲ್ಲಿ ನಿರೂಪಿತವಾದ ಅಂಶವೇನೆಂದರೆ ಇವರು ಉಜ್ಜಯಿನಿ ಮಠದ ಚರಮೂರ್ತಿಗಳಾದ ಚನ್ನಬಸವ ಸ್ವಾಮಿಗಳು ಹೇಳಿದ ಪ್ರಕಾರ ಬರೆದಿರುವುದಾಗಿ ಹೇಳಿಕೊಂಡಿದ್ದಾರೆ. ದೇವಕವಿಯನ್ನು ಅಕ್ಷರಶಃ ಅನುಸರಿಸಿದ್ದಾರೆ. ಮರುಳಸಿದ್ಧರ ಜನ್ಮದ ವಿಚಾರವಾಗಿ ಲಿಂಗೋದ್ಭವ ರೀತಿಯನ್ನು ಅಲ್ಲಲ್ಲಿ ಆಗಮಗಳನ್ನು ದಾಹರಿಸುತ್ತಾ ಪ್ರತಿಪಾದಿಸಿದ್ದಾರೆ. ಇವರದೊಂದು ಜಾಣ್ಮೆ ತರಳಬಾಳು ಸಿದ್ಧನಿಗೂ ಮಲ್ಲಿಕಾರ್ಜುನನಿಗೂ ಉತ್ತರಾಧಿಕಾರವನ್ನು ಕೊಡಿಸಿದ್ದಾರೆ. ಪಂಚಮರಿಗೆ ಮಲ್ಲಿಕಾರ್ಜುನರು ಗುರುವಾಗಿರಬೇಕೆಂದೂ, ಸಾದರಿಗೆ ತರಳಬಾಳು ಸಿದ್ಧೇಶ್ವರನು ಗುರುವಾಗಿರಬೇಕೆಂದೂ ಮರುಳಸಿದ್ಧೇಶ್ವರರಿಂದ ಹೇಳಿಸಿದ್ದಾರೆ. ಇವರ ಈ ವಾದದಿಂದ ತಾವು

ಉಜ್ಜಯಿನಿ ಪೀಠದ ಅಧಿಕಾರಿಗಳೆಂಬುದನ್ನು ಸಾಧಿಸಿಕೊಳ್ಳಲೆತ್ನಿಸಿದ್ದಾರೆ. ಈ ವಾದವೇ ಇವರ ಉಜ್ಜಯಿನಿ ಪೀಠದ ಅಧಿಕಾರವು ತಮ್ಮದೆಂಬುದನ್ನು ಸಾಧಿಸಲು ಹುಟ್ಟಿದವರಾಗಿ ತಮ್ಮ ಪೋಷಣೆಗೆ ಆಗಮಾದಿ ಗ್ರಂಥಗಳನ್ನು ಬಳಸಿಕೊಂಡಿದ್ದಾರೆ ಎಂಬುದು ವ್ಯಕ್ತವಾಗುತ್ತದೆ.[೪೫]

೨.೨.೫. ಚಿಕ್ಕರಾಚನ ಮಹಾದೇವಿಯಕ್ಕನ ಸಾಂಗತ್ಯ :

ಚಿಕ್ಕರಾಚ, ರಾಚ, ರಾಚಪ್ಪ, ರಾಚಯ್ಯ, ರಾಚಣ್ಣ, ಎಂದೆಲ್ಲಾ ಪ್ರಸಿದ್ಧನಿರುವ ಚಿಕ್ಕರಾಚನು ಸು.ಕ್ರಿ.ಶ.೧೬೦೦ರಲ್ಲಿ ಜೀವಿಸಿರಬಹುದಾದ ವೀರಶೈವ ಕವಿ. ಚಿಕ್ಕರಾಚನ ಜನ್ಮಸ್ಥಳ ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ಕೊಡೆಯಕಲ್ ಇರಬಹುದು. ಚಿಕ್ಕರಾಚನು ಪ್ರಭು ಚರಿತ್ರೆ, ಗಿರಿಜೆ ಕಲ್ಯಾಣ, ಸೌಂದರ ಪುರಾಣ, ಮೊದಲಾದ ಸಾಂಗತ್ಯ ಕೃತಿಗಳನ್ನು ರಚಿಸಿರುವನು. “ಮಹಾದೇವಿಯಕ್ಕನ ಸಾಂಗತ್ಯ” ಸಹ ಚಿಕ್ಕರಾಚಯ್ಯನಿಂದ ರಚಿಸಲ್ಪಟ್ಟ ಸಾಂಗತ್ಯವಾಗಿದೆ. ಪ್ರಸ್ತುತ ಗ್ರಂಥದ ಬಗ್ಗೆ ಕ್ರಿ.ಶ.೧೯೩೮ ರಷ್ಟು ಹಿಂದೆಯೇ ಸಾಹಿತ್ಯ ಚರಿತ್ರೆಕಾರರಾದ ರಂ.ಶ್ರೀ ಮುಗಳಿಯವರು “ಶರಣ ಸಾಹಿತ್ಯ” ಎಂಬ ಪತ್ರಿಕೆಯಲ್ಲಿ ಒಂದು ವಿಸ್ತೃತ ಲೇಖನವನ್ನು ಪ್ರಕಟಿಸಿದರು. ನಂತರ ಡಾ॥ ವಿದ್ಯಾಶಂಕರರವರು ಈ ಲೇಖನವನ್ನು ಸಂಪಾದಿಸಿದ್ದಾರೆ[೪೬].

ಚಿಕ್ಕರಾಚನು ಮಹಾದೇವಿಯಕ್ಕನ ಚರಿತ್ರೆಯನ್ನು ನಿರೂಪಿಸುವಾಗ ಅವರ ವಚನಗಳಲ್ಲಿ ಮೈದುಂಬಿ ಬಂದಿರುವ ವೀರವೈರಾಗ್ಯಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ನೀಡಿರುವರು. ಈ ಕವಿ ತನಗಿಂತ ಹಿಂದೆ ಮಹಾದೇವಿಯಕ್ಕನನ್ನು ಕುರಿತು ಕೃತಿ ರಚನೆ ಮಾಡಿದ್ದ ಹರಿಹರನನ್ನಾಗಲೀ, ಚನ್ನಬಸವಾಂಕನನ್ನಾಗಲೀ ಕಥನ ಕ್ರಮದಲ್ಲಿ ಅನುಸರಿಸಿದಂತೆ ಕಂಡುಬರುವುದಿಲ್ಲ. ಮಹಾದೇವಿಯು ಅವರ ಪಾಲಿಗೆ ಸಾಮಾನ್ಯ ಸ್ತ್ರೀಯಲ್ಲ, ಪಾರ್ವತಿಯ ಆತ್ಮ, ಕೃತಿಯ ಪ್ರಾರಂಭದಲ್ಲಿ ಮಹಾದೇವಿಯ ಜನನದ ಅಲೌಕಿಕ ಕಾರಣವನ್ನು ಹೇಳುವಾಗ ಪ್ರಭುವನ್ನು ಗೆಲ್ಲಲು ಪಾರ್ವತಿಯು ತನ್ನ ಸಾತ್ವಿಕರೂಪವನ್ನು ಮಹಾದೇವಿಯಾಗಿ ಸೃಷ್ಟಿಸಿ ಮರ್ತ್ಯಕ್ಕೆ ಕಳುಹಿಸಿದಳೆನ್ನುವನು. ಇಲ್ಲಿ ಚಾಮರಸನ 'ಪ್ರಭುಲಿಂಗಲೀಲೆ'ಯ ಪ್ರಭಾವ ನೇರವಾಗಿ ಆಗಿರುವಂತಿದೆ. ಶಾಂಭವಿಯ ನೈಷ್ಠೆ ಪರ ಪ್ರಸನ್ನವೇ ಮಾನಸರೂಪಾದ ಮಹಾದೇವಿಯು ಓಂಕಾರ ಸೆಟ್ಟಿ–ಲಿಂಗಮ್ಮ ದಂಪತಿಗಳ ಮಗಳಾಗಿ ಮರ್ತ್ಯದಲ್ಲಿ ಜನಿಸುವಳು. ಇವಳಿಗೆ ಆಗಮದೀಕ್ಷಾಚಾರ್ಯರಾದ ಮರುಳಸಿದ್ಧೇಶ್ವರರು ದೀಕ್ಷಾ ಗುರುಗಳಾದರು. ಹರಿಹರನ ಮಹಾದೇವಿಯಕ್ಕನ ರಗಳೆಯಲ್ಲಿ ಮಹಾದೇವಿಗೆ ಎಂಟನೆಯ ವಯಸ್ಸಿನಲ್ಲಿ ಶೈವಾಚಾರ್ಯರಿಂದ ಶಿವದೀಕ್ಷೆ ನಡೆಯಿತೆಂದು ಇದೆ. ಹರಿಹರ ಆ ಶೈವಾಚಾರ್ಯರ ಹೆಸರನ್ನು ಹೇಳಿಲ್ಲ ; ಇತರರೂ ಇದರ ಬಗೆಗೆ ಹೆಚ್ಚಿಗೆ ಏನನ್ನೂ ಹೇಳಿಲ್ಲ. ಚಿಕ್ಕರಾಚನು ಮಹಾದೇವಿಯು

ತಾಯಿಯ ಗರ್ಭದಲ್ಲಿದ್ದಾಗಲೇ ಮರುಳಸಿದ್ಧೇಶ್ವರ ಶಿವಯೋಗಿಗಳು ಬಂದು ಲಿಂಗಮ್ಮಳಿಗೆ ಗರ್ಭದೀಕ್ಷೆಯನ್ನು ಮಾಡಿ ಪ್ರಸಾದವನ್ನಿತ್ತರೆಂದೂ ಮುಂದೆ ಮಹಾದೇವಿಗೆ ಅವರೇ ದೀಕ್ಷಾಗುರುಗಳಾದರೆಂದೂ ಹೇಳಿರುವರು.[೪೭] ಅವರ ಮೊದಲ ಸಂಧಿಯಲ್ಲಿ ಹೀಗೆ ನಿರೂಪಿತವಾಗಿದೆ,

ಒಡಲುಬೆಮರೆ ರೋಮ ಗುಡಿಗಟ್ಟೆ ಬೇನೆಗಳ್
ಮಡದಿಗೆ ಮೈಗಾಣಿಸಲು
ನಡೆದುದು ನವಮಾಸ ತುಂಬಿ ಹತ್ತರ ನೆಳಲ
ಕಡೆಯಾಣಿ ಕ್ರಮ ಉದ್ಭವದ ॥೪೫॥

ಶ್ರೀಗುರು ಮರುಳಸಿದ್ಧೇಶ್ವರ ಶಿವಯೋಗಿ
ಆಗಮದೀಕ್ಷಾಚಾರ್ಯ
ಅಗಳೆ ಓಂಕಾರ ಸೆಟ್ಟಿಯ ಗೃಹಕೆ ದೀ–
ಕ್ಷಾಗುರುವಾಗಿ ಚಿತ್ತೈಸೆ. ॥೪೬॥

ಶಿವಾಗಮಿಕ ಶೀಲ ಶಿವಭಕ್ತನಂಗನೆ
ಗವಧಾನ ಗರ್ಭದೀಕ್ಷೆಯನು
ಶಿವಲಿಂಗ ಸುಪ್ರಸಾದವನಿತ್ತು ಮರಳಿದ
ನವಳಿಗಿತ್ತಲಿ ಗರ್ಭೋದ್ಗತ[೪೮] ॥೪೭॥

ಸಂಧಿ ೧ಕ್ಕಂ ಪದ ೪೮ ಕ್ಕಂ ಮಂಗಳಂ.

॥ ರೇವಣಸಿದ್ಧೇಶ್ವರ, ಮರುಳಸಿದ್ಧೇಶ್ವರ ದೇವರ ನಿರ್ವಾಹ ವಚನ ॥ (ಮೊದಲ ಸಂಧಿ)

ರೇಣುಕ ಗಣಾಧೀಶ್ವರ ಶಿವಭಕ್ತಿ ದೀಕ್ಷಾಚಾರ್ಯನಾಮ ವೇಳ್ಕಾಮೆಂದು ಅಷ್ಟ ಷಷ್ಠಿ ರುದ್ರಗಣಂಗಳ ಸಮುದ್ಭವಲಿಂಗದಲ್ಲಿ ಉದ್ಭವಂಗೈದೆಲ್ಲಿ ಕೊಲ್ಲಿಪಾಕದ ಸೋಮೇಶ್ವರನಲ್ಲಿ ಉದ್ಭವನಾಗಿ ಆತಂಗೆ ಶಿಷ್ಯನಾಗಲ್ ಮರುಳಸಿದ್ಧೇಶ್ವರ ದೇವರು ಕೈಲಾಸದಲ್ಲಿ ಗುಪ್ತಗಣೇಶ್ವರನಾಗಿ ಇರಲ್ಕೆ ಅಮ್ಮನವರ ಸೀರೆಯ ಸೆರಗು ಸೋಂಕಿನಿಂದ ಉಜ್ಜನಿಯಲ್ಲಿ ಕುಡೊಒಕ್ಕಲಿಗರ ಗರ್ಭವತಾರ ಕರುಗಳ ಕಾಯ್ದು ಉಜ್ಜನಿ ಮಲ್ಲಿಕಾರ್ಜುನನಿಂದ ಪ್ರಸನ್ನ ನಡೆದು ರೇವಣಸಿದ್ಧೇಶ್ವರನಿಂದ ಪುನರ್ಜಾತೋಪದೇಶಿಯಾಗಿ ಮರುಳಸಿದ್ಧೇಶ್ವರನೆಂಬ ನಾಮಂಬೆತ್ತು. ಮಹಾದೇವಿಯಕ್ಕಗೆ ಗುರು

ದೀಕ್ಷಾಧಾರನೆಂಬುದಿದರ ತಾತ್ಪರ್ಯಾರ್ಥ.[೪೯]

ಮೊದಲನೆ ಸಂಧಿಯ ಕೊನೆಯಲ್ಲಿ ಗುರುಗಳಾದ ಮರುಳಸಿದ್ಧೇಶ್ವರರ ಬಗೆಗೆ ಹೆಚ್ಚಿನ ವಿವರಗಳನ್ನು (ಗದ್ಯದಲ್ಲಿ) ನೀಡಿರುವರು. ವೀರಶೈವ ಧರ್ಮದ ಪಂಚಾಚಾರ್ಯರ ಪಂಚಪೀಠಗಳಲ್ಲಿ ಒಂದಾದ ಕೊಲ್ಲಿ ಪಾಕದ ಸೋಮೇಶ್ವರ ಲಿಂಗದಲ್ಲಿ ಉದ್ಭವಿಸಿದ ರೇವಣಸಿದ್ಧರ ಶಿಷ್ಯರೇ ಮಹಾದೇವಿಯ ದೀಕ್ಷಾಗುರುಗಳಾದ ಮರುಳಸಿದ್ಧೇಶ್ವರರು ಕೈಲಾಸದಲ್ಲಿ ಗುಪ್ತಗಣನಾಥನಾಗಿದ್ದಾಗ ಪಾರ್ವತಿಯ ಸೀರೆಯ ಸೆರಗು ಸೋಕಿದ ಕಾರಣ ಉಜ್ಜನಿಯಲ್ಲಿ ಕರುಗಳನ್ನು ಕಾಯ್ದುಕೊಂಡಿದ್ದ ಮರುಳಸಿದ್ಧೇಶ್ವರರು ಉಜ್ಜನಿಯಲ್ಲಿ ಮಲ್ಲಿಕಾರ್ಜುನರ ಕೃಪೆಗೆ ಪಾತ್ರರಾಗಿ ರೇವಣಸಿದ್ಧೇಶ್ವರರ ಶಿಷ್ಯರಾಗಿ ಪ್ರಸಿದ್ಧರಾದರೆಂದು ಚಿಕ್ಕರಾಚ ವಿವರಣೆ ನೀಡಿರುವರು.[೫೦]

ಚಿಕ್ಕರಾಚನ 'ಮಹಾದೇವಿಯಕ್ಕನ ಸಾಂಗತ್ಯ'ದ ಮೊದಲ ಸಂಧಿಯಲ್ಲಿ ಉಲ್ಲೇಖಿತವಾಗಿರುವ ಮರುಳಸಿದ್ಧರು ಅಕ್ಕಮಹಾದೇವಿ ಜನಿಸುವ ಪೂರ್ವದಲ್ಲಿ ತಾಯಿ ಲಿಂಗಮ್ಮನವರಿಗೆ ದೀಕ್ಷಾ ಗುರುಗಳಾದರು ಎಂಬುವುದರಿಂದ ಮರುಳಸಿದ್ಧರ ಪ್ರಸ್ತಾಪ ಮಾತ್ರ ಗುರುತಿಸಲ್ಪಡುತ್ತದೆ. ಇದು ಒಂದುರೀತಿ ಅನುಷಂಗೀಕವಾಗಿ ಸ್ಮರಿಸಿರುವಂತ ಸಾಂಗತ್ಯವಾಗಿದೆ.

೨.೨.೬. ನಂದೀಶಕವಿಯ ಮರುಳಾರಾಧ್ಯ ವಿಜಯ ಚರಿತ :

ಮರುಳಸಿದ್ಧ, ಮರುಳಾರಾಧ್ಯರ ಕುರಿತು ಮತ್ತೊಂದು ಕೃತಿರಚಿತವಾಗಿದೆ, ಇದು ೧೭ನೇ ಶತಮಾನದ ನಂದೀಶಕವಿ ವಿರಚಿತ 'ಮರುಳಾರಾಧ್ಯ ವಿಜಯ' ಚರಿತವು ಹೂಲಿಬೃಹನ್ಮಠಾಧ್ಯಕ್ಷರ ಮತ್ತು ಶ್ರೀ ಶೈಲ ಜಗದ್ಗುರು ಶ್ರೀ ವಾಗೀಶಪಂಡಿತಾರಾದ್ಯರ ಕೃತ್ರಿಮ ಸೃಷ್ಠ, ಸಂಸ್ಕೃತ ಗ್ರಂಥಗಳ ಮೂಲಕ ತಮ್ಮ ವಾದಗಳ ಪೋಷಣೆ ಮಾಡಿಕೊಳ್ಳುವ ಪದ್ಧತಿಯಿಂದ ತೃಪ್ತಿ ಹೊಂದದ ಇವರು ಕನ್ನಡ ಕಾವ್ಯಸೃಷ್ಠಿಗೆ ಕೈಹಾಕಿದ್ದಾರೆ. ಮರುಳರಾಧ್ಯ ವಿಜಯಪ್ರಬಂಧ[೫೧] ಪ್ರಚ್ಛನ್ನ ನಂದೀಶ ವಿರಚಿತ ಮರುಳಾರಾಧ್ಯ ವಿಜಯಚರಿತ ಪ್ರಾಮಾಣ್ಯವನ್ನು ಸಾಧಿಸುವುದೇ ಒಂದು ಉದ್ದೇಶವಾಗಿದೆ. ಈ ಕಾವ್ಯದ ಸೃಷ್ಟಿಯೂ ಅನೇಕ ಮರುಳಸಿದ್ಧರನ್ನು ಕಲ್ಪಿಸಿ ಅವರೆಲ್ಲರನ್ನು ಉಜ್ಜಯಿನಿಗೆ ಸಂಬಂಧಪಟ್ಟವರನ್ನಾಗಿಸುವುದೇ ಆಗಿದೆ. ಇದಕ್ಕಾಗಿ ಬಳಸಿರುವ ಕಥಾ ವಸ್ತುವೆಲ್ಲವೂ ದೇವಕವಿಯ ಕಾವ್ಯದಿಂದಲೇ ಅಪಹರಿಸಲ್ಪಟ್ಟಿದೆ. ಈ ಪ್ರಚನ್ನ ನಂದೀಶಕವಿಗಳು ಅನೇಕ ಮರುಳಸಿದ್ಧರನ್ನು ಸೃಷ್ಟಿಸಿ ದೇವ ಕವಿಯ ಕಥಾ ವಸ್ತುವಿನಲ್ಲಿ ಒಂದೊಂದು ಪ್ರಸಂಗಕ್ಕೆ ಒಬ್ಬೊಬ್ಬರನ್ನು ಹೊಂದಿಸಿರುತ್ತಾರೆ. ದೇವ ಕವಿಯ ಕಥಾವಸ್ತುವನ್ನು ಮೊಟ್ಟಮೊದಲು ವಿಭಜಿಸಲಾಗಿದೆ

▶ ದಲಿತ (ಮಾದಿಗರ) ಮನೆಯಲ್ಲಿ ದಂಪತಿಗಳಾದ ಕೂಗಿಮಾರ ಸುಪ್ರಭೆಯರಲ್ಲಿ ಜನ್ಮ ಪಡೆಯುವುದು.

▶ ಸಾಕುತಂದೆ ಬಾಚನಗೌಡ ಮಲ್ಲಮ್ಮ ದಂಪತಿಗಳಿಗೆ ಸಾಕು ಮಗನಾಗಿ ಸಿಕ್ಕುವುದು ಮತ್ತು ಅವರ ಮನೆಯಲ್ಲಿ ಕರುಗಳನ್ನು ಕಾಯುವುದು.

▶ ಬೇತೂರು, ಆನಗೋಡತ್ತ ಸಂಚಾರ

▶ ರೇವಣಸಿದ್ಧರಿಗೆ ಶಿಷ್ಯರಾಗುವುದು.

▶ ಓರಂಗಲ್ಲ ಕಡೆ ಸಂಚಾರ.

▶ ಮಾಯಾ ಮರ್ದನ ಮಾಡುವುದು.

▶ ಉಜ್ಜಯಿನಿಪುರ ನಿರ್ಮಾಣ ಮಾಡಿ ಮಠ ಸ್ಥಾಪಿಸುವುದು.

▶ ಉತ್ತರಾಧಿಕಾರದ ತೆಲುಗು ಬಾಳ ಸಿದ್ಧರಿಗೆ ಅನುಗ್ರಹ

ಈ ಮೇಲಿನ ಸನ್ನಿವೇಶಗಳು ದೇವಕವಿಯ ಕಥಾ ವಸ್ತುವಿನಿಂದಲೇ ತೆಗೆದುಕೊಂಡು ಅನೇಕ ಮರುಳಸಿದ್ಧರನ್ನು ಸೃಷ್ಟಿಸಿಕೊಂಡು ಈ ಪ್ರಸಂಗಗಳಲ್ಲಿ ಒಂದೊಂದನ್ನು ಒಬ್ಬೊಬ್ಬರಿಗೆ ಹೊಂದಿಸಿ ವಿಜಯ ಚರಿತವನ್ನು ನಂದೀಶಕವಿಯ ಹೆಸರಿನ ಮೇಲೆ ಬರೆದಿರುತ್ತಾರೆ. ಮರುಳಸಿದ್ಧನು ಅನೇಕರೆಂಬುದು ಸುಳ್ಳು, ಅಸತ್ಯವೆಂಬುದಕ್ಕೆ ಈ ವಿಜಯ ಚರಿತದ ಅಕ್ರಮ ಸೃಷ್ಟಿಯೇ ಸಾಕಷ್ಟು ಪ್ರಮಾಣವಾಗಿದೆ. ಅನೇಕ ಮರುಳಸಿದ್ಧರೆಂಬ ವಾದವು ಉಜ್ಜಯಿನಿ ಪೀಠಕ್ಕೆ ಸಂಬಂಧಪಟ್ಟುದಾಗಿ ನಿಲ್ಲಲಿಲ್ಲವೆಂದ ಮೇಲೆ ಒಬ್ಬನೇ ಮರುಳಸಿದ್ಧನು ಈ ಕಥಾ ವಸ್ತುವಿನ ಎಲ್ಲಾ ಪ್ರಸಂಗಗಳಿಗೂ ಸಂಬಂಧಪಟ್ಟವನಾಗಲೇ ಬೇಕಲ್ಲವೇ ? ಏಕೆಂದರೆ ಶ್ರೀಶೈಲ ಜಗದ್ಗುರುಗಳವರೇ ದೇವಕವಿಯ ಈ ಎಲ್ಲಾ ಕಥಾ ಪ್ರಸಂಗಗಳನ್ನು ಒಪ್ಪಿಕೊಂಡೇ ತಮಗನುಕೂಲವಾಗುವ ರೀತಿಯ ಕಾವ್ಯಸೃಷ್ಟಿಗೆ ಕೈ ಹಾಕಿದ್ದಾರೆ.

೧. ಮರುಳಸಿದ್ಧರು ದಲಿತರ ಮನೆಯಲ್ಲಿ ಹುಟ್ಟಿದನೆಂಬ ದೇವಕವಿಯ ಮಾತನ್ನು ಸಿಂಧೋಗಿ ಮಾರನ ಮಗನೊಬ್ಬ ಮರುಳಸಿದ್ಧರನ್ನು ಸೃಷ್ಟಿಸಿದ ಮೂಲಕ ಒಪ್ಪಿದ್ದಾರೆ.

೨. ಕಗ್ಗಲ್ಲುಪುರ ಬಾಚಣಗೌಡನ ಸಾಕು ಮಗನಾಗಿ ಬೆಳೆಯುತ್ತಾನೆಂದು ದೇವಕವಿಯು ಹೇಳಿದ್ದಾನೆ. ಈ ಪ್ರಚ್ಛನ್ನ ನಂದೀಶಕವಿಯೂ ಸಹ ಮೂಡೂರು ಗ್ರಾಮದ ಕಗ್ಗಲ್ಲುಗೌಡನಿಗೆ ಮಗನಾಗಿ ಹೊಲಿ ಮರುಳಸಿದ್ಧನು ಸಿಕ್ಕಿದನೆಂದು ಬರೆದಿರುತ್ತಾನೆ.

೩. ಕರು ಕಾಯುವ ಕಾಯಕವನ್ನು ದೇವಕವಿಯು ಮರುಳಸಿದ್ಧನಿಗೆ ಕೊಟ್ಟಿದ್ದಾರೆ. ಪ್ರಚನ್ನ ನಂದೀಶಕವಿಯೂ ಸಹ ಸಿಂಧೋಗಿ ಗೌಡನ ಮನೆಯ ಕರುಗಳನ್ನು ಮಾರನ ಮಗ ಮರುಳಸಿದ್ಧನಿಂದ ಕಾಯಿಸುತ್ತಾನೆ.

೪. ದೇವಕವಿಯು ಆನಗೋಡು, ಬೇತೂರು ಮುಂತಾದ ಕಡೆ ಮರುಳಸಿದ್ಧರು ಸಂಚರಿಸಿದುದನ್ನು ಹೇಳಿದ್ದಾರೆ. ಪ್ರಚ್ಛನ್ನ ನಂಧೀಶನೂ ಸಹ ಈ ಪ್ರವಾಸಕ್ಕಾಗಿ ಹೊಲಿ ಮರುಳಸಿದ್ಧರನ್ನು ಸೃಷ್ಟಿಸಿ ಆನಗೋಡು, ಬೇತೂರುಗಳಿಗೆ ಕಳುಹಿಸಿದ್ದಾರೆ.

೫. ದೇವಕವಿಯು ಮರುಳಸಿದ್ಧರಿಗೆ ರೇವಣಸಿದ್ಧರು ಗುರುವೆಂಬುದನ್ನು ಹೇಳಿದ್ದಾರೆ. ಈ ಪ್ರಚ್ಚನ್ನ ನಂದೀಶನೂ ಸಹ ೧೬ನೇ ಪಟ್ಟಾಧಿಕಾರಿಯಾದ ಮರುಳಸಿದ್ಧರನ್ನು ರೇವಣಸಿದ್ಧರಿಗೆ ಶಿಷ್ಯನನ್ನಾಗಿ ಮಾಡಿದ್ದಾರೆ.

೬. ದೇವಕವಿಯು ಕಾವ್ಯದಲ್ಲಿ ಮರುಳಸಿದ್ಧರು ಓರಂಗಲ್ಲಿಗೆ ಹೋದುದಾಗಿ ಹೇಳಿದ್ದಾರೆ. ಪ್ರಚ್ಛನ್ನ ನಂದೀಶನು ೪೬ನೇ ಪಟ್ಟದ ಮರುಳಸಿದ್ಧರನ್ನು ಓರಂಗಲ್ಲಿಗೆ ಕಳುಹಿಸುತ್ತಾರೆ.

೭. ಕೊಲ್ಲಾಪುರದ ಕರಟಾಸುರನ ಮಗಳಾದ ಮಾಯಾದೇವಿಯನ್ನು ಮರುಳಸಿದ್ಧರು ವಾದದಲ್ಲಿ ಸೋಲಿಸುವುದನ್ನು ದೇವಕವಿ ಹೇಳಿದ್ದಾರೆ. ಅದನ್ನೇ ಪ್ರಚ್ಛನ್ನ ನಂದೀಶನು ೧೬ನೇ ಮರುಳಸಿದ್ಧರಿಂದ ಮಾಡಿಸಿದ್ದಾರೆ.

೮. ಮರುಳಸಿದ್ಧರು ಉಜ್ಜಯಿನೀಪುರ ನಿರ್ಮಾಣ ಮಾಡಿದನೆಂದು ಐತಿಹಾಸಿಕವಾಗಿ ದೇವಕವಿ ಹೇಳಿದ್ದಾರೆ. ಅವರು ಹೇಳಿದಂತೆಯೇ ಈಗಲೂ ಆ ಗ್ರಾಮವು ಹಾಗೆಯೇ ಇದೆ. ಪ್ರಚ್ಛನ್ನ ನಂದೀಶನೂ ಸಹ ೧೬ನೇ ಪಟ್ಟದ ಮರುಳಸಿದ್ಧರಿಂದ ಉಜ್ಜಯಿನಿಯ ಮಂದಿರವನ್ನು ಕಟ್ಟಿಸಿದ್ದಾರೆ. ಆದರೆ ಇವರು ಹೇಳುವಂತೆ ಅಲ್ಲಿ ಮರುಳಾರಾಧ್ಯ ಲಿಂಗವಾಗಲೀ, ೧೪ ಜನ ಗುರುಗಳ ವಿಗ್ರಹಗಳಾಗಲಿ ಇಲ್ಲವೇ ಇಲ್ಲ.[೫೨]

ಒಟ್ಟಿನಲ್ಲಿ ಮರುಳಸಿದ್ಧನ ಜೀವನದ ಬಗ್ಗೆ ದೇವಕವಿಯ ಕಥಾ ವಸ್ತುವೇ ಮೂಲವಸ್ತು. ಪ್ರಚ್ಛನ್ನ ನಂದೀಶನು ದೇವಕವಿಯ ಕಥಾವಸ್ತುವನ್ನೇ ಅನುಸರಿಸಿದ್ದಾರೆ. ಆದರೆ ನಂದೀಶ ಕವಿಯು ದೇವಕವಿಯ ಕಥಾವಸ್ತುವಿನ ಕಥಾ ನಿರೂಪಣೆಗೆ ತಮ್ಮದೇ ಆದ ಕಲ್ಪನೆಗೆ ತಕ್ಕಂತೆ ಕಥಾನಿರೂಪಣೆಯನ್ನು ವ್ಯಕ್ತಪಡಿಸಿದ್ದಾರೆ. ಇಲ್ಲಿ ನಂದೀಶ ಕವಿಯು ದೇವಕವಿಯ ಸಮಕಾಲೀನನು ಅಲ್ಲ ಅಥವಾ ಮರುಳಸಿದ್ಧರ ಸಮಕಾಲೀನರು ಅಲ್ಲ ಇದು ೨೦ನೇ ಶತಮಾನದ ಸೃಷ್ಟಿ ಶ್ರೀ ಶೈಲ ಜಗದ್ಗುರು ವಾಗೀಶಪಂಡಿತರಾಧ್ಯರು ನಂದೀಶಕವಿಯ ಹೆಸರಿನಲ್ಲಿ ರಚಿಸರಬಹುದೆಂಬ

ಅಭಿಪ್ರಾಯವಿದೆ.

೨.೨.೭ ಪರ್ವತೇಶ ವಿರಚಿತ ಚರುತಾಚಾರ್ಯ ಚಾರಿತ್ರ :

ಮರುಳಸಿದ್ಧರನ್ನು ಸ್ತುತಿಸುವ ಸಾಹಿತ್ಯ ಚರಿತ್ರೆಯಲ್ಲಿ ಚತುರಾಚಾರ್ಯ ಚರಿತ್ರ ಅಥವಾ ಚತುರಾಚಾರ್ಯ ಪುರಾಣವು ಒಂದು. ಇದು ಪರ್ವತೇಶನಿಂದ ರಚಿಸಲ್ಪಟ್ಟ ಕೃತಿ. ಈತನ ಕಾಲ ಸು.ಕ್ರಿ.ಶ.೧೬೯೮ ಎಂದು ತಿಳಿದುಬರುತ್ತದೆ.

ಇದೆ ಬಂದ ಮಾಯಾಂಧಕಾರ ಶೂರಂ ಧೀರ

ನಿದೆ ಬಂದ ಮಾಯಾದಿವಾದಕ್ಕೆ ದಿವಸೇಂದ್ರ

ನಿದೆ ಬಂದ ಮಾಯೌಘನಗಭೇಧಿ ಶತಕೋಟಿರೂಪ ನಿರ್ಲೇಪ ನಿತ್ಯಂ

ಇದೆ ಬಂದ ಮಾಯಾಬ್ಜ ನೇತ್ರಕೈರವಮಿತ್ರ

ನಿದೆ ಬಂದ ಮಾಯಾಕುಮುದಷಂಡ ಚಂಡರವಿ

ಇದೆ ಬಂದ ಮಾಯಾರಿ ಮರುಳಸಿದ್ಧೇಶ ನೆಂದೊದರಿದವು ಕಹಳೆ ಮುದದಿಂ [೫೩]

ಇದು ತೃತೀಯ ಕಾಂಡ ಒಂದನೇ ಸಂಧಿಯಲ್ಲಿ ಮರುಳಸಿದ್ಧ ಕೊಲ್ಲಾಪುರಕ್ಕೆ ಹೋಗಿ ಮಾಯೆಯ ಮದವನ್ನು ಮುರಿದಿದ್ದು ವ್ಯಕ್ತವಾಗುತ್ತದೆ. ಅಲ್ಲದೆ ಕವಿ ಮುಂದೆ ಈ ರೀತಿ ಹೇಳಿದ್ದಾನೆ.

ಆಚಾರ್ಯ ರೇವಣಸಿದ್ಧೇಶ ಮರುಳಸಿದ್ಧಾಚಾರ್ಯ ಪಂಡಿತಾರಾಧ್ಯ ಏಕೋರಾಮ
ಆಚಾರ್ಯ ವಿಶ್ವೇಶ್ವರಾಚಾರ್ಯರೆನಿಪ ಪಂಚಕ ಕಲಶದಾಚಾರ್ಯರ
ಸ್ವಾಚಾರ್ಯ ಚಾರಿತ್ರ ಸಕಲಶಿವಶರಣರ್ಗೆ
ಗೋಚರಿಸುವಂದದಿಂ ರಚಿಸುವೆಂಕೃತಿಯನ
ತ್ಯಾಶ್ಚರ್ಯವಪ್ಪುದಿದು ಗುರುಚರಣಂ ಕಜವಿಕಸಮಗೆ ಹೃದಯದಲ್ಲಿ ೧-೧.೫೫
ಈ ರೀತಿ ಹೇಳಿಕೊಂಡಿದ್ದಾನೆ.
ತರುಣಾರ್ಕನಂತೆ ಥಾಳಿಪ ಮರುಳಸಿದ್ಧೇಶ
ನರುಮಹಿಮೆಯಂ ಸೂಕ್ಷ್ಮದಿಂದೊರವೆಶ್ಯೆಲೇಶ
ಭರದಿಂದ ಕೊಲ್ಲಾಪುರಕ್ಕೈದಿ ಮಾಯೆಯಂ ಹರಸಿ ಮೆರೆದುದನುಸುರ್ವೆಂ[೫೪]

ಇದು ಮರುಳಸಿದ್ಧರನ್ನು ಸ್ಮರಿಸುವಂತಹ ಕೃತಿಯಾಗಿದೆಯೇ ಹೊರತು ಮರುಳಸಿದ್ಧರ ಜೀವನ ಚರಿತ್ರೆಯ ಪೂರ್ಣ ಪಾಠವನ್ನು ತಿಳಿಸುವುದಿಲ್ಲ, ಹೀಗಾಗಿ ಪರ್ವತೇಶನ ಕಾಲ ೧೬ನೆಯ ಶತಮಾನವಾಗಿರುವುದರಿಂದ ಮರುಳಸಿದ್ಧರ ಜೀವನ ಚರಿತ್ರೆಯ ಘಟನೆಗಳು ಚಿತ್ರಿತವಾಗಿಲ್ಲ. ಕವಿಯು

ಮರುಳಸಿದ್ಧರ ಬಗ್ಗೆ ತನ್ನ ಕೃತಿ ಪೂರ್ವಗ್ರಹಪೀಡಿತ ತನದಿಂದ ಕೂಡಿದೆ ಎಂಬುದು ವ್ಯಕ್ತವಾಗುತ್ತದೆ.

೨.೨.೮. ಚತುರಾಚಾರ್ಯ ಪ್ರಬಂಧ

ಚತುರಾಚಾರ್ಯ ಪ್ರಬಂಧದ ಕರ್ತೃ ತಿಲಕಪುರದ ಸೋಮ. ತಿಲಕಪುರ ಎನ್ನುವುದು ಈಗಿನ ಗುಲ್ಬರ್ಗ ಜಿಲ್ಲೆಯ ಸೇಡಂ ತಾಲೂಕಿಗೆ ಸೇರಿದೆ[೫೫]. ಸೋಮನ ಕಾಲ ಕ್ರಿ ಶ ೧೮೩೨ ಎಂದು ತಿಳಿದು ಬರುತ್ತದೆ. ಅಂದರೆ ೧೯ನೆಯ ಶತಮಾನ ತಿಲಕಪುರ ಸೋಮಕವಿ ಚತುರಾಚಾರ್ಯ ಪ್ರಬಂಧದ ಆಕರವಾಗಿ ಚಿತ್ತಾರು ಗಂಗಾಧರಯ್ಯನವರು ತೆಲುಗು ಭಾಷೆಯಲ್ಲಿ ದ್ವಿಪದಿಕಾವ್ಯವಾಗಿ ರಚಿಸಿರುವ 'ಕೊಲನುಪಾಕಲು ಮಹಾತ್ಮ್ಯಮು' ಎನ್ನುವ ಕೃತಿಯನ್ನು ಹೆಸರಿಸಿದ್ದಾರೆ. ಇದೇ ಗ್ರಂಥವನ್ನು ಆಧರಿಸಿ ಕೊಣಧೂರ್ತಿಪುರದ ಗುರುಮುದ್ದುಸಂಗಮ ದೇವನು ಐದು ಆಶ್ವಾಸಗಳ ಕೊಲ್ಲಿಪಾಕ ಮಹಾತ್ಮೆ ಎನ್ನುವ ಯಕ್ಷಗಾನ ಕಾವ್ಯವನ್ನು ರಚಿಸಿದ್ದಾರೆ. ತೆಲುಗು ಗ್ರಂಥವು ಪರಿಶೀಲನೆಗೆ ದೊರಕದುದರಿಂದ ಪ್ರಸ್ತುತ ಗುರುಮುದ್ದುಸಂಗಮ ದೇವನು ಕೃತಿಯೊಡನೆ ಚತುರಾಚಾರ್ಯ ಪ್ರಬಂಧವನ್ನು ಪರಿಶೀಲಿಸಿದೆ[೫೬].

ಚತುರಾಚಾರ್ಯ ಪ್ರಬಂಧದಲ್ಲಿ ನಾಲ್ವರು ಆಚಾರ್ಯರು ಕೊಲ್ಲಿಪಾಕದ ಸೋಮೇಶ್ವರನ ಗರ್ಭದಿಂದ ಜನಿಸಿದ ಸನ್ನಿವೇಶ ಕೆಳಕಂಡಂತೆ ವರ್ಣಿತವಾಗಿದೆ.

ಪಶುಪತಿಯ ಚರಣಗಳು ನಾಲ್ಕತಿ

ಎಸೆವ ನಾಲ್ಕು ಯುಗಗಳೆನಿಸಿ ಶೋ

ಭಿಸುವ ಕೃತಯುಗ ಪ್ರಥಮ ಚರಣರ ಜಸವಡೆದ ಶಿವನ

ಅಸಮಲೀಲೆಯೊ ನಾಲ್ಕು ಸತ್ವರ ಮಿಸುವ ಭೂಸುರ ವೇಷದಿಂದಳೆ

ಗೊಸೆದಿಳಿದು ಕೊಲ್ಲಿಪಾಕ ಸೋಮೇಶ್ವರನ ಗರ್ಭದಲಿ ೩-೧೨

ಲೀಲೆಯಿಂದೀಶ್ವರ ಸದಾಶಿವ

ಶೀಲರುದ್ದ ಮಹೇಶ್ವರರು ಸವಿ

ಶಾಲ ಕೆಂಜಡೆ ಕುಂಡಲೊಜ್ಜೋಪವೀತ ರುದ್ರಾಕ್ಷ.

ಮೂಲ ಭಸ್ಮೋದ್ಧಾರಣಾಂಗ ಕ

ಪಾಲ ಕಂಥೆಯು ಯೋಗದಂಡವು

ಕಾಲಗೆಜ್ಜೆಯು ಮುರುವು ಮುದ್ರೆಯು ಪ್ರಾಣ ಲಿಂಗಗಳು ೩-೧೩

ಸಾರವೇದಾಂತಾದಿ ವೇದ್ಯರ

ಪಾರರವಿಸಂಕಾಶರೆ ಮಿಜನ

ವಾರ್ಯರಭವ ಧ್ಯಾನರಖಿಲ ವಿಲೋಕನಾಯಕರು

ಭೂರಿಮಹಿಮೋದ್ಧಾರರು ಮನೋ

ಹಾರ ದಿಂದಲಿ ಲಿಂಗಗರ್ಭ

ಗಾರದಿಂ ಹೊರಟರು ಸುಮೂರ್ತದಿ ಕೇಳಿ ಮುನಿವರರೆ ೩-೧೪.

ಹೀಗೆ ಜನಿಸಿದ ರೇವಣ, ಮರುಳಸಿದ್ಧ, ಏಕೋರಾಮ, ಮತ್ತು ಪಂಡಿತಾರಾಧ್ಯರ ಕಾಲದಲ್ಲಿ ಕ್ರಮವಾಗಿ ನೀಲಗಳ, ದೇವನಂದನ, ಗೌತೇಂದ್ರ ಮತ್ತು ಶಂಕರ ಬಸವರೆಂಬ ದೊರೆಗಳು ಅಳಿದರೆಂದು ತಿಳಿದು ಬರುತ್ತದೆ[೫೨].

ಮರುಳಸಿದ್ಧರು ಸ್ವಯಂಭುವಾಗುಮದ ಪ್ರಕಾರ ಈಶ್ವರನ ವಾಮದೇವ ಮುಖದಿಂದ ಜನಿಸಿದರು. ಕೃತಯುಗದಲ್ಲಿ ದ್ವಕ್ಷರ. ತ್ರೇತಾಯುಗದಲ್ಲಿ ದ್ವಿವಕ್ತ, ದ್ವಾಪರಯುಗದಲ್ಲಿ ದಾರುಕ, ಕಲಿಯುಗದಲ್ಲಿ ಮರುಳಸಿದ್ಧ ಎನ್ನುವ ನಾಮಾಂತರಗಳು ಇವರಿಗುಂಟು. ವಟಕ್ಷೇತ್ರದ ಸಿದ್ಧಲಿಂಗದಲ್ಲಿ ಜನಿಸಿ ಉಜ್ಜಯಿನಿಯಲ್ಲಿ ನೆಲೆಸಿದರು.

ಪಾಶುಪತಾಗಮದಂತೆ ಸದ್ಯೋಜಾತ ಮುಖ ಹೆಸರು ದಾರುಕ ಹೆಸರು ಮರುಳಾರಾಧ್ಯ ಸೂತ್ರವೃಷ್ಟ ಪ್ರವರ ವೀರಶೈವ ವರ್ಣ ಅತಿವರ್ಣದಂಡ ಪಾಲಾಶ ಕಮಂಡಲು ತಾಮ್ರಮಂತ್ರನ ಶಾಖಾ ದಾರುಕ ಕಲಶತಾಮ್ರ ಕಂಥಾ ಮಾಂಜಿಷ್ಟ ಗೋತ್ರನಂದಿ ತತ್ವ ಪೃಥ್ವಿ. ಎಂದು ಹೇಳಲ್ಪಟ್ಟ ಚತುರಾಚಾರ್ಯ ಪ್ರಬಂಧದಲ್ಲಿ ಸಂಬಂದಿಸಿದಂತೆ ಕಥೆಗಳು ಈ ರೀತಿ ನಿರೂಪಿಸಲ್ಪಟ್ಟಿವೆ.

- ಮರುಳಸಿದ್ಧರು ರೇವಣರ ಅಪೇಕ್ಷೆಯಂತೆ ತ್ರೇತಾಯುಗ ಸಮಗ್ರದ ಆಚಾರ್ಯರಾದರು.
- ಔಬಳದಲ್ಲಿ ಜನಿಸಿದ ವಿಷ್ಣುವಿನ ಅಂಶವಾದ ಮಾಧವ ಮಹಾಚಾರ್ಯ ಎನ್ನುವ ವೈಷ್ಣವನನ್ನು ಮಣಿಸಿದರು.
- ದೇವನಂದನನಿಗೆ ಪಟ್ಟ ಕಟ್ಟಿ ದೀಕ್ಷೆ ಕೊಟ್ಟರು.
- ದೇವನಂದನನ ಮರಣಾನಂತರ ಗೌತಮಿಂದ್ರನಿಗೆ ಪಟ್ಟ ಕಟ್ಟಿದರು.

❖ ಮಲ್ಲೇಶ ಲಿಂಗವನ್ನು ದರ್ಶನ ಮಾಡಿದರು.

❖ ನರುವಪಲ್ಲಿಯ ಗಾಜಲವನ್ನಯ್ಯನಿಗೆ ದೀಕ್ಷೆ ಕೊಟ್ಟರು.

❖ ಏಕೋರಾಮನಿಗೆ ಮುರುವು ಮುದ್ರೆಗಳನ್ನಿತ್ತು ದ್ವಾಪರಯುಗಕ್ಕೆ ಅಧಿಪತಿಯನ್ನಾಗೆ ಮಾಡಿದನು.[೫೮]

ಈ ಕೃತಿ ಹೆಸರಿಗೆ ಚತುರಾಚಾರ್ಯ ಪ್ರಬಂಧವಾದರೂ ಇದರಲ್ಲಿ ರೇಣುಕ. ಮರುಳಸಿದ್ಧ, ಏಕೋರಾಮ ಮತ್ತು ಪಂಡಿತಾರಾಧ್ಯರ ಚಿತ್ರಗಳು ಸರಿಯಾಗಿ ಮೂಡಿ ಬಂದಿಲ್ಲವೆನ್ನಬಹುದು. ಅವರು ಜನಿಸಿದ್ದು, ದೀಕ್ಷೆ ಹೊಂದಿದ್ದು. ತಮ್ಮ ಕಾಲದ ದೊರೆಗಳಿಗೆ ಪಟ್ಟಕಟ್ಟಿದ್ದು. ಅವರ ಮೂಲಕ ವೀರಶೈವ ಧರ್ಮವನ್ನು ಪ್ರಸಾರ ಮಾಡಿದುದು ಮುಂತಾದ ಬಾಹ್ಯ ಘಟನೆಗಳು ಕಂಡುಬರುತ್ತವೆ. ಆದರೆ ಅವರ ಮಾನಸಿಕ ಒಳನೋಟ ಹೃದಯಂಗಮ ಭಾವನೆಗಳು ಈ ಕಾವ್ಯದಲ್ಲಿ ಎಡೆಪಡೆದಿಲ್ಲ. ಒಟ್ಟಿನಲ್ಲಿ ಇವರು ಇತಿಹಾಸಕ್ಕೆ, ವರ್ತಮಾನಕ್ಕೆ ಮತ್ತು ಭವಿಷ್ಯದ ವಿಕಾಸದ ಸಾಧ್ಯತೆಗಳಿಗೆ ಸಂಪೂರ್ಣವಾಗಿ ವಿರುದ್ದವಾದುದವರು. ಮತ್ತು ಹೊರತಾದವರು.

೨.೨.೯. ಸಂಸ್ಕೃತದಲ್ಲಿರುವ ಆಗಮಗಳು

ದರ್ಶನ ಶಾಸ್ತ್ರಗಳ ತವರುಮನೆಯಾದ ನಮ್ಮೀಭಾರತ ಧೇಶದಲ್ಲಿ "ನಿಗಮ" ಮತ್ತು "ಆಗಮ" ಭೇದದಿಂದ ಎರಡು ಶಾಶಾಸ್ತ್ರಗಳು ಅತ್ಯಂತ ಪ್ರಸಿದ್ಧವಾಗಿವೆ. ಇವುಗಳಲ್ಲಿ ಶಿವನ ನಿಃಶ್ವಾಸದಿಂದ ನಿಃಶೃತಗಳಾದ ಶಾಸ್ತ್ರಗಳನ್ನು ನಿಗಮಗಳೆಂತಲೂ ಮತ್ತು ಶಿವನ ವಾಗ್ವ್ಯವಹಾರ ರೂಪಗಳಾದ ಶಾಸ್ತ್ರ ಗಳನ್ನು ಆಗಮಗಳೆಂತಲೂ ಕರೆಯುತ್ತಾರೆ.[೫೯] ಈ ಬಗ್ಗೆ ಶ್ರೀ ಷ/ಬ/ಡಾ//ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು. ಅಮರೇಶ್ವರ ಮಠ. ಗುಳೇದಗುಡ್ಡ. ಇವರು ಆಗಮಗಳೆಂದರೇನು? ಎಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು 'ವೀರಶೈವ ಪಂಚಪೀಠ ಪರಂಪರೆ' ಎಂಬ ಗ್ರಂಥದ ಪೀಠಿಕೆಯಲ್ಲಿ ವಿವರಿಸಿರುತ್ತಾರೆ. ಇವುಗಳ ಅರ್ಥವನ್ನು ನಿರ್ಣಯಿಸುವುದು ಸಾಮಾನ್ಯ ಜನರಿಗೆ ಸಾಧ್ಯವಾಗುವುದಿಲ್ಲವೆಂಬ ಭಾವನೆಯಿಂದ, ಭಗವಂತನು ಸರ್ವ ಜನರ ಉಪಯೋಗಕ್ಕಾಗಿ ಶ್ರೀ ಪಾರ್ವತಿಯನ್ನು ಉದ್ಧೇಶಿಸಿ, ಉಪದೇಶಿಸಿದ ಶಾಸ್ತ್ರಗಳೇ ಆಗಮ ಶಾಸ್ತ್ರಗಳು ಎಂದು ಪ್ರತೀತಿ ಇದೆ[೬೦]. ಈ ಆಗಮಾದಿ ಸಾಹಿತ್ಯಗಳಲ್ಲಿ ಮರುಳಸಿದ್ಧರ ಅವತರದ ಬಗ್ಗೆ ಈ ರೀತಿಯಲ್ಲಿ ವರ್ಣಿಸಲಾಗಿದೆ.

ಸುಪ್ರಭೇದಾಗಮ[೬೧]

ಪೂರ್ವಂಮಯ ಮುಖಾಜ್ಜಾತೋ/ ವಾಮದೇವಚ್ಚ ದಾರುಕಂ ॥

ಲೀಲಯಾನ್ಯ ಸೃಜತ್ಪೂತ್ರಂ/ ವೃಷ್ಣನಾಮಮಹತ್ತರಂ ॥೧॥

ಸಯೀನ ಮರುಳಾರಾಧ್ಯೋ/ ಭೂತ್ವಾ ಲೀಲಾಮಥಾಕರೋತ್ ॥

ನಂದಿ ಗೋತ್ರಾಧಿನಾಥಶ್ಚ/ ಸಿಂಹಾಸನಪತಿಶ್ವಯಃ ॥೨॥

ಮರುಳಾರಾಧ್ಯ ಸನ್ನಾಮ್/ ಜಗದ್ಗುರು ತಮಶ್ಚಸಃ ॥

ಸ್ವಯಂಭುವಾಗಮ[೮]

ತದ್ವನ್ಮರುಳಸಿದ್ಧಸ್ಯ । ವಟಕ್ಷೇತ್ರೇ ಮಹತ್ತರೆ ॥

ಸಿದ್ಧೇಶಲಿಂಗಾಜ್ಜನನಂ । ಸ್ಥಾನಮುಜ್ಜಯನೀಪುರೇ ॥೧॥

ಶಿವನ ವಾಮುದೇವ ಮುಖ ಸಂಜಾತರಾದ ಶ್ರೀ ಜಗದ್ಗುರು ಮರುಳಾರಾಧ್ಯರು ಶಿವನ ಅಪ್ಪಣೆಯ ಮೇರೆಗೆ ವೀರಶೈವ ಮತ ಸಂಸ್ಥಾಪನೆಗಾಗಿ ಕ್ಷಿಪ್ರಾನದಿಯ ತಟದಲ್ಲಿರುವ ವಟಕ್ಷೇತ್ರದ ಶ್ರೀ ಸಿದ್ಧೇಶ್ವರಲಿಂಗದಿಂದ ಪ್ರತಿಯೊಂದು ಯುಗದಲ್ಲೂ ಅವತರಿಸುತ್ತಾ ಬಂದಿದ್ದಾರೆ. ಕೃತಯುಗದಲ್ಲಿ ದ್ವಕ್ಷರ ಶಿವಾಚಾರ್ಯ, ತ್ರೇತಾಯುಗದಲ್ಲಿ ದ್ವಿವಕ್ತ್ರ ಶಿವಾಚಾರ್ಯ, ದ್ವಾಪಾರಯುಗದಲ್ಲಿ ಶ್ರೀ ದಾರುಕ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ಶ್ರೀ ಮರುಳಾರಾಧ್ಯ ಶಿವಾಚಾರ್ಯ[೬೩] ಎಂಬ ಹೆಸರುಗಳು ಇವರಿಗೆ ಇದ್ದುದಾಗಿ ಈ ಮೇಲೆ ಉಲ್ಲೇಖಿಸಿದ ಆಗಮಗಳ ಸಾಹಿತ್ಯವು ವರ್ಣಿಸುತ್ತವೆ. ಶ್ರೀ ಮರುಳಾರಾಧ್ಯರು ಕ್ಷಿಪ್ರಾನದಿಯ ತಟದಲಿ ್ಲರುವ ವಟಕ್ಷೇತ್ರದ ಶ್ರೀ ಸಿದ್ಧೇಶ್ವರಲಿಂಗದಿಂದ ಅವತರಿಸಿದರು. ಕಾರಣಾಂತರದಿಂದ ಮಧ್ಯ ಭಾರತದ ಉಜ್ಜಯಿನಿಯಲ್ಲಿದ್ದ ಶ್ರೀಸದ್ಧರ್ಮ ಪೀಠವು ಕರ್ನಾಟಕದ ಬಳ್ಳಾರಿ ಜಿಲ್ಲೆಯ ಉಜ್ಜಯಿನಿ ಪಟ್ಟಣಕ್ಕೆ ಸ್ಥಳಾಂತರವಾಯಿತು. ಅದುವೇ ಸದ್ಧರ್ಮ ಸಿಂಹಾಸನವೆಂಬ ಹೆಸರಿನಿಂದ ಪ್ರಸಿದ್ದಿಯನ್ನು ಪಡಿಯಿತು. ಹೀಗೆ ಆಗಮಾದಿ ಸಾಹಿತ್ಯವು ಮರುಳಸಿದ್ಧರನ್ನು ಲಿಂಗೋದ್ಭವ ಲೀಲೆಯಲ್ಲಿ ವರ್ಣಿಸಲ್ಪಟ್ಟಿವೆ.

ಈ ಮೇಲಿನ ಆಗಮಸಾಹಿತ್ಯವು ಲಿಂಗೋದ್ಭವವಾದವೇ ಪ್ರಧಾನವೆಂದು ಪ್ರತಿಪಾದಿಸುತ್ತ ಮರುಳಸಿದ್ಧಾದಿಗಳು ಲಿಂಗದಿಂದಲೇ ಹುಟ್ಟಿದರೆಂಬ ಒಂದೇ ಮಾತಿನಲ್ಲಿಲ್ಲ. ಪರಮೇಶ್ವರನ ಪಂಚಮುಖಗಳಲ್ಲೂ ಪಂಚಾಚಾರ್ಯರು ಹುಟ್ಟಿದರೆಂದು ಹೇಳುತಾರೆ. ಹಾಗಾದರೆ ಲಿಂಗದಲ್ಲಿ ಹುಟ್ಟಿದ್ದು ನಿಜವೇ? ಮುಖದಲ್ಲಿ ಹುಟ್ಟಿದ್ದು ನಿಜವೇ? ಈ ವಾದವು ಶಾಸ್ತ್ರೀಯವೇ? ಐತಿಹಾಸಿಕವೇ? ವಿಚಾರವಂತರು ವಿಚಾರಿಸಬೇಕು. ಅಘೋರ, ತತ್ಪುರುಶ, ಈಶಾನ್ಯ, ಸದ್ಯೋಜಾತ, ವಾಮದೇವಾದಿ ಐದು ಮುಖಗಳನ್ನು ಈಶ್ವರನಿಗೆ ಇವರು ಕಲ್ಪಿಸಿಕೊಂಡಿದ್ದಾರೆ. ಇಂತಿಂಥವರು ಶಿವನ ಇಂತಿಂಥ ಮುಖದಲ್ಲೇ ಹುಟ್ಟಿದರೆಂಬುದನ್ನು ಸಹಾ ನಿರ್ಧಿಷ್ಟಗೊಳಿಸದೆ, ಒಮ್ಮೆ ಒಬ್ಬನು ಶಿವನ ಒಂದು

ಮುಖದಲ್ಲಿ ಹುಟ್ಟಿದವನೆಂದರೆ ಮತ್ತೊಮ್ಮೆ ಅದೇ ಮುಖದಲ್ಲಿ ಮತ್ತೊಬ್ಬರನ್ನು ಹುಟ್ಟಿಸಿದ್ದಾರೆ. ಇವರ ಈ ಎಲ್ಲಾ ವಾದಕ್ಕೊ ಆಗಮಗಳನ್ನು ಆಧಾರಗಳಾಗಿ ಮುಂದಿಡುತ್ತಾರೆ. ಆಗಮಗಳು ತತ್ವ ಮತ್ತು ಸಿದ್ಧಾಂತಗಳ ಪ್ರತಿಪಾದನೆಯ ದೃಷ್ಟಿಯಿಂದ ಪ್ರಮಾಣ ಗ್ರಂಥಗಳೇ ವಿನಾ ಐತಿಹಾಸಿಕ ದೃಷ್ಟಗಲ್ಲ,[೬೪] "ವೇದ ಮತ್ತು ಆಗಮಗಳು ಮೂಲತಃ ಎರಡು ದೊಡ್ಡ ಸಂಸ್ಕೃತಿಗಳನ್ನು ಪ್ರತಿನಿಧಿಸುವ ಸಾಹಿತ್ಯ ಪರಂಪರೆಗಳನಿಸಿವೆ. ದುರ್ದೈವದ ಸಂಗತಿಯೆಂದರೆ ವೇದದಷ್ಟೇ ತಾನೂ ಶ್ರೇಷ್ಠವೆಂಬ ಸ್ಪರ್ಧಾ ಮನೋಭಾವವನ್ನು ಬೆಳೆಸಿಕೊಂಡು ಆಗಮವು ಕೆಲವೋಮ್ಮೆ ಅದನ್ನು ಅನುಕರಿಸಲು ಪ್ರಯತ್ನಿಸಿದಂತಿದೆ. ಹೀಗಾಗಿ ಒಟ್ಟು ಆಗಮ ಸಾಹಿತ್ಯವನ್ನು ವೇದಪರ, ವೇದವಿರೋಧಿಯೆಂದು ಬಿಡಿಸಿ ಹೇಳದಷ್ಟು ಅದು ಭಿನ್ನಾಪಾಠಗಳನ್ನು ಬೆಳೆಸಿಕೊಂಡು ನಿಂತಿತು[೬೫] ಎಂಬುದಾಗಿ ಎಂ.ಎಂ. ಕಲಬುರ್ಗಿ ಅವರ ಆಗಮಾದಿ ಸಾಹಿತ್ಯ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ಧಾರೆ.

೨.೨.೧೦. ಶ್ರೀ ಮರುಳಸಿದ್ಧ ಸ್ತೋತ್ರ ಸಂಗ್ರಹ

೧೨ನೆಯ ಶತಮಾನದ ಶಿವಶರಣ ಮರುಳಸಿದ್ಧರ ಪ್ರಸ್ತಾಪ ಇತರೆ ಆಕಾರಾದಿ ಸಾಹಿತ್ಯಗಳಲ್ಲಿ ಲಭ್ಯವಾಗುವಂತೆ ಇತರೆ ವಚನ, ಸ್ತೋತ್ರಗಳಲ್ಲಿಯೂ ಸಂಗ್ರಹವಾಗಿರುವುದನ್ನು ಎಸ್. ಆರ್. ಮಲ್ಲಪ್ಪ,[೬೬] ಅವರು ಗುರುತಿಸಿದ್ದಾರೆ. ಹೀಗಾಗಿ ಸೂಚಿತ ಮರುಳಸಿದ್ಧರ ಪ್ರಸ್ತಾಪ ವಚನ ಸ್ತೋತ್ರದಲ್ಲಿ ಸಂಗ್ರಹಿತವಾದ ಸ್ತೋತ್ರಗಳು. ಈ ರೀತಿ ಇವೆ.

ಸರ್ವದಾದೇವ ದೇವೇಶಸ್ಸರ್ವೇಶೋ ರೇವಣಪ್ರಭುಃ ।

ಸದಾಶಿವಶ್ಚ ಲೋಕೇಶೋ ಮರುಳಶ್ಚ ದ್ವಿತೀಯತಃ ॥

ವೀರಾಗಮ

ಈ ಸ್ತೋತ್ರದಲ್ಲಿ ರೇವಣಸಿದ್ಧ, ಮರುಳಸಿದ್ಧರ ಪ್ರಸ್ತಾಪವು ನಿರೂಪಿತವಾಗಿರುವುದನ್ನು ಕಾಣಬಹುದಾಗಿದೆ.

❖ **ಶ್ರೀ ಕರಭಾಷ್ಯೆ**

ಕ್ರಿ.ಶ. ೧೧೬೦ರಲ್ಲಿ ಜೀವಿಸಿದ್ದ ಶ್ರೀ ಪತಿ ಪಂಡಿತ ಕವಿಯು ತನ್ನ ಕೃತಿಯಾದ ಶ್ರೀ ಕರಭಾಷ್ಯದಲ್ಲಿ 'ಮರುಳಪ್ರಭುಂ' ಎಂಬುದಾಗಿ ಸ್ಮರಿಸಿದ್ದಾನೆ. ಆ ಸ್ತೋತ್ರವೊ ಈ ರೀತಿ ಇದೆ.

ಸಮ್ಯ ಗ್ರೇವಣದೇಶಿಕೇಂದ್ರ ಧೃತ ಷಡ್ಲಿಂಗೋಜ್ವಲಂ ।

ಸಿದ್ಧಾರ್ಥ್ಯಂ ಮರುಳಪ್ರಭುಂ ಬುಧನುತಂ ತಂ ಮನ್ಮಹೇಶ್ರೇಯಸೇ ॥

ಶ್ರೀಕರಭಾಷ್ಯೆ (ಶ್ರೀ ಪತಿಪಂಡಿತ)

೨.೨.೧೧. ಅನುಷಂಗಿಕವಾದ ಕಾವ್ಯಗಳಲ್ಲಿ ಮರುಳಸಿದ್ಧರ ಉಲ್ಲೇಖ

ಹರುಷದಿಂದಂ ನೋಳ್ಪ ಭುಂಜಿಪಾಘ್ರಾಣಿಸುವ

ಪರುಸನಂಗೆಯ್ವ ಕೇಳುವ ಪರಮಸುಖವನೋ

ಸರಿಸದರ್ಪಿಸುವ ಲಿಂಗಾಂಗದ ಬೆಡಂಗಿಂದಿದೆಂದು ಶಿಷ್ಯ ಪ್ರತತಿಗೆ.

ಕರತಳಾಮಳಕಮಂ ಮಾಡಿದ ಸಮುನ್ನತಂ

ಕರುಣಿಸುಗೆ ಸಂತತಂ ಮರುಳಸಿದ್ಧೇಶಸ

ದ್ಗುರು ಶಿವಾದ್ವೈತ್ವಕ್ಕೆ ಕರುಭವಮಹೀಧರಸ್ವರುಮೆಮಗಭೀಷ್ಟಫಲಮಂ

ಬೊಮ್ಮರಸ(ರೇವಣಸಿದ್ಧೇಶ್ವರ ಪುರಾಣ)

ವಂದಿಸುವೆ ಶ್ರೀ ಗುರುವಿನಂಘ್ರಿಗೆ

ವಂದಿಸುವೆ ಶ್ರೀ ರೇವಣಾರ್ಯಗೆ

ವಂದಿಸುವೆ ಶ್ರೀ ಮರುಳಸಿದ್ಧಗೆ ಏಕೋರಾಮನಿಗೆ

ವಂದಿಸುವೆ ಶ್ರೀ ಪಂಡಿತಾರ್ಯಗೆ

ವಂದಿಸುವೆ ಶ್ರೀ ವೃಷಭರಾಜಗೆ

ವಂದಿಸುವೆ ಗೋಡ್ಯಾಳವಾಸಗೆ ಮಲ್ಲಿಕಾರ್ಜುನಗೆ.

ಶ್ರೀ ಗುರು ಶಿವಯೋಗಿ ಗಣವರನ ಕಾವ್ಯ

(ಸಿದ್ಧಲಿಂಗಕವಿ)

ಗುರು ರೇವಣೇಂದ್ರನ ಕರದೊಳುದಿಸಿ ಕೊಲ್ಲಾ

ಪುರದ ದೈತೆಯ ಮೂಗನರಿದು

ಧರೆಯಲಿ ಕೀರ್ತಿಯನಿರದಾಂತು ರಾಜಿಪ

ಮರುಳಸಿದ್ಧೇಶ್ವರ ಮಾಂ ಪಾಹಿ. –ಬಸವೇಶ್ವರ ಕಾವ್ಯ(ಬಸವಲಿಂಗ)

ರೇಣುಕ ರಾಮಪಂಡಿತ ಮಹಾಮರುಳಾರ್ಯರ ಮಾಯಿದೇವರಂ

ಜಾಣನ ಜಕ್ಕಣಾರ್ಯನ ಜಗನ್ನುತ ಮಲ್ಹಣ ಮಲ್ಲಣಾರ್ಯಾರಂ

ಪ್ರೀಣಿತ ಶಂಭುಶಂಕರ ಹರೀಶ್ವರ ರಾಘವ ಕೇಶಿರಾಜರಂ

ಮಾಣದೆ ಬಣ್ಣಿಸುತ್ತೆರಗಿ ಮೇಣ್ಪಡೆವೆಂ ಪರಮಾರ್ಥಸಿದ್ಧಿಯಂ

ರಾಜಶೇಖರ ವಿಲಾಸ(ಷಡಕ್ಷರ ದೇವ)

ಕರುಗಳಂ ಕಾಯ್ಸುತ್ತ ಭಕ್ತಹಿತ ಗುರುಮೂರ್ತಿ

ಮರುಳಸಿದ್ಧೇಶ್ವರಂ ಹಲಕೇಲವು ದೃಷ್ಟಗಳ

ಮೆರೆದು ಮರುಳಂತಿರ್ದು ರೇವುಗೊಂಡಗೆ ಸಕಲ ಸಿದ್ಧಿಗಳ ಕೊಟ್ಟು ಮುದದಿ

ನರಸುರೋರಗ ದಾನವರ್ಗಿಷ್ಟಮಂ ಕೊಡುವ

ಭರದೊಳುಜ್ಜನಿಯಲ್ಲಿ ಲಿಂಗಸ್ವ ರೂಪಾಗಿ

ಧರೆ ಪೊಗಳೆ ಸಕಲದಿಂ ಪೊಜೆಗೋಳುತಿರ್ಪನೆಂದೊರೆದನಾ ಗುರುರಾಯನು.

ಗುರುರಾಜಚಾರಿತ್ರೆ (ಸಿದ್ಧನಂಜೇಶ)

ಅಲ್ಲಮಪ್ರಭು ಅಮೃತನಾಥನ ನಿಮೇಷನಂ ಪಂಡಿತೇಶನಂ

ಮಲ್ಲಿಕಾರ್ಜುನ ಮರುಳಸಿದ್ಧೇಶ ದೇವನಂ ಸಕಲೇಶನಂ

ಸಲ್ಲಲಿತಸೌರಾಷ್ಟ್ರ ಸೋಮಸುಜ್ಞಾನಿಯಂ ತಿರಜ್ಞಾನಿಯಂ

ಭಿಲ್ಲಮನುಬಲದೇವ(ಜಗದೇವ) ಬಸವದಂಡೇಶನಂ ಚಂಡೇಶನಂ

– ಶ್ರೀ ಗಣಾಷ್ಟಕ;

ಶ್ರೀಗುರುದೇವಂಗೆ ಆಗಮಾತೀತಂಗೆ

ನಾಗಕಂಕಣಗೆಯತಿವರ ಮರುಳಾರ್ಯಂಗೆ

ರಾಗದಿಂದೊಮ್ಮೆ ಶರಣೆಂಬೆ

ಹೃದ್ಯಶೈವಾದ್ವೈತ ವೇದ್ಯ ವೇದಾಂತಕ

ಸಾಧ್ಯಜಗದೇಕ ಚೋದ್ಯರೂ ಪಾದ ಆ

ರಾಧ್ಯ ಮರುಳೇಶ ಶರಣಾಗು.

ಶೀಲವಂತಯ್ಯನ ತ್ರಿವಿಧಿ

(ಚನ್ನಮಲ್ಲೇಶ)

ಅಮುಗಿ ಸಿದ್ಧೇಶ್ವರಗೆ ಕಂಬಳಿಯ ನಾ ನೆಯ್ವೆ

ನಮಿಸಿ ಮರುಳೇಶಗೆ ಪಾಕಮಂ ನಾಗೆಯ್ವೆ

ಶಿವಾನುಭವ

ವೀರಶೈವ ಮತಾಬ್ಧಿ ಚಂದ್ರನು

ಘೋರ ಪಾಪ ಕುಪಂಕಸೂರ್‍ಯನು.

ವೀರಸೂರಿಯರೇಂದ್ರವಂದಿತ ಚರಣ ಪಂಕಜನು

ಧೀರತೋಂಟದ ಸಿದ್ಧಲಿಂಗನು

ಪರತೆರೋಜ್ಜಿನಿ ಮರುಳಸಿದ್ಧನು

ಕೋರಿದಿಷ್ಟಾರ್ಥಗಳನೀಯುತೆ ಪೊರೆಯಲೊಲಿದೆಮ್ಮ

ಶ್ರೀ ಸದಾಶಿವ ಶಿವಾಚಾರ್ಯರು

ಸಖರಾಯ ಪಟ್ಟಣ.

ಜನನ ಮರಣ ವಿದೂರ ಭವಹರ

ಮುನಿವರೇಣ್ಯ ಮಲತ್ರಯಾಪಹ

ಘನವಿರಕ್ತಶುಭಾಂಗ ಪಾಪಧ್ವಂಸ ಲೋಕೇಶಾ

ದಿನಕರಾದಿ ಸುರಾಭಿನತಪದ

ವನಜ ಪರಮಾರಾಧ್ಯ ಭಿಕ್ಷಾ

ಟನಸುಖಿಕ್ರಿಯ ಸಲಹು ಶ್ರೀಗುರು ಮರುಳಸಿದ್ಧೇಶ

ಸದ್ಗುರು ಮರುಳಸಿದ್ಧೇಶ್ವರ ಸ್ತೋತ್ರ (ಫಕೀರಶಾಸ್ತ್ರಿ, ಹಿರೇಹಡಗಲಿ)[೬೭]

ಈ ಮೇಲೆ ನಿರೂಪಿಸಲ್ಪಟ್ಟಿರುವ ವಚನಸ್ತೋತ್ರ ಸಂಗ್ರಹದಲ್ಲಿನ ಮರುಳಸಿದ್ಧರ ಪ್ರಸ್ತಾಪವು ಮರುಳಸಿದ್ಧರ ಜೀವನದ ಕೆಲವೇ ಕೆಲವು ಸಂಗತಿಗಳನ್ನು ಅಲ್ಲಲ್ಲಿ ಸೂಚಿಸಿವೆ. ಆದರೆ ಈ ಮೇಲೆ ತಿಳಿಸಿದ ವಚನಸ್ತೋತ್ರ ಸಂಗ್ರಹದ ವಚನಗಳು ಕೇವಲ ಮರುಳಸಿದ್ಧರನ್ನು ಸ್ಮರಿಸಿವೆ. ಹೀಗಾಗಿ ಮರುಳಸಿದ್ಧರ ಜೀವನದ ಸಾಧನೆ ತತ್ವ ನಿರೂಪಣೆ ಪೂರ್ಣವಾಗಿ ನಿರೂಪಿತವಾಗಿರುವುದಿಲ್ಲ. ಆದ್ದರಿಂದ ೧೨ನೆಯ ಶತಮಾನದ ಶಿವಶರಣ ಮರುಳಸಿದ್ಧ ಅಥವಾ ಬೇರೆ ಬೇರೆ ಕಾಲ ಘಟ್ಟದಲ್ಲಿಯೂ ಅನೇಕ ಕಡೆ ಕರ್ನಾಟಕದಲ್ಲಿ ಮರುಳಸಿದ್ಧರ ಪ್ರಸ್ತಾಪ ಉಲ್ಲೇಖಿತವಾಗಿವೆ. ಏಕೆಂದರೆ ಈ ಮೇಲೆ ನಿರೂಪಿತವಾದ ವಚನಸ್ತೋತ್ರ ಸಂಗ್ರಹವು ಮರುಳಸಿದ್ಧರ ಜನ್ಮ, ಕಾಲದ ಬಗ್ಗೆ ಯಾವುದೇ ಘಟನೆ ಸ್ಪಷ್ಟ ರೂಪ ಎಡೆಪಡೆದಿಲ್ಲ. ಹೀಗಾಗಿ ಈ ಅಧ್ಯಯನದ ಮರುಳಸಿದ್ಧರೆ ಎಂಬುದನ್ನು ನಿರ್ಧರಿಸುವುದು ಕೇವಲ ಊಹೆ ಎಂದು ಹೇಳಬಹುದು.

೨.೨.೧೨. ಮರುಳಸಿದ್ಧ ವಚನಕಾರರಾಗಿ

೧೨ನೆಯ ಶತಮಾನದ ಶಿವಶರಣ ಮರುಳಸಿದ್ಧ ಕುರಿತು ಸಮಕಾಲೀನ ಯಾವ ಗ್ರಂಥಗಳು ಲಭ್ಯವಿಲ್ಲ. ಕರ್ನಾಟಕದಲ್ಲಿ ಮರುಳಸಿದ್ಧರ ಮಹತ್ವದ ಜೀವನವನ್ನು ಆ ಪ್ರದೇಶದ ಐತಿಹಾಸಿಕ ನೆಲೆಗಳು ಮತ್ತು ಸ್ಮಾರಕಗಳಲ್ಲಿ ಗುರುತಿಸಬಹುದಾಗಿದೆ. ದೇವಕವಿಯ ಸಿದ್ಧಲಿಂಗ ಸಾಂಗತ್ಯ ಮತ್ತು ಸ್ಥಳೀಯ ಜನಪದರಿಂದ ಸಂಗ್ರಹವಾದ ಕಥೆಗಳಿಂದಲೂ ಆತನ ಜೀವನ ಕಥೆ ನಿರೂಪಿತವಾಗುತ್ತದೆ. ಹೀಗಾಗಿ ಆತ ೧೨ನೇ ಶತಮಾನದವನೆಂದು ಅವು ಸೂಚಿಸುತ್ತವೆ. ಮರುಳಸಿದ್ಧ ಸ್ವತಃ ಕೃತಿ ರಚನೆ ಮಾಡಿದ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ಆದರೆ ಮರುಳಸಿದ್ಧರು ಒಬ್ಬ ವಚನಕಾರರಾಗಿದ್ದ ಎಂಬುದು ೧೨ನೇ ಶತಮಾನದ ವಚನಕಾರರ ಮೇಲೆ ಈತನ ಪ್ರಭಾವ ಬಿದ್ದಿದೆ. ಈತನನ್ನು ಅನೇಕರು ಬಣ್ಣಿಸಿದ್ದಾರೆ. 'ಸೊನ್ನಲಗೆಯ ಸಿದ್ಧರಾಮೇಶ್ವರನು' ಮರುಳಸಿದ್ಧನ ವಚನ 'ಅರವತ್ತೆಂಟು ಸಾಸಿರ' ಎಂದು ಅಂದರೆ ಅರವತ್ತೆಂಟು ಸಾವಿರ ವಚನಗಳನ್ನು ರಚಿಸಿದ್ದ ಎಂಬುದಾಗಿ ತನ್ನ ವಚನವೊಂದರಲ್ಲಿ ಉಲ್ಲೇಖಿಸುತ್ತಾನೆ.[೬೮] ಆದರೆ ಮರುಳಸಿದ್ಧರು ತಾವು ಸ್ವತಃ ಯಾವುದೇ ಗ್ರಂಥಗಳ ರಚನೆಮಾಡಿಲ್ಲ. ಆದರೂ ಮರುಳಸಿದ್ಧರು ಒಬ್ಬ ವಚನಕಾರರಾಗಿದ್ದರಿಂಬುದು ಸೊನ್ನಲಗೆಯ ಸಿದ್ಧರಾಮೇಶ್ವರರಿಂದಲೆ ತಿಳಿದು ಬರುವುದು. ಆದರೆ ಮರುಳಸಿದ್ಧರ 'ಅರವತ್ತೆಂಟು ಸಾಸಿರ' ವಚನಗಳು ಲಭ್ಯವಿಲ್ಲ ಆದರೆ ಒಂದೇ ವಚನ ಮಾತ್ರ ಲಭ್ಯವಾಗಿದೆ.

ಆಲಿ ಆಲಯದಲ್ಲಿ ಕರಿಗೊಳಲು, ಶ್ರವಣವು ಆಕಾಶವನಡರಲು

ಉಲುಹು ನಿರ್ಘೂತ ಚಿತ್ತ ಸಮಾಧಾನವನ್ನೈದಲು

ಕಾಲಕರ್ಮಗಳ ಗೆಲಿವುದಿದೇನು ಸೋಜಿಗವು

ಹೇಳಾ! ರೇವಣ್ಣ ಪ್ರಭುವೇ. –ಮರುಳಸಿದ್ಧ[೭೬]

ಎಂಬ ಈ ವಚನದಲ್ಲಿಯ ಮರುಳಸಿದ್ಧ 'ರೇವಣ್ಣ ಪ್ರಭುವೇ' ಎಂಬ ಅಂಕಿತದಿಂದ ರಚಿತವಾಗಿರುವುದರಿಂದ ಆತನು ರೇವಣಸಿದ್ಧನ ಶಿಷ್ಯನಾಗಿರ ಬೇಕೆಂದು ವ್ಯಕ್ತವಾಗುತ್ತದೆ.

೨.೨.೧೩. ಮರುಳಸಿದ್ಧರ ಕುರಿತು ಆದಯ್ಯನ ಎರಡು ವಚನಗಳು.

ಹರಿಹರನು ಆದಯ್ಯನ ಮೇಲೆ ಒಂದು ರಗಳೆಯನ್ನು ಬರೆದಿರುತ್ತಾನೆ. ಆತ ಏವ ಬಸವೇಶ್ವರನನ್ನು ಹೆಸಿರಿಸಿರುವ ಹಾಗೂ ಅವನ ಕಿರಿಯ ಸಮಕಾಲೀನನಾದ ಆದಯ್ಯನು ಕ್ರಿಶ. ಸು ೧೨೧೦ ರೊಳಗೆ ಕಾಲವಾಗಿರಬೇಕು ಆದಯ್ಯನ ಈ ಎರಡು ವಚನಗಳಲ್ಲಿ 'ಮರುಳಸಿದ್ಧಯ್ಯದೇವರ ಅದೃಷ್ಟ ಪ್ರಸಾದ ನಿಷ್ಠೆ' ಹಾಗೂ 'ಮರುಳಸಿದ್ಧ ದೇವರೆನ್ನ ಶ್ರೋತ್ರ' ಎಂಬಲ್ಲಿ ಮರುಳಸಿದ್ಧನ ಹೆಸರಿದೆ.

ಬಸವಣ್ಣನ ಭಕ್ತಿ ಸ್ಥಲ ಮಡಿವಾಳ ಮಾಚಣ್ಣನ ಮಹೇಶ್ವರಸ್ಥಲ. ಘಟ್ಟಿವಾಳ ಮುದ್ದಣ್ಣನ ಪ್ರಸಾದಿಸ್ಥಳು, ಚೆನ್ನಬಸವಣ್ಣನ ಪ್ರಾಣಲಿಂಗಸ್ಥಲ. ಪ್ರಭುವಿನ ಶರಣಸ್ಥಲ, ಸೊಡ್ಡಳ ಬಾಚರಸನ ಐಕ್ಯ ಸ್ಥಲ. ಅಜಗಣ್ಣನ ಆರೋಢ, ನಿಜಗುಣನ ನಿಬ್ಬೆರಗು. ಅನುಮಿಷನ ನಿಶ್ಚಲ, ಮಹಾದೇವಿಯಕ್ಕನ ಜ್ಞಾನ, ನಿಂಬಿಯಕ್ಕನ ಜ್ಞಾನ ನಿಶ್ಚಯ. ಮುಕ್ತಾಯಕ್ಕನ ಅಕ್ಕರು. ಸತ್ಯಕ್ಕನ ಯುಕ್ತಿ. ಅಲ್ಲಾಳಿಯಕ್ಕನ ಸಮತೆ. ರೇವಣಸಿದ್ಧಯ್ಯ ದೇವರ ನಿಷ್ಠೆ, ಸಿದ್ಧ ರಾಮ ತಂದೆಗಳ ಮಹಿಮೆ. ಮರುಳಸಿದ್ಧಯ್ಯ ದೇವರ ಅದೃಷ್ಟ ಪ್ರಸಾದನಿಷ್ಠೆ, ಏಕೋರಾಮಯ್ಯಗಳ ಆಚಾರ ನಿಷ್ಠೆ. ಪಂಡಿತಾರಾಧ್ಯನ ಸ್ವಯಂಪಾಕ, ಮುಗ್ಧ ಸಂಗಯ್ಯ. ಮೈದುನ ರಾಮಣ್ಣ. ಬೆಡರ ಕನ್ನಪ್ಪ. ಕೋಳೂರು ಕೊಡಗೂಸು. ತಿರುನೀಲಕ್ಕರು. ರುದ್ರಪಶುಪತಿಗಳು. ದೀಪದ ಕಲಿಯರ ಮೂಢಭಕ್ತಿ ಎನ್ನೊಳಗೆಂದಪ್ಪುದೋ.

ಸೌರಾಷ್ಟ್ರ ಸೋಮೇಶ್ವರಾ (ವಚನ–೨೯)

ಬಸವಣ್ಣನೆನ್ನ ಅಂಗ, ಮಡಿವಾಳನೆನ್ನ ಮನ, ಪ್ರಭು ಎನ್ನ ಪ್ರಾಣ, ಚನ್ನಬಸವಣ್ಣನೆನ್ನ ಕರಸ್ಥಲದ ಲಿಂಗ, ಘಟ್ಟಿ ವಾಳನೆನ್ನ ಭಾವ, ಸೊಡ್ಡಳ ಬಾಚಾರಸನೆನ್ನ ಅರಿವು. ಮಹಾದೇವಿಯಕ್ಕನೆನ್ನ ಜ್ಞಾನ, ಮುಕ್ತಾಯಕ್ಕನೆನ್ನ ಅಕ್ಕರು, ಸತ್ಯಕ್ಕನೆನ್ನ ಯುಕ್ತಿ ನಿಂಬಿಯಕ್ಕನೆನ್ನ ನಿಶ್ಚಯ, ಆಲ್ಲಾಳಿಯಕ್ಕನೆನ್ನ ಸಮತೆ, ಅನುಮಿಷ ನೆನ್ನ ನಿಶ್ಚಲ ನಿಜಗುಣನೆನ್ನ ಕ್ಷಮೆ ರೇವಣಸಿದ್ಧೇಶ್ವರನೆನ್ನ ಸ್ತೋತ್ರ

ಸಿದ್ಧರಾಮತಂದೆಗಳೆನ್ನ ನೇತ್ರದದುಕ್ಕು ಮರುಳಸಿದ್ಧೇಶ್ವರ ದೇವರೆನ್ನ ಶ್ರೋತ್ರ ಪಂಡಿತಾರಾಧ್ಯರಿನ್ನ ಜಿಹ್ವೆ, ಏಕೋರಾಮ ತಂದೆಗಳೇನ್ನ ನಾಸಿಕ, ಅಸಂಖ್ಯಾತರೆನ್ನ ಅವಯವ ಪುರಾತರೆನ್ನ ಪುಣ್ಯದಪುಂಜ ಏಳು ನೂರೆಪ್ಪತ್ತು ಅಮರಹಣಂಗಳೆನ್ನ ಗತಿಮತಿ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ ಪಡಿತೊತ್ತಯ್ಯ[೭೦].

ವಚನ-೪೦ :

ಕರ್ನಾಟಕ ಚರಿತ್ರೆಯಲ್ಲಿ ಆದಯ್ಯನು ೧೨ನೆಯ ಶತಮಾನದವನು ಎಂಬುದು ಈ ಎರಡು ವಚನಗಳಲ್ಲಿ ಕರ್ನಾಟಕದ ಶಿವಶರಣಪರಂಪರೆಯಲ್ಲಿ ಬರುವ ಎಲ್ಲಾ ಶಿವ ಶರಣರನ್ನು ಸ್ಮರಿಸಿದ್ದಾರೆ. ಆದಯ್ಯನು ಈ ಶರಣರ ಸಮಕಾಲೀನನಾಗಿರುವುದರಲ್ಲಿ ಯಾವ ಅನುಮಾನವು ಇಲ್ಲ. ಆದಯ್ಯನು ಮರುಳಸಿದ್ಧರನ್ನು 'ಮರುಳಸಿದ್ಧಯ್ಯ ದೇವರ ಅದೃಷ್ಟ ಪ್ರಸಾದ ನಿಷ್ಠೆ ಹಾಗೂ ಮರುಳಸಿದ್ಧ ದೇವರನ್ನ ಶ್ರೋತ್ರ' ಎಂಬಲ್ಲಿ ಆದಯ್ಯ ಮರುಳಸಿದ್ಧರ ಬಗ್ಗೆ ಇಟ್ಟಿರುವ ನಿಷ್ಠೆ ಭಕ್ತಿ ಗೌರವ ಹೇಗೆ ವ್ಯಕ್ತ ಪಡಿಸಿದ್ದಾನೆ ಎಂಬುದು ತಿಳಿದು ಬರುತ್ತದೆ. ಆದರೆ ಇಲ್ಲಿ ಮರುಳಸಿದ್ಧರ ಸಮಕಾಲೀನನಾದ ಆದಯ್ಯ ವಚನಕಾರ, ಶಿವಶರಣನಾಗಿರಲು ಬಹುದು.

೨.೨.೧೪. ಮೌಖಿಕ ಆಕರಗಳಲ್ಲಿ ಮರುಳಸಿದ್ಧರ ಕಥೆಗಳ ಸಮೀಕ್ಷೆ :

ಮೌಖಿಕವು ಅಲಿಖಿತ, ಅಪ್ರಕಟಿತ ಮಾಹಿತಿಗಳ ಅಗರ. ವೈಯಕ್ತಿಕ ನೆಲೆಯಲ್ಲಿ ಅಭಿವ್ಯಕ್ತಗೊಂಡು ತನ್ನ ಪರಂಪರೆಯಿಂದ ಬಂದದ್ದನ್ನು ಮುಂದಿನ ತಲೆಮಾರಿಗೆ ರವಾನಿಸುವ ತಂತ್ರ ಇದಾಗಿದೆ. ಮೌಖಿಕ ಪರಂಪರೆ ತಲೆಮಾರುಗಳಿಂದ ರವಾನೆಯಾದ ಕಂಠಸ್ಥ ಸಾಹಿತ್ಯವಾಗಿದೆ. ಆಯಾ ಪ್ರಾದೇಶಿಕಕತೆಗೆ ತಕ್ಕಂತೆ ರಾಜಕೀಯ, ಸಾಂಸ್ಕೃತಿಕವಾಗಿಯೂ ಇದು ಬೆಸೆದು ಕೊಂಡಿರುತ್ತದೆ.ಮೌಖಿಕ ಆಕರಗಳಲ್ಲಿ ಜಟಿಲವಾದ ನಿಲುವುಗಳನ್ನು ಎತ್ತಿ ಹಿಡಿಯುವ ಅಂಶಗಳು ಕಡಿಮೆ. ಎಲ್ಲಿಯೂ ದಾಖಲಾಗದವರ ವಿವರವು ಮೌಖಿಕ ಕಥಾನಕಗಳಲ್ಲಿ ವ್ಯಕ್ತ ಪಡುವುದು. ಸ್ಥಳೀಯ ಮಹತ್ವ ಹೊಂದಿರುವುದು ಗಮನಾರ್ಹ.[೭೧] ಈ ದಿಸೆಯಲ್ಲಿ ೧೨ನೆಯ ಶತಮಾನದ ಶಿವಶರಣ ಮರುಳಸಿದ್ಧರ ಕುರುತು ಕಥೆಗಳ ನಿರೂಪಣೆಗಳು ಐತಿಹ್ಯಗಳು ಅವರ ನೆಲೆಗಳು ಮತ್ತು ಸ್ಮಾರಕಗಳಲ್ಲೂ ಅವರ ಪವಾಡ ಕಥೆಗಳು ಜನಪದರ ದೃಷ್ಟಿಯಿಂದ ಅಭಿವ್ಯಕ್ತ ಗೊಂಡಿರುವ ಈ ಕಥೆಗಳನ್ನು ಈ ಕೆಳಗಿನಂತೆ ಅವಲೋಕಿಸಲಾಗಿದೆ. ಚರಿತ್ರೆಯನ್ನು ಕ್ರಮಬದ್ಧವಾಗಿ ಕಾಣುವ ನಮ್ಮ ಇಂದಿನ ಅಧ್ಯಯನ ಮಾದರಿಗಳಿಗೆ ಈ ಕಥೆ ಸವಾಲಾಗಿ ಬಿಡುತ್ತದೆ. ಕಾರಣ, ಪಾಶ್ಚಾತ್ಯರಿಂದ ಕಲಿತ ಚರಿತ್ರೆಯನ್ನು ಕ್ರಮಬದ್ಧವಾಗಿ ಕಾಣುವ ಮಾದರಿಯನ್ನು ಮರೆತು, ಎಲ್ಲವನ್ನು ಅಖಂಡವಾಗಿ ಕಾಣುವ ಪಾರಂಪರಿಕ ಮಾದರಿಯ ಮೂಲಕಥಾ ಲೋಕವನ್ನು ಪ್ರವೇಶಿಸ ಬೇಕಾಗುತ್ತದೆ.

ಮರುಳಸಿದ್ಧರು ೧೨ನೆಯ ಶತಮಾನದವರು ಎಂಬುದನ್ನು ಹಿಂದಿನ ಲಿಖಿತ ಆಕರಗಳ ಮೂಲಕ ನೋಡಿದೆವು. ಈ ಚರಿತ್ರೆಯನ್ನು ಅಂತಸ್ಥಗೊಳಿಸಿ ಎಲ್ಲ ಕಾಲದ ಈ ದಿವ್ಯಶಕ್ತಿಯೂ ಹೇಗೆ ವ್ಯಕ್ತಿಗಳಿಂದ ಕಾಲ ಕಾಲಕ್ಕೆ, ತಲೆಮಾರಿನಿಂದ ತಲೆಮಾರುಗಳಿಗೆ ಹರಿದು ಬರುತ್ತದೆ. ಎಂಬುದನ್ನು ಮರುಳಸಿದ್ಧರ ಮೂಲಕ ಹಿಂದು-ಮುಂದುಗಳನ್ನು ಒಂದಾಗಿಸಿ ಕಟ್ಟುತ್ತಾರೆ. ಪುರಾಣ-ಇತಿಹಾಸ-ಸಮಾಕಾಲೀನತೆಗಳೆಲ್ಲಾ ಮೇಳೈಸುವುದರ ಬೆನ್ನಲ್ಲೇ, ಕತೆಯ ವಿಸ್ತಾರತೆ ಹೆಚ್ಚಾಗಿದೆ.

ಪ್ರಸ್ತುತ ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕಿನಲ್ಲಿ ಮರುಳಸಿದ್ಧರ ಪುಣ್ಯ ಕ್ಷೇತ್ರವಾದ ಉಜ್ಜಯಿನಿ ಪಂಚಪೀಠಗಳಲ್ಲಿ ಒಂದಾಗಿದೆ. ಉಜ್ಜಯಿನಿ(ಉಜ್ಜಿನಿ) ಇದು ಎಂದು ಕರೆಯಲ್ಪಡುವ ವೀರಶೈವರ ಧಾರ್ಮಿಕ ಕೇಂದ್ರವಾಗಿದೆ. ಶಿವನ ವಾಮದೇವ ಮುಖದಿಂದ ದಾರುಕ ಶಿವಾಚಾರ್ಯರು ದ್ವಾಪರಯುಗದಲ್ಲಿ ಅವತರಿಸಿದರು. ಇವರು ಕೃತಯುಗದಲ್ಲಿ ದ್ವಕ್ಷರ ಶಿವಾಚಾರ್ಯ ತ್ರೇತಾಯುಗದಲ್ಲಿ ದ್ವಿವಕ್ತ್ರ ಶಿವಾಚಾರ್ಯ ಮತ್ತು ಕಲಿಯುಗದಲ್ಲಿ ಶ್ರೀ ಮರುಳಾರಾಧ್ಯ ಶಿವಾಚಾರ್ಯ ಎಂಬ ಹೆಸರುಗಳಿಂದ ಅವತರಿಸಿದರು. ಶ್ರೀ ಮರುಳಾರಾಧ್ಯರು ಕ್ಷಿಪ್ರಾನದಿಯ ತಟದಲ್ಲಿರುವ ವಟಕ್ಷೇತ್ರದ ಶ್ರೀಸಿದ್ಧೇಶ್ವರ ಲಿಂಗದಿಂದ ಅವತರಿಸಿದರು. ಕಾರಣಾಂತರದಿಂದ ಮಧ್ಯ ಭಾರತದ ಉಜ್ಜಯಿನಿಯಲ್ಲಿದ್ದ ಶ್ರೀ ಸದ್ಧರ್ಮ ಪೀಠವು ಕರ್ನಾಟಕದ ಬಳ್ಳಾರಿ ಪಟ್ಟಣಕ್ಕೆ ಸ್ಥಳಾಂತರವಾಯಿತು[೨] ಎಂಬ ಮರುಳಸಿದ್ಧರ ಬಗ್ಗೆ ಹುಟ್ಟಿಕೊಂಡ ಕಥೆ ಮರುಳಸಿದ್ಧರ ಪವಾಡಕಥೆಗಳು ವಿಕೃತ ರೂಪವನ್ನು ಪಡಿಯುತ್ತ ಭಾರತದ ಅನೇಕ ಕಡೆ ವ್ಯಾಪಿಸಿಕೊಂಡಿವೆ. ಪಂಚಪೀಠಪರಂಪರೆಯವರ ಜನಾಂಗದವರಲ್ಲಿ ಈ ರೀತಿಯ ಕಥೆಗಳು ಒಂದು ರೀತಿ ಎಡೆ ಪಡೆದುಕೊಂಡಿವೆ.

ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಮೊದಲಾದ ಕಡೆ ಸಾದಲಿಂಗಾಯಿತ ವರ್ಗದವರು ಹೆಚ್ಚಾಗಿದ್ದು ಆ ಜನಾಂಗದವರಲ್ಲಿ ಅಭಿವ್ಯಕ್ತವಾಗುವ ಕಥೆಯ ಸ್ವರೂಪವೇ ಬೇರೆ. ಈ ಜನಾಂಗವು ಉಜ್ಜಯಿನಿಯ ಮರುಳಸಿದ್ಧೇಶ್ವರರನ್ನು ಕುಲದೈವ ಅಥವಾ ಮನೆದೇವರೆಂದು ಆರಾಧಿಸುವುದು ರೂಢಿಯಲ್ಲಿದೆ ಈ ಭಾಗದ ಜನರ ಆರಾಧ್ಯ ದೈವವಾಗಿದ್ದಾನೆ. ಈ ಜನಾಂಗದಲ್ಲಿ ಮರುಳಸಿದ್ಧರ ಜೀವನ, ಹುಟ್ಟು, ಬೆಳವಣಿಗೆ ಹಾಗೂ ಆತನ ಪವಾಡ ಸಾಧನೆಗಳು ಮರುಳಸಿದ್ಧರು ಸಂಚರಿಸಿದ ಅವರ ನೆಲೆಗಳು ಮತ್ತು ಸ್ಮಾರಕಗಳು ಎಲ್ಲಿ ಗುರುತಿಸಲ್ಪಡುತ್ತವೆ. ಅಂತಹ ಭಾಗದಲ್ಲಿ ಮರುಳಸಿದ್ಧರ ಜೀವನ ಹುಟ್ಟು ಬೆಳವಣಿಗೆ ಸಾಧನೆ ಪವಾಡಗಳ ಕುರಿತು ದಂತಕಥೆಗಳು ಕೆಲವು ಐತಿಹ್ಯಗಳ ಆಯ ಸ್ಥಳೀಯ ಜನಪದರು ಹೇಳುವ ಜನಪದ ಕಥೆಗಳು. ಜನಪದಹಾಡು, ಡೊಳ್ಳುಪದ, ಭಜನೆಯ ಮೇಳ ಮೊದಲಾದ ಕಡೆ ಮರುಳಸಿದ್ಧರ ಜೀವನ ಚರಿತ್ರೆಯ ಕೆಲವು ಸನ್ನಿವೇಶಗಳು ಸ್ಮರಿಸಲ್ಪಡುತ್ತವೆ. ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಮರುಳಸಿದ್ಧರ

ಐತಿಹಾಸಿಕ ಕುರುಹುಗಳು ಹೆಚ್ಚಾಗಿ ಕಂಡುಬರುತ್ತವೆ. ಹೀಗಾಗಿ ಈ ಭಾಗದಲ್ಲಿ ಮರುಳಸಿದ್ಧರ ಕುರಿತು ವ್ಯಕ್ತವಾಗುವ ಕಥೆಯ ನಿರೂಪಣೆ ಸ್ಥಳದಿಂದ ಸ್ಥಳಕ್ಕೆ ಭಿನ್ನವಾಗಿದ್ದರು ಮೂಲಕಥೆಯಲ್ಲಿ ಯಾವ ವ್ಯತಿರಿಕ್ತ ಬದಲಾವಣೆಗಳಿಲ್ಲದೆ ಕತೆ ಎಡೆಪಡೆದುಕೊಳ್ಳುತ್ತದೆ.

ಮರುಳಸಿದ್ಧರು ೧೨ನೆಯ ಶತಮಾನದ ಶಿವಶರಣ ಇವರು ಕೆಳವರ್ಗವಾದ ಅಂತ್ಯಜನ ಮನೆಯಲ್ಲಿ ಜನ್ಮ ಪಡೆದವರು. ಇಂದಿನ ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕಿನಲ್ಲಿ ಮರುಳಸಿದ್ಧರ ಪುಣ್ಯಕ್ಷೇತ್ರವಾದ ಉಜ್ಜಯಿನಿ ಗ್ರಾಮವಿದೆಯಷ್ಟೆ. ಇದಕ್ಕೆ ಈಶಾನ್ಯದಲ್ಲಿ ಬೈರೇದೇವರ ಗುಡ್ಡವಿದೆ. ಈ ಗುಡ್ಡಕ್ಕೆ ಸಮೀಪವಾಗಿ ಕಗ್ಗಲ್ಲುಪುರವಿತ್ತು. ಇದು ಆತ ಜನ್ಮ ವಿತ್ತ ಸ್ಥಳ ಆ ಸ್ಥಳವೀಗ ಪಾಳು ಬಿದ್ದ ನಿವೇಶನ(ಬೇಚಾರ್ ಗ್ರಾಮ)ವಾಗಿದೆ. ಇದುವೇ ಅವರ ಜನ್ಮ ಸ್ಥಳ ಎಂಬುದಾಗಿ ಹೇಳುತ್ತಾರೆ. ಈ ಮರುಳಸಿದ್ಧರ ಜನ್ಮ ಪಡೆದ ಬಗ್ಗೆ ಕುರಿತು ದಂತ ಕಥೆಗಳಿವೆ.

ಕೈಲಾಸದಲ್ಲಿ ಶಿಲಾದನೆಂಬ ಋಷಿಯು ಶಿವಪೂಜಾ ಸಮಯದಲ್ಲಿ ತನ್ನ ಪತ್ನಿ ರಜಸ್ವಲೆಯಾದುದಕ್ಕಾಗಿ ಭೂಲೋಕದಲ್ಲಿ ಶ್ವಪಚ ಕುಲದಲ್ಲಿ ಜನಿಸುವಂತೆ ಶಾಪವಿತ್ತನು. ಅದರಂತೆ ಸುಪ್ರಭೆ ಕಗ್ಗಲ್ಲುಪುರದ ಮಾದಿಗ ಕೂಚಿಮಾರನ ಪತ್ನಿಯಾಗುವಳು ಮರುಳಸಿದ್ಧ ಈ ದಂಪತಿಗಳ ಮಗನಾಗಿ ಜನ್ಮ ಪಡೆಯುವನು. ಕೂಚಿಮಾರನು ಊರಗೌಡನಾದ ಬಾಚೀಗೌಡನಿಗೆ ಸೇವಕನಾಗಿದ್ದನು. ಮರುಳಸಿದ್ಧರ ತಂದೆ ಮಚ್ಚೆಕಾಯಕದವನು (ಚಮ್ಮಾರ ಅಥವಾ ಮಾದಿಗ ಜಾತಿ) ಲಿಂಗವಂತ. ಮರುಳಸಿದ್ಧರು ಹುಟ್ಟಿದ ಕೂಡಲೇ ಅವರ ತಂದೆ-ತಾಯಿಯರು ತೀರಿಹೋಗುವರು. ಕಗ್ಗಲ್ಲುಪುರದ ಪ್ರಭು ಬಾಚನಗೌಡ ಉಜ್ಜಿನಿ ಸಮೀಪದ ಸೊಕ್ಕೆಹಳ್ಳ ತೊಲಹಳ್ಳಿ ಸಮೀಪದಲ್ಲಿದೆ. ಇಲ್ಲಿ ಮರುಳಸಿದ್ಧ ಎಳೆಯ ಹಸುಳೆಯಾಗಿದ್ದಾಗ ದೊರೆತಿರುವ ಬಗ್ಗೆ ಐತಿಹ್ಯವಿದೆ. ಹಿಂದೆ ಬಾಲ ಮರುಳಸಿದ್ಧನು ಈ ಪ್ರಾಂತ್ಯದ ಅರಣ್ಯದ ಒಂದು ಪೆಳೆಯಲ್ಲಿದ್ದನೆಂದೂ ಹಯನುಗಳು (ಹಸುಗಳು) ಪ್ರತಿನಿತ್ಯವೂ ಅವನ ಬಳಿಗೆ ಹೋಗಿ ಅವನಿಗೆ ಹಾಲು ಕರಿಯುತ್ತಿದ್ದವೆಂದೂ ಪ್ರತೀತಿ, ಒಂದು ದಿನ ಕಗ್ಗಲ್ಲುಗೌಡನ ಹಯನೊಂದು ತಪ್ಪಿಸಿಕೊಂಡಿರಲು ಗೌಡನು ಅದನ್ನು ಹುಡುಕಿಕೊಂಡು ಬಂದು ನೋಡಲಾಗಿ ಅದು ಈ ಪೆಳೆಯಲ್ಲಿ ಬಾಲ ಮರುಳಸಿದ್ಧನಿಗೆ ಹಾಲು ಕರೆಯುತ್ತಿದ್ದಿತೆಂದೂ ಗೌಡನು ತನಗೆ ಮಕ್ಕಳಿಲ್ಲದೆ ಇದ್ದುದರಿಂದ ಬಾಲ ಮರುಳಸಿದ್ಧನನ್ನು ಕಂಡು ಹಿಗ್ಗಿ ಹಸುಳೆ ಕಂದನನ್ನು ತಂದು ಪೋಷಿಸಿದನೆಂದೂ, ಯಾವ ಪೆಳೆಯಲ್ಲಿ ಗೌಡನು ಬಾಲ ಮರುಳಸಿದ್ಧರನ್ನು ಕಂಡನೊ ಆ ಪೆಳೆಯ ಸ್ಥಳವೇ ಇಂದಿನ ತೂಲಹಳ್ಳಿ ಇಲ್ಲಿ ಮರುಳಸಿದ್ಧ ದೇವಾಲಯವಿದೆ. ಆ ಹಳ್ಳದ ದಂಡೆಯ ಪೆಳೆಯಲ್ಲಿ ಸಿಕ್ಕ ಆ ಮಗು ಕಗ್ಗಲ್ಲುಪುರದ ಬಾಚನಗೌಡ ಮಲ್ಲಮ್ಮ ದಂಪತಿಗಳಿಗೆ ಮಕ್ಕಳಿಲ್ಲದೆ ಪರಿತಪಿಸುತ್ತಿರುವಾಗ ಸಾಕು ಮಗುವಾಗಿ ಸ್ವೀಕರಿಸಿ ತಮ್ಮ ಮಗನೆಂದು ಬಾವಿಸುತ್ತಾರೆ.

ಈ ಮಗುವಿಗೆ 'ಬಲವಂತ'ನೆಂದೆ ನಾಮಕರಣ ಮಾಡುತ್ತಾರೆ. ಬಾಲ್ಯದಲ್ಲಿಯೇ ಅನೇಕ ಲೀಲೆಗಳನ್ನು ಮಾಡುತ್ತಾ ಪವಾಡದಿಂದ ಸಾಧನೆಯನ್ನು ಸಾಧಿಸುತ್ತಾ, ಸಿದ್ಧಿಯನ್ನು ಪಡೆದಿದ್ದುದರಿಂದ ಗುರು ರೇವಣಸಿದ್ಧರಿಂದ ಮರುಳಸಿದ್ಧನೆಂದು ಕರಿಯಲ್ಪಟ್ಟಿದ್ದಾರೆ.

ಕಾಯಕ ಜೀವಿಯಾದ ಮರುಳಸಿದ್ಧರು ಕಗ್ಗಲ್ಲುಪುರದ ಪ್ರಭು ಬಾಚನಗೌಡನ ಮನೆಯ ಕರುಗಳನ್ನು (ತುರುಗಳು) ಕಾಯುವ ಕೆಲಸಕ್ಕೆ ನೇಮಿಸಲ್ಪಡುವರು. ಇಂದಿನ ಉಜ್ಜಯಿನಿಯ ಉತ್ತರ ದಿಕ್ಕಿನಲ್ಲಿ ಸು.೧ ಕಿ.ಮೀ ದೂರದಲ್ಲಿ 'ಕರುವಿನ ಕಲ್ಲು ಗುಡ್ಡ' ಮರುಳಸಿದ್ಧರ ಪವಾಡ ನಡಿಸಿದ ಸ್ಥಳವಾಗಿದೆ. ಕರು ಕಾಯುವಾಗ ಕರುಗಳಿಗೆ ಉರುಲು ಹಾಕುವುದು, ಕಾಲು ಮುರಿಯುವುದು, ತನ್ನ ಗೆಳೆಯರಿಗೆ ಉರುಲು ಹಾಕುವುದು ಮೊದಲಾದ ಲೀಲೆಗಳನ್ನು ಮಾಡುತ್ತಿದ್ದ ಎಂಬುದರ ಬಗ್ಗೆ ಕಥೆಗಳನ್ನು ಹೇಳುತ್ತಾರೆ. ಕರುಗಳನ್ನು ಒಂದೇಡೆ ಸೇರಿಸುತ್ತಿದ್ದನು ಆ ಸ್ಥಳವೆ ಇಂದು 'ತುರುಮಂದೆ' ಎಂಬ ಸ್ಥಳ ಕರುಗಲ್ಲು ಗುಡ್ಡದ ಸಮೀಪದಲ್ಲಿ ಇಂದಿಗೂ ಇದರ ಕುರುಹು ಇದೆ. ಗುಡ್ಡದ ಸಮೀಪದಲ್ಲಿ 'ಮೂಗಣ್ಣನ ದೇವಸ್ಥಾನ'ವಿದೆ ಮರುಳಸಿದ್ಧನು ದನಗಳನ್ನು ಕಾಯುತ್ತಿದ್ದಾಗ ಮೂಕನಂತೆ ಕುಳಿತುಕೊಳ್ಳುತ್ತಿದ್ದುದರಿಂದ ಮೂಕಸಿದ್ಧೇಶ್ವರ ದೇವಾಲಯ ಎಂಬ ಸ್ಮಾರಕದ ಕುರುಹು ಇಂದಿಗೂ ಕಾಣಬಹುದಾಗಿದೆ. ಇದೆ ಉಜ್ಜಯಿನಿಯ ಪರಿಸರದ ಸುತ್ತಾ ಅರಣ್ಯದಿಂದ ಆವರಿಸಿದ ಪ್ರದೇಶವಾಗಿತ್ತು. ಜಗಳೂರು ತಾಲೂಕು ಪರಿಸರದಲ್ಲಿನ ಪಲ್ಲಾಗಟ್ಟಿ ಈ ಊರಿನಲ್ಲಿ ಪಲ್ಯವನ್ನು ಅಟ್ಟುದರಿಂದ ಈ ಊರಿಗೆ ಈ ಹೆಸರು ಬಂದಿತೆಂದು ಐತಿಹ್ಯ. ಇದೇ ತಾಲೂಕಿನ ಉರ್ಲಕಟ್ಟೆ ಈ ಸ್ಥಳದಲ್ಲಿ ಮರುಳಸಿದ್ಧರು ಕರುಗಳಿಗೆ ಉರುಲು ಹಾಕುತ್ತಿದ್ದರು ಅವು ಸತ್ತಂತೆ ಬಿದ್ದಿರುತ್ತಿದ್ದವು. ಇಂತಹ ಪವಾಡದಿಂದ ಮೆರೆದ ಸ್ಥಳವೇ ಉರ್ಲುಕಟ್ಟೆಯಾಗಿದೆ ಎಂಬ ಐತಿಹ್ಯವಿದೆ. ಈ ಊರಿನ ಸುತ್ತಾ ರಂಗಯ್ಯನ ದುರ್ಗ ಎಂಬ ಬೃಹತ್ ಅರಣ್ಯ ಇಂದಿಗೂ ಇದೆ. ಅರಣ್ಯದ ಮಧ್ಯ ಭಾಗದಲ್ಲಿ ಕರುಗಳನ್ನು ಕಟ್ಟುವ ಗೊಂದಲುಗಳ ಕುರುಹು ಇದಕ್ಕೆ ಸಾಕ್ಷಿಯಾಗಿ ನಿಂತಿವೆ. ಮಸಣಿಕಟ್ಟೆ (ಪಲ್ಲಗಟ್ಟೆ ಸಮೀಪದಲ್ಲಿದೆ ಇದು ಇಂದು ಬೇಚಾರಕ್ ಗ್ರಾಮವಾಗಿದ್ದು) ಈ ಸ್ಥಳವು ಮರುಳಸಿದ್ಧರ ಪವಾಡ ಮೆರೆದ ಸ್ಥಳವಾಗಿದೆ. ಮರುಳಸಿದ್ಧರು ಬಾಲಗೋಪಾಲರೊಡಗೂಡಿ ಇಲ್ಲಿ ಮಸಲತ್ತು ಮಾಡುತ್ತಿದ್ದುದರಿಂದ ಮಸಣಿಕಟ್ಟೆಯಾಗಿರಬಹುದೆಂದು ಕಥೆ ವ್ಯಕ್ತವಾಗುತ್ತದೆ. ಹಾಗೂ ಮತ್ತೊಂದು ಕಥೆಯಲ್ಲಿ ನಿರೂಪಿತವಾದ ಅಂಶವೆನೆಂದರೆ ಕುಡು ಒಕ್ಕಲಿಗರಾದ ಮಾದಪ್ಪ ಮಾರಪ್ಪ ಎಂಬ ರೈತನ ಮನೆಗೆ ಹೋಗಿ ಮರುಳಸಿದ್ಧರು ಭೀಕ್ಷೆ ಕೇಳಲು ರೈತನಿಂದ ಎಳ್ಳು ಕಡ್ಡಿಯನ್ನು ಮಾತ್ರವೇ ಸ್ವೀಕರಿಸಿ ಅದನ್ನು ಮತ್ತೆ ಬಡಿದು ಮೂಗಂಡುಗ ಎಳ್ಳನ್ನು ಮಾಡಿದನೆಂದೂ ಈ ರೀತಿ ಎಳ್ಳನ್ನು ಕಗ್ಗಲ್ಲುಗೌಡನಿಗೆ ಕೊಟ್ಟು ರೈತನ ಋಣವನ್ನು ಪರಿಹರಿಸಿದನೆಂದೂ ಐತಿಹ್ಯ. ಅದೇ ಮಾದಪ್ಪ, ಮಾರಪ್ಪ

ಸಂತೋಷದಿಂದ ಸೌದೆತರಲು ಎತ್ತಿನ ಬಂಡಿಯೊಂದಿಗೆ ಅರಣ್ಯಕ್ಕೆ ಹೋಗಲು ದಿನವಿಡಿ ಶ್ರಮಿಸಿ ಸೌದೆಯನೆಲ್ಲ ಸಂಗ್ರಹಿಸಿದರು. ಆದರೆ ಒಂದು ಎತ್ತು ಕಳೆದು ಹೋಗಿತ್ತು. ಮಾದಪ್ಪ, ಮಾರಪ್ಪ ಚಿಂತೆಯಲ್ಲಿ ಕಾಲಕಳೆಯುತ್ತಿರುವಾಗ ಮರುಳಸಿದ್ಧರು ಅವರಿಗೆ ಕಾಣಿಸಿಕೊಂಡರು. ಅವರು ಒಂದು ಕಡೆ ಎತ್ತು ಮತ್ತೊಂದು ಕಡೆ ತಾನೇ ಹೆಗಲು ಕೊಟ್ಟು ಸೌದೆ ಬಂಡಿ ಎಳೆದು ಆ ಗ್ರಾಮ ತಲುಪಿದರು ಎಂಬುದು ಮತ್ತೊಂದು ಕಥೆ ವ್ಯಕ್ತವಾಗುತ್ತದೆ. ಇದು ಮರುಳಸಿದ್ಧರು ಬಾಲ್ಯದಲ್ಲಿ ಇದ್ದಾಗ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದರೆಂದು ತಿಳಿಯುತ್ತದೆ.

ಕಗ್ಗಲ್ಲುಪುರ (ಉಜ್ಜನಿ ಸಮೀಪ)ದಲ್ಲಿ

ಮಾರಿಹಬ್ಬದ ಆಚರಣೆ ಗ್ರಾಮದಲ್ಲಿ ಶಾಂತಿ ಸುಭೀಕ್ಷೆ ನೀಡಲೆಂದು ಗ್ರಾಮಕ್ಕೆ ಮಳೆಬೆಳೆ ಚೆನ್ನಾಗಿ ಆಗಲೆಂದು. ಪುಣ್ಯ ಲಭಿಸಲೆಂದು ಗ್ರಾಮದ ಹಿರಿಯ ಮುಖಂಡರು. ಪುರೋಹಿತರ ನೇತೃತ್ವದಲ್ಲಿ ಗ್ರಾಮ ದೇವತೆಯ ಹೆಸರಿನಲ್ಲಿ ಜಾತ್ರೆ ನೇರವೇರಿಸುತ್ತಾರೆ. ಮೇಲು ವರ್ಗದವರು ಕೆಳವರ್ಗದವರನ್ನು ಹದ್ದು ಬಸ್ತಿನಲ್ಲಿಡಲು ಮುಗ್ಧ ಜೀವಿಗಳಾದ ಹೊಲೆಯಮಾದಿಗರನ್ನು ಇಂತಹ ಜಾತ್ರೆ ಗಳಲ್ಲಿ ಪ್ರಮುಖವಾಗಿ ಬಳಸಿ ಕೊಳ್ಳುತ್ತಾರೆ. ಈ ವರ್ಗದ ಜನರು ಮೂಢನಂಬಿಕೆ ಅಜ್ಞಾನ ಅಂಧಾಕಾರದಲ್ಲಿ ಮುಳುಗಿದವರು. ಇವರು ಪ್ರಾಣಿ ಬಲಿಕೂಡಲು ಹರಕೆಹೋತ್ತವರು. ಮಾಂಸಹಾರಿಗಳು ಮದ್ಯವ್ಯಸನಿಗಳು ಜಾತ್ರೆಯಲ್ಲಿ ಇವರದೆ ಪ್ರಮುಖ ಪಾತ್ರ. ಮರುಳಸಿದ್ಧ ಪ್ರಭು ಬಾಚನಗೌಡರ ಸಾಕುಮಗ ಆದರೆ ಮೂಲತ ದಲಿತ ಸಮುದಾಯದ ಅಂತ್ಯಜನ ಮನೆಯಲ್ಲಿ ಹುಟ್ಟಿದವ ಪ್ರಜ್ಞಾವಂತ ತನ್ನ ಸಮುದಾಯದಲ್ಲಿ ನಡೆಯುತ್ತಿದ್ದ ಇಂತಹ ಅನಾಚಾರದ ವಿರುದ್ದ ಪ್ರತಿಭಟಿಸುತ್ತಾನೆ. ಆದರೆ ಜಾತ್ರೆನಿಲ್ಲದು. ಇಂತಹ ಅಜ್ಞಾನವಂತ ಜನ ಬದಲಾಗಬೇಕೆಂದು ಬಯಸಿ ತನಗೆ ಈ ಊರೇ ಬೇಡವೆಂದು ಹೊರನಡೆಯುತ್ತಾರೆ. ಅಂದಿನಿಂದ ಮರುಳಸಿದ್ಧರಿಗೆ ಊರು ಬೇಡವಾಗಿ ಅಲ್ಲಿಂದ ಹೊರಟು ದೇಶಾಟನೆ ಮಾಡುತ್ತ ಹೊರನೆಡೆದ ತನ್ನ ಸ್ವಂತ ಸ್ಥಳ ಬೇಡವಾದ ಮೇಲೆ ತಾನೊಂದು ನೆಲೆ ಹುಡುಕುತ್ತಾ ಬಂದರು.

ಹೀಗೆ ಬಂದ ಮರುಳಸಿದ್ಧ ಹೆಮ್ಮನಬೇತೂರು ಇದು ದಾವಣಗೆರೆ ತಾಲೂಕಿನಲ್ಲಿದೆ. ಕಗ್ಗಲ್ಲುಪುರ ಬಿಟ್ಟು ಬಂದ ಮರುಳಸಿದ್ಧ ಹೆಮ್ಮನಬೇತೂರು ಪ್ರವೇಶಿಸುತ್ತಾನೆ. ಹೆಮ್ಮನಬೇತೂರು ೧೨ನೆಯ ಶತಮಾನದಲ್ಲಿ ಇದು ಒಂದು ಅಗ್ರಹಾರವಾಗಿತ್ತು. ಇಲ್ಲಿ ಮೇಲು ವರ್ಗವಾದ ಪುರೋಹಿತ ಶಾಯಿಗಳಾದ ಬ್ರಾಹ್ಮಣರ ಅವಾಸಸ್ಥಾನವಾಗಿತ್ತು. ಈ ನಗರದಲ್ಲಿ ಒಮ್ಮೆ ಬ್ರಾಹ್ಮಣರು ಯಜ್ಞಯಾಗಾ ಮಾಡುತ್ತಿರಲು ಮರುಳಸಿದ್ಧರು ಈ ಯಜ್ಞಯಾಗದಿ ಆಚರಣೆಯಂತಹ ಪದ್ಧತಿಯನ್ನು ವಿರೋಧಿಸುತ್ತಾರೆ. ಆಗ ಬ್ರಾಹ್ಮಣರು ಕೋಪಗೊಂಡು ಮರುಳಸಿದ್ಧರನ್ನು ಬಂದಿಸಿ ಹಗ್ಗದಿಂದ ಬಿಗಿದು

ಕಟ್ಟಿ ಅಣಜಿಕೆರೆಗೆ ಹಾಕಿ ಬಂದರು. ಜಲಕ್ರೀಡೆ ಬಲ್ಲವನಾಗಿ ಮರುಳಸಿದ್ಧ ತೇಲಿ ಬಂದ ದಡ ಸೇರಿದ ಇದರ ಸ್ಮಾರಕವಾಗಿ ಅಣಜಿ ಕೆರೆಯ ಬಳಿ ಗೊಂಗಡಿ ಸಿದ್ಧಪ್ಪ ಎಂಬ ದೇವಾಲಯವಿದೆ. ನೀರಿನಿಂದ ಎದ್ದು ಬಂದ ಶೀತ ದಿಂದ ನಡುಗುತ್ತಿದ್ದಾಗ ಆ ಹಳ್ಳಿಯ ಜನ ಗೊಂಗಡಿ ಕೊಟ್ಟಿದ್ದರಿಂದ ಗೊಂಗಡಿ ಹೊದ್ದು ಕುಳಿತ ಸ್ಮಾರಕವಾಗಿ ಇಂದಿಗೂ ಈ ಕ್ವರೆಯ ಬಳಿ ಗೊಂಗಡಿಸಿದ್ಧಪ್ಪ ದೇವಾಲಯವಿದೆ. ಈ ಅಣಜಿ ಕೆರೆಯ ದಂಡೆಯಲ್ಲಿ ಆ ಗ್ರಾಮದ ಜನರ ರಕ್ಷಣೆಯು ದೊರೆಯುತ್ತದೆ. ಈ ಸನ್ನಿವೇಶದಿಂದ ಪಾರಾಗಿ ಬೇತೂರು ಯಜ್ಞಶಾಲೆಯ ಕಡೆ ಬರುತ್ತಾರೆ.

ಮರುಳಸಿದ್ಧ ಪುನಃ ಯಜ್ಞಾ ಶಾಲೆಯ ಕಡೆ ಹೆಮ್ಮನಬೇತೂರು ಬಳಿ ಕುರುಡಿ ಎಂಬ ಗ್ರಾಮವಿದೆ. ಅಲ್ಲಿ ಕುಲಹದಿನೆಂಟು ಜಾತಿಯವರನ್ನೆಲ್ಲಾ ಸಂಘಟಿಸಿ ಅವರ ಅನ್ನ ಆಹಾರಾಧಿಯನ್ನೆಲ್ಲ ಒಂದೇ ಬಂಡೆಯ ಮೇಲೆ ಹಾಕಿ ಕಲಸಿ ಕುಲ ಹದಿನೆಂಟು ಜಾತಿಯವರನ್ನು ಒಂದೆಡೆ ಕೂಡಿಸಿ ಉಂಡುದ್ದರಿಂದ ಈ ಊರಿಗೆ 'ಕೂಡುಂಡಿ 'ಎಂಬ ಹೆಸರಾಯಿತೆಂದೂ ಕಾಲ ಕ್ರಮದಲ್ಲಿ ಕೂಡುಂಡಿಯು ಕುರುಡಿಯಾಯಿತೆಂದೂ ಐತಹ್ಯ.

ಕುಲ ಹದಿನೆಂಟು ಜಾತಿಯವರೆಲ್ಲಾ ಸೇರಿ ಮರುಳಸಿದ್ಧರ ನೇತೃತ್ವದಲ್ಲಿ ಪುನಃ ಬಾಹ್ಮಣರ ಯಾಗಾ ಶಾಲೆಯ ಮುಂದೆ ಪ್ರತಿಭಟನೆ ನಡೆಸುತ್ತಾರೆ. ಬಾಹ್ಮಣರು ಕುಪಿತರಾಗಿ ಪುನಃ ಮರುಳಸಿದ್ಧರನ್ನು ಬಂಧಿಸಿ ಬೇತೂರು ಸಮೀಪದ ಕುರುಡಿ ಎಂಬ ಗ್ರಾಮದಲ್ಲಿ ಒಂದು ಹಗೇವುನಲ್ಲಿ ಹಾಕಿ ಸುಣ್ಣ ಸುರಿದು ನೀರನ್ನು ಹೊಯಿದರೆಂದೂ, ಆಗ ಮರುಳಸಿದ್ಧರು ಪವಾಡವನ್ನು ಮೆರೆಸುಲು ಆ ಹಗೇವುನಲ್ಲಿಯೇ ಲಿಂಗ ಉದ್ಭವಿಸಿತೆಂದೂ ಐತಿಹ್ಯವಿದೆ. ಈಗಲೂ ಹಗೇವುನಲ್ಲಿಯೇ ಲಿಂಗವಿರುವ ದೇವಾಲಯವಿದೆ. ಸುಣ್ಣದ ನೀರಿನಲ್ಲಿ ಬೆಂದ ಮರುಳಸಿದ್ಧರನ್ನು ದಲಿತರೆ ರಕ್ಷಿಸಿದರೆಂದು ಹೇಳುತ್ತಾರೆ. ಸುಟ್ಟದೇಹ ತಣ್ಣಗಾಗಲೆಂದು ನೆತ್ತಿಗೆ ಎಣ್ಣೆ ಸುರಿದರು. (ಇದರ ಪ್ರತೀಕವಾಗಿ ಉಜ್ಜುನಿಯ ಮರುಳಸಿದ್ಧೇಶ್ವರ ಶಿಖರಕ್ಕೆ ತೈಲಾಭೀಷೆಕ ನೆಡೆಸುವ ಆಚರಣೆ ಇಂದಿಗೂ ರೂಢಿಯಲ್ಲಿದೆ.) ಪುನಃ ಮರುಳಸಿದ್ಧರು ಬಾಹ್ಮಣರ ಯಾಗ ಶಾಲೆಗೆ ಬಂದು ಪ್ರತಿಭಟಿಸುವರು.

ಮರುಳಸಿದ್ಧರ ಪ್ರತಿಭಟನೆ ಹೋರಾಟ ಮುಂದುವರೆಯಿತು. ಆ ಬ್ರಾಹ್ಮಣರೆಲ್ಲಾ ಸೇರಿ ನೊಣಬ ಚಕ್ರೇಶ್ವರನಲ್ಲಿ ದೂರುವರು. (ಆನೆಗೊಂದಿಯ ರಾಜ ಅಥವಾ ಬಿಜ್ಜಳ ರಾಜನೆಂದು ಕೆಲವರು ಹೇಳುತ್ತಾರೆ.) ಉಚ್ಚಂಗಿಯ (ನೊಳಂಬ, ನೊಣಬ) ಪಾಂಡ್ಯರಸನೆಂದು ಹೇಳಲಾಗುತ್ತದೆ. ಪಾಂಡ್ಯ ಅರಸರು ಮರುಳಸಿದ್ಧರಿಗೆ ಶಿಕ್ಷೆ ವಿಧಿಸುವ ಸಲುವಾಗಿ ಆನೆಯ ಕಾಲಲ್ಲಿ ತುಳಿಸಲು ಆಜ್ಞೆ ಮಾಡುತ್ತಾರೆ. ಏಕೆಂದರೆ ಈ ಪಾಂಡ್ಯ ಅರಸರು ಸಹ ವೈಷ್ಣವರಾಗಿದ್ದರಿಂದ ಬಾಹ್ಮಣರಿಗೆ ಬೆಂಬಲಗರಾಗಿದ್ದರಿಂದ ಮರುಳಸಿದ್ಧರಿಗೆ ಶಿಕ್ಷೆ ವಿಧಿಸಲಾಯಿತು. ಮರುಳಸಿದ್ಧರ ಮೇಲೆ

ಆನೆಬಿಡುವುದು. ಆ ಆನೆ ಮರುಳಸಿದ್ಧರನ್ನೆರಿ ಬೆನ್ನ ಮೇಲೇರಿಸಿಕೊಂಡು ಮರೆಯಾಗುತ್ತದೆ. ಅವರನ್ನು ಬಂಧಿಸಲು ಸೇನೆಯ ದಂಡು ಹಿಂಬಾಲಿಸುತ್ತದೆ. ಮರುಳಸಿದ್ಧರುನ್ನು ಮುಚ್ಚನೂರು (ಇದು ಜಗಳೂರು ತಾಲೂಕಿನಲ್ಲಿದೆ.) ಎಂಬಲ್ಲಿ ಸೇನೆಯ ದಂಡು ಮುತ್ತಿಗೆ ಹಾಕುತ್ತದೆ. ಮರುಳಸಿದ್ಧರು ಇಲ್ಲಿ ಮರೆಯಾಗಿದ್ದರಿಂದ ಈ ಸ್ಥಳ ಮುಚ್ಚಿಕೊಂಡ ಊರು ಮುಚ್ಚನೂರು, ಮುಚ್ಚಿದ ಊರು, ಮುಚ್ಚನೂರು ಎಂಬ ಸ್ಥಳನಾಮವಿದೆ. ಇಲ್ಲಿ ಮರುಳಸಿದ್ಧರ ದೇವಾಲಯವಿದೆ. ಈ ಹಿನ್ನಲೆಯಲ್ಲಿ ಈ ಐತಿಹ್ಯ ಕತೆ ಇದೆ.

ಸೇನೆಯ ದಂಡಿನಿಂದ ಮರೆಯಾದ ಮರುಳಸಿದ್ಧರು ಮುಂದೆ ಉಳುಪನಕಟ್ಟೆ ಎಂಬ ಗ್ರಾಮ ಪ್ರವೇಶಿಸುತ್ತಾರೆ. (ಈ ಗ್ರಾಮ ದಾವಣಗೆರೆ ತಾಲೂಕಿನಲ್ಲಿದೆ.) ಈ ಊರಿನ ಮುಂದೆ ಬಂದು ಆಲದ ಮರ, ಅದರ ಬುಡದಲ್ಲಿ ಒಂದು ಬಂಡೆಯಿದೆ. ಬಂಡೆಯ ಮೇಲಿರುವ ಎರಡು ಹೆಜ್ಜೆಯ ಗುರುತುಗಳು ಮರುಳಸಿದ್ಧರದೆಂದು ಐತಿಹ್ಯ. ಈ ಬಂಡೆಗೆ ಒಂದು ಕೂರಿಗೆ ಮಾರಿನ ದೂರದಲ್ಲಿ ಒಂದು ಬಾವಿ ಇದೆ. ಈ ಬಾವಿಯಲ್ಲಿ ಮರುಳಸಿದ್ಧರಿಗೆ ಬಾಯಾರಿಕೆಯಾಗಿತ್ತು ಆಗ ತನ್ನ ಹೆಬ್ಬೆಟ್ಟಿನಿಂದ ನೆಲದಲ್ಲಿ ವರ್ತಿಯನ್ನು ತೆಗೆದು ನೀರನ್ನು ಕುಡಿದರು. ಒಂದು ಆಲದ ಮರದ ಕೆಳಗೆ ಈ ಬಂಡೆಯ ಮೇಲೆ ತನ್ನ ಕಾಲಿನ ಹುಳವನ್ನು ಸೋಸುತ್ತಾ ಕುಳಿತಿದ್ದರೆಂದು, ಆಗ ಅಲ್ಲಿಗೆ ಆನೆಯನ್ನು ಕಳೆದು ಕೊಂಡಿದ್ದ ರಾಜನ ಸೇನೆ ಬರಲು ಒಂದು ಬಿಳಿಯಾನೆಯನ್ನು ಕಂಡೆಯಾ ಎಂದು ಮರುಳಸಿದ್ಧರನ್ನು ಕೇಳಲು ಅವರು "ಕಂಡ ಆಗು ಆಯ್ತು. ಕಾಣದ ಆಗು ಆಯ್ತು" ಎಂದು ನುಡಿಯಲು ರಾಜನ ಕಡೆಯವರು ಮರುಳಸಿದ್ಧರನ್ನು ಹುಚ್ಚನೆಂದು ಬಾವಿಸಿ ಅವರನ್ನು ಬಿಟ್ಟು ಮುಂದಕ್ಕೆ ಹೋದರೆಂದೂ ಐತಿಹ್ಯವಿದೆ. ಮರುಳಸಿದ್ಧರು ಹುಳುಸೋಸುತ್ತಾ ಉಳಿದು ಕೊಂಡ ಸ್ಥಳವಾಗಿದ್ದರಿಂದ ಈ ಗ್ರಾಮಕ್ಕೆ ಹುಳುಪನಕಟ್ಟೆ, ಉಳುಪನಕಟ್ಟೆ ಎಂಬ ಸ್ಥಳನಾಮದಿಂದ ಕರೆಯುವ ವಾಡಿಕೆ ಇದೆ.

ಮರುಳಸಿದ್ಧರು ರಾಜನ ಸೇನೆ ಮುಂದೆ ಹೋದ ಮೇಲೆ ಸಿದ್ಧನೂರು, ಆನಗೋಡು,(ದಾವಣಗೆರೆ ತಾಲೂಕಿನಲ್ಲಿವೆ ಆನಗೋಡು ಇಂದು ಒಂದು ಹೋಬಳಿ ಕೇಂದ್ರವಾಗಿದೆ) ಇಲ್ಲಿ ಮರುಳಸಿದ್ಧರ ಸ್ಮಾರಕಗಳಿವೆ. ಮರುಳಸಿದ್ಧರು ರಾಜನ ಸೇನೆಗೆ ಮರೆಯಾಗಿ ಆನೆಯ ಬೆನ್ನ ಮೇಲೆರಿ ಸಿದ್ಧನೂರು ಪ್ರವೇಶಿಸುತ್ತಾನೆ. ರಾಜನ ಸೇನೆ ಅಲ್ಲಿಗೆ ಬಂದಾಗ ಮರುಳಸಿದ್ಧರು ಆ ಆನೆಯನ್ನು ಈ ಬಂಡೆಯೊಳಗೆ ತುಳಿದರೆಂದು ಹಾಗೆ ತುಳಿದ ಭಾಗವೇ ಈ ಬಂಡೆಯ ದೊಡ್ಡ ದೊಗರಾಗಿ ದೋಣೆಯಾಯಿತೆಂದೂ ಐತಿಹ್ಯ. ಇಲ್ಲಿ ಸಿದ್ಧೇಶ್ವರ ದೇವಸ್ಥಾನ ವಿದೆ. ಈ ದೇವಾಲಯದ ದಕ್ಷಿಣದಲ್ಲಿ ಸು. ೧೦೦ ಅಡಿಗಳ ದೂರದಲ್ಲಿ ಹನುಮಂತನ ದೇವಾಲಯವಿದೆ. ಆ ಮೂರ್ತಿಯ

ಮೂಖವು ಪಶ್ಚಿಮಕ್ಕೆ ಇದೆ. ರಾಜನ ದಂಡು ಬಂದಿತೇ ಎಂಬುದನ್ನು ನೋಡೆಂದು ಮರುಳಸಿದ್ಧನು ಹನುಮಂತನಿಗೆ ಅಪ್ಪಣೆ ಮಾಡಿದ ಕಾರಣ ಹನುಮಂತ ಹೀಗೆ ಪಶ್ಚಿಮಕ್ಕೆ ತನ್ನ ಮುಖ ತಿರುಗಿಸಿದನೆಂದು ಐತಿಹ್ಯ ಕಥೆ ಇದೆ.

ಮರುಳಸಿದ್ಧರು ಇಲ್ಲಿಂದ ಮುಂದೆ ಆನಗೋಡು ಪುರಕ್ಕೆ ಮರುಳಸಿದ್ಧರು ಬಂದಾಗ ಪಾಂಡ್ಯ ರಾಜನ ಸೇನೆ ಬೆನ್ನಟ್ಟಿ ಬರುವುದು. ಮರುಳಸಿದ್ಧರು ಈ ಊರಿಗೆ ಬಂದು ಈ ಊರಿನ ನಡುಗೆರೆಯಲ್ಲಿ ನೀರಿನ ಮೇಲೆ ಕಂಬಳಿಯನ್ನು ಹಾಸಿ, ಅದರ ಮೇಲೆ ಕುಳಿತನೆಂದು, ಅದನ್ನು ಕಂಡು ದನಕಾಯುವ ಹುಡುಗರು 'ಮರುಳ ಮುಳುಗಿದನೆಂದು' ಬೊಬ್ಬೆಯಿಟ್ಟು ಊರವರನ್ನು ಕರೆಯಲು, ಕೆರೆಯ ಏರಿಯು ಏಳು ಭಾಗಗಳಾಗಿ ಒಡೆಯಿತೆಂದೂ, ಮರುಳಸಿದ್ಧನು ಅಲ್ಲಿಯೇ ಲಿಂಗವಾಗಿ ನೆಲೆಸಿದನೆಂದೂ ಇದರ ಕುರುಹುವಾಗಿ ಈ ಭಾಗದಲ್ಲಿ ಮರುಳಸಿದ್ಧೇಶ್ವರ ದೇವಾಲಯವಿದೆ. ಮರುಳಸಿದ್ಧನು ಆನೆಯ ಕೋಡುಗಳನ್ನು ಕಿತ್ತು ಅಂಬರಕ್ಕೆ ಎಸೆದುದರಿಂದ ಈ ಊರಿಗೆ ಈ ಹೆಸರು ಬಂದಿತೆಂದೂ ಐತಿಹ್ಯವಿದೆ.

ಮರುಳಸಿದ್ಧರು ದಾರಿಯಲ್ಲಿ ಸಿಕ್ಕ ಮಂಟೆಯದವರಿಗೆ ಉಪದೇಶಿಸಿ ಅವರನ್ನು ಕೂಡಿಕೊಂಡು ಮುಂದೆ ಹೊರಟು ಬನ್ನಿ ಕೋಡಿನಲ್ಲಿ ಕೆಲಕಾಲ ತಂಗಿರುವುದಾಗಿ ಹೇಳುತ್ತಾರೆ. ಈ ಬಗ್ಗೆ ಯಾವುದೇ ಐತಿಹ್ಯ ಅಥವಾ ಕುರುಹುಗಳ ಇರುವುದು ಕಂಡು ಬರುವುದಿಲ್ಲ. ಸ್ಥಳೀಯ ಮಾಹಿತಿ ಲಭ್ಯವಾಗುವುದಿಲ್ಲ. ಇಲ್ಲಿಂದ ಮುಂದೆ ಮರುಳಸಿದ್ಧರು ಅಸಗೋಡಿಗೆ ಹೋಗಿ ಸಲೆನಿಂದು ವಸುಮತಿಗೆ ಹೆಸರು ಪಡೆವನು. ಜಗಳೂರು ತಾಲೂಕಿನಲ್ಲಿರುವ ಅಸಗೋಡು ಈಗ ಒಂದು ಹಳ್ಳಿಯಾಗಿದೆ. ಆದರೆ ಮರುಳಸಿದ್ಧನ ಕಾಲದಲ್ಲಿ ವಿದ್ಯೆಯ ಮತ್ತು ಧರ್ಮದ ಕೇಂದ್ರವಾಗಿ ಸುಪ್ರಸಿದ್ಧ ಪುರವಾಗಿತ್ತೆಂಬುದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಅಸಗೋಡಿನ ಸ್ವಯಂಭು ಕಲಿದೇವ ಎಂಬ ಹೆಸರಿಗೆ ಬದಲಾಗಿ ಶುಂಭುಸಿದ್ಧೇಶ್ವರ ಎಂಬ ಹೆಸರು ಬಂದಿದೆ. ಘನಪಂಡಿತರಾದ ಮರುಳಸಿದ್ಧರು ನೈಷ್ಠಕ ಬ್ರಹ್ಮಚಾರಿಗಳ ಮಠಕ್ಕೆ ಬಹುಶಃ ಸ್ಥಾನಪತಿಯಾಗಿದ್ದು ಮಠವನ್ನು ಸುವ್ಯವಸ್ಥಿತ ಮಾಡಿರಬೇಕೆಂದು ಭಾಸವಾಗುತ್ತದೆ. ಶೈವರಾದ ಕಾಳಾಮುಖರು ಮರುಳಸಿದ್ಧರ ಅನುಯಾಯಿಗಳಾದರು. ಪ್ರಸಿದ್ಧವಾದ ಈ ಮಠದಿಂದ ಅಸಗೋಡು ಪುರದೊಳು ಸಲೆನಿಂದ ಮರುಳಸಿದ್ಧೇಶನು ವಸುಮತಿಗೆ ಹೆಸರು ಪಡೆದರು. ಹೆಸರು ಪಡೆದ ಮರುಳಸಿದ್ಧರಿಂದ ಅಸಗೋಡು ಪುರುವು ವಸುಮತಿಯಲ್ಲಿ ಕೀರ್ತಿವೆಸೆದುದು. ಹೀಗೆ ಕೀರ್ತಿವೆತ್ತ ಮರುಳಸಿದ್ಧೇಶ್ವರರು ದೇಶ ಸಂಚಾರಕ್ಕೆ ಹೊರಟು ಮಾರ್ಗದಲ್ಲಿ ದ್ವಾರಸಮುದ್ರದತ್ತ ಪ್ರಯಾಣ ಮಾರ್ಗದ ಮಧ್ಯೆ ಸಕ್ಕರೆ ಪಟ್ಟಣದಲ್ಲಿರುವ ಕಲ್ಮರಡಿಯಲ್ಲಿ ಕೆಲವು ದಿನ ವಿಶ್ರಾಂತಿ ಪಡೆಯುತ್ತಾರೆ. ಈಗಲೂ ಅದನ್ನು ಕಲ್ಮರಡಿ

ಮರುಳಸಿದ್ಧೇಶ್ವರನೆಂದು ಕರೆಯುತ್ತಾರೆ.

ಹೀಗೆಯೇ ಸಂಚಾರ ಮಾಡುತ್ತಾ ದ್ವಾರಸಮುದ್ರಕ್ಕೆ ಪ್ರವೇಶ ಮಾಡುತ್ತಾರೆ. ಅಲ್ಲಿ ಗೋವಳರಲ್ಲಿ ಒಬ್ಬರನ್ನು ಮರುಳುಮಾಡಿ ಕರೆದೊಯ್ಯುತ್ತಿರಲು ದೊರೆತನಕ ದೂರು ಹೋಗುವುದು. ದ್ವಾರಸಮುದ್ರದಲ್ಲಿ ಬಲ್ಲಾಳರಾಯನಿಗೂ ಪ್ರಜೆಗಳಿಗೂ ವಿವಾದವಿರುತ್ತದೆ. ಆಗ ಸಾಮಾನ್ಯರ ಹಕ್ಕನ್ನು ಮರುಳಸಿದ್ಧರು ಎತ್ತಿಹಿಡಿಯುತ್ತಾರೆ. ಕುಪಿತನಾದ ದೊರೆಯು ಕಬ್ಬಿಣದ ಬಳೆಗಳನ್ನು ಕಾಯಿಸಿ ಆ ಜನರಲ್ಲೊಬ್ಬನ ಕೈಗೆ ಹಾಕಿಸುತ್ತಾನೆ. ತಕ್ಷಣವೇ ಮಳೆ ಬಂದು ಬಳೆಗಳು ತಣ್ಣಗಾಗುತ್ತವೆ. ಈತನ ಬಳೆಗೈ ಶರಣ ಎಂಬ ಹೆಸರಿನಿಂದ ಮರುಳಸಿದ್ಧರ ಶಿಷ್ಯನಾಗುತ್ತಾನೆ. ದ್ವಾರಸಮುದ್ರದಲ್ಲಿ ಮರುಳಸಿದ್ಧರ ಯಾವುದೇ ಕುರುಹುಗಳಿಲ್ಲ.

ಮರುಳಸಿದ್ಧರು ತಮ್ಮ ಸಂಚಾರವನ್ನು ಮುಂದುವರಿಸಿ ಕುಂಬಳೂರೆಂಬ ಗ್ರಾಮಕ್ಕೆ ಬರುತ್ತಾರೆ.ಕುಂಬಳೂರು ದಾವಣಗೆರೆ ಜಿಲ್ಲೆಯಲ್ಲಿ ಎರಡು ಇವೆ. ಹೊನ್ನಾಳಿ ತಾಲೂಕ್ ಮಲೆಕುಂಬಳೂರು ಹಾಗೂ ಹರಿಹರ ತಾಲೂಕ್ ಕುಂಬಳೂರು ಇದೆ. ಇಲ್ಲಿ ಮರುಳಸಿದ್ಧರು ಭೈರವಲಿಂಗಮ್ಮ ಲಿಂಗದೀಕ್ಷೆ ನೀಡಿದ್ದಾರೆಂಬ ಐತಿಹ್ಯ. ಆದರೆ ಈ ಎರಡು ಸ್ಥಳಗಳಲ್ಲಿ ಯಾವುದೇ ರೀತಿಯ ಮರುಳಸಿದ್ಧರ ಬಗ್ಗೆಯಾಗಲಿ ಭೈರವ ಲಿಂಗಮ್ಮರಿಗೆ ಸಂಬಂಧಿಸಿದ ಕತೆಗಳು ಐತಿಹಾಸಿಕ ಐತಿಹ್ಯಗಳ ಕುರುಹುಗಳ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಕುಂಭಿಯ ಪುರದೊಳ್ ಕುಂಭದ ಜಾತ್ರೆ ನಡೆಯುತ್ತಿರುವ ಪುರದಲ್ಲಿ ಎಂದು ಮರುಳಸಿದ್ಧ ಕಾವ್ಯದಲ್ಲಿ ಹೇಳಿರುವಂತೆ ಕುಂಭದ ಲಿಂಗೇಶ್ವರ ದೇವಾಲಯವು ದಾವಣಗೆರೆ ತಾಲೂಕು ತೋಳಹುಣಸೆ ಗ್ರಾಮದಲ್ಲಿದೆ. ಭೈರವ ಲಿಂಗಮ್ಮ ದಂಪತಿಗಳಲ್ಲಿ ಸತಿ ಲಿಂಗಮ್ಮ ಸದಾಚಾರಿ ಪತಿ ಭೈರವ ವಾಮಚಾರಿ ಅಂದರೆ, ಭೈರವ ಮಧ್ಯಮಾಂಸ ದುಷ್ಟ ಮಾರ್ಗ ದುರ್ಮಾರ್ಗಿ. ಅಂತಹ ವಾಮಾಚಾರಿ ಮಾರ್ಗಿಯಾದ ಭೈರವನಿಗೆ ಲಿಂಗದೀಕ್ಷೆ ನೀಡಿ ಸದಾಚಾರಿಯಾಗಿ ಪರಿವರ್ತನೆಗೊಳಿಸಿದ ಸ್ಮಾರಕವಾಗಿ ಈ ಗ್ರಾಮದಲ್ಲಿ ಐತಿಹ್ಯ ಕುರುಹುಗಳಿವೆ. ಕುಂಭಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿ ಭೈರವಸಿದ್ಧ ಎಂದು ಹೇಳಲ್ಪಡುವ ಒಂದು ಲಿಂಗದ ವಿಗ್ರಹವಿದೆ. ಅದನ್ನು ಸದಾ ಮಣ್ಣಿನಲ್ಲಿ ಮುಚ್ಚಿರುತ್ತದೆ. ವರ್ಷದಲ್ಲಿ ಎರಡು ಬಾರಿ ಮುಚ್ಚಿದ ಮಣ್ಣು ತೆಗೆಯುತ್ತಾರೆ. ಈ ಭೈರವಮೂರ್ತಿಗೆ ಮಾಂಸದ ಭಕ್ಷಣೆ ನೈವೇದ್ಯೆ ಅರ್ಪಿಸುವ ಸಂಪ್ರದಾಯ ಇಂದಿಗೂ ಆಚರಣೆಯಲ್ಲಿದೆ. ಈಗಲೂ ಈ ದೇವರಿಗೆ ಕುರಿಬಲಿ ಕೊಡುತ್ತಾರೆ. (ಹೆಣ್ಣು ದೇವತೆಗೆ ಬಲಿ ಕೊಡುವ ಪದ್ಧತಿಯನ್ನು ಕಾಣಬಹುದು.) ಆದರೆ ಇಲ್ಲಿ ಗಂಡು ದೇವರಿಗೆ ಬಲಿ ಕೊಡುವ ಪದ್ಧತಿ ಬಹು ವಿಶಿಷ್ಟ ಆಚರಣೆಯಾಗಿದೆ. ಸದಾಚಾರಿಯಾದ ಲಿಂಗಮ್ಮ ದೇವಿಯ ಸಂಕೇತವಾದ ಲಿಂಗೇಶ್ವರ ದೇವಾಲಯ ಈ ಗ್ರಾಮದಲ್ಲಿ ಕುಂಭಲಿಂಗೇಶ್ವರ ದೇವಾಲಯದಿಂದ ಒಂದು

ಫರ್ಲಾಂಗದಷ್ಟು ದೂರದಲ್ಲಿ ಇದೆ. ಈ ದೇವಾಲಯದಲ್ಲಿ ದೇವಿಯ ವಿಗ್ರಹ ಮತ್ತು ಈಶ್ವರ ಲಿಂಗವಿದೆ. ಇದನ್ನು ಲಿಂಗೇಶ್ವರ ಎಂದು ಕರೆಯುತ್ತಾರೆ. ಇಲ್ಲಿ ಕುಂಭದ ಜಾತ್ರೆ ಪಾಲ್ಗುಣ ಮಾಸದಲ್ಲಿ ನೆರವೇರುತ್ತದೆ. ಹೀಗಾಗಿ ಮರುಳಸಿದ್ಧ ಕಾವ್ಯದಲ್ಲಿ ಹೇಳಿರುವ ಕುಂಭಿಯಪುರದೊಳ್ ಕುಂಭದ ಜಾತ್ರೆ ನೆರವೇರುವ ಪುರದೊಳಗೆ ಎನ್ನುವ ಉಕ್ತಿಯಂತೆ ಮರುಳಸಿದ್ಧರು ವಾಮಾಚಾರಿಯಾದ ಭೈರವನನ್ನು ಸದಾಚಾರಿಯಾಗಿ ಪರಿವರ್ತಿಸಿರುವುದಕ್ಕೆ ಈ ತೋಳಹುಣಸೆ ಗ್ರಾಮದ ಕುಂಭ ಲಿಂಗೇಶ್ವರ ಈ ಐತಿಹ್ಯ ಮಹತ್ವ ಪಡೆದಿದೆ.

ಮರುಳಸಿದ್ಧರು ಮುಂದೆ ಚಿನ್ಮೂಲಾದ್ರಿಗೆ ಬರುತ್ತಾರೆ. ಚಿನ್ಮಯಗಿರಿ ಎಂಬುದು ಈಗಿನ ಚಿತ್ರದುರ್ಗದ ಬಳಿ ಇರುವ ಬೆಟ್ಟವೇ ಎಂಬುದು ದಾವಣಗೆರೆ ೧೬೪ನೆಯ ಶಾಸನದಿಂದ ತಿಳಿದುಬರುತ್ತದೆ. ಆ ಬೆಟ್ಟದ ಮೇಲಿರುವ ಸಂಪಿಗೆಸಿದ್ಧೇಶ್ವರ ಈ ದೇವಾಲಯದಲ್ಲಿರುವ ಗುಹೆಗಳಲ್ಲಿ ಮೂರ್ತಿಯನ್ನು ಪೂಜೆ ಮಾಡುತ್ತಿದ್ದರೆಂದೂ, ಆದ್ದರಿಂದ ಈ ದೇವರಿಗೆ ಸಿದ್ಧನಾಥ ಎಂಬ ಹೆಸರು ರೂಢಿಯಾಗಿರುವುದಾಗಿಯೂ ಪ್ರತೀತಿ ಇದೆ. ಪಂಚಾಚಾರ್ಯ ಗುರುಗಳಾದ ಶ್ರೀ ರೇವಣಸಿದ್ಧರು ಚಿನ್ಮೂಲಗಿರಿಯಲ್ಲಿದ್ದಾಗ ಶ್ರೀ ಮರುಳಸಿದ್ಧೇಶ್ವರರು ಅವರ ಬಳಿಗೆ ಬಂದು ಉಪದೇಶವನ್ನು ಪಡೆದರು. ಶ್ರೀ ರೇವಣಸಿದ್ಧರು ಬಹುಶಃ ಕೆಲವು ಕಾಲ ಈ ಆಶ್ರಮದಲ್ಲಿ ರಸಾ ಸಿದ್ಧರೊಂದಿಗೆ ನೆಲೆಸಿದ್ದಿರಬಹುದು. ಈ ದೇವಾಲಯದ ಅಂಗಳದಲ್ಲಿ ಸುವಾಸನೆಯ ಕೆಂಡಸಂಪಿಗೆಯ ಗಿಡಗಳು ಬೆಳೆದಿದ್ದುದರಿಂದ ಪಾಳೆಯಗಾರರ ಕಾಲದಲ್ಲಿ ಈ ಗುಡಿಗೆ ಸಂಪಿಗೆಸಿದ್ಧೇಶ್ವರ ದೇವಾಲಯವೆಂಬ ಹೆಸರಿನಿಂದ ಕರೆಯುವುದು ರೂಢಿಯಾಗಿದೆ. ಇದರ ಕುರುಹುವಾಗಿ ಚಿತ್ರದುರ್ಗ ಸಮೀಪ ಹುಲ್ಲೂರು ಗ್ರಾಮವಿದೆ. ಈ ಗ್ರಾಮದ ದೇವಸ್ಥಾನದಲ್ಲಿಯೂ ಮಾನವಾಕೃತಿಯ ರೇವಣಸಿದ್ಧ ಮರುಳಸಿದ್ಧರ ವಿಗ್ರಹಗಳಿರುವುದನ್ನು ಕಾಣಬಹುದು.

ಮರುಳಸಿದ್ಧರು ರೇವಣಸಿದ್ಧರಿಂದ ಗುರುದೀಕ್ಷೆಯನ್ನು ಹೊಂದಿ ಗುರುಕರಸಂಜಾತನಾಗಿ ದೇಶಸಂಚಾರ ಹೊರಡುತ್ತಾನೆ. ಉತ್ತರದಿಕ್ಕಿಗೆ ಹೋಗಬೇಡ ಕೊಲ್ಲಾಪುರದಲ್ಲಿ ದುರಳಸಿದ್ಧರ ತಂಡವಿರುವುದು ಅವರನ್ನು ನಾನೊಮ್ಮೆ ಭಂಗಪಡಿಸಿದೆನು. ಆದರೂ ರೆಂಬೆಗಳನ್ನು ಕಡಿದ ಮರವು ಇನ್ನೂ ಹುಲುಸಾಗಿ ಚಿಗುರುವಂತೆ ಆ ಸಿದ್ಧರು ಹೆಚ್ಚಿರುವರು. ಅವರ ದುಷ್ಟತನದಿಂದ ಪಾರಾಗಿ ಬರುವುದು ಬಹುಕಷ್ಟ ಎಂದು ಗುರುವಾದ ರೇವಣಸಿದ್ಧರು ಎಚ್ಚರಿಸಿದರು. ಮರುಳಸಿದ್ಧರು ಆ ದುರಳಸಿದ್ಧರನ್ನು ಮುರಿದೇ ಬಿಡುವೆನೆಂದು ಶಪಥ ಮಾಡಿ ಗುರುವಿನ ಆಶೀರ್ವಾದವನ್ನು ಹೊಂದಿ ಪ್ರಯಾಣೋನ್ಮುಖನಾದನು.

ಉತ್ತರ ದಿಕ್ಕಿನತ್ತ ಸಂಚರಿಸುತ್ತಾ ಬಂದ ಮರುಳಸಿದ್ಧರು ರಾಯಶೆಟ್ಟಿಯ ಕೆರೆಯಪುರಕ್ಕೆ ಬಂದು ತಲುಪುತ್ತಾರೆ. ಆಗ ಮರುಳಸಿದ್ಧರಿಗೆ ದುಷ್ಟರೋಗ ಪ್ರಾಪ್ತವಾಯಿತು. ಆ ಪುರದಲ್ಲಿ ಹರನಪೂಜೆಯಲ್ಲಿ ನಿರತರಾಗಿ ಲಿಂಗಜಂಗಮಕ್ಕೆ ತನುಮನಧನಗಳನ್ನರ್ಪಿಸಿ ಮಠಾಧಿಪತಿಯಾಗಿದ್ದ ಶಿವ ಶರಣ ರಾಮಿತಂದೆಯು ಮರುಳಸಿದ್ಧರನ್ನು ಕಂಡು ತನ್ನ ಮಠಕ್ಕೆ ಕರೆದೊಯ್ದು ಭಕ್ತಿಯಿಂದ ಔಷದೋಪಚಾರ ಮಾಡಿದನು. ರೋಗವು ವಾಸಿಯಾಗಿ ಸರ್ವಾಂಗ ಪರಿಶುದ್ಧವಾಯಿತು. ಮರುಳಸಿದ್ಧರ ಮಹಾತ್ಮೆಯನ್ನರಿತು ರಾಮಿತಂದೆಯು ಅವರ ಮುಖ್ಯ ಶಿಷ್ಯನಾದನು. ಗದ್ದುಗೆಯ ರಾಮಿತಂದೆಯು ಮರುಳಸಿದ್ಧರಿಗೆ ಗದ್ದುಗೆಯನ್ನು ಹಾಸುವ ಕಾಯಕವನ್ನು ಮಾಡುವಂತರಾದರು. ಇವರ ಸ್ಮಾರಕವೊಂದು ಉಜ್ಜಯನಿಯ ಮರುಳಸಿದ್ಧರ ದೇವಸ್ಥಾನದ ಬಲಭಾಗದಲ್ಲಿ ಸ್ವಲ್ಪ ಹಿಂದಕ್ಕೆ ಪೂರ್ವ ಮುಖವಾಗಿದೆ. ಗೋಡೆಕೇರೆ (ಚಿಕ್ಕನಾಯಕನಹಳ್ಳಿ ತಾಲೂಕು ತುಮಕೂರು ಜಿಲ್ಲೆ) ಇಲ್ಲಿ ಗದ್ದುಗೆ ರಾಮಿತಂದೆ ಹಾಗೂ ಮರುಳಸಿದ್ಧರ ಸ್ಮಾರಕಗಳು ಈ ಗ್ರಾಮದಲ್ಲಿವೆ.

ಮುಂದಕ್ಕೆ ಪ್ರಯಾಣ ಮಾಡುತ್ತಾ ತೋರಗಲ್ಲುಪುರದ ಹೊರವಲಯದಲ್ಲಿ ಮಠದಲ್ಲಿದ್ದ ಅಚಲನೇಮಿ ಗುಂಡಬ್ರಹ್ಮಯ್ಯಗಳನ್ನು ಸಂದರ್ಶಿಸಿದರು ಎಂಬುದಾಗಿ ತಿಳಿದುಬರುತ್ತದೆ. ಆನಂತರ ಮುಂದೆ ಕೊಲ್ಲಾಪುರದ ಸಮೀಪದಲ್ಲಿದ್ದ ಸಿದ್ಧನಗಿರಿ ಎಂಬಲ್ಲಿ ದುರುಳಸಿದ್ಧರು ಅನಾಚಾರ ಪ್ರವರ್ತಕರಾಗಿದ್ದರು. ಇವರೆಲ್ಲರಿಗಿಂತಲೂ ಮಾಯೆ ಎಂಬ ಮಾಟಗಾತಿಯು ಎಲ್ಲರಿಗಿಂತಲೂ ವಾಮಚಾರಿಯಾಗಿದ್ದಳು. ಇಂತಹ ವಾಮಮಾರ್ಗಿಯಾದ ಮಾಯೆಯ ಗರ್ವಭಂಗಪಡಿಸಲು ಕೊಲ್ಲಾಪುರದ ಕಡೆಪ್ರಯಾಣ ಬೆಳೆಸುತ್ತಾರೆ. ಅಲ್ಲಿ ತಮ್ಮ ಸಿದ್ಧಿಸಾಮರ್ಥ್ಯದಿಂದ ವಾದವಿವಾದ ಮಾಡಿ ದುಷ್ಟರಾದ ಮಾಯೆ ಹಾಗೂ ಅವರ ಶಿಷ್ಯರ ಸೊಕ್ಕನ್ನು ಅಡಗಿಸಿ ಅವರನ್ನೆಲ್ಲ ವಾಮಾಚಾರದಿಂದ ಸದಾಚಾರಕ್ಕೆ ಪರಿವರ್ತಿಸಿ ತನ್ನ ಶಿಷ್ಯರನ್ನಾಗಿ ಅನುಗ್ರಹಿಸಿ ಕರೆತಂದರು. ಉಜ್ಜಯಿನಿಯಲ್ಲಿ ಮರುಳಸಿದ್ಧ ದೇವಾಲಯದ ಪಕ್ಕದಲ್ಲಿಯ ಕೊಲ್ಲಾಪುರದ ಮಾಯೆ ದೇವಸ್ಥಾನವಿರುವ ಸ್ಮಾರಕ ಕಾಣಬಹುದು. ಮರುಳಸಿದ್ಧರ ಶಿಷ್ಯರಾಗಿ ಕೊಲ್ಲಾಪುರದಿಂದ ಕರೆತಂದ ಜಟ್ಟಿಗ ಬ್ರಹ್ಮ ಭೈರವ ಸ್ಮಾರಕಗಳು ಸಹ ಉಜ್ಜಯಿನಿಯಲ್ಲಿ ಇವೆ.

ಮರುಳಸಿದ್ಧರು ಮುಂದೆ ತೆಲಗುಬಾಳಿಗೆ ಬಂದು ಒಕ್ಕಲಿಗ ಸಿದ್ಧಯ್ಯನಿಗೆ ಅರಿವೆಯನ್ನು, ಅಂದರೆ ಕಾಷಾಯವಸ್ತ್ರವನ್ನು ಕೊಟ್ಟು ಚರಮೂರ್ತಿಯನ್ನಾಗಿ ಮಾಡಿ ಮಠಾಧಿಪತ್ಯವನ್ನು ವಹಿಸಿರುವಂತೆ ಹರಸಿದರು. ಆನಂತರ ಗುರುವರನಾದ ಮರುಳಸಿದ್ಧರು ರೇವಣಸಿದ್ಧರನ್ನು ಕಂಡು ಚರಣಕ್ಕೆಭಿವಂದಿಸಿ ಆಶೀರ್ವಾದ ಪಡೆದು ಆನಗೋಡು, ಬೇತೂರು, ಕುರುಡಿ, ಅಸಗೋಡು ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಸಾಲುಶಾಸನಲಿಂಗವಾಗಿ ಮೆರೆದನು.

ಅನಂತರ ತನ್ನ ಜನ್ಮಸ್ಥಳಕ್ಕೆ ಬಂದು ಅಂತ್ಯಕಾಲವನ್ನು ಅಲ್ಲಿಯೇ ಕಳೆಯಬೇಕೆಂದಾಲೋಚಿಸಿ, ಕಗ್ಗಲ್ಲುಪುರ ಮತ್ತು ಕೇತನಹಳ್ಳಿಯ ಮಧ್ಯೆ ಅರಣ್ಯ ಪ್ರದೇಶವು ಹಿತಕರವಾಗಿಯೂ ಇದ್ದುದರಿಂದ ಅಲ್ಲಿಯೇ ಒಂದು ಶಿವಾಲಯ ಮತ್ತು ಸದ್ಧರ್ಮಪೀಠ ನಿರ್ಮಿಸಲು ತನ್ನ ಸಾಕು ತಂದೆ ಬಾಚನಗೌಡನಿಂದ ೧೪ ಚೌಕ ಸ್ಥಳ ಭೂಮಿಯನ್ನು ಪಡೆದು, ಉಜ್ಜಯಿನಿ ಸದ್ಧರ್ಮ ಪೀಠದ ಸುತ್ತ ಒಂಭತ್ತು ದಿಕ್ಕುಗಳವರೆಗೂ ಸ್ಥಳ ಪಡೆದು ತನಗೆ ಒಂದು ನೆಲೆ ಪಡೆದು ಒಂದೊಂದು ಪಾದಗಟ್ಟೆಗಳು ನಿರ್ಮಿಸಲ್ಪಟ್ಟಿರುವುದನ್ನು ಅವಲೋಕಿಸಬಹುದು.

- ಶ್ರೀ ಮರುಳಸಿದ್ಧ ಸ್ವಾಮಿಯ ದೇವಾಲಯದ ಮುಂಭಾಗದಲ್ಲಿರುವ ಪಾದಗಟ್ಟೆ ಇದು ಮೊದಲ ಪಾದಗಟ್ಟೆ.
- ಮಂಚನಹಳ್ಳಿ ಪಾದಗಟ್ಟೆ
- ಬೆಳದೇರಿ ಪಾದಗಟ್ಟೆ
- ಬೆನಕನಹಳ್ಳಿ ಪಾದಗಟ್ಟೆ
- ಸೊಕ್ಕೆ ಪಾದಗಟ್ಟೆ
- ಸಾಸ್ವಿಹಳ್ಳಿ ಪಾದಗಟ್ಟೆ
- ಹಾರಕನಾಳು ಪಾದಗಟ್ಟೆ
- ನಡುಮಾವಿನಹಳ್ಳಿ ಭುಜಂಗ ಪಾದಗಟ್ಟೆ
- ಉಜ್ಜಯಿನಿ ಗ್ರಾಮದ ಪಾದಗಟ್ಟೆ

ಮರುಳಸಿದ್ಧರು ಉಜ್ಜಯಿನಿಯಲ್ಲಿ ಸದ್ಧರ್ಮ ಪೀಠ ನಿರ್ಮಿಸಿ ತೆಲುಗು ಬಾಳಿನಿಂದ ಕರೆತಂದಿದ್ದ ತನ್ನ ಶಿಷ್ಯ ತೆಲುಗಬಾಳು ಸಿದ್ಧೇಶ್ವರರಿಗೆ "ತರಳ ! ಬಾಳು" ಎಂದು ಹರಸಿ ಮಠದ ಉತ್ತರಾಧಿಕಾರವನ್ನು ವಹಿಸಿ ಕೇತನಹಳ್ಳಿಯೆ ತನಗೆ ಸೂಕ್ತವೆಂದು ಬಗೆದು ಮರುಳಸಿದ್ಧರು ಐಕ್ಯವಾದರು.

ಗುರುವಿನ ಆಶೀರ್ವಾದದಂತೆ ತರಳಬಾಳು ಸಿದ್ಧಯ್ಯನು ಪ್ರಖ್ಯಾತನಾಗಿದ್ದು ಲೀಲೆಗಳನ್ನು ನಟಿಸಿ ಸಮಾಜೋದ್ಧಾರಕನಾಗಿದ್ದನೆಂಬುದಕ್ಕೆ ಅವರ ಸ್ಮಾರಕವಾದ ಉಜ್ಜಯಿನಿಯಲ್ಲಿರುವ ತರಳಬಾಳು ಸಿದ್ಧನ ಮಠವೇ ಸಾಕ್ಷಿ. ಈ ಘಟನೆಗೆ ಈಗ್ಗೆ ಎಂಟು ಶತಮಾನಗಳುರುಳಿದವು. ಇಂದಿಗೂ ಈ

ಗುರುಪೀಠವು ಸಿರಿಗೆರೆಯಲ್ಲಿ ಉಜ್ಜಯಿನಿ ಸದ್ಧರ್ಮ ಸಿಂಹಾಸನ ತರಳಬಾಳು ಸಂಸ್ಥಾನದ ಮಠವೆಂದು ಪ್ರಖ್ಯಾತವಾಗಿದೆ[೭೩].

❖ **ಜನಪದರು ಕಂಡಂತೆ ಮರುಳಸಿದ್ಧ :**

ಇಂದಿನ ಚರಿತ್ರೆ ರಚನೆಯ ಕ್ರಮ, ವಿಧಾನಗಳ ಹಿನ್ನಲೆಯಲ್ಲಿ ಸ್ಥಳೀಯ ಚರಿತ್ರೆಯ ಮೂಲಕ ಮಹಿಳಾ ನೆಲೆಗಳನ್ನು ಸ್ತ್ರೀವಾದಿ ಸಂವೇದನೆಯನ್ನು ಗುರುತಿಸುವುದು ಅವಶ್ಯ. ಚರಿತ್ರೆ ನಿರ್ಮಾಣದಲ್ಲಿ ಸ್ತ್ರೀಯ ಪಾತ್ರವನ್ನು ಈ ವರೆಗೆ ಕಡೆಗಣಿಸಿದಂತೆ ಕಂಡುಬಂದರೂ ಅವರ ಪಾತ್ರ ಅಲ್ಲಲ್ಲಿ ಈವರೆಗೆ ಕಡೆಗಣಿಸಿದಂತೆ ಕಂಡುಬಂದರೂ ಅವರ ಪಾತ್ರ ಅಲ್ಲಲ್ಲಿ ಸುಪ್ತವಾಗಿ ಅಡಗಿಕೊಂಡಿರುತ್ತದೆ. ಹೀಗೆ ರಾಜಪ್ರಭುತ್ವ ನಡೆಸಿದ ಮಹಿಳೆಯರು ಒಂದೆಡೆಯಾದರೆ, ಕೂಲಿ ಕಾರ್ಮಿಕರಾದ ಮಹಿಳೆಯರು ಚಾರಿತ್ರಿಕ ಸಂಗತಿಗಳನ್ನು ಜನಪದ ಸಾಹಿತ್ಯದ ಮೂಲಕ ಕೊಡುತ್ತಿರುವುದು ಶ್ಲಾಘನೀಯ. ಮಹಿಳೆಯರ ಬಾಯಲ್ಲಿ ಹುಟ್ಟಿದ ಮಹಿಳಾ ಸಾಧ್ವಿಯರ ಚರಿತ್ರೆಯು ರೋಮಾಂಚಕಾರಿಯಾದುದು. ಸ್ಥಳೀಯರಲ್ಲಿ ವ್ಯಕ್ತಪಟ್ಟ ಭಾವನೆಗಳನ್ನು ಸೋಬಾನೆ ರೂಪದಲ್ಲಿ[೭೪] ಜನಪದಗೀತೆ, ಕೋಲುಪದ, ಮಂಗಳಾರತಿ ಪದಗಳಲ್ಲಿ ಹಾಡುತ್ತಾರೆ, ಪುರುಷರು ಸಹ ಹಾಡುತ್ತಾರೆ. ವಿಶೇಷವಾಗಿ ಐತಿಹಾಸಿಕ ವ್ಯಕ್ತಿಗಳ ಅಥವಾ ಶಿವಶರಣರ ಪೂರ್ಣಚಿತ್ರಣ ಇವುಗಳಿಂದ ಗೋಚರಿಸದಿರದಿದ್ದರೂ, ಕೆಲವೊಮ್ಮೆ ಪ್ರಮುಖ ಸಾಧನೆ ಅಥವಾ ಅವರು ಜನ್ಮಪಡೆದ ಬಗ್ಗೆ, ಮೊದಲಾದ ಸನ್ನಿವೇಶಗಳು ಈ ಧ್ವನಿಗಳಲ್ಲಿ ನಿರೂಪಿತಗೊಳ್ಳುತ್ತವೆ. ಆಯ ಪ್ರಾದೇಶಿಕತೆಗೆ ತಕ್ಕ ವೈಶಿಷ್ಟ್ಯ ಮತ್ತು ಭೌಗೋಳಿಕ ಪ್ರದೇಶಗಳಿಗೆ ತಕ್ಕಂತೆ ಗೀತೆಗಳನ್ನು ಹಾಡುವುದು ಗಮನಾರ್ಹ[೭೫]. ಸ್ಥಳೀಯವಾಗಿ ಮರುಳಸಿದ್ಧರ ಐತಿಹಾಸಿಕ ಕುರುಹು ಎಲ್ಲಿ ಗುರುತಿಸಲ್ಪಡುತ್ತವೆ ಅಂತಹ ಭಾಗದಲ್ಲಿ ಮರಳಸಿದ್ಧರ ಕುರಿತು ಹಾಡಿರುವ ಕೆಲವು ಜನಪದ ಹಾಡುಗಳನ್ನು ಸಂಗ್ರಹಿಸಲಾಗಿದೆ. ಈ ಹಾಡುಗಳ ಸಂಗ್ರಹವನ್ನು ಈ ರೀತಿ ಅವಲೋಕಿಸಬಹುದು.

ಪರುಶೆ ಬರಲವ್ವ ಪರಮೇಶ್ವರಗೆ

ದೊರೆಯಾಳು ಉಜ್ಜಿನಿ ಮರುಳಸಿದ್ಧಯ್ಯಗೆ

ಪರುಶೆ ಬರುತಿರಲು ನನ್ನಯ್ಯಗೆ ಜಾತ್ರೆನೆರತಿಲಿ[೭೬]

ಇಲ್ಲಿಯ ಜನಾಂಗವೊಂದು ಹಾಡುವ ಈ ಹಾಡುಗಳಲ್ಲಿ ಮರುಳಸಿದ್ಧರ ಜಾತ್ರಾ ಉತ್ಸವದಲ್ಲಿ ಮರುಳಸಿದ್ಧ ಉತ್ಸವ ಮೂರ್ತಿ ತೇರಲ್ಲಿ ಕೂರಿಸಿ ನಡೆಸುವ ಮೆರವಣಿಗೆ ಮರುಳಸಿದ್ಧರಿಗೆ ಹೊಂಬಾಳೆ ಬಾಳೆ ಬೆಳೆಗ್ಯಾರೇ ಎಂಬ ರೀತಿಯಲ್ಲಿ ಹಾಡುವುದರೊಂದಿಗೆ ಮರುಳಸಿದ್ಧರನ್ನು ಸ್ಮರಿಸುತ್ತಾರೆ. ಇಲ್ಲಿ ಜೀವನದ ಯಾವ ಸನ್ನಿವೇಶವ ನಿರೂಪಿತವಾಗುವುದಿಲ್ಲ. ಆತನ ಜಾತ್ರ ಉತ್ಸವದಲ್ಲಿ ಆಚರಣೆಗಳ

ನಿರೂಪಣೆ ಮಾತ್ರ ವ್ಯಕ್ತವಾಗುತ್ತದೆ.

೧. ಮರುಳಸಿದ್ಧೇಶ ಪರಮ ಪ್ರಕಾಶ । ಮರುಳಸಿದ್ಧೇಶ ಪರಮ ಪ್ರಕಾಶ ॥ಪ॥

ಪೊರೆಯು ನಿರಂತರ ಗೋಚರನೆ । ಪೊರೆಯು ನಿರಂತರ ನಿಗಮ ಗೋಚರನೆ ॥

ಮರಳಸಿದ್ಧೇಶ ಪರಮ ಪ್ರಕಾಶ ।

೨. ವರಗಿರಿಶೈವ ಗುರು ಸಾರ್ವಭೌಮ ಶರಣ ಸುಪ್ರಭೆಯ ಉದರದಿ ಜನಿಸಿದೆ।

ಧರೆಯೊಳು ಕಗ್ಗಲ್ಲು ಪುರದೊಳು ಮೆರೆದೆ ಮರುಳಸಿದ್ಧೇಶ ಪರಮ ಪ್ರಕಾಶ॥

೩. ಕೈಲಾಸದಿ ಶಿವನಾಜ್ಞಾಯನೊಂದು ಕಾಲ ಕಂದರ ಮತವು।

ಇಳೆಯಾಳು ಬೆಳೆಸಿದೆ, ಮರುಳಸಿದ್ಧೇಶ ಪರಮ ಪ್ರಕಾಶ॥

೪. ಪರಿ ಪರಿ ಲೀಲೆಯಿಂದ ಚರಿಸುತೆ ಜಗದಿ ಶರಣಗತ ಜನ।

ರಕ್ಷಕನಾದೆ ಮರುಳಸಿದ್ಧೇಶ ಪರಮ ಪ್ರಕಾಶ॥[೨೨]

– ಹಾಡಿದವರು ಉತ್ತಂಗಿ ಗುರುಶಾಂತಯ್ಯ, ಆನಗೋಡು ಗ್ರಾಮ (ದಾವಣಗೆರೆ ಜಿಲ್ಲೆ)

ಈ ಮೇಲಿನ ಜನಪದ ಹಾಡಿನಲ್ಲಿ ಮರುಳಸಿದ್ಧರು ಜನ್ಮ ಪಡೆದ ಬಗೆ ಆತನ ಲೀಲೆಗಳು, ಮಾಯೆ ಮರ್ದನ ಮಾಡಿರುವುದು ಬಾಲಸಿದ್ಧೇಶ ತೆಲುಗು ಬಾಳು ಸಿದ್ಧರಿಗೆ ತರಳಬಾಳು ಎನ್ನುತ ವರವಿಂ ಪೀಠದಿ ಮೂರು ಮುದ್ರೆಗಳಿಟ್ಟೆ ಕಗ್ಗಲ್ಲು ಸೂತ್ರದಿ ತರಳಬಾಳು ಪಟ್ಟವು ಉಜ್ಜನಿ ಪೀಠಕ್ಕೆ ಸ್ಥಿರವೆಂದು ಹರಸಿದೆ ಎಂದು ಮರುಳಸಿದ್ಧರ ಜೀವನದ ಕಥೆಯನ್ನು ಕುರಿತು ಹಾಡಿನ ರೂಪದಲ್ಲಿ ಹಾಡಿರುವುದು ವ್ಯಕ್ತವಾಗುತ್ತದೆ. ಇದು ಈ ಭಾಗದ ಮತ್ತು ಮರುಳಸಿದ್ಧರ ಸ್ಮಾರಕಗಳಿರುವ ಭಾಗದಲ್ಲಿ ಸ್ಥಳೀಯ ಜನಪದರು ಹಾಡುವ ಬಗೆ. ಈ ರೀತಿಯ ಜನಪದ ಹಾಡುಗಳಲ್ಲಿ ಮರುಳಸಿದ್ಧರ ಜೀವನ ಕಥೆಯ ಕೆಲವು ಅಂಶಗಳು ನಿರೂಪಿತವಾಗುವಂತದ್ದನ್ನು ನಮ್ಮ ಜನಪರ ಹಾಡುಗಳಲ್ಲಿ ಕಾಣಬಹುದು. ಮತ್ತೊಂದು ಹಾಡಿನಲ್ಲಿ ಮರುಳಸಿದ್ಧ, ರೇವಣಸಿದ್ಧರ ಕುರಿತು ಜನಪದೀಯವಾಗಿ ನಿರೂಪಿತವಾದ ಒಂದು ಹಾಡು ಈ ರೀತಿ ಇದೆ.

ಮೂರು ಲೋಕಕೆ ಮರುಳಸಿದ್ಧ ಲಿಂಗವೇ ಅಧಿಕವಾದೆ।

ಮೂರುತಿಗೆ ಚನ್ನಷಡಕ್ಷರಿ ನೋಡುತಿರಲಿ।

ಸಂಪಿಗೆ ಹೂವಿನ ಗದ್ದಿಗೆಯೇ ಸಂಪಿಗೆ ಹೂವಿನ ಗದ್ದಿಗೇ ಮೇಲೆ।

ರೇಣುಕ ಸ್ವಾಮಿ ಕುಳಿತಿರಲು ನೀಲದ ಆರತಿ ಬೆಳಗುವೇನು।[೨೮]

ಹಾಡಿದವರು ಪತ್ರೆಮ್ಮ ಮತ್ತು ಬಸಮ್ಮ ಮುಚ್ಚನೂರು

ಈ ರೀತಿ ಧ್ವನಿ ಎತ್ತಿ ಹಾಡುವ ಗೀತೆಗಳಲ್ಲಿ ಮರುಳಸಿದ್ಧ ರೇವಣಸಿದ್ಧರಿಂದ ಚಿನ್ಮಯಗಿರಿ (ಚಿನ್ಮೊಲಾದ್ರಿ) ಚಿತ್ರದುರ್ಗದ ಬೆಟ್ಟದಲ್ಲಿ ಮರುಳಸಿದ್ಧ ರೇವಣಸಿದ್ಧನಿಂದ ಲಿಂಗದೀಕ್ಷೆ ಪಡೆದ ಕ್ಷೇತ್ರವಾಗಿದೆ. ಚಿತ್ರದುರ್ಗ ಬೆಟ್ಟದಲ್ಲಿ ಸಂಪಿಗೆ ಸಿದ್ಧೇಶ್ವರ ಎಂದು ಪ್ರಖ್ಯಾತ ದೇವಾಲಯವಿದೆ. ಸಂಪಿಗೆ ಹೂವಿನ ಗದ್ದಿಗೆ ಮೇಲೆ ರೇಣುಕ ಸ್ವಾಮಿ ಎಂದು ಹಾಡುವ ಇದೇ ಪರಿಸರಕ್ಕೆ ಹತ್ತಿರವಿರುವ ಈ ಜನಪದರ ಈ ರೀತಿ ಮರುಳಸಿದ್ಧ ರೇವಣಸಿದ್ಧರನ್ನು ಜನಪದದಲ್ಲಿ ವರ್ಣಿಸಿ ಹಾಡುವುದು ವಿಶೇಷವಾಗಿ ಗುರುತಿಸಬಹುದಾಗಿದೆ.

ಈ ನಮ್ಮ ಜನಪದರು ಮತ್ತೊಂದು ರೀತಿಯಲ್ಲಿ ಹಾಡುತ್ತಾರೆ. ಮರುಳಸಿದ್ಧರ ಸ್ಮಾರಕಗಳನ್ನು ಸ್ಮರಿಸುತ್ತಾ ಈ ಹಾಡನ್ನು ಹೇಳುತ್ತಾರೆ.

ಉಜ್ಜನಿ ಸಿದ್ಧಣ್ಣ, ಉಳಿಯೋ ನಮ್ಮ ಮನೆಯಾಗ॥

ನೀರೇ ಕಾದವೂ ಜಳಕಾಕೆ, ನೀರೇನೇ ಕಾದವೇ ಸಿದ್ಧಣ್ಣನ ಜಳಕಾಕೆ।

ಹಾಲ ಕಾದವೆ ಭೋಜನಕೆ॥

ಮುಚ್ಚನೂರ ಸಿದ್ಧಣ್ಣ ಉಳಿಯೋ ನಮ್ಮ ಮನೆಯಾಗ।

ನೀರೇ ಕಾದವೂ ಜಳಕಾಕೆ, ನೀರೇನೇ ಕಾದವೇ ಸಿದ್ಧಣ್ಣನ ಜಳಕಾಕೆ।

ಜಳಕಾಕೆ ಹಾಲಕಾದವೆ ಭೋಜನಕೆ॥[೨೯]

– ಹಾಡಿದವರು ಪತ್ರೆಮ್ಮ ಮತ್ತು ಬಸಮ್ಮ, ಮುಚ್ಚನೂರು

ಹೀಗೆ ಈ ಗೀತೆ ಆನಗೋಡು ಸಿದ್ಧನೂರು, ಬೇತೂರು, ಬಾತಿ, ಕುರುಡಿ, ಗ್ರಾಮಗಳಿಗೆ ಅನ್ವಯಿಸುವಂತೆ ಇದೇ ದಾಟಿಯ ಹಾಡು ಹಾಡುತ್ತಾರೆ. ಈ ಗ್ರಾಮಗಳು ಮರುಳಸಿದ್ಧರ ಪವಾಡ ಕ್ಷೇತ್ರಗಳಾಗಿವೆ. ಹೀಗಾಗಿ ಈ ಭಾಗದಲ್ಲಿ ನೆಲೆಸಿರುವ ಮರುಳಸಿದ್ಧರ ಕುರಿತು ಈ ನಮ್ಮ ಜನಪದರಲ್ಲಿ ಮರುಳಸಿದ್ಧರನ್ನು ಈ ರೀತಿ ಜನಪದ ಹಾಡುಗಳಲ್ಲಿ ನಿರೂಪಿಸಿರುತ್ತಾರೆ.

ಮರುಳಸಿದ್ಧರ ಬಗ್ಗೆ ಇದುವರೆಗೆ ನಿರೂಪಿತವಾಗುವ ಕುರಿತು ಕಥೆಗಳ ಸಮೀಕ್ಷೆಯಲ್ಲಿ, ಅಭಿವ್ಯಕ್ತಗೊಂಡ ಕಥೆಗಳನ್ನು ಅವಲೋಕಿಸಿದಾಗ ವ್ಯಕ್ತವಾಗುವ ಅಂಶ ವಿಭಿನ್ನವಾಗಿವೆ. ಮರುಳಸಿದ್ಧರ

ಹುಟ್ಟು, ಬೆಳವಣಿಗೆ, ತತ್ವನಿರೂಪಣೆ, ಸಾಧನೆ ಹಾಗೂ ಆತನ ಪವಾಡಗಳು ಸಾಹಿತ್ಯ ಮತ್ತು ಜನಪದರು ಹೇಳುವ ದಂತ ಕಥೆಗಳಲ್ಲಿ ಆತನ ಚರಿತ್ರೆ, ಕಟ್ಟು ಕಥೆಗಳಿಂದ ವಿರೂಪಗೊಂಡಿವೆ. ಮರುಳಸಿದ್ಧರ ಜೀವನ ಸಾಧನೆ, ವ್ಯಕ್ತಿತ್ವವನ್ನು ಕಥೆಯಲ್ಲಿ ನಿರೂಪಿಸುವ ಕೃತಿಗಳಲ್ಲಿ ದೇವ ಕವಿಯ ಸಿದ್ಧಲಿಂಗಚರಿತೆ ಮೊದಲ ಕೃತಿ. ಇದನ್ನು ಅನುಸರಿಸಿ ಆನಗೋಡು ರೇವಣಸಿದ್ಧ ಕವಿಯೂ ಮರುಳಸಿದ್ಧ ಕಾವ್ಯ ರಚಿಸಿದ, ಸಿರಿಗೆರೆಯ ಗುರುಸಿದ್ಧಸ್ವಾಮಿಗಳು ಮರುಳಸಿದ್ಧ ಸಾಂಗತ್ಯವನ್ನು ರಚಿಸಿದ್ದಾರೆ. ನಾಗಭೂಷಣ ಕವಿಯು ಅಲ್ಲಲ್ಲಿ ಮೂಲ ಕಥೆಯನ್ನು ಮಾರ್ಪಡಿಸಿಕೊಂಡಿದ್ದಾನೆ. ಉಜ್ಜನಿಯ ಗೊಂಗಡಿ ವೀರಭದ್ರಯ್ಯನವರು ಇದನ್ನು ನೇರವಾಗಿ ಅನುಸರಿಸಿದ್ದರು ಸಂಸ್ಕೃತದ ಆಗಮ ಸಾಹಿತ್ಯವನ್ನು ಅನುಸರಿಸಿ ಲಿಂಗೋದ್ಭವ ಲೀಲೆಯ ವರ್ಣನೆಯನ್ನು ಚಿತ್ರಿಸಿದ್ದಾರೆ. ವಾಗೀಶಪಚಿಡಿತ ಎಂಬುವರು ಮರುಳಾರಾಧ್ಯ ವಿಜಯಚರಿತೆ, ಎಂಬ ಕೃತಿಯಲ್ಲಿ ಅನೇಕ ಮರುಳಸಿದ್ಧರನ್ನು ಕಲ್ಪಿಸಿ, ಎರಡು ಉಜ್ಜಯಿನಿಗಳನ್ನು ಕಲ್ಪಿಸಿ ಐತಿಹಾಸಿಕ ವಿಚಾರಗಳನ್ನು ಅಸಂಗತವಾಗಿ ರೂಪಿಸಲ್ಪಟ್ಟಿದೆ. ಸಂಸ್ಕೃತ ಆಗಮಗಳು, ಕೇವಲ ಅವತಾರದ ರೀತಿಯನ್ನು ವಿವರಿಸಿವೆಯೇ ವಿನಃ ಚರಿತ್ರೆಯನ್ನು ವಿವರಿಸಿಲ್ಲ. ಒಟ್ಟಿನಲ್ಲಿ ಮರುಳಸಿದ್ಧರ ಜೀವನ ಚರಿತ್ರೆಯ ಮೂಲಕತೆ ಅಭಿವ್ಯಕ್ತಕೊಳ್ಳುವುದು ದೇವಕವಿಯಿಂದ. ಹೀಗಾಗಿ ದೇವಕವಿ ಮೊದಲು ಮರುಳಸಿದ್ಧರ ಜೀವನಚರಿತ್ರೆಯನ್ನು ಮರುಳಸಿದ್ಧರ ಶಿಷ್ಯ ರಾಮಿತಂದೆಯು ತನ್ನ ಗುರುವಿನ ಚರಿತ್ರೆಯನ್ನು ಬರೆದುದಾಗಿ ತಿಳಿದುಬರುತ್ತದೆ. ಅದರ ಆಧಾರದ ಮೇಲೆ ದೇವಕವಿ ಮರುಳಸಿದ್ಧರ ಚರಿತ್ರೆ ರಚಿಸಿದುದಾಗಿ ಹೇಳಿಕೊಂಡಿದ್ದಾನೆ. ಹೀಗಾಗಿ ದೇವಕವಿಯೇ ಮೊದಲ ಕವಿ ಆಗಿದ್ದಾನೆ. ಉಳಿದಂತೆ ಮರುಳಸಿದ್ಧರ ಬಗ್ಗೆ ನಿರೂಪಿತವಾದ ಕತೆಗಳು ನಂತರ ಹುಟ್ಟಿಕೊಂಡವು. ಹಿಂದಿನವರು ದೇವಕವಿಯನ್ನು ಅನುಸರಿಸಿದರು. ಕೆಲವು ಮೇಲ್ವರ್ಗದ ಕವಿಗಳು, ಮತ್ತು ಮಠಾಧಿಪತಿಗಳು ಒಬ್ಬ ದಲಿತನ ಚರಿತ್ರೆಯನ್ನು ಮರೆಮಾಚಲು ಹುಟ್ಟಿಕೊಂಡು ವಿರೂಪಗೊಂಡಿರುವ ಕಥೆಗಳೇ ಆಗಿವೆ.

ಅಡಿಟಿಪ್ಪಣಿಗಳು

೧) ರಾ.ವೆಂಕಟೇಶ್ ಇಂದ್ವಾಡಿ, ಮಂಟೇಸ್ವಾಮಿ ಪರಂಪರೆ, ೧೯೯೯, ಪುಟ.೬೪.

೨) ಅದೇ ಪುಟ.೨೦,

೩) ಪ್ರೊ॥ ಎಂ.ಮರಿಯಪ್ಪ ಭಟ್, ಕಿಟಲ್ಸ್ ಕನ್ನಡ–ಇಂಗ್ಲೀಷ್ ಡಿಕ್ಷನರಿ, ಸಂ.೨, ೧೯೬೯.

೪) ಅದೇ ಪುಟ.೧.

೫) ಅದೇ ಪುಟ.೧.

೬) ಅದೇ ಪುಟ.೭.

೭) ಪಂಡಿತ್, ಎಸ್.ಬಸಪ್ಪ (ಸಂ), ದೇವಕವಿ ಕೃತ ಮರುಳಸಿದ್ಧ ಕಾವ್ಯ, ೧೯೭೭, ಪುಟ. V

೮) ಅದೇ ಪುಟ. V

೯) ಅದೇ ಪುಟ. V

೧೦)ಡಾ॥ ರಂ.ಶ್ರೀ ಮುಗಳಿ (ಸಂ), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂ–೪) ಭಾಗ–೨, ೧೯೭೮, ಪುಟ.೭೭೩.

೧೧) ಪಂಡಿತ್ ಎಸ್.ಬಸಪ್ಪ (ಸಂ), ಪೂರ್ವೋಕ್ತ ೧೯೭೭, ಪುಟ. V. VI.

೧೨)ಪಂಡಿತ್.ಎಸ್.ಬಸಪ್ಪ (ಸಂ), ಪೂರ್ವೋಕ್ತ, ಪುಟ.೩.

೧೩)ಡಾ॥ ರಂ.ಶ್ರೀ ಮುಗಳಿ (ಸಂ), ಪೂರ್ವೋಕ್ತ (ಸಂ–೪), ಭಾಗ–೨, ಪುಟ.೭೭೪.

೧೪)ಪಂಡಿತ್ ಎಸ್.ಬಸಪ್ಪ (ಸಂ), ಪೂರ್ವೋಕ್ತ, ಪುಟ.೬.

೧೫) ಹೆಚ್.ದೇವೀರಪ್ಪ, ಮಹದೇವ ಬಣಕಾರ (ಸಂ), ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ, ೧೯೭೪, ಪುಟ.೪೧.

೧೬)ಡಾ. ಎಂ.ಚಿದಾನಂದಮೂರ್ತಿ, ಬಸವಣ್ಣ, ಕರ್ನಾಟಕ : ಭಾರತ, ೨೦೦೪, ಪುಟ.೨೦.

೧೭)ಎಚ್.ದೇವೀರಪ್ಪ, ಮಹದೇವ ಬಣಕಾರ (ಸಂ), ಪೂರ್ವೋಕ್ತ, ಪುಟ.೪೩.

೧೮)ಪಂಡಿತ್.ಎಸ್.ಬಸಪ್ಪ (ಸಂ), ಪೂರ್ವೋಕ್ತ, ೧೯೭೭, ಪುಟ.೨೮.

೧೯)ಅದೇ ಪುಟ.೩೨.

೨೦)ಅದೇ ಪುಟ.೩೪.

೨೧)ಅದೇ ಪುಟ.೪೧.

೨೨)ಅದೇ ಪುಟ.೪೪.

೨೩)ಅದೇ ಪುಟ.೫೨.

೨೪)ಅದೇ ಪುಟ.೭೨.

೨೫)ಅದೇ ಪುಟ.೯೦.

೨೬)ಅದೇ ಪುಟ.೯೮.

೨೭)ಹೆಚ್.ದೇವೀರಪ್ಪ ಮಹದೇವ ಬಣಕಾರ (ಸಂ), ಪೂರ್ವೋಕ್ತ, ಪುಟ.೧೨೭.

೨೮)ಡಾ. ರಂ.ಶ್ರೀ ಮುಗಳಿ (ಸಂ) ಪೂರ್ವೋಕ್ತ, ಪುಟ.೭೭೫.

೨೯)ಆರ್.ಚಂದ್ರಶೇಖರಪ್ಪ (ಸಂ), ತರಳ–ಬಾಳು ರಜತೋತ್ಸವ ಸಂಚಿಕೆ, ೧೯೬೭, ಪುಟ.೧೩. ೧೪.

೩೦)ಎಚ್.ದೇವೀರಪ್ಪ, ಮಹದೇವ ಬಣಕಾರ (ಸಂ), ಪೂರ್ವೋಕ್ತ, ಪುಟ.೫೭. ೫೮.

೩೧)ತರಳಬಾಳು ಶಿವಮೂರ್ತಿ (ಸಂ), ಕವಿ ರೇವಣಸಿದ್ಧ ವಿರಚಿತ ಮರುಳಸಿದ್ಧ ದೇವರ ಚರಿತ್ರೆ (ಸಾಂಗತ್ಯ) ಪುಟ.೩, ೧೯೭೦,

೩೨)ಅದೇ ಪುಟ.೩

೩೩)ಪ್ರೊ॥ ಬಿ.ವಿರೂಪಾಕ್ಷಪ್ಪ , ಶರಣದೀಪಿಕೆ, ೨೦೦೪, ಪುಟ.೨೩೫.

೩೪)ತರಳಬಾಳು ಶಿವಮೂರ್ತಿ (ಸಂ), ಪೂರ್ವೋಕ್ತ, ಪುಟ.೫೩.

೩೫)ಅದೇ ಪುಟ.೫೪

೩೬)ಅದೇ ಪುಟ.೭೧

೩೭)ಅದೇ ಪುಟ.೭೭

೩೮)ಅದೇ ಪುಟ.೯೧

೩೯)ಅದೇ ಪುಟ.೯೪

೪೦)ಅದೇ ಪುಟ.೯೪

೪೧)ಅದೇ ಪುಟ.೯೫

೪೨)ಶ್ರೀ ಮರುಳ ಚರಿತ್ರೆ , ನೆರಳಚ್ಚು ಪ್ರತಿ ಈ ಅಧ್ಯಯನದಲ್ಲಿ ಬಳಸಿಕೊಂಡಿರುತ್ತೇನೆ.

೪೩)ಡಾ. ರಾಮರೆಡ್ಡಿ ಎಸ್. ರಡ್ಡೇರ, ದೇವರದಾಸಿಮಯ್ಯನ ಜೀವನ ಮತ್ತು ಸಾಹಿತ್ಯ ೨೦೦೫, ಪುಟ.೧೦.

೪೪)ಎಚ್.ದೇವೀರಪ್ಪ, ಮಹದೇವ ಬಣಕಾರ (ಸಂ), ಪೂರ್ವೋಕ್ತ ಪುಟ.೧೦೬, ೧೦೭.

೪೫)ಅದೇ ಪುಟ.೧೦೭, ೧೦೮.

೪೬)ಡಾ. ಎಸ್.ವಿದ್ಯಾಶಂಕರ್ (ಸಂ), ಮಹಾದೇವಕ್ಕನ ಸಾಂಗತ್ಯ ೧೯೮೫, ಪುಟ.೧೨.

೪೭)ಅದೇ ಪುಟ.೩೪.

೪೮)ಅದೇ ಪುಟ.೯.

೪೯)ಅದೇ ಪುಟ.೯.

೫೦)ಅದೇ ಪುಟ.೩೪.

೫೧) ಮರುಳಾರಾಧ್ಯ ವಿಜಯ, ಅಪ್ರಕಟಿತ, ೧೭ನೇ ಶತಮಾನದ ನಂದೀಶಕವಿ ಸಂಸ್ಕೃತ ಭಾಷೆಯಲ್ಲಿ ರಚಿಸಿದ ಈ ಕೃತಿ ಅಳವಂಡಿ ಸಂಸ್ಥಾನ ಮಠದಲ್ಲಿದ್ದು ಇದನ್ನು ಬಳಸಿಕೊಂಡಿದ್ದೇವೆ.

೫೨)ಎಚ್.ದೇವೀರಪ್ಪ, ಮಹದೇವ ಬಣಕಾರ (ಸಂ) ಪೂರ್ವೋಕ್ತ, ಪುಟ.೧೩೩, ೧೩೫.

೫೩)ಅದೇ ಪುಟ.೨೧೯.

೫೪)ಎನ್.ಬಸವಾರಾಧ್ಯ (ಸಂ), ಪರ್ವತೇಶ ವಿರಚಿತ ಚತುರಾಚಾರ್ಯ ಚಾರಿತ್ರ ೧೯೮೬, ಪುಟ.೨.

೫೫)ನಗುವನಹಳ್ಳಿ ಪಿ.ರತ್ನ (ಸಂ), ಚತುರಾಚಾರ್ಯ ಪ್ರಬಂಧ ೧೯೮೯, ಪುಟ.೧.

೫೬)ಅದೇ ಪುಟ.೩೦.

೫೭)ಅದೇ ಪುಟ.೩೬, ೩೭.

೫೮)ಅದೇ ಪುಟ.೪೦.

೫೯)ಅ.ಸಿ.ಹಿರೇಮಠ (ಸಂ), ವೀರಶೈವ ಪಂಚಪೀಠ ಪರಂಪರೆ, ೨೦೦೧, ಪುಟ.೧.

೬೦)ಅದೇ ಪುಟ.೨.

೬೧)ಡಾ. ಆರ್.ಎಮ್.ಷಡಾಕ್ಷರಯ್ಯ (ಲೇ) ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ ೨೦೦೩, ಪುಟ.೧೪.

೬೨)ಅ.ಸಿ.ಹಿರೇಮಠ (ಸಂ) ಪೂರ್ವೋಕ್ತ, ಪುಟ.೨೩.

೬೩)ಅದೇ ಪುಟ.೨೩.

೬೪)ಹೆಚ್.ದೇವೀರಪ್ಪ, ಮಹದೇವ ಬಣಕಾರ (ಸಂ) ಪೂರ್ವೋಕ್ತ, ಪುಟ.೧೦೩– ೧೦೪.

೬೫)ಡಾ॥ ಎಂ.ಎಂ.ಕಲಬುರ್ಗಿ ಮಾರ್ಗ (ಸಂ–೪), ಪುಟ.೨೩೯.

೬೬)ಹೆಚ್.ದೇವೀರಪ್ಪ, ಮಹದೇವಬಣಕಾರ (ಸಂ), ಪೂರ್ವೋಕ್ತ, ಪುಟ.೨೧೭.

೬೭)ಅದೇ ಪುಟ. ೨೧೭– ೨೨೧.

೬೮)ಸದಾನಂದ ಕನವಳ್ಳಿ, ಚನ್ನಪ್ಪ ಕೆರಿಮನಿ (ಸಂ), ವೀರಶೈವ ಸಾಹಿತ್ಯ ಸಮೀಕ್ಷೆ , ೧೯೭೬, ಪುಟ.೪೧, ೪೩.

೬೯)ಹೆಚ್.ದೇವೀರಪ್ಪ, ಮಹದೇವ ಬಣಕಾರ (ಸಂ), ಪೂರ್ವೋಕ್ತ, ಪುಟ.೭೨.

೭೦)ಹೆರೆಂಜೆ ಕೃಷ್ಣಭಟ್, ಮುರಳೀಧರ ಉಪಾಧ್ಯ ಹಿರಿಯಡಕ (ಸಂ), ಗೋವಿಂದ ಪೈ ಸಂಶೋಧನ ಸಂಪುಟ, ೧೯೯೫, ಪುಟ.೮೭೩–೮೭೪.

೭೧)ಪ್ರೊ. ಲಕ್ಷ್ಮಣ್ ತೆಲಗಾವಿ (ಸಂ) ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ೨೦೦೩. ಪುಟ.೨೬– ೨೭.

೭೨)ಈ ಮಾಹಿತಿಯನ್ನು ಉಜ್ಜಯಿನಿ ಗ್ರಾಮದ ಗೊಂಗಡಿ ವೀರಭದ್ರಯ್ಯನವರಿಂದ ಸಂಗ್ರಹಿಸಲಾಗಿದೆ.

೭೩)ಈ ಮಾಹಿತಿಯನ್ನು ಕ್ಷೇತ್ರ ಕಾರ್ಯ ಕೈಗೊಂಡ ಸಂದರ್ಭ ಆಯಸ್ಥಳದ ಕಥೆಗಳನ್ನು ಸಂಗ್ರಹಿಸಲಾಗಿದೆ. ಕಥೆ ಹೇಳಿದವರ ಹೆಸರನ್ನು ಅನುಬಂಧದಲ್ಲಿ ಸೂಚಿಸಲಾಗಿದೆ.

೭೪)ಪ್ರೊ. ಲಕ್ಷ್ಮಣ್ ತೆಲಗಾವಿ (ಸಂ) ಪೂರ್ವೋಕ್ತ, ಪುಟ.೨೯.

೭೫)ಅದೇ ಪುಟ.೩೦.

೭೬)ರಮೇಶ್.ಕೆ. ಎಂ.ಫಿಲ್ ಪದವಿಯ ಅಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಉಜ್ಜಯಿನಿ ಗ್ರಾಮದ ಸಾಂಸ್ಕೃತಿಕ ಅಧ್ಯಯನದ ಅನುಬಂಧದಿಂದ ಆಯ್ದುಕೊಳ್ಳಲಾಗಿದೆ.

೭೭)ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ದಾವಣಗೆರೆ (ತಾ) ಆನಗೋಡು ಗ್ರಾಮದಲ್ಲಿ ಉತ್ತಂಗಿ ಗುರು ಶಾಂತಯ್ಯ ಹಾಡಿರುವ ಹಾಡನ್ನು ಸಂಗ್ರಹಿಸಲಾಗಿದೆ ದಿನಾಂಕ ೧೮.೦೫.೨೦೦೭.

೭೮)ಹಾಡಿದವರು, ಪತ್ರೆಮ್ಮ ಮತ್ತು ಬಸಮ್ಮ ಮುಚ್ಚನೂರು, ಜಗಳೂರು ತಾ॥ ದಿನಾಂಕ ೦೪.೦೪.೨೦೦೭.

೭೯)ಅದೇ ಗ್ರಾಮದವರು.

ಅಧ್ಯಾಯ ೩

೩.೩. ಮರುಳಸಿದ್ಧರ ಜೀವನ ಮತ್ತು ಸಾಧನೆ ಚಾರಿತ್ರಿಕ ನೆಲೆಯಲ್ಲಿ.

೩.೩.೧. ಮರುಳಸಿದ್ಧರ ಮೂಲ ಸ್ಥಳ ಮತ್ತು ಪರಿಸರ

೩.೩.೨. ಮರುಳಸಿದ್ಧರ ಹುಟ್ಟುಕಾಲ ಮತ್ತು ಜನ್ಮಸ್ಥಳ ಕುರಿತು ಕೆಲವು ಭಿನ್ನಾಭಿಪ್ರಾಯಗಳು.

೩.೩.೩. ಪಂಚಪೀಠಾಧಿಪತಿಗಳಾಗಿ ಮರುಳಸಿದ್ಧರು ಒಂದು ಜಿಜ್ಞಾಸೆ.

೩.೩.೪. ಗುರು ರೇವಣಸಿದ್ಧರಿಂದ ಪಡೆದ ಲಿಂಗ ದೀಕ್ಷೆ.

೩.೩.೫. ಮರುಳಸಿದ್ಧರ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು

೩.೩.೬. ಮರುಳಸಿದ್ಧ ಶರಣರಾಗಿ

೩.೩ ಮರುಳಸಿದ್ಧರ ಜೀವನ ಮತ್ತು ಸಾಧನೆ ಚಾರಿತ್ರಿಕ ನೆಲೆಯಲ್ಲಿ.

ಕರ್ನಾಟಕದ ಚರಿತ್ರೆಯಲ್ಲಿ ೧೨ನೆಯ ಶತಮಾನದ ಶಿವಶರಣರಾದ ಮರುಳಸಿದ್ಧರ ಜೀವನ ಮತ್ತು ಸಾಧನೆಯನ್ನು ಚಾರಿತ್ರಿಕವಾಗಿ ತಿಳಿಯುವ ಪೂರ್ವದಲ್ಲಿ ಮರುಳಸಿದ್ಧರ ಸಮಕಾಲೀನ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಪರಿಸ್ಥಿತಿಯ ಪೂರ್ವಪರ ವಿಚಾರವನ್ನು ಅವಲೋಕಿಸುವುದು ಅವಶ್ಯವೆನಿಸುತ್ತದೆ. ಏಕೆಂದರೆ ಯಾವುದೇ ವ್ಯಕ್ತಿಯಾಗಲಿ, ಧಾರ್ಮಿಕ ಮಹಾಪುರುಷರಾಗಲಿ, ಸಂತ – ಶಿವಶರಣ ಪರಂಪರೆಯಲ್ಲಿ ಬರುವ ವಚನಕಾರರೆ ಆಗಿರಲಿ, ಅವರ ಜೀವನ ಸಾಧನೆ ವ್ಯಕ್ತಿತ್ವ ತಿಳಿಯುವ ಮೊದಲು ಅವರ ಮೇಲೆ ಪ್ರಭಾವಿತವಾದ ಭೌಗೋಳಿಕ ಪರಿಸರ, ರಾಜಪ್ರಭುತ್ವದ ಪ್ರಭಾವ ಮತ್ತು ಧಾರ್ಮಿಕ ಸಾಮಾಜಿಕ ಸ್ಥಿತಿಗತಿಯ ಹಿನ್ನಲೆಯನ್ನು ಅರಿಯುವುದು ಅವಶ್ಯಕವಾದುದು ಕರ್ನಾಟಕದಲ್ಲಿ ಮರಳುಸಿದ್ಧರ ಜೀವನ ಸಾಧನೆ ತಿಳಿಯುವ ಮೊದಲು ಅಂದಿನ, ರಾಜಕೀಯ, ಧಾರ್ಮಿಕ, ಸಾಮಾಜಿಕ ಸ್ಥಿತಿಯನ್ನು ತಿಳಿಯುವುದು ಅಗತ್ಯ.

❖ **ರಾಜಕೀಯ ಸ್ಥಿತಿ :**

ಲಿಖಿತ ದಾಖಲೆಗಳು ಇಲ್ಲದ ಕಾಲದ ಇತಿಹಾಸವನ್ನು ಪೂರ್ವಕಾಲ ಅಥವಾ ಪ್ರಾಗೈತಿಹಾಸಿಕ ಕಾಲ (ಪ್ರಿ–ಹಿಸ್ಟಾರಿಕ್ ಪೀರ‍್ಯಡ್) ಎನ್ನುತ್ತಾರೆ. ಕರ್ನಾಟಕ ಮತ್ತು ದಕ್ಷಿಣ ಭಾರತದ ಇತಿಹಾಸ ಪೂರ್ವಕಾಲವನ್ನು ಹಳೆ ಶಿಲಾಯುಗ, ಆದಿ ಶಿಲಾಯುಗ ಮತ್ತು ನವ ಶಿಲಾಯುಗ ಎಂದು ಸ್ಥೂಲವಾಗಿ ವಿಭಜಿಸಿದ್ದು[೧] ಕ್ರಿ. ಪೂ. ಸು ೩೫೦೦ ರಿಂದ ಕ್ರಿ. ಪೂ ೧೦೦೦ದ ಅವಧಿಗೂ ಹಿಂದೆ ಶಿಲಾಯುಗದ ಜನರಿದ್ದು, ಜೀವನ ನಡೆಸಿದ ಕುರುಹುಗಳಿವೆ. ಹೀಗೆ ಆರಂಭವಾಗುವ ಪ್ರಾಗೈತಿಹಾಸಿಕ ಕಾಲವು ಸಹ ಕರ್ನಾಟಕ ಚರಿತ್ರೆಯ ಮಹತ್ವವಾದ ಕಾಲವೆನಿಸಿದೆ.

ಸದ್ಯ ನಮಗೆ ತಿಳಿದಂತೆ ಕರ್ನಾಟಕದಲ್ಲಿ ಇತಿಹಾಸಯುಗ ಆರಂಭವಾಗುವುದು, ಕ್ರಿ. ಪೂ. ೪–೩ ನೇ ಶತಮಾನಗಳಿಂದ. ಉತ್ತರ ಭಾರತದಲ್ಲಿ ಆಳುತ್ತಿದ್ದ ಮೌರ್ಯವಂಶದ ಅರಸರು ಕರ್ನಾಟಕದ ಉತ್ತರ ಭಾಗದಲ್ಲಂತೂ ತಮ್ಮ ರಾಜ್ಯವನ್ನು ವಿಸ್ತರಿಸಿದ್ದರೆಂಬುದಕ್ಕೆ ಸಾಕ್ಷ್ಯಾಧಾರಗಳಿವೆ. ಕರ್ನಾಟಕದಲ್ಲಿ ಬ್ರಹ್ಮಗಿರಿ, ಸಿದ್ಧಪುರ, ಜಟಿಂಗರಾಮೇಶ್ವರ(ಚಿತ್ರದುರ್ಗ ಜಿಲ್ಲೆ) ಮಸ್ಕಿ, (ಕೊಪ್ಪಳ ಜಿಲ್ಲೆ) ಉದೆಗೊಳಂ, ನಿಟ್ಟೂರು(ಬಳ್ಳಾರಿ ಜಿಲ್ಲೆ) ಸನ್ನತಿ (ಗುಲ್ಬರ್ಗ ಜಿಲ್ಲೆ) ೧೩ ಮತ್ತು ೧೪ನೇ ಬೃಹತ್ ಬಂಡೆ ಶಾಸನಗಳು ಮತ್ತು ಪ್ರತ್ಯೇಕ ಎರಡು ಕಳಿಂಗ ಶಾಸನ ಪ್ರತಿಗಳು ಇವೆ. ಇವುಗಳಿಂದ ಕರ್ನಾಟಕ ಗುಲ್ಬರ್ಗ, ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಂತೂ ನೇರವಾಗಿ ಮೌರ್ಯ

ಸಾಮ್ರಾಜ್ಯದ ಅಧೀನಕ್ಕೊಳ ಪಟ್ಟ ಪ್ರದೇಶಗಳೆಂಬುದು ಸ್ಪಷ್ಟವಾಗುತ್ತವೆ[೨].

ಸುಮಾರು ಕ್ರಿಪೂ. ೧೮೭ ರ ಹೊತ್ತಿಗೆ ಮೌರ್ಯ ಅರಸುಮನೆತನದ ಆಳ್ವಿಕೆ ಕೊನೆಗೊಂಡು ಮಗಧ ಸಾಮ್ರಾಜ್ಯವನ್ನು ಕ್ರಿಪೂ ೭೫ ರ ತನಕ ಶುಂಗ ಅರಸು ಮನೆತನದ ಹತ್ತು ರಾಜರುಗಳು. ಅನಂತರ ಕ್ರಿಪೂ. ೩೦ ರ ತನಕ ಕಾಣ್ವ ವಂಶದ ನಾಲ್ಕು ಅರಸರುಗಳು ಆಳಿದರು. ಈ ಎರಡು ಅರಸು ಮನೆತನಗಳ ಕಾಲದಲ್ಲಿ ಕರ್ನಾಟಕದ ರಾಜಕೀಯ ಧಾರ್ಮಿಕ, ಆರ್ಥಿಕ ಸ್ಥಿತಿ-ಗತಿಗಳೇನೆಂಬುದನ್ನು ತಿಳಿಯಲು ಯಾವುದೇ ಆಕರಗಳು ಲಭ್ಯವಿಲ್ಲ. ಆದರೆ ದಖ್ಖನ್ ಮತ್ತು ಕರ್ನಾಟಕದ ಮೇಲೆ ಈ ಅರಸು ಮನೆತನಗಳ ರಾಜಕೀಯ ಹಿಡಿತ ದುರ್ಬಲವಾಗುತ್ತಾ ಬಂತು. ಇದೇ ಸಮಯದಲ್ಲಿ ದಖ್ಖನ್ನಿನ ಇತಿಹಾಸದಲ್ಲಿ ಶಾತವಾಹನರೆಂಬ ಆಂಧ್ರಭೃತ್ಯರು[೩] ಕ್ರಿಪೂ. ೨೨೦ ರಿಂದ ಕ್ರಿಶ. ೨೩೦ ರ ವರೆಗೆ ಆಳ್ವಿಕೆ ನಡೆಸಿರುತ್ತಾರೆ. ಇವರು ಆಂಧ್ರ-ಕರ್ನಾಟಕದವರೆಂಬ ಪರಸ್ಪರ ವಿವಾದಗಳಿವೆ. ಇವರಿಗೆ ಆಂಧ್ರ ಭೃತ್ಯರೆಂದು ಕರೆಯಲಾಗಿದೆ. ಒಟ್ಟಾರೆ ಬಳ್ಳಾರಿ ಪ್ರದೇಶ ಇವರಿಗೆ ಒಳಪಟ್ಟಿದ್ದಿತು. ಹಿರೇಹಡಗಲಿ ತಾಮ್ರ ಶಾಸನದಲ್ಲಿ ಸಾತಾಹನಿರಘಟ್ಟ; 'ಶಾತವಾಹನೀಹಾರ' ಎಂಬ ಉಲ್ಲೇಖಗಳಿವೆ. ಮಾಕಡೋಣಿ (ಅನಂತಪುರ ಜಿಲ್ಲೆ ಆದೋನಿ ತಾ) ಮತ್ತು ಹಿರೇಹಡಗಲಿಯಲ್ಲಿ ದೊರೆತ ತಾಮ್ರ ಪತ್ರಗಳಲ್ಲಿ ಬಳ್ಳಾರಿ ಪ್ರದೇಶದ ವಿವರವಿದೆ. ಡಾ, ವಿ,ಎಸ್. ಸುಖ್ತನಕರ ಎಂಬ ವಿದ್ವಾಂಸರು ಶಾತವಾಹನರು ಬಳ್ಳಾರಿ ಪ್ರದೇಶದವರೆಂದು ಗುರುತಿಸುತ್ತಾರೆ. ಈ ಎಲ್ಲಾ ಪ್ರದೇಶಕ್ಕೆ ಅವರು 'ಕುಂತಲ' ವೆಂದು ಕರೆದಿದ್ದಾರೆ[೪].

ಸ್ಥಳೀಯ ಪ್ರಭುತ್ವಗಳಲ್ಲದೆ, ಈ ಪ್ರದೇಶ ಉತ್ತರ ಭಾರತದ ಮಹಾಸಾಮ್ರಾಟರ ಆಳ್ವಿಕೆಗೂ ತುತ್ತಾಗಿತ್ತು. ಗುಪ್ತರ ಆಳ್ವಿಕೆಗೆ ಬಳ್ಳಾರಿ ಪ್ರದೇಶ ಒಳಪಟ್ಟಿದ್ದು ಗಮನಾರ್ಹ, ಬಳ್ಳಾರಿ ಸಮೀಪ (ಕ್ರಿ.ಶ. ೩೪೦) ಕಂಚಿ ವಿಷ್ಣುಗೋಪನನ್ನು ದಕ್ಷಿಣ ದಂಡಿಯಾತ್ರೆಯಲ್ಲಿ ಸೋಲಿಸಿದ ಸಂಗತಿ ಅಲಹಾಬಾದ ಶಾಸನದಲ್ಲಿದೆ. ಈ ಭಾಗದಲ್ಲಿ ಗುಪ್ತ ಹೆಸರಿನ ಗುತ್ತಿಗನೂರು, ಗುತ್ತ ಪೊಳಲ, ಗುತ್ತಲ(ಗುತ್ತಿ) ಎಂಬ ಹೆಸರಿನ ಗ್ರಾಮಗಳಿವೆ. ಗುಪ್ತರಿಗೂ ಕದಂಬರಿಗೂ ವೈವಾಹಿಕ ಸಂಬಂಧ ಬೆಳೆದ ಉಲ್ಲೇಖಗಳಿವೆ[೫].

ಕ್ರಿ ಶ ನಾಲ್ಕನೆಯ ಶತಮಾನದ ಪ್ರಥಮ ಪಾದದಲ್ಲಿ ಎರಡು ಕನ್ನಡ ರಾಜ ಮನೆತನದವರು ಉತ್ತರ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಪ್ರತ್ಯೇಕ ಹಾಗೂ ಸ್ವತಂತ್ರವಾದ ರಾಜ್ಯಗಳನ್ನು ಸ್ಥಾಪಿಸಿದರು. ಅವರು ಕ್ರಮವಾಗಿ ಬನವಾಸಿಯ ಆದಿ ಕದಂಬರು ಮತ್ತು ತಲಕಾಡಿನ ಗಂಗರು ತಮ್ಮದೇ ಆದ ಸ್ವತಂತ್ರ ರಾಜ್ಯಗಳನ್ನು ಸ್ಥಾಪಿಸಿಕೊಳ್ಳುವ ಮೊದಲು ಕನ್ನಡೇತರ ಅರಸರೊಂದಿಗೆ ಈ ವಂಶದವರು ಯುದ್ಧಗಳನ್ನು ಎಸಗಬೇಕಾಯಿತು.

ಉತ್ತರ ಕರ್ನಾಟಕದ ಧಾರವಾಡ-ಕಾರವಾರ- ಶಿವಮೊಗ್ಗ ಪ್ರದೇಶದಲ್ಲಿ ಚುಟು ವಂಶದವರು

ಶಾತವಾಹನರ ನಂತರ ಅಧಿಕಾರಕ್ಕೆ ಬಂದಿದ್ದರು. ಇದು ಸುಮಾರು ಮೂರನೆಯ ಶತಮಾನದ ಕಾಲ, ಚುಟು ಮನೆತನದ ಶಿವಸ್ಕಂದವರ್ಮನು ಕೊಟ್ಟದತ್ತಿಯನ್ನು ಕದಂಬ ಅರಸನೊಬ್ಬನು (ಕದಂಬಾನಾಮ ರಾಜಾ) ದೃಢೀಕರಿಸಿದನು. ಅನಂತರದಲ್ಲಿ ಪಲ್ಲವರು ಚುಟು ಅರಸರ ರಾಜ್ಯವನ್ನು ವಶಪಡಿಸಿ ಕೊಂಡರು[೬]. ಬನವಾಸಿ ಕದಂಬರು ಉಚ್ಚಂಗಿದುರ್ಗದವರೆಗೆ ರಾಜ್ಯ ವಿಸ್ತರಿಸಿದ್ದರು ಕ್ರಿ.ಶ. ೬ ನೇ ಶತಮಾನದಲ್ಲಿ ಬಾದಾಮಿ ಚಾಲುಕ್ಯರು ಕದಂಬರನ್ನು ಸೋಲಿಸಿ, ಈ ಪ್ರದೇಶಗಳನ್ನು ಪಡೆದು ಕೊಂಡರು. ಆದರೂ ಕದಂಬರ ಆಳ್ವಿಕೆಯಲ್ಲಿ ಈ ಪ್ರದೇಶ ನೇರ ಆಳ್ವಿಕೆಗೆ ಒಳಪಟ್ಟಿದ್ದಿತು. 'ಕದಂಬಳಿಗೆ ನಾಡು' ಇದಾಗಿತ್ತು. 'ಕದಂಬಳಿಗೆ ಸಾಸಿರ' ವು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ (ಹರಪನಹಳ್ಳಿ– ದಾವಣಗೆರೆ) ತಾಲೂಕುಗಳು ಸೇರಿದ್ದವು. ಚಿತ್ರದುರ್ಗ, ಚಳ್ಳಕೆರೆ, ಜಗಳೂರು, ದಾವಣಗೆರೆ ಇತರ ತಾಲೂಕುಗಳ ಕೆಲವು ಗ್ರಾಮಗಳು ಉಚ್ಚಂಗಿ ೩೦, ಕದಂಬಳಿಗೆ ಸಾಸಿರದ ಉಪವಿಭಾಗವಾಗಿತ್ತು[೭].

ಬಾದಾಮಿ ಚಾಲುಕ್ಯರು ಕ್ರಿ.ಶ.ಸು.೫೪೦ ರಿಂದ ೭೫೩ ರವರೆಗೆ ಕರ್ನಾಟಕದಲ್ಲಿ ಪರಮಾಧಿಕಾರಿಗಳಾಗಿ ಆಳಿ, ಕರ್ನಾಟಕವನ್ನು ಮೊದಲ ಬಾರಿ ಏಕಾಡಳಿತಕ್ಕೆ ಒಳಪಡಿಸಿದರು[೮]. ಅಖಂಡ ಕರ್ನಾಟಕ ರಾಜ್ಯವನ್ನು ಏಕಚ್ಛತ್ರದ ಅಡಿಗೆ ತಂದ ಗೌರವವು 'ದಕ್ಷಿಣಾಪಥ ಪೃಥ್ವೀಸ್ವಾಮಿ'ಯಾದ ಬಾದಾಮಿಯ ಚಾಲುಕ್ಯ ಇಮ್ಮಡಿ ಪುಲಕೇಶಿಗೆ ಸಲ್ಲುತ್ತದೆ. ಗಂಗ ಮತ್ತು ಕದಂಬರ ಆಡಳಿತಕ್ಕೆ ಒಳಪಟ್ಟು ವಿಭಜಿತವಾಗಿದ್ದ ಕರ್ನಾಟಕವನ್ನು ಒಂದಾಗಿ ಬೆಸೆದು, ಏಕಾಡಳಿತಕ್ಕೆ ಒಳಪಡಿಸಿ ವಿಂಧ್ಯದಿಂದ ಕಾವೇರಿಯವರೆಗಿನ ವಿಶಾಲ ಭೂಪ್ರದೇಶದ ಮೇಲೆ ಇವನು ಕಟ್ಟಿದ ಸಾಮ್ರಾಜ್ಯವು ಐದು ಶತಮಾನಕ್ಕೂ ದೀರ್ಘಕಾಲ ಮುಂದುವರಿದು, ಕರ್ನಾಟಕದ ಕೀರ್ತಿಯನ್ನು ಭಾರತದ ಉದ್ದಗಲಕಷ್ಟೇ ಅಲ್ಲ, ಸಾಗರಗಳಾಚೆಯೂ ಹರಡುವಂತೆ ಮಾಡಿತು. ಈತನ ಉತ್ತರಾಧಿಕಾರಿಗಳಾದ ಬಾದಾಮಿಯ ಚಾಲುಕ್ಯರೂ, ರಾಷ್ಟ್ರಕೂಟ ಅರಸರೂ, ಮುಂದೆ ಕಲ್ಯಾಣದ ಚಾಲುಕ್ಯರೂ ಈ ಸಾಮ್ರಾಜ್ಯವನ್ನು ಮುಂದುವರಿಸಿಕೊಂಡು ಬಂದು, ಮುಂದೆ ಸೇವುಣ (ಯಾದವ), ಹೊಯ್ಸಳ ಸಾಮ್ರಾಜ್ಯ ದ್ವಂದ್ವದಿಂದಾಗಿಯೇ ಕರ್ನಾಟಕ ಮತ್ತೆ ಒಡೆಯುವ ಸ್ಥಿತಿಬಂತು. ಪುಲಿಕೇಶಿಯು ಕಟ್ಟಿದ ಈ ವಿಶಾಲ ಸಾಮ್ರಾಜ್ಯವು ಈಗಿನ ಕರ್ನಾಟಕವನ್ನಷ್ಟೇ ಅಲ್ಲ ಈಗಿನ ಪೂರ್ತಿ ಮಹಾರಾಷ್ಟ್ರ, ಗೋವಾ ಮತ್ತು ಆಂಧ್ರಗಳನ್ನು ದಕ್ಷಿಣ ಗುಜರಾತ್ ಅಲ್ಲದೆ ಮಧ್ಯಪ್ರದೇಶ, ಒರಿಸ್ಸಾ ಹಾಗೂ ತಮಿಳುನಾಡಿನ ಭಾಗಗಳನ್ನು ಒಳಗೊಂಡಿತ್ತು. 'ಮಹಾರಾಷ್ಟ್ರಕತ್ರಯ'ಗಳೆನಿಸಿದ ಮೂರು ಮಹಾಪ್ರಾಂತ್ಯಗಳುಳ್ಳ ೯೯೦೦೦ ಗ್ರಾಮಗಳ ಸಾಮ್ರಾಜ್ಯ ಆತನದಾಗಿತ್ತೆಂದು ಐಹೊಳೆ ಶಾಸನ ಹೇಳಿದೆ[೯].

ಬಾದಾಮಿ ಚಾಲುಕ್ಯರ ಕಾಲಕ್ಕೆ ಅಭಿವೃದ್ಧಿ ಪಥದಲ್ಲಿದ್ದ ಬಳ್ಳಾರಿ ಪ್ರದೇಶವನ್ನು ೧ನೇ ಕೀರ್ತಿವರ್ಮ, ೨ನೇ ಪುಲಿಕೇಶಿ ಮತ್ತು ಮಕ್ಕಳನ್ನು ಸಾಕಷ್ಟು ಸುಧಾರಣೆಗೊಳಿಸಿದ್ದು ಸ್ಮರಣೀಯ, ಕುರುಗೋಡಿನ ಶಾಸನ ೨ನೇ ಪುಲಕೇಶಿ ಮತ್ತು ಮಕ್ಕಳನ್ನು ಉಲ್ಲೇಖಿಸುತ್ತದೆ. ಕ್ರಿ.ಶ.೭ನೇ ಶತಮಾನದಲ್ಲಿ ಚಾಲುಕ್ಯರ ವಿನಯಾದಿತ್ಯ ಪಂಪಾತೀರ್ಥದಲ್ಲಿ ತಂಗಿದ್ದು, ಸ್ವಲ್ಪಭೂಮಿಯನ್ನು ದತ್ತಿಬಿಟ್ಟಿದ್ದು ನಿಜಸಂಗತಿ[೧೦].

ಬಾದಾಮಿಯ ಚಾಲುಕ್ಯರನ್ನು ಪದಚ್ಯುತಗೊಳಿಸಿ ರಾಷ್ಟ್ರಕೂಟರು ಎಂಟನೆಯ ಶತಮಾನದ ಮಧ್ಯಭಾಗದಿಂದ ದಖ್ಖಣದ ವಿಶಾಲಸಾಮ್ರಾಜ್ಯದ ಸ್ವಾಮಿಗಳಾದರು[೧೧]. ಕ್ರಿ.ಶ.೭೫೩ರಲ್ಲಿ ರಾಷ್ಟ್ರಕೂಟ ಅರಸ ದಂತಿದುರ್ಗನು ಚಾಲುಕ್ಯ ಅರಸ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ಮಾಳಖೇಡದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಸ್ಥಾಪಿಸುತ್ತಾನೆ. ಇವರಲ್ಲಿ ಒಂದನೇ ಕೃಷ್ಣ, ಧ್ರುವ, ೩ನೇ ಗೋವಿಂದ, ಅಮೋಘ ವರ್ಷ ನೃಪತುಂಗರ ಕಾಲಕ್ಕೆ ರಾಷ್ಟ್ರಕೂಟರು ಉಚ್ಛ್ರಾಯಸ್ಥಿತಿ ತಲುಪಿದರು. ಬಳ್ಳಾರಿ ಪ್ರದೇಶಕ್ಕೆ ಅನ್ವಯಿಸಿ ಹೇಳುವುದಾದರೆ ರಾಷ್ಟ್ರಕೂಟರ ಹನ್ನೊಂದು ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿದ್ದು, ಅವು ರಾಷ್ಟ್ರಕೂಟ ಮುಮ್ಮಡಿ ಇಂದ್ರ, ಮೂರನೇಯ ಕೃಷ್ಣ ಅವನ ತಮ್ಮ ಖೊಟ್ಟಿಗ ಹಾಗೂ ಕೃಷ್ಣನ ಮಗ ಇಂದ್ರನ ಕಾಲದವಾಗಿವೆ. ಈ ಶಾಸನಗಳು ಬಾಗಳಿ, ಕುಡಿತಿನಿ, ಕಡಬಗೆರೆ, ಚಿರಸ್ತಹಳ್ಳಿ ಮತ್ತು ಕೊಳಗಲ್ಲು ಗ್ರಾಮಗಳಲ್ಲಿ ದೊರೆತಿವೆ[೧೨]. ಕಲ್ಯಾಣದ ಚಾಲುಕ್ಯರನ್ನು ಬಾದಾಮಿ ಚಾಲುಕ್ಯ ಮನೆತನದಿಂದ ಬೇರೆಯಾಗಿಸಲು ಹಾಗೆಂದು ವರ್ಣಿಸಲಾಗಿದೆ. ಅವರು ಇಂದಿನ ಬೀದರ್ ಜಿಲ್ಲೆಯಲ್ಲಿ ಕಲ್ಯಾಣದಿಂದ ಆಳುತ್ತಿದ್ದರು. ಕಲ್ಯಾಣ ಮನೆತನದ ಶಾಸನಗಳಲ್ಲಿ ಅವರು ಬಾದಾಮಿ ವಂಶದಿಂದಲೇ ಬಂದವರೆಂದು ಹೇಳಿದೆ. ಕಲ್ಯಾಣ ಮನೆತನದ ಮೊದಲನೆಯ ಅರಸ ಎರಡನೇ ತೈಲ ಕ್ರಿ.ಶ ೯೭೩ ರಲ್ಲಿ ಪ್ರಾರಂಭಿಸಿದನು. ರಾಷ್ಟ್ರಕೂಟ ಸಾಮ್ರಾಜ್ಯದ ಮೇಲೆ ಎರಡನೇ ಕರ್ಕನ ನಾಯಕತ್ವದಲ್ಲಿ ಪರಮಾರ ಆಕ್ರಮಣವಾದಾಗ ತೈಲನು ಆ ಅವಕಾಶವನ್ನು ಉಪಯೋಗಿಸಿಕೊಂಡು ಕರ್ಕನನ್ನು ಸೋಲಿಸಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ವಶಪಡಿಸಿಕೊಂಡನು.

ಸತ್ಯಾಶ್ರಯ ಎರಡನೆಯ ತೈಲನ ನಂತರ ಇರಿವಬೆಡಂಗ ಎಂದೂ ಬಿರುದು ಧರಿಸಿದ ಸತ್ಯಾಶ್ರಯನು ತಂದೆಯ ರಾಜ್ಯ ವಿಸ್ತರಣ ನೀತಿಯನ್ನು ಮುಂದುವರಿಸಿದನು. ಸತ್ಯಾಶ್ರಯನಿಗೆ ಗಂಡುಮಕ್ಕಳಿದ್ದಂತೆ ತೋರುವುದಿಲ್ಲ ಹೀಗಾಗಿ ಇವನ ನಂತರ ಐದನೇ ವಿಕ್ರಮಾದಿತ್ಯನು ಸತ್ಯಾಶ್ರಯನ ಸೋದರಳಿಯ, ದಸವರ್ಮನ ಮಗ ಅವನದು ಅಲ್ಪ ಅವಧಿಯ ಆಳ್ವಿಕೆ, ನಂತರ ಅವನನ್ನು ಬದಿಗೊತ್ತಿ ವಿಕ್ರಮಾದಿತ್ಯನ ಇನ್ನೊಬ್ಬ ಸೋದರ ೨ನೇ ಜಯಸಿಂಹನು ಸಿಂಹಾಸನವನ್ನೇರಿದನು ಜಯಸಿಂಹನ ನಂತರ ಅವನ ಮಗ ಸೋಮೇಶ್ವರ ಪಟ್ಟಕ್ಕೆ ಬಂದನು. ಇವನ ನಂತರ ಎರಡನೇ

ಸೋಮೇಶ್ವರ ಅನಂತರ ಆರನೇ ವಿಕ್ರಮಾದಿತ್ಯನು ಸಿಂಹಾಸಾರೋಹಣ ಮಾಡಿದ ಇವನ ನಂತರ ೩ನೇ ಸೋಮೇಶ್ವರನು ತಂದೆ ವಿಕ್ರಮಾದಿತ್ಯನ ಸ್ಥಾನಕ್ಕೆ ೧೧೨೭ರಲ್ಲಿ ಬಂದನು. ಸೋಮೇಶ್ವರನ ನಂತರ ಅವನ ಮಗ ಎರಡನೇ ಜಗದೇಕ ಮಲ್ಲ(೧೧೩೯, ೧೧೪೯) ಪಟ್ಟಕ್ಕೆ ಬಂದನು[೧೩]. ಕ್ರಿ ಶ ೧೧೫೦ ರ ಶಾಸನವೇ (ಹಡಗ. ೧೦೭) ಬಳ್ಳಾರಿ ಜಿಲ್ಲೆಯಲ್ಲಿ ದೊರೆಯುವ ಇಮ್ಮಡಿ ಜಗದೇಕಮಲ್ಲನ ಅಂತ್ಯಕಾಲದ ಶಾಸನ. ಬಸವಯ್ಯ ಎಂಬ ಹೆಸರಿನ ವ್ಯಕ್ತಿ ಹೆಸರು ಮತ್ತು ಆತನು ತನ್ನ ಹೆಸರಿನಲ್ಲಿ ಕಟ್ಟಿಸಿದ ಬಸವೇಶ್ವರರ ದೇವಾಲಯದ ಉಲ್ಲೇಖ ಈ ಶಾಸನದಲ್ಲಿದೆ. ಕ್ರಿ ಶ ೧೧೫೪ ರ ಹಳ್ಯದ ಶಾಸನವು (ಕೂಡ್ಲಿ-೩) ತ್ರಿಭುವನಮಲ್ಲನು (ಮೂರನೆಯ ತೈಲಪ) ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಂತೆ ಹೇಳಿದೆ (ಕ್ರಿ ಶ ೧೧೬೦ ರ ಬಾಗಳಿ ಮತ್ತು ಕ್ರಿ ಶ ೧೧೭೧ ರ(ಹರಪ-೩೯೨-೯೪) ಮಾಡಲೆಗೆರೆ ಶಾಸನದಲ್ಲಿ ಚಾಳುಕ್ಯ ದೊರೆ ಜಗದೇಕ ಮಲ್ಲನು ಆಳುತ್ತಿದ್ದಂತೆ ಹೇಳಲಾಗಿದೆ[೧೪].

ಹನ್ನೊಂದನೆಯ ಶತಮಾನದ ಪ್ರಾರಂಭದಿಂದಲೇ ಉತ್ತರ ಭಾರತದಲ್ಲಿ ಪ್ರಮುಖ ರಾಜಕೀಯ ಬದಲಾವಣೆಗಳಾದುದನ್ನು ಚರಿತ್ರೆ ದಾಖಲಿಸಿದೆ. ಹೀಗೆ ಉಂಟಾದ ಸ್ಥಿತ್ಯಂತರಗಳು ಹದಿಮೂರನೆಯ ಶತಮಾನದ ಕಾಲಕ್ಕೂ ಒಂದು ಹಂತವನ್ನು ತಲುಪಿರುವುದು ತಿಳಿದು ಬರುತ್ತದೆ. "ಕ್ರಿ. ಶ. ೧೧೫೦ ರ ಸುಮಾರಿಗೆ ಕಲ್ಯಾಣದ ಚಾಲುಕ್ಯ ಸಾಮ್ರಾಜ್ಯ ತನ್ನ ಅಸ್ತಿತ್ವದ ಕೊನೆಯ ಹಂತವನ್ನು ತಲುಪಿದಂತಾಗಿದ್ದಿತು. ಆರನೆಯ ವಿಕ್ರಮಾದಿತ್ಯನ ದೀರ್ಘ ಆಳ್ವಿಕೆ ಮುಗಿದು ಅವನ ಮಗ ಮೂರನೇ ಸೋಮೇಶ್ವರ ಮತ್ತು ಮೊಮ್ಮಗ ಎರಡನೆಯ ಜಗದೇಕಮಲ್ಲನ ಆಳ್ವಿಕೆಗಳು ಯಾವ ವಿಶೇಷ ಘಟನೆಗಳಿಲ್ಲದೆ ಕೊನೆಗೊಂಡವು, ಈ ಕಾಲಕ್ಕಾಗಲೇ ರಾಜ್ಯವನ್ನುರುಳಿಸುವ ಸಂಚೊಂದು ಒಳಗೊಳಗೆ ರೂಪಗೊಳ್ಳುತ್ತಿತ್ತು. ಮುಂದಿನ ಅರಸನಾದ ಮೂರನೆಯ ತೈಲಪನ ಕಾಲದಲ್ಲಿ(ಕ್ರಿ. ಶ. ೧೧೪೯-೬೨) ಅದು ಭುಗಿಲ್ಲೆಂದು ಹೊರಬಿದ್ದು ಚಾಲುಕ್ಯರ ಅಸ್ತಿತ್ವಕ್ಕೆ ಪೆಟ್ಟುಬಿದ್ದಿತು. ಈ ಆಂತರಿಕ ಕ್ರಾಂತಿಗೆ ಕೇಂದ್ರ ಬಿಂದುವಾದವನು ಕಲಚುರಿಯ ಎರಡನೇ ಬಿಜ್ಜಳ"[೧೫].

ಕಲ್ಯಾಣದ ಚಾಲುಕ್ಯರನ್ನು ಸು ೩೫ ವರ್ಷಗಳ ಕಾಲ ಮೂಲೆ ಗುಂಪು ಮಾಡಿ ರಾಜ್ಯ ಭಾರ ಮಾಡಿದ ಕಳಚೂರ್ಯರ ನಾಲ್ಕು ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ದೊರೆತಿವೆ. ಇವೆಲ್ಲವೂ ಕ್ರಿ ಶ ೧೧೬೭ ರಿಂದ ೧೧೭೭ರ ಅವಧಿಯವಾಗಿದೆ. ಕ್ರಿ ಶ ೧೧೬೭ ರ ನೀಲಗುಂದ ಶಾಸನದಲ್ಲಿ(ಹರಪ ೨೯) ಬಿಜ್ಜಳ ದೇವನ ಉಲ್ಲೇಖವಿದ್ದು ಅವನ ಸಾಮಂತನಾಗಿ ತ್ರಿಭುವನ ವೀರ ಪಾಂಡ್ಯನು ಆಳುತ್ತಿದ್ದ ತೆಕ್ಕಲ ಕೋಟೆಯಲ್ಲಿ ದೊರೆತ ಕಾಲದ ಉಲ್ಲೇಖವಿಲ್ಲದ (ಸಿರುಗು-೫೬) ಶಾಸನದಲ್ಲಿ ಬಿಜ್ಜಳನ ಉಲ್ಲೇಖವಿದ್ದು ಸಿಂಧ ಇಮ್ಮಡಿ ರಾಚಮಲ್ಲನು ಇವನ ಸಾಮಂತನಾಗಿದ್ದ ವಿಷಯ ಇದೆ. ಕ್ರಿ ಶ

೧೧೭೬ ರ ಶಾಸನದಲ್ಲಿ (ಬಳ್ಳಾ ೭) ಇದೇ ರಾಚಮಲ್ಲನನ್ನು ರಾಯಮುರಾರಿ ಸೋವಿದೇವನ ಮಾಂಡಳೀಕನೆಂದು ಹೆಸರಿಸಿದೆ. ಕ್ರಿ.ಶ. ೧೧೭೭ ರ ಶಾಸನದಲ್ಲಿ(ಬಳ್ಳಾ ೮) ಸಂಕಮದೇವನ ಉಲ್ಲೇಖವಿದ್ದು ಆತನು ಕಲ್ಯಾಣದಿಂದ ಆಳುತ್ತಿದ್ದಂತೆ ಉಲ್ಲೇಖಿಸಿದೆ[೧೬].

ಸೇಉಣ(ಸೇವುಣ) ಅಥವಾ ದೇವಗಿರಿಯ ಯಾದವರು ಹೊಯ್ಸಳರ ಸಮಕಾಲೀನರಾಗಿ ಕರ್ನಾಟಕದ ಉತ್ತರ ಭಾಗಗಳನ್ನು ಈಗಿನ ಮಹಾರಾಷ್ಟ್ರದ ದೇವಗಿರಿ(ದೌಲತಾಬಾದ್) ಯಿಂದ ಆಳಿದವರು. ಮುಸ್ಲಿಂ ಬರಹಗಾರರು ಈ ವಂಶವನ್ನು ಯಾದವರು, ಎಂದೇ ಕರೆದಿದ್ದು ಡಾ॥ ಫ್ಲೀಟ್, ಡಾ॥ ಭಂಡಾರ್ಕರ್ ಇವರುಗಳು ಹಾಗೆಯೇ ಅವರನ್ನು ಕರೆದಿರುವರು[೧೭]. ಸೇವುಣರು ಸ್ವತಂತ್ರ ರಾಜರಾಗಿ ಬೆಳಕಿಗೆ ಬಂದದ್ದು ಕ್ರಿ.ಶ. ೧೨ನೆಯ ಶತಮಾನದ ಉತ್ತರಾರ್ಧದಲ್ಲಾದರೂ ಅವರ ರಾಜಕೀಯ ವೃತ್ತಿಯು ಎರಡು ಶತಮಾನಗಳ ಹಿಂದೆಯೇ, ಅಂದರೆ ಕ್ರಿ.ಶ. ೧೦ನೆಯ ಶತಮಾನದಲ್ಲೇ ಪ್ರಾರಂಭವಾಗಿತ್ತು. ಸೇವುಣ ಚಂದ್ರನು ಮನೆತನದ ಮೊದಲನೆಯ ಸದಸ್ಯ ಮತ್ತು ಅವನಿಂದಾಗಿ ವಂಶಕ್ಕೇ ಸೇವುಣ ಎಂಬ ಹೆಸರು ಬಂದಿತು. ಅವನ ಅಧೀನದಲ್ಲಿದ್ದ ರಾಜ್ಯಕ್ಕೂ ಸೇವುಣ ದೇಶವೆಂದೇ ಹೆಸರಾಯಿತು[೧೮]. ಸೇವುಣರಲ್ಲಿ ಪ್ರಮುಖವಾಗಿ ಮೂರನೇ ಭಿಲ್ಲಮ ಎರಡನೇ ಸಿಂಘಣ ಅತ್ಯಂತ ಘನವಂತ ಅರಸರು. ಸಿಂಘಣನ ಉತ್ತರಾಧಿಕಾರಿ ಕನ್ನರ ಅಥವಾ ಕೃಷ್ಣನು ತಾನು ಪಟ್ಟಕ್ಕೆ ಬಂದಕೊಡಲೇ ಮಾಳ್ವದ ಅರಸನನ್ನು ಗುಜರಾತಿನ ವೀಸಲದೇವನನ್ನು ಸೋಲಿಸಿದನಲ್ಲದೆ ಬೆಳಗುತ್ತಿಯ ಸಿಂದರ ರಾಜ್ಯವನ್ನು ಸಾಮ್ರಾಜ್ಯದಲ್ಲಿ ಸೇರಿಸಿಕೊಂಡನು. ಚಿತ್ರದುರ್ಗ ಜಿಲ್ಲೆಯವರೆಗೂ ಅವನ ದಂಡಯಾತ್ರೆಗಳುಸಾಗಿದವು. ಅಮಲಾನಂದ, ಜಲ್ಹಣ ಮುಂತಾದ ವಿದ್ವಾಂಸರಿಗೆ ಕೃಷ್ಣನು ಆಶ್ರಯದಾತ. ಇವನ ನಂತರ ಈತನ ಸೋದರ ಮಹಾದೇವನಿಗೆ ೧೨೬೧ ರಲ್ಲಿ ಪಟ್ಟವಾಯಿತು[೧೯].

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕು ಉಜ್ಜಿನಿಗೆ ಸಂಬಂಧಿಸಿದ ಈ ಶಾಸನವು ಯಾದವ ಅರಸು ಮಹಾದೇವನ ೧೦ನೆಯ ವರ್ಷದ ಜೇಷ್ಠ್ಯಬ್ದ ೧೦ನೇ ಸೋಮವಾರದಂದು ಮಲ್ಲಿನಾಥದೇವರ ನಂದಾದೀವಿಗೆಗೆ ದಾನ ನೀಡಿದ ಉಲ್ಲೇಖವಿದೆ ಶಾಸನದಲ್ಲಿ ಸರ್ವಾಧಿಕಾರಿ ತಿಪ್ಪರಸ, ಬರ್ಮರಸ, ಚವುಡರ್ಸರ ಉಲ್ಲೇಖವಿದೆ[೨೦]. ಹೀಗಾಗಿ ಸೇವುಣರ ಮಹಾದೇವನಿಗೆ ಸಂಬಂಧಿಸಿದ ಈ ಶಾಸನ ಉಜ್ಜಯಿನಿಯ ಮರುಳಸಿದ್ಧರ ದೇವಾಲಯಕ್ಕೆ ಸಂಬಂಧಿಸಿದ ವಿಷಯವಿರುವುದರಿಂದ ಸೇವುಣರ ರಾಜಕೀಯ ಇತಿಹಾಸ ಇಲ್ಲಿ ಮಹತ್ವ ಪಡೆದಿದೆ.

ಕಾಕತೀಯರು ದುರ್ಜಯ ವಂಶಕ್ಕೆ ಸೇರಿದವರು, ತಮ್ಮ ಬಹು ಪ್ರಾಚೀನವಾದ ಪೂರ್ವಜ ಕರಿಕಾಲಚೋಳನೆನ್ನುವವನು ಕಾಕತೀಪುರವನ್ನು ಸ್ಥಾಪಿಸಿದನು. ಅಥವಾ ಅಲ್ಲಿ ನೆಲೆಸಿದನು. ಕಾಕತೀಯರು ಅಧಿಕಾರಕ್ಕೆ ಬರುವ ಸಮಯದಲ್ಲಿ ಕರ್ನಾಟಕದ ರಾಜಕೀಯ ಭೌಗೋಳಿಕ

ಪರಿಸ್ಥಿತಿಯು ಅವರು ಯಶಗಳಿಸಿ ಪ್ರಸಿದ್ಧರಾಗಲು ಸಾಕಷ್ಟು ಅವಕಾಶಗಳನ್ನು ಒದಗಿಸಿದಂತೆ ತೋರುತ್ತದೆ. ಕಾಕತೀಯರು ಮೂಲತಃ ರಾಷ್ಟ್ರಕೂಟರ ಅಧೀನರಾಗಿದ್ದರು. ಮತ್ತು ವೆಂಗಿಯ ಪೂರ್ವ ಚಾಲುಕ್ಯರ ಸಾಮಂತರೂ ಆಗಿದ್ದರು. ಅವರ ಸ್ಥಾನದಲ್ಲಿ ಪಶ್ಚಿಮ ಚಾಲುಕ್ಯರು ಬಂದಾಗ ಕಾಕತೀಯರೂ ತಮ್ಮ ನಿಷ್ಠೆಯನ್ನು ಬದಲಿಸಿ ಅವರ ವಿಧೇಯ ಸಾಮಂತರಾಗಿ ಕೆಲ ಸಮಯ ಕಳೆದರು, ಆದರೆ ೧೫೦ ವರ್ಷಗಳ ಕಾಲ ಮೆರೆದ ಪಶ್ಚಿಮ ಚಾಲುಕ್ಯ ಚಕ್ರಾಧಿಪತ್ಯವು ೧೨ನೆಯ ಶತಮಾನದ ಮಧ್ಯಭಾಗದ ವೇಳೆಗೆ ಅವನತಿಗೊಂಡಿತು. ಕಾಕತೀಯ ಆರಸರಲ್ಲಿ ಗಣಪತಿಯು ಅತ್ಯಂತ ದಕ್ಷನೂ ಸಮರ್ಥನೂ ಆದ ರಾಜ.[೨೧].

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕು ಉಜ್ಜನಿಯಲ್ಲಿನ ಗುರುಗಳಿಗೆ ದೇವಗಿರಿಯ ಯಾದವರು ಮತ್ತು ಕಾಕತೀಯ ಗಣಪತಿದೇವ(೧೨೧೬) ಕಾಣಿಕೆ ಸಲ್ಲಿಸುತ್ತಾರೆ[೨೨] ಎಂಬ ವಿಷಯದಲ್ಲಿ ಕಾಕತೀಯರ ಇತಿಹಾಸ ಪ್ರಮುಖವಾಗಿದೆ. ಕರ್ನಾಟಕದಲ್ಲಿ ಉಚ್ಚಂಗಿ ಪಾಂಡ್ಯರ ಬಗ್ಗೆ ಉಲ್ಲೇಖವಿದೆ. ಕನ್ನಡ ಅರಸು ಮನೆತನಗಳಲ್ಲಿ ಹಳೆಯದಾದ ಕದಂಬರಿಗೆ 'ಉಚ್ಚಂಗಿ ಗಿರಿನಾಥ' ಎಂಬುದು ಒಂದು ಮುಖ್ಯವಾದ ಬಿರುದಾಗಿರುತ್ತದೆ. ಉಚ್ಚಂಗಿದುರ್ಗವೆಂಬ ಪಟ್ಟಣಗಳು ಎರಡು ಪುರಾತನವಾದ ಇವೆ. ಮೊಳಕಾಲ್ಮೂರುವಿನಿಂದ ೬ ಮೈಲಿಯಲ್ಲಿ ಉಚ್ಚಂಗಿದುರ್ಗವೆಂಬ ಪುರಾತನ ಪಟ್ಟಣವಿದೆ. ಇದೇ ಹೆಸರಿನ ಇನ್ನೊಂದು ಪಟ್ಟಣವು ಇಂದಿನ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲೂಕಿನಲ್ಲಿದೆ. ಹುಲ್ಲೂರು ಶ್ರೀನಿವಾಸ ಜೋಯಿಸರು ಇಂದಿನ ದಾವಣಗೆರೆ ಬಳಿ ಇರುವ ಉಚ್ಚಂಗಿಯೆ ಕದಂಬ ಹಾಗೂ ಪಾಂಡ್ಯರ ಕಾಲಕ್ಕೆ ಉಪ ರಾಜಧಾನಿಯಾಗಿತ್ತೆಂಬುದಾಗಿ ತಿಳಿಸಿದ್ದಾರೆ. ಹರಪನಹಳ್ಳಿಯ ಉಚ್ಚಂಗಿದುರ್ಗವು ಅನಾದಿ ಕಾಲದಿಂದಲೂ ಪ್ರಸಿದ್ಧಿಯಾಗಿದೆ. ನೊಣಂಬವಾಡಿಯ ಮಹಾರಾಜಧಾನಿ ಎಂದು ಶಾಸನಗಳಲ್ಲಿ ಹೊಗಳಲ್ಪಟ್ಟಿದೆ. ಗಂಗರಾಜನಾದ ಮಾರಸಿಂಹನು ಈ ಕೋಟೆಯನ್ನು ಸಾಧಿಸಿ ನೊಳಂಬ ಕುಲಾಂತಕನೆಂದು ಬಿರುದನ್ನು ಪಡೆದನು. ಈ ಸ್ಥಳದಲ್ಲಿ ದೊರೆತಿರುವ ಶಾಸನಗಳಿಂದ ಚಾಲುಕ್ಯತ್ರೈಲೋಕ್ಯಮಲ್ಲ (ಕ್ರಿ.ಶ. ೧೦೬೪), ವಿಜಯ ಪಾಂಡ್ಯದೇವ (ಕ್ರಿ. ಶ ೧೧೬೫), ನಿಗಲಂಕ ಪಾಂಡ್ಯ, ವೀರಪಾಂಡ್ಯ (ಕ್ರಿ. ಶ ೧೧೬೦) ತ್ರಿಭುವನ ಮಲ್ಲ ಪಾಂಡ್ಯ ಇವರು ಈ ಸ್ಥಳದಿಂದ ರಾಜ್ಯಭಾರ ಮಾಡಿದಂತೆ ತಿಳಿದು ಬರುತ್ತದೆ[೨೩].

ಕರ್ನಾಟಕದಲ್ಲಿ ಕ್ರಿ. ಶ ೧೨ನೆಯ ಶತಮಾನದಲ್ಲಿ ಮರುಳಸಿದ್ಧರ ಜೀವನ ಚರಿತ್ರೆಯಲ್ಲಿ ನೊಣಬೆ ಚಕ್ರೇಶ್ವರನ ಪ್ರಸ್ತಾಪ ಬರುತ್ತದೆ. ಈ ನೊಣಬೇಶನು ಯಾರು ಎಂಬುದನ್ನು ನಿರ್ಧರಿಸಲು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಈ ಗ್ರಂಥದಲ್ಲಿ ವ್ಯಕ್ತವಾಗುವ ಮರುಳಸಿದ್ಧರ ಪುಣ್ಯಕ್ಷೇತ್ರಗಳೆಲ್ಲಾ ಇಂದಿನ ದಾವಣಗೆರೆ ಜಿಲ್ಲೆಯ ಜಗಳೂರು, ದಾವಣಗೆರೆ ತಾಲೂಕು ಮತ್ತು ಬಳ್ಳಾರಿ ಜಿಲ್ಲೆಯ

ಕೂಡ್ಲಿಗಿ ತಾಲೂಕಿನಲ್ಲಿಯೂ ಇವೆ. ಈ ಭಾಗದ ರಾಜ್ಯಕ್ಕೆ ಕ್ರಿ ಶ ೧೦ ಮತ್ತು ೧೨ನೆಯ ಶತಮಾನದಲ್ಲಿ ನೊಳಂಬವಾಡಿ ಎಂದು ಹೆಸರಿತ್ತು. ಮೊದಲು ವಿಸ್ತಾರವಾದ ನೊಳಂಬವಾಡಿ ೩೨೦೦೦ ರಾಜ್ಯಕ್ಕೆ ನಿಡುಗಲ್ಲಿನಿಂದ ಆಳುತ್ತಿದ್ದ ನೊಳಂಬ ಪಲ್ಲವರು ರಾಜರಾಗಿದ್ದರು. ಉಚ್ಚಂಗಿಯ ಪಾಂಡ್ಯರು ೧೦ ನೆಯ ಶತಮಾನದ ಕೊನೆಯಲ್ಲಿ ನೊಳಂಬವಾಡಿ ೩೨೦೦೦ ಪ್ರಾಂತ್ಯವನ್ನು ವಶಮಾಡಿಕೊಂಡಾಗ ನಿಡುಗಲ್ಲು ನೊಳಂಬರು ಈ ಪಾಂಡ್ಯರಲ್ಲಿ ಐಕ್ಯವಾಗಿ ಹೋದರು. ಅನಂತರ ಪಾಂಡ್ಯರೇ ೧೨ನೆಯ ಶತಮಾನದ ಅಂತ್ಯದವರೆಗೂ ಧರಣೀಯುವತಿಗೆ ಕಟನೂಪುರ ನೆನಿಪ ನೊಳಂಬವಾಡಿ ೩೨೦೦೦ ರಾಜ್ಯಕ್ಕೆ ಮಹಾಮಂಡಲೇಶ್ವರ-ರಾಗಿದ್ದರು. ವಿಜಯ ಪಾಂಡ್ಯದೇವ ಅಥವಾ ಕಾಮದೇವನೆಂಬ ಮಹಾಪರಾಕ್ರಮಿಯಾದ ಮಹಾಮಂಡ-ಲೇಶ್ವರನು ಕ್ರಿ.ಶ.೧೧೪೮ ರಿಂದ ೧೧೮೭ ರವರೆಗೂ ರಾಜನಾಗಿದ್ದನು. ಆನಂತರ ಕ್ರಿ.ಶ.೧೨೦೦ರ ವರೆಗೂ ಇವನು ಜೀವಿಸಿದ್ದಂತೆ ಆಧಾರಗಳಿವೆ. ಇಮ್ಮಡಿ ವೀರಬಲ್ಲಾಳ ಉಚ್ಚಂಗಿದುರ್ಗವನ್ನು ಸ್ವಾಧೀನ ಮಾಡಿಕೊಂಡು ಅನಂತರ ಶರಣು ಬಂದ ವಿಜಯಪಾಂಡ್ಯ ಅಥವಾ ಕಾಮದೇವನಿಗೆ ತದ್ರಾಜ್ಯವನ್ನು ಹಿಂದಕ್ಕೆ ಕೊಟ್ಟು ಹರಣಭರಣದಿಂದ ಖ್ಯಾತಿಯನ್ನು ಪಡೆದನು. ಮರುಳಸಿದ್ಧರು ಜನಿಸಿದಂದಿನಿಂದಲೂ ಬೇತೂರು ಯಾಗವನ್ನು ಕೆಡಿಸುವವರೆಗೂ ಸಂಚರಿಸಿದ ಊರುಗಳನ್ನೊಳಗೊಂಡ ನೊಳಂಬವಾಡಿ ರಾಜ್ಯಕ್ಕೆ ಅರಸನಾದ ವಿಜಯಪಾಂಡ್ಯನನ್ನೇ ಕವಿದೇವನು ನೊಣಬೇಶ ಎಂದು ಸಂಬೋಧಿಸಿದಂತೆ ವ್ಯಕ್ತವಾಗುವುದು. ಎಂದು ಹುಲ್ಲೂರು ಶ್ರೀನಿವಾಸ ಜೋಯಿಸರು ಅಭಿಪ್ರಾಯಪಡುತ್ತಾರೆ. ಉಜ್ಜಯಿನೀ ಸಿದ್ಧೇಶ್ವರ ದೇವಾಲಯದ ಹೊರ ಆವರಣದಲ್ಲಿ ಬಿದ್ದಿರುವ ಜಗದ್ಧಳ ಪಾಂಡ್ಯನ ಶಕ ೧೧೧೫ ನೇ ಸಂವತ್ಸರದ (೧೯೯೨ ಕ್ರಿ.ಶ) ಶಿಲಾ ಶಾಸನವು ಇದನ್ನು ಪುಷ್ಟೀಕರಿಸುತ್ತದೆ[೨೪].

ಮೂರು ಶತಮಾನಗಳಿಗಿಂತಲೂ ಹೆಚ್ಚು ಕಾಲಾವಧಿಗೆ ವಿಸ್ತರಿಸುವ ಹೊಯ್ಸಳರ ಆಳ್ವಿಕೆಯು ಮಧ್ಯಕಾಲೀನ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ತುಂಬಾ ಮುಖ್ಯವಾದ ಅಧ್ಯಾಯವಾಗಿದೆ. ರಾಜಕೀಯವಾಗಿ ಕಲ್ಯಾಣದ ಚಾಲುಕ್ಯರ ಅಧೀನರಾದ ಹೊಯ್ಸಳರು, ಕಾಲಕ್ರಮದಲ್ಲಿ ಚಾಲುಕ್ಯರು ಅವನತಿ ಹೊಂದಿದಾಗ ತಮ್ಮ ಸ್ವಾತಂತ್ರ್ಯವನ್ನು ಸ್ಥಾಪಿಸಿಕೊಂಡರು[೨೫]. ವಿಷ್ಣುವರ್ಧನನು ಅಧಿಕಾರಕ್ಕೆ ಬರುವವರೆಗೂ ಕಲ್ಯಾಣ ಚಾಲುಕ್ಯರ ಅಧೀನದಲ್ಲಿದ್ದರು. ಕ್ರಿ ಶ ೧೧೧೦-೧೧೧೪ ರಲ್ಲಿ ವಿಷ್ಣುವರ್ಧನನ ರಾಜ್ಯಕ್ಕೆ ಬಳ್ಳಾರಿ ಪ್ರದೇಶ ಸೇರಿತ್ತು. ಎರಡನೇ ಬಲ್ಲಾಳನು ನೊಳಂಬವಾಡಿಯನ್ನು ಹಲವು ಬಾರಿ ವಶಪಡಿಸಿಕೊಂಡಿದ್ದು, ಉಚ್ಚಂಗಿದುರ್ಗವನ್ನು ಉತ್ತರ ಭಾಗದ ರಾಜಧಾನಿಯಾಗಿ ಮಾಡಿಕೊಂಡ-ನಲ್ಲದೆ. ತುಂಗಭದ್ರಾ ನದಿಯನ್ನು ಉತ್ತರ ಸೀಮೆಯ ಗಡಿಯಾಗಿ ಮಾಡಿಕೊಂಡಿದ್ದನು. ವೀರನರಸಿಂಹನ ಆಳ್ವಿಕೆಯನ್ನು ಕೊಟ್ಟೂರಿನ ಶಾಸನ ತಿಳಿಸುತ್ತದೆ. ೧೩ನೆಯ

ಶತಮಾನದಲ್ಲಿ ಕುಮ್ಮಟದುರ್ಗ ಪ್ರಬಲ ರಾಜ್ಯವಾಗಿತ್ತು. ೧೩೨೭ ರವರೆಗೆ ಮಹಮದಿಯರ ವಿರೋಧವನ್ನು ತಡೆಗಟ್ಟಿದ ದೇಶಿಯ ಪ್ರಥಮ ಸಂಸ್ಥಾನವಾಗಿದೆ. ಸಿರಿಗುಪ್ಪ ತಾಲೂಕಿನ ಬಲ್ಕುಂದೆ. ತೆಕ್ಕಲಕೋಟೆ, ಕಂಪ್ಲಿ ಪ್ರದೇಶಗಳ ಮೇಲೆ ಇವರ ಹಿಡಿತವಿತ್ತು[೨೬]. ಕರ್ನಾಟಕದ ಚರಿತ್ರೆಯಲ್ಲಿ ೧೨ನೆಯ ಶತಮಾನದ ಶಿವಶರಣರಾದ ಮರುಳಸಿದ್ಧರು ಹೊಯಿಸಳರ ರಾಜಧಾನಿಯಾದ ದೋರಸಮುದ್ರ. ಇಂದಿನ ಹಳೆಯಬೀಡು. ರಾಜ್ಯದಲ್ಲಿ ತನ್ನ ಬಾಹುಬಲದಿಂದ ಚಕ್ರಾಧಿಪತ್ಯವನ್ನಾಗಿಕಟ್ಟಿ ತೆಂಕಣ ಚಕ್ರವರ್ತಿ ಎಂಬ ಬಿರುದಾಯ, ಸತ್ಯೈಕ ಬಾಂಧವನಾಗಿ ಇಮ್ಮಡಿ ವೀರ ಬಲ್ಲಾಳನು ಶೋಭಿಸುತ್ತಿದ್ದನು. ಆದ್ದರಿಂದಲೇ ಮರುಳಸಿದ್ಧರು ದೋರಸಮುದ್ರಕ್ಕೆ ಹೋಗಿರಬೇಕು. ವೀರಬಲ್ಲಾಳನು ಮರುಳಸಿದ್ಧರ ಘನಪಾಂಡಿತ್ಯವನ್ನೂ ಮಹಾತ್ಮೆಯನ್ನೂ ಕಂಡು ಅತ್ಯಾನಂದದಿಂದ ಅರಮನೆಗೆ ಆಹ್ವಾನಿಸಿ ರಾಜಯೋಗ್ಯವಾದ ಛತ್ರಿಚಾಮರಾದಿ ಬಿರುದುಗಳಿಂದ ಸನ್ಮಾನಿಸಿದುದು ಯೋಗ್ಯವೇ ಆಗಿದೆ[೨೭]. ದೇವಕವಿ ಸಿದ್ಧಲಿಂಗ ಚಾರಿತ್ರದಲ್ಲಿ ಬಲ್ಲಾಳನೃಪ ಎಂದು ಸ್ಮರಿಸಿರುವುದು ಇದಕ್ಕೆ ಪುಷ್ಟಿನೀಡಿದೆ. ದಕ್ಷಿಣ ಭಾರತದ ಇತಿಹಾಸದಲ್ಲಿ ಕ್ರಿ. ಶ ೧೩೩೬ ನೆಯ ವರ್ಷವು ಒಂದು ಮೈಲುಗಲ್ಲು, ಏಕೆಂದರೆ ವಿಜಯನಗರ ರಾಜ್ಯವು ಉದಿಸಿದ್ದು ಆ ವರ್ಷ. ಹೊಯ್ಸಳ ಮತ್ತು ಯಾದವ ವಂಶಗಳ ಉತ್ತರಾಧಿಕಾರಿಯಾಗಿ ಅದರ ಪ್ರಾರಂಭದ ಬೆಳವಣಿಗೆ ಕರ್ನಾಟಕದಲ್ಲಿ ಆಯಿತು. ತುಂಗಭದ್ರಾ ನದಿಯ ದಕ್ಷಿಣ ದಂಡೆಯುದ್ದಕ್ಕು ಹಾಗೂ ಸ್ವಲ್ಪ ಮಟ್ಟಿಗೆ ಉತ್ತರ ದಂಡೆಯ ಸಣ್ಣ ಪುಟ್ಟ, ಪ್ರದೇಶಗಳಿಗೆ ಅದು ವಿಸ್ತರಿಸಿತು. ಈ ಸಣ್ಣ ರಾಜ್ಯವು ಅವನತಿಕಾಲದಲ್ಲೇ ಒಂದು ದೊಡ್ಡ ಸಾಮ್ರಾಜ್ಯವಾಗಿ ಇಡೀ ದಕ್ಷಿಣ ಭಾರತವನ್ನು ಅವರಿಸಿಕೊಂಡಿತು. ದಕ್ಷಿಣ ಭಾರತದಲ್ಲಿದ್ದ ಹಲವು ಸಣ್ಣ ಪುಟ್ಟ ರಾಜ್ಯಗಳು ಆ ವೇಳೆಗೆ ತುರ್ಕಿ, ಆಫ್ಘನ್ ಆಕ್ರಮಣಗಳ ಪರಿಣಾಮವಾಗಿ ಕ್ಷೀಣಿಸಿ, ನಾಶ ಹೊಂದಿದ್ದುವು. ಕಾಲಗರ್ಭದಲ್ಲಿ ಮರಿಯಾಗಿಬಿಟ್ಟಿದ್ದವು. ವಿಜಯನಗರವು ಈಗ ಒಂದು ಸಣ್ಣ ಭಾಷಾ ಪ್ರದೇಶಕ್ಕೆ ಸೀಮಿತವಾಗಿ ಉಳಿಯದೆ, ವಸ್ತುತಃ ದಕ್ಷಿಣದ ಒಂದು ಚಕ್ರಾಧಿಪತ್ಯದೆತ್ತರಕ್ಕೆ ಬೆಳೆಯಿತು[೨೮].

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ, ನಾಲ್ಕು ವಂಶಗಳು ಆಳ್ವಿಕೆ ನಡೆಸಿದ್ದು ಸ್ಮರಣೀಯ, ಹರಿಹರ, ಬುಕ್ಕ, ಪ್ರೌಢದೇವರಾಯ, ಸಾಳುವನರಸಿಂಹ, ಶ್ರೀ ಕೃಷ್ಣ ದೇವರಾಯ ಮೊದಲಾದ ಅರಸರುಗಳಿಂದ ಅನೇಕ ರೀತಿಯ ಅಭಿವೃದ್ಧಿ ಚಟುವಟಿಕೆಗಳಾಗಿದ್ದವು. ಕೃಷ್ಣ ದೇವರಾಯನ ಕಾಲ ಸಮೃದ್ಧವಾಗಿದ್ದ ಬಗೆಯನ್ನು ಹೆಚ್ಚಾಗಿ ತಿಳಿಸಿದ್ದಾರೆ[೨೯]. ಸದಾಶಿವರಾಯ ಉಜ್ಜನಿ ಮಲ್ಲಿಕಾರ್ಜುನ ಲಿಂಗಕ್ಕೆ ಜೀರ್ಣೋದ್ಧಾರ ಮಾಡಲು ದಾನ ಕೊಡುತ್ತಾನೆ. ಅಚ್ಯುತಮಹಾರಾಯ ೧೫೨೯–೪೨ ರಲ್ಲಿ ತನ್ನ ಬೆಂಬಲಿಗ ಜರಿ ಮಲೆಯ ನಾಯಕ ಸಿದ್ಧರಾಜ ನಾಯಕನ ಮಗ ಪೆನ್ನಪ್ಪ ನಾಯಕನ ಜೊತೆಗೆ ಉಜ್ಜನಿಗೆ ಬಂದು ಶಾಸನ ಹೊರಡಿಸುತ್ತಾನೆ. ಲಕ್ಕಣ್ಣ ದಂಡೇಶನು ಜಗದ್ಗುರು ಸಿದ್ಧಮಲ್ಲೇಶ್ವರ

ಶಿವಾಚಾರ್ಯರಿಂದ ಶಿವಸಿದ್ಧಾಂತ ಉಪದೇಶ ಪಡೆದು 'ಶಿವತತ್ವ ಚಿಂತಾಮಣಿ' ಕೃತಿ ಬರೆದನೆಂದು ತಿಳಿದು ಬರುತ್ತದೆ. ಕ್ರಿ. ಶ ೧೩-೧೬ನೇ ಶತಮಾನದವರೆಗೆ ಮಲಿಕಾರ್ಜುನ ಲಿಂಗವೆಂದು ಅನಂತರ ಮರುಳಸಿದ್ಧೇಶ್ವರನ ಗುಡಿಯೆಂದು ಕರೆಯಲಾಗಿದೆ. ಪ್ರೌಢದೇವರಾಯ(೧೪೧೭-೧೪೪೬) ನರಸನಾಯಕ , ಕೃಷ್ಣದೇವರಾಯ, ಅಚ್ಯುತ ರಾಯರು ಈ ಬಗ್ಗೆ ಪ್ರೋತ್ಸಾಹ ಕೊಟ್ಟಿದ್ದಾರೆ[೩೦].

ವಿಜಯನಗರದ ಕಾಲದಲ್ಲಿಯೇ ಮೊದಲು ಗುಲ್ಬರ್ಗ ನಂತರ ಬೀದರ್‌ನಿಂದ ದಖ್ಖನ್ ಪ್ರಸ್ಥಭೂಮಿಯ ಉತ್ತರಭಾಗದಲ್ಲಿ ಆಳಿದ ರಾಜವಂಶ ಬಹಮನಿ ಅರಸರದು. ಬಹಮನ್ ಷಾಹಿಗಳೂ ವಿಜಾಪುರದ ಆದಿಲ್‌ಷಾಹಿಗಳೂ ಕಲೆಯ ಕ್ಷೇತ್ರದಲ್ಲಿ ಮಾಡಿದ ಸಾಧನೆಯಿಂದಲೂ ಕರ್ನಾಟಕದಲ್ಲಿ ಇಸ್ಲಾಂನ ಪ್ರಚಾರಕ್ಕೆ ನೆರವಾಗುವುದರಿಂದಲೂ ಇಲ್ಲಿನ ಸಂಸ್ಕೃತಿಗೆ ತಮ್ಮದೇ ಕೊಡುಗೆ ನೀಡಿದ್ದಾರೆ. ಈ ವಂಶದ ಕೊನೆ ಅರಸರಿಂದ ಬಿಜಾಪುರದ ೧ನೇ ಅಲಿ ಆದಿಲ್ ಷಾ ೧೫೬೮ರಲ್ಲಿ ರಾಜ್ಯವನ್ನು ಪಡೆದು ಕೊಂಡನು. ವಿಜಯನಗರ ಸಾಮ್ರಾಜ್ಯದ ಪತನದ ನಂತರ ಸ್ವತಂತ್ರ ಪಾಳೆಯಗಾರರು ಸಣ್ಣ-ಪುಟ್ಟ ಸಂಸ್ಥಾನಗಳು ಮತ್ತು ಬೇಡರಂಥ ಜನಸಮುದಾಯಗಳಿಗೆ ಆಡಳಿತಾತ್ಮಕವಾಗಿ ಪುನರ್ಜನ್ಮ ಸಿಕ್ಕಂತಾಯಿತು. ಕೆಳದಿ, ಚಿತ್ರದುರ್ಗ,ಹರಪನಹಳ್ಳಿ ಮತ್ತು ಜರಿಮಲೆ ಪಾಳೆಯಗಾರರ ಸಾಧನೆಗಳು ವಿಪುಲವಾಗಿದ್ದು ಇಂದಿಗೂ ಸ್ಮಾರಕಗಳ ಗತವೈಭವವನ್ನು ಸಾರುತ್ತವೆ. ಮೈಸೂರಿನ ಒಡೆಯರ ಕಾಲದ ಇತಿಹಾಸವು ಕರ್ನಾಟಕ ಮತ್ತು ಬಳ್ಳಾರಿ ವ್ಯಾಪ್ತಿಗೆ ಸಂಬಂಧಿಸಿದಂತೆ ಮಹತ್ವವಾಗಿದೆ. ಬಳ್ಳಾರಿಯ ಕೆಲವು ಸಂಸ್ಥಾನಗಳ ಮೇಲೆ ಹೈದರ್ ಮತ್ತು ಟಿಪ್ಪು ಆಗಾಗ ದಂಡೆಯಾತ್ರೆ ಮಾಡುತ್ತಿದ್ದರು. ಬ್ರಿಟಿಷರಿಂದ ಹತರಾದ ಹೈದರ್ ಆಲಿ ಮತ್ತು ಟಿಪ್ಪು ತರುವಾಯ ಮೈಸೂರು ರಾಜವಂಶದ ಮುಮ್ಮಡಿಕೃಷ್ಣರಾಜ ಒಡೆಯರ್ ಅವರಿಗೆ ಸಂಸ್ಥಾನವನ್ನು ೧೭೯೯ರಲ್ಲಿ ಒಪ್ಪಿಸಿದಾಗ ಅವರು ಐದು ವರ್ಷದ ಬಾಲಕರಾಗಿದ್ದು. ಹೈದರ್, ಟಿಪ್ಪು ಕಾಲದಲ್ಲಿ ಅಧಿಕಾರಿಯಾಗಿದ್ದ ಪೂರ್ಣಯ್ಯ ದಿವಾನರಾಗಿ ಆಡಳಿತ ನಿರ್ವಹಿಸಿದರು. ಕ್ರಿ. ಶ. ೧೮೦೦ ಡಿಸೆಂಬರನಲ್ಲಿ ಬಳ್ಳಾರಿ ಪ್ರದೇಶ ನಿಜಾಮನಿಂದ ಬ್ರಿಟಿಷರಿಗೆ ಹಸ್ತಾಂತರವಾಯಿತು. ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಚಳುವಳಿಯಲ್ಲಿ ಮತ್ತು ಏಕೀಕರಣ ಚಳುವಳಿಯಲ್ಲಿಯೂ ಮೈಸೂರು ಸಂಸ್ಥಾನವು ಸೇರಿದಂತೆ ಬಳ್ಳಾರಿಯೂ ಸಹ ಪ್ರಮುಖವಾದುದು.

ಮರುಳಸಿದ್ಧರ ಜೀವನ ಚಾರಿತ್ರಿಕ ನೆಲೆಯಲ್ಲಿ ಮತ್ತು ಅವರು ಅಲೆದಾಡಿದ ಕರ್ನಾಟಕದ ಅನೇಕ ಪ್ರದೇಶಗಳ ವ್ಯಾಪ್ತಿಯಲ್ಲಿ, ಆ ಕಾಲದ ರಾಜಕೀಯ ಹಿನ್ನಲೆ ಚಾರಿತ್ರಿಕವಾಗಿ ಮಹತ್ವದ ಸ್ಥಾನ ಪಡೆಯುತ್ತದೆ. ಭಾರತದಲ್ಲಿಯೇ ಬಲಿಷ್ಠರಾಗಿದ್ದ ಹೊಯ್ಸಳರು, ಮತ್ತು ಉಚ್ಚಂಗಿ ಪಾಂಡ್ಯರ

ಕಾಲಾವಧಿಯಲ್ಲಿ ಮರುಳಸಿದ್ಧರ ಹೋರಾಟದ ಚಿತ್ರಣಗಳು ಇಲ್ಲಿ ಎಡೆ ಪಡೆಯುತ್ತವೆ. ಹಾಗೂ ಮರುಳಸಿದ್ಧರಿಂದ ಸ್ಥಾಪಿತವಾದ ತರಳಬಾಳು ಸದ್ಧರ್ಮ ಪೀಠದ ಸ್ಥಾಪನೆಯ ನಂತರ ೧೬ ಮತ್ತು ೧೮ನೇ ಶತಮಾನದಲ್ಲಿ ಪಾಳೆಗಾರರ ಕಾಲದಲ್ಲಿ ವೀರಶೈವ ಧರ್ಮದಲ್ಲಿ ಹುಟ್ಟಿಕೊಂಡ ಅಂತರಿಕ ಚಳುವಳಿಗಳು. ಆ ಮೂಲಕ ಜನತೆಯಲ್ಲಿ ವಿಸ್ಮಯಕರವಾದ ಬದಲಾವಣೆಗಳಾದವು. ಹೋರಾಟದ ಪರಂಪರೆಯೊಂದನ್ನು ಕಟ್ಟಿಕೊಡುತ್ತ. ಮನುಷ್ಯ ಪ್ರಯತ್ನಗಳಿಗೆ ನೀಡಿದ ಗೌರವದ ಸಂಗತಿಗಳಾಗಿ ಕಾಣುತ್ತವೆ. ವಿಜಯ ಪಾಂಡ್ಯ ದೇವ, ಎರಡನೇ ಬಲ್ಲಾಳರ, ಮೂಲಕ ಮರುಳಸಿದ್ದರು ಗಮನ ಸೆಳೆಯುವದರಿಂದ ಈ ಸಂದರ್ಭದ ರಾಜಕೀಯ ಇತಿಹಾಸಕ್ಕೆ ಹೊಸ ತಿರುವು ಮೂಡುತ್ತದೆ.

❖ **ಧಾರ್ಮಿಕ.**

ಕರ್ನಾಟಕ ಸರ್ವ ಧರ್ಮ ಸಮನ್ವಯದ ನಾಡು ಎಂಬುದು ಸತ್ಯ. ಇಲ್ಲಿ ಅನೇಕ ಧರ್ಮಗಳು ಹುಟ್ಟಿವೆ, ಬೆಳೆದಿವೆ. ಕಾಲಘಟ್ಟದಲ್ಲಿ ಅವು ಮತಗಳಾಗಿ ಸಂಘರ್ಷಕ್ಕೆಡೆ ಮಾಡಿ ಕೊಟ್ಟಿವೆ. ಭಾರತ ಧರ್ಮದ ನೆಲೆವೀಡು ಎಂದು ಎಷ್ಟು ಪ್ರಚಲಿತವಿದೆಯೋ ಅದೇ ರೀತಿ ಇಲ್ಲಿ ಮತಗಳ ಸಂಘರ್ಷದಿಂದ ಅದನ್ನಾ-ಚರಿಸುವವರ ಸಣ್ಣತನದಿಂದ ದೇಶ ಛಿದ್ರವಾಗಿರುವುದೂ ಕೂಡ ಅಷ್ಟೇ ಸತ್ಯ ಸಂಗತಿಯಾಗಿದೆ.

ಇಲ್ಲಿ ಕಾಣಿಸುವ ಅತ್ಯಂತ ಪ್ರಾಚೀನ ಆಚರಣೆಯೆಂದರೆ ನಾಗಗಳ ಆರಾಧನೆ. ಈ ನಾಗಗಳ ಆರಾಧನೆ, ಉತ್ತರಭಾರತಕ್ಕಿಂತ ಕರ್ನಾಟಕದ ಗಂಗವಾಡಿಯಲ್ಲಿ ಹೆಚ್ಚು ಪ್ರಬಲವಾಗಿತ್ತು. ಗಂಗರ ಆಳ್ವಿಕೆಯಲ್ಲಿ ಬೌದ್ಧ ಜೈನ- ಶೈವ ಮೊದಲಾದ ಧರ್ಮಗಳು ಪ್ರಚಲಿತವಿದ್ದ ಬಗ್ಗೆ ಇತಿಹಾಸದಲ್ಲಿ ಉಲ್ಲೇಖಗಳಿವೆ. ಕ್ರಿಸ್ತಶಕದ ಪೂರ್ವದಲ್ಲಿಯೇ ಕನ್ನಡನಾಡಿನಲ್ಲಿ ಪ್ರವೇಶ ಪಡೆದ ಬೌದ್ಧ- ಜೈನ ಧರ್ಮಗಳು ವೈದಿಕರ ಕರ್ಮಠತನವನ್ನು ಖಂಡಿಸುತ್ತ. ಚತುರ್ವರ್ಣ ಪದ್ಧತಿಯನ್ನು ಅಲ್ಲಗಳೆಯುತ್ತ ಅಹಿಂಸೆಯನ್ನು ಬೋಧಿಸಿದವೆಂದು ತಿಳಿಯಲು ಅಶೋಕನ ಶಾಸನಗಳು, ಅನೇಕ ಪುರಾತನ ಸ್ಮಾರಕಗಳು ಸಾಕ್ಷಿಯಾಗಿವೆ. ಬಸವೇಶ್ವರರ ಜೀವನಾವಧಿಯಲ್ಲಿ ಬೌದ್ಧ ಮತ ಕರ್ನಾಟಕದಲ್ಲಿ ಜೀವಂತವಾಗಿತ್ತೆಂದೂ, ಅದರ ತತ್ತ್ವ ಸಿದ್ಧಾಂತಗಳ ಪರಿಚಯ ಅವರಿಗಿದ್ದಿರಬಹುದೆಂದೂ ಕೆಲವು ವಿದ್ವಾಂಸರು ಹೇಳುತ್ತಾರೆ. ಆದರೆ ಬೌದ್ಧಧರ್ಮ ಬಸವೇಶ್ವರರ ಸಂದರ್ಭದಲ್ಲಿ ಕರ್ನಾಟಕದಿಂದಷ್ಟೇ ಅಲ್ಲ ಭಾರತದಿಂದಲೇ ಬಹುಪಾಲು ಕಣ್ಮರೆಯಾಗಿತ್ತೆಂಬುದಕ್ಕೆ ಆಧಾರಗಳಿವೆ. ಅ ಸಮಯದಲ್ಲಿ ಉಳಿದ ಹಲ ಕೆಲವು ಬೌದ್ಧಾನುಯಾಯಿಗಳು ವಜ್ರಯಾನ ಪಂಥದ ಅನುಯಾಯಿಗಳಾಗಿ ತಾಂತ್ರಿಕ- ಆಚರಣೆಯಲ್ಲಿ ತೊಡಗಿದ್ದರು ಜೈನ ಧರ್ಮದಲ್ಲಿ ತಾಂತ್ರಿಕಾಚಾರಣೆ ಇರದಿದ್ದರೂ ಅತಿ ನಿಷ್ಠುರವಾದ, ಕಠಿಣವಾದ ನಿಬಂಧನೆಗಳಿದ್ದು ಆಚರಣೆಗೆ ಅಸಾಧ್ಯವಾದ್ದರಿಂದ ಜನಸಾಮಾನ್ಯರಿಂದ ದೂರ

ಉಳಿದವು. ಇನ್ನು ಶೈವ ಮತಗಳ ಉಲ್ಲೇಖ ಗಮನಾರ್ಹ, ಕಾಪಾಲಿಕ, ಕಾಳಾಮುಖ, ಪಾಶುಪತ, ಹಾಗೂ ಲಾಕುಲೀಶ ಈ ನಾಲ್ಕು ಶಾಖೆಗಳಲ್ಲಿ ಶೈವ ಧರ್ಮದ ವ್ಯಾಪ್ತಿಯನ್ನು ಕಾಣಬಹುದಾಗಿದೆ.

ಇವರಲ್ಲಿ ಕಾಪಾಲಿಕರು ಉಗ್ರಗಾಮಿಗಳೂ ವಾಮಪಂಥಿಯರೂ ಆಗಿದ್ದರು. ಕಾಪಾಲಿಕ ಹಾಗೂ ಕಾಲಾಮುಖರ ನಡುವೆ ಇರುವ ಪ್ರಮುಖ ವ್ಯತ್ಯಾಸವೆಂದರೆ, ಕಾಲಾಮುಖರಂತೆ ಕಾಪಾಲಿಕರು ಸಮಾಜದ ಒಂದು ಅಂಗವಾಗಿ ತಮ್ಮ ಮತ ಪ್ರಸಾರ ಮಾಡದೆ ಸಮಾಜದಿಂದ ದೂರವಿದ್ದು ಗುಡ್ಡ- ಬೆಟ್ಟಗಳಲ್ಲಿ ತಮ್ಮ ಕೇಂದ್ರಗಳನ್ನು ಸ್ಥಾಪಿಸಿಕೊಂಡಿದ್ದರೆಂಬುದಕ್ಕೆ ಆಧಾರಗಳಿವೆ. ಈ ಕಾಪಾಲಿಕರು ಮಾತ್ರ ಬೀಭತ್ಸಕರ ಆಚರಣೆಗಳಲ್ಲಿ ತೊಡಗಿದ್ದುದು ತಿಳಿದು ಬರುತ್ತದೆ. ಇವರ ಆಚರಣೆಗಳು ತೀರ ಅಸಹ್ಯಕರವಾಗಿದ್ದವು. ಪ್ರಾಣಿಬಲಿ, ಮದ್ಯಪಾನಗಳನ್ನೇ ಪೂಜೆಯೆಂದು ಭ್ರಮಿಸಿ ಅದಕ್ಕನುಗುಣವಾದ ಆಚರಣೆಗಳನ್ನಿವರು ಆಚರಿಸುತ್ತಿದ್ದರು. ಇವರು ಒಂದು ಕಡೆ ಲಿಂಗಪೂಜೆ ಮಾಡಿ, ಮತ್ತೊಂದು ಕಡೆ ಕುರಿಯನ್ನು ಹಿಡಿದುಬಲಿ ಕೊಡುತ್ತಿದ್ದುದನ್ನು ಆ ಕಾಲದ ಬ್ರಹ್ಮ ಶಿವ ಕವಿ ಗೇಲಿ ಮಾಡಿದ್ದಾನೆ.

ಕಾಪಾಲಿಕರು ಸ್ಮಶಾನಭಸ್ಮವನ್ನು ಮೈತುಂಬ ಲೇಪಿಸಿ ಕೊಳ್ಳುವುದು, ಕಪಾಲ ಪಾತ್ರೆಯಲ್ಲಿ ಊಟ ಮಾಡುವುದು, ಖಟವಂಗವನ್ನು ಧರಿಸುವುದು, ಸುರಾಕುಂಭವನ್ನು ಹಿಡಿದಿರುವುದು ಸಂಸ್ಕೃತ ಸಾಹಿತ್ಯದಿಂದ ತಿಳಿದು ಬರುತ್ತದೆ. ಕಾಪಾಲಿಕರು ಸಮಾಜದೊಡನೆ ಇತರ ಶೈವರಂತೆ ಸಂಪರ್ಕ ಹೊಂದಿರದಿದ್ದರೂ, ಮಠ- ಮಂದಿರ ಸ್ಥಾಪನೆಯಲ್ಲಿ ಆಸಕ್ತಿ ತಾಳದಿದ್ದರೂ, ಅಂದಿನ ಸಮಾಜ ವ್ಯವಸ್ಥೆಯ ಮೇಲೆ ಅವರ ಪ್ರಭಾವವಾಗಿರಲು ಸಾಧ್ಯವಿದೆ. ರಾಜಾಶ್ರಯವನ್ನು ಪಡೆಯದೇ ಇದ್ದುದರಿಂದ ಅವರು ಅಸ್ತಿತ್ವ ಕಳೆದು ಕೊಂಡರೂ ಕೂಡಾ ಅವರ ಸಿದ್ಧಾಂತಗಳಲ್ಲಿ ಕೆಲವು ಬಂಡಾಯ ಗುಣವನ್ನು ಹೊಂದಿವೆ.

ದಕ್ಷಿಣ ಭಾರತದಲ್ಲಿ ಶೈವಧರ್ಮ ಬಹು ಪ್ರಾಚೀನ ಕಾಲದಿಂದಲೂ ಪ್ರಚಲಿತವಿತ್ತು. ಕ್ರಿ ಶ ೫ ನೇ ಶತಮಾನದಿಂದ ೯ನೇ ಶತಮಾನದವರೆಗಿನ ಕಾಲವನ್ನು ಶೈವಧರ್ಮದ ಬೆಳವಣಿಗೆಯ ಕಾಲವೆನ್ನಬಹುದು. ವರ್ಣಾಶ್ರಮ ಧರ್ಮದ ವಿರುದ್ಧ, ವೈದಿಕರ ಕರ್ಮಸಿದ್ದಾಂತದ ವಿರುದ್ಧ ಮೊದಲು ಬಂಡಾಯವೆದ್ದವರು ಈ ಕಾಪಾಲಿಕರು. ಈ ದೇಶದ ಅನೇಕ ಮತ-ಧರ್ಮಗಳು ರಾಜಾಶ್ರಯದ ನೆರಳಿನಲ್ಲಿ ಬೆಳೆದರೆ; ಅಂತಹ ರಾಜಾಶ್ರಯವನ್ನು ತಿರಸ್ಕರಿಸಿ ದೂರವಾದವರು ಈ ಕಾಪಾಲಿಕರು, "ವೈದಿಕ ನಿಯಮಗಳಲ್ಲಿ, ವರ್ಣಾಶ್ರಮ ಧರ್ಮದಲ್ಲಿ , ಜಾತಿ ಕಟ್ಟಳೆಗಳಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ವರ್ಣಾಶ್ರಮದ ಬಗ್ಗೆ ಕಾಪಾಲಿಕರಿಗಿದ್ದ ಅನಾದರಣೆಯೇ ರಾಮಾನುಜಚಾರ್ಯರು ಇವರನ್ನು ತಿರಸ್ಕರಿಸಲು ಒಂದು ಕಾರಣವಾದಂತಿದೆ." ಎಂದು ಕರ್ನಾಟಕದ ಧಾರ್ಮಿಕ ಸಾಮಾಜಿಕ

ಜೀವನವನ್ನು ಭಾರತೀಯ ಹಿನ್ನಲೆಯಲ್ಲಿ ಚಿತ್ರಿಸುತ್ತಾ ಡಾ॥ ಶೆಟ್ಟರ ವಿವರಿಸುತ್ತಾರೆ.

ಕಾಪಾಲಿಕರ ನಾಯಕನಾದ ಉನ್ಮತ್ತ ಭೈರವನಿಗೂ, ಶಂಕರಚಾರ್ಯನಿಗೂ ವಾಗ್ವಾದ ಉಂಟಾದ ಸಂಗತಿ ಆನಂದಗಿರಿಯ ಶಂಕರವಿಜಯದಿಂದ ತಿಳಿದು ಬರುತ್ತದೆ. " ಎಲ್ಲ ಜಾತಿಗಳೂ ಮಿಥ್ಯ, ಪುರುಷ- ಸ್ತ್ರೀ ಜಾತಿಗಳು ಮಾತ್ರ ಸತ್ಯ" ವೆಂದು ಉನ್ಮತ್ತ ಭೈರವನು, ಶಂಕರಾಚಾರ್ಯರೊಂದಿಗೆ ವಾದಿಸಿದ್ದನ್ನು ಗಮನಿಸಿದರೆ, ನಿಜಕ್ಕೂ ಕಾಪಾಲಿಕರು ಎಂತಹ ವಿಚಾರವಾದಿಗಳಾಗಿದ್ದರು ಎಂಬುದು ತಿಳಿದು ಬರುತ್ತದೆ. ಕಾಪಾಲಿಕರ ಈ ಬಂಡಾಯ ಪ್ರವೃತ್ತಿ ಅಂದಿನ ಸಂಪ್ರದಾಯವಾದಿಗಳಿಗೆ ಸರಿಬರಲಿಲ್ಲ. ಅಂತೆಯೇ ಅವರನ್ನು ರಾಕ್ಷಸರಂತೆ ಚಿತ್ರಿಸಿದ್ದಾರೆ. ರಾಮಾನುಜಾಚಾರ್ಯರಂಥವರೂ ಕೂಡ ಕಾಪಾಲಿಕ-ಕಾಲಾಮುಖರನ್ನು ಒಟ್ಟಾಗಿ ಟೀಕಿಸಿದ್ದಾರೆ. ಇವರ ಟೀಕೆ ಹೇಗೆ ಪಕ್ಷಪಾತವಾಗಿತ್ತು, ಮತೀಯತೆಯಿಂದ ಕೂಡಿತ್ತೆಂಬುದನ್ನು ಲೊರೆಂಜನ್ ವಿವರಿಸಿದ್ದಾನೆ. ಈ ಕಾಪಾಲಿಕರು ಕಪಾಲ ಪಾತ್ರೆಯಲ್ಲಿಯೇ ಭೋಜನ ಮಾಡುತ್ತಿದ್ದುದರಿಂದ ಅವರಿಗೆ ಕಾಪಾಲಿಕರೆಂಬ ಹೆಸರು ಬಂದಿರಬಹುದಾಗಿದೆ. ಕಾಪಾಲಿಕರು ವರ್ಣಾಶ್ರಮ ವಿರೋಧಿಗಳೆಂದು ಬ್ರಹ್ಮಾಂಡ, ವಾಯು ಮತ್ಸ್ಯಪುರಾಣಗಳಲ್ಲಿಯೂ ಉಲ್ಲೇಖಿಸಲಾಗಿದೆ. ಕಾಪಾಲಿಕರಿಗೆ ಕೆಲವು ಮಿತಿಗಳಿದ್ದಿರಬಹುದು, ಅವರ ಕೆಲವು ಆಚರಣೆಗಳು ಅಸಹ್ಯಕರವಾಗಿರಬಹುದು. ಆದರೆ ಅವರನ್ನು ರಾಕ್ಷಸರಂತೆ ದುಷ್ಕರ್ಮಿಗಳಂತೆ ಕೆಲವು ಸಂಪ್ರದಾಯವಾದಿಗಳು ಚಿತ್ರಿಸಿದ್ದಾರೆ. ರಾಮಾನುಜಾಚಾರ್ಯರು ಕಾಲಾಮುಖರನ್ನು ಕೂಡ ವೇದ ವಿರೋಧಿಗಳೆಂದು ಕರೆದರು. ಆದರೆ ಇವರು ವೇದಾಧ್ಯಯನದಲ್ಲಿ ಆಸಕ್ತಿ ಹೊಂದಿದ್ದರೆಂದೂ, ವರ್ಣಾಶ್ರಮ ಧರ್ಮದ ಬಗೆಗೆ ಗೌರವ ತಾಳಿದ್ದರೆಂದೂ ಕರ್ನಾಟಕದ ಶಾಸನಗಳು ಹೇಳುತ್ತವೆ. ಮೂರು ವೇದಗಳಲ್ಲಿ ಪ್ರತಿಪಾದಿಸಿರುವ ವರ್ಣಾಶ್ರಮದ ನಿಯಮಗಳನ್ನೇ ಕಾಲಾಮುಖರು ಕಾಪಾಡಿಕೊಂಡು ಬಂದರೆಂದು ಬಳ್ಳಿಗಾವೆಯ ಶಾಸನವೊಂದು ಹೇಳುತ್ತದೆ. ಕಾಲಾಮುಖರಿಗೆ ಶ್ರುತಿಗಳಲ್ಲಿ ಪಾಂಡಿತ್ಯವಿತ್ತೆಂದು ಆಂಧ್ರದಲ್ಲಿ ದೊರೆತ ಶಾಸನವೊಂದು ಹೇಳುತ್ತದೆ.

ಸತ್ಯಸಂಗತಿಗಳು ಹೀಗಿರುವಾಗ ಈ ಸಂಪ್ರದಾಯ ಪಂಡಿತರು ಇತಿಹಾಸವನ್ನೇ ತಿರುಚಿ ಮತೀಯ ಭಾವವೇಶದಲ್ಲಿ ತಮಗೆ ತಿಳಿದಂತೆ ಮಾತನಾಡಿದ್ದಾರೆ. ಶೈವರಲ್ಲಿಯೇ ಅತ್ಯಂತ ಬಂಡಾಯ ಮನೋಭಾವದ ಕಾಪಾಲಿಕರನ್ನು ಹೀನಾಯವಾಗಿ ಟೀಕಿಸಿದ್ದಾರೆ. ಅಂದಿನ ಸಂದರ್ಭದಲ್ಲಿ ವರ್ಣಾಶ್ರಮ ಪದ್ಧತಿಯನ್ನು ವಿರೋಧಿಸುವುದು, ರಾಜಾಶ್ರಯವನ್ನು ತಿರಸ್ಕರಿಸುವುದು ಸಣ್ಣ ವಿಷಯವಾಗಿರಲಿಲ್ಲ. ಹೀಗೆ ಅಂದು ಬಂಡಾಯವೆದ್ದ ಕಾಪಾಲಿಕರ ಅಸ್ತಿತ್ವವನ್ನೇ ಈ ಸಂಪ್ರದಾಯ ಶಕ್ತಿಗಳು ನಾಶಪಡಿಸಿದವೆಂಬುದಕ್ಕೆ ಅನೇಕ ಆಧಾರಗಳಿವೆ. ನಂತರದ ದಿನಗಳಲ್ಲಿ ಕಾಪಾಲಿಕರ

ಅಸ್ತಿತ್ವಕರಗಿ ಹೋಗಿ ಮತ್ತೆ ವೈದಿಕ ಕರ್ಮಾಚರಣೆಯೇ ಪ್ರಧಾನವಾದಾಗ, ಧರ್ಮದ ಹೆಸರಿನಲ್ಲಿ ಶೋಷಣೆ ನಡೆದಾಗ, ಭಕ್ತಿಯ ಹೆಸರಿನಲ್ಲಿ ಭಯವನ್ನು ಹೆಚ್ಚಿಸಿದಾಗ ಕರ್ನಾಟಕದ ಧಾರ್ಮಿಕ ಕ್ಷೇತ್ರದಲ್ಲಿ ಮತ್ತೆ ಗೊಂದಲ ಪ್ರಾರಂಭವಾಗಿ ಅನೇಕ ಮತೀಯ ಸಂಘರ್ಷಗಳಾಗಿರುವುದನ್ನು ಇತಿಹಾಸ ಮೌನವಾಗಿ ಹೇಳುತ್ತಿದೆ.

ಹೀಗೆ ರೂಪಗೊಂಡ ಶೈವ ಶಾಖೆಗಳಲ್ಲಿ ಕಾಶ್ಮೀರ ಶೈವ ಸಿದ್ಧಾಂತ, ತಮಿಳು ಶೈವ ಸಿದ್ಧಾಂತ ಮತ್ತು ವೀರಶೈವ ಸಿದ್ದಾಂತ ಇವು ಮುಖ್ಯವಾದವುಗಳು. ಕಾಶ್ಮೀರ ಶೈವ ಸಿದ್ಧಾಂತದಲ್ಲಿ ಮತ್ತೆ ಎರಡು ಶಾಖೆಗಳಿವೆ. ಸ್ಪಂದಶಾಸ್ತ್ರ ಮತ್ತು ಪ್ರತ್ಯಭಿಜ್ಞಾಶಾಸ್ತ್ರ ಎಂದು ಅವುಗಳಲ್ಲಿ ವಿಂಗಡನೆಯಿದೆ.

"ಶೈವಸಿದ್ಧಾಂತದ ಪ್ರಕಾರ ಸೃಷ್ಟಿಕರ್ತ, ಸೃಷ್ಟಿ ಮತ್ತು ಜೀವರು ಈ ಮೂರು ಅನಾದಿಯಾದವುಗಳು ಅದ್ವೈತ ಸಿದ್ಧಾಂತದಂತೆ ಈ ಜಗತ್ತು ಮಿಥ್ಯಯೆಂದು ಶೈವ ಸಿದ್ಧಾಂತ ಹೇಳುವುದಿಲ್ಲ. ಶಿವ ಜಗತ್ತಿನ ಮೂಲಕಾರಣ; ಅವನ ಶಕ್ತಿ ನಿಮಿತ್ತ ಕಾರಣ; ಮಾಯೆ ಉಪಾದಾನ ಕಾರಣ–ಎಂಬುದು ಶೈವ ಸಿದ್ಧಾಂತದ ಅಭಿಪ್ರಾಯ. ಏಕವಿದ್ದದ್ದು– ಅನೇಕವಾಗಿ ಬೆಳೆದು ಮೂವತ್ತಾರು ತತ್ವಗಳಿಂದ ಸಮನ್ವಿತವಾದ ಈ ಸೃಷ್ಟಿಯಲ್ಲಿ ಪರ್ಯವಸಾನವಾಗಿರುವ ಕ್ರಮವನ್ನು ಶೈವ ಸಿದ್ದಾಂತ ತನ್ನದೇ ಆದ ರೀತಿಯಲ್ಲಿ ಪ್ರತಿಪಾದಿಸಿದೆ."

ಇನ್ನೂ ವೀರಶೈವ ಧರ್ಮವು ಬಸವೇಶ್ವರರು ಜನಿಸುವುದಕ್ಕಿಂತ ಪೂರ್ವದಲ್ಲಿಯೇ ಪ್ರಚಲಿತದಲ್ಲಿತ್ತೆಂಬುದಕ್ಕೆ ಅನೇಕ ಆಧಾರಗಳಿವೆ. ಬಸವ ಪೂರ್ವ ಯುಗದಲ್ಲಿಯೇ ವೀರಶೈವ ಧರ್ಮ ಅಂಕುರಾವಸ್ಥೆಯಲ್ಲಿತ್ತೆಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಇವರಲ್ಲಿ ಎಸ್, ಎನ್ ದಾಸಗುಪ್ತ ಫ.ಗು.ಹಳಕಟ್ಟೆ, ಎನ್.ಸಿ.ನಂದೀಮಠ, ಎಫ್.ಕಟ್ಟೀಮನಿ, ಎಂ.ಜಿ.ವಿರೂಪಾಕ್ಷನ್ ಪ್ರಮುಖರಾಗಿದ್ದಾರೆ.

ಪಂಚಾಚಾರ್ಯರಿಂದ ಈ ವೀರಶೈವ ಧರ್ಮದ ಉದಯವಾಗಿದೆಯೆಂದು ಕೆಲವು ಗ್ರಂಥಗಳಲ್ಲಿ ಉಲ್ಲೇಖವಿದೆ. ಇವರು ಪರಮೇಶ್ವರನ ಪಂಚಮುಖಗಳಿಂದ ಉದ್ಭವಿಸಿದ ಪಂಚಗಣಾಧೀಶ್ವರರೆಂದೂ, ಯುಗಯುಗಾಂತರಗಳಲ್ಲಿ ಬೇರೆ–ಬೇರೆ ಹೆಸರಿನಿಂದ ಭೂಮಿಗೆ ಅವತರಿಸಿ ಬಂದ ಅವತಾರ ಪುರುಷರೆಂದೂ ಕಲಿಯುಗದಲ್ಲಿ ಕೊಲ್ಲಿಪಾಕಿ, ವಟಕ್ಷೇತ್ರ, ಸುಧಾಕುಂಡ, ದ್ರಾಕ್ಷಾರಾಮ ಮತ್ತು ವಾರಣಾಸಿಗಳೆಂಬ ಪ್ರಸಿದ್ಧ ಕ್ಷೇತ್ರಗಳಲ್ಲಿ ಲಿಂಗಗಳಿಂದ ಉದ್ಭವಿಸಿ ಎಲ್ಲಾ ಸ್ಥಳಗಳಲ್ಲಿಯೂ ಸಂಚರಿಸಿ ಬಾಳೆಹಳ್ಳಿ, ಉಜ್ಜಯಿನಿ, ಶ್ರೀಶೈಲ, ಕೇದಾರ ಮತ್ತು ಕಾಶಿ ಕ್ಷೇತ್ರಗಳಲ್ಲಿ ಮಠಗಳನ್ನು ಸ್ಥಾಪಿಸಿದರೆಂಬ ಪ್ರತೀತಿಯಿದೆ, ಆದರೆ ಇವರ ಅನೇಕ ವಿಚಾರಗಳು ಕಟ್ಟುಕತೆಗಳಾಗಿರುವುದರಿಂದ, ಪವಾಡಗಳ ಸರಮಾಲೆಯೇ ಅಲ್ಲಿರುವುದರಿಂದ ಇವುಗಳನ್ನು

ಗಂಭೀರವಾಗಿ ಪರಿಗಣಿಸಲಿಕ್ಕಾಗುವುದಿಲ್ಲ.

ಬಸವೇಶ್ವರರ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ವೀರಶೈವ ಧರ್ಮ ಇದ್ದೂ ಇರದಂತಿತ್ತು. ಅದರೊಳಗಡೆಯೇ ಅನೇಕ ಭಿನ್ನಾಭಿಪ್ರಾಯಗಳಿದ್ದವು. ಅನೇಕ ಮೂಢ ಸಂಪ್ರದಾಯಗಳು ಮನೆ ಮಾಡಿಕೊಂಡಿದ್ದವು. ಇಷ್ಟಲಿಂಗ ಪೂಜೆಯ ಜತೆಗೆ ಸ್ಥಾವರಲಿಂಗದ ನಿರ್ಮಾಣವೂ ನಡೆದಿತ್ತು. ಧರ್ಮದ ಹೆಸರಿನಲ್ಲಿ ವ್ಯಕ್ತಿ ಪೂಜೆ ಸಾಗಿತ್ತು. ಅಂದಿನ ವೀರಶೈವದಲ್ಲಿ ಅದರೊಳಗಡೆಯೇ ವರ್ಣಾಶ್ರಮ ಪದ್ದತಿ ಹುತ್ತಗಟ್ಟಿತ್ತು. ಸಾಂಪ್ರದಾಯಿಕ ಜಂಗಮರು ಮಡಿ ಮೈಲಿಗೆಗಳನ್ನುಳಿಸಿಕೊಂಡು, ಸಾಂಪ್ರದಾಯಿಕ ವೈದಿಕರಂತೆ ಧರ್ಮದ ಹೆಸರಿನಲ್ಲಿ ಶೋಷಣೆ ಮಾಡುತ್ತಿದ್ದರು."ಹನ್ನೆರಡನೆಯ ಶತಮಾನದಲ್ಲಿದ್ದ ವೀರಶೈವ ಧರ್ಮ, ಸಾಮಾಜಿಕ, ಧಾರ್ಮಿಕ ಪದ್ದತಿಯ ವಿರುದ್ಧ ಬಂಡೆದ್ದು, ಸ್ವತಂತ್ರ ಶಾಖೆಯಾಗಿ ಬೆಳೆದರೂ ಬಸವ ಪೂರ್ವ ಕಾಲದ ಶೈವ ಸಂಪ್ರದಾಯಗಳನ್ನೆಲ್ಲ ತ್ಯಜಿಸಲಿಲ್ಲವೆಂಬ ವಿಷಯ ಗಮನಾರ್ಹ"[೩೧]. ವೀರಶೈವ ಧರ್ಮ, ಧಾರ್ಮಿಕ–ಸಾಮಾಜಿಕ ಘಟಕವಾಗಲು, ಒಂದು ಶಕ್ತಿಯಾಗಿ ಬೆಳೆದು ನಿಲ್ಲಲು ಬಸವೇಶ್ವರ ಹಾಗೂ ಅವರ ಸಮಕಾಲೀನರೇ ಕಾರಣರಾಗಿದ್ದಾರೆ.

ಈ ಧಾರ್ಮಿಕ ಕ್ರಾಂತಿ, ಕಲ್ಯಾಣವನ್ನು ವ್ಯಾಪಿಸಿದುದು ಮಾತ್ರವಲ್ಲದೆ ಉತ್ತರದಲ್ಲಿ ಆಂಧ್ರಪ್ರದೇಶ ಮೊದಲಾದ ಕಡೆಗೂ ಹರಡಿತು. ಅಲ್ಲದೆ ದಕ್ಷಿಣದಲ್ಲಿ ಪ್ರಬಲವಾಗಿದ್ದ ಹೊಯ್ಸಳ ಕರ್ಣಾಟಕ ಸಾಮ್ರಾಜ್ಯವನ್ನು ತನ್ನ ಪ್ರಭಾವಕ್ಕೆ ಒಳಗುಮಾಡಿತು. ಈ ವೇಳೆಗೆ ಹೊಯ್ಸಳರಲ್ಲಿ ವಿಷ್ಣುವರ್ಧನ ಮೊದಲಾದ ಪ್ರಮುಖ ರಾಜರು ಆಗಿ ಹೋಗಿದ್ದರು. ಧಾರ್ಮಿಕ ದೃಷ್ಟಿಯಿಂದ ಹೊಯ್ಸಳರ ಕಾಲ ಬಹಳ ಪ್ರಮುಖವಾದ ಕಾಲ. ತಮಿಳು ದೇಶದಿಂದ ಕರ್ಣಾಟಕಕ್ಕೆ ಬಂದ ಶ್ರೀರಾಮಾನುಜಾಚಾರ್ಯರ ಪ್ರಭಾವಕ್ಕೆ ಒಳಗಾಗಿ ವಿಷ್ಣುವರ್ಧನ ವೈಷ್ಣವ ಧರ್ಮವನ್ನು ಅಂಗೀಕರಿಸಿದನು. ಅದುವರೆಗೆ ಸ್ವಲ್ಪಹೆಚ್ಚು ಕಡಿಮೆ ರಾಜಧರ್ಮವಾಗಿ ಪೋಷಣೆಯನ್ನು ಪಡೆಯುತ್ತಿದ್ದ ಜೈನ ಧರ್ಮಕ್ಕೆ ಇದು ಪ್ರತಿಕೂಲವಾಗಿ ಪರಿಣಮಿಸಿದಂತೆ ತೋರುತ್ತವೆ. ತಾನು ವೈಷ್ಣವನಾದರೂ ವಿಷ್ಣುವರ್ಧನ ಸರ್ವಧರ್ಮ ಸಮಾನತ್ವದ ಭಾವನೆಯನ್ನು ಬೆಳೆಸಿಕೊಂಡೇ ಬಂದನು[೩೨].

ಬಸವಣ್ಣನವರ ತರುವಾಯ ಬದುಕ್ಕಿದ್ದ ರೇವಣಸಿದ್ಧರ ಸಮಕಾಲೀನರಾದ ಮರುಳಸಿದ್ಧರು ಹೊಯ್ಸಳ ಅರಸ ಇಮ್ಮಡಿ ಬಲ್ಲಾಳ ಕ್ರಿ. ಶ. ೧೧೭೩ ರಿಂದ ೧೨೨೦ ರವರೆಗೆ ರಾಜ್ಯಭಾರ ಮಾಡಿದ ಸಂದರ್ಭದಲ್ಲಿ ವೀರಶೈವ ಮತವಲಂಬಿಯಾಗಿದ್ದುದರ ಬಗ್ಗೆ ಉಲ್ಲೇಖವಿದ್ದುದರಿಂದ ಹೊಯ್ಸಳರ ಕಾಲದಲ್ಲೂ ವೀರಶೈವ ಮತ ಪ್ರಚಾರದಲ್ಲಿರಬೇಕು, ಮತ್ತು ಹೊಯ್ಸಳರ ಸಮಕಾಲೀನರಾದ ಕಲ್ಯಾಣದ ಚಾಲುಕ್ಯರು ಮತ್ತು ಕಲಚೂರಿಗಳ ಕಾಲದಲ್ಲೂ ವೀರಶೈವ ಧರ್ಮ ಅಸ್ಥಿತ್ವದಲ್ಲಿರಬಹುದೆಂದು.

ಇವರೆಲ್ಲ ಸರ್ವ ಧರ್ಮ ಸಹಿಷ್ಣುತೆಯ ಆದಾರದಿಂದ ಊಹಿಸಬಹುದು.

ಮರುಳಸಿದ್ಧನ ಸ್ಮಾರಕಗಳೆಲ್ಲಾ ಮುಖ್ಯವಾಗಿ ಇಂದಿನ ದಾವಣಗೆರೆ ಜಿಲ್ಲೆಯ ಜಗಳೂರು ಹರಿಹರ ಮತ್ತು ದಾವಣಗೆರೆ ತಾಲೂಕು ಹಾಗೂ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕು, ಮತ್ತು ಚಿತ್ರದುರ್ಗ ಜಿಲ್ಲೆಯ ಕೆಲವಚು ಭಾಗಗಳಲ್ಲಿ ಹಾಗೂ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿಯೂ ಕಂಡುಬರುತ್ತವೆ. ಈ ಭಾಗದ ರಾಜ್ಯಕ್ಕೆ ಕ್ರಿ.ಶ.೧೦ ಮತ್ತು ೧೨ನೆಯ ಶತಮಾನದಲ್ಲಿ ನೊಳಂಬವಾಡಿ ಎಂದು ಹೆಸರಿತ್ತು. ಮೊದಲು ವಿಸ್ತಾರವಾದ ನೊಳಂಬವಾಡಿ ೩೨೦೦೦ ರಾಜ್ಯಕ್ಕೆ ನಿಡುಗಲ್ಲಿನಿಂದ ಆಳುತ್ತಿದ್ದ ನೊಳಂಬ ಪಲ್ಲವರು ರಾಜರಾಗಿದ್ದರು. ಉಚ್ಚಂಗಿಯ ಪಾಂಡ್ಯರು ೧೦ನೆಯ ಶತಮಾನದ ಕೊನೆಯಲ್ಲಿ ನೊಳಂಬವಾಡಿ ೩೨೦೦೦. ಪ್ರಾಂತವನ್ನು ವಶಮಾಡಿ ಕೊಂಡಾಗ ನಿಡುಗಲ್ಲು ನೊಳಂಬರು ಈ ಪಾಂಡ್ಯರಲ್ಲಿ ಐಕ್ಯವಾಗಿ ಹೋದರು. ಅನಂತರ ಪಾಂಡ್ಯರೇ ೧೨ನೆಯ ಶತಮಾನದ ಅಂತ್ಯದವರೆವಿಗೂ ಧರಣೀಯುವತಿಗೆ ಕಟನೂಪುರವೆನಿಪ ನೊಳಂಬವಾಡಿ ೩೨೦೦೦ರಾಜ್ಯಕ್ಕೆ ಮಹಾಮಂಡಲೇಶ್ವರ-ರಾಗಿದ್ದರು[೩೩]. ಇವರು ವೈದಿಕ ಮತಾವಲಂಬಿಗಳಾಗಿದ್ದರಬಹುದು. ಏಕೆಂದರೆ ಬ್ರಾಹ್ಮಣ ಧರ್ಮವು ದಕ್ಷಿಣ ಭಾರತಕ್ಕೆ ಸಂಘಂ ಯುಗದಲ್ಲಿ ಪ್ರಸರಿಸಿ ನೆಲೆಕಾಣುವಲ್ಲಿ ಪ್ರಯತ್ನಿಸಿದ ಕಾಲವಾಗಿತ್ತು. ಸಂಘಂ ಯುಗದ ರಾಜರು ಕೈಗೊಂಡ ಯಜ್ಞ ಯಾಗಾದಿ ಆಚರಣೆಗಳು ಮತ್ತು ಉನ್ನತ ವರ್ಗದವರು ವೈದಿಕ ದೇವತೆಗಳನ್ನು ಪೂಜಿಸಲಾರಂಭಿಸಿದ್ದು, ಬ್ರಾಹ್ಮಣ ಧರ್ಮದ ಮೇಲ್ಮೈ ಕಾರಣವಾಯಿತು. ಬೌದ್ಧ ಮತ್ತು ಜೈನ ಧರ್ಮವು ಈ ಕಾಲದಲ್ಲಿ ಪ್ರಸರಣಗೊಂಡರೂ ಸಹ ಬ್ರಾಹ್ಮಣ ಧರ್ಮವು ಉನ್ನತ ಸ್ಥಾನ ಪಡೆಯಿತು. ಹೀಗಾಗಿ ಉಚ್ಚಂಗೀದುರ್ಗವನ್ನು ಸ್ವಾಧೀನ ಮಾಡಿಕೊಂಡ ಪಾಂಡ್ಯರು ಒಂದು ಶಾಖೆಯಾಗಿ ಆಳಿದರು. ೧೨ನೆಯ ಶತಮಾನದಲ್ಲಿ ಜೀವಿಸಿದ್ದ ಮರುಳಸಿದ್ಧರು ಇವರ ಸಮಕಾಲಿನರು. ಮರುಳಸಿದ್ಧ ಮಾದಿಗ ಕುಲದವ, ಬೇತೂರಿನಲ್ಲಿ (ದಾವಣಗೆರೆ ತಾಲೂಕು) ನಲ್ಲಿ ಬ್ರಾಹ್ಮಣರು ಯಜ್ಞ ಯಾಗ ಆಚರಣೆಯ ವಿರುದ್ಧ ಪ್ರತಿಭಟಿಸಿ ಬ್ರಾಹ್ಮಣರಿಂದ ಉಚ್ಚಂಗಿಯಪಾಂಡ್ಯ ಅರಸ ವಿಜಯಪಾಂಡ್ಯರ ಬಳಿ ದೂರುನೀಡಲಾಯಿತು. ಪಾಂಡ್ಯ ಅರಸ ಸಹ ವೈದಿಕಮತಾವಲಂಬಿಯಾಗಿದ್ದರಿಂದ ಮರುಳಸಿದ್ಧರಿಗೆ ಆನೆಯ ಕಾಲಲ್ಲಿ ತುಳಿತದ ಶಿಕ್ಷೆ ವಿಧಿಸುವ ಆಜ್ಞೆ ಯಾಗುವುದರೊಂದಿಗೆ ಮರುಳಸಿದ್ಧರು ಪಾಂಡ್ಯರಸರ ವಿರುದ್ಧವೇ ಪ್ರತಿಭಟಿಸಿ ಅರಸರನ್ನೇ ಶರಣಗತರಾಗುವಂತೆ ಮಾಡುವ ಮೂಲಕ ವೈದಿಕ ಮತದ ವಿರುದ್ದ ಧ್ವನಿ ಎತ್ತಿದವರಾಗಿದ್ದಾರೆ.

ಕರ್ನಾಟಕದ ಚರಿತ್ರೆಯಲ್ಲಿ ಕ್ರಿ. ಶ. ೧೩೩೬ ರಲ್ಲಿ ನೆಲೆಗೊಂಡ ವಿಜಯನಗರ ಸಾಮ್ರಾಜ್ಯವು ತನ್ನದೇ ಆದ ಪ್ರಾಮುಖ್ಯತೆಯನ್ನುಗಳಿಸಿದೆ. ಧಾರ್ಮಿಕ ವಲಯದಲ್ಲಿ ಆದಂಥ ಅವಸ್ಥಾಂತರಗಳು ಭಾರತೀಯರನ್ನಷ್ಟೇ ಅಲ್ಲದೆ ವಿಶ್ವದ ಅನೇಕರನ್ನು ಕುತೂಹಲಕ್ಕೆ ಈಡು ಮಾಡಿವೆ.

ವಿಜಯನಗರವನ್ನಾಳಿದ ರಾಜಮನೆತನಗಳು ವಿಭಿನ್ನ ಮತ-ಧರ್ಮ-ಪಂಥಗಳನ್ನು ಕುರಿತು ತಾರತಮ್ಯದಿಂದ ನಡೆದುಕೊಂಡದ್ದರ ಬಗ್ಗೆ ಉದಾಹರಣೆ-ಆಧಾರಗಳು ಇಲ್ಲ. ಬದಲಾಗಿ ಸಹಿಷ್ಣುತೆಯ, ಸೌಹಾರ್ದದ ಧೋರಣೆಗಳನ್ನು ವ್ಯಕ್ತ ಪಡಿಸಿರುವುದೇ ಹೆಚ್ಚು. ಹೀಗಿರುವಾಗ ಕೇವಲ ಹಿಂದೂ –ಇಸ್ಲಾಂ ಧರ್ಮಗಳಷ್ಟೇ ಅಲ್ಲದೆ ಬೌದ್ಧ, ಜೈನ, ಕ್ರೈಸ್ತ ಮೊದಲಾದ ಮತ-ಧರ್ಮಗಳು ಸಹ ಒಟ್ಟೊಟ್ಟಿಗೆ ಸಾಗಿಬಂದ ಚಾರಿತ್ರಿಕ ಸನ್ನಿವೇಶ ಆದಾಗಿದೆ[೩೪]. ಸಾಮ್ರಾಜ್ಯದ ಸ್ಥಾಪಕರಾದ ಸಂಗಮ ವಂಶದ ಆರಂಭದ ಅರಸರೆಲ್ಲರೂ ಕಾಳಾಮುಖ ಪಂಥದವರಾಗಿದ್ದರು. 'ಶಾಸನಗಳಲ್ಲಿ ಎಲ್ಲಿಯೂ ಲಾಕುಲೀಶ, ಪಾಶುಪತ ಮತ್ತು ಕಾಳಾಮುಖಗಳೆರಡೂ ಬೇರೆ-ಬೇರೆ ಎಂದು ಸ್ಪಷ್ಟವಾಗಿ ಹೇಳಿಲ್ಲ' ಎಂದು ಎಂ.ಚಿದಾನಂದ ಮೂರ್ತಿಯವರು ಹೇಳಿರುವರಲ್ಲದೆ, ಇದಕ್ಕೆ ಸರ್ವದರ್ಶನ ಸಂಗ್ರಹದಿಂದ ಆಧಾರವನ್ನು ನೀಡಿದ್ದಾರೆ[೩೫]. ಮೊದಲ ರಾಜವಂಶಜರಾದ ಸಂಗಮರು ಶೈವ ಪಂಥಿಯರು. ಶೈವ ಪಂಥೀಯರಲ್ಲಿ 'ವೀರಶೈವ'ರು ಅಥವಾ 'ಶಕ್ತಿ ವಿಶಿಷ್ಟಾದ್ವೈತಿ'ಗಳು ಹಾಗೂ ಅವರ ಆಚರಣೆಗಳು ವಿಜಯನಗರ ಕಾಲಘಟ್ಟದಲ್ಲಿ ಮಹತ್ವವನ್ನು ಪಡೆದಿದ್ದವು. ಈ ಕಾಲದ ವೀರಶೈವರಲ್ಲಿ ಎರಡು ಮುಖ್ಯ ಉಪವಿಭಾಗಗಳಿದ್ದವು ಅವರನ್ನು 'ಆರಾಧ್ಯರು ಹಾಗೂ 'ಲಿಂಗಾಯಿತ'ರೆಂದು ಗುರುತಿಸಲಾಗಿದೆ[೩೬].

ವಿಜಯನಗರದ ಕಾಲ ವೀರಶೈವ ಸಂಪ್ರದಾಯದ ಪುನರುತ್ಥಾನದ ಕಾಲ. ಬಿಜ್ಜಳನ ಮರಣಾನಂತರ ಕಲ್ಯಾಣದಿಂದ ಚದರಿ ಹೋದ ಶಿವಶರಣರ ಚಟುವಟಿಕೆಗಳು ಕೇಂದ್ರೀಕೃತ ಸ್ವರೂಪವಿಲ್ಲದೆ ಸೊರಗಿದ್ದವು. ಹಂಪೆಯಂಥ ವಿಶಾಲ ರಾಜಧಾನಿಯಲ್ಲಿ ವೀರಶೈವರಿಗೆ ಒಂದುಗೂಡಲು ' ಅವಕಾಶ ದೊರೆಯಿತು. ಪ್ರೌಢ ದೇವರಾಯ ಹಾಗೂ ಅವನ ಮಂತ್ರಿಗಳಾದ ಲಕ್ಕಣ್ಣ ಹಾಗೂ ಜಕ್ಕಣ್ಣರಿಂದ ದೊರೆತ ಬೆಂಬಲ ಈ ಸಂಪ್ರದಾಯದ ಪುನರುತ್ಥಾನಕ್ಕೆ ಯೋಗ್ಯ ವಾತಾವರಣವನ್ನು ಒದಗಿಸಿದವು. ಮುಂದೆ ಇಸ್ಲಾಂನ ಆಕ್ರಮಣದಿಂದ, ಕಲ್ಯಾಣದ ಬಳಿ ಉಳಿದಿದ್ದ ವೀರಶೈವರು ಹಂಪೆಯ ಪರಿಸರದಲ್ಲಿ ಆಶ್ರಯ ಪಡೆದಿರಬೇಕು. ವೈದಿಕ ಮತಸ್ಥರು ನಡೆಸಿದ ವೇದ ಭಾಷ್ಯ ರಚನೆಯ ಬೃಹತ್‌ಕಾರ್ಯ ಚಟುವಟಿಕೆಗಳನ್ನು ಸಾಗಿಸಲು ವೀರಶೈವರಿಗೆ ಪ್ರೇರಣೆ ನೀಡಿರಬೇಕೆಂದು ಡಾ॥ ಎಂ.ಚಿದಾನಂದಮೂರ್ತಿಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ[೩೭]. ಮೈಸೂರು ಜಿಲ್ಲೆಯ ಹರದನಹಳ್ಳಿಯಲ್ಲಿದ್ದ ವೀರಶೈವ ಮಠಾಧಿಪತಿ ತೋಂಟದ ಸಿದ್ಧಲಿಂಗ ಯತಿಗಳು (ಕ್ರಿ.ಶ ೧೫೦೦-೮೪) ಅ ಪೀಠದಲ್ಲಿ ಹದಿನಾರನೆಯವರಾಗಿದ್ದು. ಇವರ ಬಳಿವಿಡಿದು ಬೆಳೆದ ೧೦೧ ವಿರಕ್ತರು ವೀರಶೈವ-ಧಾರ್ಮಿಕ ಚಳವಳಿಯು ಭರದಿಂದ ಸಾಗಿದ ಕಾಲವದು. ಈ ಚಳುವಳಿಯು ಕರ್ನಾಟಕದಲ್ಲಿ ೧೨ನೆಯ ಶತಮಾನದ ಆಂದೋಲನಕ್ಕಿಂತಲೂ ಮಿಗಿಲಾದ ಪ್ರಭಾವವನ್ನು ಗಳಿಸಿತ್ತೆಂದರೆ ಅನುಚಿತವಾಗಲಾರದು. ಬಸವಾದಿ ಶಿವಶರಣರು ಕಲ್ಯಾಣದಲ್ಲಿ ಒಂದೆಡೆ

ಕುಳಿತು ಚಳುವಳಿಮಾಡಿದರೆ ೧೦೧ ವಿರಕ್ತ ನಾಡಿನ ೧೦೧ ಮೂಲೆಯನ್ನೂ ಸುತ್ತಿದರು. ಇವರ ಪ್ರಯತ್ನದ ಫಲವಾಗಿ ವಿಜಯನಗರ ಸಾಮ್ರಾಜ್ಯದ ಅವನತಿಯ ತರುವಾಯ ಅನೇಕ ನಾಯಕಮನೆತನಗಳ ಪಾಳೆಯಗಾರರು, ರಾಜಾಧಿರಾಜರು ಲಿಂಗಧಾರಿಗಳಾದರು. ಆದರೆ ೧೨ನೆಯ ಶತಮಾನದ ಬಸವಾದಿ ಶರಣರ ಚಳುವಳಿಗೂ ಈ ೧೦೧ ವಿರಕ್ತರು ಚಳುವಳಿಗೂ ವಿಶೇಷ ಅಂತರವುಂಟು[೩೮]. ಕೆಳದಿಯ ಪಾಳೆಯಗಾರರು ಸಹ ವೀರಶೈವರಾಗಿದ್ದು, ಇವರ ಉದಾರಾಶ್ರಯವು ವೀರಶೈವ ಸಂಪ್ರದಾಯಕ್ಕೆ ದೊರಕಿತು[೩೯]. ಇಸ್ಲಾಂ ಕೂಡ ಈ ಅವಧಿಯಲ್ಲಿ ಕರ್ನಾಟಕದಲ್ಲಿ ಬಲವಾಗುತ್ತ ನಡೆಯಿತು[೪೦]. ಕ್ರಿ.ಶ. ೧೪೯೮ರಲ್ಲಿ ಕಲ್ಲಿಕೋಟೆ ತಲುಪಿದ ಪೋರ್ಚುಗೀಸರು ಮುಂದೆ ಕ್ರಿ. ಶ ೧೫೧೦ರಲ್ಲಿ ಆದಿಲ್‌ಷಾನಿಂದ ಗೋವೆಯನ್ನು ಗೆದ್ದು ಅಲ್ಲಿ ನೆಲೆನಿಂತರು ಕ್ರಿ. ಶ ೧೫೨೧ ರಿಂದಲೇ ಮಂಗಳೂರು, ಉಳ್ಳಾಲಗಳಲ್ಲಿ ಮತಾಂತರದ ಕಾರ್ಯ ಅರಂಭಿಸಿ ಕ್ರೈಸ್ತ ಕ್ಯಾಥೋಲಿಕ್ ಸಂಪ್ರದಾಯವನ್ನು ಇಲ್ಲಿಗೆ ತಂದರು[೪೧].

ಕರ್ನಾಟಕದೊಳಗೆ ಮತ್ತು ಹೊರಗೆ ಅನೇಕ ರಾಜರು ವೀರಶೈವ ಧರ್ಮದ ಪ್ರಭಾವಕ್ಕೊಳಗಾಗಿದ್ದಾರೆ. ಅವರು ಕಾಕತೀಯ, ಯಾದವ, ವಿಜಯನಗರದ ಸಂಗಮದಂತಹ ದೊಡ್ಡ ರಾಜಮನೆತನಗಳು ಮಾತ್ರವಲ್ಲದೆ ಕೆಳದಿ, ಹಾಗಲವಾಡಿ, ಸ್ವಾದಿ, ಬೀಳಗಿ ಕೊಡಗು ಹರಪನಹಳ್ಳಿ ಪಾಳೆಯಗಾರರು, ಮತ್ತು ಜರಿಮಲೆನಾಯಕರು ಇಂತಹ ಸಣ್ಣ ರಾಜ್ಯಗಳ ಅರಸರೂ ಆಗಿದ್ದರು[೪೨].

ಈ ರೀತಿ ಧಾರ್ಮಿಕ ಹಿನ್ನಲೆಯ ವಿಷಯವಾಗಿ ಅವಲೋಕಿಸಿದಾಗ ಮರುಳಸಿದ್ಧರಿಗಿಂತ ಪೂರ್ವದಲ್ಲಿ ಧರ್ಮಾಂಧತೆ, ಅಜ್ಞಾನ, ಅಂಧಕಾರಗಳನ್ನು ಕಂಡರೆ ಮರುಳಸಿದ್ದರ ನಂತರದ ಕಾಲದಲ್ಲಿಯೂ ಅಂಧಶ್ರದ್ದೆ-ಮೂಢನಂಬಿಕೆಗಳು ಎರಡೂ ಸಂದರ್ಭಗಳಲ್ಲಿದ್ದುದು ಕಂಡುಬರುತ್ತದೆ. ತಮಗಿಂತ ಮೊದಲು ಪ್ರಚಲಿತದಲ್ಲಿದ್ದ, ಶೈವ-ವೀರಶೈವ ಧರ್ಮದ ಒಳ್ಳೆಯ ಆಚರಣೆಗಳನ್ನು-ಸಿದ್ಧಾಂತಗಳನ್ನು ಕ್ರೋಡೀಕರಿಸಿ ಬಸವೇಶ್ವರರು ಶರಣ ಧರ್ಮವನ್ನು ಸ್ಥಾಪನೆ ಮಾಡಿದರು. ಮೊದಲಿದ್ದ ವೀರಶೈವ ಧರ್ಮಕ್ಕೆ ಹೊಸ ಆಯಾಮ ನೀಡಿ, ಸಕಲರಿಗೂ ಮುಕ್ತ ಅವಕಾಶ ಕಲ್ಪಿಸಿಕೊಟ್ಟರು. ಅನೇಕ ಕಠಿಣ ನಿಯಮಗಳನ್ನು ಗೊಡ್ಡು ಆಚರಣೆಗಳನ್ನು ಕೈ ಬಿಟ್ಟು ಧರ್ಮವನ್ನು ಸರಳಗೊಳಿಸಿ ಸಾಮಾನ್ಯನ ಮಟ್ಟಕ್ಕೆ ತಲುಪಿಸಿದರು. ಬಸವೇಶ್ವರರಂತೆ ಮರುಳಸಿದ್ಧರು ಸಮಾಜದ ತುಳಿತಕ್ಕೆ ಒಳಗಾದ ದಲಿತರ ಒಳಿತಿಗಾಗಿ ಹಾಗೂ ಧಾರ್ಮಿಕ ಅಂಧಕಾರದಲ್ಲಿದ್ದ ಮೂಢನಂಬಿಕೆಗಳು ಅಂಧ ಸಂಪ್ರದಾಯವನ್ನು ತೊಡೆದು ಹಾಕುವಲ್ಲಿ ಕರ್ನಾಟಕದ ಬಹುಭಾಗದಲ್ಲಿ ಸಂಚರಿಸಿ ಧಾರ್ಮಿಕ ಮತ್ತು ಸಮಾಜ ಸುಧಾರಕರಾಗಿ ಗುರುತಿಸಿಕೊಂಡಿದ್ದಾರೆ. ಮರುಳಸಿದ್ಧರು ಕಾಲವಾದ ನಂತರ ಕ್ರಿ. ಶ ೧೪ನೇ ಶತಮಾನದ ತರುವಾಯ ವೀರಶೈವ ಧರ್ಮ ಕ್ರಿ. ಶ ೧೯ ನೇ ಶತಮಾನದ ವರೆಗೂ

ಆಂತರಿಕ ಸಂಘರ್ಷ ನಡೆದಿರುವುದಾಗಿ ತಿಳಿದು ಬರುತ್ತದೆ.

❖ **ಸಾಮಾಜಿಕ ಸ್ಥಿತಿ :**

ಭರತ ಖಂಡದ ಜನಜೀವನದ ಸ್ವರೂಪಕ್ಕೆ ಧರ್ಮವೇ ನಿರ್ಣಾಯಕ ಶಕ್ತಿಯಾಯಿತು. ಧರ್ಮವನ್ನು ತನ್ನ ಜೀವನದ ಸಾರಸರ್ವಸ್ವವನ್ನಾಗಿ ಇತಿಹಾಸದ ಪ್ರಾರಂಭದ ದಿನ ಗಳಲ್ಲಿಯೇ ಭಾರತ ಆರಿಸಿಕೊಂಡಿತು. ಜೀವನದ ಎಲ್ಲ ರಂಗಗಳಲ್ಲಿಯೂ ಧರ್ಮವೇ ಹಾಸು ಹೊಕ್ಕಾಗಿ ಪರಿಣಮಿಸುವಂತಾ–ಯಿತು. ಒಂದು ಕಡೆಯಲ್ಲಿ ಇದರಿಂದ ಒಳಿತಾದರೂ ಇನ್ನೊಂದು ಕಡೆಯಲ್ಲಿ, ಧರ್ಮದ ಸ್ವರೂಪ ಹಿಂದೆ ನೋಡಿದಂತೆ ಮಸುಳಿಸಿದಾಗ ಅದಕ್ಕನುಗುಣವಾಗಿ ಸಾಮಾಜಿಕ ಜೀವನವೂ ಕಲುಷಿತವಾಯಿತು. ಅದನ್ನು ಪ್ರತಿಭಟಿಸಿ ಧರ್ಮದ ನಿಜಸ್ವರೂಪದ ಬೆಳಕಿನಲ್ಲಿ ಸಾಮಾಜಿಕ ಜೀವನವನ್ನು ಹಸನುಗೊಳಿಸುವ ಪ್ರಯತ್ನಗಳೂ ನಡೆಯುತ್ತಾ ಬಂದವು. ಇಂತಹ ಪ್ರಯತ್ನಗಳಲ್ಲಿ ಕರ್ಣಾಟಕದ ಪಾತ್ರ ಪ್ರಮುಖವಾದುದು. ಸಾಮಾಜಿಕ ಜೀವನವನ್ನು ಸಮಾನತೆಯ ಆಧಾರದ ಮೇಲೆ ಕಟ್ಟಲು ಪ್ರಭಾವ ಶಾಲಿಯಾದ ಪ್ರಯತ್ನಗಳು ಇಲ್ಲಿ ನಡೆದಿವೆ. ಅದರ ಮಹತ್ವವನ್ನರಿಯಬೇಕಾದರೆ ಇಲ್ಲಿನ ಸಾಮಾಜಿಕ ಜೀವನದ ಸ್ವರೂಪವನ್ನು ಮೊದಲು ತಿಳಿಯುವುದು ಅವಶ್ಯಕ[೪೩].

೧೨ನೆಯ ಶತಮಾನಕ್ಕಿಂತ ಪೂರ್ವದಲ್ಲಿದ್ದ ಸಾಮಾಜಿಕ ಪರಿಸ್ಥಿತಿ ಅಸಮಾನತೆಯಿಂದ ಕೂಡಿತ್ತೆಂಬುದಕ್ಕೆ ಅನೇಕ ಆಧಾರಗಳು ದೊರೆಯುತ್ತವೆ. ಸಾಮಾಜಿಕ ಮೌಲ್ಯಗಳು ಕುಸಿದು ಜನಸಾಮಾನ್ಯರ ನಡುವಿನ ಮತಾಂಧತೆಯಿಂದ ಅನೇಕ ಕಲಹಗಳಾಗುತ್ತಿದ್ದವು. ಹೀಗಾಗಿ ಸಾಮಾಜಿಕ ಬದುಕಿನಲ್ಲಿ ನೆಮ್ಮದಿಯಿರಲಿಲ್ಲ. ವ್ಯವಸಾಯ ಅಂದಿನ ಜನರ ಮುಖ್ಯ ಉದ್ಯೋಗವಾಗಿತ್ತು. ಬಡಿಗತನ, ಕಮ್ಮಾರಿಕೆ, ಚಮ್ಮಾರಿಕೆ, ನೇಕಾರಿಕೆಯಂತಹ ಕಸುಬುಗಳು ವಂಶಪಾರಂಪರ್ಯದಿಂದ ಬೆಳೆದುಕೊಂಡು ಬಂದಿದ್ದವು. ಆಯಾ ಮತ–ಧರ್ಮಗಳ ಹಿನ್ನಲೆಯಲ್ಲಿ ಹಬ್ಬಗಳು, ಧಾರ್ಮಿಕ ಉತ್ಸವಗಳು, ಜಾತ್ರೆಗಳು ನಡೆಯುತ್ತಿದ್ದವು. ವಿನಿಮಯ ಪದ್ದತಿ ಜಾರಿಯಲ್ಲಿತ್ತು. ತಮ್ಮ ಆಸ್ತಿ ಸಂಪತ್ತುಗಳನ್ನು ರಕ್ಷಿಸಿಕೊಳ್ಳಲು ಪ್ರತಿ ಗ್ರಾಮಗಳಲ್ಲಿಯೂ ವೀರರ ಗುಂಪುಗಳಿರುತ್ತಿದ್ದವು. ಯುದ್ಧದಲ್ಲಿ ಮಡಿದವರ ನೆನಪಿಗಾಗಿ ವೀರಗಲ್ಲುಗಳನ್ನು, ಸತಿ–ಹೋದವರ ನೆನಪಿಗಾಗಿ ಮಾಸ್ತಿಗಲ್ಲುಗಳನ್ನು ನಿಲ್ಲಿಸುತ್ತಿದ್ದರು. ಮಡಿದವರ ಆತ್ಮಕ್ಕೆ ಶಾಂತಿಸಿಗಲೆಂದು ಬ್ರಾಹ್ಮಣರಿಗೆ ಗೋದಾನ ಭೂದಾನಗಳನ್ನು ಮಾಡುತ್ತಿದ್ದರು.

ಇದೇ ಸಂದರ್ಭದಲ್ಲಿ ಜಾತಿ–ಪದ್ಧತಿ ಜಾರಿಯಲ್ಲಿತ್ತು. ಚತುರ್ವರ್ಣಗಳಲ್ಲದೆ ಅಸ್ಪೃಶ್ಯರೆಂಬ ಪಂಚಮವರ್ಣ ಆಗ ಸ್ಪಷ್ಟವಾಗಿ ಬೆಳೆದಿತ್ತು. ಚತುರ್ವರ್ಣ ಪದ್ಧತಿಯಲ್ಲಿ ಬ್ರಾಹ್ಮಣರಿಗೆ ಮತ್ತು ಕ್ಷತ್ರಿಯರಿಗೆ ಸಮಾಜದಲ್ಲಿ ಹೆಚ್ಚಿನ ಅಧಿಕಾರಗಳನ್ನು, ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿತ್ತು.

ಸಮಾಜದಲ್ಲಿ ಅತ್ಯುನ್ನತವಾದ ಸ್ಥಾನವನ್ನು ಬ್ರಾಹ್ಮಣರಿಗೆ ನೀಡಲಾಗಿತ್ತು. ವೈಶ್ಯ ವ್ಯಾಪಾರ ಮಾಡಿ ತೆರಿಗೆಯ ರೂಪದಲ್ಲಿ ರಾಜರಿಗೆ ಹಣ ಸಂದಾಯ ಮಾಡಬೇಕಾಗಿತ್ತು. ಶೂದ್ರರನ್ನು ಅತ್ಯಂತ ಕೀಳಾಗಿ ಕಾಣಲಾಗುತ್ತಿತ್ತು. ಪಂಚಮರ ಸ್ಥಿತಿಯಂತೂ ಪ್ರಾಣಿಗಳಿಗಿಂತಲೂ ಕಡೆಯಾಗಿತ್ತು. ಕ್ಷತ್ರಿಯರಿಗೆ ಮಾತ್ರ ಬ್ರಾಹ್ಮಣರೇ ವೇದಾಧ್ಯಯನ ಮಾಡಿಸುತ್ತಿದ್ದರು. ವೇದಾಧ್ಯಯನ ಮಾಡಿಸುವ ಅಧಿಕಾರ ಕ್ಷತ್ರಿಯರಿಗಿರಲಿಲ್ಲ. ಶೂದ್ರರಿಗೆ ವೇದದ ನುಡಿಗಳನ್ನು ಕೇಳುವ ಹಕ್ಕು ಇರಲಿಲ್ಲ. ಹಾಗೇನಾದರೂ ಶೂದ್ರರು ತಪ್ಪಿ ಕೇಳಿದರೆ ಅಂತವರ ಕಿವಿಯಲ್ಲಿ ಕಾಯ್ದಸೀಸವನ್ನು ಹೊಯ್ಯುತ್ತಿದ್ದರು. ಅಸ್ಪೃಶ್ಯರು ಊರೊಳಗೆ ಬರಬೇಕಾದರೆ ಕೊರಳಲ್ಲಿ ಗಂಟೆಕಟ್ಟಿಕೊಂಡು ಬರಬೇಕಾಗುತ್ತಿತ್ತು. ಇವರ ನೆರಳು ಉಚ್ಚ ಜಾತಿಯವರ ಮೇಲೆ ಬಿದ್ದರೆ ಅದಕ್ಕೂ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು.

ಓದುವುದು, ಓದಿಸುವುದು ಹಾಗೂ ಪಠಣ ಮಾಡುವುದರ ಜತಗೆ ಬೇರೆ ಉದ್ಯೋಗಗಳನ್ನು ಮಾಡುವ ಅವಕಾಶ ಬ್ರಾಹ್ಮಣರದಾಗಿತ್ತು. ಈ ವಿಷಯದ ಬಗೆಗೆ ಗೌತಮ ಧರ್ಮಶಾಸ್ತ್ರದಲ್ಲೂ ಪ್ರಸ್ತಾಪವಿದೆ. ರಾಷ್ಟ್ರಕೂಟ ಚಾಲುಕ್ಯ ಅರಸರ ಕಾಲದ ಮಂತ್ರಿಗಳಲ್ಲಿ ಅನೇಕರು ಬ್ರಾಹ್ಮಣರಾಗಿದ್ದರು. ಹುಟ್ಟಿನಿಂದ ಜಾತಿಯ ನಿರ್ಧಾರವಾಗುತ್ತಿದ್ದುದರಿಂದ ಬ್ರಾಹ್ಮಣರಿಗೆ ಹೆಚ್ಚಿನ ಸೌಲಭ್ಯಗಳು ದೊರೆಯುತ್ತಿದ್ದವು.

ಯಜ್ಞ ಯಾಗಾದಿಗಳನ್ನು ಮಾಡುವ ಅಧಿಕಾರ ಬ್ರಾಹ್ಮಣರಂತೆ ಕ್ಷತ್ರಿಯರಿಗೂ ಇತ್ತು ಮರಣದಂಡನೆಯ ಶಿಕ್ಷೆಯಲ್ಲಿ ಇಬ್ಬರಿಗೂ ವಿನಾಯಿತಿ ಇತ್ತು. ಮೂರನೇ ಸ್ಥಾನದಲ್ಲಿದ್ದ ವೈಶ್ಯರು ಸಣ್ಣ ಪುಟ್ಟ ವ್ಯವಹಾರಗಳನ್ನು ಮಾಡುತ್ತಿದ್ದರು. ನಾಲ್ಕನೇ ಸ್ಥಾನದಲ್ಲಿದ್ದ ಶೂದ್ರರ ಜೀವನವೆಲ್ಲ ಮೇಲು ವರ್ಗದವರಿಗಾಗಿ ಮೀಸಲಾಗಿತ್ತು. ಪಂಚಮರು ಎಲ್ಲ ಅವಕಾಶಗಳಿಂದ ವಂಚಿತರಾಗಿದ್ದರು. ಈ ಎಲ್ಲ ವಿಷಯವನ್ನು ಧರ್ಮ ಶಾಸ್ತ್ರಗಳೇ ಒಪ್ಪಿಕೊಳ್ಳುತ್ತವೆ.

ದೇವಾಲಯಗಳು ಮಠಗಳು ವಿದ್ಯಾಭ್ಯಾಸ ನೀಡುವ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು ಇಂತಹ ಮಠಗಳ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ಬಳ್ಳಿಗಾವಿ, ಕೋಡಿಮಠದಂತಹ ಕೆಲವು ಮಠಗಳನ್ನು ಉಲ್ಲೇಖಿಸಬಹುದು. ಉತ್ತರ ಕರ್ನಾಟಕದಲ್ಲಿ ಹಳೆಯ ಅಗ್ರಹಾರಗಳು ಅಸ್ತಿತ್ವದಲ್ಲಿದ್ದರೂ ಹೊಸ ಅಗ್ರಹಾರಗಳು ಅಷ್ಟಾಗಿ ಸ್ಥಾಪನೆಯಾಗಲಿಲ್ಲ. ದಕ್ಷಿಣ ಕರ್ನಾಟಕದಲ್ಲಿ ಮಾತ್ರ ಅನೇಕ ಅಗ್ರಹಾರಗಳು ಹುಟ್ಟಿಕೊಂಡವು. ಸಮಾಜವನ್ನು ವಿಭಾಗ ಮಾಡಿದ ಇನ್ನೊಂದು ಮುಖ್ಯ ಅಂಶವೆಂದರೆ ವೃತ್ತಿಭೇದಗಳು. ಬ್ರಾಹ್ಮಣ್ಯನ ಮಗ ಬ್ರಾಹ್ಮಣವನ್ನು ಸ್ವೀಕರಿಸಿ ಪಂಡಿತನಾಗಬೇಕು. ಒಕ್ಕಲಿಗರ ಮಗ ಒಕ್ಕಲುತನ ಮಾಡಿಯೇ ಬದುಕ ಬೇಕು. ನೇಯಲು ನೇಕಾರನ ಮಗನೇ ಬೇಕು. ಕಾಸಿ ಬಡಿಯಲು ಕಮ್ಮಾರನ ಮಗನೇ ಯೋಗ್ಯ, ಮಡಿಕೆ ತಯಾರಿಸುವುದು ಕುಂಬಾರನ ಮಕ್ಕಳಿಗೆ ಸೇರಿದ್ದು-

ಎಂಬಂತಹ ಸಾಮಾಜಿಕ ರೀತಿ–ನೀತಿಗಳು ಬ್ರಾಹ್ಮಣೇತರರನ್ನು ಮುಂದೆ ಬರದಂತೆ ಮಾಡಿದವು. ಧಾರ್ಮಿಕವಾಗಿ ರೂಪಗೊಂಡ ದೇವದಾಸಿ ಪದ್ಧತಿ ಸಾಮಾಜಿಕವಾಗಿ ವೇಶ್ಯಾವೃತ್ತಿಯನ್ನೇ ಹೋಲುತ್ತಿತ್ತು. ಹೀಗೆ ಅಂದಿನ ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ಅನೇಕ ಇತಿಹಾಸ ಕಾರರು ಬರೆದಿದ್ದಾರೆ. ಕೆಲವು ಶಾಸನಗಳಲ್ಲಿ ಈ ಬಗೆಗೆ ಉಲ್ಲೇಖಗಳಿವೆ.

ಕರ್ನಾಟಕದ ಚಾರಿತ್ರಿಕ ದಾಖಲೆಗಳನ್ನು ಗಮನಿಸಿದರೆ, ಹಿಂದಿಗಿತ ಈ ಸಂದರ್ಭದಲ್ಲಿ ವ್ಯಾಪಾರದ ಸ್ಥಿತಿ ಅಭಿವೃದ್ಧಿಯಾದುದು ಕಂಡುಬರುತ್ತದೆ. ಕರ್ನಾಟಕದಿಂದ ಮೆಣಸು, ಸಂಬಾರ ಪದಾರ್ಥ ಇತ್ಯಾದಿಗಳನ್ನು ರಫ್ತು ಮಾಡುತ್ತಿದ್ದ ಹಾಗೂ ಆನೆ, ಕುದುರೆ, ರೇಷ್ಮೆ, ಕರ್ಪೂರಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ಬಗ್ಗೆ ಅರಬ್ಬಿ ಬರಹಗಳಲ್ಲಿಯೂ, ಶಾಸನಗಳಲ್ಲಿಯೂ ಉಲ್ಲೇಖಗಳಿವೆ[೪೪]. ಈ ಕಾಲದಲ್ಲಿ ಕಲ್ಯಾಣ, ಬೇಲೂರು, ದ್ವಾರಸಮುದ್ರ ಇಂಥ ರಾಜಧಾನಿ ಪಟ್ಟಣಗಳು ಮಾತ್ರ ವ್ಯಾಪಾರ ಕೇಂದ್ರಗಳಾಗಿರದೆ ಇತರ ಅನೇಕ ಸ್ಥಳಗಳಲ್ಲೂ ಆರ್ಥಿಕ ಚಟುವಟಿಕೆಗಳು ನಡೆಯುತ್ತಿದ್ದವು. ತೇರದಾಳ, ತಿಳುವಳ್ಳಿ ಕುಪ್ಪಟೂರು, ತುಂಬಲ, ಗೊಬ್ಬೂರು, ಮದ್ದೂರು, ಹುಯಿಲಗೋಳ, ನವಿಲುಗುಂದ, ಹುಲುಗೂರು ಮೊದಲಾದ ಅನೇಕ ಸ್ಥಳಗಳು ವ್ಯಾಪಾರ ಸ್ಥಳಗಳಾಗಿದ್ದವು. ಅವುಗಳಲ್ಲಿ ಹಲವನ್ನು ಬಣಂಜು ಪಟ್ಟಣಗಳೆಂದು ಶಾಸನಗಳು ಹೇಳುತ್ತವೆ[೪೫].

ತೆರಿಗೆಗಳು ವಿಪರೀತವಾಗಿದ್ದವು. ಎಲ್ಲದರ ಮೇಲೆಯು ತೆರಿಗೆಗಳನ್ನು ಹಾಕುತ್ತಿದ್ದ ಬಗೆಗೆ ಅನೇಕ ಶಾಸನಗಳಲ್ಲಿ ಉಲ್ಲೇಖವಿದೆ. 'ಜನಸಾಮಾನ್ಯರ ದೃಷ್ಟಿಯಿಂದ ಭೂಮಿ, ಅಂಗಡಿ, ಮನೆ, ಅಡಿಕೆ ಇವುಗಳ ಮೇಲೆ ವರ್ಷಕ್ಕೊಮ್ಮೆ ಹಾಕುತ್ತಿದ್ದ ಸಿದ್ಧಾಯವೊಂದನ್ನು ಬಿಟ್ಟರೆ ಉಳಿದವುಗಳೆಲ್ಲ ನಿರಂತರವಾಗಿ ಕೊಡಬೇಕಾಗಿದ್ದ ತೆರಿಗೆಗಳಾಗಿದ್ದವು[೪೬]. ಈ ಕಾಲದ ಶಾಸನಗಳನ್ನು ಗಮನಿಸಿದರೆ ಅಕ್ಕಸಾಲೆ, ನಾಯಿಂದ, ಅಂಬಿಗ, ಅಗಸ, ಕಮ್ಮಾರ, ಕುಂಬಾರ, ಇವರೆಲ್ಲರೂ ತೆರಿಗೆಗಳನ್ನು ಕೊಡಬೇಕಾಗಿತ್ತು. ಗಾಣದತೆರೆ, ನೂಲುತೆರೆ, ಮಗ್ಗದೆರೆ, ಬಣ್ಣದೆರೆ, ಕುಲಮೆದೆರೆ ಹೀಗೆ ಎಲ್ಲ ವೃತ್ತಿಯವರೂ ತೆರಿಗೆ ಕೊಡಬೇಕಾಗಿತ್ತು[೪೭]. ೧೧೬೦ ರ ಶಾಸನವೊಂದು ದೋಣಿ ತೆಪ್ಪಗಳಿಗೆ ಸುಂಕ ಹಾಕುತ್ತಿದ್ದರೆಂದು ತಿಳಿಸಿದರೆ, ೧೧೬೨ರ ಶಾಸನವು ಬುಟ್ಟಿ ಹೆಣೆಯುವ ಮೇದಾರರ ಮೇಲೆ ಹಾಕಿರುವ ತೆರಿಗೆಯನ್ನು ಕುರಿತು ಹೇಳುತ್ತದೆ ೧೧೬೨ ರ ಮತ್ತೊಂದು ಶಾಸನ ಕುಂಬಾರರ ಮೇಲೆ ತೆರಿಗೆ ಹಾಕಿದ್ದನ್ನು ಹೇಳಿದರೆ, ೧೧೬೦ರ ಶಾಸನವೊಂದು ಬಳೆಗಾರರಿಗೆ ತೆರಿಗೆ ಹಾಕಿದ್ದನ್ನು ತಿಳಿಸುತ್ತದೆ[೪೮].

ಹೀಗೆ ಅನೇಕ ತೆರಿಗೆಗಳನ್ನು ಕೊಡಬೇಕಾದ ಸ್ಥಿತಿ ಬಂದಾಗ ಸಾಮಾನ್ಯ ಜನ ಈ ತೆರಿಗೆಗಳ ಭಾರದಿಂದ ಕುಸಿದು ಪ್ರತಿಭಟಿಸಿರಬಹುದೆನ್ನಲಿಕ್ಕೆ ಒಂದೆರಡು ಉದಾಹರಣೆಗಳು ದೊರೆಯುತ್ತವೆ.

೧೦೭೨ರ ಕೋಲಾರ ಶಾಸನದಲ್ಲಿ ಎಮ್ಮೆಗಳ ಮೇಲೆ ಹಾಕಿದ ಸುಂಕದ ವಿರುದ್ಧ ಪ್ರತಿಭಟಿಸಿದ್ದಾರೆ[೪೯]. ೧೧೪೫ ರ ಶಾಸನವೊಂದರಲ್ಲಿ ಅನ್ಯಾಯದ ತೆರಿಗೆಯನ್ನು ಕೊಡದೆ ಅಧಿಕಾರಿಯಿಂದ ಅವಮಾನಿತನಾಗಿ, ತಡೆಯಲಾರದೆ ಹೋರಾಡಿ ಮಡಿದವನ ವಿಚಾರವಿದೆ[೫೦]. ಈ ಬಗೆಯ ಪ್ರತಿಭಟನೆ ಸಾಮೂಹಿಕ ಸಂಘಟಿತ ಪ್ರಯತ್ನವಾಗಿ ಹುಟ್ಟಿ ಬಂದಿದ್ದರ ಫಲವೇ ವಚನಕಾರರ ಚಳವಳಿಯೆಂದು ಸಿ. ವೀರಣ್ಣನವರು ತಾಳುವ ನಿಲುವಿನಲ್ಲಿ ಸತ್ಯಾಂಶವಿದೆ[೫೧].

ಅರಸ, ಮಠ, ಅಧಿಕಾರಿ ಮತ್ತು ವ್ಯಾಪಾರಿಗಳಿಂದ ಶೋಷಿತರಾದ ವೃತ್ತಿ ಜೀವಿಗಳು ತಮ್ಮವೇ ಆದಂತಹ ಗುಂಪುಗಳನ್ನು ಹೊಂದಿದ್ದರು. ಈ ಗುಂಪುಗಳನ್ನು ಜೇಡಗೊತ್ತಳಿ ಕಂಚುಗಾರಗೊತ್ತಳಿ, ಚಿಪ್ಪಿಗಗೊತ್ತಳಿ, ಗಾಣೊಕ್ಕಲು ಎಂದು ಶಾಸನಗಳಲ್ಲಿ ಬರುತ್ತವೆ. ತೆರಿಗೆಗಳ ಭಾರದಿಂದ ತತ್ತರಿಸುತ್ತಿದ್ದ ಕಾಯಕ ಜೀವಿಗಳಲ್ಲಿ ಅಲ್ಲಲ್ಲಿ ಪ್ರತಿಭಟನೆ ಕಂಡುಬಂದರೂ ಕೂಡ, ಇವರು ವರ್ತಕರನ್ನು ಎದುರು ಹಾಕಿಕೊಳ್ಳುವಂತಿರಲಿಲ್ಲ. ವ್ಯಾಪಾರವನ್ನೆಲ್ಲ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದ ವೀರಬಣಂಜಗರು, ರಾಜರ ಸ್ನೇಹಿತರಾಗುವದರ ಮೂಲಕ ಚಿಕ್ಕ ಚಿಕ್ಕ ಸೈನ್ಯಗಳನ್ನು ಇಟ್ಟುಕೊಂಡಿದ್ದರೆಂದು ತಿಳಿದುಬರುತ್ತದೆ[೫೨].

ಬಸವೇಶ್ವರ ಮುಂತಾದ ವಚನಕಾರರು ಅಂದಿನ ಸಮಾಜ ವ್ಯವಸ್ಥೆಯ ವಿರುದ್ಧ ದನಿಯೆತ್ತಲು ಇನ್ನೂ ಅನೇಕ ಇಂತಹ ಕಾರಣಗಳಿದ್ದುದನ್ನು ಶಾಸನಗಳು. ತಿಳಿಸುತ್ತವೆ. ಒಟ್ಟಾರೆಯಾಗಿ ಬಸವಪೂರ್ವಯುಗದಿಂದ ಬಸವಯುಗದವರೆಗಿನ ಅವಧಿಯ ಸಾಮಾಜಿಕ ಸಂದರ್ಭ ಅಸಮಾನತೆಯಿಂದ ಕೂಡಿದ್ದು, ತೀವ್ರ ಶೋಷಣೆಗೊಳಗಾದ ಕಾಯಕ ಜೀವಿಗಳು ಬಸವೇಶ್ವರರ ನೇತೃತ್ವದಲ್ಲಿ ಸಂಘಟಿತರಾಗಿ ಚಳುವಳಿ ಹೂಡಿದ್ದರ ಅನಿವಾರ್ಯತೆಯನ್ನು ಅಂದಿನ ಕಾಲದ ದಾಖಲೆಗಳಿಂದ ತಿಳಿದುಕೊಳ್ಳಬಹುದಾಗಿದೆ[೫೩].

ಶರಣರ ಕಾಲಕ್ಕೆ ಹನ್ನೆರಡನೆಯ ಶತಮಾನ ಆಕರ್ಷಕವಾಗಿತ್ತು. ಆದ್ದರಿಂದ ಆ ಕಾಲ ಅಧ್ಯಯನಾರ್ಹವಾದುದು. ದಲಿತರನ್ನು ದೇವಾಲಯದಲ್ಲಿ ಬಿಡದೇ ಇದ್ದಾಗ, ದೇವಾಲಯದಲ್ಲಿದ್ದ ದೇವರನ್ನೇ ದಲಿತರ ಮನೆಗೆ ಕರೆತಂದ ಕೀರ್ತಿ ಬಸವಣ್ಣನಿಗಿದೆ. ಇಂಥ ಚಳುವಳಿಯ ಮೂಲಕ ಅಂದು ಬಸವಣ್ಣ ದಲಿತರಿಗೆ ನೆಲೆಯಾದ, ನೇತೃತ್ವ ನೀಡಿದ. ಆದರೆ, ಇದೇ ಬಸವನ ತರುವಾಯ ಭಕ್ತಿ ವೀರಶೈವರಲ್ಲಿ ಖಾಸಗೀಕರಣಗೊಂಡಿತು, ಅಧಿಕಾರ ಕೆಲವರಲ್ಲಿ ಕೇಂದ್ರೀಕರಣವಾಯಿತು ಜಂಗಮಗಳು ಸ್ಥಾವರ ಗೊಂಡವು; ವರ್ಣಗಳು ಮತ್ತೆ ಶ್ರೇಣೀಕರಣಗೊಂಡವು[೫೪]. ಅಂಥಹ ಕೆಳವರ್ಗದ ಶರಣರಲ್ಲಿ ಒಬ್ಬರಾದ ರೇವಣಸಿದ್ಧರ ಸಮಕಾಲೀನರಾದ ಮರುಳಸಿದ್ಧರು. ಮೇಲುವರ್ಗದವರ ಪ್ರಭುತ್ವದ ತುಳಿತಕ್ಕೆ ಒಳಗಾದ ಕೆಳವರ್ಗಕ್ಕೆ ಆಗುತ್ತಿದ್ದ ಅನ್ಯಾಯಗಳ ವಿರುದ್ಧ ಧ್ವನಿ ಎತ್ತಿದವರಲ್ಲಿ ಇವರು ಒಬ್ಬರು. ಮರುಳಸಿದ್ಧರ ಸಮಕಾಲೀನ ಸಮಾಜದ ಚಿತ್ರಣವನ್ನು

ಅವಲೋಕಿಸುವುದಾದರೆ ಮರುಳಸಿದ್ಧರು ಹೊಲೆಜನ್ಮದಲ್ಲಿ ಕಗ್ಗಲ್ಲುಪುರ (ಉಜ್ಜನಿ ಸಮೀಪ ಇದು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕು)ದಲ್ಲಿ ಹುಟ್ಟಿ ಮೇಲುವರ್ಗದ ಬಾಚನಗೌಡನ ಮನೆಯಲ್ಲಿ ಸಾಕುಮಗನಾಗಿ ಬೆಳೆಯುತ್ತಾರೆ. ಮುಂದೆ ಮರುಳಸಿದ್ಧರು ಕೆಳಜಾತಿಯವರ ಏಳಿಗೆಗಾಗಿ ಹೋರಾಡಿದ ಬಗೆಯನ್ನು ದೇವಕವಿ ರಚಿತ 'ಮರುಳಸಿದ್ಧ ಕಾವ್ಯ'.[೫೫] ಎಂಬ ಕೃತಿಯಲ್ಲಿ ನಿರೂಪಿಸುತ್ತಾರೆ. ಮರುಳಸಿದ್ಧರ ಬಾಲ್ಯಲೀಲೆಯ ಕಾಲದಲ್ಲಿದ್ದ ಕುಂಚಿಟಿಗ, ಕುಡಿಯೊಕ್ಕಲಿಗ, ಪಂಚಮರ, ಪರಿಹಾರ, ಕಂಚುಗಾರ, ಕರಿಕುಲ, ನಂಚಕಟ್ಟುವ, ಪಂಚವರ್ಣ, ಚೋರವಿದ್ಯಾದ, ಚಕ್ರಕುಲಹೀನ[೫೬].

ಶತಮಾನಗಳ ಕಾಲ ಅಸ್ಪೃಶ್ಯರನ್ನು ಕೀಳಾಗಿ ಕಂಡ ಪುರೋಹಿತ ಶಾಹಿ ವರ್ಗವನ್ನು ಪ್ರತಿಭಟಿಸಿದ ಮೊದಲ ದಲಿತ ನಾಯಕ ಮರುಳಸಿದ್ಧ. ಏಕಾಂಗಿವೀರನಾಗಿ ಸಮಾಜದಲ್ಲಿ ನಡೆಯುವ ಹೀನ ಕೃತ್ಯಗಳನ್ನು ಖಂಡಿಸುತ್ತಾನೆ.ಇವನ ಜನನ ಮತ್ತು ನಚಿತರದ ಹೋರಾಟವನ್ನು ಈ ಹಿಂದೆ ವಿವರಿಸಿದೆ. ಅಸ್ಪೃಶ್ಯತೆಯನ್ನು ವಿರೋಧಿಸಿ ಮಧ್ಯಕಾಲೀನ ಸಂದರ್ಭದಲ್ಲಿ ಅನೇಕ ಚಳವಳಿಗಳು ನಡೆದಿವೆ. ತಮಿಳುನಾಡಿನಲ್ಲಿ ನಾಯನ್ಮಾರು ಮತ್ತು ಆಳ್ವಾರರು ನಡೆಸಿದ ಭಕ್ತಿ ಚಳವಳಿ ಕರ್ನಾಟಕದ ಮೇಲೆ ಸಾಕಷ್ಟು ಪ್ರಭಾವ ಬೀರಿತು[೫೭]. ಹನ್ನೆರಡನೆಯ ಶತಮಾನದ ವಚನಕಾರರು, ಹರಿಹರ ಹಾಗೂ ಅವನ ಮುಂದಿನ ವೀರಶೈವ ಕವಿಗಳು ಈ ತಮಿಳುನಾಡಿನ ಅರುವತ್ತು ಮೂವರು ಪುರಾತನರಿಂದ ವಿಶೇಷವಾಗಿ ಪ್ರಭಾವಿತರಾಗಿರುವರು[೫೮]. ದೇವಕವಿ ಕೃತ ಸಿದ್ಧಲಿಂಗ ಚಾರಿತ್ರ್ಯದಲ್ಲಿ ೬೩ ಜನ ಪುರಾತನರಾದ ದಲಿತವರ್ಗದಿಂದ ಬಂದ ನಾಯನಾರರನ್ನು ಕಾಣಬಹುದಾಗಿದೆ. ಅವರಲ್ಲಿ ಪ್ರಮುಖವಾಗಿ ತಿರುಕುರಿಪ್ಪುಂಡ ನಾಯನರ್ ಅಗಸರಕೋಮಿಗೆ ಸೇರಿದವನು. ತಿರುನೀಲಕಂಠನಾಯಾನರ್ ಕುಂಬಾರರ ಕೋಮಿಗೆ ಸೇರಿದವನು ಕಲಿಯನಾಯನರ್ ಗಾಣಿಗರ ಕೋಮಿಗೆ ಸೇರಿದವನು[೫೯]. ಈ ೬೩ ಪುರಾತನರ ಪ್ರಸ್ತಾಪವನ್ನು ದೇವಕವಿ ಕೃತ ಮರುಳಸಿದ್ಧ ಕಾವ್ಯದಲ್ಲಿ ಉಲ್ಲೇಖಿತವಾಗಿದೆ[೬೦].

ಮರುಳಸಿದ್ಧ, ಬಸವೇಶ್ವರರ, ಪೂರ್ವದಲ್ಲಿದ್ದ ಸಾಮಾಜಿಕ ದಾರುಣ ಸ್ಥಿತಿನಂತರ ವಿಜಯನಗರ ಅರಸರು, ಬಹಮನಿ ಸುಲ್ತಾನರು, ಷಾಯಿಸುಲ್ತಾನರುಗಳು. ಪಾಳೆಯಗಾರರ ಕಾಲಕ್ಕಿರಲಿಲ್ಲವಾದರೂ, ಮೂಢನಂಬಿಕೆ–ಜಾತಿಕಲಹಗಳಿಂದ ಸಮಾಜ ಮುಕ್ತವಾಗಿರಲಿಲ್ಲ. ಬಸವೇಶ್ವರರ ಕಾಲಕ್ಕಿಂತ ಭಿನ್ನವಾದ ಸಮಸ್ಯೆ ಪುರಂದರರ ಕಾಲದಲ್ಲಿ ಹುಟ್ಟಿಕೊಂಡಿತ್ತು[೬೧]. ದಾಸ ಸಾಹಿತ್ಯವೂ ಸಾಮಾಜಿಕ ಸಮಾನತೆಯ ಅಗತ್ಯವನ್ನು ಎತ್ತಿಹೇಳುತ್ತದೆ[೬೨]. ಮಹಮ್ಮದಿಯರ ಆಕ್ರಮಣದಿಂದ ಧರ್ಮ–ಸಂಸ್ಕೃತಿಯಲ್ಲಿ ಅನೇಕ ಸ್ಥಿತ್ಯಂತರಗಳು ನಡೆಯುವ ಸಂಭವವಿತ್ತು. ಬಹಮನಿ ಸುಲ್ತಾನರ ಆಳ್ವಿಕೆಯಲ್ಲಿ ಸ್ಥಳೀಯ ಸುಲ್ತಾನರು ಮತ್ತು ಪರಕೀಯರು ಎಂಬ ಎರಡು

ಪಂಗಡಗಳಿದ್ದವು. ಸ್ಥಳೀಯ ಸುಲ್ತಾನರು ಸಾಕಷ್ಟು ಅಧಿಕಾರ–ಸಂಪತ್ತುಗಳೊಂದಿಗೆ ಸುಖವಾಗಿರುತ್ತಿದ್ದರು. ಜನಸಾಮಾನ್ಯರ ಬದುಕು ಸಂಪೂರ್ಣ ತೃಪ್ತಿಕರವಾಗಿರಲಿಲ್ಲ. ಜನಸಾಮಾನ್ಯರ ವರ್ಣಾಶ್ರಮದ ಆಚರಣೆ ಮತ್ತೆ ಮುಂದುವರೆದಿತ್ತು. ಬಹಮನಿಸುಲ್ತಾನರಲ್ಲಿ ಕೆಲವರು ಹಿಂದೂ ಮಹಿಳೆಯರನ್ನು ಮದುವೆಯಾದರೂ ಕೂಡ, ಅಲ್ಲಲ್ಲಿ ಮತೀಯ ಸಂಘರ್ಷಗಳು ನಡೆಯುತ್ತಿದ್ದವು.

ಪ್ರಸ್ತುತ ಅಧ್ಯಯನದಲ್ಲಿ ೧೬ನೇ ಶತಮಾನದಲ್ಲಿ ಹುಟ್ಟಿಕೊಂಡ ವೀರಶೈವ ಆಂದೋಲನ ಕ್ರಮೇಣ ತನ್ನಲ್ಲೇ ಜಾತಿ ವ್ಯವಸ್ಥೆಯೊಂದನ್ನು ಹುಟ್ಟುಹಾಕಿಕೊಂಡಿತು. ಲಿಂಗಾಯತರಲ್ಲೇ ಅನೇಕ ಒಳಪಂಗಡಗಳು ಹುಟ್ಟಿಕೊಂಡವು. ಇದರಿಂದಾಗಿ ಜಾತಿ ವ್ಯವಸ್ಥೆಯನ್ನು ಮೀರಿ ನಿಲ್ಲುವುದು ಸಾಧ್ಯವಾಗಲಿಲ್ಲ[೬೩]. ಹರದನಹಳ್ಳಿ ತೋಂಟದ ಸಿದ್ಧಲಿಂಗನ ಬಳಿವಿಡಿದು ಬೆಳೆದ ೧೦೧ ವಿರಕ್ತರ ವೀರಶೈವ ಧಾರ್ಮಿಕ ಚಳವಳಿಯು ಭರದಿಂದ ಸಾಗಿದ ಕಾಲವದು. ಈ ಚಳವಳಿಯು ಕರ್ನಾಟಕದಲ್ಲಿ ೧೨ನೇ ಶತಮಾನದ ಆಂದೋಲನಕ್ಕಿಂತಲೂ ಮಿಗಿಲಾದ ಪ್ರಭಾವವನ್ನುಗಳಿಸಿತ್ತೆಂದರೆ ಅನುಚಿತವಾಗಲಾರದು. ಬಸವಾದಿ ಶಿವಶರಣರು ಕಲ್ಯಾಣವೊಂದೆಡೆ ಕುಳಿತು ಚಳುವಳಿ ಮಾಡಿದರೆ ಈ ೧೦೧ ವಿರಕ್ತರು ನಾಡಿನ ೧೦೧ ಮೂಲೆಯನ್ನು ಸುತ್ತಿದರು[೬೪]. ಈ ಪರಿಣಾಮವಾಗಿಯೇ ಈ ವರ್ಗವೇ ಆಚಾರ್ಯ ಮತ್ತು ವಿರಕ್ತ ಎಂಬ ಹೆಸರಿನಲ್ಲಿ ಗುರು ಮತ್ತು ಜಂಗಮ ಸ್ಥಾನಗಳನ್ನು ಆಕ್ರಮಿಸಿಕೊಳ್ಳಲೆತ್ನಿಸಿ ಭಿನ್ನ ಪಥವನ್ನೇ ಸೃಷ್ಟಿಸಿ ಉಭಯರು ಪ್ರತ್ಯೇಕ ದಾರಿಯನ್ನೇ ಹಿಡಿದಿದ್ದಾರೆ[೬೫]. ಈ ರೀತಿಯ ವೀರಶೈವ ಪಂಥದ ಆಂತರಿಕ ಸಂಘರ್ಷವು ೧೯ನೇ ಶತಮಾನದಲ್ಲಿಯೂ ಈ ಬೆಳವಣಿಗೆಯನ್ನು ಗುರುತಿಸಬಹುದಾಗಿದೆ. ಕಾಲ ಕ್ರಮೇಣ ವಿರಕ್ತ ವರ್ಗದಲ್ಲಿ ವೈಷಮ್ಯ ಬೆಳೆದು ಐದು ಪಂಗಡಗಳಾದವು. ಇವೇ ಇಂದಿನ ಐದು ಸಮಯಗಳು (ಮುರುಗಿ, ಚೀಲಾಳ, ಕೆಂಪಿ, ಕುಮಾರ, ಸಂಪಾದನೆ) ಪಟ್ಟ–ಚರಾಧಿಕಾರಿಗಳಲ್ಲಿಯೂ ಐದು ಪೀಠಗಳು ಬಳಕೆಗೆ ಬಂದುವು ವೀರ, ಸದ್ಧರ್ಮ, ಸೂರ್ಯ, ಜ್ಞಾನ ಮತ್ತು ವೈರಾಗ್ಯ[೬೬]. ಈ ವೀರಶೈವ ಪಂಥದಲ್ಲಿ ಹುಟ್ಟಿಕೊಂಡ ಒಳಪಂಗಡಗಳು ಕೆಲವೊಂದು ಪ್ರದೇಶಗಳಿಗಷ್ಟೇ ಸೀಮಿತಗೊಂಡು ಹಾಗೂ ಕೆಲವು ವ್ಯಕ್ತಿಗಳಿಗಷ್ಟೇ ಸಂಬಂಧಿಸಿದ ವಿಚಾರವಾಗಿ ಪರಿವರ್ತನೆಗೊಂಡಿತು[೬೭].

ಇದುವರಗೂ ಈ ಮೇಲೆ ತಿಳಿಸಲಾದ ರಾಜಕೀಯ, ಧಾರ್ಮಿಕ, ಮತ್ತು ಸಾಮಾಜಿಕ ಅಂಶಗಳನ್ನು ಕರ್ನಾಟಕ ಚರಿತ್ರೆಗೆ ಸಂಬಂಧಿಸಿದ ಪ್ರಾಚೀನ, ಮಧ್ಯಕಾಲೀನ, ಮತ್ತು ಆಧುನಿಕ ಕಾಲಕ್ಕೂ ಅನ್ವಯಿಸಿದಂತೆ ಅಂದಿನ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿ–ಗತಿಯನ್ನು ವಿವೇಚಿಸುವುದು ಸೂಕ್ತವೆನಿಸುತ್ತದೆ. ಅಲ್ಲದೇ ಹನ್ನೆರಡನೆ ಶತಮಾನದ ಶಿವಶರಣರಾದ ಬಸವೇಶ್ವರರು ಹಾಗೂ ಅವರ ಸಮಕಾಲೀನ ಶಿವಶರಣರ ಮೇಲೆ ಈ ಅಂಶಗಳು ಹೇಗೆ ಪ್ರಭಾವಿತವಾಗಿದ್ದವು

ಎಂಬುದನ್ನು ತಿಳಿಯಬಹುದಲ್ಲದೆ. ಬಸವೇಶ್ವರರ ತರುವಾಯ ಗುರುತಿಸಲ್ಪಡುವ ಮರುಳಸಿದ್ಧರು ಒಬ್ಬರಾಗಿದ್ದಾರೆ, ಕಲ್ಯಾಣ ಕ್ರಾಂತಿಯ ನಂತರ ಕರ್ನಾಟಕದಲ್ಲಿ ಕಲ್ಯಾಣದಿಂದ ಹೊರಗಿದ್ದು, ಸಮಾಜದ ಸುಧಾರಣೆಗಾಗಿ ಶ್ರಮಿಸಿದ ಕೆಳವರ್ಗದ ದಲಿತೋದ್ಧಾರಕ ಮರುಳಸಿದ್ಧರು ಕರ್ನಾಟಕದ ತುಂಬಾ ಅಲಿದಾಡಿ ಕೊಂಡಿದ್ದವರು. ಮರುಳಸಿದ್ಧರು ಬದುಕಿದ್ದ ಕಾಲದ ಪೂರ್ವಯುಗದ, ಮತ್ತು ಸಮಕಾಲೀನ ಸ್ಥಿತಿ ಹಾಗೂ ನಂತರದ ಕಾಲದಲ್ಲಿ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿ–ಗತಿಯನ್ನು ಅವಲೋಕಿಸಲಾಗಿದೆ. ಈ ಹಿನ್ನಲೆಯಲ್ಲಿ ಮರುಳಸಿದ್ಧರ ಜೀವನದ ಮೇಲೆ ಈ ಅಂಶಗಳು ಹೇಗೆ ಪ್ರಭಾವಿತವಾಗಿವೆ ಎಂಬುದನ್ನು ಪರಿಶೀಲಿಸುವುದು ಗಮನಾರ್ಹವಾದ ಅಂಶವಾಗಿದೆ.

೩.೩.೧. ಮರುಳಸಿದ್ಧರ ಮೂಲಸ್ಥಳ ಮತ್ತು ಪರಿಸರ.

ಕರ್ನಾಟಕದ ಇಪ್ಪತ್ತೇಳು ಜಿಲ್ಲೆಗಳ ಪೈಕಿ ಬಳ್ಳಾರಿ ವಿಜಯನಗರ ಸಾಮ್ರಾಜ್ಯದ ಕಾರಣವಾಗಿ ಅತೀ ಪ್ರಾಮುಖ್ಯತೆ ಪಡೆದಿದೆ. ಬಳ್ಳಾರಿ ಜಿಲ್ಲೆ ಕರ್ನಾಟಕದ ಪೂರ್ವ ಮತ್ತು ಮಧ್ಯದಲ್ಲಿದೆ. ಬಳ್ಳಾರಿ, ಹೊಸಪೇಟೆ, ಹೂವಿನಹಡಗಲಿ (ಹರಪನಹಳ್ಳಿ ಈಗ ದಾವಣಗೆರೆ ಜಿಲ್ಲೆ) ಕೂಡ್ಲಿಗಿ, ಸಂಡೂರು ಮತ್ತು ಹಗರಿಬೊಮ್ಮನಹಳ್ಳಿ ತಾಲೂಕುಗಳು ಬಳ್ಳಾರಿ ಜಿಲ್ಲೆಯಲ್ಲಿವೆ. ಈ ಜಿಲ್ಲೆಯ ಮೇರೆಗಳೆಂದರೆ ದಕ್ಷಿಣಕ್ಕೆ ಚಿತ್ರದುರ್ಗ ಮತ್ತು ದಾವಣಗೆರೆ, ಉತ್ತರಕ್ಕೆ ರಾಯಚೂರು ಮತ್ತು ಕೊಪ್ಪಳ, ಪಶ್ಚಿಮಕ್ಕೆ ಧಾರವಾಡ ಮತ್ತು ಪೂರ್ವಕ್ಕೆ ಆಂಧ್ರಪ್ರದೇಶದ ಕರ್ನೂಲು ಮತ್ತು ಅನಂತಪುರ ಜಿಲ್ಲೆಗಳಿವೆ. ಬಳ್ಳಾರಿ ಜಿಲ್ಲೆಯ ವಿಸ್ತೀರ್ಣ ಸು ೧೬೧ ಕಿ, ಮೀ ಪೂರ್ವ – ಪಶ್ಚಿಮವಾಗಿದ್ದರೆ, ಉತ್ತರ ದಕ್ಚಿಣವಾಗಿ ೮೩.೭ ಕಿ.ಮೀ ಅಗಲ ಹೊಂದಿದೆ. ನೈಋತ್ಯ–ಈಶಾನ್ಯಕ್ಕೆ ಸು.೧೮೭ ಕಿ.ಮೀ ಇದ್ದು, ಇದರ ಅಕ್ಷಾಂಶ ೧೪° ೩೦° – ೧೫° ಮತ್ತು ರೇಖಾಂಶ ೭೫° ೪೦° ಮತ್ತು ೭೭° ೧೧ ನಡುವೆ ಇದೆ. ಒಟ್ಟು ಇದರ ವಿಸ್ತೀರ್ಣ ೯೮೯೮ (ಚ.ಕಿ.ಮೀ)ಅನೇಕ ಗಿರಿ–ಪರ್ವತಗಳಲ್ಲದೆ, ತುಂಗಭದ್ರಾ, ಚಿಕ್ಕ–ಹಗರಿ ನಾರಿಹಳ್ಳ ಮೊದಲಾದ ನದಿಗಳಿವೆ. ಸಂಡೂರು, ಹೊಸಪೇಟೆ–ಬಳ್ಳಾರಿ ಇತರೆಡೆಗಳಲ್ಲಿ ಪರ್ವತ ಪ್ರದೇಶವಿದ್ದು ಗಣಿಗಾರಿಕೆ, ಬಹೃತ್ ಕೈಗಾರಿಕೆಗಳಿರುವುದು ಗಮನಾರ್ಹ[೬೮].

ಬಳ್ಳಾರಿ ಜಿಲ್ಲೆಯ ೮ ತಾಲೂಕುಗಳಲ್ಲಿ ವಿಸ್ತೀರ್ಣದಲ್ಲಿ ಅತಿದೊಡ್ಡದು ಕೂಡ್ಲಿಗಿ ತಾಲೂಕು ಇದರ ವಿಸ್ತೀರ್ಣ ೧,೫೯,೭೦೬ ಹೆಕ್ಟೇರುಗಳು ಭೌಗೋಳಿಕ ಲಕ್ಷಣ ದಖ್ಖನ್ ಪ್ರಸ್ಥಭೂಮಿಯ ದಕ್ಷಿಣ ಭಾಗದಲ್ಲಿಯೂ ಕರ್ನಾಟಕದ ಮಧ್ಯಭಾಗದ ಬಯಲುಸೀಮೆಯಲ್ಲಿಯೂ ನೆಲೆಗೊಂಡಿರುವ ಈ ತಾಲೂಕಿನ ಸುತ್ತ ಉತ್ತರಕ್ಕೆ ಸಂಡೂರು, ಪಶ್ಚಿಮಕ್ಕೆ ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ ತಾಲೂಕುಗಳಿವೆ. ಪೂರ್ವಕ್ಕೆ ಮೊಳಕಾಲ್ಮೂರು ಹಾಗೂ ದಕ್ಷಿಣಕ್ಕೆ ಜಗಲೂರು ತಾಲೂಕುಗಳಿವೆ. ಕಲ್ಲುಗುಂಡು ಬಂಡೆಗಳ ಗುಡ್ಡಗಳಿವೆ ದಟ್ಟವಲ್ಲದ ಅರಣ್ಯ ಪ್ರದೇಶವಿದೆ. ಉಳಿದಂತೆಲ್ಲಾ ಬಯಲು

ಸೀಮೆಯೇ, ಇಲ್ಲಿ ಯಾವ ನದಿಯೂ ಇಲ್ಲ ಮಣ್ಣಿನ ಸ್ವರೂಪದ ಬಗ್ಗೆ ಹೇಳುವುದಾದರೆ ಕೊಟ್ಟೂರಿನ ಕಡೆಗೆ ಕಲ್ಲು ಮರಳು ಮಿಶ್ರಿತ ಕೆಂಪು ಮಣ್ಣು ಅಥವಾ ಮಸಾರಿಯೇ ಹೆಚ್ಚು. ಮಳೆಯನ್ನೇ ರೈತರು ಹೆಚ್ಚಾಗಿ ಅವಲಂಬಿಸಿದ್ದಾರೆ[೬೯].

ಇಂದಿನ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನಲ್ಲಿ ಬರುವ 'ಉಜ್ಜನಿ' ಇದು ಚಾರಿತ್ರಿಕ ಮತ್ತು ಧಾರ್ಮಿಕವಾಗಿ ಮಹತ್ವ ಪಡೆದ ಕ್ಷೇತ್ರ. ವೀರಶೈವರ ಪಂಚಪೀಠಗಳಲ್ಲೊಂದು ಮರುಳಸಿದ್ಧೇಶ್ವರ ದೇವಾಲಯ ಇಲ್ಲಿದ್ದು, ಅದ್ಭುತ ಶಿಲ್ಪ-ಕಲಾ ಕೆತ್ತನೆಯಿಂದ ಪ್ರಸಿದ್ಧಿಗೊಂಡಿದೆ. ಪ್ರಸ್ತುತ ಈ ಗ್ರಾಮ ತಾಲೂಕು ಕೇಂದ್ರದಿಂದ ದಕ್ಷಿಣ (ನೈಋತ್ಯ)ದಿಕ್ಕಿಗಿದೆ[೭೦]. ಈ ಗ್ರಾಮವು ದಾವಣಗೆರೆಯಿಂದ ೭೮ ಕಿ.ಮೀ, ಕೊಟ್ಟೂರಿನಿಂದ ೧೪ ಕಿ.ಮೀ.ಹೊಸಪೇಟೆಯಿಂದ ೬೪ ಕಿ.ಮೀ. ಕೂಡ್ಲಿಗಿಯಿಂದ ೨೨ ಕಿ.ಮೀ. ಮತ್ತು ಹರಪನಹಳ್ಳಿಯಿಂದ ೪೧ ಕಿ.ಮೀ. ಅಂತರದಲ್ಲಿದೆ.

ಉಜ್ಜಯಿನಿಯ ದಕ್ಷಿಣಕ್ಕೆ ವಿಶಾಲ ಕೆರೆಯಿದ್ದು ಅಲ್ಲಿಂದ ಸ್ವಲ್ಪದೂರದಲ್ಲಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಎರಡು ಗುಡ್ಡಗಳಿವೆ. ಪಶ್ಚಿಮ ದಿಕ್ಕಿನ ಗುಡ್ಡವನ್ನು ಕರುವಿನಕಲ್ಲು ಗುಡ್ಡವೆಂತಲೂ ಮತ್ತು ಪೂರ್ವ ದಿಕ್ಕಿನ ಗುಡ್ಡವನ್ನು ಭೈರವನಗುಡ್ಡ ಎಂದು ಕರೆಯುವರು. ಸುತ್ತಲಿನ ಭೂ ಪ್ರದೇಶವು ಸ್ವಲ್ಪ ಏರು ತಗ್ಗುಗಳಿಂದ ಕೂಡಿದ್ದರೂ ಸಮತಟ್ಟಾಗಿದ್ದು ಪೂರ್ವಕ್ಕೆ ಸ್ಥಳೀಯ ಮಾಗಾಣಿಯಿದೆ. ಅಲ್ಲಿಯ ಭೂಮಿ ಕಪ್ಪು ಮಿಶ್ರಿತ ಕೆಂಪು ಮತ್ತು ಕೆಂಪು ವರ್ಣದ ಮಣ್ಣಿನಿಂದ ಕೂಡಿದೆ. ಈ ಗ್ರಾಮದ ಆಗ್ನೇಯಕ್ಕೆ ನಾಗೇನಹಳ್ಳಿ-ಮಂಗಳಾಪುರ, ಪಶ್ಚಿಮಕ್ಕೆ ತೂಲಹಳ್ಳಿ-ಕಾಳಾಪುರ, ದಕ್ಷಿಣಕ್ಕೆ ಗಡಿಮಾಕುಂಟೆ ಮತ್ತು ಉತ್ತರಕ್ಕೆ ಹಾರಕನಾಳ- ಮಾಚೇನಹಳ್ಳಿಗಳಿವೆ[೭೧]. ಹೀಗೆ ಭೌಗೋಳಿಕ ಮೇರೆಗಳನ್ನೊಳಗೊಂಡ ಉಜ್ಜಯಿನಿ ಚಾರಿತ್ರಿಕವಾಗಿ ಮರುಳಸಿದ್ಧರು ನೆಲೆಸಿದ ನಾಡಾಗಿದೆ.

ಇಂದಿನ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನಲ್ಲಿ ಬರುವ ಉಜ್ಜಯಿನಿ ಗ್ರಾಮ ಪರಿಸರದಲ್ಲಿ ಬರುವ ಕಗ್ಗಲ್ಲುಪುರ ಮರುಳಸಿದ್ಧರ ಮೂಲಸ್ಥಳವಾಗಿದೆ. ಉಜ್ಜನಿಯಿಂದ ೫ ಕಿ.ಮೀ ದೂರದಲ್ಲಿರುವ ಬೈರೇದೇವರ ಗುಡ್ಡಕ್ಕೆ ಈಶಾನ್ಯದಲ್ಲಿದೆ. ಈಗ ಹಾಳೂರಾಗಿದೆ. ಇಂದು ಈ ಊರಿನ ಪರಿಸರವನ್ನು ಕುರಿತಂತೆ ಕ್ಷೇತ್ರ ಪರಿವೀಕ್ಷಣೆಗೈದರೆ ಮಠ ಮನೆಗಳು, ತೇರುಬೀದಿ ಇವುಗಳ ಅವಶೇಷಗಳು ಈಗಲೂ ಕಾಣಸಿಗುತ್ತವೆ. ಕನ್ನಡ ನಿಘಂಟಿನಲ್ಲಿ ಕಗ್ಗಲ್ಲುಪುರದ ಅರ್ಥ ವಿಶ್ಲೇಷಣೆಯು ಈ ರೀತಿ ಇದೆ, ಕಗ್ಗಲ್ಲು- ಕರಿಯ ಕಲ್ಲು, ಬಿರುಸಾದ ಕಲ್ಲು ಎಂಬ ಅರ್ಥವಿದೆ. ಈ ಹಿನ್ನಲೆಯಲ್ಲಿ ಕಗ್ಗಲ್ಲಪುರ, ಎಂಬುದರ ಅರ್ಥವಿವರಣೆಯ ವಿಶ್ಲೇಷಣೆಯನ್ನು ವಿಶ್ಲೇಷಿಸುವುದಾದರೆ ಈ ಸ್ಥಳವು ಬೈರೇದೇವರ ಗುಡ್ಡದಲ್ಲಿರುವುದರಿಂದ ಈ ಗುಡ್ಡ 'ಕರಿಯಕಲ್ಲು' ಬಿರುಸಾದ ಕಲ್ಲುಗಳಿಂದ ಆವರಿಸಿರುವುದರಿಂದ ಈ ಗುಡ್ಡದ ಮಧ್ಯದಲ್ಲಿ ಇದೊಂದು ಪುರವಾಗಿರಬಹುದು 'ಪುರ' ಶಬ್ಧದ ಅರ್ಥವೆ ಪಟ್ಟಣ, ನಗರ,

ಮನೆ ಕೋಟೆ, ಮುಂತಾದ ಅರ್ಥಗಳು ಬರುತ್ತವೆ. ಹೀಗಾಗಿ ಪುರ ಎಂಬುದು ದೊಡ್ಡ ಕರಿಯ ಬಂಡೆ, ಅಥವಾ ಬಿರುಸಾದ ಬಂಡೆಯ ಮಧ್ಯೆ ಈ ಪುರಗ್ರಾಮವಿರುವುದರಿಂದ ಸ್ಥಳವು ಕ್ರಮೇಣ ಕಗ್ಗಲ್ಲಪುರವೆಂದು ಕರೆಯಲ್ಪಟ್ಟಿರಬಹುದು. ಬಾಗಳಿಯ ದೇವಕವಿಯು ರಚಿಸಿರುವುದನ್ನು ಆಧರಿಸಿ ಮರುಳಸಿದ್ಧನ ಜನ್ಮಸ್ಥಳ ಕಗ್ಗಲ್ಲುಪುರವೇ ಎಂಬುದು ವಿದ್ವಾಂಸರು ನಿರ್ಣಯಿಸಿರುವಂತೆ ಮರುಳಸಿದ್ಧರ ಜನ್ಮಸ್ಥಳ 'ಕಗ್ಗಲ್ಲುಪುರ' ಎಂದು ನಿರ್ಣಯಿಸಿರುತ್ತಾರೆ. ಕನ್ನಡ ಸಾಹಿತ್ಯದ ಹಿರಿಯ ಖ್ಯಾತ ಕವಿಗಳಾದ ಅ.ನ.ಕೃಷ್ಣರಾಯರು, ೧೯೪೫ರಲ್ಲಿ ದೇವಕವಿ ಕೃತ ಮರುಳಸಿದ್ಧ ಕಾವ್ಯ ಮೂಲಕೃತಿಯನ್ನು ಸಂಪಾಧಿಸಿದ ಅ.ನ. ಕೃಷ್ಣರಾಯರು ನಿರ್ಣಯಿಸಿರುವಂತೆ ಮರುಳಸಿದ್ಧರ ಜನ್ಮ ಸ್ಥಳ ಕಗ್ಗಲ್ಲುಪುರ ಎಂಬುದು ನಿಜವಾದ ಸ್ಥಳ ಎಂಬುದಾಗಿ ನಿರ್ಣಯಿಸಿರುತ್ತಾರೆ. ಮತ್ತೊಬ್ಬ ವಿದ್ವಾಂಸರಾದ ಹುಲ್ಲೂರು ಶ್ರೀನಿವಾಸ ಜೋಯಿಸರು ಸಹ ಇದೇ ಅಭಿಪ್ರಾಯ ವ್ಯಕ್ತಪಡಿಸಿದಾರೆ. ಈ ಬಗ್ಗೆ ಹೆಚ್ಚು ಸಂಶೋಧಿಸಿದ ಹಿರಿಯಜಗದ್ಗುರು ತರಳಬಾಳು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಯವರು ಕಗ್ಗಲ್ಲುಪುರವೇ ಮರುಳಸಿದ್ಧರ ಜನ್ಮಸ್ಥಳ ಎಂಬ ನಿರ್ಣಯಕ್ಕೆ ಬಂದಿದ್ದಾರೆ. ಇದೇ ರೀತಿಯಾಗಿ ಹಿರಿಯ ಸಂಶೋಧದರಾದ ಹೆಚ್, ದೇವೀರಪ್ಪ, ಪಂಡಿತ್ ಎಸ್.ಬಸಪ್ಪ, ಎಂ.ಗೋವಿಂದ ಪೈ, ಜೇರಿಗೆ ಕಟ್ಟೆ ಬಸವಪ್ಪ, ರಾ॥ಬ॥ಫ.ಗು ಹಳಕಟ್ಟಿ, ಹಾಗೂ ಮಹದೇವ ಬಣಕಾರ ಈ ಮೊದಲಾದ ವಿದ್ವಾಂಸರು ಸಹ ಕಗ್ಗಲ್ಲುಪುರವೆ ಮರುಳಸಿದ್ಧರ ಜನ್ಮಸ್ಥಳ ಎಂಬ ನಿಲುವನ್ನು ತಳೆದಿದ್ದಾರೆ. ಈ ಹಿನ್ನಲೆಯಲ್ಲಿ ವಿದ್ವಾಂಸರ ಹೇಳಿಕೆ ಮತ್ತು ಸಂಶೋಧನೆ ಹಾಗೂ ಕೂಡ್ಲಿಗಿ ತಾಲೂಕಿನ ಉಜ್ಜಯಿನಿ ಸಮೀಪವಿರುವ ಕಗ್ಗಲ್ಲುಪುರದ ಸ್ಮಾರಕಗಳಿಂದ ಮರುಳಸಿದ್ಧರ ಜನ್ಮಸ್ಥಳ ಕಗ್ಗಲ್ಲುಪುರವೇ ಹೌದೆಂದು ನಿರ್ಣಯಿಸಬಹುದಾಗಿದೆ.

೩.೩.೨.ಮರುಳಸಿದ್ಧರ ಹುಟ್ಟು, ಕಾಲ ಮತ್ತು ಜನ್ಮ ಸ್ಥಳ ಕುರಿತು ಕೆಲವು ಭಿನ್ನಾಭಿಪ್ರಾಯಗಳು.

ಪಂಚಾಚಾರ್ಯ ಪೀಠದಲ್ಲಿ ಒಂದಾದ ಉಜ್ಜಯಿನಿ ಪೀಠದ ಸ್ಥಾಪಕರಾದ ಮರುಳಸಿದ್ಧರ ಜೀವನದ ಹುಟ್ಟು, ಕಾಲ ಮತ್ತು ಜನ್ಮ ಸ್ಥಳದ ಬಗ್ಗೆ ಹಲವಾರು ರೋಮಾಂಚಕಾರಿ ಸನ್ನಿವೇಶಗಳನ್ನು ಒಳಗೊಂಡ ವಿಚಾರಗಳು ಸಾಹಿತ್ಯ ಕೃತಿಗಳಿಂದ ತಿಳಿದು ಬರುತ್ತದೆ. ಈಗಿನ ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕಿನಲ್ಲಿ ಮರುಳಸಿದ್ಧರ ಪುಣ್ಯ ಕ್ಷೇತ್ರವಾದ ಉಜ್ಜಯಿನಿ ಗ್ರಾಮವಿದೆಯಷ್ಟೆ. ಇದಕ್ಕೆ ಈಶಾನ್ಯದಲ್ಲಿ ಬೈರೇದೇವರ ಗುಡ್ಡವಿದೆ. ಈ ಗುಡ್ಡಕ್ಕೆ ಸಮೀಪವಾಗಿ ಕಗ್ಗಲ್ಲು ಪುರವಿತ್ತು. ಈಗಲೂ ಆ ಪುರದ ಅವಶೇಷಗಳನ್ನು ಕಾಣಬಹುದು. ಈ ಗ್ರಾಮದಲ್ಲಿ ಸುಮಾರು ೮೦೦ ವರ್ಷಗಳ ಹಿಂದೆ ಮಚ್ಚೆ (ಚಮ್ಮಾರ, ಹೊಲೆಯ, ಮಾದಿಗ ಜಾತಿಯ) ಕಾಯಕದಿಂದ ಜೀವಿಸುತ್ತಿದ್ದ.[೨]

ಕೂಚಿಮಾರ-ಸುಪ್ರಭೆ ಅಥವಾ ಸೋನವ್ವೆ ಇವರ ಉದರದಲ್ಲಿ ಜನಿಸಿದನು[೨೩].

ಶ್ರೀ ಗಿರಿಯ ತಪೋಭೂಮಿಯಲ್ಲಿ ಮುನಿಕುಲಕಮಲ ದಿನಪನೆಂದು ಪೆಸರ್ವೆತ್ತ ಮುನಿಶ್ರೇಷ್ಠ ಶಿಲಾದ ಅವನ ಪತ್ನಿ ಸುಪ್ರಭೆ. ಸುಪ್ರಭೆಯು ಆದರ್ಶ ಧರ್ಮಪತ್ನಿ. ಪತಿಯ ಸಕಲ ಕಾರ್ಯಗಳಲ್ಲಿಯೂ ನೆರವಾಗುತ್ತಿದ್ದಳು. ಆದರೆ ಒಂದು ದಿನ ಆಕೆ ಶಿವನ ಪೂಜೆಗೈಯ್ಯುತ್ತಿರುವಾಗ ಆಕಸ್ಮಾತ್ ರಜಸ್ವಲೆಯಾಗಲು ಅದನ್ನು ಅವಳ ಮುಖ ಭಾವದಿಂದರಿತ ಮುನಿಗೆ ಮುನಿಸೇರುವುದು.

"ಎಲೆನೀರೆ,ಹರಪೂಜೆಯಂ ಮಾಳ್ಪ ಸಮಯದೊಳು

ಕಳೆಯಳಿದು ಕರಮಾಜಿ ಮಾಳ್ಪರೆ? ನೀನೀಗ

ಹೊಲೆಯಾಗಿ ಹೊಲೆ ಜನ್ಮದಲ್ಲಿ ಜನಿಸು ಹೋಗೆಂದ ಚಲಿತ ಶಾಪವನೀಯಲು[೨೪].

॥೪೧॥ (ಮೊದಲನೆಯ ಸಂಧಿ)

ಆ ನೀರೆ ಪಶ್ಚಾತ್ತಾಪಪಟ್ಟು ಪತಿಯಲ್ಲಿ ಕ್ಷಮಾಯಾಚನೆ ಮಾಡಿ "ಶಾಪ ಪರಿಪಡುವುದೆಂತು" ತಿಳಿಸ ಬೇಕು ಎಂದು ಬೇಡಿ ಕೊಳ್ಳುವಳು. ಆಗ ಮುನಿಯು ಜನಪದಕ್ಕಧಿಪ ಕಗ್ಗಲ್ಲುಪ್ರಭು "ಬಾಚನನ ಭೃತ್ಯನೆಂದೆನಿಪ ಕುಲಹೀನನೋರ್ವ ಅನಘ" ನೀನವನಾತ್ಮದೊಳು ಜನನ ಅಲ್ಲದೆ ಭೃತ್ಯನೆಂಬ ನನ್ನ ಶಿಷ್ಯನು ಗುರುವಿರೋಧ ಗೈದುದರಿಂದ ನನ್ನಿಂದ ಶಪಿಸಲ್ಪಟ್ಟು ಪ್ರಭು ಬಾಚನನ ಭೃತ್ಯ ಕೂಗಿಮಾರ (ಕೂಚಿಮಾರ) ನೆಂಬ ಹೆಸರಿನಿಂದ ಜನಿಸಿದ್ದಾನೆ. ಅವನಿಗೆ ನೀನು ಸತಿಯಾಗುವೆಯೆಂದು ಹೇಳಿ ಶಾಪನೀಡುವನು[೨೫]. ಹೀಗಾಗಿ ಈ ದಂಪತಿಗಳು ಹೊಲೆಯ ಜನ್ಮದಲ್ಲಿ ಜನಿಸಿದರು ಎಂಬುದಕ್ಕೆ ಈ ಮೇಲಿನ ಕಾವ್ಯದಲ್ಲಿ ಹೊಲೆಯ ಎಂಬ ಪದ ಉಲ್ಲೇಖಿಸಿರುವುದು ದಲಿತರೆಂಬುದಕ್ಕೆ ಇದು ಪುಷ್ಟಿ ನೀಡುತ್ತದೆ.

ಇಲ್ಲಿ ಭೃತ್ಯ ಎಂದರೆ ಮನೆ ಆಳು, ಸೇವಕ, ದಾಸ, ಊಳಿಗದಾಳು, ಪಾಲಿಸತಕ್ಕವ ಎಂಬ ಅರ್ಥಗಳಿವೆ ಮನೆ ಮಾದಿಗರು ಎಂಬುದಾಗಿ ನೇಮಿಸಿಕೊಳ್ಳುತ್ತಿದ್ದ ಮಧ್ಯಕಾಲೀನ ಯುಗದಲ್ಲಿ ದಲಿತರನ್ನು ಮೇಲುವರ್ಗದವರಾದ ಗ್ರಾಮದ ಒಡೆಯ, ಗೌಡ, ಪ್ರಭುವರ್ಗದವರು ನೇಮಿಸಿಕೊಳ್ಳುವ ಪದ್ದತಿ ಇತ್ತು. ಹೀಗೆ ಬಾಚನನ ಪ್ರಭು ಕೂಗಿಮಾರನು ಮನೆ ಮಾದಿಗನಾಗಿದ್ದ ಇವನ ಸತಿ ಸುಪ್ರಭೆ ಇವರ ಉದರದಲ್ಲಿ ಜನಿಸಿದವನು ಚರಲಿಂಗಮೂರ್ತಿಯೊಬ್ಬ ಮರುಳಸಿದ್ಧ[೨೬].

ಚಾರಿತ್ರಿಕವಾಗಿ ಮರುಳಸಿದ್ಧರ ಜನ್ಮ ಸ್ಥಳ, ಕುಲ ಮತ್ತು ಆತನ ಕುಲ, ಯಾವುದೆಂಬ ಬಗ್ಗೆ ಯಾವ ಶಾಸನದಲ್ಲೂ ಉಲ್ಲೇಖವಿಲ್ಲ. ೧೨ ಮತ್ತು ೧೩ನೇ ಶತಮಾನವೆ ಮರುಳಸಿದ್ಧರು ಜೀವಿಸಿದ್ದ ಕಾಲ. ಅವರು ಸಮಕಾಲೀನ ಶಿಷ್ಯ ಗದ್ದಿಗೆರಾಮಿ ತಂದೆ. ಆತನು ರಚಿಸಿದ 'ಗುರುಬೋಧೆ ಮಹಾತ್ಮೆ' ಎಂಬ ಚರಿತ್ರೆಯನ್ನು ಆಧರಿಸಿ ಈ ಬಾಗಳಿಯ ದೇವಕವಿಯ ಮರುಳಸಿದ್ಧ ಕಾವ್ಯ ರಚಿಸಿದ್ದಾರೆ. ಇದೇ

ಧೋರಣೆಯನ್ನು ಅನುಸರಿಸಿ ಆನಗೋಡು ರೇವಣಸಿದ್ಧ ಕವಿ, ಸಿರಿಗೆರೆಯ ಗುರುಸಿದ್ಧ ಸ್ವಾಮಿಗಳ ಸಾಂಗತ್ಯ, ಉಜ್ಜಯಿನಿಯ ಗೊಂಗಡಿ ವೀರಭದ್ರಯ್ಯನವರ ಸಾಂಗತ್ಯಗಳು, ಸ್ಥಳೀಯ ಜನಪದರು ಹೇಳುವ ಕಥೆಗಳು ಇಂದಿಗೂ ಗುರುತಿಸಲ್ಪಡುವ ಮರುಳಸಿದ್ಧ ಸ್ಮಾರಕಗಳು. ಈ ಎಲ್ಲಾ ಆಧಾರಗಳು ಮರುಳಸಿದ್ಧರ ಜನ್ಮಸ್ಥಳ ಕುಲ ವಿಷಯವನ್ನು ಪ್ರಸ್ತಾಪಿಸುತ್ತವೆ.

ಮರುಳಸಿದ್ಧರ ಜನ್ಮಸ್ಥಳ ಕುಲದ ಬಗ್ಗೆ ಸಂಶೋಧಕರ ಮತ್ತು ಇತಿಹಾಸಕಾರರ ವಿಭಿನ್ನ ದೃಷ್ಟಿಕೋನಗಳಿವೆ. ಕನ್ನಡದ ಹಿರಿಯ ಸಾಹಿತಿ ಅ.ನ.ಕೃಷ್ಣರಾಯರೆ ಮೊದಲು ದೇವಕವಿ ಕೃತ ಮರುಳಸಿದ್ಧ ಕಾವ್ಯ ಕೃತಿಯನ್ನು ಸಂಪಾದಿಸಿದ್ದಾರೆ. "ಮರುಳಸಿದ್ಧ ಮಾದಿಗರಲ್ಲಿ ಜನನ ಪಡೆದರೂ, ಜಾತಿಯ ಶೃಂಖಲೆಯನ್ನು ಕಳಚಿ ತನ್ನ ತಪಃಪ್ರಭಾವದಿಂದ ಆಚಾರ್ಯ ಪದವಿಗೇರಿದ ಮಹಾನ್ ಚೇತನ ಅಸ್ಪೃಶ್ಯ ಸಮಾಜದ ಉದ್ಧಾರಕ್ಕೆ ದುಡಿದು ಅವರಿಗೆ ಒಂದು ಅಸ್ತಿತ್ವವನ್ನು ಆತ್ಮಗೌರವವನ್ನುಂಟು ಮಾಡಿಕೊಟ್ಟ ಮಹಾಪುರುಷ ಎಂಬುದಾಗಿ ಅಭಿಪ್ರಾಯಪಡುವ ಅ.ನ.ಕೃಷ್ಣರಾಯರು ಮರುಳಸಿದ್ಧ ಮಾದಿಗ ಕುಲದವರು ಕಗ್ಗಲ್ಲುಪುರ ಅವರ ಜನ್ಮ ಸ್ಥಳ ಎಂಬುದಾಗಿ ಅವರು ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ[೨೭].

ಹಿರಿಯ ವಿದ್ವಾಂಸರಾದ ಡಾ.ಫ.ಗು.ಹಳಕಟ್ಟೆ ಅವರು ಅಮರಗಣಾಧೀಶ್ವರ ಚರಿತ್ರೆಯಲ್ಲಿ ಇವರನ್ನು ಕುರಿತು ಹೀಗೆ ಬರೆದಿದ್ದಾರೆ. ಕಗ್ಗಲ್ಲುಪುರದಲ್ಲಿ ಕೂಚಿಮಾರನ ಮಗನಾಗಿ (ಕೂಗಿಮಾರನ) ಜನ್ಮಪಡೆದು ಇವರು ಮೊದಲು ದನಗಳನ್ನು ಕಾಯುತ್ತಿದ್ದರು ಅಂತೆಯೇ ಪವಾಡ ಪುರುಷರೆನಿಸಿದರು. ಉಜ್ಜಯಿನಿ(ಬಳ್ಳಾರಿ ಜಿಲ್ಲೆ) ಯಲ್ಲಿ ಬಹಳಕಾಲ ವಾಸಮಾಡಿದರು. ಹಿಂಸಾತ್ಮಕ ಕರ್ಮಗಳನ್ನು ನಿಲ್ಲಿಸಿದರು. ಇವರು ಮೊದಲು ಅಸ್ಪೃಶ್ಯರು ರೇವಣಸಿದ್ಧನಿಂದ ಲಿಂಗಧಾರಣೆ ಮಾಡಿಸಿಕೊಂಡು ಶರಣರಾದರು. ಉಜ್ಜಯಿನಿಯಲ್ಲಿ ಹಲವು ಪವಾಡಗಳನ್ನು ಮಾಡಿದರು ಇವರು ವೀರಶೈವರಿಗೆ ಒಬ್ಬ ಶ್ರೇಷ್ಠ[೨೮] ಎಂಬುದಾಗಿ ಅಭಿಪ್ರಾಯ ಪಟ್ಟಿರುವ ಇವರು ಮರುಳಸಿದ್ಧರು ಅಸ್ಪೃಶ್ಯ ಜಾತಿಯಲ್ಲಿ ಜನ್ಮ ಪಡೆದವರು ಎಂಬುದಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶ್ರೀಮಾನ್ ಕರ್ಲಮಂಗಲಂಶ್ರೀಕಂಠಯ್ಯನವರು ಹೇಳುವಂತೆ ಮರುಳಸಿದ್ಧರು ರೇವಣಸಿದ್ಧರ ಸಮಕಾಲೀನನೆಂದು ಈತನು ಕಗ್ಗಲ್ಲುಗೌಡನಿಗೆ ಮಗುವಾಗಿಸಿಕ್ಕಿದನೆಂದು ಹೇಳಿದ್ದಾರೆ. ಆದರೆ ಮರುಳಸಿದ್ಧ ಜನ್ಮ ಜಾತಿ ಸ್ಥಳದ ಬಗ್ಗೆ ತಮ್ಮ ನಿಲುವುತಿಳಿಸಿಲ್ಲ. ದಿ॥ ಹುಲ್ಲೂರು ಶ್ರೀನಿವಾಸ ಜೋಯಿಸರು ಮರುಳಸಿದ್ಧರ ಮೂಲಜನ್ಮ ಕುಲದ ವಿಚಾರವಾಗಿ ಹೇಳುವಂತೆ ಸ್ವಸ್ತಿ ಸಮಸ್ತ ಸಹಿತಂ ಶ್ರೀ ಮನ್ಮಹಾಮಂಡಲೇಶ್ವರಂ ವಿಜಯ ಪಾಂಡ್ಯ ದೇವರ ಉಚ್ಚಂಗಿನೆಲೆವೀಡಿತಿ ನಲಿರ್ದುನೊಳಂಬವಾಡಿ ಮೂವತ್ತಿರ್ಚ್ಚಾಸಿರಮಂದುಷ್ಟ ನಿಗ್ರಹಶಿಷ್ಟಪ್ರತಿಪಾಳ–ನಂಗಯ್ದು

ಸುಖಸಂಕಥಾ ವಿನೋದದಿಂ ರಾಜ್ಯಂಗಯುತ ಮಿರೆಸ್ವಸ್ತಿತತ್ವಾದ ಪದ್ಮೋಪಜೀವಿ ಕರುಗಲೆಂಬ ಜನಪದಕ್ಕಧಿಪ ಪ್ರಭುಬಾಚಣ್ಣನು ಕಗ್ಗಲ ಪ್ರಭುವಾಗಿದ್ದನು. ಇವನ ಬಳಿ ಕೂಗಿಮಾರನೆಂಬ ಭೃತ್ಯನಿದ್ದನು ಅವನ ಸತಿ ಸುಪ್ರಭೆ ಇವರಿಗೆ ಜನಿಸಿದವನೆ ಮರುಳಸಿದ್ಧ ಎಂಬುದಾಗಿ ತಮ್ಮ ಅಭಿಪ್ರಾಯವ್ಯಕ್ತ ಪಡಿಸಿದ್ದಾರೆ[೭೯]. ಒಟ್ಟಿನಲ್ಲಿ ಮರುಳಸಿದ್ಧರು ಕುಲಹೀನ ಜಾತಿಯೊಂದರಲ್ಲಿ ಜನ್ಮ ಪಡೆದವನೆಂಬುದು ಇವರ ಅಭಿಮತವಾಗಿದೆ.

ಮರುಳಸಿದ್ಧರ ಜನ್ಮಕುಲದ ವಿಚಾರವಾಗಿ ಕೈ॥ ಮಲ್ಲಿಕಾರ್ಜುನ ದೇಶಿಕರು: 'ಪಂಚಾಚಾರ್ಯರ ಪರಿಚಯ' ಎಂಬ ಗ್ರಂಥದಲ್ಲಿ ಮರುಳಸಿದ್ಧರ ಜನ್ಮಭೂಮಿ ಮೂಡೂರು (ಇಂದಿನ ಹಾವೇರಿ ಜಿಲ್ಲೆ) ತಂದೆ ಕೂಚಿಮಾರ (ಕೂಗಿಮಾರ) ತಾಯಿ ಸೋಮಲದೇವಿ. ಇವರು ಹುಟ್ಟಿದ ೨೧ ದಿವಸಕ್ಕೆ ತಂದೆ ತಾಯಿಗಳು ಮರಣಹೊಂದಿದರು. ಅದೇ ಊರಿನ ಕಗ್ಗಲ್ಲಗೌಡನು ಇವರನ್ನು ಕಾಪಾಡಿದನು. ಸಿದ್ಧಗಿರಿಗೆ ಹೋಗಿ ರೇವಣಸಿದ್ಧರಿಂದ ಶಿವದೀಕ್ಷೆ ಪಡೆದರು ಎಂದು ಹೇಳಿದ್ದಾರೆ[೮೦]. ಇದೇ ನಿಲುವನ್ನು ಮುಂದುವರೆಸುತ್ತಾ ಮರುಳಸಿದ್ಧರ ಜನ್ಮಭೂಮಿ ಉದಯಪುರವೆಂದು ಅಭಿಪ್ರಾಯ ಪಡುತ್ತಾರೆ. 'ಶ್ರೀಮರುಳಸಿದ್ಧರ' ಜನ್ಮ ಭೂಮಿ ಉದಯಪುರ (ಅಂದರೆ ಹಾವೇರಿ ಜಿಲ್ಲಾ ಹಾನಗಲ್ಲು ತಾಲೂಕಿನ ಅಕ್ಕಿ ಆಲೂರು ಹತ್ತಿರ ಮೂಡೂರು) ಕಗ್ಗಲ್ಲು ಗೌಡನಿಗೆ ಮಗುವಾಗಿ ಸಿಕ್ಕಿದರೆಂದು ಗುರುರಾಜ ಚರಿತ್ರೆಯಲ್ಲಿ ಹೇಳಿದೆ ಆದರೆ ಕಗ್ಗಲ್ಲುವೆಂಬುದು ಗ್ರಾಮದ ಹೆಸರೇ ವಿನಾ: ಕಗ್ಗಲ್ಲರೆವೆಂಬುದು ಸಾದರಲ್ಲಿಯ ಬೆಡೆಗಲ್ಲ ಬೆಡಗಿದ್ದರೂ ಇದ್ದುಕೊಳ್ಳಲಿ ಮರುಳಸಿದ್ಧರ ಪುರಾಣದಲ್ಲಿ ಕಗ್ಗಲ್ಲುಪುರಗೌಡನೆಂದು ಹೇಳಿದೆ ಕಗ್ಗಲ್ಲವೆಂದರೆ ಕತ್ತಲೆ ಎಂಬ ಅರ್ಥವು ಇದೆ. ಮರುಳಸಿದ್ಧರು ಆ ಊರಲ್ಲಿ ಹುಟ್ಟಿ ಪ್ರಸಿದ್ದಿಗೆ ಬಂದನಂತರ ಅವರಿಂದ ಆ ಊರಿಗೆ ಒಂದು ಬೆಳಕು ಉದಯವಾದ್ದರಿಂದಲೇ ಕಗ್ಗಲ್ಲುಪುರಕ್ಕೆ ಉದಯಪುರವೆಂದು ಬಂದಿರಬೇಕು ಸಂಸ್ಕೃತದ ಉದಯಪುರವು ಇಂದು ಕನ್ನಡದಲ್ಲಿ ಮೂಡೂರು ಆಗಿದೆ ಎಂಬುದಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇವರ ಅಭಿಪ್ರಾಯವನ್ನು ಸಮರ್ಥಿಸಿಕೊಂಡಿರುವ ದಿ. ಶ್ರೀ. ಹುಲ್ಲೂರು ಶ್ರೀನಿವಾಸ ಜೋಯಿಸರು, ಶ್ರೀ. ಟಿ.ಎಚ್.ಎಂ. ಸದಾಶಿವಯ್ಯನವರು ಮತ್ತು ಶ್ರೀ ಜೀರಿಗೆಕಟ್ಟಿ ಬಸಪ್ಪ ಇವರು ಮರುಳಸಿದ್ಧರ ಜನ್ಮ ಭೂಮಿ ಮೂಡೂರು ಎಂಬುದಾಗಿ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ[೮೧]. ಈ ರೀತಿಯ ನಿರೂಪಣೆಗೆ ಯಾವುದೇಚಾರಿತ್ರಿಕ ದಾಖಲೆಗಳಾಗಲಿ ಅಥವಾ ಯಾವುದೇ ಐತಿಹಾಸಿಕ ಕುರುಹುಗಳಾಗಲಿ ವ್ಯಕ್ತವಾಗಿಲ್ಲ ಕೇವಲ ಮೌಖಿಕ ಹೇಳಿಕೆಗಳಿಂದ ಮತ್ತು ಸ್ಥಳಪುರಾಣಗಳ ಆಧಾರದ ಮೇಲೆ ಈ ನಿರೂಪಣೆ ಅಭಿವ್ಯಕ್ತಗೊಳ್ಳುತ್ತದೆ. ಆದರೆ ಕಗ್ಗಲ್ಲುಪುರಕ್ಕೆ ಉದಯಪುರವೆಂದು ಸಂಸ್ಕೃತದ ಉದಯಪುರವು ಇಂದು ಕನ್ನಡದಲ್ಲಿ ಮೂಡೂರು ಆಗಿದೆ ಎಂಬ ಮರುಳಸಿದ್ಧರ ಜನ್ಮ ಸ್ಥಳದ

ವಿಷಯಕ್ಕೆ ಸಂಬಂಧಿಸಿದಂತೆ. ನಾವು ವಾಸ್ತವತೆಯನ್ನು ತಿಳಿಯಲು ಕ್ಷೇತ್ರ ಕಾರ್ಯ ಕೈಗೊಳ್ಳಲಾಯಿತು[೮೨]. ಆ ಗ್ರಾಮದಲ್ಲಿ ಮರುಳಸಿದ್ಧರ ಯಾವುದೇ ಕುರುಹುಗಳಿಲ್ಲ. ಆದರೆ ಪ್ರಸ್ತುತ ಸಿದ್ಧೇಶ್ವರ ಎಂಬ ದೇವಾಲಯದಲ್ಲಿ ರೇವಣಸಿದ್ಧ ಮತ್ತು ಮರುಳಸಿದ್ಧರ ಕಂಚಿನ ವಿಗ್ರಹಗಳಿವೆ (ಅವು ಇತ್ತೀಚಿನವು ಎಂದು ಗ್ರಾಮದವರು ಹೇಳುತ್ತಾರೆ).

ಆದರೆ ಚೆನ್ನಮಲ್ಲಿಕಾರ್ಜುನ ದೇಶಿಕರು ಅಭಿಪ್ರಾಯ ಪಡುವ ಮರುಳಸಿದ್ಧರ ಜನ್ಮ ಭೂಮಿ ಮೂಡೂರು ಎಂಬುದಕ್ಕೆ ಮರುಳಸಿದ್ಧರ ಸ್ಮಾರಕವಾಗಿ ಲಿಂಗಪ್ರತಿಷ್ಠಾಪನೆಯಾಗಲಿ ಅಥವಾ ವಿಗ್ರಹವಾಗಲಿ ಅಥವಾ ಯಾವುದೆ ಕುರುಹುಗಳಾಗಲಿ ಇರಬೇಕಾಗಿತ್ತು ಅಂತಹ ಯಾವುದೇ ಸ್ಮಾರಕಗಳು ಅಲ್ಲಿ ತಿಳಿದುಬರುವುದಿಲ್ಲ. ಮರುಳಸಿದ್ಧರು ಅದೇ ಗ್ರಾಮದ ಕಗ್ಗಲ್ಲ ಮನೆತನದಲ್ಲಿ ಸಾಕುಮಗನಾಗಿ ಬೆಳೆದ ಎನ್ನುವ ಬಗ್ಗೆ ಅಲ್ಲಿ ಸ್ಥಳೀಕರಿಂದ ಯಾವುದೇ ರೀತಿಯ ಕಥೆ ವ್ಯಕ್ತವಾಗುವುದಿಲ್ಲ. ಕಗ್ಗಲ್ಲ ಬೆಡಗಿನ ಮನೆತನ ಆ ಗ್ರಾಮದಲ್ಲಿ ಎರಡು ಕುಟುಂಬಗಳಿವೆ. ಒಂದು ಕುಟುಂಬ ಕ್ಯಾಸನಕೇರೆಯಿಂದ ವಲಸೆಬಂದು ನೆಲೆಸಿದೆ ಮತ್ತೊಂದು ಮನೆತನ ಅದೇ ಗ್ರಾಮದಲ್ಲಿ ನೆಲೆಸಿದ ಕುಟುಂಬವಾಗಿದೆ. ಈ ಆಧಾರದ ಮೇಲೆ ಚೆನ್ನಮಲ್ಲಿಕಾರ್ಜುನ ದೇಶಿಕೇಂದ್ರರು. ಮರುಳಸಿದ್ಧರು. ಇದೇ ಗ್ರಾಮದಲ್ಲಿ ಜನ್ಮ ಪಡೆದವರು ಎಂಬುದಾಗಿ ಅಭಿಪ್ರಾಯ ಪಡುವುದು ಸರಿಯಲ್ಲ. ಕಗ್ಗಲ್ಲು ಮನೆತನದ ಬೆಡಗಿನವರು ಕರ್ನಾಟಕದ ಅನೇಕ ಗ್ರಾಮಗಳಲ್ಲಿ ಚದುರಿಹೋಗಿದ್ದಾರೆ. ಹಾಗಾದರೆ, ಕಗ್ಗಲ್ಲು ಮನೆತನದವರು ಇರುವಂತಹ ಗ್ರಾಮವೆ ಮರುಳಸಿದ್ಧರ ಜನ್ಮ ಭೂಮಿ ಎಂದು ನಿರೂಪಿಸಲು ಪ್ರಯತ್ನ ಪಟ್ಟಿರುವುದು ಸತ್ಯಕ್ಕೆ ದೂರವಾದುದು.

ಮರುಳಸಿದ್ಧರ ಜನ್ಮದ ವಿಚಾರವಾಗಿ ಚಾರಿತ್ರಿಕ ಆಕರಗಳು ಲಭ್ಯವಿಲ್ಲದೆ ಇರಬಹುದು. ಆದರೆ ಸಾಹಿತ್ಯಕ ಆಕರಗಳು, ಮೌಖಿಕ ಆಕರಗಳು, ಹಾಗೂ ಮರುಳಸಿದ್ಧರ ನೆಲೆಯಾದ ಉಜ್ಜಯಿನಿ (ಕೂಡ್ಲಿಗಿ ತಾಲೂಕು) ಪರಿಸರದ ಐತಿಹಾಸಿಕ ಕುರುಹುಗಳು ಹೆಚ್ಚು ನೆರವಾಗಬಲ್ಲವು. ಸಾಹಿತ್ಯಿಕ ಅ.ನ.ಕೃಷ್ಣರಾಯರ ಮರುಳಸಿದ್ಧ ಕಾವ್ಯ, ಪಂಡಿತ್. ಎಸ್. ಬಸಪ್ಪ ಸಂಪಾಧಿಸಿರುವ ದೇವಕವಿಕೃತ ಮರುಳಸಿದ್ಧ ಕಾವ್ಯದಲ್ಲಿ ನಿರೂಪಿತವಾದ ಅಂಶಗಳು ಮರುಳಸಿದ್ಧರಿಗೆ ಜನ್ಮ ನೀಡಿದ ಸುಪ್ರಭೆಶಿಲಾದ ಭೂಲೋಕದಲ್ಲಿ "ಹೊಲೆಯಾಗಿ ಹೊಲೆ ಜನ್ಮದಲ್ಲಿ ಜನಿಸು ಹೋಗೆಂದು ಚಲಿತ ಶಾಪಾವನೀಯಲು" ಎಂದಿರುವುದರಿಂದ. 'ಹೊಲೆಯ' ಎಂಬ ಪದ ಮರುಳಸಿದ್ಧ ಕಾವ್ಯದ ಮೊದಲಸಂಧಿ (ಸಂಧಿ.೪೧) ಉಲ್ಲೇಖಿಸುತ್ತದೆ. ಮರುಳಸಿದ್ಧರು ಹೊಲೆಯ ಎಂಬ ಕೀಳು ಕುಲದಲ್ಲಿ ಕಗ್ಗಲ್ಲುಪುರ (ಉಜ್ಜಯಿನಿ ಸಮೀಪ) ಎಂಬುದು ಆತನ ಜನ್ಮಸ್ಥಳ[೮೩].

ಮರುಳಸಿದ್ಧರ ತಂದೆ ತಾಯಿಯರು ಕೀಳು ಜಾತಿಯವರು ಎಂಬುದು ಸ್ಪಷ್ಟ. ಆದರೆ ಅವರ ಕಾಯಕ ವೃತ್ತಿಯು ಸಹ ಕೀಳು ಜಾತಿಯನ್ನು ಸೂಚಿಸುವ ಅಂಶ. ಈ ರೀತಿ ಇದೆ.

ಕಗ್ಗಲ್ಲಪುರದ ಗೌಡನ ಭೃತ್ಯನೆಂದೆನಿಪ

ನುಗ್ಗುದಾನ್ವರಗಂಡ ನೂರ್ಧ್ವಕಾಲನು ಅಧಮ

ಭರ್ಗನ ಮನೋರಥನ ಭಾವವಳಟ್ಟಿರಲು ಹೆಗ್ಗಡೆಯ ಕುಲಜಗತನು!

ಹಗ್ಗ ಹುರಿ ನೇಣು ಮಿಣಿ ಪಾದುಕೆಯ ಮಾಡುತಿರ.

ಲೊರ್ಗುಣದೊಲೈತಂದು ಮರುಳಸಿದ್ಧೇಶ್ವರನು

ಜಜ್ಜುಗಂಥೆಯು ಭಾರಿದಂಡದೊಡನೈ ತಂದು ನಿರ್ಗಮನ ನಿರತನಾಗಿ[೮೪].

ಎರಡನೆ ಸಂಧಿ. ಸಂಧಿ ॥೫೨॥

ಈ ಮೇಲೆ ನಿರೂಪಿತವಾದ ಕಾವ್ಯದ ಸಂಧಿಯಲ್ಲಿ ಉಲ್ಲೇಖವಾಗುವ ಅಧಮ ಎನ್ನುವುದು ಕೀಳುಕುಲ ಸೂಚಕ ಪದವಾಗಿದೆ. ಅದೇ ರೀತಿ ಕಾಯಕ ವೃತ್ತಿಗೆ ಸಂಬಂಧಿಸಿದ ಹಗ್ಗ ಹುರಿ ನೇಣು ಮಿಣಿ ಪಾದುಕೆಯ ಮಾಡುತಿರೆ ಎಂದು ಉಲ್ಲೇಖಿಸುವುದರಿಂದ ಅವರ ವೃತ್ತಿ ಚಮ್ಮಾರಿಕೆ ಎಂದು ತಿಳಿಯುತ್ತದೆ.ಕೊಗಿಮಾರ ಸುಪ್ರಭೆ ಮನುಷ್ಯರ ಚರ್ಮದಿಂದಲೇ ಪಾದರಕ್ಷೆಯನ್ನು ಮರ್ತ್ಯಲೋಕದಿಂದ ಬಂದ ಚರಲಿಂಗ ಮೂರ್ತಿಗೆ ಹೊಲಿದು ಕೊಟ್ಟು ಮಕ್ಕಳ ಭಾಗ್ಯ ಪಡೆದು ಮರುಳಸಿದ್ಧರಿಗೆ ಜನ್ಮ ನೀಡಿ ಆ ದಂಪತಿಗಳು ತರುವಾಯ ಮರಣ ಪ್ರಾಪ್ತಿಯಾಯಿತೆಂದು ನಿರೂಪಿತವಾಗಿದೆ. ಹರಳಯ್ಯ ನಂಥವರು ಮನುಷ್ಯರ ಚರ್ಮದಿಂದಲೇ (ತನ್ನ ಮತ್ತು ತನ್ನ ಮಡದಿಯ) ಪಾದರಕ್ಷೆಯನ್ನು ಹೊಲಿದು ಕೊಟ್ಟಿದ್ದನ್ನು ಸ್ಮರಿಸಬಹುದು. ಇಂಥವೂ ಅಪರೂಪದ ಪ್ರಸಂಗಗಳೇ ವಿನ: ಬದುಕಿನಲ್ಲಿ ಪರಂಪರೆಯಾಗಿ ದಿನ ನಿತ್ಯದ ಕೆಲಸದ ಮಾರ್ಗವಾಗಿ ಬಂದಂತಿಲ್ಲ.

ರಾಜ ಪ್ರಭುತ್ವದ ಕಾಲದಲ್ಲಿ ಮೇಲು ಕೀಳು ಎಂಬ ಆಯಗಾರಿಕೆಯಿಂದ ವರ್ಣಗಳನ್ನು ಗುರುತಿಸುವ ಪರಿಪಾಠ ಆರಂಭವಾಗಿದೆ. ಇಂದು ಸಾಮಾನ್ಯವಾಗಿ ಗುರುತಿಸುವಂತೆ ಚರ್ಮದ ಕೆಲಸವನ್ನು ಮಾಡುವ ಜಾತಿಗಳು ಒಟ್ಟು ನಾಲ್ಕು (೧) ಡೋರರು. (೨) ಮಚಗಾರರು ಮೋಚಿ (೩) ಸಮಗಾರರು. (೪) ಮಾದಿಗರು. ಡೋರ ಅಥವಾ ಡೋಹಾರ ಎಂದು ಕರೆಯಲಾಗುವ ಈ ಜಾತಿಯ ಜನರು ಕೇವಲ ತೊಗಲನ್ನು ಹದಮಾಡಿ ಚರ್ಮವನ್ನು ತಯಾರಿಸುತ್ತಾರೆ. ಸಮಗಾರ ಮತ್ತು ಮಚಗಾರ ಜಾತಿಯ ಜನ ಡೋರರಿಂದ ಚರ್ಮವನ್ನು ತಂದು ಪಾದರಕ್ಷೆ ಅಥವಾ ಇತರ

ವಸ್ತುಗಳನ್ನು ತಯಾರಿಸುತ್ತಾರೆ. ಮಚಗಾರರು ಎನ್ನುವ ಪದ 'ಮಚ್ಚೆ' ಎನ್ನು ಪಾದರಕ್ಷೆಗಳನ್ನು ಹೊಲೆಯುವುದರಿಂದ ಇವರಿಗೆ ಮಚಗಾರರು ಎಂದು ಕರೆಯಲಾಗುತ್ತದೆ[೮೫]. ಇದೆ ಕುಲದವರಾದ ಕೂಚಿಮಾರ ಸುಪ್ರಭೆಯವರ ಉದರದಲ್ಲಿ ಮರುಳಸಿದ್ಧರು ಜನ್ಮ ಪಡೆದವರಾದ್ದರಿಂದ ಮರುಳಸಿದ್ಧರು ಚಮ್ಮಾರ ಕುಲಕ್ಕೆ ಸೇರಿದವರಾಗಿದ್ದರೆ. ಮರುಳಸಿದ್ಧರು ಕೀಳು ಕುಲಜಾತಿಯಾದ ಚಮ್ಮಾರ ಕುಲ ಜಾತಿಯೊಂದರಲ್ಲಿ ಜನ್ಮ ಪಡೆದವರಾಗಿದ್ದಾರೆ ಎಂಬುದಾಗಿ ಹೇಳಲು ಮೌಖಿಕವಾಗಿ ದೊರೆಯುವ ಕಥೆಗಳು, ಜನಪದರು ಹೇಳುವ ಹಾಡುವ ಪದಗಳಲ್ಲಿ ನಿರೂಪಿತವಾಗುತ್ತದೆ. ಅಲ್ಲದೆ ಉಜ್ಜಿನಿ (ಕೂಡ್ಲಿಗಿ ತಾಲೂಕು) ಪರಿಸರದಲ್ಲಿರುವ ಕಗ್ಗಲ್ಲಪುರ ಕ್ಷೇತ್ರವನ್ನು ವೀಕ್ಷಿಸಿದರೆ ಅಲ್ಲಿರುವ ಕುರುಹುಗಳು ಮಾದಿಗರ ಕೇರಿಯಲ್ಲಿರುವ ಮರುಳಸಿದ್ಧ ದೇವಾಲಯವಿರುವುದು. ಹಾಗೂ ಮರುಳಸಿದ್ಧರ ರಥೋತ್ಸವದ ಸಂದರ್ಭದಲ್ಲಿ ದಲಿತರದೆ ಪ್ರಮುಖ ಪಾತ್ರ ಇರುವುದನ್ನು ನೋಡಿದರೆ ಮರುಳಸಿದ್ಧರು ದಲಿತರೆಂಬುದಾಗಿ ಅನೇಕ ಅಂಶಗಳಿಂದ ದೃಢ ಪಡುತ್ತದೆ. ಮರುಳಸಿದ್ಧ ಪುರಾಣಪ್ರಸಿದ್ಧ ಸಾಧಕರಾಗಿದ್ದರು. ಶಿವನನ್ನು ಮಹಾದೇವ, ಮಾದೇವ, ಮಾದೇವ್ರು, ಮಾದೇವುರು, ಮಾದೇರು, ಮಾದರು, ಮಾದ್ರು ಎಂದಾಗಿದೆ, ಎಂಬುದಾಗಿ ಜಾಂಬವ ಶ್ರೀ ರಾಮಸ್ವಾಮಿ ಶಿವಾಚಾರ್ಯ ಅವರು ಅಭಿಪ್ರಾಯಪಡುತ್ತಾರೆ[೮೬]. ಇದಕ್ಕೆ ಪುಷ್ಟಿ ನೀಡುವ ದೇವಕವಿಯ ಮರುಳಸಿದ್ಧಕಾವ್ಯದ ಐದನೆಯ ಸಂಧಿಯ (ಕಾವ್ಯ-೧)ರಲ್ಲಿ ಮಹಾದೇವ ಎಂದು ಉಲ್ಲೇಖಿಸಿದೆ. ಮಹಾದೇವ ಎಂಬುದು ಮರುಳಸಿದ್ಧರ ಅನ್ಯನಾಮವಾಗಿದ್ದಿರಲೂಬಹುದು ಈ ಮೇಲಿನ ಅಭಿಪ್ರಾಯಕ್ಕೆ ಸಮರ್ಥನೆ ಸಿಗುತ್ತದೆ.

ಕೂಗಿಮಾರ, ಸುಪ್ರಭೆ ಮರುಳಸಿದ್ಧರಿಗೆ ಜನ್ಮ ನೀಡಿದ ಮೇಲೆ ಅವರಿಗೆ ಮರಣ ಪ್ರಾಪ್ತಿಚಿಯಾದ ಮೇಲೆ ಆ ಮಗು ಕಗ್ಗಲ್ಲುಪುರದ ಒಡೆಯ ಬಾಚನಗೌಡ, ಮಲ್ಲಮ್ಮ ದಂಪತಿಗಳ ಪೋಷಣೆಯಲ್ಲಿ ಸಾಕುಮಗುವಾಗಿ ಬೆಳೆಯುತ್ತದೆ.

ನೆಲದೊಳೊಂದೊಂದು ಹೋಟೆಯೊಳೊಂದು ಬೆಳವುತಿರೆ

ಫಲಪದಾ ಬಂದು ಗೌಡರಿಗೆ ಸಿದ್ಧಿಸುತಿರಲು

ಬಲವಂತನೆಂದು ತರುಣನ ಸಾಕುತಾ ಮೇಲೆ ಪಲವುದಿವಸವಕಳೆಯುತ

ಕುಲಸಮುದ್ರ ಕಗ್ಗಲ ಬಾಚಿಗೌಡನು ತನ್ನ

ಲಲನೆ ಮುದವೆತ್ತು ಸಾಕುತ ಸತ್ಕರಿಸುತಿರಲು

ಗೆಲವಾಯ್ತು ತರುಣಬಂದಾಮುಹೂರ್ತವೇಳೆಯೊಳು ನೆಲವೆಣ್ಣು ನೆಲಸಿರ್ಪಳು[೮೭]

॥೧೫॥(ಮೂರನೆಯ ಸಂಧಿ)

ಹುಟ್ಟುವಾಗಲೇ ತಂದೆ–ತಾಯಿಯನ್ನು ಕಳೆದುಕೊಂಡ ಮಾದಿಗರ ಮರುಳಸಿದ್ಧ ಬಾಚೇಗೌಡನ ಮನೆ ಸೇರಿ 'ಮಗ'ನಂತೆಯೇ ಪರಿಗಣಿತನಾದ. ಆಗ ಚಾಲ್ತಿಯಲ್ಲಿದ್ದ 'ಮನೆಮಗ', 'ಸಾಕುಮಗ' ಹಾಗೂ 'ಸಿಸು ಮಗ' ಪದ್ಧತಿಗಳ ಸೂಚನೆ ಅಡಗಿದೆ ಎಂದು ಕಾಣುತ್ತದೆ.

'ಮನೆಮಗ', 'ಸಿಸುಮಗ' ಎಂಬ ಅಂದಿನ ಆಚರಣೆಗಳ ಸುಳಿವು ಸಾಕಷ್ಟು ಸ್ಪಷ್ಟವಾಗಿಯೇ ಈ ಕಥನಗಳಲ್ಲಿ ಕಂಡುಬರುತ್ತಿದೆ. ಹಲವಾರು ಪವಾಡಪುರುಷ ಮತ್ತು ಸಿದ್ಧಪುರುಷರ ಕಥೆಗಳಲ್ಲಿ ಇದು ಪುನರಾವರ್ತನೆಗೊಂಡಿರುವುದರಿಂದ, ಕೆಳಜಾತಿ ಕುಟುಂಬದಲ್ಲಿ ಹುಟ್ಟಿದ ಬಾಲಕರು 'ಮನೆ ಮಗ' ಅಥವಾ 'ಸಿಸುಮಗ' ನಾಗಿ ಮೇಲುಜಾತಿಯ ಕುಟುಂಬದ ಸಾಕು ಮಗನಾಗಿ ಮರುಳಸಿದ್ಧರು ಬೆಳೆದಿರುವುದು ಆತನ ಚರಿತ್ರೆಯಿಂದ ತಿಳಿಯುತ್ತದೆ. ಇಲ್ಲಿ ಮನೆಮಗ, ಸಿಸುಮಗ ಎಂಬವು ಕೆಳಜಾತಿಗೆ ಬಳಸುವ ಪದಗಳಾಗಿವೆ. ಹೀಗಾಗಿ ಮರುಳಸಿದ್ಧರು ಸಾಕುಮಗ ಎಂಬುದು ಕಾವ್ಯದಲ್ಲಿ ಉಲ್ಲೇಖವಾಗಿರುವುದರಿಂದ ಮರುಳಸಿದ್ಧ ದಲಿತರೆಂಬುದಕ್ಕೆ ಈ ಮೇಲಿನ ಅಂಶ ಪುಷ್ಟಿ ನೀಡುತ್ತದೆ.

ಒಟ್ಟಿನಲ್ಲಿ ಮರುಳಸಿದ್ಧರ ಜನ್ಮ ಕುಲದ ಸಂಬಂಧದ ವಿಷಯವಾಗಿ ದೇವ ಕವಿಯ ಸಿದ್ಧಲಿಂಗ ಚಾರಿತ್ರವೆಂಬ ಕಾವ್ಯವನ್ನು ಅಧರಿಸಿ ಕೆಲವು ವಿದ್ವಾಂಸರಾದ ದಿ.ಅ.ನ. ಕೃಷ್ಣರಾಯರು, ಶ್ರೀ ಜೀರಿಗೆ ಕಟ್ಟಿ ಬಸಪ್ಪ, ಪಂ.ಎಸ್. ಬಸಪ್ಪ, ಹೆಚ್. ದೇವೀರಪ್ಪ, ದಿ.ಗೋವಿಂದ ಪೈ, ಲಿಂ. ಶ್ರೀ ಶಿವ ಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು. ಮೊದಲಾದ ವಿದ್ವಾಂಸರ ಅಭಿಪ್ರಾಯದಂತೆ ಮರುಳಸಿದ್ಧರು ಕೀಳು ಕುಲಜಾತಿಯಾದ ದಲಿತರಲ್ಲಿ ಜನ್ಮ ಪಡೆದವರಾಗಿದ್ದಾರೆ ಎಂಬುದಾಗಿ ಸಮರ್ಥಿಸುತ್ತಾರೆ.

"ಮರುಳಸಿದ್ಧರು ಮಚ್ಚೆಕಾಯಕದ ಮಾರಯ್ಯ (ಕೂಗಿಮಾರ) ಮತ್ತು ಆತನ ಸತಿ ಸುಪ್ರಭೆ ಅಥವಾ ಸೋನವ್ವೆ ಇವರ ಉದರದಲ್ಲಿ ಜನಿಸಿದನು. ಕಾಯಕ ಮಚ್ಚೆಯದು ಜಾತಿಯಿಂದ ಮಾದಿಗ"[೮೮] ಎಂಬುದಾಗಿ ಲಿಂ॥ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಹೆಚ್. ದೇವೀರಪ್ಪ, ಪ.ಗು.ಹಳಕಟ್ಟಿಯವರು, ಎನ್. ಬಸವರಾಧ್ಯ, ಡಾ. ಎಚ್. ತಿಪ್ಪೇರುದ್ರ ಸ್ವಾಮಿ, ಡಾ.ಎಂ.ಚಿದಾನಂದ ಮೂರ್ತಿ ಇನ್ನೂ ಮೊದಲಾದ ವಿದ್ವಾಂಸರು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪಂಡಿತ್ ಎಸ್. ಬಸಪ್ಪನವರು ದೇವಕವಿಕೃತ ಮರುಳಸಿದ್ಧ ಸಾಂಗತ್ಯವನ್ನು ಸಂಪಾದಿಸಿ ಮರುಳಸಿದ್ಧರ ಸಮಾರಕಗಳು ಎಂಬ ವಿಷಯದ ಮೇಲೆ ಸಮೀಕ್ಷೆ ನಡೆಸಿ[೮೯]. ಮರುಳಸಿದ್ಧರು ಕಗ್ಗಲ್ಲುಪುರದ ಕುಲಹೀನ ಜಾತಿಯಲ್ಲಿ ಹುಟ್ಟಿದವರು ಎಂಬ ತೀರ್ಮಾನಕ್ಕೆ ಬರುತ್ತಾರೆ.

❖ **ಮರುಳಸಿದ್ಧರ ಕಾಲದ ವಿಚಾರ :**

ಪಂಚಾಚಾರ್ಯ ಪೀಠದಲ್ಲಿ ಒಂದಾದ ಉಜ್ಜಯಿನಿ ಪೀಠದ ಸ್ಥಾಪಕರಾದ ಮರುಳಸಿದ್ಧರ ಕಾಲದ ವಿಚಾರವನ್ನು ಕುರಿತು ಹಲವು ವಿದ್ವಾಂಸರು ವಿಭಿನ್ನ ನಿಲುವು ತಳೆದಿದ್ದಾರೆ. ಮರುಳಸಿದ್ಧರು ಮತ್ತು ರೇವಣಸಿದ್ಧರು ಸಮಕಾಲೀನರಾದುದರಿಂದ ರೇವಣಸಿದ್ಧರ ಕಾಲನಿರ್ಣಯವನ್ನೇ ಮರುಳಸಿದ್ಧರ ಕಾಲವೂ ಅವಲಂಬಿಸಿದೆಯೆಂಬುದು ಅವರೆಲ್ಲರ ಒಮ್ಮತಾಭಿಪ್ರಾಯ. 'ಮರುಳಸಿದ್ಧರ ಶಿಷ್ಯನಾದ ಗದ್ದುಗೆಯ ರಾಮಿತಂದೆಯು ಈ ಗುರುಗಳ ಜೀವನ ಚರಿತ್ರೆಯ ವಿಷಯವಾಗಿ ಗುರುಬೋಧೆ' ಎಂಬ ಗ್ರಂಥವನ್ನು ರಚಿಸುರುವನು . . . . . ಇದನ್ನು ಅನುಸರಿಸಿ ಬಾಳುಲಿಯ ಕಲಿದೇವನ ಶಿಷ್ಯನಾದ ದೇವಕವಿಯು ಸಿದ್ಧಲಿಂಗ ಚಾರಿತ್ರವೆಂಬ ವಾರ್ಧಕ ಷಟ್ಪದಿ ಕಾವ್ಯವನ್ನು ರಚಿಸಿರುವನು. ಈ ಗ್ರಂಥದಿಂದ ಮರುಳಸಿದ್ಧರ ಸಂಬಂಧದ ಕೆಲವು ಚಾರಿತ್ರಿಕ ಸಂಗತಿಗಳು ತಿಳಿದು ಬಂದಿವೆ. ಮರುಳಸಿದ್ಧರೆಂಬುವರು ಪಂಚಾಚಾರ್ಯರಲ್ಲಿ ಒಬ್ಬ ಅಷ್ಟೇ ಅಲ್ಲ ಗೋತ್ರ ಪ್ರವರ್ತಕನೂ ಹೌದು. ಈತನು ಬಸವಪೂರ್ವದವನು. ಇಲ್ಲವೇ ಬಸವೇಶ್ವರರ ನಂತರದವನಿರಬಹುದು ಎಂಬ ಅನುಮಾನಗಳಿವೆ. ಈತನು ಐತಿಹಾಸಿಕ ವ್ಯಕ್ತಿಯೂ ಹೌದು ಮತ್ತೆ ಕೆಲವು ಕಾವ್ಯಪುರಾಣಗಳಲ್ಲಿ ಈತನ ಹೆಸರು ಮತ್ತು ಕಥೆ ಬರುತ್ತದೆ. ಕನ್ನಡದಲ್ಲಿ ಸಿದ್ಧನಂಜೇಶನ ಗುರುರಾಜ ಚಾರಿತ್ರ, ಪರ್ವತೇಶನ ಚತುರಾಚಾರ್ಯ ಪುರಾಣ, ತಿಲಕಪುರದ ಸೋಮನ ಚತುರಾಚಾರ್ಯ ಪ್ರಬಂಧ, ಇವೇ ಮೊದಲಾದ ಕೃತಿಗಳಲ್ಲಿ ಈತನ ಕಥೆ ಬಂದಿದೆ. ಮರುಳಸಿದ್ಧರು ೧೨ನೇ ಶತಮಾನದವರಿರಬಹುದು. ಈ ಬಗ್ಗೆ ಸಮಕಾಲೀನ ಶರಣರು ಮರುಳಸಿದ್ಧರನ್ನು ಸ್ಮರಿಸಿರುವ ಸಾಹಿತ್ಯ-ವಚನಗಳಲ್ಲಿ ಕಾಣಬಹುದು ಹಾಗೂ ಮರುಳಸಿದ್ಧರ ಕಾಲದ ಸಮಕಾಲೀನವಾದ ಶಾಸನಗಳು, ಕೆಲವು ಚಾರಿತ್ರಿಕ ಸಂಗತಿಗಳು ಅವರ ಕಾಲ ಯಾವುದೆಂದು ತಿಳಿಯಲು ನೆರವಾಗುತ್ತವೆ.

ಅ.ನ. ಕೃಷ್ಣರಾಯರು ಸಂಪಾಧಿಸಿರುವ ಮರುಳಸಿದ್ಧ ಕಾವ್ಯದಲ್ಲಿ ನಿರೂಪಿತವಾಗಿರುವ ಮರುಳಸಿದ್ಧರ ಕಾಲದ ವಿಷಯವಾಗಿ ಕೆಲವು ಚಾರಿತ್ರಿಕ ಸಂಗತಿಗಳು ಉಲ್ಲೇಖಿತವಾಗಿವೆ. ನೊಣಂಬಚಕ್ರವರ್ತಿ, ಹೊಯ್ಸಳ ಅರಸ ಬಲ್ಲಾಳ, ಶ್ರೀ ರೇವಣಸಿದ್ಧ, ಗುಂಡಬ್ರಹ್ಮಯ್ಯ ಇವರೆಲ್ಲರ ವಿಷಯವೂ ಆನುಷಂಗಿಕವಾಗಿ 'ಮರುಳಸಿದ್ಧ ಚಾರಿತ್ರ'ದಲ್ಲಿ ಬಂದಿದೆ. ಇವರ ಕಾಲ ಯಾವುದೆಂಬುದು ನಿರ್ಧಾರವಾದರೆ ಮರುಳಸಿದ್ಧರ ಕಾಲ ಯಾವುದೆಂಬುದು ತಾನಾಗಿಯೇ ತೋರುತ್ತದೆ.

ಮೊದಲನೆಯದಾಗಿ ನೊಣಬಚಕ್ರೇಶ್ವರನ ಉಲ್ಲೇಖವು ಈ ಕಾವ್ಯದಲ್ಲಿ ಬಂದಿದೆ, ಹೆಮ್ಮನಬೇತೂರು (ದಾವಣಗೆರೆ ತಾಲೂಕು) ಬ್ರಾಹ್ಮಣರ ಅಗ್ರಹಾರವಾಗಿತ್ತು. ಬ್ರಾಹ್ಮಣರ

ವಾಸಸ್ಥಾನವಾಗಿದ್ದ ಈ ಭಾಗದಲ್ಲಿ ಮರುಳಸಿದ್ಧರು ತಮ್ಮ ಯಜ್ಞ ಕಾರ್ಯಗಳಿಗೆ ಅಡ್ಡಿ ಮಾಡುತ್ತಿರುವನೆಂದೂ ಹದಿನೆಂಟು ಜಾತಿಯನ್ನೆಲ್ಲ ಬೆರಕೆಯಿಂದುಣಿಸಿ ವರ್ಣಾಶ್ರಮ ಧರ್ಮವನ್ನು ಹಾಳುಮಾಡುತ್ತಿರುವನೆಂದೂ ನೊಣಬಚಕ್ರೇಶ್ವರನಲ್ಲಿ ದೂರುವ ಪ್ರಸಂಗವನ್ನು ವರ್ಣಿಸುವಾಗ ಈ ಕಾವ್ಯ (೨ನೇ ಸಂಧಿ ಪ. ॥೯೪॥) ದಲ್ಲಿ ಉಲ್ಲೇಖವಾಗಿದೆ[೧೦]. ನೊಣಬೇಶ ಯಾರು ಎಂಬುದನ್ನು ನಿರ್ಧರಿಸಲು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಈ ಗ್ರಂಥದಲ್ಲಿ ವ್ಯಕ್ತವಾಗಿರುವ ಮರುಳಸಿದ್ಧರ ಪುಣ್ಯಕ್ಷೇತ್ರಗಳೆಲ್ಲಾ ಚಿತ್ರದುರ್ಗ, ದಾವಣಗೆರೆ ಜಿಲ್ಲೆಯ ಜಗಳೂರು ಹರಿಹರ ಮತ್ತು ದಾವಣಗೆರೆ ತಾಲೂಕುಗಳಲ್ಲಿಯೂ ಮತ್ತು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿಯೂ ಇವೆ. ಈ ಭಾಗದ ರಾಜ್ಯಕ್ಕೆ ಕ್ರಿ.ಶ. ೧೦ ಹಾಗೂ ೧೨ ನೆಯ ಶತಮಾನದಲ್ಲಿ ನೊಳಂಬವಾಡಿ ಎಂದು ಹೆಸರಿತ್ತು. ಮೊದಲು ವಿಸ್ತಾರವಾದ ನೊಳಂಬವಾಡಿ ೩೨,೦೦೦ ರಾಜ್ಯಕ್ಕೆ ನಿಡುಗಲ್ಲಿನಿಂದ ಆಳುತ್ತಿದ್ದ ನೊಳಂಬಪಲ್ಲವರು ರಾಜರಾಗಿದ್ದರು. ಉಚ್ಚಂಗಿಯ ಪಾಂಡ್ಯರು ೧೦ ನೆಯ ಶತಮಾನದ ಕೊನೆಯಲ್ಲಿ ನೊಳಂಬವಾಡಿ ೩೨,೦೦೦ ಪ್ರಾಂತ್ಯವನ್ನು ವಶಮಾಡಿಕೊಂಡಾಗ ನಿಡುಗಲ್ಲು ನೊಳಂಬರು ಈ ಪಾಂಡ್ಯರಲ್ಲಿ ಐಕ್ಯವಾಗಿ ಹೋದರು. ಅನಂತರ ಪಾಂಡ್ಯರೇ ೧೨ ನೇ ಶತಮಾನದ ಅಂತ್ಯದವರೆಗೂ ಧರಣೀಯುವತಿಗೆ ಕಟನೂಪರವೆನಿಪ ನೊಳಂಬವಾಡಿ ೩೨,೦೦೦ ರಾಜ್ಯಕ್ಕೆ ಮಹಾಮಂಡಲೇಶ್ವರರಾಗಿದ್ದರು. ವಿಜಯಪಾಂಡ್ಯದೇವ ಅಥವಾ ಕಾಮದೇವನೆಂಬ ಮಹಾಪರಾಕ್ರಮಿಯಾದ ಮಹಾಮಂಡಲೇಶ್ವರನು ಕ್ರಿ.ಶ. ೧೧೪೮ ರಿಂದ ೧೧೮೩ ರ ವರೆಗೂ ರಾಜನಾಗಿದ್ದನು. ಅನಂತರ ಕ್ರಿ.ಶ. ೧೨೦೦ : ರ ವರೆಗೂ ಇವನು ಜೀವಿಸಿದ್ದಂತೆ ಆಧಾರಗಳಿವೆ.[೧೧] ಎಂದು ದಿ.ಹಲ್ಲೂರು ಶ್ರೀನಿವಾಸ ಜೋಯಿಸ ಮರುಳಸಿದ್ಧರ ಕಾಲದ ವಿಚಾರವಾಗಿ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಉಜ್ಜಯಿನೀ ಸಿದ್ಧೇಶ್ವರ ದೇವಾಲಯದ ಪೌಳಿಯಲ್ಲಿರುವ ಶಾಸನ ಜಗದ್ದಳ ಪಾಂಡ್ಯನ ಶಕ ೧೧೧೫ ಸಂವತ್ಸರದ (ಕ್ರಿ.ಶ. ೧೧೯೨) ಶಿಲಾಶಾಸನವು ಇದನ್ನು ಪುಷ್ಟೀಕರಿಸುತ್ತದೆ[೧೨] ಎಂಬುದಾಗಿ ಅವರು ಮೇಲಿನ ಅಭಿಪ್ರಾಯವನ್ನು ಸಮರ್ಥಿಸಿಕೊಂಡಿದ್ದಾರೆ. ಮರುಳಸಿದ್ಧರು ಜನಿಸಿದಂದಿನಿಂದಲೂ ಬೇತೂರು ಯಾಗವನ್ನು ಕೆಡಿಸುವವರೆಗೂ ಸಂಚರಿಸಿದ ಸ್ಥಳಗಳನ್ನೊಳಗೊಂಡ ನೊಳಂಬವಾಡಿ ರಾಜ್ಯಕ್ಕೆ ಅರಸನಾದ ವಿಜಯಪಾಂಡ್ಯನನ್ನೇ ಕವಿದೇವನು ನೊಣಬೇಶ ಎಂದು ಸಂಬೋಧಿಸಿದಂತೆ ವ್ಯಕ್ತವಾಗುವುದು.

ಎರಡನೇ ಪ್ರಸಂಗದಲ್ಲಿ ಮರುಳಸಿದ್ಧನು ಹಳೇಬೀಡಿಗೆ ಹೋಗಿ ಬಲ್ಲಾಳನೃಪನನ್ನು ಕಂಡನು (ಸಂಧಿ ೩, ಪದ್ಯ ೧೦೩, ೧೦೪, ೧೦೬),[೧೩] ದೇವಕವಿಯು 'ಹಳೆಯಬೀಡು' ಎಂದು ಕರೆದಿರುವುದು ಹೊಯ್ಸಳರ ರಾಜದಾನಿಯಾಗಿದ್ದ ದ್ವಾರಸಮುದ್ರವನ್ನೆ ಇಲ್ಲಿಯೂ ಮರುಳಸಿದ್ಧರ

ಪ್ರವೇಶವಾಗುತ್ತದೆ. ಮರುಳಸಿದ್ಧರು ಇಲ್ಲಿ ಪ್ರಜೆಗಳ ಸ್ವಾತಂತ್ರ್ಯ ಹಕ್ಕು ನ್ಯಾಯ ಕೇಳಲು ದೊರೆಯನ್ನು ಸಂದರ್ಶಿಸಿದ್ದರು ಎಂಬುದು ಮರುಳಸಿದ್ಧರ ಚರಿತ್ರೆಯಿಂದ ತಿಳಿಯುತ್ತದೆ. ಬಲ್ಲಾಳ ಅರಸ ಅಧಿಕಾರಿ ಬಲುಗಮ್ಮೆ ದೊರೆಯ ವಿರುದ್ಧ ಪ್ರತಿಭಟಿಸುತ್ತವೆ. ಆಗ ರಾಜಾಜ್ಞೆಯ ಮೇರೆಗೆ ಕಾದ ಕಬ್ಬಿಣದ ಬಳೆ ಹಾಕುವ ಶಿಕ್ಷೆ ವಿಧಿಸಿದ. ಆಗ ಮರುಳಸಿದ್ಧರ ಮಧ್ಯ ಪ್ರವೇಶದಿಂದ ಅನಿರೀಕ್ಷಿತವಾಗಿ ಬಿರುಮಳೆ ಸುರಿದು ಮರುಳಸಿದ್ಧನ ಮಹಾತ್ಮೆ ದೊರೆಗೆ ಅರಿವಾಗುವುದೂ, ಈ ಮೇಲಿನ ಸಂಗತಿಯನ್ನು ಗಮನಿಸಿದರೆ ಮರುಳಸಿದ್ಧರು ಹಳೆಯಬೀಡಿಗೆ ಹೋಗಿ ಪವಾಡವನ್ನು ಮೆರೆದು, ಅಲ್ಲಿನ ದೊರೆ ಮತ್ತು ಪ್ರಜೆಗಳ ನಡುವಿನ ವಿವಾದ ಪರಿಹರಿಸಿದ ಎಂಬುದು ಗೊತ್ತಾಗುತ್ತದೆ. ಈ ಅಂಶವನ್ನು ಗಮನಿಸಿದರೆ ಮರುಳಸಿದ್ಧಕಾವ್ಯವು ಈ ಪ್ರಸಂಗವನ್ನು ಉಲ್ಲೇಖಿಸುತ್ತದೆ. ಆ ರಾಜ್ಯವಾಳುತ್ತಿದ್ದವನು ಬಲ್ಲಾಳನೃಪತಿ ಈ 'ಬಲ್ಲಾಳನೃಪತಿ' ಎಂದರೆ ಈ ಗ್ರಂಥದಲ್ಲಿ ಉಕ್ತವಾಗಿರುವ ಚಾರಿತ್ರಿಕ ಪುರುಷರಾದ ನೊಣಬೇಶ, ಬಲ್ಲಾಳನೃಪ, ಮತ್ತು ಗಣಪತಿ ಇವರ ಕಾಲವು ಕನ್ನಡ ನಾಡಿನ ಚರಿತ್ರೆಯಲ್ಲಿ ಗೊತ್ತಾಗಿದೆ. ಕಾಕತೀಯ ವಂಶದ ಗಣಪತಿಯು ಕ್ರಿ.ಶ. ೧೧೯೯ ರಿಂದ ೧೨೬೦ರವರೆಗೆ ರಾಜ್ಯಭಾರ ಮಾಡಿದನು. ಹಳೆಯಬೀಡಿನ ಹೊಯ್ಸಳರ ಅರಸರಲ್ಲಿ ಬಲ್ಲಾಳರೆಂಬುವರು ನಾಲ್ವರು ರಾಜರಿದ್ದರು. ಗಣಪತಿಯ ಕಾಲದಲ್ಲಿದ್ದ ರಾಜ ಇಮ್ಮಡಿ ಬಲ್ಲಾಳನು ಕ್ರಿ.ಶ. ೧೧೭೩ ರಿಂದ ೧೨೨೦ ರ ವರೆಗೆ. ರಾಜ್ಯಭಾರ ಮಾಡಿದನು[೪] ಎಂಬುದಾಗಿ, ದಿ.ಹುಲ್ಲೂರು ಶ್ರೀನಿವಾಸ ಜೋಯಿಸರ ಅಭಿಮತ. ಇದೇ ಅಭಿಪ್ರಾಯವನ್ನು ಎಂ. ಗೋವಿಂದ ಪೈ ಅವರು ವ್ಯಕ್ತ ಪಡಿಸಿದ್ದಾರೆ.

ದೇವಕವಿಯ ಮರುಳಸಿದ್ಧ ಕಾವ್ಯದಲ್ಲಿ, ಶ್ರೀ ರೇವಣಸಿದ್ಧರು ಮರುಳಸಿದ್ಧರಿಗೆ ದೀಕ್ಷಾ ಕಾರ್ಯ ಕೈಗೊಂಡಿದ್ದರು ಎಂಬುದಾಗಿ (ಸಂಧಿ ೬ ಪದ್ಯ ೧–೧೪); ಉಲ್ಲೇಖಿಸಿದೆ.

ರೇವಣಸಿದ್ಧನ ಕಾಲವೂ ಅನೇಕ ಸಂಶೋಧಕರ ಪ್ರಯತ್ನದಿಂದ ಗೊತ್ತು ಹಚ್ಚಲ್ಪಟ್ಟಿದೆ. ರೇವಣಸಿದ್ಧರು ಬಸವೇಶ್ವರರ ಸಮಕಾಲೀನರಾಗಿದ್ದರು ಎನ್ನುವುದಕ್ಕೆ ಅನೇಕ ಚಾರಿತ್ರಿಕ ಸಂಗತಿಗಳು ಈ ಬಗ್ಗೆ ನಿರೂಪಿಸುತ್ತವೆ. "ಚಿನ್ಮಯಗಿರಿಯ (ಇಂದಿನ ಚಿತ್ರದುರ್ಗದ ಮೊದಲ ಹೆಸರು) ಗುರು ರೇವಣಸಿದ್ಧರನ್ನು ಕಂಡು ದೀರ್ಘದಂಡ ಪ್ರಣಾಮವ ಮಾಡಿ, ಮರುಳಸಿದ್ಧೇಶ್ವರರು ಕಿಂಕುರ್ವಾಣದೊಳಿರಲು, (ರೇವಣಸಿದ್ಧರು) ಹಸ್ತಮಸ್ತಕ ಸಂಯೋಗ ಮಾಡುತ್ತೊಡನೆ, ಮಸ್ತಕಂ ಕಂಠ ಉರತಾಣಗನನರಿಪು ತಂ, ತತ್ಸ್ಥಾನದೊಳು ಶಿವನ ಮೂರ್ತಿಯಂ ನೆಲೆಗೊಳಿಸಿದ" ನೆಂದು ದೇವಕವಿ ಕಾವ್ಯದಲ್ಲಿ ಉಲ್ಲೇಖಿಸಿದ್ದಾನೆ. ಮತ್ತೊಂದೆಡೆ ಅದೇ ಗಿರಿಯನ್ನು ಚಿನ್ಮೂಲಗಿರಿ ಎಂದು ಕರೆದಿದ್ದಾನೆ. ಈಗಿನ ಚಿತ್ರದುರ್ಗದ ಬಳಿ ಇರುವ ಬೆಟ್ಟವೇ ಎಂಬುದು ದಾವಣಗೆರೆ ೧೬೪ ನೆಯ ಶಾಸನದಿಂದ ತಿಳಿದುಬರುತ್ತದೆ. ಆ ಬೆಟ್ಟದ ಮೇಲಿರುವ ಸಂಪಿಗೆ ಸಿದ್ಧೇಶ್ವರ ದೇವಸ್ಥಾನದಲ್ಲಿಯೂ

ಅಲ್ಲಿಗೆ ಆರು ಮೈಲಿ ದೂರದ ಹುಲ್ಲೂರು ಗ್ರಾಮದಲ್ಲಿರುವ ದೇವಸ್ಥಾನದಲ್ಲಿಯೂ ಮಾನವಕೃತಿಯ ರೇವಣಸಿದ್ಧ ಮರುಳಸಿದ್ಧರ ವಿಗ್ರಹಗಳಿವೆಯೆಂದು ತರಳಬಾಳು ಜಗದ್ಗುರು ಶ್ರೀ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಗುರುತಿಸಿರುವರು[೬]. ಮರುಳಸಿದ್ಧನದೇ ಎಂದು ತಿಳಿದುಬರುವ ವಚನವೊಂದು ರೇವಣಸಿದ್ಧರನ್ನು ಸ್ಮರಿಸಿದೆ.

ಆಲಿಸುವ ಶ್ರವಣವು ಮೇಲೆ ಆಕಾಶವನಡರಲು

ಉಲುಹು ನಿರ್ಭೂತ ಚಿತ್ತ ಸಮಾಧಾನವೆಯ್ದಲು

ಕಾಲ ಕರ್ಮಭವಂಗಳ ಗೆಲುವುದಿದೇನು ಸೋಜಿಗವು

ಹೇಳಾ ರೇವಣ್ಣ ಪ್ರಭುವೇ ಮರುಳಸಿದ್ಧ

ಎಂಬ ಈ ವಚನದಲ್ಲಿಯ 'ರೇವಣ್ಣ ಪ್ರಭುವೇ' ಎಂಬ ಅಂಕಿತವಿದೆ. ಹೀಗಾಗಿ ಆತನು ರೇವಣಸಿದ್ಧನ ಶಿಷ್ಯನಾಗಿರಬೇಕೆಂದು ಸಿದ್ಧವಾಗುತ್ತದೆ.

ಕ್ರಿ.ಶ. ಸು. ೧೧೫೦ ರಷ್ಟಕ್ಕೆ ಹುಟ್ಟಿ ಕ್ರಿ.ಶ. ಸು. ೧೨೩೦-೧೨೩೫ ರಲ್ಲಿ ಶಿವೈಕ್ಯನಾದ ಹರಿಹರನು ಆದಯ್ಯನ ಮೇಲೆ ಒಂದು ರಗಳೆಯನ್ನು ಬರೆದಿರುತ್ತಾನೆ. ಆತ ಏವಬಸವೇಶ್ವರನನ್ನು ಹೆಸರಿಸಿರುವ ಹಾಗೂ ಅವನ ಕಿರಿಯ ಸಮಕಾಲೀನನಾದ ಆದಯ್ಯನು ಕ್ರಿ.ಶ. ಸು. ೧೨೧೦ ರೊಳಗೆ ಕಾಲವಾಗಿರಬೇಕು. ಆದಯ್ಯನ ಈ ೨ ವಚನಗಳಲ್ಲಿ 'ಮರುಳಸಿದ್ಧಯ್ಯ ದೇವರ ಅದೃಷ್ಟ ಪ್ರಸಾದ ನಿಷ್ಠೆ' ಹಾಗೂ 'ಮರುಳಸಿದ್ಧ ದೇವರೆನ್ನ ಶ್ರೋತ್ರ' ಎಂಬಲ್ಲಿ ಮರುಳಸಿದ್ಧನ ಹೆಸರಿದೆ[೭] ಎಂಬುದಾಗಿ ಎಂ.ಗೋವಿಂದ ಪೈರವರು ಅಭಿಪ್ರಾಯ ಪಟ್ಟಿದ್ದಾರೆ. ರೇವಣಸಿದ್ಧೇಶ್ವರನು ಐತಿಹಾಸಿಕ ವ್ಯಕ್ತಿಯೆಂದೂ, ಆತನು ಸುಮಾರು ಕ್ರಿ.ಶ. ೧೧೯೫ ರಲ್ಲಿ ಹುಟ್ಟಿ ಸುಮಾರು ೧೧೯೦ ರ ವರೆಗೆ ಬದುಕಿದನೆಂದೂ ದಿ॥ ಎಂ.ಗೋವಿಂದ ಪೈ ಅವರ ಅಭಿಪ್ರಾಯ.

ರೇವಣಸಿದ್ಧ ಎಂಬ ಹೆಸರು ಮತ್ತು ಇತಿಹಾಸ ವೀರಶೈವಧರ್ಮದಲ್ಲಿ ಒಂದು ಒಗಟು, ರೇವಣಸಿದ್ಧರನ್ನು ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರು, ಸಿದ್ಧಾಂತ ಶಿಖಾಮಣಿಯ ಕರ್ತೃ ಇನ್ನೊಬ್ಬ ಬಸವಾದಿ ಪ್ರಮಥರ ಸಮಕಾಲೀನವಾದ ರುದ್ರಮುನಿ ತಂದೆ, ಎಂಬುದಾಗಿ ಕೆ.ಜಿ. ನಾರಾಯಣ ಪ್ರಸಾದ ಆದಿಯಾಗಿ ಅನೇಕ ವಿದ್ವಾಂಸರು ಗುರುತಿಸಿದ್ದಾರೆ.

ಕರ್ಲಮಂಗಲಂ ಶ್ರೀ ಕಂಠಯ್ಯನವರ ಪ್ರಕಾರ ಈತನ ಕಾಲವೂ ಸು. ೧೧೨೬ ರಿಂದ ೧೨೧೦ರ ವರೆಗೆ ಜೀವಿಸಿರಬೇಕೆಂದು ನಂಬುವುದಕ್ಕೆ ಈಗ ಯಾವ ಅಡ್ಡಿಯೂ ಇಲ್ಲ ಎಂದಿದ್ದಾರೆ.

ಡಾ.ಎಂ.ಚಿದಾನಂದಮೂರ್ತಿ ಅವರು ರೇವಣಸಿದ್ಧರ ಕಾಲವನ್ನು ಕ್ರಿ.ಶ. ೧೦೮೦ ರಿಂದ ೧೧೬೦ ರ ಅವಧಿಯವರೆಗೆ ಹೊಂದಿಸಬಹುದು ೧೧ ನೇ ಶತಮಾನದ ಅಂತ್ಯದಿಂದ ೧೨ ನೇ ಶತಮಾನದ ಉತ್ತರಾರ್ಧವರೆಗೆ ರೇವಣಸಿದ್ಧರು ಬದುಕಿದ್ದರೆಂಬುದರಲ್ಲಿ ಅನುಮಾನಗಳಿಲ್ಲ ಎಂದಿದ್ದಾರೆ. ಶ್ರೀ. ಎ.ಬಿ.ಹಾಲಭಾವಿಯವರು ರೇವಣಸಿದ್ಧರ ಕಾಲವನ್ನು ೧೦೨೫-೧೧೫೦ ರಲ್ಲಿದ್ದರೆಂದು ಸೂಚಿಸಿದ್ದಾರೆ. ಡಾ. ನಂದೀಮಠ ಅವರು ಶ್ರೀ ಹಾಲಭಾವಿ ಅವರ ಹೇಳಿಕೆಯನ್ನು ಸಮರ್ಥಿಸುತ್ತಾರೆ[೮].

ರೇವಣಸಿದ್ಧರ ಕಾಲವನ್ನು ಗುರುತಿಸಿ ಐತಿಹಾಸಿಕ ಪುರುಷರೆಂದು ಅಭಿಪ್ರಾಯ ಪಟ್ಟಿರುವ ಮೇಲಿನ ವಿದ್ವಾಂಸರ ಅಭಿಪ್ರಾಯಗಳನ್ನು ಆಧರಿಸಿ ಮರುಳಸಿದ್ಧರು ರೇವಣಸಿದ್ಧರಿಂದ ದೀಕ್ಷೆ ಪಡೆದವರಾಗಿರುವುದರಿಂದ ಹಾಗೂ ಅವರ ಸಮಕಾಲೀನರಾಗಿದ್ದರೆಂಬುದಕ್ಕೆ ಮೇಲಿನ ಆಧಾರಗಳೆ ಪುಷ್ಟಿ ನೀಡುತ್ತವೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಹೀಗಾಗಿ ಮರುಳಸಿದ್ಧರು ಸರಿ ಸುಮಾರು ಕ್ರಿ.ಶ. ೧೧೮೦ ರಲ್ಲಿ ಜೀವಿಸಿರಬಹುದು ಎಂದು ದಿ॥ ಹುಲ್ಲೂರು ಶ್ರೀನಿವಾಸ ಜೋಯಿಸರ ಅಭಿಮತವಾಗಿದೆ. ಹಾಗಾದರೆ ಇದೆಲ್ಲ ಸಮಸಾಮಯಿಕತೆಗೆ ಅನುರೂಪವಾಗಿ ಮರುಳಸಿದ್ಧರು ಕ್ರಿ.ಶ. ಸು. ೧೧೨೦-೨೫ರಲ್ಲಿ ಹುಟ್ಟಿ ಸು. ೧೨೦೫-೧೦ ರೊಳಗೆ ಸಮಾಧಿ ಹೊಂದಿರಬೇಕು ಎಂಬುದಾಗಿ ಗೋವಿಂದ ಪೈರವರ ಅಭಿಮತವಾಗಿದೆ.

ಚಾರಿತ್ರಿಕವಾಗಿ ಉಪಲಬ್ಧವಾದ ಶಿಲಾಶಾಸನಗಳಾದ ಕ್ರಿ.ಶ. ೧೧೮೩ ನೆಯ ಸಂವತ್ಸರದ ಸಿರಿವಾಳ ಶಾಸನದಲ್ಲಿ ಉಕ್ತವಾಗಿರುವ ದಾನವನ್ನು ಸ್ವೀಕರಿಸಿದ ರೇವಣಸಿದ್ಧರು ಮರುಳಸಿದ್ಧರ ಗುರುವಾಗಿರುವರು. ಮರುಳಸಿದ್ಧರು ರೇವಣಸಿದ್ಧರಿಗಿಂತಲೂ ವಯಸ್ಸಿನಲ್ಲಿ ಬಹಳ ಚಿಕ್ಕವರಾಗಿಯೇ ಇರಬೇಕು. ಅವ್ವೆಯರ ಹಳ್ಳಿ ಶಾಸನ ಈ ಹಳ್ಳಿಯ ಭೀಮೇಶ್ವರ ದೇವಾಲಯದ ಹಿಂದಣ ಶಾಸನ (ಕ್ರಿ.ಶ. ೧೧೯೩)ದಲ್ಲಿ ಆನಂದ ಸಂವಚರದ ಆಗೋರತ್ತಗೆ ಹಜರಗವಿ ಬಗಿಲ ತೆಗೆದು ಮುಲೋ ಆ ಅರಹಿಪವಡೆದ ತೋರಿದರು ರೇವಣಸಿದ್ಧೇಶ್ವರನ ಮಗ ಮರುಳಸಿದ್ಧೇಶ್ವರನು........ ಪವಾಡವನ್ನು ತೋರಿದವನು ಮರುಳಸಿದ್ಧೇಶ್ವರನೆಂದು ಆತನ ಗುರುವು ರೇವಣಸಿದ್ದೇಶ್ವರನೆಂದೂ ಈ ಶಾಸನದ ಒಟ್ಟು ಅರ್ಥ ಇಲ್ಲಿ 'ಮಗ' ಎಂಬುದನ್ನು ಶಿಷ್ಯ ಎಂಬರ್ಥದಲ್ಲಿ ಗ್ರಹಿಸಬೇಕು[೯೯]. ಹೀಗಾಗಿ ಮರುಳಸಿದ್ಧರ ಕಾಲದ ವಿಚಾರವಾಗಿ ಈ ಮೇಲಿನ ರೇವಣಸಿದ್ಧರ ಮತ್ತು ಮರುಳಸಿದ್ಧರ ಸಂಬಂಧವಾಗಿ ನಿರೂಪಿತವಾದ ಅನೇಕ ಚಾರಿತ್ರಿಕ ಸಂಗತಿಗಳು ರೇವಣಸಿದ್ಧರ ಸಮಕಾಲೀನ ಮರುಳಸಿದ್ಧ ಎಂಬುದನ್ನು ದೃಢಪಡಿಸುವುದರಿಂದ ಮರುಳಸಿದ್ಧರಕಾಲವು ಸರಿ ಸುಮಾರು ೧೨ ನೇ ಶತಮಾನವೆಂಬುದಾಗಿ ತಿಳಿದುಬರುತ್ತದೆ.

ಮತ್ತೊಂದು ಪ್ರಸಂಗವು ಮರುಳಸಿದ್ಧರ ಕಾಲ ವಿಚಾರವಾಗಿ ಮರುಳಸಿದ್ಧರು ಗುಂಡ ಬ್ರಹ್ಮಯ್ಯರನ್ನು ಸಂದರ್ಶಿಸಿದ ಅವರು 'ರುದ್ರರಾಯನ ಪಿತನು ಗಣಪತಿಯ ದೇಶ'ವಾದ ಓರುಗಲ್ಲಿಗೆ ಹೋದನು (ಸಂಧಿ. ೪. ಪದ್ಯ ೪೦, ೪೧-೪೨)[೧೦೦] ಎಂಬುದಾಗಿ ಮರುಳಸಿದ್ಧ ಕಾವ್ಯದಲ್ಲಿ ಹೇಳಿದೆ. ಅಂದರೆ ಶ್ರೀ ರೇವಣಸಿದ್ಧರಿಂದ ಅನುಗ್ರಹ ಪಡೆದ ತರುವಾಯ, ಕೊಲ್ಲಾಪುರದ ಮಾಯೆಯ ಮದವನ್ನು ಮುರಿಯಲು ಹೊರಟ ಮರುಳಸಿದ್ಧರು "ಓರಂಗಲ್ಲಿನ ರುದ್ರರಾಯನ ಪಿತನು ಗಣಪತಿಯ" ರಾಜ್ಯಕ್ಕೆ ಹೋಗಿ ಅಲ್ಲಿ ಗುಂಡಬ್ರಹ್ಮಯ್ಯನನ್ನು ಕಂಡು ಆತನ ಆಶೀರ್ವಾದವನ್ನು ಪಡೆದನೆಂದು ದೇವಕವಿಯ ಹೇಳಿಕೆ ಕಾಕತೀಯ ಗಣಪತಿಯ ಕಾಲ ಕ್ರಿ.ಶ. ೧೨೦೦-೧೨೬೦ ಗುಂಡಬ್ರಹ್ಮಯ್ಯನು ಗಣಪತಿಯ ಸಮಕಾಲೀನನಿರಬೇಕು. ಆತನ ಮಹಿಮೆಯನ್ನು ಕುರಿತು ಒಂದು ಕಥೆ ಪದ್ಮರಾಜ ಪುರಾಣ (೧೪೦೦) ದಲ್ಲಿ ಬಂದಿದೆ. ಗುಂಡಬ್ರಹ್ಮಯ್ಯನು ಪದ್ಮರಸ (ಸು ಕ್ರಿ.ಶ. ೧೧೫೦-೧೨೫೦) ನಿಗಿಂತ ಪ್ರಾಚೀನನೋ ಸಮಕಾಲೀನನೋ ಆಗಿರಬೇಕು. ಗುಂಡಬ್ರಹ್ಮಯ್ಯನ ವೃತ್ತಾಂತವು ಲಕ್ಕಣ್ಣ ದಂಡೇಶನ 'ಶಿವತತ್ವ ಚಿಂತಾಮಣಿ' ಯಲ್ಲಿಯೂ ಉಲ್ಲೇಖವಿದೆ[೧೦೧]. ಈ ಪ್ರಸಂಗದಲ್ಲಿ ಗುಂಡಬ್ರಹ್ಮಯ್ಯನು ಗಣಪತಿರಾಯನ ಸಮಕಾಲೀನ ನೆಂಬುದು ಮಾತ್ರ ಇದರಿಂದ ವ್ಯಕ್ತವಾಗುತ್ತದೆ. ಆದುದರಿಂದ ಗಣಪತಿರಾಯ, ಗುಂಡಬ್ರಹ್ಮಯ್ಯನ ದರ್ಶನ ಪಡೆದ ಮರುಳಸಿದ್ಧ ಈ ಮೂವರು ಒಂದೇ ಕಾಲದಲ್ಲಿ, ಅಂದರೆ ಸುಮಾರು ಕ್ರಿ.ಶ. ೧೨೦೫ ರಲ್ಲಿದ್ದರೆಂದು ನಿರ್ಣಯಿಸಬಹುದು 'ಶ್ರೀಮಾನ್' ಎಂ. ಗೋವಿಂದ ಪೈರವರು ಓರುಗಲ್ಲಿನ ಗಣಪತಿಯ ಕಾಲ ೧೧೯೯ ರಿಂದ ೧೨೬೦ರ ಕಾಲಾವಧಿಯಲ್ಲಿ ಮರುಳಸಿದ್ಧರು ಓರಂಗಲ್ಲಿಗೆ ಹೋದಾಗ ಅಲ್ಲಿ ಗಣಪತಿ ಆಳುತ್ತಿದ್ದನೆಂದು ತಿಳಿಸಿದ್ದಾರೆ, ಮರುಳಸಿದ್ಧಕಾವ್ಯದ ದೇವಕವಿ ಸಹ ಓರುಗಲ್ಲೆಂಬುದೆ ಇವರ ಸ್ಥಳವಾಗಿದ್ದಿತ್ತೆಂದು ತಿಳಿಸಿದ್ದಾನೆ. ಮರುಳಸಿದ್ಧ ಕಾವ್ಯವನ್ನು ವಿಮರ್ಶಿಸುತ್ತ ದಿ॥ ಹುಲ್ಲೂರು ಶ್ರೀನಿವಾಸ ಜೋಯಿಸ ಅವರು ಮರುಳಸಿದ್ಧರು ಕೊಲ್ಲಾಪುರಕ್ಕೆ ಹೋಗುವ ಮಾರ್ಗದಲ್ಲಿ ಓರಂಗಲ್ಲಿನಲ್ಲಿದ್ದ ಗುಂಡ-ಬ್ರಹ್ಮಯ್ಯರನ್ನು ಕಂಡ ಕಾಲ ಕ್ರಿ.ಶ. ೧೧೯೦-೧೨೦೦ ಎಂದಿದ್ದಾರೆ[೧೦೨].

ಈ ಮೇಲಿನ ಚಾರಿತ್ರಿಕ ಸಂಗತಿಗಳು, ಹಲವು ವಿದ್ವಾಂಸರು ನಿರೂಪಿಸಿರುವ ಚಾರಿತ್ರಿಕ ಸಂಗತಿಗಳ ನಿರೂಪಣೆಗಳು ಹಾಗೂ ದೇವ ಕವಿಯ ಮರುಳಸಿದ್ಧ ಕಾವ್ಯದಲ್ಲಿ ವ್ಯಕ್ತವಾದ ಕೆಲವು ಚಾರಿತ್ರಿಕ ಸಂಗತಿಗಳನ್ನು ಆಧಾರಿಸಿದ ಮರುಳಸಿದ್ಧರ ಕಾಲವನ್ನೂ ಗುರುತಿಸಬಹುದಾಗಿದೆ. ಒಟ್ಟಿನಲ್ಲಿ ಮರುಳಸಿದ್ಧರು ಕ್ರಿ.ಶ. ಸುಮಾರು ೧೧೪೦ ರಲ್ಲಿ ಜನ್ಮವೆತ್ತು ಕ್ರಿ.ಶ. ಸುಮಾರು ೧೨೧೦ ರಲ್ಲಿ ಸಮಾಧಿಯನ್ನು ಹೊಕ್ಕನೆಂದು ನಿರ್ಣಯಿಸಿಬಹುದು. ಆದರೂ ಈ ಮೇಲಿನ ಚಾರಿತ್ರಿಕ ಕೆಲವು ಸಂಗತಿಗಳ ಚರ್ಚಿಸಲಾಗಿದೆ. ಮರುಳಸಿದ್ಧರ ಕಾಲ ನಿರ್ಣಯಕ್ಕೆ ಯಾವುದೇ ಚಾರಿತ್ರಿಕ ಆಕರಗಳು

ಲಭ್ಯವಿಲ್ಲ. ಕಾರಣ ಮರುಳಸಿದ್ಧರ ಕಾಲನಿರ್ಣಯವು ಸಾಹಿತ್ಯದಲ್ಲಿ ಉಲ್ಲೇಖವಾಗುವ ಚಾರಿತ್ರಿಕ ಸಂಗತಿಗಳನ್ನು ಆಧರಿಸಿ ಒಂದು ನಿರ್ಣಯಕ್ಕೆ ಬರಲಾಗಿದೆ.

೩.೩.೩. ಪಂಚಪೀಠಾಧಿಪತಿಗಳಾಗಿ ಮರುಳಸಿದ್ಧರು ಒಂದು ಜಿಜ್ಞಾಸೆ.

ಉಜ್ಜಿನಿ ವೀರಶೈವರ ಪಂಚಪೀಠಗಳಲ್ಲೊಂದು ಮರುಳಸಿದ್ಧೇಶ್ವರ ದೇವಾಲಯ ಇಲ್ಲಿದ್ದು, ಬಳ್ಳಾರಿಯಿಂದ ೯೦ ಕಿ.ಮೀ. ಮತ್ತು ಚಿತ್ರದುರ್ಗದಿಂದ ೪೫ ಕಿ.ಮೀ. ದೂರದಲ್ಲಿರುವ ಉಜ್ಜಯಿನಿಯು ವೀರಶೈವ ಪಂಚ ಪೀಠಗಳಲ್ಲಿ ಪ್ರಮುಖವಾದುದಾಗಿದೆ. ಸ್ಥಳೀಯವಾಗಿ ಈ ಗ್ರಾಮದ ಬಗ್ಗೆ ಗ್ಯಾಸೆಟಿಯರ್‌ನಲ್ಲಿ ಈ ರೀತಿ ವಿವರವಿದೆ. 'The place is held in great reverence by Lingayats as it is seat of one of the five Simhasanasawamis, or religious heads of the seat. The mata of this guru is the most notable buildings in the village, and contains with in its walls a temple to siddh-eswaraswami. A carved lotus on the ceiling of one of the compartments of the country. The tower over the Shrine itself is so blackened with the many oily oblations which have been powered over it that the ornament on it is almost obliterated; ಈ ಮೇಲಿನಂತೆ ಜಾನ್ ಕೆಲ್. ಶಿಲ್. ತಿಳಿಸಿರುತ್ತಾರೆ[೧೦೩].

ಉಜ್ಜಿನಿ ಸ್ಥಳನಾಮ, ಚರಿತ್ರೆ ಮತ್ತು ಸಂಸ್ಕೃತಿ ಬಗ್ಗೆ ಆಧಾರಗಳು ಸಿಗುವುದು ಅತೀ ವಿರಳವೆಂದು ಹೇಳಬಹುದು. ಗುಡೇಕೋಟೆ ಮತ್ತು ಜರಿಮಲೆನಾಯಕ ಅರಸರ ಆಳ್ವಿಕೆಯ ದಾಖಲೆಗಳಲ್ಲಿ ಉಜ್ಜಿನಿಯ ಉಲ್ಲೇಖವಿದೆ. ಕರ್ನಾಟಕ ಗೆಜೆಟಿಯರನ ಉಲ್ಲೇಖದಂತೆ ಪುರಾಣದಲ್ಲಿ ಉಜ್ಜಿನಿಗೆ "ರತ್ನಪುರ" ಎಂಬ ಹೆಸರಿತ್ತು. ಉಜ್ಜಿನಿ ಮೂಲತ: ಜೈನರ ಆಲಯವಾಗಿದ್ದು ಕ್ರಮೇಣ ಜೀನಾಲಯ ಜೀನರ ಉಗಮ ಉಜ್ಜಿನಿ ಎಂದಾಗಿರಬೇಕು ಎಂಬುದು ಉಜ್ಜಿನಿ ರುದ್ರಪ್ಪ ಕನ್ನಡಪ್ರಭ ಪತ್ರಿಕೆಯ ಉಪಸಂಪಾದಕರ ಅಭಿಪ್ರಾಯವಾಗಿದೆ. ಇದುವರೆಗೂ ದೊರೆತ ಶಿಲಾಶಾಸನ ತಾಮ್ರ ಶಾಸನಗಳಲ್ಲಿ ಎಲ್ಲಿಯೂ ಉಜ್ಜಿನಿ ಎಂದು ಉಲ್ಲೇಖವಿಲ್ಲ. ಇಂದಿಗೂ ಉಜ್ಜಿನಿ ಎಂಬ ಹೆಸರು ಬಂದ ಬಗ್ಗೆ ಬಹಳಷ್ಟು ಜಿಜ್ಞಾಸೆಗಳಿವೆ. ಪ್ರಾಚೀನ ಕಾಲದಿಂದಲು ಕರ್ನಾಟಕದಲ್ಲಿ ಉಜ್ಜಯಿನಿ ಪಂಚಪೀಠದ ಉಲ್ಲೇಖವಿಲ್ಲ. ಕರ್ನಾಟಕದಲ್ಲಿ ಉಜ್ಜಯಿನಿ ಎಂಬ ಸ್ಥಳನಾಮಗಳು ಅನೇಕ ಇವೆ. ಪಂಚಪೀಠವಿರುವ ಉಜ್ಜಯಿನಿ ಮಧ್ಯಪ್ರದೇಶದಲ್ಲಿ, ಕರ್ನಾಟಕದಲ್ಲಿರುವ ಈ ಉಜ್ಜಯಿನಿಯಲ್ಲಿ ದೊರೆತ ಶಾಸನಗಳೆಲ್ಲಾ ೧೦ನೇ ಶತಮಾನದ ತರುವಾಯ ಉಲ್ಲೇಖಿತವಾದ ಬಗ್ಗೆ ತಿಳಿದು ಬರುತ್ತದೆ. ಆದ್ದರಿಂದ ಈ ಉಜ್ಜಯಿನಿಯಲ್ಲಿರುವ ಪೀಠ ಶೈವಮತಕ್ಕೆ ಸಂಬಂಧಿಸಿದ್ದು ಎಂಬ ಬಗ್ಗೆ ಶಾಸನಗಳ ಉಲ್ಲೇಖದಿಂದ

ನಿರ್ಧರಿಸಬಹುದಾಗಿದೆ. ಆದರೆ ಕ್ರಿ.ಶ. ೧೬೬೦ರ ಶಾಸನ ಹರಪನ ಹಳ್ಳಿ ತಾಲೂಕು ಕಡಬಗೇರಿ ಈ ಶಾಸನದಲ್ಲಿ ಮಾತ್ರ ಉಜ್ಜಿನಿ ಎಂದು ಪ್ರಸ್ತಾಪವಾಗಿರುವುದನ್ನು ಕಾಣಬಹುದು[೧೦೪].

ಉಜ್ಜಿನಿ ಸದ್ಧರ್ಮ ಸಿಂಹಾಸನದ ಮೂಲ ಪುರುಷ ಶ್ರೀ ಮರುಳಸಿದ್ಧ, ಈ ಪೀಠದ ಉಗಮದ ಕಾಲವನ್ನು ೧೨ ನೇ ಶತಮಾನಕ್ಕಿಂತ ಮುಂಚಿತವಾಗಿಯೇ ಆಗಲಿ ಅಥವಾ ೧೨ ನೇ ಶತಮಾನದಲ್ಲಿಯೇ ಆಗಿರಬಹುದೆಂದು ಕೋಟ್ರಯ್ಯಚಾನಕೋಟಿ ಮಠ ಅವರು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆ ಆಧಾರವಾಗಿ ಶ್ರೀ ಮರುಳಸಿದ್ಧೇಶ್ವರಸ್ವಾಮಿಯ ಗರ್ಭಗುಡಿಯ ಮುಂಭಾಗದ ಕಂಬದ ಮೇಲಿರುವ ಕ್ರಿ.ಶ. ೧೨೬೮ ನೇ ನವೆಂಬರ್ ೬ ಶ್ರೀ ಯಾದವ ರಾಜ ಮಹಾದೇವರಾಯನ ೯ ನೇ ವರ್ಷದ ಆಡಳಿತ ಶಾಸನವು ಕೆಲವು ಭಕ್ತರು ಶ್ರೀ ಸ್ವಾಮಿಯ ಸೇವೆಗಾಗಿ ಭೂಮಿಯನ್ನು ದಾನವಾಗಿ ಕೊಟ್ಟಿರುವಶಾಸನ ಕಂಡುಬರುತ್ತದೆ[೧೦೫]. ಹೀಗೆ ಉಜ್ಜಿನಿಯ ಸ್ಥಳ ಚರಿತ್ರೆಯ ಕುರಿತು ಈ ಮೇಲಿನ ಉಲ್ಲೇಖಿತ ದಾಖಲೆಗಳು ಹಾಗೂ ವಿದ್ವಾಂಸರು ಸಂಶೋಧಿಸಿರುವ ಕೃತಿಗಳಿಂದಲು ಸ್ಥಳೀಯ ಚರಿತ್ರೆ ತಿಳಿಯಲು ಸಹಾಯಕವಾಗಿವೆ.

ಉಜ್ಜಯಿನಿಯು ಮರುಳಸಿದ್ಧೇಶ್ವರ ದೇವಾಲಯವಿರುವ ಪುಣ್ಯ ಕ್ಷೇತ್ರವಾಗಿರುವುದರಿಂದ ಖ್ಯಾತಿ ಪಡೆದಿದೆ. ವೀರಶೈವ ಪಂಚಪೀಠಗಳಲ್ಲಿ ಒಂದಾದ ಇದು ಆಚಾರ್ಯರಾದ ಶ್ರೀ ಮರುಳಾರಾಧ್ಯ ಶಿವಾಚಾರ್ಯರು ನೆಲೆಸಿದ ಕ್ಷೇತ್ರವಾದ ಇದು ಪಂಚಾಚಾರ್ಯರ ಪಂಚಸಿಂಹಾಸನ ಪೀಠಗಳಲ್ಲಿ ಒಂದೆಂದು ಕರೆಯಲಾಗಿದೆ ಸುಪ್ರಭೇಧಾಗಮದಲ್ಲಿ ಪಂಚಾಚಾರ್ಯರು ಶಿವನ ಪಂಚಮುಖಗಳಿಂದ ನಂದಿ, ಭೃಂಗಿ, ವೀರ ವೃಷಭ, ಸ್ಕಂದ ಎಂಬ ಐವರು ಗಣಾಧೀಶ್ವರರು ಐದುಗೋತ್ರ ಪುರುಷರಾಗಿ ಅವತರಿಸಿದರು. ಈ ಪಂಚಾಚಾರ್ಯರು ದಾರುಕ, ರೇಣುಕ, ಶಂಕು ಕರ್ಣ, ದೇನು ಕರ್ಣ ಮತ್ತು ವಿಶ್ವ ಕರ್ಣ ಎಂಬ ಹೆಸರುಗಳಿಂದ ಅವತರಿಸಿದರೆಂದಿದೆ. ಈ ಐವರು ಗೋತ್ರಕಾರರು ಭಾರತದ ವಿವಿಧೆಡೆಗಳಲ್ಲಿ ಐದು ದೊಡ್ಡ ಧಾರ್ಮಿಕ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಏಕೋರಾಮ ಪೀಠ ಹಿಮಾಲಯದ ಕೇದಾರದಲ್ಲಿ, ವಿಶ್ವಾರಾಧ್ಯರ ಪೀಠ ಕಾಶಿಯಲ್ಲಿ, ಮರುಳಾಚಾರ್ಯರ ಪೀಠ ಉಜ್ಜಯಿನಿಯಲ್ಲಿ, ನೋಡಿ ಪಂಡಿತಾಚಾರ್ಯರ ಪೀಠ ಶ್ರೀ ಶೈಲದಲ್ಲಿ ರೇಣುಕಾಚಾರ್ಯರ ಪೀಠ ಬಾಳೆಹೊನ್ನೂರಲ್ಲಿದ್ದು ಅವುಗಳು ಇಂದಿಗೂ ಅಸ್ತಿತ್ವದದಲ್ಲಿವೆ[೧೦೬].

ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯ, ವಿಶ್ವೇಶ್ವರ ಎಂಬ ಪಂಚಾಚಾರ್ಯರ ಶ್ರೀಪತಿ ಪಂಡಿತ, ಮಂಚಣ್ಣ ಪಂಡಿತ, ಮಲ್ಲಿಕಾರ್ಜುನ ಪಂಡಿತ ಎಂಬ ಪಂಡಿತತ್ರಯರ ಚರಿತ್ರೆಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳು ಇನ್ನೂ ಕಗ್ಗಂಟಾಗಿ ಉಳಿದಿವೆ. ಉಜ್ಜಯಿನಿ

ಪೀಠದ ಸಿಂಹಾಸನಾಧೀಶರಾದ ಮರುಳಸಿದ್ಧರಿಗೆ ಸಂಬಂಧಿಸಿದ ಶಾಸನಗಳು ಉಲ್ಲೇಖಿತವಾಗಿದೆ. ೧೧೮೩ ರ ಸಿರಿವಾಳ ಶಾಸನದಲ್ಲಿ ರೇವಣಸಿದ್ಧರ ಉಲ್ಲೇಖವಿದೆ. ಬೆಂಗಳೂರು ಜಿಲ್ಲೆಯ ಅವ್ವೇರಹಳ್ಳಿಯ ರೇವಣಸಿದ್ದೇಶ್ವರ ಬೆಟ್ಟದಲ್ಲಿ ಶ್ರೀ ರೇವಣಸಿದ್ಧರ ಮೂರ್ತಿಯೂ ಶ್ರೀ ಮರುಳಲಿಂಗವೂ ಇವೆಯೆಂದು ಗೊತ್ತಾಗುತ್ತದೆಯಲ್ಲದೆ ಅಲ್ಲಿಯ ಒಂದು ಶಾಸನ (ಕ್ರಿ.ಶ. ೧೧೯೩) ದಲ್ಲಿ ಪವಾಡವನ್ನು ತೋರಿದವನು ಮರುಳಸಿದ್ಧೇಶ್ವರನೆಂದು ಆತನ ಗುರುವು ರೇವಣಸಿದ್ಧೇಶ್ವರನೆಂದೂ ಈ ಶಾಸನದಲ್ಲಿ ಬರುವ ದಾರುಕನ ಕಥೆ ರೇವಣಸಿದ್ಧನ ಅವತಾರ ಹದಿನಾಲ್ಕು ನೂರು ವರುಷಗಳ ಜೀವನಾವಧಿಯ ವಿಷಯಗಳು ವೀರಶೈವ ಪುರಾಣಗಳಲ್ಲಿಯೂ ಎಡೆಪಡೆದಿವೆ[೧೦೭].

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕಿನ ಉಜ್ಜಯಿನಿ ಗ್ರಾಮದಲ್ಲಿ ದೊರೆತ ಹಲವು ಶಾಸನಗಳಲ್ಲಿ ಉಲ್ಲೇಖವಾದ ಅಂಶವನ್ನು ತಿಳಿಯುವುದು ಅಗತ್ಯವಾಗಿದೆ. ಮೊದಲ ಶಾಸನ ಉಜ್ಜಯಿನಿಯ ಮರುಳಸಿದ್ಧ ದೇವಾಲಯದ ಸ್ತಂಭ ಶಾಸನವು ಕ್ರಿ.ಶ. ೧೨೬೮ ರಲ್ಲಿ ರಚಿತವಾಗಿದ್ದು. ಇದು ಯಾದವ ಮಹಾದೇವರಾಯನ ಆಳ್ವಿಕೆಗೆ ಸಂಬಂಧಿಸಿದ ದಾನ ನೀಡಿದ ಶಾಸನವಾಗಿದ್ದು ಉಜ್ಜಯಿನಿಯ ಶ್ರೀ ಮಲ್ಲಿಕಾರ್ಜುನ ದೇವರು ಎಂದು ಉಲ್ಲೇಖಿತವಾಗಿದೆ. ಎರಡನೆ ಶಾಸನವು ಉಜ್ಜಯಿನಿ ಶ್ರೀ ಸದ್ಧರ್ಮ ಸಿಂಹಾಸನದ ಜಗದ್ಗುರು ಸಿದ್ಧಲಿಂಗೇಶ್ವರ ಶಿವಾಚಾರ್ಯರ ಗದ್ದುಗೆಯ ಎದುರಿಗಿನ ಸಭಾಂಗಣದಲ್ಲಿದ್ದ ಶಾಸನ. ಯಾದವ ಮಹಾದೇವನ ಕಾಲಕ್ಕೆ ಸೇರಿದ ಇದು ಕ್ರಿ.ಶ. ೧೨೬೩ ಎಂದು ತಿಳಿದುಬರುತ್ತದೆ. ಶ್ರೀ ಮಲ್ಲಿಕಾರ್ಜುನ ದೇವರ ನಂದಾ ದೀವಿಗೆಗೆ ಸುಂಕವನ್ನು ದಾನ ಬಿಟ್ಟನೆಂದು ಹೇಳಿದೆ. ಉಜ್ಜಯಿನಿ ಶ್ರೀ ಸದ್ಧರ್ಮ ಸಿಂಹಾಸನದ ಮುಂದಿನ ತುಂಡು ಶಾಸನ. ಇದು ಜಗದ್ದಳ ಪಾಂಡ್ಯನ ದಾನ ಶಾಸನವಾಗಿದೆ. ಇದು ೧೨ ನೇ ಶತಮಾನಕ್ಕೆ ಸಂಬಂಧಿಸಿದ್ದು ಮತ್ತೊಂದು ಶಾಸನ ಇದು ಶ್ರೀ ಮರುಳಸಿದ್ಧ ದೇವಾಲಯದ ಪೂರ್ವ ಮುಖಮಂಟಪದ ಗೋಡೆಯಲ್ಲಿರುವ ಶಾಸನ ಕ್ರಿ. ಶ. ೧೫೩೯ ಕಾಲದ ವಿಜಯನಗರ ಅಚ್ಯುತರಾಯ ಅರಸರ ಕಾಲಕ್ಕೆ ಸಂಬಂಧಿಸಿದ ದಾನ ಶಾಸನವಾಗಿದೆ. ಮತ್ತೊಂದು ಶಾಸನವಾದ. ಇದು ಶ್ರೀ ಮರುಳಸಿದ್ಧ ದೇವಾಲಯದ ಪಶ್ಚಿಮ ಮುಖಮಂಟಪದ ಕಟ್ಟೆಯ ಮೇಲಿರುವ ಶಾಸನ ಇದು ಸಹ ವಿಜಯನಗರ ಅರಸ ವೀರಸದಾಶಿವರಾಯನ ಕಾಲಕ್ಕೆ ಸಂಬಂಧಿಸಿದ ಕ್ರಿ.ಶ. ೧೫೬೩ ಕಾಲಕ್ಕೆ ಸೇರಿದ್ದು ಉಜ್ಜಯಿನಿಯ ಮಲ್ಲಿಕಾರ್ಜುನ ದೇವರಿಗೆ ದಾನ ಬಿಟ್ಟ ವಿವರವಿದೆ[೧೦೮].

ಈ ಮೇಲಿನ ಶಾಸನಗಳು ಪಂಚಪೀಠಾಧೀಶ್ವರರಾದ ರೇವಣಾರಾಧ್ಯ, ಮರುಳಾರಾಧ್ಯ ಏಕೋರಾಮಾರಾಧ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯ. ಇವರ ಬಗ್ಗೆ ಸ್ಪಷ್ಟ ಉಲ್ಲೇಖವಿಲ್ಲ ಈ

ಪೀಠಾಧಿಪತಿಗಳಲ್ಲಿ ರೇವಣಸಿದ್ಧರು ಮತ್ತು ಮರುಳಸಿದ್ಧರ ಉಲ್ಲೇಖವಿರುವ ಸಿರಿವಾಳ, ಅವ್ವೇರ ಹಳ್ಳಿ ಮತ್ತು ಲಕ್ಷ್ಮೇಶ್ವರ ಶಾಸನಗಳಲ್ಲಿ ಮಾತ್ರ ಉಲ್ಲೇಖಿಸಲ್ಪಟ್ಟಿದೆ. ರೇವಣಸಿದ್ಧರನ್ನು ಬಸವೇಶ್ವರರ ಸಮಕಾಲೀನ ಅಥವಾ ಬಸವಪೂರ್ವ ಯುಗದವರೆ ಇರಬೇಕೆಂಬ ಬಗ್ಗೆ ಇತಿಹಾಸಕಾರರು ಗುರುತಿಸಿದ್ದು ಹಾಗೂ ರೇವಣಸಿದ್ಧ ಒಬ್ಬ ಚಾರಿತ್ರಿಕ ವ್ಯಕ್ತಿ ಎಂದು ನಿರೂಪಿಸಲ್ಪಟ್ಟಿದ್ದಾರೆ. ಮರುಳಸಿದ್ಧರು ರಚಿಸಿರುವ ಒಂದು ವಚನ ಲಭ್ಯವಾಗಿದ್ದು ಆ ವಚನದಲ್ಲಿ ರೇವಣ್ಣ ಪ್ರಭುವೆ ಎಂದು ಅಂಕಿತನಾಮ ಇರುವುದು ವ್ಯಕ್ತವಾಗುತ್ತದೆ. ಆದ್ದರಿಂದ ರೇವಣಸಿದ್ಧರ ಶಿಷ್ಯ ಮರುಳಸಿದ್ಧ ಎಂದಾದ ಮೇಲೆ ರೇವಣಸಿದ್ಧರ ಕಾಲವು ೧೨ ನೇ ಶತಮಾನವೆಂದು ಚರಿತ್ರೆಕಾರರು ನಿರೂಪಿಸಲ್ಪಟ್ಟಿರುವುದರಿಂದ ಮರುಳಸಿದ್ಧ ಮತ್ತು ರೇವಣಸಿದ್ಧರು ಪಂಚಪೀಠದವರೆಂದು ಕೆಲವು ಪಟ್ಟಭದ್ರಹಿತಾಸಕ್ತಿಗಳ ಪೂರ್ವಗ್ರಹ ಪೀಡಿತವಾದ ಅಲ್ಲದೆ ಈ ಇಬ್ಬರು ಮಹಾಪುರುಷರನ್ನು ಪಂಚಪೀಠದಲ್ಲಿ ಸೇರ್ಪಡೆ ಮಾಡಿರುವುದರಿಂದ ಮರುಳಸಿದ್ಧರು ಬಿಡಿಸಲಾಗದ ಒಗಟಾಗಿದ್ದಾರೆ. ವಾಸ್ತವ ಅಂಶ ಏನೆಂದರೆ ಯಾವುದೇ ಪೀಠದವನಾದರೂ ಮನುಕುಲದ ಉದ್ಧಾರಕನೆಂಬುದು ಸತ್ಯ. ಈ ಬಗೆಯಲ್ಲಿ ಹುಟ್ಟುವ ಆಲೋಚನೆಗಳನ್ನು ಮಟ್ಟಹಾಕಲಿಕ್ಕೆಂದೇ ಅಂಶಿಕವಾದ 'ಕ್ಷೇತ್ರ ಕಾರ್ಯ' ಮಾಹಿತಿಯನ್ನು ದೊಡ್ಡ ಗಂಟಲಿನಲ್ಲಿ ಹೇಳಿ ಬಾಯ್ಮುಚ್ಚಿಸಿದರು.

ಪಂಚಪೀಠ ಪರಂಪರೆಯ ಬಗ್ಗೆ ವೀರಶೈವ ಪುರಾಣಗಳಲ್ಲಿ ಉಲ್ಲೇಖವಾದ ಅಂಶವೊಂದು ಉಜ್ಜಯಿನಿಯ (ಬಳ್ಳಾರಿ ಜಿಲ್ಲೆ ಕೂಡ್ಲಿಗೆ ತಾಲೂಕು) ಪಂಚಪೀಠ ಕ್ಷೇತ್ರಗಳಲ್ಲಿ ಎಂದು ಮರುಳಸಿದ್ಧರು ದಾರುಕವತಾರದ ಮರುಳಾರಾಧ್ಯರು ಪಂಚಪೀಠಗಳಲ್ಲಿ ಒಬ್ಬರೆಂದು ವೀರಶೈವ ಮತದ ಗ್ರಂಥಗಳು ಅಭಿವ್ಯಕ್ತಪಡಿಸುತ್ತವೆ. ಶ್ರೀ ರೇಣುಕಾದಿ ಪಂಚಾಚಾರ್ಯರು ಈ ಪಂಚಪೀಠ ಸ್ಥಾಪಿಸಿದರು. ಈ ಮಹಾತ್ಮರು ಪರಮೇಶ್ವರನ ಅಜ್ಞಾನುಸಾರವಾಗಿ ಪ್ರತಿಯೊಂದು ಯುಗದ ಆದಿಯಲ್ಲಿಯೂ ಶಿವಲಿಂಗ ಮುಖದಿಂದ ದಿವ್ಯ ದೇಹಧಾರಿಗಳಾಗಿ ಅವತರಿಸಿ ಸರ್ವತ್ರ ಶಿವತತ್ವವನ್ನು ಪ್ರಚಾರಪಡಿಸಿದರೆಂಬ ವಿಷಯವನ್ನು ಸಕಲಶಿವಾಗಮಗಳು ಮುಕ್ತ ಕಂಠದಿಂದ ಸಾರುತ್ತಿರುವವು. ಸಿದ್ಧಾಂತಶಿಖಾಮಣಿಯು ಬಹು ಪುರಾತನವಾದುದು. "ರೇಣುಕಾಗಸ್ತ್ಯ ಸಂವಾದ" ವೆಂಬ ಹೆಸರುಂಟು[೧೯೮] ಈ ಗ್ರಂಥಗಳ ಕಾಲನಿರ್ಣಯವನ್ನು ೩ ನೇ ಶತಮಾನಕ್ಕೆ ಒಯ್ಯುವುದರ ಜೊತೆಗೆ ಅದರ ಸೃಷ್ಟಿಗೆ ಕಾರಣರಾದ ಪಂಚಪೀಠಾಧೀಶ್ವರರನ್ನು ಇನ್ನು ಪ್ರಾಚೀನಕ್ಕೆ ಕೊಂಡೊಯ್ಯುವ ಪ್ರಯತ್ನಗಳು ನಡೆದಿವೆ. ಈ ಪಂಚಾಚಾರ್ಯರು ಲಿಂಗದ್ಭೋವರು ಅವತಾರ ಪುರುಷರು ಎಂಬುದಾಗಿ ಬಣ್ಣಿಸಿರುವ ಇವರು ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರ ವಿಷಯದಲ್ಲಿ ವ್ಯಾಸ ಮಹರ್ಷಿಯೇ ಮೊದಲಾದ ಅನೇಕ ಜನ ಪ್ರಾಚೀನ ಗ್ರಂಥಕಾರರು ತಮ್ಮ ತಮ್ಮ ಗ್ರಂಥಗಳಲ್ಲಿ ಉಲ್ಲೇಖಿಸಿರುವ

ವಿಷಯವನ್ನು " ಪ್ರಾಚೀನ ಗ್ರಂಥಗಳಲ್ಲಿ ಪಂಚಾಚಾರ್ಯರ ಪವಿತ್ರ ನಾಮಗಳು" ಎಂಬ ಲೇಖನದಲ್ಲಿ ಪ್ರಮಾಣವಾಗಿ ಪ್ರತಿಪಾದಿಸಲಾಗಿದೆ.

ಭಾರತದ ನಾಗರೀಕತೆಯ ಆರಂಭಕಾಲದಿಂದಲೂ ಭಾರತದಲ್ಲಿ ವೀರಶೈವ ಧರ್ಮವೊಂದು ಪ್ರತ್ಯೇಕ ಧರ್ಮವಾಗಿದ್ದು ವೀರಶೈವ ಧರ್ಮದ ಏಳಿಗೆಗಾಗಿ ಪಂಚಸಿಂಹಾಸನದ ಪೀಠಗಳಾಗಿ ಐದು ಮಠಗಳು ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಅಸ್ತಿತ್ವದಲ್ಲಿದ್ದವು ಎಂಬುದಾಗಿ ಪ್ರಮುಖ ಇತಿಹಾಸಕಾರರ ಅಭಿಮತವಾಗಿದೆ.

ಮಿ. ಇ.ಥರ್ಸ್‌ಟನ್, ಡಾ. ಜೆ. ಎನ್. ಫಾರ್ಕ್ಯೂಹಾರ್, ಡಾ, ಸರ್ ಆರ್.ಜಿ.ಭಂಡಾರಕರ್, ಶಾ.ಬ. ಎಲ್.ಕೆ.ಅನಂತಕೃಷ್ಣಅಯ್ಯರ್ ಇನ್ನೂ ಮೊದಲಾದ ವಿದ್ವಾಂಸರು ಅಭಿಪ್ರಾಯ ಪಡುವಂತೆ ಪ್ರತಿಯುಗದಲ್ಲಿಯೂ ಶಿವನ ಮುಖದಿಂದ ಅವತರಿಸಿದ ಐದುಜನ ಯತಿಗಳಿಂದ ಈ ಮತವು ಸ್ಥಾಪಿಸಲ್ಪಟ್ಟಿತು[೧೧೦]. ಎಂಬುದು ಈ ಮೇಲಿನ ವಿದ್ವಾಂಸರ ಅಭಿಪ್ರಾಯವಾಗಿರುವುದರಿಂದ ವೀರಶೈವ ಮತ ಸ್ಥಾಪಕರು ಈ ಪಂಚ ಪೀಠದ ಆಚಾರ್ಯರು ಎಂಬುದಾಗಿ ಅಭಿಪ್ರಾಯ ಪಡುತ್ತಾರೆ. ಶ್ರೀಮಾನ್ ಕರ್ಲಮಂಗಲಂ ಶ್ರೀ ಕಂಠಯ್ಯನವರು ರೇವಣಸಿದ್ಧರ ಕಾಲದ ವಿಚಾರವಾಗಿ ಹೇಳುವಾಗ ರೇವಣಸಿದ್ಧರು ೧೨ ನೇ ಶತಮಾನದ ಬಸವಣ್ಣನವರ ಸಮಕಾಲೀನರೆಂಬುದಾಗಿ ಅಭಿಪ್ರಾಯ ಪಡುವುದರಿಂದ ರೇವಣಸಿದ್ಧರ ಶಿಷ್ಯ ಮರುಳಸಿದ್ಧರು ಇವರ ಸಮಕಾಲೀನರಾಗಿರಲೇಬೇಕು. ಹೀಗಾಗಿ ರೇವಣಸಿದ್ಧ ಚಾರಿತ್ರಿಕ ವ್ಯಕ್ತಿ ಎಂದು ಚರಿತ್ರೆಕಾರರು ಗುರುತಿಸಲ್ಪಡುವುದರಿಂದ ಮರುಳಸಿದ್ಧರು ಸಹ ಏಕೆ ಐತಿಹಾಸಿಕ ವ್ಯಕ್ತಿಯಾಗ ಬಾರದು. ಎಂಬುದು ಇವರ ಅಭಿಪ್ರಾಯವಾಗಿದೆ. ಹಾಗಾದರೆ ಪಂಚಪೀಠ ಪರಂಪರೆ ಏಕೆ ಹುಟ್ಟಿಕೊಳ್ಳಲು ಕಾರಣವಾಯಿತು ಎಂಬುದಾಗಿ ಸಂದೇಹ ವ್ಯಕ್ತವಾಗುತ್ತದೆ.

ಡಾ.ಎಂ.ಚಿದಾನಂದ ಮೂರ್ತಿಯವರು ವಚನ ಶೋಧ ಈ ಕೃತಿಯಲ್ಲಿ ರೇವಣಸಿದ್ಧರು ಬಸವಯುಗದ ಸಮಕಾಲೀನ ವ್ಯಕ್ತಿ ಎಂಬುದಾಗಿ ಅಭಿಪ್ರಾಯ ಪಡುತ್ತಾರೆ[೧೧೧]. ರೇವಣಸಿದ್ಧ, ಮರುಳಸಿದ್ಧ, ಏಕೋರಾಮಿ ಪಚಿಡಿತರಾಧ್ಯ, ಶ್ರೀ ಶೈಲಮಲ್ಲಿಕಾರ್ಜುನ ಇವರೆಲ್ಲ ಚತುರಾಚಾರ್ಯರು ವಿಶ್ವಾರಾಧ್ಯ ಇತ್ತೀಚಿನ ಸೇರ್ಪಡೆ ಇವರೆ ಪಂಚಪೀಠಾಧಿಪತಿಗಳು ಎಂಬುದಾಗಿ ಡಾ.ಎಂ.ಎಂ.ಕಲಬುರ್ಗಿಯವರು ಅಭಿಪ್ರಾಯಪಡುತ್ತಾರೆ.

ಶ್ರೀ ಶಿವಕುಮಾರ ಶಿವಚಾರ್ಯ ಮಹಾಸ್ವಾಮಿಗಳವರು ಪಂಚಪೀಠದ ಉಗಮದ ವಿಚಾರ ಹಾಗೂ ಉಜ್ಜಯಿನಿಯಲ್ಲಿ ಮರುಳರಾಧ್ಯರ ವಿಚಾರಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿದ್ದಾರೆ. ವೈದಿಕ ಧರ್ಮದಲ್ಲಿ ಬೆಳೆದ ವರ್ಣವಾದದಂತೆ ವೀರಶೈವ ಧರ್ಮದಲ್ಲಿಯೂ ಸಹ ಅಯ್ಯ, ಭಕ್ತ, ಪಟ್ಟ, ಚರ,

ವಿರಕ್ತ ವರ್ಗಗಳ ನಿರ್ಮಾಣ, ಸಮರಸಕ್ಕೆ ಕಾರಣವಾಯಿತು. ಕಾಲಕ್ರಮೇಣ ವಿರಕ್ತವರ್ಗದಲ್ಲಿ ವೈಷಮ್ಯ ಬೆಳೆದು ಐದು ಪಂಗಡಗಳಾದವು ಪಟ್ಟ-ಚರಾಧಿಕಾರಿಗಳಲ್ಲಿಯೂ ಐದು ಪೀಠಗಳು ಬಳಕೆಗೆ ಬಂದವು, ವೀರ, ಸದ್ಧರ್ಮ, ಸೂರ್ಯ, ಜ್ಞಾನ ಮತ್ತು ವೈರಾಗ್ಯ ಎಂಬುದಾಗಿ ಈ ಪೀಠಗಳಿಗೆ ಪ್ರತ್ಯೇಕ ಗುರುಗಳ ಸ್ಥಾನವೇ ಈ ಪಂಚಪೀಠವಾಗಿದೆ. ರೇವಣಸಿದ್ಧ, ಮರುಳಸಿದ್ಧ, ಏಕೋರಾಮ ಪಂಡಿತರಾಧ್ಯಾ, ವಿಶ್ವಾರಾಧ್ಯ ಎಂಬ ಪಂಚಪೀಠ ಕಲ್ಪನೆಯನ್ನು ಹುಟ್ಟು ಹಾಕಿದ್ದಾರೆ.

'ಮರುಳಾರಾಧ್ಯ ವಿಜಯ ಚರಿತ' ಗದ್ಯಾನುವಾದದಲ್ಲಿ ಉಜ್ಜಯಿನಿ ಪೀಠದಲ್ಲಿ ಅನೇಕ ಮರುಳಸಿದ್ಧರೆಂಬವಾದವು ಪ್ರತಿಪಾದಿಸಲ್ಪಟ್ಟಿದೆ. ಮರುಳಸಿದ್ಧರು ಅನೇಕರೆಂಬುದು ನಿಜ. ಆದರೆ ಆ ಅನೇಕ ಮರುಳಸಿದ್ಧರ ಸಂಬಂಧ ಉಜ್ಜಯಿನಿ ಪೀಠಕ್ಕೆ ಇಲ್ಲ. ಇದಕ್ಕೆ ಒಬ್ಬರೇ ಮರುಳಸಿದ್ಧರ ಸಂಬಂಧವಿದೆ ಉಜ್ಜಯಿನಿಯ ಮರುಳಸಿದ್ಧ, ಹೊಲಿಯಮರುಳಸಿದ್ಧ, ಮಾದಾಪುರದ ಮರುಳಸಿದ್ಧ, ಕಪ್ಪೂರು ಮರುಳಸಿದ್ಧ, ಹಾಲುಮತ ಪುರಾಣದ ಮರುಳಸಿದ್ಧ, ಹೀಗೆ ಐದು ಜನ ಮರುಳಸಿದ್ಧರಿರುವುದು. ಸಂಶೋಧನೆಯಿಂದ ದೃಢಪಟ್ಟಿದೆ. ಉಜ್ಜಯಿನಿಯ ಮರುಳಸಿದ್ದನು ೧೨ ನೇ ಶತಮಾನದವರು ಹೂಲಿಯ ಮರುಳಸಿದ್ಧರು ೧೬ನೆಯ ಶತಮಾನದವರು ಮಾದಾಪುರದ ಮರುಳಸಿದ್ಧರು ೧೮-೧೯ ನೇ ಶತಮಾನದವರು. ಕಪ್ಪೂರು ಮರುಳಸಿದ್ಧರು ೧೮-೧೯ ಶತಮಾನದವರು ಹೀಗೆ ಐದುಜನ ಮರುಳಸಿದ್ಧರ ಉಜ್ಜಯಿನಿ ಪೀಠದಲ್ಲಿ ಈ ಮೇಲೆ ತಿಳಿಸಿದ ಮರುಳಸಿದ್ಧರು. ಈ ಪೀಠದಲ್ಲಿ ಇದ್ದುದಾಗಿ ಉಲ್ಲೇಖಿಸುತ್ತಾರೆ. ಉಜ್ಜಯಿನಿಯ ಸದ್ಧರ್ಮ ಪೀಠದ ಸ್ಥಾಪಕ ಮರುಳಸಿದ್ಧರು ಒಬ್ಬರೇ ಆದರೂ ವಿಷಾದದ ಸಂಗತಿಯೊಂದೆಂದರೆ, ಈ ಅನೇಕ ಮರುಳಸಿದ್ಧರ ವಾದವನ್ನೇ ಹಿನ್ನಲೆಯಾಗಿಟ್ಟುಕೊಂಡು 'ಮರುಳಾರಾಧ್ಯ ವಿಜಯ ಚರಿತ'ವು ಉಜ್ಜಯಿನಿ ಪೀಠಕ್ಕೆ ಅನೇಕ ಮರುಳಸಿದ್ಧರ ಸಂಬಂಧವನ್ನು ಕಲ್ಪಿಸಿರುವುದು ಐತಿಹಾಸಿಕ ಸತ್ಯಾಂಶದಿಂದ ದೂರವಾದುದು ಎಂಬುದಾಗಿ ತಿಳಿದುಬರುತ್ತದೆ[೧೨].

ಹೀಗೆ ಮರುಳಸಿದ್ಧರ ವಿಚಾರವಾಗಿ ಉಜ್ಜಯಿನಿಯಲ್ಲಿ ಪಂಚಪೀಠದ ವೀರಶೈವ ಧರ್ಮದ ಸ್ಥಾಪಕರಲ್ಲಿ ಒಬ್ಬರಾದ ಮರುಳರಾಧ್ಯರು ಎಂಬುದಾಗಿ. ಅನೇಕ ವಿವಾದಗಳ ನಡುವೆಯು ಮರುಳಸಿದ್ಧರನ್ನು ಪಂಚಪೀಠದಲ್ಲಿ ಗುರುತಿಸಲ್ಪಟ್ಟಿರುವರು ಇದನ್ನು ಸಂಸ್ಕೃತದ ಆಗಮ ಸಾಹಿತ್ಯಗಳು ಪುಷ್ಟಿಕರಿಸುತ್ತವೆ. ಆದರೆ ಇದು ಚಾರಿತ್ರಿಕವಾಗಿ ನಂಬಲಾರ್ಹವಾದ ವಿಷಯವಲ್ಲ.

೩.೩.೪. ಗುರುರೇವಣಸಿದ್ಧರಿಂದ ಪಡೆದ ಲಿಂಗದೀಕ್ಷೆ :

ಆಲಿ ಆಲಿಯದಲ್ಲಿ ಕರಿಗೋಳಲು ಆಲಿಸುವ ಶ್ರವಣವು ಮೇಲಿಪ್ಪ,

ಆಕಾಶವನಡರಲು, ಉಲುಹು ನಿರ್ಭೂತ ಚಿತ್ತ ಸಮಾಧಾನವೆಯ್ದಲು,

ಕಾಲ ಕರ್ಮಭವಂಗಳಗೆಲುವುದಿದೇನು ಸೋಜಿಗವು

ಹೇಳಾ, ರೇವಣ್ಣ ಪ್ರಭುವೆ ಮರುಳಸಿದ್ಧ.

ಎಂಬ ಅಂಕಿತವಿರುವ ವಚನವೊಂದು ಮರುಳಸಿದ್ಧರಿಂದ ರಚಿತವಾಗಿರುವ ವಚನವೂ ದೊರೆತಿದೆ. ಉಜ್ಜಯಿನಿ ಸದ್ಧರ್ಮ ಸಿಂಹಾಸನದ ಮೂಲ ಪುರುಷ ಶ್ರೀ ಮರುಳಸಿದ್ಧರು ರೇವಣಸಿದ್ಧರ ಅನುಗ್ರಹ ಪಡೆದ ಇವರು ರೇವಣಸಿದ್ಧರನ್ನೇ ತನ್ನ ಗುರುವೆಂದು ಕರೆದಿದ್ದಾರೆ. ಸಿದ್ಧರಾಮಯ್ಯನು 'ಮರುಳಸಿದ್ಧರ ವಚನ ಅರವತ್ತೆಂಟು ಸಾಸಿರ'ವೆಂದು ಈತನ ವಚನ ಸಂಖ್ಯೆಯ ಪ್ರಮಾಣವನ್ನು ಸೂಚಿಸುತ್ತಾನೆ. ರೇವಣಸಿದ್ಧೇಶ್ವರರಿಂದ ದೀಕ್ಷೆ ಪಡೆದ ಈತನು ಗುರುವಿನ ಹೆಸರನ್ನೇ ತನ್ನ ವಚನದ 'ಅಂಕಿತ' ವನ್ನಾಗಿ ಇಟ್ಟುಕೊಂಡಿದ್ದಾನೆ, ಭಕ್ತಿ ಪ್ರಾಧನ್ಯತೆ- ಯನ್ನು ಮನ್ನಿಸಿದ ಮರುಳಸಿದ್ಧೇಶ್ವರರು ಕುಟಿಲಸಿದ್ದಿ, ಜಾತೀಯತೆ ಯಜ್ಞಯಾಗ ಮೊದಲಾದ ಸಾಮಾಜಿಕ ಧಾರ್ಮಿಕ ಕರ್ಮಗಳ ವಿರುದ್ಧ ಹೋರಾಡಿದರು[೧೧೩].

ದೇವಕವಿಯ ಮರುಳಸಿದ್ಧ ಕಾವ್ಯದಲ್ಲಿ ಉಲ್ಲೇಖಿಸಿರುವಂತೆ ಮರುಳಸಿದ್ಧರು ದೇಶಾಂತರ ಸಂಚರಿಸುತ್ತ ಬಂದ ಚಿನ್ಮಯಗಿರಿ (ಚಿತ್ರದುರ್ಗ) ಎಂಬಲ್ಲಿ ರೇವಣಸಿದ್ಧರನ್ನು ಕಂಡ ಎಂಬುದಾಗಿ ಕಾವ್ಯವೊಂದರಲ್ಲಿ ವರ್ಣಿಸುತ್ತಾನೆ.

ತಿರುಗಿ ಚಿನ್ಮಯಗಿರಿಯ ಗುರುರೇವಣಸಿದ್ಧ

ವರಮೂರ್ತಿಯ ಕಂಡು ಹರಷಮಿಗಿಲುಬ್ಬಿಮನ

ವೆರೆಸಿದಂಡ ಪ್ರಣಾಮವಮಾಡಿ ತನುವೆರೆಸಿಕರುಣಾತ್ಮ ಶುದ್ಧನಾಗಿ

ಪುರಹರನೆ ಕಾಲಹರ ಕರ್ಮಹರ ದುರಿತಹರ

ಶರಣಾರ್ತಿ ಗುರುಮೂರ್ತಿಯೆಂದು ಭಯ ಭಕ್ತಿಯಂ

ಮರುಳಸಿದ್ಧೇಶ್ವರನು ಕಿಂಕುರ್ವಾಣದೊಳಿರಲು ಗಿರಿಯ

ಸಂಭ್ರಮವೆಸೆದುದು[೧೧೪] ॥ ೧ ॥ (ನಾಲ್ಕನೆ ಸಂಧಿ)

ದೇವಕವಿ ಕೃತ ಮರುಳಸಿದ್ಧ ಕಾವ್ಯದಲ್ಲಿ ಹೇಳಿರುವಂತೆ ಮರುಳಸಿದ್ಧರು ರೇವಣಸಿದ್ಧರಿಂದ ದೀಕ್ಷೆ ಪಡೆದುದು ಚಿನ್ಮಯಗಿರಿ ಎಂಬುದು ಈಗಿನ ಚಿತ್ರದುರ್ಗದ ಬಳಿ ಇರುವ ಬೆಟ್ಟವೇ ಎಂಬುದು ದಾವಣಗೆರೆ ೧೬೪ ನೆಯ ಶಾಸನದಿಂದ ತಿಳಿದು ಬರುತ್ತದೆ[೧೧೫]. ರೇವಣಸಿದ್ಧರು ಮತ್ತು ಮರುಳಸಿದ್ಧರು ಚಿತ್ರದುರ್ಗದ ಬೆಟ್ಟದ ಮೇಲೆ ಸಂಧಿಸಿದ ಸ್ಥಳ ಸಂಪಿಗೆ ಸಿದ್ಧೇಶ್ವರ ದೇವಾಲಯವೆಂದು ತಿಳಿಯಲ್ಪಡುತ್ತದೆ.

ಸಂಪಿಗೆ ಸಿದ್ಧೇಶ್ವರ ದೇವಾಲಯವನ್ನು ವಿಜಯನಗರದ ಅರಸು ಒಂದನೇ ಬುಕ್ಕರಾಯನ ಸಾಮಂತ ಮಲ್ಲಿನಾಥ ಒಡೆಯರನು ಕಟ್ಟಿಸಿದ್ದು. ಅದರ ಮುಂದಿನ ಮಹಾದ್ವಾರವನ್ನು ಮಲ್ಲಿನಾಥನ ತಮ್ಮ ಸ್ಥಾನಿಕಸೋವಣ್ಣನು ಕಟ್ಟಿಸಿದನೆಂತಲೂ, ಫಲ್ಗುಣೇಶ್ವರ ದೇವಾಲಯವನ್ನು ಹರಿಹರನ ಮಂತ್ರಿ ಸೋವಣ್ಣ ದಂಡಾಧಿಪನು ಕ್ರಿ.ಶ. ೧೨೬೦ ರಲ್ಲಿ ಕಟ್ಟಿಸಿದನೆಂತಲೂ ಹೇಳುತ್ತವೆ.

ಬೌದ್ಧ ಧರ್ಮವು ರಾಜಾಶ್ರಯವನ್ನು ಕಳೆದುಕೊಂಡ ನಂತರ ಶೈವಮತವು ಪುನ: ಪ್ರಾಬಲ್ಯಕ್ಕೆ ಬಂದು ಬೌದ್ಧ ಗೃಹಗಳನ್ನೆಲ್ಲಾ ಶೈವಾಲಯಗಳಾಗಿ ಮಾರ್ಪಾಟುಗೊಳಿಸಲಾಯಿತೆಂದು ದಿ. ಹುಲ್ಲೂರು ಶ್ರೀನಿವಾಸ ಜೋಯಿಸರು ಸಂಶೋಧಿಸಿದ್ದಾರೆ. ಪಿ.ಲಕ್ಷ್ಮಿನರಸು ಅವರು ಬರೆದಿರುವ ಲೇಖನ ವೊಂದರಲ್ಲಿ ಸಂಪಿಗೆ ಸಿದ್ಧೇಶ್ವರ ದೇವಾಲಯವು ಮೂಲದಲ್ಲಿ ಬೌದ್ಧ ಮಂದಿರವಾಗಿದ್ದಿತೆಂದು ಭಾವಿಸಬಹುದು ಎಂದಿದ್ದಾರೆ.

ಸಂಪಿಗೆ ಸಿದ್ದೇಶ್ವರ ದೇವಾಲಯದಲ್ಲಿ ರೇವಣಸಿದ್ಧರದೆಂದು ಹೇಳಲಾದ ಶಿಲಾಮೂರ್ತಿಯನ್ನು ಕುರಿತು ಆ ದೇವಾಲಯದಲ್ಲಿರುವ ಯಾವುದೇ ಶಿಲಾ ಲೇಖನದಲ್ಲೂ ಉಲ್ಲೇಖವಿಲ್ಲ. ಆದರೆ ಕೆಲವು ಸಾಹಿತ್ಯ ಗ್ರಂಥಗಳಲ್ಲಿ ಪ್ರಸ್ತಾಪಿಸಲಾಗಿರುವ ಐತಿಹಾಸಿಕ ಅಂಶಗಳ ಆಧಾರ ಹಿಡಿದು, ರೇವಣಸಿದ್ಧರು ಈ ದೇವಾಲಯದಲ್ಲಿದ್ದರೆಂದು ಅಥವಾ ಇಲ್ಲಿದ್ದ ಏಳು ಜನ ರಸಸಿದ್ಧರಲ್ಲಿ ಅವರೂ ಒಬ್ಬರಾಗಿದ್ದರೆಂದು ವಿದ್ವಾಂಸರು ಅಭಿಪ್ರಾಯ ಪಟ್ಟಿರುವರು.

ಪಂಚಾಚಾರ್ಯ ಗುರುಗಳಾದ ಶ್ರೀ. ರೇವಣಸಿದ್ಧರು ಚಿನ್ಮೂಲಗಿರಿಯಲ್ಲಿದ್ದಾಗ ಶ್ರೀ ಮರುಳಸಿದ್ಧರು ಅವರ ಬಳಿಗೆ ಬಂದು ಉಪದೇಶವನ್ನು ಪಡೆದರು ಎಂದು ಸಿದ್ಧಲಿಂಗಚರಿತ್ರೆಯಲ್ಲಿ ಹೇಳಿದೆ. ಶ್ರೀ ರೇವಣಸಿದ್ಧರು ಬಹುಶ: ಕೆಲವು ಕಾಲ ಈ ಆಶ್ರಮದಲ್ಲಿ ರಸಸಿದ್ಧರೊಂದಿಗೆ ನೆಲೆಸಿದ್ದಿರಬಹುದು ಎಂದು ದಿ॥ ಹುಲ್ಲೂರು ಶ್ರೀನಿವಾಸ ಜೋಯಿಸರು ಬರೆದಿದ್ದಾರೆ ರೇವಣಸಿದ್ಧರು ರಸತಂತ್ರದಲ್ಲಿ ಸಿದ್ಧಿಯನ್ನು ಪಡೆದ ರಸವಾದಿಯಾಗಿದ್ದು, ಚಿಕಿತ್ಸಾ ಗ್ರಂಥಗಳನ್ನು ರಚಿಸಿದವರ ಹೆಸರಿನ ಗುಂಪಿನಲ್ಲಿ ಸಿದ್ಧನಾಥ ಎಂಬುದಾಗಿ ಅವರ ಹೆಸರೂ ಉಕ್ತವಾಗಿದೆಯೆಂದೂ ದಿ.ಜೋಯಿಸರು ಬರೆಯುವರು. ರೇವಣಸಿದ್ಧರು ಐತಿಹಾಸಿಕ ಪುರುಷರೆಂದೂ ಕ್ರಿಶ ಸುಮಾರು ೧೧೫೫ರಲ್ಲಿ ಹುಟ್ಟಿ

ಸುಮಾರು ೧೧೯೦ ರವರೆಗೆ ಬದುಕಿದ್ದರೆಂದೂ ದಿ.ಗೋವಿಂದ ಪೈ ಅವರು ಸಾಧಿಸಿದ್ದಾರೆ ಇವರಲ್ಲದೆ ಶ್ರೀ ಚೆನ್ನಮಲ್ಲಿಕಾರ್ಜುನರೂ, ದಿ. ಜೋಯಿಸರು ಸಹ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ[೧೧೬].

ಪ್ರಸಿದ್ಧ ಶಿವಶರಣ ಅಲ್ಲಮ ಪ್ರಭುವೂ ಸ್ವಲ್ಪಕಾಲ ಇಲ್ಲಿ ನೆಲೆಸಿದ್ಧರೆಂಬ ಪ್ರತೀತಿಯೂ ಇದೆ. ಸಂಪಿಗೆ ಸಿದ್ಧೇಶ್ವರ ದೇವಾಲಯದೊಳಗಿರುವ ಗವಿಗಳು (?) 'ಸಿದ್ಧರ ಗವಿ'ಗಳೆಂದು ಈ ಗುಡಿಯೊಳಗಿನ ಒಂದು ವಿಗ್ರಹ ಅಲ್ಲಮಪ್ರಭುವಿನದೆಂದೂ, ರೇವಣಸಿದ್ದರದೆಂದೂ ಜನರು ಹೇಳುವುದುಂಟು. ಇಷ್ಟು ಬಿಟ್ಟರೆ ಇವರೆಲ್ಲ ಇಲ್ಲಿ (ಗೆಬಂದೆ)ದ್ದರೆಂಬುದಕ್ಕೆ ಬೇರೆಯ ನಿರ್ದಿಷ್ಟ ಆಧಾರ ಇದ್ದಂತೆ ತೋರುವುದಿಲ್ಲ. ಅಂತೂ ರೇವಣಸಿದ್ದರ ಕಾಲದಲ್ಲಿ ಇಲ್ಲಿ ಸಿದ್ಧರ ಗವಿಗಳು 'ಇದ್ದವೆನ್ನುವುದಾದರೆ ಕ್ರಿ.ಶ.ಸು. ೧೨ ನೇ ಶತಮಾನದಷ್ಟು ಕಾಲಕ್ಕಾಗಲೆ ಇಲ್ಲಿ ಸಿದ್ಧರು ಇದ್ದರು ಎಂದಾಗುತ್ತದೆ.

೩.೩.೫ ಮರುಳಸಿದ್ಧರ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು :

ಉಜ್ಜಯಿನಿಯ ಮರುಳಸಿದ್ಧರು ೧೨ ನೇ ಶತಮಾನದ ಬಸವೋತ್ತರ ಕಾಲದ ಶಿವಶರಣರೆಂದು ಗೊತ್ತಾಗುತ್ತದೆ. ಮರುಳಸಿದ್ಧ ಪವಾಡ ಪುರುಷ. ಈತನ ಜೀವನಸಾಧನೆಗಳು ಮತ್ತು ಆತನ ವ್ಯಕ್ತಿತ್ವದ ಸುತ್ತ ಅನೇಕ ಪವಾಡಗಳು ಹೆಣೆದುಕೊಂಡಿವೆ. ಈ ಪವಾಡ ನಡೆದ ಸ್ಥಳಗಳೆ, ಮರುಳಸಿದ್ಧರ ಒಂದೊಂದು ಸ್ಮಾರಕಗಳಾಗಿವೆ. ಈ ಸ್ಮಾರಕಗಳಲ್ಲಿಯೇ ಮರುಳಸಿದ್ಧರ ಹೋರಾಟದ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರದಲ್ಲಿ ಆತನ ಹೋರಾಟದ ಚಿತ್ರಣವನ್ನು ಕಾಣಬಹುದಾಗಿದೆ.

ಮರುಳಸಿದ್ಧರ ಜನ್ಮ ಹೀನಕುಲ ಜಾತಿಗೆ ಸೇರಿದ್ದು ಆತನು ದಲಿತರ ಮನೆಯಲ್ಲಿ ಅಂದರೆ ಮಾದಿಗರ ಜಾತಿಯ ಚಮ್ಮಾರ ವೃತ್ತಿಯ ಕುಲಕ್ಕೆ ಸೇರಿದ ಜಾತಿಯೊಂದರ ಮನೆಯಲ್ಲಿ ಜನಿಸಿದರು. ಮಾದಿಗರ ಕೊಚಿಮಾರ–ಸುಪ್ರಭೆಯರ ಮಗನಾಗಿ ಕಗ್ಗಲ್ಲುಪುರ (ಉಜ್ಜಯಿನಿ ಸಮೀಪ ಕೂಡ್ಲಿಗಿ ತಾಲೂಕು) ದಲ್ಲಿ ಹುಟ್ಟಿದ ಮರುಳಸಿದ್ಧ ಹುಟ್ಟುತ್ತಲೆ ತಾಯಿತಂದೆಯರನ್ನು ಕಳೆದುಕೊಂಡು ಮುಂದೆ ಮರುಳಸಿದ್ಧರು ಕಗ್ಗಲ್ಲುಪುರದ ಒಡೆಯ ಬಾಚನಗೌಡ ಮಲ್ಲಮ್ಮನವರ ಸಾಕುಮಗನಾಗಿ ಪೋಷಿಸಲ್ಪಟ್ಟು ಅವರ ಮನೆಯಲ್ಲಿ ಬೆಳೆಯುತ್ತಾರೆ. ಮರುಳು ಮಾಡುವಷ್ಟು ಸುಂದರವಾಗಿದ್ದ ಮಗುವನ್ನು "ಮರುಳ" ಎಂದೆ ಮುದ್ದಿನಿಂದ ಕರೆದರು ಮರುಳನಿಗೆ ಲಿಂಗಧಾರಣೆ ಮಾಡಿಸಿದರು. ವಿದ್ಯೆ ಬುದ್ಧಿ ಕಲಿಸಿದರು. ತರುಣನಾಗಿ ಬೆಳೆದ ಮರುಳನ ವಿಚಾರಧಾರೆಗಳೆಲ್ಲ ಇತರ ಯುವಕರಿಗಿಂತ ಭಿನ್ನವಾಗಿತ್ತು.

ಈತನು ಬಾಲ್ಯದಲ್ಲಿ ಬಾಚನಗೌಡರ ಮನೆಯಲ್ಲಿ ಕರುಗಾಹಿಕಾರ್ಯ ವ್ಯಕ್ತಿಯಾಗಿ

(ಪಶುಗಳನ್ನು ಕಾಯುತ್ತಿದ್ದ) ಅನೇಕ ಪವಾಡಗಳನ್ನು ನಡೆಸಿದನೆಂದು ದೇವ ಕವಿಕೃತ ಮರುಳಸಿದ್ಧಕಾವ್ಯ, ಗುರುರಾಜಚಾರಿತ್ರ್ಯ, ಆನಗೋಡು ರೇವಣಸಿದ್ಧ ಕವಿಯ ಮರುಳಸಿದ್ಧ ಸಾಂಗತ್ಯ, ಉಜ್ಜಯಿನಿಯ ಗೊಂಗಡಿ ವೀರಭದ್ರಯ್ಯನ ಸಾಂಗತ್ಯ ಇದಕ್ಕೆ ಪುಷ್ಠಿ ನೀಡುತ್ತವೆ. ಪವಾಡಗಳು ಹಿಂದೆ ನಿಜವಿರಬಹುದು ಅಥವಾ ಇಲ್ಲದಿರಬಹುದು. ಅವಕ್ಕೆ ಮಹತ್ವ ಕೊಡುವುದು ಅನುಚಿತ. ಆದರೆ ಪವಾಡಗಳ ಕಲ್ಪನೆಗೆ ಹಿನ್ನಲೆಯಾಗಿ ಮಾನವತೆಯ ಕಲ್ಯಾಣದೃಷ್ಟಿಯೇನಿತ್ತೆಂಬುದನ್ನು ಅವುಗಳಿಗೆ ಧರ್ಮದ ಸಂಬಂಧವು ಹೇಗಿತ್ತೆಂಬುದನ್ನು ವಿವೇಚಿಸುವುದು ಮುಖ್ಯ. ಈ ಕಾರಣದಿಂದ ಮಾನವ್ಯವನ್ನೇ ಹತ್ತಿಕ್ಕುವ ಈ ಪವಾಡಗಳು ಕೆಲವು ಸಂದರ್ಭಗಳಲ್ಲಿ ನಿಜವಿರಬಹುದು. ಇವಕ್ಕಾಗಿ ಮಹತ್ವ ಕೊಡುವುದು ತುಂಬಾ ಅನುಚಿತ.

ಮರುಳಸಿದ್ಧರ ಜೀವನದ ಮೊದಲ ಸಮಾಜ ಸೇವೆಯೇ ಕಾಯಕ ತತ್ವ ಕರುಗಾಹಿ ವೃತ್ತಿ. ಬಸವಣ್ಣನವರ ತತ್ವದಂತೆ ಅಂದರೆ ಲಿಂಗವಂತ ಸಿದ್ಧಾಂತದಲ್ಲಿ ಕಾಯಕವಿಲ್ಲದವನಿಗೆ ಲಿಂಗವಿಲ್ಲ, ಲಿಂಗವಿದ್ದವನು ಕಾಯಕವನ್ನು ಮಾಡಲೇಬೇಕು. ಈ ಬೆಳವಣಿಗೆಯು ಧಾರ್ಮಿಕ ತಳಹದಿಯ ಮೇಲೆ ನಡೆಯಬೇಕೆಂಬುದು ಬಸವಣ್ಣನ ಸಿದ್ದಾಂತವಲ್ಲದೆ, ಇದನ್ನೇ ಮರುಳಸಿದ್ಧರು ಕರುಗಾಯುವ ಕಾಯಕದ ಮೂಲಕ ಸಾಧಿಸಿದ್ದಾರೆ. ಕರುಗಳನ್ನು ಕಾಯಲು ತನ್ನೊಂದಿಗೆ ಬಂದ ಗೆಳೆಯರನ್ನು ನೀರಿಗೆ ತಳ್ಳುವುದು, ಉರಲು ಹಾಕುವುದು, ಈ ಮುಂತಾದ ಪ್ರಕರಣಗಳು ಬರುತ್ತದೆ. ಈಗಲೂ ಜಗಳೂರು ತಾಲೂಕಿನಲ್ಲಿ ಉರುಲಕಟ್ಟೆಯೆಂಬ ಹಳ್ಳಿ ಇದೆ ದನಗಾಹಿ ಬಾಲಕರು ಅವರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮೆರೆಸಿ ಇಳಿಸಿದ ಸ್ಥಳವು ಪಲ್ಲಕ್ಕಿಯಕಟ್ಟೆಯಾಗಿ ಪ್ರಸಿದ್ಧಿಪಡೆದಿತ್ತು. ಈಗ ಅದು ಪಲ್ಲವಗಟ್ಟೆ ಗ್ರಾಮ ಪ್ರಸ್ತುತ ಪಲ್ಲಾಗಟ್ಟೆಯಾಗಿ ಜಗಳೂರು ತಾಲೂಕಿನಲ್ಲಿದೆ. ಮಸಕದಿಂದ ಎಂದರೆ ಸಂತೋಷದಿಂದ ಕಳೆದ ಸ್ಥಳವು ಮಸಕದಕಟ್ಟೆ, ಈಗ ಮಸಣೀಕಟ್ಟೆಯಾಗಿದೆ. (ಇದು ಪಲ್ಲಾವಗಟ್ಟೆಯ ಬಳಿ ಬೇಚಾರಕ ಗ್ರಾಮವಿದೆ).

ಇಂದಿನ ಉಜ್ಜಯಿನಿ ಗ್ರಾಮದ ವಾಯುವ್ಯದಿಕ್ಕಿನಲ್ಲಿ ಒಂದು ಗುಡ್ಡವಿದೆ. ಇದನ್ನು ಈಗಲೂ ಕರುವಿನಕಲ್ಲುಗುಡ್ಡವೆಂದೇ ಕರೆಯುತ್ತಿದ್ದಾರೆ. ಈ ಗುಡ್ಡಕ್ಕೂ ಮರುಳಸಿದ್ಧರ ಕರುಗಾಯುವ ಕಾಯಕಕ್ಕೂ ಇದ್ದ ಮಧುರ ಬಾಂಧವ್ಯದ ಸಂಕೇತವಾಗಿ ಈ ಬೆಟ್ಟದ ಮೇಲೆ ಈಗಲೂ ಮರುಳಸಿದ್ಧರ ದೇವಾಲಯವಿದೆ. ಅಲ್ಲದೆ ಕರುಗಳನ್ನು ಒಂದೆಡೆ ನಿಲ್ಲಿಸುತ್ತಿದ್ದ ಸ್ಥಳವೂ 'ತುರುಮಂದೆ'ಯಂಬ ಹೆಸರಿನಲ್ಲಿ ಗುಡ್ಡದ ಉತ್ತರ ದಿಕ್ಕಿನ ತಪ್ಪಲಲ್ಲಿದೆ. ಈ ಮೇಲೆ ಉಲ್ಲೇಖಿತ ಅರಣ್ಯ ಭಾಗದಲ್ಲಿ ಮರುಳಸಿದ್ಧರು ಪಶುಪಾಲನೆ ಕಾಯಕವೃತ್ತಿಯಲ್ಲಿ ತೊಡಗಿರುವುದನ್ನು ಗಮನಿಸಿದರೆ ದಲಿತರ ಚರಿತ್ರೆಯಲ್ಲಿ ಇಂತಹ ಪಶುಪಾಲನೆ ಪದ ಉಲ್ಲೇಖವು ಮರುಳಸಿದ್ಧರು ಒಬ್ಬ ದಲಿತ ಎಂಬುದನ್ನು

ಸೂಚಿಸುತ್ತದೆ.

ಮರುಳಸಿದ್ಧರು ಕರುಗಾಹಿಯಾಗಿ ಕಾಯಕದಲ್ಲಿಯ ಮೇಲು ಕೀಳುಗಳನ್ನು ಅಲ್ಲಗಳೆದಿದ್ದಾರೆ. ಗೋಸಂಪತ್ತಿನ ಮಹತ್ವವನ್ನು ಎತ್ತಿಹಿಡಿದಿದ್ದಾರೆ. ಅವರ ಪ್ರಕಾರ ಮಾನವ ಜೀವನದಲ್ಲಿ ಮಾನವನ ಪೋಷಣೆಗೆ ಗೋವಿನಷ್ಟು ಉಪಕಾರಿ ಪ್ರಾಣಿ ಮತ್ತೊಂದಿಲ್ಲ. ಇಂದು ದನಕಾಯುವ ಕೆಲಸ ತುಂಬಾ ಹೀನತರವಾದುದಾಗಿ ಪರಿಗಣಿಸಲ್ಪಟ್ಟಿದೆ. ಇದುವೇ ಮಾನವನ ಅಧಃಪತನದ ಅಂಕುರಾರ್ಪಣ. ಇದು ಕಾರಣ ನಾವು ಈಗ ಮೌಢ್ಯದಲ್ಲಿ ಮುಂದುವರಿಯದೆ ಮಹಾತ್ಮರ ಪ್ರತಿಯೊಂದು ನಡವಳಿಕೆಯನ್ನು ಸಹ ವೈಚಾರಿಕವಾಗಿ ಗ್ರಹಿಸುವ ಪದ್ಧತಿಯನ್ನು ಅಂಗೀಕರಿಸಬೇಕಾಗಿದೆ.

ಮಸಣಿಕಟ್ಟೆ ಎಂಬ ಊರಲ್ಲಿ (ಇದು ಜಗಳೂರು ತಾಲೂಕು ಬೇಚಾರಕ ಗ್ರಾಮ) ಮಲ್ಲಗೌಡ ಮರುಳಗೌಡರೆಂಬ ಒಕ್ಕಲಿಗರ ಮನೆಯಲ್ಲಿ ಮರುಳಸಿದ್ಧರು ಸೇವಕನಂತೆ ದುಡಿದು ಒಕ್ಕಲು ತನದಲ್ಲಿ ಖಂಡುಗ ಎಳ್ಳು ಬೆಳೆದು ಬಾಚಿಗೌಡನ ಋಣ ತೀರಿಸಿದ್ದ ಎಂಬ ಎಳ್ಳಿನ ಪವಾಡದಲ್ಲಿ ಶ್ರಮಪಟ್ಟು ದುಡಿಯಬೇಕೆಂಬುದನ್ನು ತೋರ್ಪಡಿಸಿದ್ದಾರೆ. ಮುಂದೆ ಇದೇ ಮಲ್ಲಗೌಡ ಮರುಳಗೌಡರೆಂಬುವರು ಸೌದೆ ತರಲು ಎತ್ತಿನ ಬಂಡಿಯೊಂದಿಗೆ ಕಾಡಿಗೆ ಹೋದರು. ಅಲ್ಲಿ ಎತ್ತುಗಳನ್ನು ಮೇಯಲು ಬಿಟ್ಟು ಸೌದೆ ಸಂಗ್ರಹಿಸುತ್ತಿದ್ದರು. ಸಂಜೆಯಾಯಿತು ಒಂದು ಎತ್ತು ಕಾಣೆಯಾಯಿತು. ಈ ಗೌಡರು ಚಿಂತೆಗಿಡಾದರು. ಹೇಗೋ ಮರುಳಸಿದ್ಧ ಅವರ ನೆರವಿಗೆ ಬಂದು ಒಂಟೆತ್ತಿನ ಸೌದೆ ಬಂಡಿಯನ್ನು ಊರಿನತ್ತ ಎಳೆದು ತಂದರು. ಹೀಗೆ ಮರುಳಸಿದ್ಧರು ಬಸವಣ್ಣನವರ ಕಾಯಕ ತತ್ವವನ್ನು ಮೈಗೂಡಿಸಿಕೊಂಡ ಇವರು ದುಡಿಮೆಗೆ ಒತ್ತು ನೀಡಿದರು. ಎಳ್ಳಿನ ಪವಾಡ, ಸೌದೆ ಬಂಡಿ ಪವಾಡ. ಈ ಎರಡು ಪವಾಡಗಳನ್ನು ತಾತ್ವಿಕವಾಗಿ ಅವಲೋಕಿಸಿದಾಗ ಕಾಯಕದ ಮಹತ್ವವನ್ನು ತಿಳಿಯಬಹುದು.

ಧಾರ್ಮಿಕ ರಂಗವು ಪಟ್ಟಭದ್ರ ಧರ್ಮಾಧಿಕಾರಿಗಳ ಹಿಡಿತಕ್ಕೆಸಿಲುಕಿ ಜನತೆಯನ್ನು ಮೇಲೆತ್ತುವ ತನ್ನ ಹೊಣೆಯನ್ನು ಕೈಬಿಟ್ಟು ಕುಳಿತಿರುವಾಗ ಮರುಳಸಿದ್ಧರ ಜೀವನವು ಮಾನವ ಜೀವನದ ಮಹತ್ವದ ಅರಿವನ್ನುಂಟು ಮಾಡಿಕೊಡುತ್ತದೆ. ಇವರ ಜೀನವದಲ್ಲಿ ಪವಾಡಗಳಿಗಿಂತಲೂ ಲೋಕ ಸೇವಾ ಚಟುವಟಿಕೆಗಳು ಹೆಚ್ಚಾಗಿ ಕಂಡುಬರುತ್ತವೆ. ದಯೆಯನ್ನೇ ಧರ್ಮದ ಮೂಲವೆಂದು ತಿಳಿದವರು, ಪ್ರತಿ ಜೀವಿಗಾಗಿಯೂ ಮರುಗಿದವರು. ಮರುಗುವುದೇ ಧರ್ಮವೆಂದು ಸಾರಿದವರು. ಇಂತಹದೊಂದು ಘಟನೆ ಮರುಳಸಿದ್ಧರ ಜೀವನದಲ್ಲಿ ನಡೆಯಿತು. ಕಗ್ಗಲ್ಲುಪುರ ಪ್ರಾಂತದಲ್ಲಿ ಬರಗಾಲ ಬರುತ್ತದೆ. ಈಗಲೂ ಜನಸಾಮಾನ್ಯರು ಇದೆಲ್ಲವನ್ನೂ ದೈವೀಕೋಪವೆಂದೇ ತಿಳಿಯುತ್ತಿರುವುದು ನಮ್ಮೆಲ್ಲರ ಅನುಭವಕ್ಕೆ ಬಂದ ಸಂಗತಿ. ಇಂತಹ ಪ್ರಸಂಗವೊಂದು ಆತನ

ಜೀವನದಲ್ಲಿ ಎದುರಾಗುತ್ತದೆ. ಅದುವೇ ದೇವರ ತೃಪ್ತಿಗಾಗಿ ನರಬಲಿ, ಪ್ರಾಣಿಬಲಿ ಕೊಡುವುದು, ಸಕಲ ಜೀವರಾಶಿಗಳಿಗೂ ದೇವರೇ ಸೃಷ್ಟಿಕರ್ತನಾಗಿರುವಾಗ ದೇವರಿಗೆ ಹಸಿವು ತೃಪ್ತಿಗಳುಂಟೇ? ಯಾವಾತನು ನಿತ್ಯತೃಪ್ತನೋ ಆತನೇ ದೇವರು. ಆತನಿಗೆ ಕೊರತೆ ಯಾತರದು? ಈ ಪೂಜಾರಿ ಪುರೋಹಿತರು ದೇವರಿಗೇ ಕೊರತೆಯನ್ನು ಕಲ್ಪಿಸಿ ನಿವಾರಣೆಗಾಗಿ ಕಲ್ಪಿತ ದೇವರುಗಳ ಮುಂದೆ ನರಬಲಿ, ಪ್ರಾಣಿಬಲಿಗಳನ್ನು ಕೊಡುತ್ತಾರೆ. ಇದು ಮರುಳಸಿದ್ಧರಿಗೆ ಅಸಹನೀಯವಾಗುತ್ತದೆ. ಅಂದು ಪಟ್ಟಾಭದ್ರ ಹಿತಾಸಕ್ತಿಗಳು ಮತ್ತು ಧರ್ಮಾಧಿಕಾರಿಗಳು ಎಲ್ಲಾ ಅನರ್ಥಗಳಿಗೂ ದೈವ ವಿಕೋಪವನ್ನು ಸೂಚಿಸುತ್ತಾ, ಜನರನ್ನು ತಮ್ಮ ಸ್ವಾರ್ಥಕ್ಕೆ ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಈ ಕಾರಣದಿಂದಲೇ ಅಂದು ಸಂಭವಿಸಿದ ಬರಗಾಲಕ್ಕೆ ದೈವ ವಿಕೋಪವೇ ಕಾರಣವೆಂದು ಜನರನ್ನು ಹುರಿದುಂಬಿಸಿ ಮಾರಿ ಹಬ್ಬ ಮಾಡಲು ಅಣಿಗೊಳಿಸುತ್ತಾರೆ. ಇಂತಹ ಸಂದರ್ಭದಲ್ಲಿ ಮರುಳಸಿದ್ಧರು ಧಾರ್ಮಿಕ ಮೂಢನಂಬಿಕೆ ಕಂದಾಚಾರಗಳ ವಿರುದ್ಧ., ಪ್ರಾಣಿ ಬಲಿಯ ವಿರುದ್ಧ ಹೊರಾಡುತ್ತಾರೆ, ಏಕಾಂಗಿಯಾಗಿ ಧರ್ಮಾಧಿಕಾರಿಗಳ ದೌರ್ಜನ್ಯದ ವಿರುದ್ಧ ಸೆಡ್ಡು ಹೊಡೆದು ಬಲಿಗೆಸಿದ್ಧವಾಗಿದ್ದ ಜೀವರಾಶಿಗಳನ್ನೆಲ್ಲಾ ಬಿಡುಗಡೆ ಮಾಡುತ್ತಾರೆ. ಪ್ರಕೃತಿಕೋಪದ ಮೇಲೆ ದೈವ ಕೋಪವೆಂದು ಆರೋಪ ಮಾಡುವುದು, ಪ್ರಾಣಿಗಳನ್ನು ನರರನ್ನು ಹಿಂಸಿಸಿ ದೇವತೆಗಳ ಪ್ರಸನ್ನತೆ ಪಡೆಯುತ್ತೇವೆಂಬುದು ಇವೆಲ್ಲಾ ಧರ್ಮದ ಹೆಸರಿನ ಮೇಲೆ ಸಮಾಜದ ಹಿರಿಯರು ಜನರನ್ನು, ಜನರ ಬದುಕನ್ನು ತಮ್ಮ ಸ್ವಾರ್ಥಕ್ಕಾಗಿ ದುರುಪಯೋಗ ಮಾಡಿಕೊಳ್ಳುವುದೆಂದರೆ, ಧರ್ಮ ದೇವರುಗಳ ಕುತ್ತಿಗೆಗೇ ಕೈಹಾಕಿದಂತೆಯೇ ಸರಿ. ಧರ್ಮವು ನಷ್ಟವಾಗಿರುವುದು ಜನಸಾಮಾನ್ಯರಿಂದಲ್ಲ; ಹಿರಿಯರೆಂದೆನಿಸಿಕೊಡಿರುವ ಧರ್ಮಾಧಿಕಾರಿಗಳಿಂದ, ಪೂಜಾರಿ ಪುರೋಹಿತರಿಂದ, ಎಂದು ಜ್ಞಾನ ಉದಯಿಸುತ್ತದೆ. ಈ ಪ್ರತಿಫಲವೇ ಸ್ವಗ್ರಾಮದಿಂದ ಮರುಳಸಿದ್ಧರು ಬಿಡುಗಡೆ ಹೊಂದಿ ಇಂತಹ ಅನಾಚಾರಗಳ ವಿರುದ್ಧ ಪ್ರತಿಭಟಿಸುವುದಾಗಿ ಹೊರನಡೆದು ನಾಡಿನಾದ್ಯಂತ ಸಂಚಾರ ಕೈಗೊಳ್ಳುತ್ತಾರೆ.

ಮರುಳಸಿದ್ಧರು ಬೇತೂರು ಗ್ರಾಮದಲ್ಲಿ ಬ್ರಾಹ್ಮಣರ ಯಜ್ಞಯಾಗದ ಆಚರಣೆಯ ವಿರುದ್ಧ ಪ್ರತಿಭಟಿಸಿ ನಿಲ್ಲುವುದು, ಅವರ ಜೀವನದಲ್ಲಿ ಮತ್ತೊಂದು ಪ್ರಸಂಗ ನಡೆದಿದೆ. ಬೇತೂರು ಎಂಬ ಎರಡು ಹಳ್ಳಿಗಳು ದಾವಣಗೆರೆ ತಾಲೂಕಿಗೆ ಸೇರಿವೆ. ಕುರುಡಿಬೇತೂರು ಅಥವಾ ಹೆಮ್ಮನ ಬೇತೂರು ಈ ಘಟನೆಗೆ ಪ್ರಮುಖ ಸಾಕ್ಷಿಯಾಗಿದೆ. ಕ್ರಿ.ಶ. ೧೧-೧೨,೧೩ ನೇ ಶತಮಾನಗಳಲ್ಲಿ ಈ ಬೇತೂರು ಒಂದು ಅಗ್ರಹಾರವಾಗಿತ್ತು. ಎಂಬುದಾಗಿ ದಿ.ಹುಲ್ಲೂರುಶ್ರೀನಿವಾಸಜೋಯಿಸರ ಅಭಿಮಾತ[೧೧೭] ನೊಳಂಬವಾಡಿಯ ಪಾಂಡ್ಯರಸರ ಪ್ರಾಂತ್ಯಕ್ಕೆ ಒಳಪಟ್ಟ ಬೇತೂರು ಬ್ರಾಹ್ಮಣರ ಅಗ್ರಹಾರ,

ಬ್ರಾಹ್ಮಣರಲ್ಲದವರಿಗೆ ಇಲ್ಲಿ ಪ್ರವೇಶವಿಲ್ಲ. ಇಲ್ಲಿ ಯಜ್ಞಯಾಗಾದಿಗಳು ನಡೆಯುತ್ತಲಿರುತ್ತವೆ. ಯಜ್ಞ-ಯಾಗಾದಿಗಳ ನೆಪದಲ್ಲಿ ಹಾಲು, ತುಪ್ಪ, ಧನ, ಧಾನ್ಯ, ವಸ್ತ್ರ ಇವೆಲ್ಲವೂ ಅಗ್ನಿಗಾಹುತಿ ಆಗುತ್ತಿರುವುದನ್ನು ಕಂಡು ಮರುಗುತ್ತಾನೆ. ಋತ್ವಿಜರೊಂದಿಗೆ ವಾದ ವಿವಾದದಲ್ಲಿ ತೊಡಗುತ್ತಾರೆ. ದೇವತೆಗಳಿಗೆ ಹಸಿವು ತೃಷೆಗಳುಂಟೇ? ಅಗ್ನಿಯಲ್ಲಿ ಬೆಂದು ಬೂದಿಯಾದ ಮೇಲೆ ದೇವತೆಗಳಿಗೆ ಹೋಗಿ ಮುಟ್ಟುವ ವಸ್ತುವಾವುದು? ಹೊಗೆ ಹೋಗುತ್ತದೆ. ಆ ಹೊಗೆಗೆ ದೇವತೆಗಿಳಿರುವ ಸ್ಥಳಗೊತ್ತುಂಟೇ? ಇದು ಎಷ್ಟು ಮೌಢ್ಯ ? ಹೊಗೆ ಹೋಗುತ್ತದೆ. ಇದನ್ನೇ ಹಸಿವೆಯಿಂದ ಕಂಗಾಲಾದವರಿಗೆ ಇಟ್ಟು ಸಂತೃಪ್ತಿ ಪಡಿಸಿದರೆ ದೇವತೆಗಳು ಸಂತೃಪ್ತರಾಗುವುದಿಲ್ಲವೆ? ಭಗವದ್ಗೀತೆಯು ಹೇಳುತ್ತದೆ. ಎಲ್ಲರ ಹೃದಯದಲ್ಲೂ ದೇವರಿದ್ದಾನೆಂದು, ಜನ ತೃಪ್ತಿಯೋ ಜನಾರ್ಧನ ತೃಪ್ತಿಯೆಂದು, ನೀವು ಎಲ್ಲರಿಗೂ ಹಿರಿಯರಾಗಿದ್ದು ಎಲ್ಲವನ್ನು ಬಲ್ಲವರಾಗಿದ್ದು. ಇದನ್ನೇಕೆ ತಿಳಿಯದಾದಿರಿ? ಎಂದು ಪ್ರಶ್ನಿಸುತ್ತಾನೆ. ಆ ಋತ್ವಿಜರು (ಬ್ರಾಹ್ಮಣರು) ಶೂದ್ರರನ್ನು ಕರೆದು ಈತನ ಕೈಕಾಲು ಕಟ್ಟಿ ಅಣಜಿ (ದಾವಣಗೆರೆ ತಾಲೂಕು) ಕೆರೆಗೆ ಹಾಕಿ ಬನ್ನಿ ಎಂದು ಹೇಳುತ್ತಾರೆ. ಶೂದ್ರರು ಕೈ ಕಾಲು ಕಟ್ಟಿ ಎತ್ತಿಕೊಂಡು ಹೋಗಿ ಅಣಜಿ ಕೆರೆಯಲ್ಲಿ ಹಾಕುತ್ತಾರೆ. ಜಲವಿದ್ಯೆ ಬಲ್ಲವರಾದ ಮರುಳಸಿದ್ಧರು ಹೇಗೋ ತೇಲಿಕೊಂಡು ದಡ ಸೇರುತ್ತಾರೆ. ಕೆರೆಯ ನೀರಿನಲ್ಲಿ ನೆನೆದಿದ್ದರಿಂದ ಶೀತ ಬಾಧೆಗೊಳಗಾಗಿದ್ದ ಮರುಳಸಿದ್ಧರಿಗೆ ಅಲ್ಲಿದ್ದವರು ಹೊದಿಯಲು ಗೊಂಗಡಿ (ಕಂಬಳಿ) ಕೊಡುತ್ತಾರೆ. ಆ ಗೊಂಗಡಿಯನ್ನು ಹೊದ್ದು ಕೊಂಡ ಸ್ಥಳದಲ್ಲಿಯೋ ಈಗ ಅಣಜಿಕೆರೆಯ ದಡದಲ್ಲಿ ಗೊಂಗಡಿಸಿದ್ದೇಶ್ವರ ದೇವಾಲಯ ಎಂಬ ಸ್ಮಾರಕವಿದೆ.

ಅಣಜಿ ಕೆರೆಯಿಂದೆದ್ದು ಬಂದ ಮರುಳಸಿದ್ಧ ಪುನ: ಬೇತೂರು ಯಜ್ಞ ಶಾಲೆಯನ್ನು ಪ್ರವೇಶಿಸಿ ಸಮಾಜದಲ್ಲಿ ಜಾತಿಯಿಂದ ಹಿರಿಯರೆನಿಸಿಕೊಂಡಿದ್ದ ಬ್ರಾಹ್ಮಣರನ್ನು ಪ್ರತಿಭಟಿಸಬೇಕಾಗಿ ಬಂದಿತು. ಏಕಾಂಗಿಯಾಗಿ ಎದುರಿಸಲು ಸಾಧ್ಯವೇ? ಅದಕ್ಕಾಗಿ ಜನತೆಯನ್ನು ಅಣಿಗೊಳಿಸುತ್ತಾರೆ. ಕುಲ ಹದಿನೆಂಟು ಜಾತಿಯ ಜನಸಮೂಹದೊಂದಿಗೆ ಯಜ್ಞ ಶಾಲೆಯನ್ನು ಪ್ರವೇಶಿಸಿ ಪ್ರತಿಭಟಿಸಿ ಸತ್ಯಾಗ್ರಹವನ್ನೇ ಹೂಡುತ್ತಾರೆ. ಕುಲಹದಿನೆಂಟು ಜಾತಿಯರೊಂದಿಗೆ ಕೂಡಿಕೊಂಡು ಪ್ರತಿಭಟಿಸಿದರೆಂದು ಬ್ರಾಹ್ಮಣರು ಕೋಪೋದ್ರಿಕ್ತರಾಗಿ ಮರುಳಸಿದ್ಧರನ್ನು ಬಂಧಿಸಿ ಕುರುಡಿ ಗ್ರಾಮ (ದಾವಣಗೆರೆ ತಾಲೂಕು ಬೇತೂರು ಸಮೀಪವಿದೆ)ದಲ್ಲಿ ಒಂದು ಹಗೇವಿಗೆ ಹಾಕಿ ಸುಣ್ಣ ಸುರಿದು ನೀರು ಹೋಯ್ದಿದರು ಮರುಳಸಿದ್ಧ ಸಾಯಲೆಂದು. ಆದರೆ ಆ ಹೊಲೆಗೇರೀಯ ಹೊಲೆಯರು ಹಗೇವಿನಿಂದ ಅವರನ್ನು ಮೇಲಕ್ಕೆತ್ತಿ ಅವರ ನೆತ್ತಿಗೆ ಎಣ್ಣೆಯನ್ನು ಸುರಿಯುತ್ತಾರೆ. ಈಗಲೂ ಕುರಡಿ ಗ್ರಾಮದ ಸಮೀಪ ಹಗೇವಿನಲ್ಲಿ ಸಿದ್ಧೇಶ್ವರನ ವಿಗ್ರಹವಿದೆ. ಹೀಗೆ ದಲಿತರಿಂದ ಮರುಳಸಿದ್ಧರ

ರಕ್ಷಣೆಯಾಗುತ್ತದೆ. ಅನಂತರ ಮರುಳಸಿದ್ಧರು ಪುನ: ಯಜ್ಞ ಶಾಲೆಯಲ್ಲಿ ಪ್ರತಿಭಟನೆ ಆರಂಭಿಸುತ್ತಾರೆ.ಕೊನೆಗೆ ಬ್ರಾಹ್ಮಣರೂ, ನೊಣಬಚಕ್ರೇಶ್ವರನಾದ ವಿಜಯಪಾಂಡ್ಯ (ಉಚ್ಚಂಗಿ ಪಾಂಡ್ಯರಸ) ನೊಳಂಬವಾಡಿ ರಾಜ್ಯ ಎಂಬುದು ೧೨ ನೇ ಶತಮಾನದಲ್ಲಿ (ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಶಿವಮೊಗ್ಗ ಜಿಲ್ಲೆಯನ್ನೊಳಗೊಂಡ ಭಾಗವಾಗಿದೆ) ಎಂಬುದಾಗಿ ದಿ. ಹುಲ್ಲೂರು ಶ್ರೀನಿವಾಸ ಜೋಯಿಸರು ಅಭಿಪ್ರಾಯಪಡುತ್ತಾರೆ. ಆನಗೊಡು, ಮುಚ್ಚನೂರು, ಹುಳುಪನಕಟ್ಟೆಗಳಲ್ಲಿ ಮರುಳಸಿದ್ಧರ ಪವಾಡ ಮತ್ತು ಸಾಧನೆಗಳನ್ನು ಹಿಂದೆಯೇ ಗಮನಿಸಿದಂತೆ, ಜನಪರ ನಿಲುವುಗಳನ್ನು ತಾಳಿದ್ದಾನೆ. ಅನೇಕ ವೈರುಧ್ಯಗಳನ್ನು ಎದುರಿಸಿದ್ದಾನೆ.

ಒಟ್ಟಿನಲ್ಲಿ ರಾಜಕೀಯ ಮತ್ತು ಧಾರ್ಮಿಕ ಪ್ರಭುತ್ವಗಳು ಯಾವಾಗಲೂ ಜನರ ಬದುಕಿಗೆ ನೆರವಾಗಿಲ್ಲವೆಂಬುದಕ್ಕೆ ಈ ಪ್ರಕರಣಗಳೇ ಸಾಕ್ಷಿ. ಒಂದೆಡೆ ಧಾರ್ಮಿಕ ಪ್ರಭುತ್ವ; ಮತ್ತೊಂದೆಡೆ ರಾಜಕೀಯ ಪ್ರಭುತ್ವ ಎರಡೂ ಒಟ್ಟಾಗಿ ಜನತೆಯನ್ನು ಶೋಷಿಸುತ್ತಿರುವಾಗ ಈ ಎರಡು ಪ್ರಭುತ್ವಗಳ ವಿರುದ್ಧ ಹೋರಾಡುವುದೆಂದರೆ ಸಾಮಾನ್ಯದ ಮಾತಲ್ಲ, ಮರುಳಸಿದ್ಧರ ಹೋರಾಟದ ಉದ್ದೇಶವಾದರೂ ಪ್ರತಿಯೊಬ್ಬರೂ ಸಮಾನ, ಒಟ್ಟಿನಲ್ಲಿ ಜಾತಿಮತಗಳ ವಿರುದ್ಧವಾಗಿ ಮಾನವತೆಯ ಸಮಾನತೆಗಾಗಿ ದೇವರು ಮತ್ತು ಧರ್ಮಗಳ ಸಾರ್ವತ್ರಿಕ ಬಳಕೆಗಾಗಿ ಮರುಳಸಿದ್ಧರು ನಡೆಸಿದ ಈ ಹೋರಾಟವು ಮಾನವ ಜನಾಂಗದ ಇತಿಹಾಸದಲ್ಲಿಯೇ ಅಪ್ರತಿಮವಾದುದಾಗಿದೆ. ಶೂದ್ರ ಹೋರಾಟಗಾರನೊಬ್ಬನನ್ನು ನಾಶ ಮಾಡಲು ಶೂದ್ರರನ್ನೇ ಬಳಸಿಕೊಂಡ ಪಟ್ಟಭದ್ರರು ಮುಳ್ಳಿನಿಂದಲೇ ಮುಳ್ಳನ್ನು ತೆಗೆದಿದ್ದು ವಿಪರ್ಯಾಸ.

ಮರುಳಸಿದ್ಧರು ಘನಪಂಡಿತನಾಗಿದ್ದನೆಂಬುದಕ್ಕೆ ಸಾಕ್ಷಿಯಾಗಿ ಮರುಳಸಿದ್ಧರು ಸಂಚರಿಸಿದ ಒಂದು ಕುರುಹುವಾಗಿ ಬನ್ನಿಕೋಡು ಗ್ರಾಮ (ಹರಿಹರ ತಾಲೂಕು) ವು ಆಗ್ಗೆ (ಕ್ರಿ. ಶ. ೧೧೬೫) ಒಂದು ವಿದ್ಯಾ ಕೇಂದ್ರವಾಗಿತ್ತು. ಹರಿಹರ ತಾಲೂಕಿನಲ್ಲಿ ಒಂದು ಬನ್ನಿಕೋಡು, ಒಟ್ಟು ಎರಡು ಬನ್ನಿಕೋಡುಗಳಿವೆ. ಇವು ವಿದ್ಯಾಕೇಂದ್ರಗಳಾಗಿದ್ದಕ್ಕೆ ಯಾವ ವಿವರಗಳು ಇಲ್ಲ.[೧೧೮]

ಮರುಳಸಿದ್ಧರು ಅಸಗೋಡಿಗೆ ಹೋಗಿ ಸಲೆನಿಂದು ವಸುಮತಿಗೆ ಹೆಸರು ಪಡೆದನು ಜಗಳೂರು ತಾಲೂಕಿನಲ್ಲಿರುವ (ಅಸಗೋಡು ಈಗ ಒಂದು ಹಳ್ಳಿಯಾಗಿದೆ. ಆದರೆ ಮರುಳಸಿದ್ಧರ ಕಾಲದಲ್ಲಿ ವಿದ್ಯೆಯ ಮತ್ತು ಧರ್ಮದ ಕೇಂದ್ರವಾಗಿ ಸುಪ್ರಸಿದ್ಧ ಪುರವಾಗಿತ್ತೆಂಬುದಕ್ಕೆ ಸಾಕಷ್ಟು ನಿದರ್ಶನಗಳು ದೊರೆಯುತ್ತವೆ. ಈ ಊರಿನ ಸ್ವಯಂಭು ಕಲಿದೇವ ಸ್ವಾಮಿಯ ದೇವಾಲಯದಲ್ಲಿ ಕಲ್ಯಾಣ ಚಾಲುಕ್ಯರ ಆರಂಭ ಕಾಲದಿಂದ ೫ ಶಿಲಾಶಾಸನಗಳಿವೆ. ಶಕ ೬೩೬ ನೆಯ ವರ್ಷದ ಶಿಲಾ ಶಾಸನದಲ್ಲಿ "ಇದು ಕಾಳಾಮುಖಸ್ಥಾನಂ ನೈಷ್ಠಿಕ ವೇದಿಕರ್ತರ ಮಠಂ" ಎಂದಿದೆ. ಈ ಅಸಗೋಡು

ಗ್ರಾಮವು ಪ್ರಾಚೀನ ಕಾಲದಿಂದಲೂ ರಾಜಧಾನಿ ನಗರವಾದ ಉಚ್ಚಂಗಿ ದುರ್ಗದಿಂದ ೧೫ ಮೈಲಿಯಳತೆಯಲ್ಲಿದೆ. ಅಸಗೋಡುಪುರವು ಒಂದು ವಿದ್ಯಾಕೇಂದ್ರವಾಗಿತ್ತು. ಆದ್ದರಿಂದಲೇ ರಾಜಕುಮಾರ ಚೋರಯ್ಯದೇವನೂ, ನಾಗತಿಯರಸನೂ ತಪೋಧನರ ಮತ್ತು ವಿದ್ಯಾರ್ಥಿಗಳ ಆಹಾರದಾನಕ್ಕೆ ಮತ್ತಿಕಟ್ಟ ಎಂಬ ಗ್ರಾಮವನ್ನೇ ದಾನಮಾಡಿದರು. ಈಚೆಗೆ ಶ್ರೀ ಮರುಳಸಿದ್ಧರು ಈ ಸ್ವಯಂಭು ದೇವಾಲಯದಲ್ಲಿದ್ದ ಮಠಕ್ಕೆ ಸ್ಥಾನಪತಿಯಾಗಿದ್ದು ಅಸಗಗೋಡಿನ ಕೀರ್ತಿಯನ್ನು ಹೆಚ್ಚಿಸಿದನು. ಅಲ್ಲದೆ ಕೀರ್ತಿವೆತ್ತ ಮಠದಸ್ಥಾನಪತಿ (Principal) ಯಾದ್ದರಿಂದಲೇ ಶ್ರೀ ಮರುಳಸಿದ್ಧರ ಕೀರ್ತಿಯು ವಸುಮತಿಯಲ್ಲಿ ಹರಡಿತು[೧೯೯] ಎಂಬುದಾಗಿ ದಿ. ಹುಲ್ಲೂರು ಶ್ರೀನಿವಾಸ ಜೋಯಿಸರು ಅಭಿಪ್ರಾಯ ಪಟ್ಟಿರುವರು.

ಅಸಗೋಡಿನ ಸ್ವಯಂಭು ಕಲಿದೇವ ಎಂಬ ಹೆಸರಿಗೆ ಬದಲಾಗಿ ಶಂಭುಸಿದ್ಧೇಶ್ವರ ಎಂಬ ಹೆಸರು ಪ್ರತೀತಿಯಾಗಿರುವುದನ್ನು ಪರಿಗಣಿಸಿದರೆ, ಮರುಳಸಿದ್ಧರ ಪ್ರಭಾವವು ಈ ದೇವಾಲಯದ ಮೇಲೆ ಬೀರಿದೆ ಎಂಬುದರಲ್ಲಿ ಸಂದೇಹವಿಲ್ಲ. ಘನಪಂಡಿತನಾದ ಮರುಳಸಿದ್ಧರು ನೈಷ್ಠಿಕ ಬ್ರಹ್ಮಚಾರಿಗಳ ಮಠಕ್ಕೆ ಬಹುಶ: ಸ್ಥಾನಪತಿಯಾಗಿದ್ದು ಮಠವನ್ನೂ ಸುವ್ಯವಸ್ಥಿತ ಮಾಡಿರಬೇಕೆಂದು ಭಾಸವಾಗುತ್ತದೆ. ಶೈವರಾದ ಕಾಳಾಮುಖರು ಮರುಳಸಿದ್ಧರ ಅನುಯಾಯಿಗಳಾದರು. ಹೀಗಾಗಿ ಮರುಳಸಿದ್ಧರು ಒಬ್ಬ ಜ್ಞಾನ ಪಂಡಿತರೆಂಬುದಕ್ಕೆ ಈ ಮೇಲಿನ ಅಂಶಗಳು ಇನ್ನಷ್ಟು ಪುಷ್ಠಿ ನೀಡುತ್ತವೆ.

ಮರುಳಸಿದ್ಧರು ಮುಂದೆ ದ್ವಾರಸಮುದ್ರದ ಕಡೆ ಪ್ರಯಾಣಿಸುತ್ತಾರೆ ಹೊಯ್ಸಳ ರಾಜ ಕೇಂದ್ರಿತ ಸ್ಥಳವಾದ ದ್ವಾರಸಮುದ್ರದಲ್ಲಿ ಆಗ ಬಲ್ಲಾಳರಾಯ ನೆಂಬುವನು ಆಳುತಿದ್ದನು. ಬಲ್ಲಾಳರೆಂಬುವರು ಈ ವಂಶದಲ್ಲಿ ಮೂವರು ಇರುವರು. ಮರುಳಸಿದ್ಧರ ಸಮಕಾಲೀನ ಬಲ್ಲಾಳನೆಂದರೆ. ೨ ನೇ ಬಲ್ಲಾಳ ಎಂಬುದಾಗಿ ದಿ. ಹುಲ್ಲೂರು ಶ್ರೀನಿವಾಸ ಜೋಯಿಸ, ದಿ, ಎಂ. ಗೋವಿಂದ ಪೈ.ಪ.ಗು.ಹಳಕಟ್ಟಿ, ಹೆಚ್. ದೇವೀರಪ್ಪ, ಅ.ನ.ಕೃಷ್ಣರಾಯ ಮೊದಲಾದ ವಿದ್ವಾಂಸರು, ಎಂಬುದಾಗಿ ನಿರೂಪಿಸಿದ್ದಾರೆ. ಮರುಳಸಿದ್ಧರು ದ್ವಾರಸಮುದ್ರವನ್ನು ಪ್ರವೇಶಿಸುತ್ತಾರೆ. ಅಲ್ಲಿ ಬಲ್ಲಾಳರಾಯನಿಗೂ ಪ್ರಜೆಗಳಿಗೂ ವಿವಾದವಿರುತ್ತದೆ. ಬಲುಗಮ್ಮೆ ಮುಖಂಡನ ನೇತೃತ್ವದಲ್ಲಿ ಬಲ್ಲಾಳರಾಜನೊಂದಿಗೆ ವಿವಾದ ಉಂಟಾಯಿತು. ಆಗ ಜನಸಾಮಾನ್ಯರ ಹಕ್ಕನ್ನು ಮರುಳಸಿದ್ಧರು ಎತ್ತಿಹಿಡಿಯುತ್ತಾರೆ. ಕುಪಿತನಾದ ಬಲ್ಲಾಳ ದೊರೆಯು ಆ ಜನರಲ್ಲೋಬ್ಬನಾದ ಬಲುಗಮ್ಮೆ ಎಂಬ ಮುಖಂಡನ ಕೈಗೆ ಕಾದ ಕಬ್ಬಿಣದ ಬಳೆಗಳನ್ನು ಹಾಕಿಸುತ್ತಾನೆ. ತಕ್ಷಣವೇ ಬಂದ ಮಳೆಯಿಂದ ಬಳೆಗಳು ತಣ್ಣಗಾಗುತ್ತವೆ. ಆದರೆ ಮರುಳಸಿದ್ಧರು ಈ ವಿವಾದವನ್ನು ಪರಿಹರಿಸುತ್ತಾರೆ. ಜನಸಾಮಾನ್ಯರ ಹಕ್ಕನ್ನು ಎತ್ತಿಹಿಡಿದು

ಬಲುಗಮ್ಮೆಗೆ ವಿಧಿಸುವ ಶಿಕ್ಷೆಯನ್ನು ತಪ್ಪಿಸುತ್ತಾರೆ. ಈತನೆ 'ಬಳೆಗೈ ಶರಣ' ಎಂಬ ಹೆಸರಿನಿಂದ ಮರುಳಸಿದ್ಧರ ಶಿಷ್ಯನಾಗುತ್ತಾನೆ. ಈತನ ಕೈಗೆ ಬಳೆಗಳನ್ನು ಹಾಕಿಸಿದ್ದರಿಂದುಂಟಾದ ಗಾಯಗಳನ್ನು ಗದ್ದುಗೆರಾಮಿ ತಂದೆಯು ತನ್ನ ಆಶ್ರಮದಲ್ಲಿಟ್ಟುಕೊಂಡು ಉಪಚರಿಸಿ ವಾಸಿ ಮಾಡುತ್ತಾನೆ. (ಕೈಗೆ ಕಾದ ಕಬ್ಬಿಣದ ಬಳೆಹಾಕುವ ಪದ್ದತಿ ಶಿಕ್ಷೆಯ ವಿಧಾನವಾಗಿರಬಹುದು) ಆ ಸಮಯಕ್ಕೆ ಸರಿಯಾಗಿ ಮಳೆಸುರಿದುತಣ್ಣಗಾಯಿತು. ಒಳ್ಳೆಯ ಉಪದೇಶದಿಂದಾಗಿ ಶಿಕ್ಷೆ ತಪ್ಪಿತು ಎಂಬುದು ಅರ್ಥ. ಇಂತಹ ಶಿವಶರಣರಲ್ಲಿನ ಆಧ್ಯಾತ್ಮಿಕ ಪೌರುಷ ಶಕ್ತಿಯೊಂದು ಇರುವುದರಿಂದ ಇಂತಹ ಘಟನೆಗಳು ಸಂಭವಿಸಿರುತ್ತವೆ.

ಮರುಳಸಿದ್ಧರು ದಂಪತಿಗಳಿಬ್ಬರಲ್ಲಿ ಪತಿ ವಾಮಚಾರಿ ಸತಿ ಸದಾಚಾರಿ ಪತಿಯನ್ನು ವಾಮಚಾರದಿಂದ ಸದಾಚಾರದತ್ತ ಪರಿವರ್ತಿಸಿದವರಾಗಿದ್ದಾರೆ. ಈ ಪ್ರಸಂಗಕ್ಕೆ ಸಂಬಂಧಿಸಿದಂತೆ ಕುಂಭಿನೀಪುರ ಎಂಬಲ್ಲಿ ಈ ಸನ್ನಿವೇಶ ನಡೆಯುತ್ತದೆ. ಕುಂಭಿನೀಪುರ ಎಲ್ಲಿದೆಯೆಂಬ ಬಗ್ಗೆ ಇನ್ನು ಸಂಶೋಧನೆಯಾಗಬೇಕಾಗಿದೆ ಎಂಬುದಾಗಿ ಶ್ರೀ ತರಳಬಾಳು ಜಗದ್ಗುರು ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ತಮ್ಮ ಲೇಖನದಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಹಿಂದೆ ಗಮನಿಸಿದಂತೆ ಬೈರವಗೊಂಡ – ಲಿಂಗಮ್ಮ ದಂಪತಿಗಳ್ಳನ್ನು ಪರಿವರ್ತಿಸಿ ಶಿವದೀಕ್ಷೆಯನ್ನು ನೀಡಿದವರು ಮರುಳಸಿದ್ಧರು.[೧೨೦] ಈ ಭೈರವ, ಲಿಂಗಮ್ಮ ಸ್ಮಾರಕವಾಗಿ ದಾವಣಗೆರೆ ತಾಲೂಕು ಸಮೀಪ ತೋಳಹುಣಸೆ ಗ್ರಾಮದಲ್ಲಿ ಈ ಮೇಲಿನ ಘಟನೆಗೆ ಸಂಬಂಧಿಸಿದಂತೆ ಕುಂಭೀಲಿಂಗೇಶ್ವರ ದೇವಾಲಯವಿದ್ದು ಈ ದೇವಾಲಯದ ಮುಂಭಾಗದಲ್ಲಿ ಬೈರವ ಮತ್ತು ಇದೇ ದೇವಾಲಯದ ಸಮೀಪವೆ ಈಶ್ವರಲಿಂಗ ದೇವಸ್ಥಾನವಿದ್ದು, ಅಲ್ಲಿ ಹೆಣ್ಣು ದೇವತೆಯ ವಿಗ್ರಹವಿದೆ. ಇದೇ ಲಿಂಗಮ್ಮವಿರಬಹುದು. ಇವತ್ತಿಗೂ ಇಲ್ಲಿ ವರ್ಷಕೊಮ್ಮೆ ಕುಂಭದ ಮೆರವಣಿಗೆ ಜಾತ್ರೆನಡೆಯುತ್ತದೆ. ಭೈರವಮೂರ್ತಿಗೆ ಒಂದು ಕುರಿ ಬಲಿ ನೀಡುವ ಪದ್ಧತಿಯು ಇದೆ. ತೋಳಹುಣಸೆ ಗ್ರಾಮದ ಸ್ಥಳ ಪುರಾಣದ ಕಥೆಯೇ ಬೇರೆ ಇರಬಹುದು ಆದರೆ ಈ ಮೇಲಿನ ಕಥೆ ಸನ್ನಿವೇಶವು ಮರುಳಸಿದ್ಧ ಕಾವ್ಯದಲ್ಲಿ ನಿರೂಪಿತವಾದ ಭೈರವಗೊಂಡ ಲಿಂಗಮ್ಮ ದಂಪತಿಗಳ ಪರಿವರ್ತನೆಗೆ ಸಂಬಂಧಿಸಿದ ಕಥೆ ನಿರೂಪಿತವಾಗಿದೆ.

ಚಿನ್ಮೂಲಾದ್ರಿ, (ಚಿತ್ರದುರ್ಗ) ಗಿರಿಯಲ್ಲಿ ಮರುಳಸಿದ್ಧರು ಗುರು ರೇವಣಸಿದ್ಧರಿಂದ ಅನುಗ್ರಹೀತನಾಗಿ ಸಮಾಜದಲ್ಲಿದ್ದಂತಹ ಕಲ್ಮಷವನ್ನು ನಿವಾರಿಸಲು ಪಣತೊಟ್ಟು ರೇವಣಸಿದ್ಧರ ಆಜ್ಞೆಯಂತೆ ಕೊಲ್ಲಾಪುರದ ಮಾಯೆಯನ್ನು ಗೆಲ್ಲುವಸಲುವಾಗಿ ಪ್ರಯಾಣ ಮಾಡುತ್ತಾ ತೆಲಗುಬಾಳಿಗೆ ಬರುತ್ತಾರೆ. ಅಲ್ಲಿ ತೆಲುಗುಬಾಳು ಮೂಕಸಿದ್ಧರನ್ನೇ ತನ್ನ ಶಿಷ್ಯರನ್ನಾಗಿ ಅನುಗ್ರಹಿಸಿ ಮುಂದೆ

ಕೊಲ್ಲಾಪುರದತ್ತ ಪ್ರಯಾಣ ಬೆಳೆಸುತ್ತಾ. ಆ ಮಾರ್ಗದಲ್ಲಿ ಆಂಧ್ರಪ್ರದೇಶದಲ್ಲಿ ಕಾಕತೀಯ ಅರಸರ ಪ್ರಾಂತವಾದ ಓರಂಗಲ್ಲಿನ ಪ್ರಸಿದ್ಧ ಶರಣರಾದ ಗುಂಡಬ್ರಹ್ಮಯ್ಯರನ್ನು ಸಂದರ್ಶಿಸಿ ಮುಂದೆ ಕೊಲ್ಲಾಪುರ ಪ್ರಾಂತ್ಯದ ಕಡೆ ಪ್ರಯಾಣ ಮಾಡುತ್ತಾರೆ. ಕೊಲ್ಲಾಪುರದ ದೊರೆ ಕರಟಾಸುರನೆಂದು ಕರೆಯುತ್ತಿದ್ದರು (ಕರಟನೆಂಬುದರ ಮೂಲಶಬ್ಧಕರಹಟ) ಈತನ ಮಗಳೇ ಮಾಯಾದೇವಿ ಈಕೆಯು ವಾಮಾಚಾರ ಪ್ರವರ್ತಕಳಾಗಿದ್ದಳು. ಈಕೆಯ ದೆಸೆಯಿಂದ ಸಮಾಜವು ವಾಮಾಚಾರ ಪೂರ್ಣವಾಗಿತ್ತು. ಈ ಫಲವಾಗಿ ಸಮಾಜದಲ್ಲಿ ನೀತಿ ಮಟ್ಟವೇ ಕುಸಿದು ಹೋಗಿತ್ತು. ಇದನ್ನು ಪ್ರತಿಭಟಿಸಿನಿಲ್ಲುವ ಶಕ್ತಿ ಯಾರಿಗೂ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಮರುಳಸಿದ್ಧರು ಕೊಲ್ಲಾಪುರದ ಸಿದ್ಧಗಿರಿಯಲ್ಲಿ ಕರಹಾಡ ದೇಶದ ರಾಜಪುತ್ರಿಯೊಡನೆ ವಿವಾದ ಮಾಡಿ ಆಕೆಯನ್ನು ವಾಮಮಾರ್ಗದಿಂದ ಸದಾಚಾರ ಮಾರ್ಗದತ್ತ ಬದಲಾಯಿಸಿ ತನ್ನ ಶಿಷ್ಯಗಳನ್ನಾಗಿ ಅನುಗ್ರಹಿಸುತ್ತಾನೆ ಹಾಗೂ ಅವಳ ಸಹಚರರಾದ ಭೈರವ, ಬ್ರಹ್ಮ ಮತ್ತು ಜಟ್ಟಿಗ ಇವರು ಮರುಳಸಿದ್ಧರ ಶಿಷ್ಯರಾಗುತ್ತಾರೆ.

ಮರುಳಸಿದ್ಧರು ಮುಂದೆ ಕಗ್ಗಲ್ಲುಪುರಕ್ಕೆ ಬರುತ್ತಾರೆ ತನ್ನ ಜೀವನದ ಸಿಂಹಾವಲೋಕನ ಮಾಡಿ ಒಂದು ನಿರ್ಣಯ ಕೈಗೊಳ್ಳುತ್ತಾರೆ. ಈ ಜನಜೀವನ ಎಲ್ಲ ಕಾಲಕ್ಕೂ ದುರಪಯೋಗವಾಗುತ್ತಲೇ ಬಂದಿದೆ. ಇದನ್ನು ತಿದ್ದುವುದು, ಇದಕ್ಕೆ ಮಾರ್ಗದರ್ಶನ ಮಾಡವುದು ಒಂದು ಕರ್ತವ್ಯವೇ ಇದಕ್ಕಾಗಿ ಒಂದು ಶಾಶ್ವತ ವ್ಯವಸ್ಥೆಯು ಅನಿವಾರ್ಯವೆಂದು ನಿಶ್ಚಯಿಸಿ ಕಗ್ಗಲ್ಲುಪುರ ಕೇತನಹಳ್ಳಿಗಳ ಮದ್ಯ ಉಜ್ಜಯಿನಿಪುರವನ್ನು ನಿರ್ಮಿಸಿ ಅಲ್ಲಿ ಸದ್ಧರ್ಮ ಗದ್ದುಗೆಯನ್ನು ನೆಲೆಗೊಳಿಸಿ ತೆಲಗು ಬಾಳಿನಿಂದ ಕರೆತಂದ ಸಿದ್ದಯ್ಯ ಎಂಬುವರನ್ನು ಗದ್ದುಗೆಯ ಮೇಲೆ ಕುಳ್ಳಿರಿಸಿ ಅವರೇ ಈ ಪೀಠದ ಅಧಿಪತಿ ಎಂದು ಅನುಗ್ರಹಿಸಿ ಇನ್ನು ಮುಂದೆ ತನ್ನ ಶಿಷ್ಯರೇ ಈ ಸಮಾಜದ ಪರಿವರ್ತನೆಗೆ ಮಾರ್ಗದರ್ಶಕರು ಎಂಬುದಾಗಿ ಉಪದೇಶಿಸಿ ಉಜ್ಜಯಿನಿಯ ಬಳಿ ಕೇತನಹಳ್ಳಿ ಎಂಬ ಅರಣ್ಯದಲ್ಲಿ ಸಮಾಧಿಸ್ಥನಾದನು.

೩.೩.೬ ಮರುಳಸಿದ್ಧ ಶರಣರಾಗಿ :

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಕ್ರಾಂತಿ ಮಾನವಕುಲ ಇತಿಹಾಸದಲ್ಲಿಯೇ ಅದ್ವಿತೀಯವಾದದ್ದು ಧರ್ಮವನ್ನು ಮೂಲವಾಗಿಟ್ಟುಕೊಂಡು ಧಾರ್ಮಿಕ ಸಾಮಾಜಿಕ ಆರ್ಥಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಮೌಲ್ಯಗಳಿಗೆ ಹೊಸ ಅರ್ಥವನ್ನು ಕೊಡಲಾಯಿತು. ಹೊಸ ದಿಗಂತಗಳನ್ನು ಅವಿಷ್ಕರಿಸಲಾಯಿತು. ಈ ಕ್ರಾಂತಿಯ ಮೂಲಪುರುಷ ಬಸವಣ್ಣನವರಾದರೂ ಹೆಚ್ಚಿನ ಸಂಖ್ಯೆಯಲ್ಲಿ ಶರಣರು ಇದರಲ್ಲಿ ಪಾಲ್ಗೊಂಡು ಮಾನವ ಕುಲೋದ್ಧಾರದ ಮಹಾತ್ಕಾರ್ಯದಲ್ಲಿ ಚಿರಸ್ಮರಣೀಯ ಸಾಧನೆಗಳನ್ನು ಮಾಡಿದ್ದಾರೆ. ಆದರೆ ಅವರು

ಮಾಡಿದ ಕಾರ್ಯ ಕ್ಷೇತ್ರ ಕಲ್ಯಾಣದ ಅನುಭವ ಮಂಟಪ. ಇಲ್ಲಿ ಅವರ ಹೋರಾಟದ ತತ್ವ ಸಿದ್ಧಾಂತಗಳ ಮೂಲಕ ನಾಡಿನಾದ್ಯಂತ ಹೋರಾಟಕ್ಕಿಳಿದರು. ಆದರೆ ಅನೇಕ ಶರಣರು ಈ ಅನುಭವ ಮಂಟಪ ಸೇರದೆ ದೂರವೇ ಉಳಿದು ಒಂದು ಕ್ರಾಂತಿಕಾರಕ ಹೋರಾಟದ ಬದುಕಿಗೆ ತಮ್ಮ ಜೀವನವನ್ನು ತೊಡಗಿಸಿ ಕೊಂಡರು, ಅಂತವರಲ್ಲಿ ೧೨ ನೇ ಶತಮಾನದ ರೇವಣಸಿದ್ಧರ ಶಿಷ್ಯ ಮರುಳಸಿದ್ಧರು ಕೂಡ ಒಬ್ಬರು, ಇವರ ಕಾರ್ಯಕ್ಷೇತ್ರ ಉಜ್ಜಯಿನಿ ಸಮೀಪ ಕಗ್ಗಲ್ಲುಪುರ (ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕು) ಈ ಭಾಗದಲ್ಲಿ ಮರುಳಸಿದ್ಧರು ಬಸವಣ್ಣನವರಂತೆ ಅಂದಿನ ಸಮಾಜದಲ್ಲಿಯ ಜಟಿಲತೆಯನ್ನು ತೊಡೆದುಹಾಕಲು ಹೋರಾಟಕ್ಕಿಳಿದರು. ಹೀಗಾಗಿ ಅಂದಿನ ಸಮಾಜ ಕಂದಕಗಳಾದ ಅಂಧಃಶ್ರದ್ಧೆ, ಮೂಡಭಕ್ತಿ, ಕಂದಾಚಾರಗಳು ಪ್ರಾಣಿಬಲಿಯ ವಿರೋಧ. ಅಸ್ಪೃಶ್ಯತೆಯ ವಿರೋಧ ಮೊದಲಾದ ಸಾಮಾಜಿಕ ದುಷ್ಟಪದ್ಧತಿಗಳ ವಿರುದ್ದ ಪ್ರತಿಭಟಿಸಿ ನಿಂತವರು ಮರುಳಸಿದ್ಧರು.

ಕಾಯಕ ತತ್ವದಡಿ ಮರುಳಸಿದ್ಧ ಕೂತುಣ್ಣಲಾರದೆ ದನಕಾಯುವ ಕಾಯಕಕ್ಕೆ ನಿಂತು ಕೆಳವರ್ಗದ ಸಹಪಾಠಿಗಳನೆಲ್ಲಾ ಒಟ್ಟು ಸೇರಿಸಿ ಅವರು ತಂದ ಬುತ್ತಿಯನ್ನೆಲ್ಲಾ ಒಟ್ಟಿಗೆ ಕಲೆಸಿ ತಿನಿಸಿ ಒಂದಾಗಿ ಬಾಳುವ ರುಚಿಯ ಮಹತ್ವವನ್ನು ತೋರಿಸಿಕೊಡುವುದರೊಂದಿಗೆ ಕುಲವೆಲ್ಲ ಒಂದು ಎಂಬುದನ್ನು ಸಾರಿದರು. ಮರುಳಸಿದ್ಧರು ತನ್ನ ಜನ್ಮ ಸ್ಥಳವಾದ ಕಗ್ಗಲ್ಲಪುರದಲ್ಲಿ ನಡೆದ ಮಾರಿ ಹಬ್ಬದ ಸಂದರ್ಭದಲ್ಲಿ ಪ್ರಾಣಿವಧೆಯನ್ನು ಪ್ರತಿಭಟಿಸಿದ 'ಅಹಿಂಸಾಪರಮೋ ಧರ್ಮ' ಎಂದು ಸಾರಿದ ದಯಾಸಾಗರನೀತ. ಇದರಿಂದ ಕಗ್ಗಲ್ಲು ಪುರದವರ ವಿರೋಧಕ್ಕೆ ಕಾರಣನಾಗಬೇಕಾಯಿತು ಅಲ್ಲದೆ ಬಹಿಷ್ಕಾರವನ್ನು ಎದುರಿಸಬೇಕಾಯಿತು. ಸಾಕು ತಂದೆ ತಾಯಿಯರ ವಚನವನ್ನೇ ಪಾಲಿಸದೆ ಮರುಳಸಿದ್ಧರು ಪುರೋಹಿತಶಾಹಿಗಳ ಬಂಡವಾಳವನ್ನು ಬಯಲಿಗೆಳೆದು ಲೇವಡಿ ಮಾಡಿದರಲ್ಲದೆ ಮೂಢನಂಬಿಕೆಗಳ ವಿರುದ್ದ ಸಮರವನ್ನೇ ಸಾರಿದರು. ಎಲ್ಲರ ಆಕ್ರೋಶಗಳಿಗೆ ತುತ್ತಾದ ಮರುಳಸಿದ್ಧರು ಕಗ್ಗಲ್ಲುಪುರವನ್ನೇ ತ್ಯಜಿಸಬೇಕಾಯಿತು.

ಮರುಳಸಿದ್ಧರಿಗೆ ಆತ್ಮಬಲವೂ ಇದ್ದಿತು ತನಗೆ ರೇವಣಸಿದ್ಧರೇ ತಕ್ಕ ಗುರುವೆಂದು ಭಾವಿಸಿ ಅವರನ್ನರಸುತ್ತಾ. ಐತಿಹಾಸಿಕ ಚಿನ್ಮೂಲಗಿರಿಗೆ ಬಂದ ಮರುಳಸಿದ್ಧರು ಗುರುಪರೀಕ್ಷೆಯಲ್ಲಿ ಯಶಸ್ವಿಯಾಗಿ ಶಿಷ್ಯರಾಗಿ ಅವರಿಂದ ವೇದೋಪನಿಷತ್ತು ಯೋಗ ಹಠಹೋಗ ಪ್ರಾಣಾಯಾಮಗಳಲ್ಲಿನ ಮರ್ಮವನ್ನು ಅರಿತರಲ್ಲದೆ ಸಕಲ ವಿದ್ಯೆಗಳಲ್ಲೂ ಪಾರಂಗತರಾದರು. ತನ್ನ ಜಾತಿಯಾವುದೆಂದು ರಹಸ್ಯವಾಗಿದ್ದ ಮರುಳಸಿದ್ಧರು ನಂತರ ಅವರು ಕೆಳ ಜಾತಿಯವನೆಂದು ತಿಳಿದಾಗ ಪರುಶುರಾಮನಂತೆ ಜಾತಿಭೂತವಾಗಿ ಮಾರ್ಪಟ್ಟು ಶಾಪಕೊಡದೆ, 'ನೀನು ಮಾದಿಗನಲ್ಲ

ಸಾದಿಗ, ಇಂದಿನಿಂದ ನೀನು ಮರುಳನಲ್ಲ, ಮರುಳಸಿದ್ಧ'ನೆಂದು ಆಶೀರ್ವದಿಸಿದರು. ಶ್ರೀ ರೇವಣಸಿದ್ದೇಶ್ವರರು ಭಾರತದ ಸನಾತನ ಶೈವ ಪರಂಪರೆಗೆ ಸೇರಿದ ಮುಂಚೂಣಿ ಶೈವ ಯತಿಗಳು; ಅವರು ಮೊದಲು ನಾಥ ಸಂಪ್ರದಾಯದಲ್ಲಿದ್ದು ನಾಥ ಸಿದ್ಧರೆನಿಸಿ ಕೊಂಡಿದ್ದರು. ಆನಂತರ ಅದನ್ನ ಬಿಟ್ಟು ಶೈವಸಿದ್ಧರಾದರು[೧೨೧]. ಹೀಗಾಗಿ ಮರುಳಸಿದ್ಧರು ರೇವಣಸಿದ್ಧರಿಂದ ಅನುಗ್ರಹ ಪಡೆದ ಮೇಲೆ. ವೀರಶೈವ ಆಗಿರಬೇಕು, ಬ್ರಾಹ್ಮಣನಾದ ಬಸವೇಶ್ವರರು ಈಶನಗುರುಗಳಿಂದ (ಜಾತವೇದ ಮುನಿಗಳಿಂದ) ದೀಕ್ಷೆಪಡೆದು ವೀರಶೈವನಾದಂತೆ. ಮರುಳಸಿದ್ಧರು ಸಹ ರೇವಣಸಿದ್ಧರಿಂದ ಉಪದೇಶ ಪಡೆದು ಮಹಾಗುರು, ಗುರುವಿನ ಅಂಕಿತದಲ್ಲೇ ವಚನಗಳನ್ನು ರಚಿಸಿದ. ಅವರ ಒಂದು ವಚನವು ಲಭ್ಯ.

ಶರಣರು ತಮ್ಮ ವಚನಗಳಲ್ಲಿ ಅವರವರ ಗುರುವಿನ ಹೆಸರನ್ನೋ ಅಥವಾ ಇಷ್ಟದೈವದ ಹೆಸರನ್ನೂ ಅಂಕಿತವಾಗಿಡುವ ಪದ್ಧತಿ, ಕನ್ನಡ ಸಾಹಿತ್ಯದಲ್ಲಿ ಕಾಣಸಿಗುತ್ತಾರೆ. ಶ್ರೀ ಸಿದ್ಧರಾಮೇಶ್ವರರು ತಮ್ಮ ವಚನವೊಂದರಲ್ಲಿ "ಮರುಳಸಿದ್ಧೇಶ್ವರನ ವಚನ ಅಱುವತ್ತೆಂಟು ಸಾವಿರ" ಎಂದಿರುವರಲ್ಲದೆ, "ಮರುಳಸಿದ್ಧಯ್ಯ ತನ್ನ ಮನವ ಕೊಟ್ಟುಗಣ ಪ್ರಸಾದನ ಪಡೆದ" ಎಂದು ಆತನನ್ನು ಪ್ರಶಂಸಿಸಿದ್ದಾರೆ.[೧೨೨] ಬೀಜಕ್ಕೋ ಮಂತ್ರ ಎಂಬಂತೆ ಆತನ ಒಂದೇ ಒಂದು ವಚನವು ಸಿಕ್ಕಿದ್ದು ಅದರ ಅಂಕಿತ 'ರೇವಣ್ಣ ಪ್ರಭುವೆ' ಎಂದು ಸ್ಮರಿಸಿದ್ದಾರೆ. ಅ.ನ.ಕೃಷ್ಣರಾಯರು, ದಿ.ಹುಲ್ಲೂರುಶ್ರೀನಿವಾಸಜೋಯಿಸ, ಪ.ಗು.ಹಳಕಟ್ಟೆ, ಹೆಚ್.ದೇವೀರಪ್ಪ ಮೊದಲಾದ ವಿದ್ವಾಂಸರು ಅಭಿಪ್ರಾಯ ಪಡುವಂತೆ ಇದೊಂದು ವಚನ ರಚಿತವಾಗಿರುವುದು ತಿಳಿದುಬರುತ್ತದೆ. ಆ ವಚನ ಹೀಗೆ ನಿರೂಪಿತನಾಗಿದೆ.

ಆಲಿ ಆಲಯದಲ್ಲಿ ಕರಿಗೊಳಲು, ಶ್ರವಣವು ಆಕಾಶವನಡರಲು

ಉಲುಹು ನಿರ್ಭೂತ ಚಿತ್ತ ಸಮಾಧಾನವನ್ನೈದಲು

ಕಾಲ ಕರ್ಮಗಳಗೆಲುವುದಿದೇನು ಸೋಜಿಗವು ಹೇಳಾ

ರೇವಣ್ಣ ಪ್ರಭುವೇ.[೧೨] – ಮರುಳಸಿದ್ಧ

ಮರುಳಸಿದ್ಧರು ಸಹ ಮಹಾಗುರು, ಗುರುವಿನ ಅಂಕಿತದಲ್ಲೇ ವಚನಗಳ್ನು ರಚಿಸಿದ. ಇವರು ಅಪಾರಜ್ಞಾನ ಸಂಪತ್ತನ್ನು ಪಡೆದವರಾಗಿದ್ದಾರೆ. ಬೇತೂರು ಗ್ರಾಮದಲ್ಲಿ ವೈದಿಕರದೇ ಅಬ್ಬರ. ಯಾಗ–ಯಜ್ಞ ಹೋಮಗಳೆಂದು ಧನಧಾನ್ಯಗಳನ್ನು ಸುಡುವುದನ್ನು ವಿರೋಧಿಸಿದ ಮರುಳಸಿದ್ಧ ತನ್ನ ಪಾಂಡಿತ್ಯದಿಂದ ಬ್ರಾಹ್ಮಣರ ವಿರುದ್ಧ ಮತ್ತು ಅವರಲ್ಲಿನ ಮೌಢ್ಯ ಕಂದಾಚಾರಗಳ ಬಗ್ಗೆ

ಕ್ರಾಂತಿಕಹಳೆಯನ್ನೂದಿದ.

ನಾಡಿನಾದ್ಯಾಂತೆ ಅಲೆದು ತನ್ನ ತತ್ವ ಸಿದ್ಧಾಂತಗಳನ್ನು ಜನರ ಅರಿವಿಗೆ ತರಲು ಜಗ ಅಲೆವ ಜಂಗಮನಾದ, ವಾಮಾಚಾರಿ ಮದ್ಯ ಮಾಂಸಗಳ ವಿಹಾರಿ ಕುಂಭೀನೀಪುರದಲ್ಲಿನ ಭೈರವಗೊಂಡನಂತಹ ಮಹಾಕ್ರೂರಿಯನ್ನು ತನ್ನ ದೇವರನ್ನು ಒಲಿಸಿಕೊಳ್ಳಲು ಪ್ರಾಣಿಬಲಿ ಮದ್ಯದ ನೈವೇದ್ಯವೇ ರಹದಾರಿ ಎಂದುನಂಬಿದ್ದ ಅವನ ಪಾಚಿಗಟ್ಟಿದ ಮನವನ್ನು ತೊಳೆದ ಸಿದ್ಧ, ಬಿಲ್ವ ಪತ್ರೆ ಏರಿಸಿ ಪಾದೋದಕ ಪ್ರಸಾದಗಳಿಂದಲೂ ದೇವರನ್ನು ಒಲಿಸಿಕೊಳ್ಳುವ ವಿಧಾನವನ್ನು ಅರುಹಿದ. ಭೈರವಗೊಂಡನ ಧರ್ಮಪತ್ನಿ ಸದ್ಭಕ್ತೆ ಶಿವಶರಣೆಲಿಂಗಮ್ಮನ ಬಿರುಕು ಬಿಟ್ಟಿದ್ದ ದಾಂಪತ್ಯವನ್ನು ಬೆಸೆದ ಮಹಾಮಹಂತ ಈ ಮರುಳಸಿದ್ಧರು.

ಮುಂದೆ ಮರುಳಸಿದ್ದರು ದ್ವಾರಸಮುದ್ರ (ಹಳೇಬೀಡು) ಅಲ್ಲಿ ಬಲ್ಲಾಳರಾಯನಿಗೂ ಪ್ರಜೆಗಳಿಗೂ ವಿವಾದವಿರುತ್ತದೆ. ಜನಸಾಮಾನ್ಯರ ಹಕ್ಕನ್ನು ಮರುಳಸಿದ್ಧರು ಎತ್ತಿ ಹಿಡಿಯುತ್ತಾರೆ. ಇಂತಹ ಸನ್ನಿವೇಶವನ್ನು ಗಮನಿಸಿದಾಗ ಅನ್ಯಾಯದ ವಿರುದ್ಧ ಯಾವುದನ್ನು ಬಿಟ್ಟಿಲ್ಲ ಮರುಳಸಿದ್ಧರು ಎಂಬುದು ತಿಳಿಯುತ್ತದೆ. ಮುಂದೆ ಸಾಗಿದ ಮರುಳಸಿದ್ಧ ಕೊಲ್ಲಾಪುರದ ದೊರೆ ಕರಟಾಸುರನ ಭೇಟಿ. ಅವನ ಮುದ್ದಿನ ಮಗಳು ವಾಮಾಚರಿ ಮಾಯೆ ಮಂತ್ರಗಳಿಂದ ಕಂದಾಚಾರಿಯಾದ ಮಾಯೆಯನ್ನು ವಾಮಾಚಾರ ಮಾರ್ಗದಿಂದ ಹೊರಬರುವಂತೆ ಅವಳನ್ನು ಪರಿವರ್ತಿಸುವಲ್ಲಿ ಯಶಸ್ಸನ್ನು ಸಾಧಿಸಿದವರು ಮರುಳಸಿದ್ಧರು. ನಾಡಿನಾದ್ಯಂತ ಸಂಚರಿಸಿದ ಮರುಳಸಿದ್ಧರು ಮರಳಿ ಬಂದಿದ್ದು. ತನ್ನ ಜನ್ಮ ಸ್ಥಳದತ್ತ ಜನರ ದುಷ್ಟ ದುರ್ವ್ಯವಹಾರ ದುರಾಚರಗಳನ್ನು ಬಿಡಿಸಿದ ಮರುಳಸಿದ್ಧ. ತನ್ನ ಗುರು ರೇವಣಸಿದ್ಧರ ಅಣತಿಯಂತೆ ಪುನ:ಹುಟ್ಟೂರು ಕಗ್ಗಲ್ಲುಪುರಕ್ಕೆ ಹಿಂದಿರುಗಿ ಸದ್ದರ್ಮ ಪೀಠ ಒಂದನ್ನು ಸ್ಥಾಪಿಸಲು ಭಕ್ತರ ಬೆಂಬಲದೊಂದಿಗೆ ಶ್ರಮಿಸಿದ. ಆದರೂ ಪುರೋಹಿತರ ಜಂಗಮರ ಅಸೂಯೆ ಅಡಚಣೆಗಳ ಮಧ್ಯೆ ಮರುಳಸಿದ್ಧ ಸದ್ಧರ್ಮ ಪೀಠ ಒಂದನ್ನು ಸ್ಥಾಪಿಸಿದ್ದು ಭಕ್ತರ ಉದ್ಧಾರಕ್ಕಾಗಿ, ಭಕ್ತರು ಅಲ್ಲೊಂದು ಸುಂದರ ಶಿವಾಲಯವನ್ನು ನಿರ್ಮಿಸಿದರು. ಅದೇ ಈಗ ಉಜ್ಜಯಿನಿ ಎಂದು ಪ್ರಖ್ಯಾತವಾಗಿದೆ. ಕೊನೆಗೆ ಮರುಳಸಿದ್ಧರು ಕೇತನ ಹಳ್ಳಿ (ಈ ಊರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿದೆ) ಮಧ್ಯದ ಕಾಡೇ ತನಗೆ ಹಿತಕರವೆಂದು ಬಗೆದು ಅಲ್ಲಿಯೇ ಐಕ್ಯವಾದರು[೧೨೪].

ಬಸವಣ್ಣ ಬ್ರಾಹ್ಮಣನಾಗಿ ಹುಟ್ಟಿದವ ಮೇಲಾಗಿ ಪ್ರಧಾನಿ ಹುದ್ದೆಯಲ್ಲಿದ್ದವ ಬೊಕ್ಕಸವಿತ್ತು. ಅಧಿಕಾರವಿತ್ತು ಹಿಂಬಾಲಕರಿದ್ದರು. ಬಸವಣ್ಣನವರದ್ದು ಸಾಮೂಹಿಕ ಹೋರಾಟ ಸಮಾಜದಲ್ಲಿ ಅವರಿಗೆ ಗೌರವವಿತ್ತು ಬಸವೇಶ್ವರರ ಸಮಕಾಲೀನರಾದ ಶರಣರು. ಶರಣ ಧರ್ಮವು

ಜಾತ್ಯತೀತವಾದದ್ದು. ಇದರಲ್ಲಿ ಮಾದಾರ ಚನ್ನಯ್ಯ, ಡೋಹರಕಕ್ಕಯ್ಯ, ಮಡಿವಾಳ ಮಾಚಿದೇವ, ಮೊಚ್ಚೆಕಾಯಕದ ಹರಳಯ್ಯ, ಹಡಪದ ಅಪ್ಪಣ್ಣ ಸಿದ್ಧರಾಮ, ಚನ್ನಬಸವಣ್ಣ, ಅಲ್ಲಮಪ್ರಭು ಮುಂತಾದವರೆಲ್ಲರೂ ವಿವಿಧ ಕುಲಗಳಲ್ಲಿ ಹುಟ್ಟಿದವರು ಸತ್ಯ ಶುದ್ಧವಾದ ಶರಣ ಧರ್ಮದ ಅನುಯಾಯಿಗಳಾಗಿ, ಮಾನವಕುಲ ಒಂದೆಂದು ಸಕಲ ಜೀವಿಗಳ ಏಳಿಗೆಗಾಗಿ ಶ್ರಮಿಸಿದ್ದಾರೆ. ಇವರೆಲ್ಲ ಸಮಾಜದ ಒಳಿತಿಗಾಗಿ ಶ್ರಮಿಸಿದ ಇವರು ಶರಣ ಪರಂಪರೆಗೆ ಸೇರಿದವರೆಂದು ಹಲವು ಸಾಹಿತಿಗಳು ಮತ್ತು ಇತಿಹಾಸಕಾರರ ಅಭಿಮಾತವಾಗಿದೆ. ಹಾಗಾದರೆ ಮರುಳಸಿದ್ಧ ಹುಟ್ಟಿನಿಂದ ಕೀಳು ಜಾತಿಯವ ಶ್ರೀಸಾಮಾನ್ಯನಾದರೂ ಮಹಾಪಂಡಿತ, ಮಾನವತಾವಾದಿ, ಎಲ್ಲೂ ಹೋರಾಡದೆ ವಿರೋಧಿಗಳ ಮನ: ಪರಿವರ್ತಿಸಿ ಜಾತಿಯನ್ನು ಮೆಟ್ಟಿ ಪ್ರೀತಿಯಧಾರೆ ಎರೆದ ಈ ಕ್ರಾಂತಿಯೋಗಿಯದು ಏಕ ವ್ಯಕ್ತಿಯ ಹೋರಾಟ, ಹೀಗಾಗಿ ಮರುಳಸಿದ್ಧ ಬಸವೇಶ್ವರ ಹಾಗೂ ಅವರ ಸಮಕಾಲೀನ ಶಿವಶರಣರಂತೆ ಇವರು ಸಹ ಸಮಾಜದ ಸಮಾನತೆಗಾಗಿ ಹೋರಾಡಿದ ಒಬ್ಬ ಶಿವ ಶರಣರೆಂದು ನಿರೂಪಿಸಬಹುದಾಗಿದೆ.

ಬಸವಣ್ಣನವರಿಗೆ ಎಲ್ಲಾ ಜನಾಂಗದ ಬೆಂಬಲವಿದ್ದರೂ ಮರುಳಸಿದ್ಧರಿಗೆ ತಾವು ಹುಟ್ಟಿದ ಜಾತೀಯ ಜನ ಮೇಲಾಗಿ ಸಾಕಿದ ತಂದೆ ತಾಯಿಗಳ ವಿರೋಧವೂ ಇತ್ತು. ಒಬ್ಬನೇ ವ್ಯಕ್ತಿ ಮನಸ್ಸು ಮಾಡಿದರೆ ಏನೆಲ್ಲಾ ಸಾದ್ಯ ಎಂಬುದನ್ನು ಮರುಳಸಿದ್ಧರಿಂದ ತಿಳಿಯಬಹುದು.

ಅಡಿಟಿಪ್ಪಣಿಗಳು :

೧. ಡಾ. ಸೂರ್ಯನಾಥ ಕಾಮತ, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ೧೯೯೯, ಪುಟ. ೧೩.

೨. ಪ್ರೊ॥ ಬಿ.ಷೇಕ್ ಆಲಿ, ಪ್ರೊ. ಅ.ಸುಂದರ(ಸಂ), ಕರ್ನಾಟಕ ಚರಿತ್ರೆ(ಸಂ.೧) ೧೯೯೩, ಪುಟ.೨೮೬.

೩. ಅದೇ ಪುಟ. ೩೦೧

೪. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ೨೦೦೪, ಪುಟ.೨–೩.

೫. ಅದೇ ಪುಟ.೩

೬. ಪ್ರೊ. ಬಿ. ಷೇಕ್ ಆಲಿ, ಪ್ರೊ. ಅ. ಸುಂದರ(ಸಂ), ಪೂರ್ವೋಕ್ತ (ಸಂ ೧) ಪುಟ.೩೬೪.

೭. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪುಟ.೩.

೮. ಡಾ. ಸೂರ್ಯನಾಥ ಕಾಮತ್, ಪೂರ್ವೋಕ್ತ, ಪುಟ.೪೮.

೯. ಡಾ. ಸೂರ್ಯನಾಥ ಕಾಮತ್, ಕರ್ನಾಟಕದ ಇತಿಹಾಸ ಹಲವು ಮುಖಗಳು ೨೦೦೬, ಪು.೨೪.

೧೦. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪುಟ.೩.

೧೧. ಡಾ. ಸೂರ್ಯನಾಥ ಕಾಮತ್, ಪೂರ್ವೋಕ್ತ, ಪುಟ.೬೩.

೧೨. ಡಾ. ದೇವರಕೊಂಡಾರೆಡ್ಡಿ (ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ೧೯೯೮, ಪುಟ.೯೮೪.

೧೩. ಪ್ರೊ. ಬಿ. ಷೇಕ್. ಆಲಿ, ಪ್ರೊ. ಬಿ. ಸುರೇಂದ್ರರಾವ್(ಸಂ), ಕರ್ನಾಟಕ ಚರಿತ್ರೆ ಸಂ.೨, ೧೯೯೩, ಪುಟ.೫೫- ೬೫.

೧೪. ಡಾ. ದೇವರಕೊಂಡಾರೆಡ್ಡಿ (ಸಂ), ಪೂರ್ವೋಕ್ತ, ಸಂ. ೧, ಪು.೯೮೪- ೯೮೫.

೧೫. ಡಾ. ಬಸವರಾಜ ಸಬರದ, ಬಸವೇಶ್ವರ ಮತ್ತು ಪುರಂದರದಾಸ ಒಂದು ಸಾಹಿತ್ಯ ಅಧ್ಯಯನ, ೧೯೯೩, ಪುಟ.೧೧.

೧೬. ಡಾ. ದೇವರಕೊಂಡಾರೆಡ್ಡಿ (ಸಂ), ಪೂರ್ವೋಕ್ತ, ಸಂ. ೧ ಪುಟ.೯೮೫.

೧೭. ಡಾ. ಸೂರ್ಯನಾಥ ಕಾಮತ್. ಪೂರ್ವೋಕ್ತ, ಪುಟ.೧೨೫.

೧೮. ಪ್ರೊ. ಬಿ.ಷೇಕ್ ಆಲಿ, ಪ್ರೊ॥ ಬಿ.ಸುರೇಂದ್ರರಾವ್ (ಸಂ), ಪೂರ್ವೋಕ್ತ, ಸಂ.೨. ಪುಟ.೩೩.

೧೯. ಡಾ. ಸೂರ್ಯನಾಥ ಕಾಮತ್, ಪೂರ್ವೋಕ್ತ, ಪುಟ.೧೩೦.

೨೦. ಡಾ. ದೇವರಕೊಂಡಾರೆಡ್ಡಿ (ಸಂ), ಪೂರ್ವೋಕ್ತ, ಸಂ.೧. ಪುಟ.೨೨೩- ೨೨೮.

೨೧. ಪ್ರೊ. ಬಿ.ಷೇಕ್ ಆಲಿ ಪ್ರೊ. ಬಿ. ಸುರೇಂದ್ರರಾವ್(ಸಂ), ಪೂರ್ವೋಕ್ತ, ಸಂ.೨.ಪುಟ.೯೫- ೧೦೪.

೨೨. ಡಾ. ದೇವರಕೊಂಡಾರೆಡ್ಡಿ (ಸಂ), ಪೂರ್ವೋಕ್ತ, ಸಂ. ೧. ಪುಟ ೨೨೮.

೨೩. ಲಕ್ಷಣ್ ತೆಲಗಾವಿ, ಡಾ. ಎಂ.ವಿ. ಶ್ರೀನಿವಾಸ (ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು. ೧೯೭೬, ಪುಟ. ೩೨೫-೩೨೬.

೨೪. ಎಚ್. ದೇವೀರಪ್ಪ, ಮಹದೇವಬಣಕಾರ(ಸಂ), ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ ೧೯೭೪, ಪುಟ.೭೭-೭೮.

೨೫. ಪ್ರೊ. ಬಿ. ಷೇಕ್ ಅಲಿ, ಪ್ರೊ. ಬಿ. ಸುರೇಂದ್ರರಾವ್(ಸಂ), ಪೂರ್ವೋಕ್ತ, ಸಂ. ೨. ಪುಟ. ೧೦೫.

೨೬. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪುಟ.೪.

೨೭. ಎಚ್. ದೇವೀರಪ್ಪ ಮಹದೇವ ಬಣಕಾರ(ಸಂ), ಪೂರ್ವೋಕ್ತ, ಪುಟ.೯೨.

೨೮. ಪ್ರೊ. ಬಿ. ಷೇಕ್ಅಲಿ, ಪ್ರೊ.ಕೆ.ಎಸ್.ಶಿವಣ್ಣ(ಸಂ), ಕರ್ನಾಟಕ ಚರಿತ್ರೆ ಸಂ. ೩. ೧೯೯೭, ಪುಟ.೧೯.

೨೯. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪುಟ.೪.

೩೦. ಅದೇ ಪುಟ.೪೫.

೩೧. ಡಾ. ಬಸವರಾಜ ಸಬರದ, ಪೂರ್ವೋಕ್ತ, ಪುಟ.೧. ೨,೩-೪,೫.

೩೨. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ ೧೯೯೭, ಪುಟ.೨೦೪.

೩೩. ಎಚ್. ದೇವೀರಪ್ಪ, ಮಹದೇವ ಬಣಕಾರ(ಸಂ), ಪೂರ್ವೋಕ್ತ, ಪುಟ.೭೭-೭೮.

೩೪. ಪ್ರೊ. ಬಿ. ಷೇಕ್ ಅಲಿ ಪ್ರೊ. ಕೆ. ಎಸ್. ಶಿವಣ್ಣ (ಸಂ), ಪೂರ್ವೋಕ್ತ, ಸಂ ೩. ಪುಟ.೩೪೭

೩೫. ಡಾ. ಸೂರ್ಯನಾಥ ಕಾಮತ್, ಪೂರ್ವೋಕ್ತ, ಪುಟ.೬೫.

೩೬. ಪ್ರೊ. ಬಿ.ಷೇಕ್ ಅಲಿ, ಪ್ರೊ. ಕೆ.ಎಸ್. ಶಿವಣ್ಣ (ಸಂ), ಪೂರ್ವೋಕ್ತ, ಸಂ ೩, ಪುಟ ೩೪೬

೩೭. ಡಾ॥ ಸೂರ್ಯನಾಥ ಕಾಮತ್, ಪೂರ್ವೋಕ್ತ, ೨೦೦೬, ಪುಟ.೭೪.

೩೮. ಹೆಚ್. ದೇವೀರಪ್ಪ, ಮಹದೇವ ಬಣಕಾರ(ಸಂ), ಪೂರ್ವೋಕ್ತ, ಪುಟ.೧೮೨.

೩೯. ಡಾ. ಸೂರ್ಯನಾಥ ಕಾಮತ್, ಪೂರ್ವೋಕ್ತ, ಪುಟ.೨೬.

೪೦. ಅದೇ ಪುಟ. ೭೮,

೪೧. ಅದೇ. ಪುಟ ೭೯,

೪೨. ಪ್ರೊ. ಬಿ. ಷೇಕ್ ಅಲಿ, ಪ್ರೊ. ಕೆ.ಎಸ್. ಶಿವಣ್ಣ(ಸಂ), ಪೂರ್ವೋಕ್ತ, ಸಂ.೩. ಪುಟ.೯೪.

೪೩. ಡಾ. ಎಚ್. ತಿಪ್ಪೇರುದ್ರಸ್ವಾಮಿ, ಪೂರ್ವೋಕ್ತ, ಪುಟ೨೦೮-೨೦೯

೪೪. ಎಸ್.ಗುರುರಾಜಚಾರ್, ಸಮ್ ಆಸ್ಪೆಕ್ಟ್ಸ್ ಆಫ್ ಎಕಾನಾಮಿಕ್ ಆಂಡ್ ಸೋಷಿಯಲ್ ಲೈಫ್

೪೫. ಇನ್ ಕರ್ನಾಟಕ (ಎ.ಡಿ.೧೦೦೦–೧೩೦೦) ಮೈಸೂರು, ೧೯೭೪, ಪುಟ. ೧೧೩.

೪೬. ಅದೇ ಪುಟ. ೧೧೩.

೪೭. ಎಂ. ಚಿದಾನಂದಮೂರ್ತಿ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ೧೯೭೯, ಪುಟ.೪೦೨.

೪೮. ಎಸ್.ಗುರುರಾಜಚಾರ್, ಪೂರ್ವೋಕ್ತ, ಪುಟ.೬೯.

೪೯. ಅದೇ ಪುಟ. ೭೭ ರಿಂದ ೮೩.

೫೦. ಅದೇ ಪುಟ. ೧೬೪.

೫೧. ಎಂ. ಚಿದಾನಂದಮೂರ್ತಿ, ಪೂರ್ವೋಕ್ತ, ಪುಟ. ೪೦೫.

೫೨. ಡಾ. ಬಸವರಾಜ ಸಬರದ, ಪೂರ್ವೋಕ್ತ, ಪುಟ. ೨೦.

೫೩. ಎಂ. ಚಿದಾನಂದಮೂರ್ತಿ, ಪೂರ್ವೋಕ್ತ, ಪುಟ. ೨೫೫.

೫೪. ಡಾ. ಬಸವರಾಜ ಸಬರದ, ಪೂರ್ವೋಕ್ತ, ಪುಟ. ೨೦.

೫೫. ಹೊಸತು ವಾಚಿಕೆ ಇತಿಹಾಸ ಪರಾಮರ್ಶೆ (ಇತಿಹಾಸ ಕುರಿತ ಲೇಖನಗಳು) ೨೦೦೫, ಪುಟ.೭೨.

೫೬. ಪಂಡಿತ ಎಸ್. ಬಸಪ್ಪ (ಸಂ) ದೇವಕವಿಕೃತ ಮರುಳಸಿದ್ಧಕಾವ್ಯ ೧೯೭೭, ಪುಟ. ೧೨,–೫೦.

೫೭. ಅದೇ ಪುಟ. ೩೯, ೧೯೭೭.

೫೮. ಡಾ. ಕೆ ಮೋಹನ ಕೃಷ್ಣ ರೈ, ಪ್ರಭುತ್ವ ಮತ್ತು ಜನತೆ ೨೦೦೪, ಪುಟ.೬೭.

೫೯. ಡಾ. ಎಸ್. ವಿದ್ಯಾಶಂಕರ, ವೀರಶೈವ ಪುರಾಣಗಳು ಒಂದು ಅಧ್ಯಯನ ೧೯೮೨, ಪುಟ. ೧೦೬.

೬೦. ಎಂ.ಜವರಯ್ಯ, ದಲಿತವರ್ಗದ ಕೆಲವು ಶರಣರು ಒಂದು ವಿಶ್ಲೇಷಣೆ, ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಹೆಚ್.ಡಿ. ಪ್ರಬಂಧ ೧೯೮೬, ಪುಟ. ೧೩.

೬೧. ಪಂಡಿತ ಎಸ್ ಬಸಪ್ಪ (ಸಂ), ಪೂರ್ವೋಕ್ತ, ಪುಟ. ೯೭.

೬೨. ಡಾ. ಬಸವರಾಜ ಸಬರದ ಪೂರ್ವೋಕ್ತ, ಪುಟ. ೨೧.

೬೩. ಲಕ್ಷ್ಮಣ್ ತೆಲಗಾವಿ ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು ೧೯೯೯, ಪುಟ. ೨೪.

೬೪. ಡಾ. ಕೆ. ಮೋಹನ ಕೃಷ್ಣ ರೈ, ಪೂರ್ವೋಕ್ತ, ಪುಟ. ೬೭.

೬೫. ತರಳಬಾಳು ರಜತೋತ್ಸವ ಸಂಚಿಕೆ ಪೂರ್ವೋಕ್ತ, ಪುಟ. ೧೬- ೧೭.

೬೬. ಹೆಚ್. ದೇವೀರಪ್ಪ ಮಹದೇವ ಬಣಕಾರ(ಸಂ), ಪೂರ್ವೋಕ್ತ, ಪುಟ. ೧೦.

೬೭. ಅದೇ ಪುಟ ೧೫,

೬೮. ಡಾ. ಕೆ. ಮೋಹನ ಕೃಷ್ಣ ರೈ, ಪೂರ್ವೋಕ್ತ, ಪುಟ. ೬೭.

೬೯. ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಪೂರ್ವೋಕ್ತ, ಪುಟ. ೧.

೭೦. ಎನ್.ಎಂ.ರವಿಕುಮಾರ ಡಾ.ಎ.ವೃಷಭೇಂದ್ರಚಾರ್(ಸಂ),ಮುನ್ನಡೆಯ ಕೂಡ್ಲಿಗಿ (ಕೂಡ್ಲಿಗಿ ತಾಲೂಕಿನ ಸಮಗ್ರ ದರ್ಶನ) ೧೯೯೮, ಪುಟ.೧.

೭೧. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪುಟ.೪೩.

೭೨. ಡಾ.ಆರ್.ಎಂ.ಷಡಕ್ಷರಯ್ಯ(ಲೇ), ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ ೨೦೦೩, ಪುಟ. ೭

೭೩. ಪಂಡಿತ ಎಸ್. ಬಸಪ್ಪ (ಸಂ), ಪೂರ್ವೋಕ್ತ, ಪುಟ. ೧೧೨.

೭೪. ತರಳಬಾಳು ರಜತೋತ್ಸವ ಸಂಚಿಕೆ. ೧೯೬೭, ಪುಟ. ೬.

೭೫. ಪಂಡಿತ್ ಎಸ್.ಬಸಪ್ಪ (ಸಂ), ಪೂರ್ವೋಕ್ತ, ಪುಟ. ೧೨.

೭೬. ಪಂ. ಎಸ್. ಬಸಪ್ಪ (ಸಂ), ಪೂರ್ವೋಕ್ತ, ಪುಟ. XV, XVI.

೭೭. ಅದೇ ಪು. ೨೬

೭೮. ಅ.ನ. ಕೃಷ್ಣರಾಯ (ಸಂ), ದೇವಕವಿ ಮರುಳಸಿದ್ಧಕಾವ್ಯ ೧೯೪೫.

೭೯. ಬಿ.ಡಿ.ಜತ್ತಿ, ಎಸ್.ಎಸ್.ಮಳೀಮಠ(ಸಂ), ಬಸವೇಶ್ವರರ ಸಮಕಾಲೀನರು ೧೯೭೬, ಪುಟ. ೨೩೫- ೨೩೬.

೮೦. ಹೆಚ್.ದೇವೀರಪ್ಪ ಮಹದೇವ ಬಣಕಾರ(ಸಂ), ಪೂರ್ವೋಕ್ತ, ಪುಟ. ೮೫.

೮೧. ಬಿ.ಡಿ. ಜತ್ತಿ , ಎಸ್.ಎಸ್. ಮಳೀಮಠ ಪೂರ್ವೋಕ್ತ, ಪುಟ. ೨೪೨.

೮೨. ಅ.ನ.ಕೃಷ್ಣರಾಯ (ಸಂ), ಪೂರ್ವೋಕ್ತ, ಪುಟ. ೧೦.

೮೩. ಮೂಡೂರು ಗ್ರಾಮ (ಹಾವೇರಿ ಜಿಲ್ಲಾ, ಹಾನಗಲ್ ತಾಲೂಕು ಅಕ್ಕಿಆಲೂರು ಬಳಿ ಇರುವ)ಕ್ಕೆ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ಗ್ರಾಮದ ಹಿರಿಯ ಮುಖ್ಯಸ್ಥರಾದ ಮಾಸಣ್ಣನವರ ಅಜ್ಜಪ್ಪ, (೯೪ ವರ್ಷ ವಯಸ್ಸು) ಮತ್ತು ಗೌಡ್ರ ಕೊಟ್ರೇಶಪ್ಪ (೯೬ ವರ್ಷ ವಯಸ್ಸು) ಹಿರಿಯರು ಮೂಡೂರು ಗ್ರಾಮದ ಮರುಳಸಿದ್ಧರ ಐತಿಹಾಸಿಕತೆಯ ಬಗ್ಗೆ ಮಾಹಿತಿ ನೀಡಿರುತ್ತಾರೆ.

೮೪. ಪಂಡಿತ, ಎಸ್. ಬಸಪ್ಪ (ಸಂ), ಪೂರ್ವೋಕ್ತ, ಪುಟ. ೧೨.

೮೫. ಅದೇ ಪುಟ ೨೬.

೮೬. ಪ್ರೊ. ಅರವಿಂದ ಮಾಲಗತ್ತಿ, ಜಾನಪದ ಅಭಿಮಾನ, ೨೦೦೪, ಪುಟ. ೨೩.

೮೭. ಡಾ. ಮೈಲಹಳ್ಳಿ ರೇವಣ್ಣ, ಮಾದಾರ ಸಂಸ್ಕೃತಿ ಮತ್ತು ಸಾಹಿತ್ಯ, ೨೦೦೪, ಪುಟ. ೧೩.

೮೮. ಪಂಡಿತ.ಎಸ್.ಬಸಪ್ಪ (ಸಂ), ಪೂರ್ವೋಕ್ತ, ಪುಟ. ೩೫.

೮೯. ಮಹದೇವ ಬಣಕಾರ (ಸಂ), ಪೂರ್ವೋಕ್ತ, ಪರಿಷ್ಕøತ ಪುಟ. ೩೩.

೯೦. ಪಂ.ಎಸ. ಬಸಪ್ಪ (ಸಂ), ಪೂರ್ವೋಕ್ತ, ಪುಟ. XVII.

೯೧. ಅದೇ ಪುಟ. ೫೫

೯೨. ತರಳಬಾಳು ರಜತೋತ್ಸವ ಸಂಚಿಕೆ, ಪೂರ್ವೋಕ್ತ, ಪುಟ. ೫೧

೯೩. ಡಾ. ದೇವರಕೊಂಡಾರೆಡ್ಡಿ (ಸಂ), ಪೂರ್ವೋಕ್ತ, ಸಂ. ೧ ಪುಟ. ೨೩೩– ೨೨೮.

೯೪. ಪಂ.ಎಸ್.ಬಸಪ್ಪ (ಸಂ), ಪೂರ್ವೋಕ್ತ, ಪುಟ.೫೭, ೫೮.

೯೫. ತರಳಬಾಳು ರಜತೋತ್ಸವ ಸಂಚಿಕೆ, ಪೂರ್ವೋಕ್ತ, ಪುಟ. ೫೧.

೯೬. ಪಂ.ಎಸ್. ಬಸಪ್ಪ (ಸಂ), ಪೂರ್ವೋಕ್ತ, ಪುಟ. ೧೧೩.

೯೭. ಅದೇ ಪುಟ. XI, XIII

೯೮. ತರಳಬಾಳು ರಜತೋತ್ಸವ ಸಂಚಿಕೆ, ೧೯೬೭, ಪುಟ. ೪೮.

೯೯. ಶಕುಂತಲಾ ಗೋಪಶೆಟ್ಟಿ, ರೇವಣಸಿದ್ಧರು ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿ ಪಿಎಚ್.ಡಿ. ಪ್ರಬಂಧ, ೨೦೦೩, ಪುಟ. ೩೭, – ೪೫.

೧೦೦. ಡಾ. ಎಂ. ಎಂ. ಕಲಬುರ್ಗಿ, ಶಾಸನಗಳಲ್ಲಿ ಶಿವಶರಣರು ೧೯೭೦, ಪುಟ ೪೫–೪೭

೧೦೧. ಪಂ. ಎಸ್. ಬಸಪ್ಪ (ಸಂ), ಪೂರ್ವೋಕ್ತ, ಪುಟ. ೭೨ – ೭೩.

೧೦೨. ಅದೇ ಪುಟ. XIII, XIV, XV, ೧೯೭೭.

೧೦೩. ಲಕ್ಷಣ್ ತೆಲಗಾವಿ (ಸಂ), 'ಹರತಿಸಿರಿ' ಹೆಚ್.ವಿ. ವೀರನಾಯಕ ನೆನಪಿನ ಸಂಪುಟ, ೧೯೮೭, ಪುಟ.೧೦೬.

೧೦೪. ಡಾ ವಿರೂಪಾಕ್ಷಿ ಪೂಜಾರ ಹಳ್ಳಿ, ಪೂರ್ವೋಕ್ತ, ಪುಟ.೪೩.

೧೦೫. ರಮೇಶ ಕೆ. ಉಜ್ಜಯಿನಿಯ ಗ್ರಾಮಾಧ್ಯಯನ (ಅಪ್ರಕಟಿತ ಎಂ. ಫಿಲ್. ಪ್ರಬಂಧ), ೨೦೦೨.

೧೦೬. ಎನ್. ಎಂ. ರವಿಕುಮಾರ, ಡಾ. ಎ. ವೃಷಭೇಂದ್ರಾಚಾರ(ಸಂ), ಪೂರ್ವೋಕ್ತ, ಪುಟ.೨೧೨.

೧೦೭. ಡಾ. ಆರ್. ಎಂ. ಷಡಕ್ಷರಯ್ಯ, ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ ೨೦೦೩, ಪುಟ.೩, ೪.

೧೦೮. ಡಾ. ಎಂ.ಎಂ. ಕಲಬುರ್ಗಿ, ಪೂರ್ವೋಕ್ತ, ೪೫–೪೯.

೧೦೯. ಡಾ. ದೇವರಕೊಂಡಾರೆಡ್ಡಿ (ಸಂ), ಪೂರ್ವೋಕ್ತ, ಸಂ. ೧. ಬಳ್ಳಾರಿ ಜಿಲ್ಲೆ, ಪುಟ.೨೨೭–೨೨೮.

೧೧೦. ಪಂಡಿತ ಶ್ರೀ ಕಾಶೀನಾಥಶಸ್ತ್ರಿಗಳವರು, ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ಮಹಾಚಾರ್ಯ ತತ್ವ ೧೯೬೪, ಪುಟ.೧.

೧೧೧. ಅದೇ. ಪುಟ. ೩೫–೩೭, ೧೯೬೪.

೧೧೨. ಶಕುಂತಲ ಗೋಪಶೆಟ್ಟಿ , ಪುಟ.೩೭, ೩೮.

೧೧೩. ತರಳಬಾಳು ರಜತೋತ್ಸವ ಸಂಚಿಕೆ, ಪುಟ. ೧೯೬೭, ೩೦, – ೩೫.

೧೧೪. ಡಾ. ಬಿ.ಆರ್. ಹಿರೇಮಠ (ಸಂ), ಸಂಕೀರ್ಣ ವಚನ ಸಂಪುಟ, ೧೯೯೩, ಪುಟ.೨೮.

೧೧೫. ಪಂಡಿತ ಎಸ್. ಬಸಪ್ಪ (ಸಂ), ಪೂರ್ವೋಕ್ತ, ಪುಟ.೬೨.

೧೧೬. ಬಿ.ಎಲ್. ರೈಸ್ (ಸಂ), ಎಪಿಗ್ರಾಫಿಕ್ ಕರ್ನಾಟಕ್ (ಸಂ–೧೧), ದಾವಣಗೆರೆ ತಾಲೂಕು ಶಾಸನ ಸಂಖ್ಯೆ ೧೬೪, ೧೯೦೩, ಪುಟ.೫೩.

೧೧೭. ತರಳಬಾಳು ಸಂಚಿಕೆ ೧, ಸಂಪುಟ ೧, ೧೯೭೮, ಪುಟ. ೫೨-೫೫.

೧೧೮. ಹೆಚ್. ದೇವೀರಪ್ಪ , ಮಹದೇವ ಬಣಕಾರ (ಸಂ), ಪೂರ್ವೋಕ್ತ, ಪುಟ. ೮೭- ೮೮.

೧೧೯. ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಆ ಗ್ರಾಮದ ಹಿರಿಯ ಮುಖಂಡರೊಂದಿಗೆ ನಡೆಸಿದ ಸಂದರ್ಶನದ ಸಂದರ್ಭದಲ್ಲಿ ತಿಳಿದುಬಂದ ಮಾಹಿತಿ ಆಧಾರಿಸಿ ಈ ಅಂಶವನ್ನು ತಿಳಿಸಲಾಗಿದೆ.

೧೨೦. ಲಕ್ಷ್ಮಣ್ ತೆಲಗಾವಿ, ಡಾ. ಎಂ. ವಿ. ಶ್ರೀನಿವಾಸ (ಸಂ), ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು ಚಿತ್ರದುರ್ಗ ಜಿಲ್ಲೆಯ ಬೌದ್ಧ ಧರ್ಮದ ಕುರುಹುಗಳು ಲೇಖನದಿಂದ ೧೯೭೬, ಪುಟ.೨೮- ೨೯.

೧೨೧. ಡಾ. ಬಸವರಾಜ ಸಬರದ, ಪೂರ್ವೋಕ್ತ, ಪುಟ. ೨ – ೩.

೧೨೨. ಪ್ರೊ. ಒಡೆಯರ ಡಿ. ಹೆಗ್ಗಡೆ, ಶ್ರೀ ರೇವಣಸಿದ್ಧೇಶ್ವರ ಮತ್ತು ಶ್ರೀ ಬೀರೇಶ್ವರರು,೨೦೦೫, ಪುಟ. ೧ – ೩.

೧೨೩. ಪಂಡಿತ ಎಸ್. ಬಸಪ್ಪ (ಸಂ), ಪೂರ್ವೋಕ್ತ, ಪುಟ. XII.

೧೨೪. ಅ.ನ. ಕೃಷ್ಣರಾಯರು(ಸಂ), ಪೂರ್ವೋಕ್ತ, ೧೯೪೪.

೧೨೫. ಹೆರಂಜೆ ಕೃಷ್ಣಭಟ್ಟ ಮುರುಳೀಧರ ಉಪಾಧ್ಯ ಹಿರೆಯಡಕ(ಸಂ), ಗೋವಿಂದಪೈ, ಸಂಶೋಧನ ಸಂಪುಟ ೧೯೯೫, ಪುಟ.೮೭೪.

ಅಧ್ಯಾಯ ೪

೪.೪. ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು

೪.೪.೧. ದೇವಸ್ಥಾನಗಳು.

೪.೪.೨. ಮಠಗಳು.

೪.೪.೩. ಕರ್ನಾಟಕದ ಇತರ ಸ್ಥಳಗಳಲ್ಲಿನ ಸ್ಮಾರಕಗಳು.

೪.೪ ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು

ಕರ್ನಾಟಕದ ಶಿವಶರಣರ ಐತಿಹ್ಯಗಳಿಗೆ ಕೇವಲ ಪುರಾಣ, ಕಾವ್ಯಗಳು ಮಾತ್ರ ಆಧಾರವಾಗಲಾರವು ಅವುಗಳ ಜೊತೆಗೆ ಅತ್ಯಮೂಲ್ಯ ಐತಿಹಾಸಿಕ ಸಾಮಾಗ್ರಿಗಳೆನಿಸುವ ಶಾಸನ, ಕೈಪಿಯತ್ತು, ಶಿಲಾ ವಿಗ್ರಹ ಹಾಗೂ ಅವರ ಕುರುಹಿನ ನೆಲೆಗಳಾದ ಗವಿ, ಮಠ, ಮಂಟಪ ಸಮಾಧಿ ಹಾಗೂ ಅವರ ಸ್ಮಾರಕಗಳಾದ ದೇವಾಲಯ ಸ್ಥಳ–ನಿವೇಶನಗಳು ದೊರಕಿದರೆ ಅವರ ಚರಿತ್ರೆಗೆ ಇತಿಹಾಸದಲ್ಲಿ ನಿಷ್ಕಳಂಕವಾದ ಸ್ಥಾನ ಸಿಕ್ಕಿದಂತಾಗುತ್ತದೆ. ಕಲ್ಯಾಣ ಕ್ರಾಂತಿಯ ಅನಂತರದಲ್ಲಿ ಕರ್ನಾಟಕದ ಶಿವಶರಣರು ಸುಪ್ತ–ಗುಪ್ತಸ್ಥಿತಿಯಲ್ಲಿ ಉಳಿದು ಮುಂದೆ ವಿಜಯನಗರ ಸಾಮ್ರಾಜ್ಯದವರೆಗೆ ಕಾಲ ಪರಿಸ್ಥಿತಿಗಳು ಅವರ ಕಾರ್ಯ ಚಟುವಟಿಕೆಗಳಿಗೆ ಅಡ್ಡಿಯಾದಂತಿದೆಯೆಂಬ ವಿವರಗಳನ್ನು ಮಾತ್ರ ಈವರೆಗಿನ ಸಂಶೋಧಕರು ಒದಗಿಸಿದ್ದಾರೆ[೧]. ಆದರೆ ನಡೆದ ಸಂಗತಿಯೆ ಬೇರೆ ಕಲ್ಯಾಣ ಕ್ರಾಂತಿಯ ಅನಂತರದಲ್ಲೂ ಶರಣ ಸಾಹಿತ್ಯ–ಧರ್ಮ ಸಂಸ್ಕೃತಿಗಳು ಜಾಗೃತವಾಗಿಯೆ ಇದ್ದು ಅವುಗಳ ಪ್ರಸಾರವು ಕರ್ನಾಟಕದಲ್ಲಿ ತೆರೆಮರೆಯಲ್ಲಿ ಶಿವಶರಣರ ಹೋರಾಟವು ಜಾಗೃತವಾಗಿಯೆ ಇದ್ದು, ಶಿವಶರಣರ ಹೋರಾಟ ಮತ್ತು ಶರಣ ಸಾಹಿತ್ಯದ ಪ್ರಸಾರ ತೆರೆ ಮರೆಯಲ್ಲಿ ಜಾಗೃತವಾಗಿಯೇ ಇದ್ದು. ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಲ್ಲಿಯೂ ವ್ಯಾಪಕವಾಗಿ ಹಬ್ಬಿದೆ. ಅಂತಹವರಲ್ಲಿ ೧೨ ನೇ ಶತಮಾನದ ಶಿವಶರಣ ಮರುಳಸಿದ್ಧರು ಒಬ್ಬರು, ಇವರು ದಲಿತ ವರ್ಗದ ಸಮುದಾಯವೊಂದರಲ್ಲಿ ಜನ್ಮ ಪಡೆದವರಾಗಿದ್ದಾರೆ. ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಉಜ್ಜಯಿನಿ ಹಾಗೂ ಅವರ ಕಾರ್ಯ ಕ್ಷೇತ್ರ ಇಲ್ಲಿಂದ ಮುಂದೆ ಇವರು ಕರ್ನಾಟಕ ಮತ್ತು ಹೊರಗಿನ ನೆರೆಯ ರಾಜ್ಯಗಳಲ್ಲಿಯೂ ಇವರ ನೆಲೆಗಳು ಮತ್ತು ಸ್ಮಾರಕಗಳು ಗುರುತಿಸಲ್ಪಡುತ್ತವೆ. ಹೀಗಾಗಿ ನಾವು ಕರ್ನಾಟಕದಲ್ಲಿ ಪ್ರಮುಖವಾಗಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳ ಚರಿತ್ರೆ ನಮಗೆ ಮಹತ್ವದ ಹಿನ್ನೆಲೆಯನ್ನು ಒದಗಿಸುತ್ತವೆ. ಅಲ್ಲದೆ ಸ್ತುತಿ, ಪವಾಡ ಐತಿಹ್ಯದಂತ ಕಥೆಗಳಿಂದ ಕೂಡಿವೆ.

ಇಂದಿನ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಉಜ್ಜಯಿನಿ ಮತ್ತು ಅದರ ಸುತ್ತ ಪರಿಸರವನ್ನು ಕ್ಷೇತ್ರ ಪರಿವೀಕ್ಷಣೆಗೈದರೆ ಮರುಳಸಿದ್ಧರಿಗೆ ಸಂಬಂಧಿಸಿದ ನೆಲೆಗಳು ಮತ್ತು ಕೆಲವು ಸ್ಮಾರಕಗಳನ್ನು ಕೆಲಮಟ್ಟಿಗೆ ಸಂಶೋಧಕರು ಶೋಧನೆ ಮಾಡಿದ್ದಾರೆ. 'ಉಜ್ಜನಿ' ಎಂಬಗ್ರಾಮ ಕೂಡ್ಲಿಗಿ ತಾಲೂಕಿನ ದಕ್ಷಿಣ (ನೈಋತ್ಯ) ದಿಕ್ಕಿಗಿದೆ. ಇದು ಚಾರಿತ್ರಿಕ ಮತ್ತು ಧಾರ್ಮಿಕವಾಗಿ ಮಹತ್ವ ಪಡೆದ ಕ್ಷೇತ್ರ ಕೂಡ್ಲಿಗಿ ತಾಲೂಕು ಕೇಂದ್ರದಿಂದ ೨೮ ಕಿ. ಮೀ. ಮತ್ತು ಕೊಟ್ಟೂರು ಪಟ್ಟಣದಿಂದ ೧೫ ಕಿ.

ಮೀ. ಅಂತರದಲ್ಲಿದೆ[೨]. ಉಜ್ಜಯಿನಿ ಪರಿಸರದಲ್ಲಿನ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು ಈ ಭಾಗದಲ್ಲಿ ವ್ಯಾಪಕವಾಗಿ ಹಬ್ಬಿವೆ. ಪ್ರತಿಯೊಂದು ನೆಲೆಗಳು ಮತ್ತು ಸ್ಮಾರಕಗಳು ಮರುಳಸಿದ್ಧರ ಜೀವನ, ಸಾಧನೆ, ಪವಾಡ ಕಥೆಗಳನ್ನು ಪರಿಚಯಿಸುತ್ತವೆ.

❖ **ಕಗ್ಗಲ್ಲಪುರ,** ಉಜ್ಜಿನಿಯಿಂದ ೫ ಕಿ.ಮೀ. ದೂರದಲ್ಲಿದೆ. ಇದು ಭೈರದೇವರಗುಡ್ಡದ ಸಮೀಪವಿದೆ. ಈಗ ಇದು ಬೇಚಾರಕು ಗ್ರಾಮವಾಗಿದೆ. ಮರುಳಸಿದ್ಧರ ಮೂಲ ಜನ್ಮ ಸ್ಥಳವಾಗಿದೆ. ದಲಿತರ ಮನೆಯಲ್ಲಿ ಹುಟ್ಟಿದ ಪ್ರತೀತಿ ಇದೆ. ಈ ಊರಲ್ಲಿ ಮಠ, ಮನೆಗಳು, ತೇರುಬೀದಿ ಇವುಗಳ ಅವಶೇಷಗಳು ಈಗಲೂ ಗೋಚರಿಸುತ್ತವೆ.[೩]

❖ **ಉಜ್ಜಯಿನಿಯ ಮರುಳಸಿದ್ಧೇಶ್ವರ ದೇವಾಲಯ,** ಈ ದೇವಸ್ಥಾನವು ಮರುಳಸಿದ್ಧರ ಸಂಬಂಧವಾದ ಸ್ಮಾರಕಗಳಲ್ಲಿ ಅತ್ಯಂತ ಮಹತ್ವದ ಸ್ಮಾರಕವಾಗಿದೆ. ಕೂಡ್ಲಿಗಿ ತಾಲೂಕು ಕೇಂದ್ರ ಸ್ಥಳದಿಂದ ನೈಋತ್ಯ ದಿಕ್ಕಿಗಿರುವ ಉಜ್ಜಿನಿ ಎಂಬಲ್ಲಿ ಈ ದೇವಾಲಯವನ್ನು ಸು- ಕ್ರಿ ಶ. ೧೦೫೪ ರಲ್ಲಿ ಸ್ಥಾಪಿಸಿದರೆನ್ನಲಾಗಿದೆ. ಚಾಲುಕ್ಯ-ಹೊಯ್ಸಳ ಶೈಲಿಯ ಪ್ರಭಾವವನ್ನು ಈ ದೇವಾಲಯ ಹೊಂದಿದೆ[೪]. ಮರುಳಸಿದ್ಧರೇ ಜಕಣಾಚಾರ್ಯರಿಂದ ಈ ದೇವಾಲಯ ನಿರ್ಮಿಸಿ ಅಲ್ಲಿಯೇ ಸಮಾಧಿಸ್ಥರಾದರೆಂದು ಐತಿಹ್ಯವುಂಟು. ಜಕಣಾಚಾರಿ ಎಂಬುದು ಬಹುಶ; ಕಲ್ಪಿತ ಹೆಸರೇ ಹೊರತು ವಾಸ್ತವ ವ್ಯಕ್ತಿ ಅಲ್ಲ ಎಂಬುದಾಗಿ ಡಾ.ಎಂ.ಚಿದಾನಂದಮೂರ್ತಿ ಅಭಿಪ್ರಾಯಪಡುತ್ತಾರೆ[೫].

ಈ ದೇವಾಲಯವು ಸುಂದರ ಶಿಲ್ಪಕಲೆಯಿಂದ ಕೂಡಿದುದಾಗಿದೆ. ಆದ್ದರಿಂದಲೆ 'ಹಂಪಿಯನ್ನು ಹೊರನೋಡು, ಉಜ್ಜಯಿನಿಯನ್ನು ಒಳನೋಡು' ಎಂಬ ನಾಣ್ನುಡಿ ಬಂದಿದೆ. ಮರುಳಸಿದ್ಧರ ದೇವಾಲಯಕ್ಕೆ ಎರಡು ಪ್ರವೇಶ ದ್ವಾರಗಳು ಉತ್ತರ ಮತ್ತು ದಕ್ಷಿಣಕ್ಕಿವೆ. ಉತ್ತರ ದ್ವಾರಕ್ಕೆ ಎತ್ತರವಾದ ಗೋಪುರವಿದ್ದು ಇದನ್ನು ತಂಗಾಳಿಗೋಪುರವೆಂದು ಕರೆಯುವರು. ದಕ್ಷಿಣ ದ್ವಾರಕ್ಕೆ ಕೈಲಾಸ ದ್ವಾರವೆಂದು ಕರೆಯುವರು. ದಕ್ಷಿಣದ ಮಹಾದ್ವಾರದ ಮೇಲೆ ಕೈಲಾಸವನ್ನು ನಿರ್ದೇಶಿಸುವ ಇತ್ತೀಚಿನ ವರ್ಣಮಯ ಭವ್ಯ ಶಿವಪಾರ್ವತಿಯರ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಇದನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದೆ. ಈ ದ್ವಾರಕ್ಕೆ ಅಧಿಷ್ಠಾನ, ಭಿತ್ತಿ ಮತ್ತು ಛಾವಣಿ ಇವೆ. ಉತ್ತರದ ಮಹಾದ್ವಾರಕ್ಕೆ ಎತ್ತರವಾದ ಗೋಪುರವಿದ್ದು ಅದರಲ್ಲಿ ನಾಲ್ಕು ಅಂತಸ್ತುಗಳಿವೆ. ಅದನ್ನು ಗಾರೆ ಮತ್ತು ಇಟ್ಟಿಗೆಗಳಿಂದ ಕಟ್ಟಲಾಗಿದೆ. ಪ್ರತಿ ಅಂತಸ್ತುಗಳ ಗೋಡೆಗಳಲ್ಲಿ ಅರ್ಧಗಂಬ ಮತ್ತು ಪಂಜರಗಳ ಸಾಲುಗಳಿವೆ. ತಲಾ ಒಂದು ಅಂತಸ್ತಿನ ಮಧ್ಯೆ ಮುಖದಲ್ಲಿ ಒಂದರ ಮೇಲೆ ಒಂದರಂತೆ ತೆರೆದ ದ್ವಾರಗಳಿವೆ. ಈ ಮಹಾದ್ವಾರವನ್ನು ಶಿಲೆಯಿಂದ ನಿರ್ಮಿಸಿದ್ದು ಅದಕ್ಕೆ ಉಪಪೀಠ, ಅಧಿಷ್ಠಾನ

ಎತ್ತರವಾದ ಭಿತ್ತಿ ಮತ್ತು ಕಪೋತ ಪಟ್ಟಿಕೆಗಳಿವೆ. ಅದರ ಪ್ರವೇಶದ್ವಾರಕ್ಕೆ ಎತ್ತರವಾದ ಬಾಗಿಲುಚೌಕಟ್ಟನ್ನು ಕೂಡಿಸಿದ್ದು ಅದರ ಮುಖಗಳಲ್ಲಿ ವಿವಿಧ ಚಿತ್ರಗಳ ಅಲಂಕರಣವಿದೆ. ಕೆಳಭಾಗದಲ್ಲಿ ಸೇವಕಿಯು ಚೌರಿಯನ್ನು ಹಿಡಿದುಕೊಂಡು ನಿಂತಿದ್ದಾಳೆ. ಅದರ ಬದಿಗಿನ ಒಳ ಮುಖ ಪಟ್ಟಿಕೆಯಲ್ಲಿ ಶೈವ ದ್ವಾರ ಪಾಲಕ ತ್ರಿಭಂಗಿಯಲ್ಲಿ ನಿಂತಿದ್ದಾನೆ. ಅಧಿಷ್ಠಾನವುಳ್ಳ ಕಟ್ಟೆಗಳಿವೆ. ಅಧಿಷ್ಠಾನದಲ್ಲಿ ಸಿಂಹ, ಆಂಜನೇಯ ಮತ್ತು ನಾಗರ ಹಾವಿನ ಉಬ್ಬುಶಿಲ್ಪಗಳಿವೆ. ಉತ್ತರದ ಮಹಾದ್ವಾರದ ಎದುರಿಗೆ ಭವ್ಯವಾದ ಸ್ತಂಭಗಳುಳ್ಳ ಒಂದು ಉಯ್ಯಾಲೆ ಮಂಟಪವಿದೆ[೬].

ಶ್ರೀ ಮರುಳಸಿದ್ಧ ದೇವಾಲಯವು ಅಲ್ಲಿಯ ದೊಡ್ಡ ದೇವಾಲಯ ದಕ್ಷಿಣ ಉತ್ತರವಾಗಿ ಕಟ್ಟಿದೆ ಈ ದೇವಾಲಯವು ಉತ್ತರಕ್ಕೆ ಮುಖಮಾಡಿದ್ದು ಅದರ ಪ್ರವೇಶಗಳು ಮೂರು ಕಡೆಗಳಲ್ಲಿವೆ. ಅದರ ತಳಪಾಯದಲ್ಲಿ ಐದು ಗರ್ಭ ಗೃಹಗಳು ಒಂದು ಅಂತರಾಳ, ಸಭಾಮಂಟಪ, ಮಹಾಮಂಟಪ ಮತ್ತು ಮೂರು ಮುಖ ಮಂಟಪಗಳಿವೆ. ಮೂಲಗರ್ಭಗೃಹವು ಚೌಕಾಗಿದ್ದು ಅದರ ನಾಲ್ಕು ಮೂಲೆಗಳಲ್ಲಿ ಅರ್ಧಕಂಬಗಳಿವೆ. ಗರ್ಭಗೃಹದ ಶಿಲಾವೇದಿಕೆಯ ಮಧ್ಯ ಶಿವಲಿಂಗವಿದೆ. ಆ ಶಿವಲಿಂಗದ ಹೆಸರು ಸಿದ್ಧೇಶ್ವರ ಅಥವಾ ಮರುಳಸಿದ್ಧೇಶ್ವರ ಎನ್ನುವರು. ಶಿವಲಿಂಗದ ಪೀಠದ ಬುಡಭಾಗ ಚೌಕಾಗಿಯೂ, ಮೇಲಿನ ಭಾಗ ವೃತ್ತಾಕಾರವಾಗಿದೆ. ಗರ್ಭಗೃಹದ ದ್ವಾರಪಟ್ಟಿಯಲ್ಲಿ ನಾಲ್ಕು ಶಾಖೆಗಳಿವೆ. ಅದರಲ್ಲಿ ರತ್ನ ಲತಾಸುರಳಿ ಅರ್ಧಗಂಭ ಮತ್ತು ತಲೆ ಮೇಲಕ್ಕೆತ್ತಿದ ಸಿಂಹಗಳ ಅಂಕಣಗಳ ಸಾಲುಗಳಿವೆ.

ಗರ್ಭಗೃಹದ ಮುಂದಿನ ಭಾಗವೇ ಅಂತರಾಳ, ಅಂತರಾಳವು ಚೌಕಾಗಿದ್ದು ಅದರ ನಾಲ್ಕು ಮೂಲೆಗಳಲ್ಲಿ ಅರ್ಧಗಂಭಗಳಿವೆ. ಅಂತರಾಳದ ದ್ವಾರಪಟ್ಟಿಯಲ್ಲಿ ಕೆಳಪಟ್ಟಿಕೆಯಲ್ಲಿ ಶೈವದ್ವಾರ ಪಾಲಕರು ತ್ರಿಭಂಗಿಯಲ್ಲಿ ನಿಂತಿರುವರು. ದ್ವಾರಪಾಲಕರ ಮೇಲಿನ ಪಟ್ಟಿಕೆಗಳಲ್ಲಿ ಜಾಲಂಧ್ರಗಳಿವೆ. ಅಂತರಾಳದ ಮುಂದಿನ ಮಂಟಪವೇ ಸಭಾಮಂಟಪ ಈ ಮಂಟಪದಲ್ಲಿ ನಾಲ್ಕು ಸ್ತಂಭಗಳುಳ್ಳ ಸ್ವಲ್ಪ ಎತ್ತರದ ಚೌಕಾಕಾರದ ರಂಗಮಂಟಪವಿದೆ. ಅದರ ಮಧ್ಯೆ ಛತ್ರಿಯಂತೆ ಗೋಲಾಕಾರದ ಸಹಸ್ರದಳವುಳ್ಳ ಕಮಲದ ಭುವನೇಶ್ವರಿಯು ವೈಶಿಷ್ಟ್ಯ ಪೂರ್ಣವಾಗಿದೆ. ಕಂಬಗಳ ಭೋದುಗೆಯ ಮೇಲೆ ಭಿತ್ತಿನಲ್ಲಿ ಚೌಕಾದ ಪಟ್ಟಿಕೆಗಳಿದ್ದು ಅದರ ಮೇಲೆ ಅಷ್ಟ ಮುಖಗಳ ಪಟ್ಟಿಯಿದೆ. ಅದರಲ್ಲಿ ಅಷ್ಟದಿಕ್ಪಾಲಕರು ಮತ್ತು ರತ್ನಪಟ್ಟಿಕೆಗಳ ಅಲಂಕರಣವಿದೆ[೭]. ಸಭಾಮಂಟಪದಲ್ಲಿ ಗಣೇಶ, ನಂದಿ ವಿಗ್ರಹ, ಉತ್ಸವ ಮೂರ್ತಿ, ವಿಶ್ವರಾಧ್ಯ ಮರುಳಾರಾಧ್ಯ, ಸಿದ್ಧರಾಮ, ಭಕ್ತವಿಭೂಷಣ, ಪಾಪ ವಿಮೋಚನ, ಮಳೆಮಲ್ಲಿಕಾರ್ಜುನ, ವೀರಭದ್ರನ ವಿಗ್ರಹಗಳು ಪ್ರತಿಷ್ಠಾಪಿಸಲ್ಪಟ್ಟಿವೆ[೮]. ಸಭಾಮಂಟಪದಲ್ಲಿ ಹತ್ತು ಕಂಬಗಳು ಒಟ್ಟು ಎರಡು ಸಾಲುಗಳಲ್ಲಿ ೧೫ ಅಂಕಣಗಳಲ್ಲಿವೆ. ಒಂದು ಸಾಲಿನಲ್ಲಿ ಐದು

ಕಂಬಗಳಿವೆ. ಸಭಾಮಂಟಪಕ್ಕೆ ಹೊಂದಿ ಮೂಲಗರ್ಭಗೃಹ ಭಾಗಸೇರಿ ಒಟ್ಟು ಐದು ಗರ್ಭಗೃಹಗಳು ಹಾಗೂ ಹತ್ತು ದೇವಕೋಷ್ಠಗಳನ್ನು ಕಾಣಬಹುದು. ಸಭಾಮಂಟಪ ಮತ್ತು ಉತ್ಸವ ಮಂಟಪಗಳ ಬದಿಗೆ ನಂದಿಯ ವಿಗ್ರಹವಿದೆ. ಸಭಾಮಂಟಪದ ಬಲಗಡೆಯ ಎರಡನೇ ಗರ್ಭ-ಗೃಹದಲ್ಲಿ ಭವ್ಯವಾದ ಗೋಪಾಲಕೃಷ್ಣನ ವಿಗ್ರಹ ಪ್ರತಿಷ್ಠಾಪಿಸಲಾಗಿದೆ[೯]. ಈ ದೇವಸ್ಥಾನದ ಇನ್ನೊಂದು ವಿಶೇಷವೆಂದರೆ ಶೈವಪೂಜಾ ಪರಂಪರೆಯ ದೇವಸ್ಥಾನದಲ್ಲಿ ಶ್ರೀ ಕೃಷ್ಣನ ವಿಗ್ರಹ ಪೂಜೆಗೊಳ್ಳುತ್ತಿರುವುದು ಧರ್ಮ ಸಮನ್ವಯಕ್ಕೆ ಹೆಸರಾಗಿದೆ. ಈ ದೇವಾಲಯದ ಪೂರ್ವ ಪಶ್ಚಿಮಕ್ಕೆ ಎರಡು ದ್ವಾರಗಳಿವೆ. ಮೊದಲನೆಯ ನವರಂಗದ ಪಶ್ಚಿಮ ದ್ವಾರದ ಮುಂಭಾಗದಲ್ಲಿ ಎರಡು ಜಗಲಿಗಳ ಮೇಲೆ ಒಂದು ಕಡೆ ಒಂದು ಶಿಲಾಲಿಪಿಯೂ, ಮತ್ತೊಂದು ಕಡೆ ಕತ್ತಿಯನ್ನು ಹಿಡಿದಿರುವ. ಒಂದು ಗಂಡು ವಿಗ್ರಹವೂ ಇದೆ. ಈ ಗಂಡು ವಿಗ್ರಹವು ಮರುಳಸಿದ್ಧನ ಸಾಕು ತಂದೆಯಾದ ಕಗ್ಗಲ್ಲಗೌಡನೆಂದು ಹೇಳಲಾಗುತ್ತದೆ. ಕ್ಷೇತ್ರ ಪಾಲಕನೆಂದು ದೇವಸ್ಥಾನದವರು ಹೇಳುತ್ತಾರೆ. ನವರಂಗದ ಮುಂದಕ್ಕೆ ಪೂರ್ವಭಾಗದಲ್ಲಿ ಪಶ್ಚಿಮ ಮುಖವಾದ ಎತ್ತರವಾದ ಮತ್ತು ಸುಂದರವಾದ ಬಸವಣ್ಣ ಇದೆ. ಈ ಕಂಬಗಳ ಮಧ್ಯೆ ಒಂದು ಜಗುಲಿ ಇದೆ. ಈ ಜಗಲಿಯನ್ನು ಬ್ರಹ್ಮದೇವರೆಂದೂ ಮರುಳಸಿದ್ಧರ ಆಪ್ತ ಶಿಷ್ಯರಾಗಿ ಕೆಲಸಮಾಡಿದ ಜಟ್ಟಿಗ, ಭೈರ, ಬ್ರಹ್ಮ ಮತ್ತು ಹನುಮ ಇವರುಗಳ ಸ್ಮಾರಕವಾಗಿ ಈ ಜಗುಲಿಯು ನಿರ್ಮಿಸಲ್ಪಟ್ಟಿದೆಯೆಂದೂ ಜನರು ಐತಿಹ್ಯ ಹೇಳುತ್ತಾರೆ. ಈ ದೇವಸ್ಥಾನದ ಸುತ್ತ ಕಲ್ಲುಗಳಿಂದ ಕಟ್ಟಿದ ವಿಸ್ತಾರವಾದ ಪೌಳಿ ಇದೆ. ಈ ಪೌಳಿಯ ಒಳಗಡೆ ಮರುಳಸಿದ್ಧರ ದೇವಸ್ಥಾನದ ಎಡಭಾಗಕ್ಕೆ ಎಂದರೆ ಪಶ್ಚಿಮದಿಕ್ಕಿನಲ್ಲಿ ಅಮ್ಮನವರ ಗುಡಿ ಅಥವಾ ಅದನ್ನು ಗೌರಮ್ಮನ ದೇವಾಲಯವೆಂದು ಹೇಳಲಾಗುತ್ತದೆ[೧೦].

ಸಿದ್ಧೇಶ್ವರ ದೇವಾಲಯದ ಗರ್ಭಗೃಹದ ಹೊರಭಾಗದ ಶಿಖರ ಅತ್ಯಂತ ಸುಂದರ ಶಿಲ್ಪಗಳಿಂದ ರಚನೆಯಾಗಿದೆ. ಪ್ರತಿವರ್ಷ ಜಾತ್ರೆಯಲ್ಲಿ ವ್ಯಾಪಕವಾಗಿ ಸುರಿಯುವ ತೈಲದಿಂದ ಶಿಥಿಲದ ಸ್ಥಿತಿಗೆ ರೂಪಾಂತರಗೊಂಡಿದೆ. ದೇವಾಲಯದ ಮಹಾದ್ವಾರವನ್ನು ಉಚ್ಚಂಗಿಯ ಪಾಂಡ್ಯರು ನಿರ್ಮಿಸಿದರೆಂದು ಹೇಳಲಾಗುತ್ತದೆ. ಇದರ ಪಶ್ಚಿಮಾಭಿಮುಖವಾಗಿ ಬೃಹದಾಕಾರದ ನಂದಿಯ ವಿಗ್ರಹವಿದ್ದು. ದೊಡ್ಡಗಾತ್ರದ ಅಂಕಣವನ್ನು ಆವರಿಸಿರುವುದರಿಂದ ಅಂಕಣ(ಳ) ಬಸವನೆಂದು ಕರೆಯುವರೂಢಿಯಿದೆ. ಸದ್ಧರ್ಮಪೀಠದ ಮೂಲಗೋತ್ರ ನಂದಿ ವಿಗ್ರಹದಿಂದ ಕೂಡಿದೆ. ಅದಕ್ಕಾಗಿಯೇ ಧ್ವಜಸ್ತಂಭದ ಮೇಲೆ ನಿಂತಿರುವ ಮೂರ್ತಿಯನ್ನು ನಿರ್ಮಿಸಲಾಗಿದೆ[೧೧]. ಅರಕೆಗುಡಿ ಎಂದು ಆರ್ಥಕ್ಕೆ ನಿಂತಿರುವ ಪೌಳಿಯನ್ನು ಹೊಕ್ಕಾಗ ಲಕ್ಷ್ಮಿಸ್ತೂಪವಿದೆ. ಧ್ಯಾನಮಗ್ನರಾಗಿರುವ ಮೂವರು ಋಷಿಗಳಂತ್ತಿರುವ ಚಿತ್ರಗಳಿದ್ದು, ಇಬ್ಬರು ಸಖಿಯರು ಚಾಮರ ಬೀಸುತ್ತಿದ್ದಾರೆ

ಮುಂಭಾಗದಿಂದ ನೋಡಿದರೂ ಮತ್ತು ಹಿಂಭಾಗದಿಂದ ನೋಡಿದರೂ ಒಂದೇ ಮಾದರಿಯಲ್ಲಿಕೆತ್ತಲಾಗಿದೆ. ಮೃದುಬಳಪದ ಕಲ್ಲಿನಿಂದ ಕೆತ್ತಿದ್ದು, ಅತಿಯಾದ ಬಿಸಿಲಿಗೆ ಸೀಳುಬಿಟ್ಟಿದೆ. ಇದೇ ಆವರಣದ ಎಡಭಾಗದಲ್ಲಿ ಕೆತ್ತಿರುವ ನಾಲ್ಕೈದು ಅಡಿ ಎತ್ತರವಿರುವ ಮಲಗಿದ ನಂದಿ ಮತ್ತೊಂದು ಆಕರ್ಷಣೆ. ಶಿಲ್ಪಕೆತ್ತನೆಯಲ್ಲಿ ಅತ್ಯಂತ ಸೂಕ್ಷ್ಮವೂ ಶಿಲ್ಪಿಗಾರನ ಕೈ ಚಳಕ ಭಾರತೀಯ ಶಿಲ್ಪಕಲೆಯಲ್ಲಿ ಕೌತುಕವನ್ನುಂಟುಮಾಡುವ ಸಹಸ್ರದಳಕಮಲವು ಏಕಶಿಲೆಯಿಂದ ರಚನೆಯಾಗಿದೆ[೧೨]. ಒಟ್ಟಿನಲ್ಲಿ ಈ ದೇವಾಲಯ ವೇಸರ, ಚಾಲುಕ್ಯ ಹೊಯ್ಸಳ, ವಿಜಯನಗರ ಶಿಲ್ಪಶೈಲಿಗಳನ್ನು ಮಡಿಲಲ್ಲಿಟ್ಟುಕೊಂಡಿರುವ ಈ ದೇವಾಲಯ ಪುರಾತನ ದೇವಾಲಯಗಳಲ್ಲಿಯೇ ಅಪರೂಪದ ಅದ್ಭುತ[೧೩] ದೇವಾಲಯವಾಗಿದೆ, ಎಂಬುದಾಗಿ ಉಜ್ಜಯಿನಿಯ ರುದ್ರಪ್ಪ ಅವರು ಅಭಿಪ್ರಾಯಪಟ್ಟಿದ್ದಾರೆ.

ಈ ದೇವಾಲಯದ ಸಮುಚ್ಛಯದ ನಿರ್ಮಾಣ ೧೦ನೇ ಶತಮಾನದ ನಂತರದ ಕಾಲದಲ್ಲಿ ನಿರ್ಮಾಣವಾಗಿರಬಹುದು, ಈ ಬಗ್ಗೆ ಕೊಟ್ರಯ್ಯ ಚಾನಕೋಟಿಮಠ ಅವರು ಅಭಿಪ್ರಾಯಪಡುವಂತೆ ೧೨ನೇ ಶತಮಾನಕ್ಕಿಂತ ಮುಂಚಿತವಾಗಿಯೇ ಆಗಲಿ ಅಥವಾ ೧೨ ನೇ ಶತಮಾನದಲ್ಲಿಯೇ ಆಗಿರಬಹುದೆಂದು ಊಹಿಸುತ್ತಾರೆ[೧೪].

ಈ ದೇವಾಲಯದ ವಾಸ್ತು-ಲಕ್ಷಣಗಳು ಒಂದೇ ಕಾಲದ ಶೈಲಿಯನ್ನು ಸೂಚಿಸುವುದರಿಂದ ಅದು. ಸು.ಕ್ರಿ.ಶ. ೧೧-೧೨ ನೇ ಶತಮಾನಕ್ಕೆ ಸೇರಿದೆ. ಸಭಾಮಂಟಪದಿಂದ ಉಳಿದ ಭಾಗಗಳು ಮುಖ ಮಂಟಪಗಳು ಮಾತ್ರ ವಿಜಯನಗರ ಕಾಲಕ್ಕೆ ಸೇರಿದವಾಗಿವೆ[೧೫]. ಎಂಬುದು ಡಾ. ಆರ್, ಎಂ. ಷಡಕ್ಷರಯ್ಯ ಈ ದೇವಾಲಯ ಕುರಿತು ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

ಸೂರ್ಯನಾಥ. ಯು.ಕಾಮತ್‌ರವರು ಅಭಿಪ್ರಾಯಪಡುವಂತೆ ಇದು ವೀರಶೈವ ಮಠಾಧೀಶರೊಬ್ಬರ ಅವಾಸಸ್ಥಾನವಾಗಿತ್ತು. ಇಲ್ಲಿ ಮರುಳಸಿದ್ಧರ ದೇವಾಲಯವಿದೆ ಇದು ಕ್ರಿ.ಶ. ಸು. ೧೧-೧೨ ನೇ ಶತಮಾನದಲ್ಲಿ ನಿರ್ಮಾಣವಾಗಿರ ಬಹುದೆಂದು ಊಹಿಸುತ್ತಾರೆ[೧೬].

ಅ.ನ. ಕೃಷ್ಣರಾಯರು, ಪ.ಗು. ಹಳಕಟ್ಟಿ. ಎಂ, ಗೋವಿಂದ ಪೈ. ಹುಲ್ಲೂರ ಶ್ರೀನಿವಾಸ ಜೋಯಿಸ. ಹೆಚ್. ದೇವೀರಪ್ಪ ಹಾಗೂ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು. ಜೀರಕಟ್ಟೆ ಬಸಪ್ಪ ಮೊದಲ ವಿದ್ವಾಂಸರು ಉಜ್ಜಯಿನಿಯ ಮರುಳಸಿದ್ಧರ ದೇವಾಲಯದ ನಿರ್ಮಾಣದ ಕಾಲ ಸು. ಕ್ರಿ. ಶ. ೧೧-೧೨ ನೇ ಶತಮಾನ ವಿರಬಹುದೆಂಬ ಅಭಿಪ್ರಾಯವ್ಯಕ್ತ ಪಡಿಸಿದ್ದಾರೆ.

ಉಜ್ಜಯಿನಿಯ ಶ್ರೀ ಮರುಳಸಿದ್ಧೇಶ್ವರ ದೇವಾಲಯದ ಸಮುಚ್ಚಯದಲ್ಲಿರುವ ಶಾಸನಗಳು ಮಲ್ಲಿಕಾರ್ಜುನ ದೇವಾಲಯವೆಂದು ಉಲ್ಲೇಖಿಸುತ್ತವೆ. ಕಲ್ಯಾಣ ಚಾಲುಕ್ಯರ ೧ ನೇ ಸೋಮೇಶ್ವರ (೧೦೪೪-೬೮) ಹೊರಡಿಸಿದ ಶಾಸನ, ವಿಜಯನಗರ ಅರಸ ಹಾಗೂ ಸದಾಶಿವರಾಯ. ದೇವಗಿರಿ ಯಾದವರು ಮತ್ತು ಕಾಕತೀಯ ಗಣಪತಿದೇವ (೧೨೧೬)ರ ಕಾಲಕ್ಕೆ ಹೊರಡಿಸಿದ ಶಾಸನಗಳು ೧೩-೧೬ ನೇ ಶತಮಾನದವರೆಗೆ ಮಲ್ಲಿಕಾರ್ಜುನ ದೇವಾಲಯವೆಂದ ಉಲ್ಲೇಖಿಸುತ್ತವೆ. ಅನಂತರ ಮರುಳಸಿದ್ಧೇಶ್ವರ ದೇವಾಲಯವೆಂದು ಕರೆಯಲ್ಪಟ್ಟಿದೆ. (೧೪೧೭-೧೪೪೬)[೧೭] ಅಂದರೆ ಈ ಮೇಲಿನ ಶಾಸನಗಳ ಉಲ್ಲೇಖೀತ ಕಾಲವನ್ನು ಗಮನಿಸಿದರೆ ಮರುಳಸಿದ್ಧರ ದೇವಾಲಯದ ನಿರ್ಮಾಣದ ಕಾಲ ಕ್ರಿ.ಶ. ಸು. ೧೦-೧೧ ನೇ ಶತಮಾನವೆಂಬುದನ್ನು ಊಹಿಸಬಹುದು. ಆದರೆ ಈ ಶಾಸನಗಳು ಉಲ್ಲೇಖಿಸುವ ಮಲ್ಲಿಕಾರ್ಜುನ, ಮಲ್ಲಿನಾಥ ಹಾಗೂ ಪ್ರಸ್ತುತ ಮರುಳಸಿದ್ಧೇಶ್ವರ ಎಂದು ಕರೆಯಲ್ಪಡುವ ಈ ದೇವಾಲಯವು ಹಿಂದೆ ಮಲ್ಲಿಕಾರ್ಜುನ ಅಥವಾ ಮಲ್ಲಿನಾಥನಾಗಿರಬಹುದೇ ಎಂಬ ಸಂಶಯ ವ್ಯಕ್ತವಾಗುತ್ತದೆ. ದೇವಕವಿ ಕೃತ ಮರುಳಸಿದ್ಧ ಕಾವ್ಯ ಮರುಳಸಿದ್ಧರನ್ನು ಮಲ್ಲಿಕಾರ್ಜುನ, ಮಹಾದೇವನೆಂದು ವರ್ಣಿಸಲಾಗಿದೆ. ಮರುಳಸಿದ್ಧರಿಗೆ. ಮಲ್ಲಿಕಾರ್ಜುನ, ಮಹಾದೇವ ಎಂಬ ನಾಮಾಂಕಿತವಿರಲುಬಹುದು. ಇದಕ್ಕೆ ಪುಷ್ಠಿ ನೀಡಬಹುದಾದ ಒಂದೆರಡು ಕಾವ್ಯಗಳಲ್ಲಿ ವ್ಯಕ್ತವಾದ ಮಲ್ಲಿಕಾರ್ಜುನ ಮಹಾದೇವ ಹೇಗೆ ಅಭಿವ್ಯಕ್ತವಾಗಿದೆ. ಎಂಬುದನ್ನು ಈ ಕೆಳಗಿನ ಕಾವ್ಯವನ್ನು ಅವಲೋಕಿಸಬಹುದು.

ಮಲ್ಲಿಕಾರ್ಜುನ ದೇವ ಮೆಲ್ಲ ನೈತರುತಿರಲು
ಬಲ್ಲಾಳನೃಪನ ತುರಗದ ಗೋವರುಗಳ್ಮುಂದೆ.
ಹುಲ್ಲು ಕೊಯ್ಯುತ ಕಾಣುತಾಗಲಾ ಗುರುಮೂರ್ತಿ ಮೆಲ್ಲಡಿಗೆ ನಮಿಸಲಾಗ[೧೮],

ಮೂರನೆ ಸಂಧಿ, ಕಾವ್ಯ -೧೦೬

ಪಲ್ಲವಿದ ಸತ್ತಿಗೆಗಳೆಡ ಬಲ್ಲ ವಂಕಂಗಳಲ್ಲಿ,
ಬರೆಯಿ ದಿರ್ಬಂದು ಶರಣೆನ್ನಲವರಿಗಂ
ಸಲ್ಲಲಿತವರವಿತ್ತು ಕಳುಹಿದಂ ಕರುಣದಿಂ ಮಲ್ಲಿಕಾರ್ಜುನ ಮರುಳನು[೧೯].

ಮೂರನೆ ಸಂಧಿ ಕಾವ್ಯ-೧೧೦

ಮಲ್ಲಿಕಾರ್ಜುನ ಮಹಿಮ ಬಹು ಸಮಹಗಳನರಿದು
ಕೊಲ್ಲಾಪುರದ ಬಹಿರ್ವನ ಮೆರೆದು ರಂಜಿಸಲು
ಅಲ್ಲಲ್ಲಿ ಕರವಿಡಿದ ಪದಪಂಙ್ಕ್ತಿ ಕಾಂತಿಯೊಳಗಲ್ಲಿಡಿದಲತೆವಲ್ಲಿಯ[೨೦],

ನಾಲ್ಕನೆಯ ಸಂಧಿ, ಕಾವ್ಯ -೪೬-

ತೆಲುಗಬಾಳಿಗೆ ಬಂದು ನಲವಿಂದಲೊಕ್ಕಲಿಗ
ಸಲೆಸಿದ್ಧಗಂ ಕರುಣದಿಂದಿತ್ತು ಮುರುಮುದ್ರೆ
ಬಲವಂತನಾಗು ನೀನೆಂದರಿವೆಯನು ಸೀಳಿವಲದಿಂದ ಕೊಟ್ಟಿನಾಗ,
ಎಲೆ ಮಹಾದೇವ ನೀಪಾಲಿಸಿದೆ ಪರಿಣಾಮ
ದೊಳುವಸ್ತ್ರಮಂ ಬೆನ್ನೊಳವಧರಿಸಿ ಕಂಥೆಯನು
ಬಲುನಂಬುಗೆಯೊಳ್ಚಾಂಗು ಭಲರೆಂದು ಹರಸುವೆವುತೆಲುಗ ಬಾಳಿನ ಸಂತತಿ[೨೧],

ಐದನೆಯ ಸಂಧಿ. ಕಾವ್ಯ ॥೧॥

ಈ ಮೇಲಿನ ಕಾವ್ಯದಲ್ಲಿ ನಿರೂಪಿತವಾದ ಮಲ್ಲಿಕಾರ್ಜುನ, ಮಹಾದೇವ, ಎಂಬ ಮರುಳಸಿದ್ಧ ಒಂದೇ ಎಂಬುದು ಗಮನಾರ್ಹ. ಈ ಮೇಲಿನ ನಿದರ್ಶನಗಳಿಗೆ ಪುಷ್ಠಿ ನೀಡುವ ಮತ್ತೊಂದು ಶಾಸನದ ಉಲ್ಲೇಖವಿದೆ. ಆ ಶಾಸನವು ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕು ಮುಚ್ಚನೂರು ಗ್ರಾಮ ಪರಿಸರದಲ್ಲಿ ದೊರೆತಿದೆ. ಈ ಗ್ರಾಮವು ಮರುಳಸಿದ್ಧರ ಪವಾಡ ಕ್ಷೇತ್ರ ಹಾಗೂ ಒಂದು ಸ್ಮಾರಕವಿರುವ ಸ್ಥಳ ಈ ಭಾಗದಲ್ಲಿ ಅಪ್ರಕಟಿತವಾದ ಎರಡು ಶಾಸನ ದೊರೆತಿವೆ. ಈ ಶಾಸನಗಳು ಕ್ರಿ. ಶ. ಸು. ೧೦ನೇ ಶತಮಾನಕ್ಕೆ ಸೇರಿರಬಹುದು. ಈ ಶಾಸನಗಳು ಮಹಾದೇವ ದೇವರಾಯ, ಎಂದು ಉಲ್ಲೇಖಿಸಿರುವುದು. ಮತ್ತೊಂದು ಗಮನಾರ್ಹವಾದ ಸಂಗತಿಯಾಗಿದೆ[೨೨]. ಈ ಮೇಲಿನ ಸಂಗತಿಗಳನ್ನು ಗಮನಿಸಿದರೆ ಉಜ್ಜಯಿನಿ ಮರುಳಸಿದ್ಧರ ಪೂರ್ವದ ಹೆಸರು ಮಲ್ಲಿಕಾರ್ಜುನ ಎಂಬುದಾಗಿ ಗೊತ್ತಾಗುತ್ತದೆ. ಪ್ರಸ್ತುತ ಈ ದೇವಾಲಯವು ಮರುಳಸಿದ್ಧೇಶ್ವರ ದೇವಾಲಯವೆಂದೆ ಕರೆಯುವ ವಾಡಿಕೆ ಇದೆ.

ಉಜ್ಜಯಿನಿ ಕ್ಷೇತ್ರ ಹೊರತುಪಡಿಸಿ ಉಜ್ಜಯಿನಿಯ ಸುತ್ತ ಅನೇಕ ಸ್ಮಾರಕಗಳು ಕಂಡುಬರುತ್ತವೆ. ಅಂತಹ ಸ್ಮಾರಕಗಳ ಪರಿಚಯದ ಅಗತ್ಯವಿದ್ದು ಅವುಗಳಲ್ಲಿ ಪ್ರಮುಖವಾದವು ಕೆಳಗಿನಂತಿದೆ.

❖ ಜಟ್ಟಲಿಂಗೇಶ್ವರ ಗುಡಿ ಅಥವಾ ಜಟ್ಟಿಗಪ್ಪನ ಗುಡಿ :

ಶ್ರೀ ಮರುಳಸಿದ್ಧೇಶ್ವರ ಸ್ವಾಮಿ ದೇವಾಲಯದ ಹಿಂದೆ ಈ ಗುಡಿ ಇದೆ. ಇದರಲ್ಲಿ ಶಿಲಾ ವಿಗ್ರಹಗಳು ಒಂದೇ ಸಾಲಿನಲ್ಲಿವೆ. ಭಕ್ತರು ಮೊದಲಿಗೆ ಜಟ್ಟಿಂಗಲಿಂಗೇಶ್ವರ ಸ್ವಾಮಿ ದರ್ಶನ ಪಡೆಯುತ್ತಾರೆ. (ಮರುಳಸಿದ್ಧರು ಕೊಲ್ಲಾಪುರದ ಮಾಯೆ ಮರ್ಧನದ ಸಂದರ್ಭದಲ್ಲಿ ಒಟ್ಟಿಗೆ ಮೊದಲು ಶರಣದ ಶಿಷ್ಯ) ಶ್ರೀ ಮರುಳಸಿದ್ಧೇಶ್ವರ ಶಿಷ್ಯನಾದ ಜಟ್ಟಲಿಂಗೇಶ್ವರನು ಅನವರತವೂ ಸತ್ಯಾಂಶವುಳ್ಳ ಮಾಹಿತಿಯನ್ನು ನೀಡಿ ಸತ್ಯಮಾರ್ಗ-ದಲ್ಲಿ ನಡೆದುದರಿಂದ ಸ್ವಾಮಿಗಳು ಶಿಷ್ಯನಿಗೆ ಸರ್ವಕಾಲಕ್ಕೂ ಎಲ್ಲ ಭಕ್ತರಿಂದ ಪ್ರಥಮ ಪೂಜೆ ಸಲ್ಲಬೇಕೆಂದು ವರನೀಡಿದರೆಂಬ ಪ್ರತೀತಿಗಳಿವೆ. ಉಜ್ಜಯಿನಿ ಗ್ರಾಮದ ನಾಯಕ (ತಳವಾರ) ವಂಶಸ್ಥರು ಈ ವಿಗ್ರಹಗಳಿಗೆ ಪೂಜಾರಿಗಳಾಗಿದ್ದಾರೆ. ಪ್ರತಿಯೊಂದು ಮರುಳಸಿದ್ಧರ ಸ್ಮಾರಕಗಳ ಬಳಿ ಜಟ್ಟಿಗೇಶ್ವರನ ಸ್ಮಾರಕಗಳಿರುವುದು ವಿಶೇಷ.

❖ ಹನುಮಂತನ ದೇವಸ್ಥಾನ :

ಈ ದೇವಸ್ಥಾನವು ಜಟ್ಟಿಗೇಶ್ವರನ ದೇವಸ್ಥಾನಕ್ಕೆ ಪಶ್ಚಿಮದಲ್ಲಿ ಉತ್ತರ ಮುಖವಾಗಿದೆ. ಹನುಮಂತನ ಮುಖವು ಪೂರ್ವದ ಕಡೆ ತಿರುಗಿದೆ. ಹನುಮನು ಮರುಳಸಿದ್ಧನ ಆಪ್ತ ಶಿಷ್ಯರಲ್ಲಿ ಒಬ್ಬನಾಗಿದ್ದು, ಅವನ ಸ್ಮಾರಕವಾಗಿ ಈ ದೇವಸ್ಥಾನವು ಕಟ್ಟಲ್ಪಟ್ಟಿದೆ.

❖ ಗದ್ದುಗೆಯ ರಾಮಿತಂದೆಯ ದೇವಸ್ಥಾನ :

ಈ ದೇವಸ್ಥಾನವು ಮರುಳಸಿದ್ಧರ ದೇವಸ್ಥಾನದ ಬಲಭಾಗದಲ್ಲಿ ಸ್ವಲ್ಪ ಹಿಂದಕ್ಕೆ ಪೂರ್ವಮುಖವಾಗಿದೆ. ಗದ್ದುಗೆಯ ರಾಮಿತಂದೆಯು ಮರುಳಸಿದ್ಧರಿಗೆ ಗದ್ದುಗೆಯನ್ನು ಹಾಸುವ ಕಾಯಕವನ್ನು ಮಾಡುತ್ತಿದ್ದನೆಂದೂ, ಇವನ ಸ್ಮಾರಕವಾಗಿ ಈ ದೇವಸ್ಥಾನವು ನಿರ್ಮಿಸಲ್ಪಟ್ಟಿತೆಂದೂ ಐತಿಹ್ಯ. ಗದ್ದುಗೆಯ ರಾಮಿತಂದೆಯು ಮರುಳಸಿದ್ಧರನ್ನು ಗುರುವಾಗಿ ಅವರಿಂದ ಉಪದೇಶಪಡೆದು ಅವರ ಸೇವೆ ಮಾಡುತ್ತಾ ಆಪ್ತ ಶಿಷ್ಯರಾಗಿ ಮರುಳಸಿದ್ಧರ ಜೀವನ ಸಾಧನೆ ಕುರಿತು 'ಗುರುಬೋಧೆ ಮಹಾತ್ಮೆ' ಎಂಬ ಗ್ರಂಥ ರಚಿಸಿದರು ಎಂಬುದು ಐತಿಹ್ಯ ರಾಮಿತಂದೆ, ಮರುಳಸಿದ್ಧರ ಸ್ಮಾರಕಗಳು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕು ಗೋಡೆಕೆರೆ ಗ್ರಾಮದಲ್ಲಿಯೂ ಕಂಡುಬರುತ್ತದೆ.

❖ ಬ್ರಹ್ಮದೇವರ ಗುಡಿ :

ಈ ಗುಡಿಯು ಮರುಳಸಿದ್ಧ ದೇವಸ್ಥಾನದ ಪೌಳಿಯ ಹೊರಗಡೆ ಪೂರ್ವ ದಿಕ್ಕಿನಲ್ಲಿ ಪಶ್ಚಿಮ ಮುಖವಾಗಿದೆ. ಇದು ಮರುಳಸಿದ್ಧರ ಶಿಷ್ಯನಾದ ಬ್ರಹ್ಮನಿಗೆ ಸಂಬಂಧ ಪಟ್ಟ ಸ್ಮಾರಕವಾಗಿದೆ.

ಮರುಳಸಿದ್ಧರು ಕೊಲ್ಲಾಪುರದ ವಾಮಚಾರಿಯಾದ ಮಾಯೆಯ ಸೊಕ್ಕಡಗಿಸಲು ಹೋದ ಸಂದರ್ಭದಲ್ಲಿ ಮರುಳಸಿದ್ಧರಿಗೆ ಬ್ರಹ್ಮದೇವ ಶರಣಾಗಿ ಮರುಳಸಿದ್ಧರ ಶಿಷ್ಯರಾದರು. ಈ ಸ್ಮಾರಕವಾಗಿ ಮೂರು ದುಂಡುಕಲ್ಲು ಆಕೃತಿಯಲ್ಲಿ ಬ್ರಹ್ಮದೇವರ ಸ್ಮಾರಕವು ಉಜ್ಜಯಿನಿ ಮರುಳಸಿದ್ಧೇಶ್ವರ ದೇವಾಲಯದ ಹಿಂಭಾಗದಲ್ಲಿದೆ.

❖ ತರಳಬಾಳು ಸಿದ್ಧೇಶ್ವರ ದೇವಸ್ಥಾನ :

ಈ ದೇವಸ್ಥಾನವು ಮರುಳಸಿದ್ಧೇಶ್ವರ ದೇವಸ್ಥಾನಕ್ಕೆ ಸ್ವಲ್ಪ ದೂರದಲ್ಲಿ ಪಶ್ಚಿಮ ದಿಕ್ಕಿಲ್ಲಿ ಉತ್ತರ ಮುಖವಾಗಿದೆ. ತೆಲಗುಬಾಳು (ಹೊಸಪೇಟೆ ತಾಲೂಕು) ನಿಂದ ಬಂದು ಮರುಳಸಿದ್ಧರ ಉಪದೇಶ ಪಡೆದು ಕಾರುಣ್ಯವನ್ನುಗಳಿಸಿ ಅವರ ಉತ್ತರಾಧಿಕಾರಿಯಾಗಿ ಅವರಿಂದ ತರಳಬಾಳು ಸದ್ಧರ್ಮ ಪೀಠವನ್ನು ಸ್ಥಾಪಿಸಿದರು. ಈ ತರಳಬಾಳು ವಂಶದ ಮೂಲ ಪುರುಷರಾಗಿ, ತರಳಬಾಳು ಸಿದ್ಧೇಶ್ವರರ ಸ್ಮಾರಕವಾಗಿ ಈ ದೇವಸ್ಥಾನವು ನಿರ್ಮಿಸಲ್ಪಟ್ಟಿತೆಂದು ಐತಿಹ್ಯ. ತಲೆಬೋಳುಸಿದ್ಧ ದೇವಾಲಯವೆಂದು ಅಲ್ಲಿನ ಸ್ಥಳೀಕರು ಕರೆಯುವ ವಾಡಿಕೆ ಇದೆ.

❖ ಮಾದಿಗರ ಕೇರಿಯ ಮರುಳಸಿದ್ಧ ದೇವಸ್ಥಾನ :

ಈ ದೇವಸ್ಥಾನವು ಮಾದಿಗರ ಕೇರಿಯಲ್ಲಿದೆ ಉಜ್ಜಯಿನೀ ಸದ್ಧರ್ಮ ಪೀಠದ ಸಿದ್ಧ ಮಲ್ಲೇಶ್ವರ ಜಗದ್ಗುರುಗಳು ಸಿಂದೋಗಿಯಿಂದ 'ಹರಳ' ನೆಂಬವನನ್ನು ಕರೆದುಕೊಂಡು ಬಂದು ಉಜ್ಜಯಿನೀ ಗ್ರಾಮದ ಮಾದಿಗರ ಕೇರಿಯಲ್ಲಿ ಒಂದು ಚಿಕ್ಕ ಮರುಳಸಿದ್ಧ ದೇವಾಲಯವನ್ನು ಕಟ್ಟಿಸಿದರು. ಆ ದೇವಾಲಯದ ಪೂಜೆಗೆ ಈ ಹರಳನನ್ನೇ ನೇಮಿಸಿದರು. ಎಂಬುದಾಗಿ ಮರುಳಾರಾಧ್ಯ ವಿಜಯದಲ್ಲಿ ಪ್ರಸ್ತಾಪಿಸಲಾಗಿದೆ[೨೩].

❖ ಮತ್ತೊಂದು ಕಥೆ ಈ ರೀತಿ ಇದೆ :

ಮರುಳಸಿದ್ಧರು ಕೆಳವರ್ಗದ ಸಮುದಾಯವಾದ ದಲಿತ ಮನೆತನದಲ್ಲಿ ಹುಟ್ಟಿದವರು ಎಂಬ ಪ್ರತೀಕವಾಗಿ ಈ ಸ್ಮಾರಕ ಇದೆ ಎಂಬುದಾಗಿ ಮರುಳಸಿದ್ಧನ ಸ್ಮಾರಕಗಳ ಸಮೀಕ್ಷೆ ಎಂಬ ಲೇಖನದಲ್ಲಿ ಜೀರಿಗೆ ಕಟ್ಟಿಬಸಪ್ಪ ಬರೆದಿರುತ್ತಾರೆ[೨೪]. ಮಾದಿಗರು ಮರುಳಸಿದ್ಧರ ವಿಚಾರದಲ್ಲಿ ಹೆಚ್ಚಿನ ಭಕ್ತಿಯುಳ್ಳವರಾಗಿರುವುದೂ ಮತ್ತು ಮರುಳಸಿದ್ಧರ ಸಂಬಂಧವಾದ ಉತ್ಸವಾದಿ ಕಾರ್ಯಗಳಲ್ಲಿ ಹೆಚ್ಚಿನ ಹಕ್ಕನ್ನುಳ್ಳುವರಾಗಿರುವುದೂ ಗಮನಾರ್ಹವಾದ ಅಂಶವಾಗಿವೆ.

❖ ಮೈಲಾರಲಿಂಗನ ಬಂಡೆ :

ಇದು ಉಜ್ಜಯಿನಿಯ ಮರುಳಸಿದ್ಧೇಶ್ವರ ದೇವಾಲಯದಿಂದ ಸು.೧ ಕಿ.ಮೀ. ಅಂತರದಲ್ಲಿದೆ. ಎರಡು ಲಿಂಗಗಳು, ಪಾದಗಳು ಇಲ್ಲಿವೆ, ಶ್ರೀ ಮರುಳಸಿದ್ಧರ ಶಿಷ್ಯನಾದ ಮೈಲಾರಲಿಂಗೇಶ್ವರ ಸತ್ಯಾಂಶಗಳ ಮಾಹಿತಿ ನೀಡುವಲ್ಲಿ ವಿಫಲವಾದ ಪರಿಣಾಮ ರೇಗಿದ ಸ್ವಾಮಿ ಉಜ್ಜಿನಿಯ ಊರ ಹೊರಗೆ ಇರಲಿ ಎಂದು ಶಾಪದ ಕಾರಣದಿಂದ ಊರಹೊರಗೆ ಇದೆ ಎಂದು ಜನಪದನಂಬಿಕೆ. ಒಂದೇ ಅಂಕಣದ ಗುಡಿ ಇದು, ಸುತ್ತಣ ರಕ್ಷಣೆಗೆ ಕಲ್ಲಿನ ಬಂಡೆಗಳಿಂದ ಗೋಡೆ ನಿರ್ಮಿಸಲಾಗಿದೆ.

❖ ಮಸಲವಂಡಿ ಬಸವಣ್ಣ ಅಥವಾ ಮಸಲಟ್ಟಿ ಬಸವಣ್ಣ :

ಇದು ಮೈಲಾರ ಲಿಂಗನ ಬಂಡೆಯ ಸಮೀಪದಲ್ಲಿದೆ. ಬಸವಣ್ಣ ವಿಗ್ರಹವು ಉತ್ತರಾಭಿಮುಖವಾಗಿದ್ದು ಉದ್ಭವ ಶಿಲೆಯಿದೆ. ಇದನ್ನೇ ಜನರು ಮರುಳಸಿದ್ಧರೆಂದು ಕರೆಯುತ್ತಾರೆ. ಮರುಳಸಿದ್ಧರು ಮತ್ತು ಅವರ ಶಿಷ್ಯರಾದ ಜಟ್ಟಿಗ, ಹನುಮ, ಭೈರ ಮತ್ತು ಬ್ರಹ್ಮ ಇವರುಗಳೂ ಈ ಸ್ಥಳದಲ್ಲಿ ಸೇರಿ ಮುಂದೆ ತಾವು ಎಲ್ಲೆಲ್ಲಿ ನೆಲಸಬೇಕೆಂಬ ವಿಚಾರವನ್ನು ಮಸಲತ್ತು ಮಾಡಿದರೆಂದು ಐತಿಹ್ಯವಿದೆ.

❖ ವಟವೃಕ್ಷ ಮತ್ತು ಸಿದ್ಧನವರ್ತಿ :

ಉಜ್ಜಯಿನಿಗೆ ಸು. ಒಂದು ಮೈಲಿ ದೂರದಲ್ಲಿ ಒಂದು ದೊಡ್ಡ ಆಲದಮರವೂ ಅದರ ಹತ್ತಿರ ಒಂದು ಸಣ್ಣ ನೀರಿನ ಕಟ್ಟೆಯೂ ಇವೆ. ಈ ಆಲದಮರದ ಕೆಳಗೆ ಕುಳಿತು ಈ ಕಟ್ಟೆಯ ನೀರು ಕುಡಿದು ಮರುಳಸಿದ್ಧ ವಿಶ್ರಮಿಸಿಕೊಳ್ಳುತ್ತಿದ್ದರೆಂದು ಐತಿಹ್ಯ.

❖ ಭೈರೇದೇವರ ಗುಡ್ಡ :

ಈ ಗುಡ್ಡವು ಉಜ್ಜಯಿನಿಗೆ ಸು. ೫ ಕಿ.ಮೀ. ದೂರದಲ್ಲಿದೆ. ಈ ಗುಡ್ಡದ ಮಧ್ಯಭಾಗದಲ್ಲಿ ಒಂದು ಚಿಕ್ಕ ಗುಹೆಯಲ್ಲಿ ಭೈರೇದೇವರ ಮೂರ್ತಿ ಇದೆ. ವಿಗ್ರಹ ಶಿಥಿಲಗೊಂಡಿದೆ. ಅದನ್ನು ಭೈರವಸಿದ್ಧರೆಂದು ಕರೆಯುತ್ತಾರೆ. ಭೈರವಸಿದ್ಧರು ಶ್ರೀ ಮರುಳಸಿದ್ಧೇಶ್ವರರಿಗೆ ಸತ್ಯಾಂಶದ ಬುತ್ತಿಯನ್ನು ಬಿಚ್ಚಲಿಲ್ಲದ ಕಾರಣ ಕ್ರೋಧಗೊಂಡ ಸ್ವಾಮಿಗಳು ಇವರನ್ನು ಕಾಲುಮುರಿಯುವ ಹಾಗೆ ಹೊಡೆದು ಊರ ಹೊರಗೆ ನೆಲೆಸು ಎಂದು ಶಾಪಕೊಟ್ಟ-ರೆಂಬ ಪ್ರತೀತಿಗಳಿವೆ.

❖ ಮೂಗಣ್ಣನ ದೇವಸ್ಥಾನ :

ಉಜ್ಜಯಿನಿಗೆ ಪಶ್ಚಿಮ ದಿಕ್ಕಿನಲ್ಲಿ ಸು. ೧ ಕಿ. ಮೀ ದೂರದಲ್ಲಿದೆ. ಮರುಳಸಿದ್ಧರು ದನಗಳನ್ನು ಕಾಯುತ್ತಿದ್ದಾಗ ಮೂಕನಂತೆ ಇಲ್ಲಿ ಕುಳಿತುಕೊಳ್ಳುತ್ತಿದ್ದುದರಿಂದ ಈ ದೇವಸ್ಥಾನಕ್ಕೆ ಈ ಹೆಸರು ಬಂದಿತೆಂದು ಐತಿಹ್ಯ. ಈ ದೇವಸ್ಥಾನಕ್ಕೆ ಪೂರ್ವದಲ್ಲಿ ಸ್ವಲ್ಪ ದೂರದಲ್ಲಿ ಮರುಳಸಿದ್ಧರು ಸ್ಥಾಪಿಸಿದ ಸ್ಥಾಪನಕಟ್ಟೆ ಎಂಬ ಸ್ಮಾರಕವಿದೆ.

❖ ಕರುವಿನ ಕಲ್ಲುಗುಡ್ಡ :

ಮೂಗಣ್ಣನ ದೇವಸ್ಥಾಕ್ಕೆ ಸ್ವಲ್ಪ ದೂರದಲ್ಲಿ ಉತ್ತರ ದಿಕ್ಕಿನಲ್ಲಿದೆ. ಈ ಗುಡ್ಡದ ತುಟ್ಟತುದಿಯಲ್ಲಿ ಮರುಳಸಿದ್ಧರ ಒಂದು ಅಂಕಣದಗುಡಿ ಇದೆ. ಮರುಳಸಿದ್ಧರು ದನಗಳನ್ನು ಈ ಗುಡ್ಡಕ್ಕೆ ಹೊಡೆದುಕೊಂಡು ಬಂದು ದನಗಳನ್ನು ಈ ಹಟ್ಟಿಗಳಲ್ಲಿ ಕೂಡುತ್ತಿದ್ದರೆಂದು ಹೀಗಾಗಿ ಇದನ್ನು ತುರುಮಂದೆ ಎಂದು ಹೇಳಲಾಗುವ ಕಲ್ಲುಕಟ್ಟಡದ ಪೌಳಿಯು ಈ ಗುಡ್ಡದ ಬಳಿ ಒಂದು ಸ್ಮಾರಕವು ಇದೆ. ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಭಕ್ತರು ಮರುಳಸಿದ್ಧೇಶ್ವರ ದೇವರಿಗೆ ಪೂಜೆ ಸಲ್ಲಿಸಿ ಗುಡ್ಡದ ಮೇಲಿನ ಎರಡು ಸಣ್ಣ ಕಲ್ಲುಗಳನ್ನು ದನಕರುಗಳೆಂದು ನಂಬಿ ಮನೆಗೆ ತಂದು ವರ್ಷವೆಲ್ಲಾ ಪೂಜೆ ಮಾಡುತ್ತಾರೆ. ಮರು ವರ್ಷ ಶ್ರಾವಣ ಮಾಸದಲ್ಲಿ ಪುನಃ ಆ ಕಲ್ಲುಗಳನ್ನು ತಂದು ಸಮರ್ಪಿಸುವ ಪದ್ಧತಿ ಇದೆ.

❖ ಮರುಳಸಿದ್ಧೇಶ್ವರ ಸ್ವಾಮಿಯ ಪಾದದ ಕಟ್ಟೆಗಳು :

ಉಜ್ಜಯಿನಿ ಪರಿಸರದಲ್ಲಿ ಒಂಬತ್ತು ಪಾದದ ಕಟ್ಟೆಗಳಿವೆ. ಮರುಳಸಿದ್ಧರು ಮಾಯೆಯನ್ನು ಗೆದ್ದು ಅಲ್ಲಿದ್ದ ಆಕೆಯ ಸೇವಕರಾದ ಬ್ರಹ್ಮ, ಜಟ್ಟಿಗ, ಭೈರವ, ಇವರೆಲ್ಲರೊಂದಿಗೆ ಕಗ್ಗಲ್ಲುಪುರಕ್ಕೆ ಬಂದು ತನ್ನ ಸಾಕುತಂದೆ ಪುರದ ಒಡೆಯರಾದ ಬಾಚನಗೌಡರ ಬಳಿ ೯ ಪಾದಗಳ ಭೂಮಿಯನ್ನು ಕೇಳಿದರು, ತಂದೆ ಒಪ್ಪಿದರು. ಆದರೆ ಮರುಳಸಿದ್ಧರು ಒಂಭತ್ತು ಪಾದಕ್ಕಿಂತ ಒಂಭತ್ತು ಸ್ಥಳ ಗುರುತಿಸಿ ಈ ಗಡಿಯ ವ್ಯಾಪ್ತಿ ತನಗೆ ಬೇಕೆಂದು ಮರುಳಸಿದ್ಧರು ಉಜ್ಜಯಿನಿ ಕ್ಷೇತ್ರ ನಿರ್ಮಾಣಕ್ಕೆ ಸ್ಥಳ ಗುರುತಿಸಿದರು[೨೫]. ಉಜ್ಜಯಿನಿಯ ಸುತ್ತ ನಿರ್ಮಿಸಿದ ಸ್ಥಳಗಳೇ ಒಂಭತ್ತು ಪಾದಗಟ್ಟೆಗಳು. ಒಂಭತ್ತು ಕಡೆ ಸ್ಮಾರಕಗಳಿವೆ. ಅವುಗಳು ಈ ರೀತಿ ಇವೆ,

* ❖ ಶ್ರೀ ಮರುಳಸಿದ್ಧ ಸ್ವಾಮಿಯ ದೇವಾಲಯ ಎದುರಿನ ಪಾದಗಟ್ಟೆ.
* ❖ ಮಾಚನಹಳ್ಳಿ ಪಾದಗಟ್ಟೆ.
* ❖ ಬೆಳದೇರಿ ಪಾದಗಟ್ಟೆ.
* ❖ ಬೆನಕನಹಳ್ಳಿ ಪಾದಗಟ್ಟೆ.
* ❖ ಸೊಕ್ಕೆ ಪಾದಗಟ್ಟೆ.
* ❖ ಸಾಸ್ವಿ ಹಳ್ಳಿ ಪಾದಗಟ್ಟೆ.
* ❖ ಹಾರಕನಾಳು ಪಾದಗಟ್ಟೆ.
* ❖ ನಡುಮಾವಿನ ಹಳ್ಳಿ ಭುಜಂಗ ಪಾದಗಟ್ಟೆ.
* ❖ ಉಜ್ಜಯಿನಿ ಗ್ರಾಮದ ಪಾದಗಟ್ಟೆ[೨೬].

ಶ್ರೀ ಮರುಳಸಿದ್ಧರು ಈ ಸ್ಥಳಕ್ಕೆ ಆಗಮಿಸಿ ಕಗ್ಗಲ್ಲಗೌಡನಿಂದ ಒಂಭತ್ತು ಪಾದ ಭೂಮಿಯನ್ನು ಪಡೆದು ಶ್ರೀ ಸದ್ಧರ್ಮ ಪೀಠವನ್ನು ಸ್ಥಾಪಿಸಿದರೆಂದು ಕೆಲವರು ಹೇಳುವರು ಎಂಬುದಾಗಿ ಡಾ. ಆರ್. ಎಂ. ಷಡಕ್ಷರಯ್ಯ ಅವರು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿರುತ್ತಾರೆ.

ಡಾ. ಎಂ. ಶಿವಮೂರ್ತಿ ಅವರು ತಮ್ಮ ಲೇಖನದಲ್ಲಿ ಜರ್ಮಲೆಯ ಪಾಳೆಗಾರರು ಉಜ್ಜಯಿನಿಯ ಶ್ರೀ ಮರುಳಸಿದ್ಧ ಸ್ವಾಮಿಯ ದೇವಸ್ಥಾನದ ಸುತ್ತಮುತ್ತಲಿನ ಒಂಬತ್ತು ಪಾದಗಟ್ಟೆಗಳಿರುವ ಭೂ ಪ್ರದೇಶವನ್ನು ಶ್ರೀ ಪೀಠದ ಜಗದ್ಗುರುಗಳಿಗೆ ಸಮರ್ಪಿಸಿದರೆಂದು ಹೇಳಿರುವರು[೨೭].

೪.೪.೨.ಮಠಗಳು :

❖ ಉಜ್ಜಯಿನಿಯ ಮರುಳಸಿದ್ಧೇಶ್ವರ ಸದ್ಧರ್ಮ ಪೀಠ

ಮಠ ಎಂಬ ಪದಕ್ಕೆ ಇರುವ ಮೂಲ ಅರ್ಥ ಸನ್ಯಾಸಿಗಳು ವಾಸಿಸುವ ಸ್ಥಳ ಅಥವಾ ಕುಟೀರ. ಇದು ತಪಸ್ಸು ಮತ್ತು ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ ಕ್ರಮೇಣ ಆಶ್ರಯ, ಗುರುಮನೆ, ಗುರುಕುಲಗಳಾಗಿ ಕಾಲ ಉರುಳಿದಂತೆ ವಿದ್ಯಾ ಪ್ರಸಾರ, ಜ್ಞಾನ ಪ್ರಸಾರ, ಮತಪ್ರಸಾರ ಕೇಂದ್ರಗಳಾಗಿ ಬೆಳೆದಿವೆ. ಪ್ರಾಚೀನ ಕಾಲದಿಂದಲೂ ಈ ಗುರುಕುಲ ಅಥವಾ ಮಠಗಳು ಅಂದಿನ

ಸಮಾಜಕ್ಕೆ ಅಗತ್ಯವಾಗಿದ್ದ ಶಿಕ್ಷಣವನ್ನು ನೀಡುವಲ್ಲಿ ನೆರವಾಗುತ್ತ ಬಂದಿವೆ. ಸುಪ್ರಸಿದ್ಧ ಸಂಸ್ಕೃತ ನಿಘಂಟುಕಾರನಾಗಿದ್ದ ಅಮರಸಿಂಹನು "ಮಠಶ್ಛಾತ್ರಾದಿನಿಲಯಂ" ಎಂದು ಹೇಳಿ 'ಮಠ' ಶಬ್ದಕ್ಕೆ ವಿವರಣೆ ನೀಡಿರುತ್ತಾನೆ ಒಟ್ಟಾರೆ ಮಠಗಳೆಂದರೆ ಊಟ ವಸತಿ ವಿದ್ಯೆಗಳ ಜೊತೆಗೆ ಧರ್ಮ ಶ್ರದ್ಧೆಯನ್ನು ಬೆಳೆಸುವ ಧಾರ್ಮಿಕ ಕೇಂದ್ರಗಳೇ ಆಗಿದ್ದವು.

ಭಾರತದಲ್ಲಿ ಕ್ರಿಪೂ.೫ನೇ ಶತಮಾನದಷ್ಟು ಪುರಾತನ ಕಾಲದಲ್ಲಿಯೆ ಗುರುಕುಲಗಳಿದ್ದವು ಬೌದ್ಧರ ಸಂಗ್ರಾಮಗಳು, ಜೈನರ ಬಸದಿಗಳು ಇಂತಹ ಕೇಂದ್ರಗಳಾಗಿದ್ದವು. ಕರ್ನಾಟಕದಲ್ಲಿ ಕ್ರಿ. ಶ. ೧೧ ನೆಯ ಶತಮಾನದ ವೇಳೆಗೆ ಶೈವ ಪಂಥದ ಅನೇಕ ದೇವಾಲಯ ಮಠಗಳು ಇದ್ದುದಕ್ಕೆ ಶಾಸನಾಧಾರಗಳಿವೆ. ಪ್ರಾಚೀನ ಕರ್ನಾಟಕದ ಅತ್ಯಂತ ಪ್ರಸಿದ್ದ ಶೈವಮಠವೆಂದರೆ ಬಳ್ಳಿಗಾವೆಯ 'ಕೋಡಿಯ ಮಠ' ವೀರಶೈವ ಮಠಗಳಿಗೆ ಮೂಲ ಪ್ರೇರಣೆ. ೧೨ ನೆಯ ಶತಮಾನದ ಬಸವಣ್ಣನವರ ಕಾಲದ ಕಲ್ಯಾಣದಲ್ಲಿದ್ದ ಅನುಭವ ಮಂಟಪ; ಕಲ್ಯಾಣದ ಕ್ರಾಂತಿಯ ನಂತರ ಅಲ್ಲಿಂದ ಚದುರಿದ ಸಾವಿರಾರು ಶರಣರು ನಾಡಿನುದ್ಧಗಲಕ್ಕು ಪಸರಿಸಿ ತಮಗೆ ಅನುಕೂಲವಾದಡೆಯಲ್ಲೆಲ್ಲಾ ಒಂದೊಂದು ಗುರುಮಠವನ್ನು ಪ್ರಾರಂಭಿಸಿದರು. ಇವು ಮುಂದೆ ಧರ್ಮ ಪ್ರಸಾರದ ಜೊತೆಗೆ ಜ್ಞಾನ ದೀವಿಗೆಯ ಕೇಂದ್ರಗಳೂ ಆದವು. ಕಾಲಕ್ರಮೇಣ ಈ ಮಠಗಳಿಗೂ ಸಮಾಜದ ಜನತೆಗೂ ತೀರ ನಿಕಟವಾದ ಸಂಪರ್ಕ ವೇರ್ಪಟ್ಟಿತು. ಧಾರ್ಮಿಕ ಸಂಘಟನೆಯ ಮೂಲಕ ಮಠಗಳು ಜನಸಮಾನ್ಯರ ಭಾವನಾತ್ಮಕ ಕೇಂದ್ರ ಬಿಂದುಗಳಾದವು. ಇಂತಹ ಪ್ರಚಂಡ ಶಕ್ತಿಯನ್ನು ಗುರುತಿಸಿದ ರಾಜ ಮಹಾರಾಜರು, ಪಾಳೆಗಾರರು ಮಠಗಳಿಗೆ ವಿಶೇಷ ಭಕ್ತಿ-ಗೌರವಾದರಗಳನ್ನು ತೋರಿಸಿ ಉದಾರವಾಗಿ ದಾನ-ದತ್ತಿಗಳನ್ನು ನೀಡಿದರು[೨೮]. ಈ ಹಿನ್ನಲೆಯಲ್ಲಿ ಅನೇಕ ಮಠಗಳು ಸಾಕಷ್ಟು ಪ್ರವರ್ಧಮಾನಕ್ಕೆ ಬಂದವು. ಅಂತಹ ಮಠಗಳಲ್ಲಿ ಉಜ್ಜಯಿನಿಯು ಒಂದು.

ಉಜ್ಜಯಿನಿ ಸದ್ಧರ್ಮ ಪೀಠವು ಇಂದು ಕರ್ನಾಟಕದ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ವ್ಯಾಪ್ತಿಯಲ್ಲಿದೆ. ಇದು ಚಾರಿತ್ರಿಕ ಮತ್ತು ಧಾರ್ಮಿಕವಾಗಿ ಮಹತ್ವ ಪಡೆದ ಕ್ಷೇತ್ರ, ಉಜ್ಜಿನಿ ವೀರಶೈವರ ಪಂಚ ಪೀಠಗಳಲ್ಲೊಂದು. ವೀರಶೈವ ಮತಸ್ಥಾಪಕರೆನಿಸಿದ ಪಂಚಾಚಾರ್ಯರ ಪೀಠಗಳಲ್ಲಿ ಉಜ್ಜಯಿನಿಯ ಸದ್ಧರ್ಮ ಸಿಂಹಾಸನವೂ ಒಂದಾಗಿದೆ. ಭಾರತದ ಜ್ಯೋತಿರ್ಲಿಂಗಗಳಲ್ಲಿ ಒಂದೆನಿಸಿದ ಕಾಲಿಕಾ ಉಜ್ಜಯಿನಿ ವಟವೃಕ್ಷ ಸಿದ್ಧೇಶ್ವರ ಲಿಂಗದಿಂದ ಜಗದ್ಗುರು ಮರುಳಾಧ್ಯರು ಅವತರಿಸಿ ಶಿವಾದ್ವೈತ ಸಿದ್ಧಾಂತ ಪ್ರಚಾರಕ್ಕಾಗಿ ಸದ್ಧರ್ಮ ಸಿಂಹಾಸನ ಪೀಠವನ್ನು ಸ್ಥಾಪಿಸಿದರಂತೆ, ಆಗಿನ

ಪೀಠಾಧಿಕಾರಿಗಳಾಗಿದ್ದ ಜಗದ್ಗುರು ಮರುಳಾರಾಧ್ಯರು ಜಗದ್ಗುರು ರೇವಣಸಿದ್ಧೇಶ್ವರರ ಅಜ್ಞಾನುಸಾರ ದಕ್ಷಿಣ ಭಾರತಕ್ಕೆ ಬಂದು ಕಲ್ಯಾಣ ಚಾಲುಕ್ಯ ಅರಸ ಸೋಮೇಶ್ವರನ ಸಹಕಾರದಿಂದ ಕೂಡ್ಲಿಗಿ ತಾಲೂಕು ಕೇಂದ್ರ ಸ್ಥಳದಿಂದ ನೈಋತ್ಯ ದಿಕ್ಕಿಗಿರುವ ಉಜ್ಜಯಿನಿ ಎಂಬಲ್ಲಿ ಧರ್ಮ ಪೀಠವನ್ನು ಸು. ಕ್ರಿ. ಶ. ೧೦೫೪ ರಲ್ಲಿ ಸ್ಥಾಪಿಸಿದರೆನ್ನಲಾಗಿದೆ.[೨೯]

ಉಜ್ಜಯಿನಿಯ ಸದ್ಧರ್ಮ ಪೀಠದ ಗುರುಪರಂಪರೆ ಅಥವಾ ಪಟ್ಟವಲ್ಲರಿ ಕುರಿತ ವಿವರಗಳು ವಿವಿಧ ದಾಖಲೆಗಳಲ್ಲಿ ವಿಭಿನ್ನವಾಗಿ ಉಲ್ಲೇಖವಾಗಿವೆ. ಅವುಗಳಲ್ಲಿ ಪಾಶುಪತಾಗಮ, ಸುಪ್ರವೇಧಾಗಮ, ಸ್ವಯಂಭುವಾಗಮ, ವೀರಾಗಮಗಳಲ್ಲಿ[೩೦] ಮರುಳಸಿದ್ಧರೆ ಮೂಲ ಸ್ಥಾಪಕರೆಂಬುದನ್ನು ಉಲ್ಲೇಖಿಸುತ್ತವೆ. ವೀರಶೈವ ಪಂಚಪೀಠ ಪರಂಪರೆ ಶ್ರೀ ಜಗದ್ಗುರು ಪಂಚಪೀಠಗಳ ಪರಿಚಯದ ಗುರುವರ್ಗ ದರ್ಪಣ (೧ ನೇ ಭಾಗ) ಸದ್ಧರ್ಮ ಪ್ರಭಾಪತ್ರಿಕೆ. ಮತ್ತು ಶ್ರೀ ಜಗದ್ಗುರು ಪಂಚಪೀಠಾಧೀಶ್ವರರು ಮೊದಲಾದ ಕೃತಿಗಳು ಮುಖ್ಯವಾಗಿವೆ. ಶ್ರೀ ಮರುಳಸಿದ್ಧರ ನಂತರ ಅನೇಕ ಶರಣರು ಈ ಪೀಠವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಸು. ಕ್ರಿ. ಶ. ೧೬೯೭ ರಿಂದ ೧೭೧೫ ರ ವರೆಗೆ ಆಳಿದ ಕೆಳದಿ ಬಸವಭೂಪನು ಶಿವತತ್ವ ರತ್ನಾಕರವೆಂಬ ಗ್ರಂಥವನ್ನು ರಚಿಸಿದ್ದಾನೆ. ಅದರಲ್ಲಿ ಉಜ್ಜಯಿನಿಯ ಮರುಳಸಿದ್ಧರ ಪರಂಪರೆಯಲ್ಲಿ ತನ್ನ ಕಾಲಕ್ಕೆ ಬದುಕಿದ್ದವರ ಹೆಸರು ಹೇಳಿದ್ದಾನೆ.

"ಆಸೀದುಜ್ಜಯಿನೀ ಪತಿರ್ಮರುಳಸಿದ್ಧೇಶೋ ಗುರು :

ಪ್ರಸ್ಫುರುತ್ಪಾದೇಶೋದ ವಸಂತದೇವ ಮಹಿತ:

ಶ್ರೀ ಮಲ್ಲಿಕಾರ್ಜುನೌ,

ವೀರಶ್ಪನ್ನ ಪರಸ್ತತಾಗುರುಪದ ಸ್ವಾಮೀ ವಸಂತಸ್ಪತ;

ತಸ್ಮಾದುನ್ನತ ಚನ್ನವೀರ ವಿಭುರಿತ್ಯಾಚಾರ್ಯ ಪರಂಪರಿ

ಈ ಶ್ಲೋಕದಲ್ಲಿ ಬರುವ ಗುರು ವಂಶದವರೆಂದರೆ.

- ಮರುಳಸಿದ್ಧೇಶ
- ವಸಂತ ದೇವ
- ಮಲ್ಲಿಕಾರ್ಜುನ

❖ ಚನ್ನವೀರ ದೇವ

❖ ಗುರುಪಾದ ಸ್ವಾಮಿ

❖ ವಸಂತ ದೇವ

❖ ಚನ್ನವೀರದೇವ

ಈ ಶ್ಲೋಕದ ಆಧಾರದಿಂದ ಕರ್ಲಮಂಗಲಂ ಶ್ರೀಕಂಠಯ್ಯ ಮಾಗಡಿಯವರು ಈ ಗುರು ಪರಂಪರೆಯ ಚೆನ್ನವೀರದೇವನು ಶಿವತತ್ವರತ್ನಾಕರದ ಗ್ರಂಥಕಾರನ ಕಾಲಕ್ಕೆ ಬದುಕಿದ್ದನು. ಇವನು ೧೬೯೭ ರಿಂದ ೧೭೧೫ ರ ಕಾಲಾವಧಿಯಲ್ಲಿದ್ದನು, ಇವನು ಹಿಂದಿನ ಆರು ತಲೆಗಳ ಮರುಳಸಿದ್ಧರು ತಲೆಯೊಂದಕ್ಕೆ ೫೦ ವರ್ಷಗಳಂತೆ ಲೆಕ್ಕಹಾಕಿದರೂ ೧೪೯೭ ರಲ್ಲಿದ್ದಿರಬೇಕು ಇಲ್ಲವೇ ಇವನ ಶಿಷ್ಯರು ೬೦ ವರ್ಷ ಬದುಕಿದ್ದು ಕಡೆಗೆ ಶಿಷ್ಯರನ್ನು ಮಾಡಿಕೊಂಡರೆಂದರೂ ಕ್ರಿ. ಶ. ೧೧೫೭ ರಿಂದ ಹಿಂದಕ್ಕಿದ್ದರಲಾರದು ಉಜ್ಜಯಿನಿ ಮಠವು ಈ ಕಾಲಕ್ಕೆ ಇದ್ದಿತೆಂದು ಊಹಿಸುತ್ತೇನೆ. ಎಂದು ಅಭಿಪ್ರಾಯ ಪಟ್ಟಿದ್ದಾರೆ[೫೧].

ಉಜ್ಜಯಿನಿಯ ಗುರು ಪಟ್ಟವಲ್ಲರಿಯ ಪಂಚಪೀಠದ ಗುರುವರ್ಗದವರನ್ನು ಸೂಚಿಸುವ ವಿವರವು ಯಾವ ಕಾಲಸೂಚಿಯು ಇಲ್ಲದ ಗುರುವರ್ಗದ ಪಟ್ಟಿಯನ್ನು ದಾಖಲಿಸಿದೆ. ಈ ಬಗ್ಗೆ ಹಿರೇಹಡಗಲಿ ಪುರಾಣಿಕ ಮಠದ ವಿರೂಪಾಕ್ಷ ಶಾಸ್ತ್ರಿಯವರು ೧೯೪೪ರಲ್ಲಿ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗೇಶ್ವರ ವಿಜಯ ಎಂಬ ಕೃತಿಯನ್ನು ಮತ್ತು ೧೯೫೭ ರಲ್ಲಿ ಶ್ರೀ ಜಗದ್ಗುರು ಪಂಚ ಪೀಠಗಳ ಪರಿಚಯ ಎಂಬ ಕೃತಿಯನ್ನು ಬರೆದಿದ್ದಾರೆ. ಇದರಲ್ಲಿ ಶ್ರೀ ಉಜ್ಜಯಿನಿ ಸದ್ಧರ್ಮ ಪೀಠದ ಗುರುಪರಂಪರೆಯಲ್ಲಿ ೧೧೧ ಗುರುಗಳು ಉಜ್ಜಯಿನಿಯಲ್ಲಿ ಪೀಠವನ್ನಲಂಕರಿಸಿದ ಬಗೆಗೆ ಮಾಹಿತಿ ತಿಳಿಯುತ್ತದೆ[೫೨]. ಆದರೆ ಈ ಪೀಠದಲ್ಲಿ ಗುರುವರ್ಗದವರು ಪೀಠ ಅಲಂಕರಿಸಿ ಗುರು ಅಥವಾ ವಟುಗಳು ಯಾವ ಯಾವಕಾಲಘಟ್ಟದಲ್ಲಿ ಬದುಕಿದ್ದರು ಎಂಬ ಬಗ್ಗೆ ಚಾರಿತ್ರಿಕ ಕಾಲದ ವಿಚಾರವು ಪೂರ್ಣವಾಗಿ ತಿಳಿದು ಬರುವುದಿಲ್ಲ. ಕೇವಲ ಕಲ್ಪನಾತೀತ ವಿಚಾರಗಳಿಂದ ಈ ಪೀಠಕ್ಕೆ ಎರಡುರೀತಿಯ ಗುರುಪಟ್ಟವಲ್ಲರಿಯ ವಿವರಗಳನ್ನು ಪ್ರಸ್ತಾಪಿಸುವುದರಿಂದ, ಉಜ್ಜಯಿನಿಯ ಗುರುಪಟ್ಟವಲ್ಲರಿಯ ವಿಷಯವು ಪೂರ್ವಗ್ರಹ ಪೀಡಿತವಾದ ದಾಖಲೆಗಳು ನಿರೂಪಿತವಾದಂತೆ ತಿಳಿಯುತ್ತದೆ.

ಮರುಳಸಿದ್ಧರ ಮಠದ ಆವರಣದಲ್ಲಿರುವ ಒಂದು ಶಾಸನದಲ್ಲಿ "ಉಜ್ಜಯಿನಿಯ ಶ್ರೀಮಲ್ಲಿಕಾರ್ಜುನ ದೇವರ ಶ್ರೀ ಕಾರ್ಯಕ್ಕೆ ಬಿಟ್ಟ ಧರ್ಮ" ಎಂಬ ಶಬ್ದಗಳಿವೆ. ಸು. ಕ್ರಿ. ಶ. ೧೨೬೮ ರಚಿತವಾದ ಕಾಲವನ್ನು ಸೂಚಿಸುತ್ತದೆ. ಈ ಶಾಸನದ ಆಧಾರದ ಮೇಲೆ ಶ್ರೀ ಮರುಳಸಿದ್ಧರು ಕ್ರಿ. ಶ. ೧೨೧೦ ರ ಸುಮಾರಿಗೇ ಸಮಾಧಿಸ್ಥರಾಗಿರಬೇಕೆಂದು ನಿರ್ಣಯಿಸಿದೆ. ಈ ಅಂಶಗಳ ಆಧಾರದಿಂದ ಈ ಮಠವನ್ನು ಸುಮಾರು ಕ್ರಿ. ಶ. ೧೨೧೦ ರಿಂದ ಕ್ರಿ. ಶ. ೧೨೫೦ ರ ಒಳಗೆ ಮರುಳಸಿದ್ಧರ ಪಟ್ಟ ಶಿಷ್ಯನೂ ಆದ ತೆಲುಗುಬಾಳು ಸಿದ್ದೇಶ್ವರನು ಕಟ್ಟಿಸಿರಬೇಕೆಂದು ನಿರ್ಣಯ[೩೩]. ಎಂಬುದಾಗಿ ಪ್ರಾಚ್ಯಸಂಶೋಧಕರಾದ ಹೆಚ್, ದೇವೀರಪ್ಪ ಅವರ ಅಭಿಪ್ರಾಯವಾಗಿದೆ.

❖ 'ಉಜ್ಜಯಿನಿಯಲ್ಲಿ ಮರುಳಸಿದ್ಧರ ಬಳಿವಿಡಿದು ಬೆಳೆದು ಬಂದ ತರಳಬಾಳು ಗುರುಪಂಪರೆ ಪಟ್ಟವಲ್ಲರಿ'

ಎಂಬುದು ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದಲ್ಲಿ ಸುಮಾರು ಕ್ರಿ. ಶ. ೧೮೦೦ ರ ಕಾಲವೊಂದರ ದಾಖಲೆ ಈ ರೀತಿ ಉಲ್ಲೇಖಿಸುತ್ತದೆ. ಅದರಂತೆ ಮರುಳಸಿದ್ಧರು ಉಜ್ಜಯಿನಿಯಲ್ಲಿ ಸದ್ಧರ್ಮ ಪೀಠವನ್ನು ಸ್ಥಾಪಿಸಿ ಅದರ ಮೇಲೆ ತನ್ನ ಉತ್ತರಾಧಿಕಾರಿಯನ್ನಾಗಿ ತೆಲುಗುಬಾಳು ಸಿದ್ಧಯನ್ಯನ್ನು ಕುಳ್ಳಿರಿಸಿ ಮಾಘ ಶುದ್ಧ ಹುಣ್ಣಿಮೆಯೆಂದು 'ತರಳಬಾಳು' ಎಂದು ಹರಸಿ, ಉಜ್ಜಯಿನಿಯ ಸಮೀಪ ಕೇತನ ಹಳ್ಳಿ ಎಂಬಲ್ಲಿ ಸಮಾಧಿಸ್ಥರಾದರು. ಇಲ್ಲಿ ಮರುಳುಸಿದ್ಧರು ತಾವು ಮೊದಲ ಮಠಾಧಿಪತಿಗಳಲ್ಲ ಅವರು ಗುರು ರೇವಣಸಿದ್ಧರಿಂದ ಉಪದೇಶ ಪಡೆದು ತನ್ನ ನಂತರ ತೆಲುಗುಬಾಳು ಸಿದ್ಧನಿಗೆ ಉತ್ತರಾಧಿಕಾರ ನೀಡಿ ಮಠದ ಅಸ್ತಿತ್ವಕ್ಕೆ ಬುನಾದಿ ಹಾಕುತ್ತಾರೆ. ತೆಲುಗುಬಾಳು ಸಿದ್ಧಯ್ಯನು 'ತರಳಬಾಳು ಸಿದ್ಧೇಶ್ವರ'ನೆಂಬ ಅಭಿದಾನದಿಂದ ತನ್ನ ಗುರುವಿನ 'ತರಳಬಾಳು' ಎಂಬ ಆಶೀರ್ವಚನ-ಪಂಚಾಕ್ಷರಿಯನ್ನು ಶಿರದಲಾಂತ, ವಿಶ್ವದ ತರಳರೆಲ್ಲರ (ಇಲ್ಲಿ ತರಳರೆಂದರೆ ಸಾಮಾನ್ಯ ಮಾನವರು) ಬಾಳನ್ನು ಬೆಳಗಿಸಲು ಗುರು ಮರುಳಸಿದ್ಧನ ಧಾರ್ಮಿಕ ಸ್ವಾತಾಂತ್ರ್ಯ ಮತ್ತು ಸಮಾನತೆಗಳನ್ನು ಪ್ರಸಾರ ಮಾಡುತ್ತಾ ತನ್ನ ತರುವಾಯ ಗಡ್ಡದ ಸಿದ್ಧಲಿಂಗ ದೇವರಿಗೆ ಅಧಿಕಾರ ವಹಿಸಿ ತಾವು ಸಹ ಸಮಾಧಿಸ್ತರಾದರು. ಈತನ ಬಳಿವಿಡಿದು ಉಜ್ಜಯಿನಿಯಲ್ಲಿ ತರಳಬಾಳು ಗುರುಪರಂಪರೆಯು ಬೆಳೆದು ಬಂದಿದೆ. ಈ ಮುಂದೆ ನಮೂದಿಸಿರುವಂತೆ.

❖ ತರಳಬಾಳು ಸಿದ್ದೇಶ್ವರ

❖ ಗಡ್ಡದ ಸಿದ್ಧಲಿಂಗ ದೇವರು.

- ❖ ಕೆಂಪಪ್ಪ ದೇವರು.
- ❖ ಚೆನ್ನ ಬಸವ ದೇವರು.
- ❖ ಗುರು ಸಿದ್ಧ ದೇವರು.
- ❖ ಶಿವಲಿಂಗ ದೇವರು.
- ❖ ಗುರುಬಸವ ದೇವರು.
- ❖ ಕರಿಸಿದ್ಧ ದೇವರು.
- ❖ ಶಾಂತವೀರ ದೇವರು.
- ❖ ಜಂಬಪ್ಪ ದೇವರು.

ತರಳಬಾಳು ಜಗದ್ಗುರು ಶ್ರೀ ಜಂಬಪ್ಪ ದೇವರು ಉಜ್ಜಯಿನಿಯನ್ನು ಬಿಟ್ಟ ಬಳಿಕ ಈ ಗುರು ಪರಂಪರೆಯು ಸಿರಿಗೆರೆಯಲ್ಲಿ ಮುಂದುವರೆಯುತ್ತದೆ[೩೪].

- ❖ ಶ್ರೀ ತರಳಬಾಳು ಜಗದ್ಗುರು ಶ್ರೀ. ಗುರುಸಿದ್ಧ ದೇವರು.
- ❖ ಶ್ರೀ ಸಿದ್ಧಲಿಂಗ ದೇವರು
- ❖ ಶ್ರೀ ಗುರು ಸಿದ್ಧದೇವರು.
- ❖ ಶ್ರೀ ಶಿವಲಿಂಗರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು.
- ❖ ಶ್ರೀ ಗುರುಸಿದ್ಧ ದೇಶಿಕೇಂದ್ರ ಮಹಾಸ್ವಾಮಿಗಳವರು.
- ❖ ಶ್ರೀ ಶಿವಲಿಂಗ ದೇಶಿಕೇಂದ್ರ ಮಹಾಸ್ವಾಮಿಗಳವರು.
- ❖ ಶ್ರೀ ಗುರು ಶಾಂತರಾಜ ದೇಶಿಕೇಂದ್ರ ಮಹಾಸ್ವಾಮಿಗಳವರು.
- ❖ ಶ್ರೀ ಕಾಶೀಮಹಲಿಂಗ ಸ್ವಾಮಿಗಳು.
- ❖ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು.

❖ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು[೩೫]

ಪ್ರಸ್ತುತ ಜಗದ್ಗುರುಗಳವರು ದಿನಾಂಕ ೧೧.೦೨.೧೯೭೯ರಂದು ಪಟ್ಟಾಭಿಷಕ್ತರಾಗಿ ಪ್ರಸ್ತುತ ಪೀಠಸ್ಥರಾಗಿರುವರು.

ಈ ಗುರು ಪೀಠ ಪರಂಪರೆ ಉಜ್ಜಯಿನಿಯಲ್ಲಿ ಶ್ರೀ ಮರುಳಸಿದ್ಧರ ನಂತರ ಬೆಳೆದು ಬಂದಿರುವ ಬಗ್ಗೆ ತರಳಬಾಳು ಗುರುಪಟ್ಟವಲ್ಲರಿಯ ದಾಖಲೆಯಲ್ಲಿ ವ್ಯಕ್ತವಾದ ಗುರುಗಳ ಕಾಲದ ವಿಚಾರ ಸ್ಪಷ್ಟಪಡಿಸಿಲ್ಲ ಆದರೂ ಈ ಪೀಠದಲ್ಲಿ ೨೦ ಜಗದ್ಗುರುಗಳು ಈ ಮಠದ ಏಳಿಗೆಗೆ ಶ್ರಮಿಸಿದವರು ಈ ಮೇಲೆ ಸೂಚಿಸಿದ ಗುರುವರ್ಗವು ತರಳಬಾಳು ಮಠದ ಬೆಳವಣಿಗೆಗೆ ಕಾರಣವಾಯಿತು ಮತ್ತು ತರಳಬಾಳು ಗುರು ಪಟ್ಟವಲ್ಲರಿಯೇ ಯಥಾರ್ಥವಾದ ದಾಖಲೆ ಎಂಬುದಾಗಿ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು, ಹೆಚ್. ದೇವೀರಪ್ಪ , ಎಂ. ಗೋವಿಂದಪೈ, ಜೇರಿಗೆಕಟ್ಟಿಬಸಪ್ಪ, ಪಂಡಿತಎಸ್.ಬಸಪ್ಪ, ಅ.ನ.ಕೃಷ್ಣರಾಯರು, ಹುಲ್ಲೂರ ಶ್ರೀನಿವಾಸಜೋಯ್ಸರು, ಮೊದಲಾದ ವಿದ್ವಾಂಸರು ನಿರ್ಣಯಿಸಿರುತ್ತಾರೆ.

❖ ತರಳಬಾಳು ಗುರು ಪರಂಪರೆಯವರು ಉಜ್ಜಯಿನಿಯನ್ನು ಬಿಡಲು ಕಾರಣ

ಕ್ರಿ. ಶ. ೧೩೫೦ ರಿಂದ ೧೬೦೦ ವರೆಗಿನ ವಿಜಯನಗರದ ಕಾಲ ವೀರಶೈವ ಸಂಪ್ರದಾಯದ ಪುನರುತ್ತಾನದ ಕಾಲ, ಬಿಜ್ಜಳನ ಮರಣಾ ನಂತರ ಕಲ್ಯಾಣದಿಂದ ಚದರಿಹೋದ ಶಿವಶರಣರ ಚಟುವಟಿಕೆಗಳು ಕೇಂದ್ರೀಕೃತ ಸ್ವರೂಪವಿಲ್ಲದೆ ಸೊರಗಿದ್ದವು. ಹಂಪೆಯಂಥ ವಿಶಾಲ ರಾಜಧಾನಿಯಲ್ಲಿ ವೀರಶೈವರಿಗೆ ಒಂದುಗೂಡಲು ದೊರಕಿದ ಅವಕಾಶ, ಪ್ರೌಢದೇವರಾಯ ಹಾಗೂ ಅವನ ಮಂತ್ರಿಗಳಾದ ಲಕ್ಕಣ್ಣ ಹಾಗೂ ಜಕ್ಕಣ್ಣರಿಂದ ದೊರೆತ ಬೆಂಬಲ ಈ ಸಂಪ್ರಾದಾಯದ ಪುನರುತ್ಥಾನಕ್ಕೆ ಯೋಗ್ಯ ವಾತಾವರಣವನ್ನು ಒದಗಿಸಿದವು. ಮುಂದೆ ಇಸ್ಲಾಂನ ಆಕ್ರಮಣದಿಂದ ಕಲ್ಯಾಣದ ಬಳಿ ಉಳಿದಿದ್ದ ವೀರಶೈವರು ಹಂಪೆಯ ಪರಿಸರದಲ್ಲಿ ಆಶ್ರಯ ಪಡೆದಿರಬೇಕು. ವೈದಿಕ ಮತಸ್ಥರು ನಡೆಸಿದ ವೇದಭಾಷ್ಯ ರಚನೆಯ ಬೃಹತ್ ಕಾರ್ಯ ಚಟುವಟಿಕೆಗಳನ್ನು ನಡೆಸಲು ವೀರಶೈವರಿಗೆ ಪ್ರೇರಣೆ ನೀಡಿರಬೇಕೆಂದು ಎಂ. ಚಿದಾನಂದ ಮೂರ್ತಿಯವರ ಅಭಿಪ್ರಾಯ. ಈ ಕಾಲದಲ್ಲಿ ಜೈನ ಸಂಪ್ರದಾಯವು ನಿಧಾನವಾಗಿ ಸೊರಗುತ್ತ ಪೇಟೆ ಪಟ್ಟಣಗಳಲ್ಲಿನ ಅನೇಕ ವಣಿಕ ಜೈನರು ವೀರಶೈವರಾಗಿ ಪರಿವರ್ತನೆ ಹೊಂದಿದರೂ, ಶ್ರೀಮಂತರಾದ ಈ ಬಣಜಿಗರು ವೀರಶೈವ ಸಂಪ್ರದಾಯದ ಧಾರ್ಮಿಕ ಚಟುವಟಿಕೆಗಳಿಗೆ ಬೆಂಬಲವಾಗಿ ನಿಂತರು[೩೬].

ಹರದನಹಳ್ಳಿ ತೋಂಟದ ಸಿದ್ಧಲಿಂಗ ಯತಿಗಳ (ಕ್ರಿ.ಶ.೧೫೦೦-೮೪) ಬಳಿವಿಡಿದು ಬೆಳೆವ ೧೦೧ ವಿರಕ್ತರ ವೀರಶೈವಧಾರ್ಮಿಕ ಚಳುವಳಿಯು ಭರದಿಂದ ಸಾಗಿದ ಕಾಲವದು[೩೭]. ಈ ಚಳುವಳಿಯು ಕರ್ನಾಟಕದಲ್ಲಿ ೧೨ ನೇ ಶತಮಾನದ ಆಂದೋಲನಕ್ಕಿಂತಲೂ ಮಿಗಿಲಾಗಿ ಪ್ರಭಾವವನ್ನು ಗಳಿಸಿತ್ತೆಂದರೆ ಅನುಚಿತವಾಗಲಾರದು. ಬಸವಾದಿ ಶಿವಶರಣರು ಕಲ್ಯಾಣದಲ್ಲಿ ಕುಳಿತು ಚಳುವಳಿ ಮಾಡಿದರೆ ೧೦೧ ವಿರಕ್ತರು ನಾಡಿನ ೧೦೧ ಮೂಲೆಯನ್ನು ಸುತ್ತಿದರು. ಇವರ ಪ್ರಯತ್ನದ ಫಲವಾಗಿ ಅನೇಕ ರಾಜಾಧಿರಾಜರು ಲಿಂಗಧಾರಿಗಳಾದರು[೩೮].

೧೨ನೇ ಶತಮಾನದ ಧ್ಯೇಯವು ಪ್ರತಿಯೊಬ್ಬ ವ್ಯಕ್ತಿಯನ್ನು ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಸ್ವತಂತ್ರನನ್ನಾಗಿ, ಸಮಾನನನ್ನಾಗಿ ಮಾಡುವ ಮೂಲಕ ಮಾನವತೆಯ ತಳಹದಿಯ ಮೇಲೆ ಸಮಾಜ ಕಟ್ಟುವುದಾಗಿದ್ದಿತು. ಪ್ರತಿ ವ್ಯಕ್ತಿಯನ್ನು ಕಾಯಕನಿರತನನ್ನಾಗಿ ಮಾಡುವುದಾಗಿದ್ದಿತು. ಬ್ರಾಹ್ಮಣ ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಜಾತಿಭೇದವನ್ನು, ವರ್ಯೋ-ಲಿಂಗಗಳ ತಾರತಮ್ಯವನ್ನು ತೊಡೆದು ಹಾಕಿ ಮಾನವ ಕಲ್ಯಾಣ ಸಾಧಿಸುವುದೇ ಬಸವಾದಿ ಶರಣರ ಗುರಿಯಾಗಿದ್ದಿತು.

೧೦೧ ವಿರಕ್ತರು ವರ್ಣಭೇದವನ್ನು ಖಂಡಿಸುತ್ತಿದ್ದರು ನಿಜ. ಆದರೆ ಅತ್ಯಂತ ವಿಷಾದಕರವಾದ ಸಂಗತಿಯೆಂದರೆ ಹಳೆಯ ನಾಲ್ಕು ವರ್ಣಗಳ ಸ್ಥಾನದಲ್ಲಿ ಅಯ್ಯ-ಭಕ್ತ ಎಂಬ ಭೇದವನ್ನು ಬಸವಾದಿ ಶರಣರ ಬೋಧನೆಗೆ ವಿರುದ್ಧವಾಗಿ ಸೃಷ್ಟಿಸಿದರು. ವರ್ಣಭೇದವಿರ ಕೊಡದೆಂದು ಯಾವ ಬಾಯಿಯಲ್ಲಿ ಹೇಳಿದರೋ ಅದೇ ಬಾಯಿಯಲ್ಲಿ ಅಯ್ಯ-ಭಕ್ತ ಎಂಬ ವರ್ಗಗಳನ್ನು ಸೃಷ್ಟಿಸಿದರು.

ಕಾಯಕ ತತ್ವದ ಗತಿಯೂ ಹೀಗೆಯೇ ಆಯಿತು. ಅಯ್ಯತನವೂ ಒಂದು ಕಾಯಕವೆಂದೇ ಪರಿಗಣಿಸಲ್ಪಟ್ಟಿತು. ಆ ಕಾಯಕದ ಉಪಕರಣಗಳೆಂದರೆ ಬಗಲಲ್ಲಿ 'ಶಿವಕೊಟ್ಟ ಜೋಳಿಗೆ', ಕೈಯ್ಯಲ್ಲೊಂದು ಕೋಲು ಎಂಬುವಂತಾಯಿತು. ಹೊಟ್ಟೆಯ ಪಾಡಿಗಾಗಿ ಬೇಡುವುದೇ 'ಕಾಯಕ'ವಾಗಿ ಪರಿಗಣಿಸಿತು. 'ಅಯ್ಯನು' ಮೇಲು 'ಭಕ್ತನು' ಕೀಳು ಎಂಬ ಭಾವನೆ ಬೆಳೆಯಲಾರಂಭಿಸಿತು. ಭಕ್ತನು ಅಯ್ಯನಾಗಲಾರನೆಂಬ ಹುರುಳಿಲ್ಲದವಾದ ಹುಟ್ಟಿಕೊಂಡಿತು. ತ್ರಿವಿಧದೀಕ್ಷೆಯಿಂದ ಭಿನ್ನವಾದ 'ಅಯ್ಯಚಾರ ದೀಕ್ಷೆ' ಕೊಡಲ್ಪಟ್ಟು ಬಸವಣ್ಣನವರು ನಿರ್ಮಿಸಿದ ಸುಭದ್ರ ಸಮಾಜಮಂದಿರ ಭಗ್ನವಾಯಿತು. ರಾಜಮಹಾರಾಜರುಗಳಿಂದಲೂ ಪಾಳೆಯಗಾರರಿಂದಲೂ ಈ ನೂರೊಂದು ವಿರಕ್ತರೆಂಬುವರು ಅವರೇ ಅಯ್ಯ (ಜಂಗಮ) ಗಳ ನಾಕರು-ದಾನದತ್ತಿಗಳನ್ನು ಪಡೆದರು[೩೯].

ಕರ್ನಾಟಕದೊಳಗೆ ಮತ್ತು ಹೊರಗೆ ಅನೇಕ ರಾಜರು ವೀರಶೈವಧರ್ಮದ ಪ್ರಭಾವಕ್ಕೊಳಗಾದರು. ಅವರಲ್ಲಿ ಪ್ರಮುಖವಾಗಿ ಕಾಕತೀಯ, ಯಾದವ, ವಿಜಯನಗರದ ಸಂಗಮದಂತಹ ದೊಡ್ಡರಾಜಮನೆತನಗಳು ಮಾತ್ರವಲ್ಲದೆ. ಕೆಳದಿ, ಹಾಗಲವಾಡಿ, ಸ್ವಾದಿ, ಬೀಳಗಿ ಮತ್ತು ಕೊಡಗು ಇಂತಹ ಸಣ್ಣರಾಜ್ಯಗಳ ಅರಸರು ವೀರಶೈವ ಧರ್ಮದ ಪ್ರಭಾವಕ್ಕೊಳಪಟ್ಟಿದ್ದರು[೪೦]. ಇವರಲ್ಲದೆ ಹರಪನಹಳ್ಳಿ ಪಾಳೆಯಗಾರರು ಹಾಗೂ ಜರಮಲಿ ನಾಯಕರು ಸಹ ಆಗಿದ್ದರು. ಈ ಪಾಳೆಯಗಾರರು ಮೂಲತ: ಬೇಡರಿಂದ ಬಂದವರಾಗಿದ್ದು ಮುಂದೆ ಇವರು ವೀರಶೈವ ಗುರುಪೀಠದವರಿಂದ ಮತಾಂತಾರ ಹೊಂದಿರಬೇಕು ನಂತರ ಇವರು ಆ ಧರ್ಮದ ಸ್ಥಾನಮಾನವನ್ನು ಉತ್ತಮಗೊಳಿಸಲು ಶ್ರಮಿಸಿದರೂ ವೀರಶೈದ ಮಠಗಳನ್ನು ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದಕ್ಕಾಗಿ ಸ್ವಲ್ಪ ಭೂಮಿಯನ್ನು ದಾನವಾಗಿ ನೀಡುತ್ತಿದ್ದರು[೪೧]. ಹೀಗೆ ವೀರಶೈವ ಮಠಮಾನ್ಯಗಳಿಗೆ ಅವರು ನಿಷ್ಠರಾಗಿರುತ್ತಿದ್ದರು. ಬಸವಣ್ಣನವರಿಗಿಂತ ಪೂರ್ವದಲ್ಲಿದ್ದ ಕಾಳಾಮುಖ, ಲಾಕುಲೀಶ ಮಠಗಳನ್ನು ಜೀರ್ಣೋದ್ಧಾರಗೊಳಿಸಿ ಅವನ್ನು ಆಕ್ರಮಿಸಿಕೊಂಡರು, ಹೊಸ ಮಠಗಳನ್ನು ಕಟ್ಟಿ ದಾನದತ್ತಿಗಳನ್ನು ಪಡೆಯಲಾರಂಭಿಸಿದರು. ತತ್ವಗಳನ್ನು ಮಾರಿ ಮಠಗಳನ್ನು ಕಟ್ಟಿಕೊಂಡರು. ೧೨ ನೇ ಶತಮಾನದ ಚಳವಳಿಯ ಸಿದ್ಧಾಂತದ ಮೇಲೆ ರೂಪುಗೊಂಡಿದ್ದ ಅನೇಕ ಮಠ ಮಹಂತುಗಳನ್ನು ಆಕ್ರಮಿಸಲಾರಂಭಿಸಿದರು. ಹದಿನೆಂಟನೆಯ ಶತಮಾನದಲ್ಲಿ, ಈ ಕಾರ್ಯದಲ್ಲಿ ನಿಷ್ಣಾಂತರಾಗಿದ್ದವರು ಸಾರಂಗ ಮಠಾಧೀಶ್ವರರಾಗಿದ್ದ ಸಾರಂಗದೇವ ಮತ್ತು ಅವರ ಪರಂಪರೆಯವರು ಉಜ್ಜಯಿನಿಯ ಮಠವನ್ನು ಬಹುಚಾಣಾಕ್ಷತನದಿಂದ ಆಕ್ರಮಿಸಿಕೊಂಡವರು.

ಸಾರಂಗ ಮಠದ ಚರಿತ್ರೆಯನ್ನು ಹೇಳುವ ಎರಡು ಹಸ್ತಪ್ರತಿಗಳಿವೆ. ಅವುಗಳಲ್ಲಿ ಹೇಳಿರುವ ವಿಷಯವನ್ನು ಸಂಗ್ರಹಿಸಿದೆ. ಫ ಗು ಹಳಕಟ್ಟಿ ಅವರು 'ಸಾರಂಗ ಮಠಾಧೀಶ್ವರರು' ಎಂಬ ಹೊತ್ತಿಗೆಯನ್ನು ಬರೆದು ಪ್ರಕಟಿಸಿದ್ದಾರೆ. ಅವರೇ ಹೇಳುವಂತೆ ಆ ಗ್ರಂಥದಲ್ಲಿ ಅನೇಕ ಅನೈತಿಹಾಸಿಕ ಅಂಶಗಳಿವೆ. ಆದರೆ ಅದರಲ್ಲಿ ಹೇಳಿರುವ ಕೆಲವು ಸಂಗತಿಗಳಿಗೂ ಬಳ್ಳಾರಿ ಜಿಲ್ಲಾ ಗೆಜೆಟಿಯರ್'ದಲ್ಲಿ ಹೇಳಿರುವ ಕೆಲವು ಸಂಗತಿಗಳಿಗೂ ಹೊಂದಾಣಿಕೆಯಾಗುತ್ತದೆ. ಉಜ್ಜಯಿನಿಯ ಸದ್ಧರ್ಮ ಸಿಂಹಾಸನಾಧೀಶರಾಗಿದ್ದ ಜಂಬಪ್ಪ ಒಡೆಯರು ಸಿರಿಗೆರೆಯಲ್ಲಿಯೇ ನೆಲೆಸುವ ಸಂದರ್ಭ ಹೇಗೆ ಉಂಟಾಯಿತೆಂಬುದನ್ನು ಈ ಗ್ರಂಥಗಳಲ್ಲಿ ಹೇಳಿರುವ ಹಲವು ಅಂಶಗಳ ಆಧಾರದಿಂದ ಅವುಗಳಿಗೆ ಪೋಷಕವಾಗಿರುವ ಇತರ ಪ್ರಮಾಣ ಗ್ರಂಥಗಳನ್ನಾಧರಿಸಿ ಚಿತ್ರಿಸಬಹುದು.

'ಘನಲಿಂಗಚರಮೂರ್ತಿ ಕಾಶೀಸಾರಂಗ ಸಿಂಹಾಸನಪತಿ' 'ಕಾಶೀಸಾರಂಗ ಸಿಂಹಾಸನಪತಿ' ಎಂದು ಬರೆದುಕೊಳ್ಳುತ್ತಿದ್ದ ಸಾರಂಗದೇವರು ಅದ್ವಿತೀಯ ಸಾಹಸಿಗಳಾಗಿದ್ದರು. ವೀರಶೈವ ಪ್ರಚಾರ ಕಾರ್ಯಲ್ಲಿ ಶಿಷ್ಯ ಸಂಗ್ರಹ ಮಾಡುವುದರಲ್ಲಿ ಅವರನ್ನು ಸರಿಗಟ್ಟುವವರು ಯಾರೂ ಇರಲಿಲ್ಲ ೧೨ ನೇ ಶತಮಾನದಲ್ಲಿ ಭರತಖಂಡದ ಅನೇಕ ಭಾಗಗಳಲ್ಲಿ ಸಂಚರಿಸಿದವರು. ಮುಸಲ್ಮಾನ ದೊರೆಗಳ ಮೇಲೆಯೂ ಪ್ರಭಾವ ಬೀರಿ ಮಠಮಾನ್ಯಗಳನ್ನು ಸಂಪಾದಿಸಿದರು. ಬೆಳ್ಳುಬ್ಬೆ, ಎಳಮಲಿ, ಹುನಗುಂದ ಮುಂತಾದ ಪ್ರಾಂತ್ಯಗಳಲ್ಲಿದ್ದ ಪಾಳೇಗಾರರು ಇವರಿಂದ ಲಿಂಗದೀಕ್ಷೆ ಪಡೆದು ಮಠಮಾನ್ಯಗಳನ್ನು ಕೊಟ್ಟರು. ಇವರಿಗೆ ಮಳೆಯ ಮಲ್ಲೇಶ ಎಂಬ ಇನ್ನೊಂದು ಹೆಸರೂ ಇದ್ದಿತು. ಬಿಜಾಪುರ ತಾಲೂಕಿನ ಕೊಲ್ಲಾಪುರದ ದೇಸಾಯಿಯ ರೋಗವನ್ನು ಪರಿಹಾರ ಮಾಡಿದ್ದರಿಂದ ಬೆಳ್ಳುಬ್ಬಯಲ್ಲಿ ಒಂದು ಮಠವು ಕಟ್ಟಿಸಿಕೊಡಲ್ಪಟ್ಟಿತು. ಆದುದರಿಂದಲೇ ಇವರಿಗೆ ಬೆಳ್ಳುಬ್ಬೆಯ ಮಳೆಮಲ್ಲೇಶ ಎಂದು ಹೆಸರು ಬಿದ್ದಿತು. ಶಿವಗಂಗೆಯ ಪ್ರಾಂತದಲ್ಲಿ "ಅನೇಕ ಕಾಲ ಮಳೆ ಇಲ್ಲದೆ ದುರ್ಭಿಕ್ಷ ಬಿದ್ದಿರಲು ಅಲ್ಲಿ ಮಳೆಯು ಕರೆಯುವಂತೆ ಮಾಡಲು ಇವರಿಗೆ ಮಳೆಯ ಮರುಳಸಿದ್ಧೇಶ್ವರ" ಎಂಬ ಹೆಸರು ಬಂದಿತೆಂದು 'ಸಾರಂಗಚರಿತೆ' ಯಲ್ಲಿ ಹೇಳಿದೆ. ಈ ಘಟನೆ ನಡೆದ ನಂತರವೇ ಸಾರಂಗ ದೇವನು ಬೆಳ್ಳುಬ್ಬೆ ಪ್ರಾಂತಕ್ಕೆ ಹೋಗಿರಬೇಕು, ಕೊಲ್ಲಾಪುರದ ದೇಸಾಯಿಯ ಕಾಲ ಕ್ರಿ ಶ . ೧೬೫೦ ಎಂದು ಅದ್ರೀಶ ಕವಿಯ 'ಪ್ರೌಢರಾಯನ ಕಾವ್ಯ' ದಿಂದ ಗೊತ್ತಾಗುತ್ತದೆ.

ತಾವು ಹೋದೆಡೆಯಲ್ಲೆಲ್ಲ ಜನರಿಗೆ ಲಿಂಗಧಾರಣೆ ಮಾಡುವುದು, ಅಲ್ಲಿ ಮಠ ಕಟ್ಟಿಸಿಕೊಳ್ಳುವುದು, ಆ ಮಠಕ್ಕೆ ತಮ್ಮ ಬಂಧು ವರ್ಗದವರನ್ನು ನೇಮಿಸುವುದು, ಸಾರಂಗದೇವರ ಕಾರ್ಯನೀತಿಯಾಗಿತ್ತು. ವೀರಶೈವ ಸಂಸ್ಕೃತಿಯ ಪ್ರಧಾನ ಕೇಂದ್ರಗಳ ಮೇಲೆಯೂ ಅವರಿಗೆ ಎಲ್ಲಿಲ್ಲದ ಅಭಿಮಾನ, ಶ್ರೀ ಶೈಲದಲ್ಲಿ ತಮ್ಮ ಶಾಖಾಮಠವನ್ನು ಸ್ಥಾಪಿಸಿದರು. ಉಜ್ಜಯಿನಿಗೆ ಬಂದು ಅಲ್ಲಿಯೂ ಒಂದು 'ಸಾರಂಗ ಮಠ' ವನ್ನು ಸ್ಥಾಪಿಸಲೆತ್ನಿಸಿದರು. ಜರಮಲೆಯ ಪಾಳೆಯಗಾರನು ಅದಕ್ಕೆ ಅವಕಾಶ ಕೊಡಲಿಲ್ಲ. ನಿರಾಶರಾಗಿ ಹಿಂದಿರುಗಬೇಕಾಯಿತು. ಅಲ್ಲಿಂದ ಕಪ್ಪಡಿ ಕ್ಷೇತ್ರಕ್ಕೆ ಹೋಗಿ ವಿರೋಧಿಗಳನ್ನು ಭಕ್ತರನ್ನಾಗಿ ಮಡಿಕೊಂಡು ಅಲ್ಲಿಯೂ ಒಂದು ಮಠವನ್ನು ಸ್ಥಾಪಿಸಿದರು. ಈ ಸಾರಂಗ ಮಠವು ಸಂಗಮೇಶ್ವರ ದೇವಾಲಯದ ಬಲಪಕ್ಕದಲ್ಲಿ-ಯೇ ಈಗಲೂ ಇದೆ.

ಸಾರಂಗ ದೇವರು ಲಿಂಗೈಕ್ಯರಾಗಲು ಅವರ ಗದ್ದುಗೆಯು ಕಪ್ಪಡಿಯಲ್ಲಿಯೇ ಸ್ಥಾಪಿತವಾಯಿತು. ಅವರ ತಮ್ಮನ ಮಗನಾದ ಶಿವಸಂಗಪ್ಪನೂ ಆತನ ಮಗನಾದ ಸಣ್ಣ ಸಾರಂಗೇಶ್ವರನೂ ಪ್ರಚಾರ ಕಾರ್ಯದಲ್ಲಿ ತೊಡಗಿದರು. ಹಿರಿಯ ಸಾರಂಗದೇವಗಿಂತಲೂ ಇವರು

ಚಾಣಾಕ್ಷರು. ಹರಪನಹಳ್ಳಿಯ ಪಾಳೆಯಗರನಿಗೂ ಜರಮಲೆಯ ದೊರೆಗೂ ಮನಸ್ತಾಪ ವುಂಟಾಗುವಂತೆ ಮಾಡಿ ಉಜ್ಜಯಿನಿ ಸದ್ಧರ್ಮ ಪೀಠವನ್ನು ಅಕ್ರಮಿಸಿಕೊಂಡರು. ಹರಪನಹಳ್ಳಿ ಮತ್ತು ಜರಮಲೆಗಳು ಚಿಕ್ಕಪಾಳೆಯ ಪಟ್ಟುಗಳು ಇವರು ವಾಲ್ಮೀಕಿ ವಂಶ್ಥರು[೪೨].

ಬಳ್ಳಾರಿ ಜಿಲ್ಲೆಯಲ್ಲಿ ಚಾರಿತ್ರಿಕ ಮಹತ್ವ ಪಡೆದ ಗ್ರಾಮಗಳ ಪೈಕಿ ಜರಿಮಲೆಯು ಒಂದು. ಇದು ಕೂಡ್ಲಿಗಿಯಿಂದ ಆಗ್ನೇಯಕ್ಕೆ ೧೪ ಕಿ. ಮೀ ದೂರದಲ್ಲಿದೆ. ಪುಟ್ಟ ಗ್ರಾಮವಾಗಿರುವ ಜರಿಮಲೆ ಅನೇಕ ಅರಸು ಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದಿತು. ವಿಜಯನಗರದ ತರುವಾಯ ಈ ಪ್ರದೇಶವನ್ನು ಸ್ಥಳೀಯ ಬೇಡ–ನಾಯಕರು ರಾಜ್ಯಸ್ಥಾಪಿಸಿ ಆಳತೊಡಗಿದರು. ಇವರು ಸಹಾ ಊಳಿಗದವರೇ, ಶೋಷತರೆ ಆಗಿದ್ದು, ಜನಪ್ರತಿನಿಧಿಗಳಾದರೂ ಇವರ ಮೇಲೆ ಮತ್ತೊಬ್ಬರ ಹಿಡಿತವಿದ್ದಿತು. ಗುಡೆಕೋಟೆ, ಹರಪನಹಳ್ಳಿ, ರಾಯದುರ್ಗ, ಚಿತ್ರದುರ್ಗ ಪಾಳೆಯಗಾರರಂತೆ ಜರಿಮಲೆಯವರು ಆಳ್ವಿಕೆ ನಡೆಸಿದ್ದು ಸ್ಮರಣೀಯ[೪೩]. ಅವರ ಚರಿತ್ರೆ ಬಗ್ಗೆ ಒಂದೆರಡು ಲೇಖನಗಳು ಮಾತ್ರ ಬೆಳಕನ್ನು ಕಂಡಿವೆ. ಅವುಗಳಲ್ಲಿ ಪ್ರೊ. ಲಕ್ಷಣ್ ತೆಲಗಾವಿ ಅವರು ಸಂಪಾದಿಸಿದ ಜರ್ಮಲೆಯ ಪಾಳೆಗಾರರ ಕುರಿತ ಹಸ್ತಪ್ರತಿಯ ಲೇಖನ ಮತ್ತು ಶ್ರೀ . ಸಿ. ಎಂ. ವೀರಭದ್ರಯ್ಯನವರ ಲೇಖನಗಳು ಮುಖ್ಯವೆನಿಸಿವೆ.[೪೪] ಹರಪನಹಳ್ಳಿ ಹಿಂದೆ ಬಳ್ಳಾರಿ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿತ್ತು. ಇಂದು ಇದು ದಾವಣಗೆರೆ ಜಿಲ್ಲೆಗೆ ಸೇರಿದರೂ ಬ್ರಿಟೀಷರ ಪೂರ್ವ ಮತ್ತು ಅನಂತರದಲ್ಲಿ ಬಳ್ಳಾರಿ ಚರಿತ್ರೆಯೊಂದಿಗೆ ಹೊಂದಿಕೊಂಡಿರುವುದರಿಂದ ಬಳ್ಳಾರಿ ಜಿಲ್ಲೆಯ ಒಂದು ಭಾಗವೆಂದೇ ಪರಿಗಣಿಸಲಾಗುತ್ತದೆ. ಪಾಳೆಯಗಾರರ ಆಳ್ವಿಕೆ ನಡೆಸಿದ ಪ್ರಸಿದ್ಧ ರಾಜಧಾನಿ ಕೇಂದ್ರವು ಇದಾಗಿತ್ತು. ಕ್ರಿ. ಶ. ೧೫೬೫ ರಲ್ಲಿ ವಿಜಯನಗರ ಸಾಮ್ರಾಜ್ಯವು ತಾಳಿಕೋಟೆ ಕದನದಲ್ಲಿ ಪರಾಭವಗೊಂಡಾಗ ಈ ಪಾಳೆಯಗಾರರು ಸ್ವತಂತ್ರರಾದರು[೪೫].

ಈ ಪಾಳೆಯಗಾರರ ಆಳ್ವಿಕೆಯು ಹದಿನೇಳನೆಯ ಶತಮಾನದ ಉತ್ತರಾರ್ಧದಲ್ಲಿ. ಹದಿನೆಂಟನೆಯ ಶತಮಾನದ ಆದಿಭಾಗದಲ್ಲಿ (ಕ್ರಿ.ಶ. ೧೬೮೦–೧೭೦೫) ಹರಪನಹಳ್ಳಿಯ ಪಾಳೆಯಗಾರನಾಗಿದ್ದ ಬಸವಂತನಾಯಕನು ತಾನೂ ತನ್ನ ಬಂಧುಗಳೂ ವೀರಶೈವ ಮತವನ್ನು ವೀರಶೈವ ಅರಸ (ಕೆಳದಿಯವರು)ರನ್ನು ಆಶ್ರಯಿಸಿದರೆ ತನ್ನ ರಾಜ್ಯವೂ ಸುಭದ್ರವೂ ಸಂಪದ್ಭ–ರಿತವೂ ಆಗುವುದೆಂದು ಬಗೆದು ತನ್ನ ಆಶ್ರಯವನ್ನು ತನ್ನ ಬಂಧುವೇ ಆಗಿದ್ದ ಜರಮಲೆಯ ಪಾಳೆಯಗಾರ ಬೊಮ್ಮಣ್ಣನಾಯಕನಿಗೆ ತಿಳಿಸಿ 'ನೀನೂ ಲಿಂಗವಂತನಾಗುವುದು ಶ್ರೇಯಸ್ಕರ' ಎಂದು ಬೋಧಿಸಿದ, ಜರಮಲೆಯ ಪಾಳೆಯಗಾರ ತನ್ನದೇ ಆದ ಕಾರಣಗಳಿಂದಾಗಿ, ಲಿಂಗವಂತನಾಗಲು ಒಪ್ಪಲಿಲ್ಲ.

ಆತನಿಗೆ ಮರುಳಸಿದ್ಧೇಶ್ವರರ ಬಗೆಗೂ ತರಳಬಾಳು ಗುರುಗಳ ಬಗೆಗೂ ಅಪಾರವಾದ ಭಕ್ತಿ ವಿಶ್ವಾಸಗಳಿರುವುದೆಂಬುದು ಬಸವಂತನಾಯಕನಿಗೆ ತಿಳಿದಿತ್ತು. ಉಜ್ಜಯಿನಿಯು ಜರಮಲೆಯ ಆಡಳಿತಕ್ಕೊಳಪಟ್ಟಿದ್ದುದರಿಂದ ಆ ಮಠದ ಗುರುಗಳೇ ಜರಮಲೆಯ ಪಾಳೆಯಗಾರರ ಮೇಲೆ ತಮ್ಮ ಪ್ರಭಾವವನ್ನು ಬೀರಿರುವರೆಂದು ಅನುಮಾನಿಸಿದ. ಜರಮಲೆಯವನು ಲಿಂಗಧಾರಣೆಗೆ ಏಕೆ ಒಪ್ಪಲಿಲ್ಲವೋ ತಿಳಿಯದು, ಬಸವಂತನಾಯಕನು ಉಜ್ಜಯಿನಿಯ ಗುರುಗಳಿಂದ ದೀಕ್ಷೆ ಪಡೆಯುವುದು ಬೇಡವೆಂದೂ ಬೇರೊಬ್ಬ ಗುರುವಿನಿಂದ ಪಡೆಯುವುದೇ ಕ್ಷೇಮವೆಂದೂ ತೀರ್ಮಾನಿಸಿದ.

ಆ ಸಮಯದಲ್ಲಿ ಹಿರಿಯ ಸಾರಂಗದೇವರ ತಮ್ಮನ ಮಗನಾದ ಶಿವಸಂಗಪ್ಪಯ್ಯ ಎಂಬುವನು ಕಪ್ಪಡಿಯ ಮಠದ ಅಧಿಕಾರಿಯಾಗಿದ್ದ. ಆತನನ್ನು ಬಸವಂತನಾಯಕನು ಕರೆಸಿಕೊಂಡು ಲಿಂಗಧಾರಣೆ ಮಾಡಿಸಿಕೊಂಡ ಸಾರಂಗ ಚರಿತ್ರೆಯಲ್ಲಿ ಹೇಳಿರುವಂತೆ, ಶಿವ ಸಂಗಪ್ಪಯ್ಯನು ಬಳ್ಳಾರಿ ಜಿಲ್ಲಾ ಕೊಟ್ಟೂರು ಗ್ರಾಮಕ್ಕೆ ಕರೆಸಲ್ಪಟ್ಟವನಾಗಿ ಬಾಳೇಹಳ್ಳಿಯ ಸಿಂಹಾಸ–ನಾಧಿಪತಿಗಳಿಂದ ಚನ್ನವೀರಸ್ವಾಮಿಗಳು ಮತ್ತು ಪರ್ವತ ಸಿಂಹಾಸನಾಧಿಪತಿಗಳಾದ ವೀರಭಿಕ್ಷಾವರ್ತಿ ಸ್ವಾಮಿಗಳು ಈ ಮೂವರು ಹರಪನಹಳ್ಳಿಯ ಸಂಸ್ಥಾನದ ದೊರೆಗೆ ವೀರಶೈವ ದೀಕ್ಷೆಯನ್ನು ಕೊಟ್ಟರು. ಈ ದೊರೆಯ ಹೆಸರು ಬಸವಂತನಾಯಕ. ಈತನ ಆಳ್ವಿಕೆ ಕ್ರಿ ಶ.೧೬೬೧ ರಿಂದ ೧೭೦೫ ರ ವರೆಗೆ ಬಸವಂತನಾಯಕನೇ ವೀರಶೈವ ಮತಕ್ಕೆ ಸೇರಿದನೆಂದೂ ಆತನ ಇನ್ನೊಂದು ಹೆಸರು ಕೊಟ್ರಪ್ಪನಾಯಕ ಎಂದು ಬಳ್ಳಾರಿ ಜಿಲ್ಲಾ ಗೆಜೆಟಿಯರ್‌ನಲ್ಲಿ ಉಲ್ಲೇಖಿಸಿದೆ.

ಈ ದೀಕ್ಷಾಕಾರ್ಯ ಸಮಾರಂಭದಲ್ಲಿ ಶಿವಸಂಗಪ್ಪಯ್ಯ ಪ್ರಧಾನಪಾತ್ರ ವಹಿಸಿದ್ದನೆಂಬುದು ನಿಸ್ಸಂದೇಹ. ಇದಕ್ಕೆ ಪ್ರತಿಫಲವಾಗಿ ಉಜ್ಜಯಿನಿಯಲ್ಲಿ ಒಂದು ಮಠವನ್ನು ಕಟ್ಟಿಸಿಕೊಡಬೇಕೆಂದು ಬಸವಂತನಾಯಕನನ್ನು ಕೇಳಿಕೊಂಡನು. ಆಗ ಉಜ್ಜಯಿನಿಯ ಸದ್ಧರ್ಮ ಪೀಠದಲ್ಲಿ ತರಳಬಾಳು ಗುರುಗಳಾದ ಶ್ರೀ ಕರಿಸಿದ್ಧ ದೇವರು ಉಪಸ್ಥಿತರಿದ್ದುದರಿಂದ ನಾಯಕನು ಅವನಿಗೆ ಬೇರೆ ಒಂದು ಮಠವನ್ನು ಕಟ್ಟಿಸಿಕೊಡಬೇಕಾಗಿತ್ತು.

ಉಜ್ಜಯಿನಿಯು ಆಗ ಬಸವಂತ ನಾಯಕನ ಅಧೀನದಲ್ಲಿರಲಿಲ್ಲವಾದರೂ ಆತನ ಮತ್ತು ಜರಮಲೆಯ ದೊರೆ ಸ್ನೇಹ ಬಾಂಧವ್ಯಗಳು ಸಂಪೂರ್ಣವಾಗಿ ಕಡಿದು ಹೋಗಿರಲಿಲ್ಲ, ಆತನನ್ನು ಕೇಳಿಕೊಂಡು ಉಜ್ಜಯಿನಿಯಲ್ಲಿ ಒಂದು ಮಠವನ್ನು ಕಟ್ಟಿಸಿಕೊಟ್ಟು ದಾನದತ್ತಿಗಳನ್ನು ಕೊಟ್ಟ. ಆ ಮಠಕ್ಕೆ ಶಿವಸಂಗಪ್ಪನ ಮಗ ಸಣ್ಣ ಸಾರಂಗೇಶ್ವರನೆಂಬುವನು ಚರಂತಿಯಾಗಿ ನೇಮಿಸಲ್ಪಟ್ಟರು. ಇದೇ 'ಹೆಂಚಿನ ಮಠ' ಎಂದು ಉಜ್ಜಯಿನಿ ಗ್ರಾಮದ ಸರಕಾರೀ ದಾಖಲೆಗಳಲ್ಲಿ ನಮೂದಿತವಾಗಿರುತ್ತದೆ.

❖ ಉಜ್ಜಯಿನಿಯ ಸದ್ಧರ್ಮ ಸಿಂಹಾಸನದ ಆಕ್ರಮಣಕ್ಕೆ ಪೂರ್ವಸಿದ್ಧತೆ.

ದಿನಗಳು ಉರುಳಿದವು 'ಚರಂತಿ'ಯಾಗಿದ್ದ ಸಣ್ಣಸಾರಂಗೇಶ್ವರನು ಸದ್ಧರ್ಮ ಸಿಂಹಾಸನವನ್ನು ಆಕ್ರಮಿಸಲು ತವಕಿಸುತ್ತಿದ್ದ. ಅದಕ್ಕೆ ತಕ್ಕಂತೆ ಅದ್ವಿತೀಯ ಪಂಡಿತನೂ ವಾಗ್ಮಿಯೂ ಆಗಿದ್ದುದು ನಿಜ. ಅನುಕೂಲ ಪರಿಸ್ಥಿತಿಗಾಗಿ ಕಾದು ನೋಡಿದ. ಅದು ತಾನಾಗಿಯೇ ಎದುರಾಗಿ ಬರುವುದು. ಅಸಂಭವವೆಂಬುದನ್ನು ಮನಗಂಡು ಆ ದಿಶೆಯಲ್ಲಿ ಪ್ರಯತ್ನ ನಡೆಸಲು ಆರಂಭಿಸಿದ ಆಗ ಬಸವಂತನಾಯಕನ ಮೊಮ್ಮಗ ಮುದಿಬಸಪ್ಪನು ಹರಪನಹಳ್ಳಿಯ ಪಾಳೆಯಗಾರನಲ್ಲಿಗೆ ತಾನೇ ಹೋಗಿ "ನಿಮ್ಮ ಹಿರಿಯರಿಗೆ ಲಿಂಗಧಾರಣೆ ಮಾಡಿದುದರಿಂದ ಉಜ್ಜಯಿನಿಯ ಸದ್ಧರ್ಮ ಪೀಠದ ಒಡೆಯರೂ ಭಕ್ತರೂ ನನ್ನನ್ನೂ ದ್ವೇಷಿಸುತ್ತಿರುವರು. ಜರಮಲೆಯ ಪಾಳೆಯಗಾರನಿಗೆ ಮಠದ ಬಲವೇ ಬಲ ಅವರು ಹೇಳಿದಂತೆ ಕೇಳುತ್ತಾನೆ. ನಿಮ್ಮನ್ನು ಪರಿಹಾಸ್ಯ ಮಾಡುತ್ತಿರುವನಂತೆ' ಮುಂತಾಗಿ ಚಾಡಿ ಚುಚ್ಚಿದ .ಮುದಿ ಬಸಪ್ಪನಾಯಕ ಆತನ ಮಾತುಗಳಿಗೆ ಕಿವಿಗೊಡಲಿಲ್ಲ. ಆಗ ಆತನ ಆರ್ಥಿಕ ಪರಿಸ್ಥಿತಿಯೂ ತೀರ ಹದಗೆಟ್ಟಿತು. ಜರಮಲೆಯ ಮೇಲೆ ಕೈ ಮಾಡುವಷ್ಟು ಜನ ಬಲವೂ ಇರಲಿಲ್ಲ.

ಹರಪನಹಳ್ಳಿಯ ಮುದಿಬಸಪ್ಪನಾಯಕನು ಬಿದನೂರು ಸೋಮಶೇಖರನಾಯಕ (ಕ್ರಿ. ಶ. ೧೭೧೪–೧೭೩೬) ರಲ್ಲಿ ತನಗಿದ್ದ ಗೌರವವನ್ನು ವ್ಯಕ್ತಪಡಿಸಿಲು ತನ್ನ ಮಗನಿಗೆ ಸೋಮಶೇಖರ ನಾಯಕ ಎಂದು ನಾಮಕರಣ ಮಾಡಿದ್ದ. ಬಿದನೂರಿಗೆ ಹೋಗಿ ಸೋಮಶೇಖರನಾಯಕನಲ್ಲಿ ತನ್ನ ಆರ್ಥಿಕ ಪರಿಸ್ಥಿತಿಯನ್ನು ನಿವೇದಿಸಿಕೊಂಡು ಹೇರಳ ದ್ರವ್ಯವನ್ನು ಒಡವೆ ಉಡುಗೊರೆಗಳನ್ನು ಪಡೆದು ಕೊಂಡು ಬಂದ ಮೇಲೆ ಪಾಳೆಯ ಪಟ್ಟಿನ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿತು[೪೬].

ಅನಂತರವೇ ಸುಮಾರು ೧೭೪೨ ರಲ್ಲಿ ಸೋಮಶೇಖರನಾಯಕನು ಜರಮಲೆಯ ಮೇಲೆ ದಂಡೆತ್ತಿ ಹೋಗಿ ಉಜ್ಜಯಿನಿಯನ್ನು ಅದರ ಸುತ್ತ ಮುತ್ತಲ ಹಳ್ಳಿಗಳನ್ನು ತನ್ನ ಆಡಳಿತಕ್ಕೆ ಒಳಪಡಿಸಿಕೊಂಡ ಬಳ್ಳಾರಿ ಜಿಲ್ಲೆಯ ಗೆಜೆಟಿಯರಿನಲ್ಲಿ ಹೇಳಿರುವಂತೆ, ಜರಮಲೆಯ ಪಾಳೆಯ-ಗಾರನು ಕ್ರಿ. ಶ. ೧೭೪೨ ರಹೊತ್ತಿಗೆ, ಒಂದು ಕಡೆ ಚಿತ್ರದುರ್ಗದ ಪಾಳೆಯಗಾರರು ಮತ್ತೊಂದು ಕಡೆ ಹರಪನಹಳ್ಳಿಯ ಪಾಳೆಯಗಾರರೂ ನಡೆಸುತ್ತಿದ್ದ ದುರಾಕ್ರಮಣದ ಪರಿಣಾಮವಾಗಿ, ತನ್ನ ಕೋಟೆಯ ಸುತ್ತಮುತ್ತ ಇರುವ ಕೆಲವು ಹಳ್ಳಿಗಳನ್ನುಳಿದು ತನ್ನೆಲ್ಲ ರಾಜ್ಯವನ್ನು ಕಳೆದುಕೊಂಡನು.

(In 1742, the Palayagars of chitradurga and Harapanahalli stripped the palyagar of Jaramali of all his possessions except a few villages around the fort. Bellary Dist. Gazetteer p-47) [೪೭]

ಈ ಘಟನೆ ಜರಮಲೆಯ ಪಾಳೆಯಗಾರನ ಮೇಲೆ, ಸಹಜವಾಗಿಯೋ ತೀವ್ರ ಪರಿಣಾಮವನ್ನುಂಟು ಮಾಡಿತು. ಉಜ್ಜಯಿನಿಯನ್ನು ಪುನ: ತನ್ನ ಆಡಳಿತಕ್ಕೆ ತೆಗೆದು ಕೊಳ್ಳದೆ ಅಲ್ಲಿ ಕಾಲಿಡುವುದಿಲ್ಲವೆಂದೂ 'ಸೋತವನು ಹೆಂಗಸಿಗೆ ಸಮಾನ' ಗೆಲ್ಲದೆ, ಗಂಡಸಿನ ಸಂಕೇತವಾದ ಉಡುದಾರವನ್ನು ಸೊಂಟಕ್ಕೆ ಕಟ್ಟುವುದಿಲ್ಲವೆಂದೂ ಪ್ರತಿಜ್ಞೆ ಮಾಡಿದನು[೪೮]. ಈ ಅಭಿಪ್ರಾಯವನ್ನು ತರಳಬಾಳು ಜಗದ್ಗುರು ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಲೇಖನವೊಂದರಲ್ಲಿ ತಿಳಿಸಿರುತ್ತಾರೆ.

ಡಾ. ಆರ್. ಎಂ. ಷಡಕ್ಷರಯ್ಯ ಅವರು ಉಜ್ಜಯಿನಿಯಲ್ಲಿ ಸದ್ಧರ್ಮ ಪೀಠದ ಮೇಲೆ ಸಾರಂಗ ಮಠದ ಪ್ರಭಾವದ ವಿಚಾರವಾಗಿ ಪ.ಗು. ಹಳಕಟ್ಟಿಯವರ ಲೇಖನವನ್ನು ಬೇರೆ ರೀತಿಯಲ್ಲಿ ತಮ್ಮ ನಿಲುವನ್ನು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಬಿಜಾಪುರದ ಸಾರಂಗ ಮಠವು ಉಜ್ಜಯಿನಿಯ ಶಾಖಾಮಠವೆಂದು ಹೇಳಿದ್ದಾರೆ. ಇವರು ಮುಂದುವರೆದು ಈ ಮೇಲಿನ ತರಳಬಾಳು ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಹೇಳಿಕೆಗೆ ಪ್ರತಿಯಾಗಿ ಜರಿಮಲೆಯ ಪಾಳೆಯಗಾರರು ಹರಪನಹಳ್ಳಿ ಪಾಳೆಯಗಾರರ ಮೇಲೆ ನಡೆದ ಯುದ್ಧದ ಪ್ರಸಂಗವನ್ನು ನಾಗೇನಹಳ್ಳಿ ಜರ್ಮಲೆ ಪಾಳೆಯಗಾರರು ಪರಸ್ಪರ ಯುದ್ಧಮಾಡಿ ಅವರಲ್ಲಿ ಯಾರು ಗೆಲ್ಲುವರು ಅವರು ಅಲ್ಲಿ ಗುಡಿಸ್ಥಾಪನೆ ಮಾಡಬೇಕೆಂದು ಗುರುಗಳ ಅಪ್ಪಣೆಯಾಯಿತು. ಕೂಡಲೇ ಜರ್ಮಲೆ ಪಾಳೆಯಗಾರ, ತನ್ನ ಉಡುದಾರವನ್ನು ಕಿತ್ತು ಎಸೆದು ನಾಗೇನಹಳ್ಳಿ ಪಾಳೆಗಾರರನ್ನು ಗೆಲ್ಲುವ-ವರೆಗೆ ತಾನು ಉಡುದಾರವನ್ನು ಕಟ್ಟುವುದಿಲ್ಲವೆಂದು ಪಣತೊಟ್ಟನು,[೪೯] ಈ ರೀತಿ ಹೇಳಿಕೆಯನ್ನು ಬೇರೊಂದು ರೀತಿಯಲ್ಲಿ ತಿಳಿಸಿರುತ್ತಾರೆ.

ಆದರೆ ಅವನ ಪ್ರತಿಜ್ಞೆ ಪ್ರತಿಜ್ಞೆ ಯಾಗಿಯೇ ಉಳಿಯಿತು ಉಡುದಾರವನ್ನು ಕಟ್ಟುವುದಿಲ್ಲ ಪ್ರತಿ ವರ್ಷವೂ ರಥೋತ್ಸವದ ಮೂರನೇ ದಿನ ಶಿಖರಕ್ಕೆ ಮಾಡುವ ತೈಲಾಭಿಷೇಕವು ಇವರಿಂದಲೇ ಪ್ರಾರಂಭವಾಗುವ ಪದ್ಧತಿ, ಉಜ್ಜಯಿನಿಯನ್ನು ಇವರು ಬಿಟ್ಟ ಮೇಲೆ ತೈಲವನ್ನು ಕಾಣಿಕೆಯನ್ನು ತಾವೇ ತರುವುದಿಲ್ಲ. ತಮ್ಮ ಪ್ರತಿನಿಧಿಯೊಬ್ಬರ ಮೂಲಕ ಕಳಿಸುತ್ತಾರೆ. ಈ ಮನೆತನದವರ ಒಡೆತನವು ಉಜ್ಜಯಿನಿಯ ಮೇಲಿದ್ದಿತೆಂಬುದಕ್ಕೆ ಸಾಕ್ಷಿಯಾಗಿದೆ. ಈಗಿನ ಉಜ್ಜಯನಿ ಪೀಠದವರು ಇದಕ್ಕೆ

ಸಂಬಂಧಿಸಿದ ವಿಷಯಕ್ಕೆ ಅಸಂಬದ್ಧ ಕಲ್ಪಿತ ಕಥೆಗಳನ್ನು ಸೃಷ್ಟಿಸಿದ್ದಾರೆ. ಜರಮಲೆಯ ಪಾಳೆಯಗಾರನು ಉಜ್ಜಯಿನಿಯನ್ನು ಬಿಟ್ಟಮೇಲೆ ತರಳಬಾಳು ಸದ್ಧರ್ಮ ಸಿಂಹಾಸನದ ಅಧಿಪತಿಗಳಾಗಿದ್ದ ಜಂಬಪ್ಪ ಒಡೆಯರು ಈ ವಿಪತ್ತಿನಿಂದ ಭಯಗೊಂಡು ಉಜ್ಜಯಿನಿಯನ್ನು ಬಿಟ್ಟುಬಿಟ್ಟರು.

ಇತ್ತ ಸಣ್ಣ ಸಾರಂಗೇಶ್ವರನು ತನ್ನ ಪ್ರಿಯ ಶಿಷ್ಯನಾಗಿದ್ದ ಹರಪನಹಳ್ಳಿಯ ಸೋಮಶೇಖರ ನಾಯಕನಲ್ಲಿ ತರಳಬಾಳು ಸದ್ಧರ್ಮ ಪೀಠಾಧೀಶ್ವರರು ಮಠದಲ್ಲಿರುವುದೇ ಇಲ್ಲವೆಂದು ಇದರಿಂದ ಮರುಳಸಿದ್ಧೇಶ್ವರ ದೇವಸ್ಥಾನದ ಸೇವಾ ಕಾರ್ಯಗಳು ಸಾಂಗವಾಗಿ ನೆರವೇರಿಸಲ್ಪಡುತ್ತಾ ಇಲ್ಲವೆಂದು ಚುಚ್ಚಲಾರಂಭಿಸಿದನು. ಆಸ್ಥಾನಕ್ಕೆ ತಾನೇ ಅರ್ಹನೆಂಬುದೇ ಆತನ ಇಂಗಿತವಾಗಿರುತ್ತಿದ್ದಿತು. ಆತನು ಹೇಳುವುದು ಸತ್ಯವೆಂಬುದು ನಾಯಕನಿಗೂ ಅರಿವಾಗಿದ್ದಿತು. ಆತನು ಕೂಡ, ಅಂದು ತರಳಬಾಳು ಸದ್ಧರ್ಮ ಪೀಠದ ಆಧಿಕಾರಿಗಳಾಗಿದ್ದ ಜಂಬಪ್ಪ ಒಡೆಯರು ಜರಮಲೆಯ ಪಾಳೆಯಗಾರನ ಮೇಲೆ ಅತಿಶಯವಾದ ಅಭಿಮಾನವುಳ್ಳವರೆಂದೂ ಅವರನ್ನು ಅಲ್ಲಿಂದ ತೊಲಗಿಸುವುದೇ ಸೂಕ್ತವೆಂದೂ ಯೋಚಿಸುತ್ತಿದ್ದ. ಆದರೆ ಶ್ರೀಮಠದ ಅಭಿಮಾನಿಗಳ ಮತ್ತು ಭಕ್ತ ಸಮೂಹದ ಮನನೋಯದಂತೆ ಆ ಕಾರ್ಯವನ್ನು ಸಾಧಿಸಬೇಕಾಗಿದ್ದಿತು. ಅಂತಹ ಸನ್ನಿವೇಶವು ತಾನಾಗಿಯೇ ಒದಗಿಯೂ ಬಂದಿತು.

ಇದರಿಂದ ಸಾರಂಗದೇವರ ವಂಶಿಕರು ಹರಪನಹಳ್ಳಿಯ ದೊರೆಗೆ ಲಿಂಗಾಧಾರಣೆ ಮಾಡಿ ಆತನ ಬಲವನ್ನು ಗಳಿಸಿ. ಬಲತ್ಕಾರವಾಗಿ ಸಂಪ್ರದಾಯ ಧರ್ಮ ನೀತಿಗಳಿಗೆ ತಿಲಾಂಜಲಿ ಇಟ್ಟು ಮತ್ತು ಉಜ್ಜಯಿನಿ ಸಿಂಹಾಸನವನ್ನು ಶ್ರೀತರಳಬಾಳು ಮಠ ಅಪಹರಿಸಿಕೊಂಡರೆಂಬುದು ಸ್ಪಷ್ಟವಾಗುತ್ತದೆ. ಇದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಈ ವಿಷಯ ಸಿರಿಗೆರೆಯಲ್ಲಿದ್ದ ಜಂಬಪ್ಪ ಒಡೆಯರಿಗೆ ಮುಟ್ಟಿತು. ನಾಯಕನ ವಿರೋಧ ಕಟ್ಟಿಕೊಳ್ಳುವುದು ವಿವೇಕವಲ್ಲವೆಂದು ತೀರ್ಮಾನಿಸಿ ಸಿರಿಗೆರೆಯನ್ನೇ ತಮ್ಮ ಸ್ವಸ್ಥವನ್ನಾಗಿ ಮಾಡಿಕೊಂಡರು. ಉಜ್ಜಯಿನಿಯಲ್ಲಿ ಸಾರಂಗಮಠಾಧಿಪತಿಯು ಹರಪನಹಳ್ಳಿ ಪಾಳೆಯಗಾರನೊಂದಿಗೆ ಸೇರಿ 'ತರಳಬಾಳು ಮಠವನ್ನೇ ನೆಲಸಮ ಮಾಡಿಸಿಬಿಟ್ಟರು. ಉಜ್ಜಯನಿ ಗ್ರಾಮದ ಸರ್ಕಾರದ ದಾಖಲೆಗಳಲ್ಲಿ ಈ ಮಠಗಳ ಉಲ್ಲೇಖವಿದೆ.

೧) ತರಳಬಾಳು ಸದ್ಧರ್ಮ ಸಿಂಹಾಸನ ಮಠ (ಅದು ಈಗ ಇಲ್ಲ)

೨) ಹಿರೇಮಠ-ತರಳಬಾಳು ಸದ್ಧರ್ಮ ಸಿಂಹಾಸನ ಮಠದಲ್ಲಿದ್ದ ಮೂರು ಮುದ್ರೆ ಶಿಖಾಶೈಲ ಕಠಾರಿಗಳನ್ನು ರಾಜನ ಮೂಲಕ ತೆಗೆದುಕೊಂಡು ಹೋಗಿ ತಾವೇ ಸದ್ಧರ್ಮ

ಸಿಂಹಾಸನಾಧೀಶ್ವರನಿಗೆ ಹರಪನಹಳ್ಳಿಯ ದೊರೆ ಕಟ್ಟಿಸಿ ಕೊಟ್ಟನೆಂದು ತೋರುತ್ತದೆ.

೩) ಹೆಂಚಿನ ಮಠ,ಇದು ಹೆಚ್ಚಿನ ಮಠ, ಕ್ರಮೇಣ 'ಹೆಂಚಿನಮಠ' ಎಂದು ರೂಪುಗೊಂಡಿತು 'ಹಿರೇಮಠ' ಒಂದು ಆದ ಮೇಲೆ ಈ ಮಠಸಾರಂಗದೇವನ ದೃಷ್ಟಿಯಲ್ಲಿ 'ಹೆಚ್ಚಿನ' ಮಠವೆ.

೪) ಚೌಕಿಮಠ ಈಚೆಗೆ ಸ್ಥಾಪಿತವಾದ ವಿರಕ್ತಮಠ ಈ ನಾಲ್ಕು ಮಠಗಳ ಹೆಸರುಗಳು ಉಜ್ಜಿನಿ ಗ್ರಾಮದ ಸರ್ಕಾರದ ದಾಖಲೆಗಳಲ್ಲಿದೆ. ಪಂಚಪೀಠದವರು ಈ ಅಂಶವನ್ನು ಬೇರೊಂದು ರೀತಿಯಲ್ಲಿ ಶ್ರೀ ಪಂಚಾಚಾರ್ಯ ಸಂಕ್ಷಿಪ್ತ ಪರಿಚಯ ಎಂಬ ಗ್ರಂಥದಲ್ಲಿ ತಿಳಿಸಿರುತ್ತಾರೆ.

ಜಂಬಪ್ಪದೇವರು ಉಜ್ಜಯಿನಿಯನ್ನು ಬಿಟ್ಟ ಮೇಲೆ ಆಯತೋಳು (ಚಿತ್ರದುರ್ಗ ತಾ॥) ಗ್ರಾಮದಲ್ಲಿ ಕೆಲವು ದಿನ ನೆಲೆಸಿ ನಂತರ ಶಿವಮೊಗ್ಗದ ಮಲೆನಾಡಿನಲ್ಲಿ ಮರೆಮಾಚಿಕೊಂಡರು. ನಂತರ ಸಿರಿಗೆರೆಗೆ ಬಂದು ಮಠವನ್ನು ಸ್ಥಾಪಿಸಿದರು. ಆಗಿನ ಕಾಲದಲ್ಲಿ ಪ್ರತಿಯೊಂದು ಪೀಠದಲ್ಲೂ ಪಟ್ಟಚರ ಎಂದು ಇಬ್ಬರು ಸ್ವಾಮಿಗಳಿರುತ್ತಿದ್ದರು. ಉಜ್ಜಯಿನಿಯಲ್ಲಿ ಜಂಬಪ್ಪ ದೇವರೊಂದಿಗೆ ಚರಾಧಿಪತಿಗಳಾಗಿದ್ದ ಸಪ್ಪೆಸಿದ್ಧಲಿಂಗ ದೇವರು ತಿಪಟೂರು ತಾಲೂಕು ಪಾಲ್ಕುರಿಕೆಯಲ್ಲಿ ತಮ್ಮ ಪರಂಪರೆಯನ್ನು ಬೆಳೆಸಿದರು. ಆಗ ಉಜ್ಜಯಿನಿ ಪೀಠದಲ್ಲಿ ಸ್ಥಾನಾಪನ್ನ-ರಾಗಿದ್ದ ಸಾರಂಗದೇವಾ ಪರಂಪರೆಯವರಿಗೆ ತರಳಬಾಳು ಪರಂಪರೆಯು ಇನ್ನೂ ಜೀವಂತವಾಗಿರುವುದು ತಿಳಿದು ಬಂದಿತು. ಕೂಡಲೇ ಅವರು ಚಿತ್ರದುರ್ಗದ ಮುರುಘೀಮಠ, ಬಾಳೇಹಳ್ಳಿ ಶ್ರೀಶೈಲ ಪೀಠಾಧಿಪತಿಗಳನ್ನು ಕೂಡಿಕೊಂಡು ಯಲಹಂಕ ಮತ್ತು ಸಿರಿಗೆರೆ ಮಠಗಳ ಮೇಲೆ ಧಾಳಿ ಇಟ್ಟರು. ಈಗಾಗಲೇ ತಾವು ಪ್ರಭುವಂಶೋದ್ಭವರೆಂದು ಕೆಲವರೂ, ಲಿಂಗೋದ್ಭವ-ರೆಂದು ಕೆಲವರೂ ಗ್ರಂಥಗಳನ್ನು ರಚಿಸಿಕೊಂಡಿದ್ದು ಸಿರಿಗೆರೆ, ಯಲಹಂಕದವರು ಹೊಸದಾಗಿ ಮಠಗಳನ್ನು ಮಾಡಿಕೊಂಡಿದ್ದಾರೆಂದೂ, ಇವರು ಗುರು ಜಂಗಮರಾಗಲು ಬರುವುದಿಲ್ಲವೆಂದೂ ಗುರು ಜಂಗಮತ್ವದ ಅಧಿಕಾರವು ತಮಗೆ, ವಂಶಪಾರಂಪರ್ಯವಾಗಿ ಈಶ್ವರ ದತ್ತವಾದುದೆಂತಲೂ ಕೂಗೆಬ್ಬಿಸಿ, ಗುಡಿಮಠಗಳಲ್ಲಿ ಪ್ರವೇಶಿಸಿದಂತೆಯೂ ಅಡ್ಡಿಪಡಿಸಲಾರಂಭಿಸಿದರು.

ಗುರು-ಜಂಗಮರ ಅವಶ್ಯಕತೆಯು ಧರ್ಮಾಚರಣೆ ಅನಿವಾರ್ಯವಾದುದರಿಂದ ಪ್ರಸಿದ್ಧ ಧಾರ್ಮಿಕ ವೇದಿಕೆಗಳ ಮೇಲೆ ಕುಳಿತಿದ್ದ ಇವರನ್ನೇ ಗುರು ಜಂಗಮರೆಂದು ಅನುಸರಿಸಿದ ಸನ್ನಿವೇಶವನ್ನು ದುರುಪಯೋಗ ಪಡಿಸಿಕೊಂಡು ಈ ವೀರಶೈವರೆಲ್ಲ ಅಯ್ಯ-ಭಕ್ತ ಎಂಬ ಪಂಗಡಗಳನ್ನು ಸೃಷ್ಟಿಸಿಕೊಂಡು, ನಾವು ಅಯ್ಯಗಳು ಇತರರು ಭಕ್ತರು, ಭಕ್ತರು ಅಯ್ಯಗಳಾಗಲು ಬರುವುದಿಲ್ಲ. ಅಯ್ಯಗಳೇ ಗುರು-ಜಂಗಮರು, ಗುರುಗಳೆಂದರೆ ಪಂಚಪೀಠಾಧಿಪತಿಗಳು, ಜಂಗಮರೆಂದರೆ ವಿರಕ್ತ ಪೀಠಾಧಿಪತಿಗಳು ಎಂಬ ವಾದವನ್ನು ಕೋರ್ಟು ಕಛೇರಿಗಳ ಮುಂದಿಟ್ಟರು

ವೀರಶೈವ ಜನಾಂಗವು ಈ ವಾದದಿಂದ ಇಬ್ಬಾಗವಾಯಿತು. ಬಳ್ಳಾರಿ ಜಿಲ್ಲೆಯ ಉಜ್ಜಯಿನಿ ಪೀಠಕ್ಕೂ ಚಿತ್ರದುರ್ಗ ಜಿಲ್ಲೆಯ ಸಿರಿಗೆರೆ ಪೀಠಕ್ಕೂ ಭಿನ್ನಾಭಿಪ್ರಾಯಗಳು ಬಂದವು ಸಿರಿಗೆರೆ ಪೀಠದ ಅನುಯಾಯಿಗಳಲ್ಲಿ ಸಾದರು ಪ್ರಮುಖರು. ಇಲ್ಲಿ ಮೂಲಸ್ಥಾಪಕರಾದ ಮರುಳಸಿದ್ಧರ ಅನುಗ್ರಹದಿಂದ ಉಪದೇಶ ಪಡೆದ ತೆಲುಗುಬಾಳು ಸಿದ್ಧೇಶ್ವರರ ಪೀಠ ಪರಂಪರೆಯಾದ ತರಳಬಾಳು ಪೀಠ, ಶಾಖಾ ಮಠ ಇಲ್ಲಿ ಅಸ್ತಿತ್ವಕ್ಕೆ ಬಂದಿತು.

ಎರಡೂ ಮಠಗಳು ಬಾಳೆಹಳ್ಳಿ (ಬಾಳೆ ಹೊನ್ನೂರು) ಉಜ್ಜಯಿನಿ ಪೀಠಗಳ ಪರಮಾಧಿಕಾರವನ್ನು ಒಪ್ಪಿಕೊಳ್ಳಲಿಲ್ಲ ಮತ್ತು ತಮ್ಮ ತಮ್ಮ ಪೀಠಗಳಿಗೆ ಹೊಸದಾಗಿ ಮಾಡಿಕೊಂಡ ನೊಣಬ, ಸಾದ, ಜಂಗಮರನ್ನು ಪೀಠಾಧಿಪತಿಗಳನ್ನಾಗಿ ನೇಮಿಸಿದ್ದು ಮೂಲ ಪೀಠದವರಿಗೆ ಸರಿದೋರಲಿಲ್ಲ. ನೊಣಬ, ಸಾದರ ಸ್ವಸಮರ್ಥನೆಯು ಅಂದಿನ ಒಟ್ಟು ವೀರಶೈವರ ಒಳ ಜಾಗೃತಿಯ ಸಂಕೇತವೆಂದೇ ಭಾವಿಸಬೇಕು, ಹಿಂದೂ ಧರ್ಮದಲ್ಲಿ ಬ್ರಾಹ್ಮಣರ ಮೇಲರಿಮೆಯ ವಿರುದ್ದ ಎದ್ದ ಧ್ವನಿಯಂತೆಯೇ ವೀರಶೈವದಲ್ಲಿನ ಜಂಗಮರ ಮೇಲರಿಮೆಯ ವಿರುದ್ದ, ಎಲ್ಲ ಮಠಗಳಿಗೂ ತಾವೇ ಅಧಿಪತಿಗಳಾಗಬೇಕೆಂಬ ಅವರ ಹಕ್ಕೊತ್ತಾಯದ ವಿರುದ್ದ ಎದ್ದ ಧ್ವನಿಯ ಸಂಕೇತವೂ ಹೌದು[೫೦], ಈ ವಿಷಯದ ಮೇಲೆ ಬಳ್ಳಾರಿ ಜಿಲ್ಲೆಯ ಉಜ್ಜಯಿನಿ ಪೀಠಕ್ಕೆ ಮತ್ತು ಚಿತ್ರದುರ್ಗ ತಾಲೂಕು ಸಿರಿಗೆರೆ ಪೀಠಕ್ಕೂ ವಿವಾದ ನ್ಯಾಯಾಲಯದ ಮೇಟ್ಟಿಲೇರಿತು. ಕೊನೆಗೆ ಸಿರಿಗೆರೆಯ ಸ್ವಾಮಿಗಳನ್ನು ಮನ್ನಿಸುವ ಪೂಜಿಸುವ ಭಕ್ತರಿರುವಾಗ ಅವರಿಗೆ ಗುರುತ್ವವಿಲ್ಲವೆಂದು ಹೇಳುವುದು ನ್ಯಾಯ ಸಮ್ಮತವಾಗಲಾರದೆಂದು ತೀರ್ಪುಕೊಟ್ಟರು[೫೧]. ನಂತರ ಸಿರಿಗೆರೆ ಹಾಗೂ ಅದರ ಶಾಖಾ ಮಠಗಳು ಸಾದುಲಿಂಗಾಯಿತರ ಶಿಷ್ಯವರ್ಗದ ಮಠಗಳು ಅಸ್ತಿತ್ವದಲ್ಲಿ ಉಳಿಯುವಂತಾಯಿತು.

❖ **ಸಿರಿಗೆರೆಯ ತರಳಬಾಳು ಮಠ ಹಾಗೂ ಅದರ ಶಾಖಾಮಠಗಳು :**

ಚಿತ್ರದುರ್ಗ ತಾಲೂಕಿನ ಸಿರಿಗೆರೆಯು ಇಡೀ ಕರ್ನಾಟಕಕ್ಕೆ ಸುಪರಿಚಿತ ಇಲ್ಲಿ ಪ್ರಸಿದ್ಧವಾದ ಉಜ್ಜಯಿನಿ ಸದ್ಧರ್ಮ ಸಿಂಹಾಸನದ ಸಂಸ್ಥಾಪಕ ಮರುಳಸಿದ್ಧರ ಅನುಗ್ರಹದಿಂದ ತೆಲುಗುಬಾಳು ಸಿದ್ದೇಶ್ವರರಿಂದ ಸ್ಥಾಪಿವಾದ ಶ್ರೀ ತರಳಬಾಳು ಜಗದ್ಗುರುಗಳ ಪೀಠ ಪರಂಪರೆ ಸಾಮಾಜಿಕವಾಗಿ ಮತ್ತು ಧಾರ್ಮಿಕವಾಗಿ ಪ್ರಸಿದ್ಧಿ ಪಡೆದಿದೆ.

❖ **ಪಾಲ್ಕುರಿಕೆ :**

ತುಮಕೂರು ಜಿಲ್ಲೆ ತಿಪಟೂರು ಕೇಂದ್ರಕ್ಕೆ ೧೩ ಕಿ. ಮೀ ದೂರದಲ್ಲಿದೆ. ಇಲ್ಲಿ ಶ್ರೀ ತರಳಬಾಳು ಬೃಹನ್ಮಠದ ಶಾಖಾ ಮಠವಿದೆ. ಈ ಮಠದ ಆಡಳಿತವನ್ನು ಸಿರಿಗೆರೆಯ ಜಗದ್ಗುರುಗಳು

ನೋಡಿಕೊಳ್ಳುತ್ತಿದ್ದಾರೆ. ೧೬ನೇ ಶತಮಾನದಲ್ಲಿ ಉಜ್ಜಯಿನಿಯಲ್ಲಿ ಉಂಟಾದ ಧಾರ್ಮಿಕ ಕ್ಷೋಭೆಯಿಂದ ಬೇಸತ್ತು ಜಂಬಪ್ಪ ದೇವರು ಜತೆಯಲ್ಲಿ ಉಜ್ಜಯಿನಿ ತೊರೆದ ಸಪ್ಪೆಸಿದ್ದಲಿಂಗದೇವರು ನಂತರ ಜಂಬಪ್ಪದೇವರಿಂದ ಬೇರೆಯಾಗಿ ಇಲ್ಲಿಗೆ ಬಂದು ನೆಲೆಸಿದರೆಂದು ಮಠದ ದಾಖಲೆಗಳು[೫೨] ಹೇಳುತ್ತವೆ.

❖ ಸಾಣೇಹಳ್ಳಿ ಮಠ :

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕು ಸಾಣೇಹಳ್ಳಿ ಬಾಗೂರು ಪಾಳೆಯಗಾರರು ತಮ್ಮ ಪಾಳೆಪಟ್ಟನ್ನು ಕಾಯ್ದುಕೊಳ್ಳಲು ತಮ್ಮ ಆಯುಧಗಳಿಗೆ ಸಾಣೆ ಹಿಡಿಸಿಕೊಳ್ಳುತ್ತಿದ್ದ ಸ್ಥಳವಾಗಿದ್ದು ಈ ಊರಿಗೆ ಸಾಣೆಹಳ್ಳಿ ಎಂಬ ಹೆಸರು ಬಂದಿರಬೇಕು. ಇಂತಹ ಐತಿಹಾಸಿಕ ಗ್ರಾಮದಲ್ಲಿ ಸಿರಿಗೆರೆ ತರಳಬಾಳು ಬೃಹನ್ಮಠದ ಶಾಖಾಮಠವು ಅಸ್ತಿತ್ವದಲ್ಲಿದೆ[೫೩].

❖ ಅರಳೀಕಟ್ಟೆ :

ಹಾಸನ ಜಿಲ್ಲೆ ಅರಸೀಕೆರೆ ತಾಲೂಕು ಕೇಂದ್ರದಿಂದ ೧೨ ಕಿ. ಮೀ. ದೂರದಲ್ಲಿದೆ. ಇಲ್ಲಿ ತರಳಬಾಳು ಶಾಖಾಮಠವಿದೆ. ಅರಳೀಕಟ್ಟೆ ಪ್ರಾಂತ್ಯಕ್ಕೆ ಸಿರಿಗೆರೆಯ ತರಳಬಾಳು ಜಗದ್ಗುರುಗಳು ಆಗಾಗ್ಗೆ ಸಂಚಾರ ಬರುವುದು ಕಷ್ಟವಾದಾಗ ಭಕ್ತರ ಸಂಪರ್ಕ ಕಡಿದು ಹೋಗಬಾರದು ಎಂಬ ಕಾರಣಕ್ಕೆ ಅರಳೀಕಟ್ಟೆಯಲ್ಲಿ ತರಳಬಾಳು ಶಾಖಾಮಠವು ಸ್ಥಾಪನೆಯಾಯಿತು[೫೪].

❖ ಯಲಹಂಕ :

ಹಾಸನ ಜಿಲ್ಲೆಯ ಬೇಲೂರಿನಿಂದ ಸುಮಾರು ೮ ಕಿ.ಮೀ. ದೂರದಲ್ಲಿದೆ. ಯಲಹಂಕದಲ್ಲಿ ಸ್ಥಾಪಿತವಾದ ತರಳಬಾಳು ಶಾಖಾಮಠವು ಸಪ್ಪೆಸಿದ್ಧಲಿಂಗದೇವರ ವಂಶಸ್ಥರಿಂದ ಸ್ಥಾಪಿತವಾಗಿದೆ. ತನ್ನ ಅಸ್ತಿತ್ವವನ್ನು ಉಳಿಸಿ ಬೆಳೆಸಿ ಕೊಂಡು ಬಂದಿದೆ. ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿಗಳಂತಹ ಮಹಾನ್ ಸಾಧಕರನ್ನು ಸಿರಿಗೆರೆಯ ತರಳಬಾಳು ಬೃಹನ್ಮಠಕ್ಕೆ ನೀಡಿದ ಸಾರ್ಥಕತೆಯನ್ನು ಕಂಡು ಕೊಂಡಿದೆ. ಪಾಲ್ಕುರಿಕೆಯಲ್ಲಿದ್ದ ಸಪ್ಪೆ ಸಿದ್ಧ ಲಿಂಗದೇವರ ವಂಶಸ್ಥರಾದ ಮಾಗಡಿ ಪಟ್ಟದದೇವರು ಯಲಹಂಕಕ್ಕೆ ಬಂದು ನೆಲೆಸಿ ಮಠವನ್ನು ಸ್ಥಾಪಿಸಿದ್ದಾರೆಂದು ಸಿರಿಗೆರೆಯ ಬೃಹನ್ಮಠದ ಹಿರಿಯ ಲಿಂಗೈಕ್ಯ ಗುರುಗಳಾದ ಶ್ರೀ ಶಿವಕುಮಾರ ಸ್ವಾಮಿಗಳವರ ಅಭಿಪ್ರಾಯ[೫೫].

❖ **ಜಾಬಾಲಮಠ :**

ಚಿಕ್ಕಮಗಳೂರು ನಗರದ ಪೂರ್ವಭಾಗದಲ್ಲಿರುವ ಕಲ್ಯಾಣ ನಗರ ಬಡಾವಣೆಯಲ್ಲಿ ದೊಡ್ಡ ಕುರುಬನಹಳ್ಳಿ ಪುರಾತನ ಇತಿಹಾಸವುಳ್ಳ ಶ್ರೀ ಜಾಬಾಲಪುರಿ ಮಠ ಸ್ಥಾಪನೆಯಾಗಿದೆ. ಈ ಮಠವು ಸಿರಿಗೆರೆಯ ತರಳಬಾಳು ಬೃಹನ್ಮಠದ ಶಾಖಾಮಠವಾಗಿದೆ. ಕ್ರಿ. ಶ. ೧೮೭೮ ರ ಸುಮಾರಿನಲ್ಲೂ ಈ ಮಠದ ಅಧಿಕಾರಸ್ಥರಾಗಿದ್ದ ಶ್ರೀ ಶಿಖಾಮಣಿ ದೇವರಿಗಿಂತಲೂ ಹಿಂದೆಯೇ ಅಸ್ತಿತ್ವದಲ್ಲಿತ್ತು ಎಂದು ಹೇಳಲಾಗುತ್ತಿದೆ. ಇದಕ್ಕೆ ಈ ಮಠದ ಆವರಣದಲ್ಲಿರುವ ಗದ್ದುಗೆಗಳೇ ಸಾಕ್ಷಿಯಾಗಿದೆ. ಮೂರು ತಲೆಮಾರುಗಳಿನಿಂದ ಶ್ರೀ ಚಂದ್ರಶೇಖರ ಸ್ವಾಮಿಗಳ ಕಾಲದಲ್ಲಿ ನಿರ್ಮಿತವಾಗಿರುವ ಮಾವಿನ ತೋಪಿನ ಮಧ್ಯೆ ಈ ಮಠವು ತನ್ನ ಪರಂಪರೆಯ ಐತಿಹ್ಯಗಳನ್ನು ಬಿಂಬಿಸುತ್ತಾ ನಿಂತಿದೆ. ೧೮ ಅಂಕಣದ ದೊಡ್ಡದಾದ ಸೀಮೆ ಹೆಂಚಿನ ಕಟ್ಟಡ ನಿರ್ಮಿತವಾಗಿದೆ[೫೬].

೪.೪.೩. ಕರ್ನಾಟಕದ ಇತರ ಸ್ಥಳಗಳಲ್ಲಿನ ಸ್ಮಾರಕಗಳು :

ಉಜ್ಜಯಿನಿ ಹೊರತುಪಡಿಸಿ ಕರ್ನಾಟಕದ ಇತರ ಭಾಗಗಳಲ್ಲಿಯೂ ಮರುಳಸಿದ್ಧರ ಸ್ಮಾರಕಗಳು ಗುಪ್ತ ಸ್ಥಿತಿಯಲ್ಲಿವೆ ಅವುಗಳೆಂದರೆ.

❖ **ತೂಲಹಳ್ಳಿ :**

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಉಜ್ಜಯಿನಿಗೆ ಸುಮಾರು ನಾಲ್ಕು ಮೈಲಿ ದೂರದಲ್ಲಿದೆ. ಹಿಂದೆ ಇದಕ್ಕೆ ತಯ್ಯಲಾಳಪುರವೆಂಬ ಹೆಸರಿತ್ತೆಂದು ತಿಳಿದು ಬರುತ್ತದೆ. ಇಲ್ಲಿ ಮರುಳಸಿದ್ಧೇಶ್ವರ ದೇವಾಲಯವಿದೆ. ಬಾಲ್ಯದಲ್ಲಿ ಬಾಚನಗೌಡನಿಗೆ ಸೂಕ್ಕೆಹಳ್ಳದ ದಂಡೆಯಲ್ಲೆ ಒಂದು ಪೆಳೆಯಲ್ಲಿ ಬಾಚನ ಗೌಡನ ಹಯನಗಳು ಹಾಲು ಕೊಡುತ್ತಿದ್ದವು. ಬಾಚನ ಗೌಡನು ಹಯನಗಳನ್ನು ಹುಡುಕಿಕೊಂಡು ಅಡವಿಗೆ ಬಂದಾಗ ಬಾಲಮರುಳಸಿದ್ಧರಿಗೆ ಆ ಹಸುಗಳು ಹಾಲು ಕರೆಯುತ್ತಿರುವ ದೃಶ್ಯ ಕಂಡನು, ಹಯನಗಳು ಹಾಲು ಕರೆಯುತಿದ್ದ ಸ್ಥಳವೆ ತುಯ್ಯಲಹಳ್ಳಿಯಾಗಿ ಇಂದು ತೂಲಹಳ್ಳಿಯಾಗಿದೆ. ಹಯನಗಳು ಹಾಲು ಕರೆಯುತ್ತಿದ್ದ ಪೆಳೆ ಇರುವ ಸ್ಥಳವೇ ತೂಲಹಳ್ಳಿ ಇಂದು ತೂಲಹಳ್ಳಿ ಗ್ರಾಮದಲ್ಲಿ ಮರುಳಸಿದ್ಧರ ಉದ್ಭವಲಿಂಗವಿರುವ ಒಂದು ಸ್ಮಾರಕವಿದೆ.

❖ **ಉರ್ಲಕಟ್ಟೆ :**

ಈ ಸ್ಥಳದಲ್ಲಿ ಮರುಳಸಿದ್ಧರು ಪಶುಗಳನ್ನು ಕಾಯುತ್ತಿದ್ದ. ಅವುಗಳಿಗೆ ಊರುಲುಹಾಕುವಂತಹ ಬಾಲ್ಯದಲ್ಲಿ ತುಂಟಾಟದ ಪವಾಡಗಳಿಂದ ಮೆರೆದ ಸ್ಥಳವಾದ್ದರಿಂದ ದನಕರುಗಳಿಗೆ

[illegible]

ಉರುಲುಹಾಕುತ್ತಿದ್ದುದರಿಂದ ಆ ಗ್ರಾಮಕ್ಕೆ ಉರ್ಲಕಟ್ಟೆ ಎಂದು ಹೆಸರು ಬಂದಿದೆ. ಇಲ್ಲಿ ಮರುಳಸಿದ್ಧರ ದೇವಾಲಯವಿದೆ.

❖ **ಪಲ್ಲಾಗಟ್ಟೆ :**

ಉಜ್ಜಯಿನಿ ಸಿದ್ಧಪ್ಪ ದೇವಾಲಯವಿದೆ. ಬಾಲ್ಯದಲ್ಲಿ ಮರುಳಸಿದ್ಧರು ಕರುಗಳನ್ನು ಕಾಯುವಾಗ ಈ ಭಾಗದ ಅರಣ್ಯದಲ್ಲಿ ಬಾಲಕರೊಂದಿಗೆ ಪಲ್ಲಕ್ಕಿಯಲ್ಲಿ ಮೆರೆಯುತ್ತಿದ್ದ ಎಂಬ ಕಥೆಯನ್ನು ಇಲ್ಲಿನ ಜನಪದರು ಹೇಳುತ್ತಾರೆ. ಆದ್ದರಿಂದ ಪಲ್ಲಕ್ಕಿಯಲ್ಲಿ ಮೆರೆದ ಸ್ಥಳವೇ ಪಲ್ಲಾಗಟ್ಟೆ ಎಂದು ಕರೆಯಲ್ಪಟ್ಟಿದೆ. ಇಲ್ಲಿ ಉಜ್ಜಿನಿ ಸಿದ್ಧಪ್ಪ ಎಂದು ಕರೆಯಲ್ಪಡುವ ಮರುಳಸಿದ್ಧರ ಸ್ಮಾರಕವಿದೆ.

❖ **ಮಸಣಿಕಟ್ಟೆ :**

ಬೇಚರಕು ಗ್ರಾಮ ಇಲ್ಲಿ ಮೂರು ಕಲ್ಲುಗಳ ಮಧ್ಯೆ ತ್ರಿಶೂವಿರುವ ಗುರುತು ಮಾತ್ರವಿದೆ. ಮರುಳಸಿದ್ಧ ಬಾಲಕನಾಗಿದ್ದಾಗ ಬಾಲಕರೊಂದಿಗೆ ಮಸಲತ್ತು ಮಾಡುತ್ತಿದ್ದ ಎಂದು ಹೇಳಲಾಗುತ್ತದೆ. ಪ್ರಸ್ತುತ ತ್ರಿಶೂಲದ ಗುರುತು ಯಾವುದೇ ಕುರುಹು ಇರುವುದಿಲ್ಲ.

❖ **ಅಸಗೋಡು :**

ಶಂಭುಲಿಂಗದೇವರ ದೇವಸ್ಥಾನವಿದೆ. ಮರುಳಸಿದ್ಧರು ಘನಪಂಡಿತರಾಗಿದ್ದು ಅಸಗೋಡಿಗೆ ಹೋಗಿ ಸಲೆನಿಂದು ವಸುಮತಿಗೆ ಹೆಸರು ಪಡೆದರು. ಮರುಳಸಿದ್ಧರ ಕಾಲದಲ್ಲಿ ವಿದ್ಯೆಯ ಮತ್ತು ಧರ್ಮದ ಕೇಂದ್ರವಾಗಿ ಸುಪ್ರಸಿದ್ಧ ಪುರವಾಗಿತ್ತು. ಅಲ್ಲಿಗೆ ವಿದ್ಯಾಪ್ರಚಾರಕ್ಕಾಗಿ ಬಂದ ಮರುಳಸಿದ್ಧರು ಆ ಕೇಂದ್ರಕ್ಕೆ ಸ್ಥಾನಪತಿಯಾಗಿದ್ದು ಶೈವರಾದ ಕಾಳಮುಖರನ್ನು ವೀರಶೈವ ಮತಕ್ಕೆ ಪರಿವರ್ತಿಸಿದರು. ಪ್ರಸಿದ್ಧವಾದ ಈ ವಿದ್ಯಾಕೇಂದ್ರದಿಂದ ಅಸಗೋಡು ಪುರದೊಳು ಸಲೆನಿಂದು ಮರುಳಸಿದ್ಧರು ವಸುಮತಿಗೆ ಹೆಸರು ಪಡೆದರು. ಹೀಗಾಗಿ ಈ ಭಾಗದಲ್ಲಿಯೂ ಮರುಳಸಿದ್ಧರ ಸ್ಮಾರಕವಾಗಿ ಶಂಭುಸಿದ್ಧೇಶ್ವರ ದೇವಾಲಯವಿದೆ.

❖ **ಹೆಮ್ಮನಬೇತೂರು :**

ಬೇತೂರು, ಕುರುಡಿ ಬೇತೂರು, ಹೆಮ್ಮನ ಬೇತೂರು ಎಂಬ ಹೆಸರುಗಳಿಂದ ಕರೆಯಲ್ಪಡುವ ಈ ಬೇತೂರು ದಾವಣಗೆರೆ ತಾಲೂಕಿನಲ್ಲಿದೆ. ಇದು ಬ್ರಾಹ್ಮಣರ ಅಗ್ರಹರವಾಗಿತ್ತು. ಇಲ್ಲಿ ಯಜ್ಞಾ-ಯಾಗಾದಿ ಕೈ ಗೊಂಡಾಗ ಮರುಳಸಿದ್ಧರು ಆ ಯಜ್ಞ ಆಚಾರಣೆಯನ್ನು ವಿರೋಧಿಸಿ ಪ್ರತಿಭಟಿಸಿ

ವರ್ಣಾಶ್ರಮಧರ್ಮ ವಿರೋಧಕ್ಕೆ ಒಳಗಾದರು. ಈ ಘಟನೆಯ ಸ್ಮಾರಕವಾಗಿ ಬೇತೂರು ಸಮೀಪ ಮರುಳಸಿದ್ಧೇಶ್ವರ ದೇವಾಲಯವಿದೆ.

❖ **ಅಣಜಿ :**

ಬ್ರಾಹ್ಮಣರ ವಿರೋಧದಿಂದ ಬಂಧಿಯಾಗಿ ಅಣಜಿ ಕೆರೆಗೆ ಎಸೆಯಲ್ಪಟ್ಟಿದ್ದರು. ಜಲವಿದ್ಯಾ ಬಲ್ಲವರಾಗಿದ್ದು ಅದರಿಂದ ಪಾರಾಗಿ ಬಂದು ದಡಸೇರಿದರು. ಇದರ ಸ್ಮಾರಕವಾಗಿ ಕೆರೆಯ ಬಳಿ ಗೊಂಗಡಿ ಸಿದ್ಧೇಶ್ವರ ದೇವಾಲಯವಿದೆ.

❖ **ಕುರುಡಿ :**

ಬೇತೂರು ಸಮೀಪ ೧ ಕಿ. ಮೀ ದೂರದಲ್ಲಿ ಕುರುಡಿ ಗ್ರಾಮವಿದೆ. ಅಲ್ಲಿ ಕುಲ ಹದಿನೆಂಟು ಜಾತಿಯವರನ್ನು ಸಂಘಟಿಸಿ ಬ್ರಾಹ್ಮಣರ ಯಜ್ಞವನ್ನು ಪ್ರತಿಭಟಿಸಿದ್ದರಿಂದ ಮತ್ತೊಂದು ಶಿಕ್ಷೆಗೆ ಒಳಗಾದರು. ಮರುಳಸಿದ್ಧರನ್ನು ಹಗೇವಿಗೆ ಹಾಕಿ ಸುಣ್ಣಸುರಿದರು. ಆಗ ಹರಿಜನರು ಆ ಮರುಳಸಿದ್ಧರನ್ನು ಕಾಪಾಡಿದರು. ಮರುಳಸಿದ್ಧರು ಲಿಂಗೋದ್ಭವರಾದರು. ಇದರ ಸ್ಮಾರಕವಾಗಿ ಹಗೇವುಸಿದ್ಧೇಶ್ವರ ಎಂದು ಕರೆಯಲ್ಪಟ್ಟಿದೆ. ಇದರ ಸ್ಮಾರಕವಾಗಿ ಈ ಭಾಗದ ಹಿರಿಯ ಮುಖಂಡರು ಈ ಕಥೆ ಹೇಳುತ್ತಾರೆ. ಹಗೇವು ಸಿದ್ಧೇಶ್ವರನ ದೇವಾಲಯದ ಪಕ್ಕದಲ್ಲಿ ಉತ್ತರಭಾಗದಲ್ಲಿ ರೇವಣಸಿದ್ಧೇಶ್ವರನ ಗುಡಿ ಇದೆ. ಪೂರ್ವದ ಕಡೆ ಒಂದು ಚಿಕ್ಕಗೂಡಿನಲ್ಲಿ ಜಟ್ಟಿಗಪ್ಪನ ಸ್ಮಾರಕವಿದೆ.

❖ **ಮುಚ್ಚನೂರು**

ಬೇತೂರು ಅಗ್ರಹಾರದಲ್ಲಿ ಬ್ರಾಹ್ಮಣರ ಯಜ್ಞವನ್ನು ಪ್ರತಿಭಟಿಸಿದ್ದರಿಂದ ಆ ಮರುಳಸಿದ್ಧರ ವಿರುದ್ಧ ವಿಪ್ರರು ಉಚ್ಚಂಗಿ ಪಾಂಡ್ಯರಸರಲ್ಲಿ ದೂರುಕೊಟ್ಟರು ಬೇತೂರು ಆಗ ಪಾಂಡ್ಯರಸರ ಅಧೀನಕ್ಕೊಳಪಟ್ಟಿತ್ತು. ಆ ಪಾಂಡ್ಯರಸರು ಮರುಳಸಿದ್ಧರ ಮೇಲೆ ಮದವೇರಿದ ಆನೆಯನ್ನು ಬಿಟ್ಟರು. ಆ ಆನೆ ಮರುಳಸಿದ್ಧರನ್ನೆ ಬೆನ್ನ ಮೇಲೆರಿಸಿಕೊಂಡು ಹೊರಟಿತು. ಇದನ್ನು ತಿಳಿದ ಪಾಂಡ್ಯರಸರ ಸೇನೆ ಆ ಆನೆಯನ್ನು ಬೆನ್ನಟ್ಟಿದರು. ಮರುಳಸಿದ್ಧರನ್ನು ಮುಚ್ಚನೂರಿನಲ್ಲಿ ಮುತ್ತಿಗೆ ಹಾಕಿದರು. ಸೇನೆ ಮುತ್ತಿಗೆ ಹಾಕಿದ್ದರಿಂದ ಮರುಳಸಿದ್ಧರು ಇಲ್ಲಿ ಮುಚ್ಚಿಕೊಂಡರೆಂಬ ಸಂಕೇತವಾಗಿ ಇಲ್ಲಿ ಮರುಳಸಿದ್ಧೇಶ್ವರ ದೇವಾಲಯವಿದೆ. ಈ ಸ್ಥಳವೇ ಇಂದು ಮುಚ್ಚನೂರು ಎಂದು ಕರೆಯಲ್ಪಟ್ಟಿದೆ. ಇಲ್ಲಿಂದ ಮುಂದೆ ಮರುಳಸಿದ್ಧರು ಆನಗೋಡು (ದಾವಣಗೆರೆ ತಾಲೂಕು) ಕಡೆ ತಾವು ಸಂಚರಿಸಿದ್ದಾರೆ. ಹೋಗುವ ಮಾರ್ಗದಲ್ಲಿ ಉಳುಪನಕಟ್ಟೆಯಲ್ಲಿ (ದಾವಣಗೆರೆ ತಾಲೂಕು)

ಉಳಿದುಕೊಂಡರು ಎಂಬ ಸಂಕೇತವಾಗಿ ಈ ಗ್ರಾಮದಲ್ಲಿ ಒಂದು ಸ್ಮಾರಕವಾಗಿದೆ. ಈ ಗ್ರಾಮದ ಹಿರಿಯರು ಮರುಳಸಿದ್ಧರಿಗೆ ಸಂಬಂಧಿಸಿದ ಕತೆ ಹೇಳುತ್ತಾರೆ. ಆದರೆ ಈಗ ಅಲ್ಲಿಯಾವುದೆ ಗುರುತು ಸಿಕ್ಕುವುದಿಲ್ಲ.

❖ ಆನಗೋಡು, ಸಿದ್ಧನೂರು, ಸಿದ್ಧೇಶ್ವರನ ದೋಣಿ

ದಾವಣಗೆರೆ ತಾಲೂಕುನಲ್ಲಿರುವ ಸ್ಥಳಗಳು ಆನಗೋಡು ಮರುಳಸಿದ್ಧೇಶ್ವರ ದೇವಾಲಯವಿದೆ. ಈ ದೇವಸ್ಥಾನವು ಈ ಊರಿನ ಕೆರೆಯಂಗಳದಲ್ಲಿ ಪೂರ್ವಮುಖವಾಗಿರುತ್ತದೆ. ಮರುಳಸಿದ್ಧರ ದೇವಸ್ಥಾನಕ್ಕೆ ದಕ್ಷಿಣದಲ್ಲಿ ಜಟ್ಟಿಗಪ್ಪನ ಗುಡಿಯೂ ಇದೆ. ಆನಗೋಡಿಗೆ ಸುಮಾರು ಒಂದು ಮೈಲಿ ದೂರದಲ್ಲಿಯೂ ಸಿದ್ಧನೂರಿಗೆ ಸುಮಾರು ಮೂರು ಫರ್ಲಾಂಗುಗಳ ದೂರದಲ್ಲಿಯೂ ಇದೆ. ಈ ದೋಣೆಯು ಒಂದು ದೊಡ್ಡ ಬಂಡೆಯು ೮–೧೦ ದೊಗರುಗಳಿಂದ ಕೂಡಿರುತ್ತದೆ. ಆನೆಯನ್ನು ಕಳೆದು ಕೊಂಡಿದ್ದ ಆನೆಗೊಂದಿ ರಾಜಸೇನೆ ಬೆನ್ನಟ್ಟಿ ಬಂದಾಗ ಮರುಳಸಿದ್ಧರು ಆ ಆನೆಯನ್ನು ಈ ಬಂಡೆಯೊಳಗೆ ತುಳಿದರೆಂದೂ ಹಾಗೆ ತುಳಿದ ಭಾಗವೇ ಈ ಬಂಡೆಯ ದೊಡ್ಡ ದೊಗರುಗಳಿಂದ ದೋಣೆಯಾಯಿತೆಂದೂ ಐತಿಹ್ಯ ಸಿದ್ಧೇಶ್ವರಗುಡಿ. ಈ ದೋಣೆಗೆ ಪೂರ್ವ ದಿಕ್ಕಿನಲ್ಲಿ ಹನುಮಂತನ ಗುಡಿ ಇದೆ. ಸಿದ್ಧೇಶ್ವರನ ಗುಡಿಗೆ ದಕ್ಷಿಣದಲ್ಲಿ ಸುಮಾರು ೧೦೦ ಅಡಿಗಳ ಅಂತರದಲ್ಲಿ ದಕ್ಷಿಣಕ್ಕೆ ಹನುಮಂತನ ದೇವಸ್ಥಾನದಲ್ಲಿ ಆತನ ಮುಖವು ಪಶ್ಚಿಮಕ್ಕೆ ಇದೆ. ರಾಜನ ದಂಡು ಬಂದಿತೇ ಎಂಬುದನ್ನು ನೋಡೆಂದು ಮರುಳಸಿದ್ಧರು ಹನುಮಂತನಿಗೆ ಅಪ್ಪಣೆ ಮಾಡಿದ ಕಾರಣ ಹನುಮಂತ ಹೀಗೆ ಪಶ್ಚಿಮಕ್ಕೆ ತನ್ನ ಮುಖತಿರುಗಿಸಿದನೆಂದು ಐತಿಹ್ಯ[೫೭].

❖ ತೆಲಗುಬಾಳು ಇದು ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿಗೆ ಸೇರಿದೆ.

ತೆಲಗು ಬಾಳು ಎಂಬ ಹೆಸರು ಬರುವುದಕ್ಕೆ ಕಾರಣಗಳೇನೆಂಬುದು ಸ್ಪಷ್ಟವಿಲ್ಲ. ತ್ರಿಲಿಂಗ ತೆಲಗನಾಡು ತೆಲಂಗಾಣ ಪ್ರಾಂತ ನಾಡಿನಿಂದ ಬಂದ ಒಕ್ಕಲು ಮಕ್ಕಳು ಈ ಊರಿನ ಮೂಲ ವ್ಯಕ್ತಿಗಳಾಗಿರಬಹುದು ! ತೆಲಗುವಾಳ್ಳ ಊರು ತೆಲಗುಬಾಳೂರು, ತೆಲಗುಬಾಳು ಆಗಿರಬಹುದೆಂದು ಊಹಿಸಬಹುದು. ಕನ್ನಡದಲ್ಲಿ–ಬಕಾರವಾಗಿ ಪ್ರಯೋಗವಾಗುತ್ತಿರುವುದು ವಿದಿತವಿದೆ. ಇದೊಂದು ಊಹೆ ಮಾತ್ರ ಅಲ್ಲದೆ ತೆಲಗುಬಾಳು ಗ್ರಾಮದ ತರಳಬಾಳು ವಂಶದ ಕೆಲವು ಮನೆತನಗಳು ಈಗ ಚಿಲಕನಹಟ್ಟಿಯಲ್ಲಿದ್ದು ಊರ ಯಜಮಾನಿಕೆಯ ಸಂಕೇತವಾಗಿ 'ರೆಡ್ಡಿ' ಎಂಬ ಮನೆತನದ ಹೆಸರನ್ನು ಹೊಂದಿರುತ್ತಾರೆ. ರೆಡ್ಡಿ ಬಸವನಗೌಡರ ಮಕ್ಕಳ ಮನೆಯಲ್ಲಿ ದೊರೆತ ತಾಮ್ರ ಶಾಸನ ತೆಲಗುಬಾಳು ವಂಶದ ದ್ಯಾಮನಗೌಡರು ವಿಜಯನಗರ ರಾಜರೊಂದಿಗೆ ಮಧುರ ಸ್ನೇಹವನ್ನು ಹೊಂದಿದ್ದರೆಂದು

ತಿಳಿಸುತ್ತದೆ. ವಿಜಯನಗರ ಸಾಮ್ರಾಜ್ಯ ಪತನ ನಂತರ ಗ್ರಾಮ ತೊರೆದು ಚದುರಿ ಹೋದರೆಂದು ಕಾಣುತ್ತದೆ. ಹಾಗೆ ಹೋದವರಲ್ಲಿ ತರಳಬಾಳು ಬೆಡಗಿನ ಮನೆತನದವರು ನಾಡಿನ ನಾನಾ ಕಡೆಗಳಲ್ಲಿ ನೆಲೆಸಿರುವುದು ಸಂಭವನೀಯವಾಗಿದೆ. ತೆಲಗು ಬಾಳಿಗೂ 'ತೆಲಗು' ನಾಡು ನುಡಿಗೂ, ಯಾವ ಸಂಬಂಧವಿಲ್ಲ ಎನ್ನುವ ವಾದವೂ ಇದೆ.

ತರಳಬಾಳು ೧೧-೧೨ನೇ ಶತಮಾನದಲ್ಲಿ ತೆಲಗು ಬಾಳು ಚಿಕ್ಕ ಗ್ರಾಮವಾಗಿದ್ದರೂ ಸುಸಂಸ್ಕೃತರ, ಸದಾಚಾರ, ಸಂಪನ್ನರ ಗ್ರಾಮವಾಗಿತ್ತು. ಗ್ರಾಮದ ಗೌಡನಿಗೆ ಏಳು ಜನ ಮಕ್ಕಳು ಏಳನೆಯಾನೇ ಸಿದ್ಧ. ಈತ ಮೂಕನಾಗಿರುವುದೊಂದೆ ತಂದೆಗೆ ಕಾಡುತ್ತಿದ್ದ ಚಿಂತೆ. ಮರುಳಸಿದ್ಧ ಅನೇಕ ಪವಾಡಗಳನ್ನು ಮೆರೆಯುತ್ತ ಲೋಕಕಲ್ಯಾಣಾರ್ಥವಾಗಿ ದೇಶ ಸಂಚಾರದಲ್ಲಿ ತೊಡಗಿ ಚಿನ್ಮೂಲಾದ್ರಿಗೆ (ಚಿತ್ರದುರ್ಗ) ಬರುತ್ತಾನೆ. ಅಲ್ಲಿ ಶ್ರೀ ಗುರುರೇವಣಸಿದ್ಧರಿಂದ ದೀಕ್ಷೆ ಹಾಗೂ ಧರ್ಮೋಪದೇಶ ಪಡೆದು ಬೆಟ್ಟದ ಪರಿಸರದಲ್ಲಿ ಸಂಚರಿಸುತ್ತಾ ತೆಲಗುಬಾಳು ಗ್ರಾಮಕ್ಕೆ ಬರುತ್ತಾನೆ. ಜಾತಿ-ಮತಗಳನ್ನು ಮೇಲು ಕೀಳುಗಳನ್ನು ತೊರೆದು ಸಕಲ ಜೀವರಾಶಿಗಳ ಲೇಸನ್ನು ಬಯಸಿ ಧರ್ಮೋಪದೇಶ ಮಾಡುತ್ತ ಇರುವಾಗ ತೆಲಗುಬಾಳಿನ ಗೌಡನು ಶ್ರೀಗುರು ಮರುಳಸಿದ್ಧನನ್ನು ಭಕ್ತಿಯಿಂದ ಸ್ವಾಗತಿಸುತ್ತಾನೆ. ತನ್ನ ಕಿರಿಯ ಮಗನಿಗೆ "ಬಾಯಿ ಇಲ್ಲ"ವೆಂದು ಅರಿಕೆ ಮಾಡಿಕೊಳ್ಳುತ್ತಾನೆ. ಅಷ್ಟರಲ್ಲಿ ಬಂದ ಮೂಗಸಿದ್ಧ ಗುರುಗಳ ಪಾದಕ್ಕೆ ಹಣೆಯೊತ್ತಿ ನಮಿಸಿ ನಿಲ್ಲುತ್ತಾನೆ. ಮರುಳಸಿದ್ಧ ಮಗುವಿನ ಮೈದಡವಿ "ಶಿವ" ಎಂದು ಬರೆದು ಓದಿಸುತ್ತಾನೆ ! ಸಿದ್ಧ ಮಹತ್ಕಾರ್ಯ ಸಾಧಿಸಲು ಹುಟ್ಟಿ ಬಂದಿದ್ದಾನೆ ಎಂಬುದನ್ನು ತಂದೆ-ತಾಯಿಗಳಿಗೆ ತಿಳಿಸಿ, ಆತನನ್ನು ಶಿಷ್ಯನೆಂದು ಸ್ವೀಕರಿಸುತ್ತಾನೆ. ಹೀಗೆ ತೆಲಗುಬಾಳಿನ ಸಿದ್ಧಯ್ಯ ಮರುಳಸಿದ್ಧನ ಪ್ರಪ್ರಥಮ ಅನುಯಾಯಿಯಾಗುತ್ತಾನೆ. ತೆಲಗು ಬಾಳು ಸಿದ್ಧ ಜ್ಯೋತಿ ಮುಟ್ಟಿ ಜ್ಯೋತಿಯಾಗುತ್ತಾನೆ. ಗುರುವನ್ನು ಹಿಂಬಾಲಿಸುತ್ತಾನೆ. ಅನಂತರ ಮರುಳಸಿದ್ಧರು ಉಜ್ಜನಿಯಲ್ಲಿ ಸದ್ಧರ್ಮ ಪೀಠವನ್ನು ಸ್ಥಾಪಿಸಿ 'ತೆಲಗುಬಾಳು ಸಿದ್ಧ'ನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ಪೀಠದ ಮೇಲೆ ಕುಳ್ಳಿರಿಸಿ 'ತರಳಾಬಾಳು' ಎಂದು ಆಶೀರ್ವದಿಸುತ್ತಾನೆ. ನಂತರವೇ ತರಳಬಾಳು ಗುರುಪರಂಪರೆ ಬೆಳೆದು ಬಂದಿದೆ. ಆತನ ಬಳಿವಿಡಿದು ನೂರಾರು ಮನೆತನಗಳು ತರಳಬಾಳು ಮನೆತನಗಳೆಂದು ಹೆಸರಾಗಿವೆ.

ತೆಲಗುಬಾಳು ಕ್ಷೇತ್ರದಲ್ಲಿ ದೇವಾಲಯವನ್ನು ಕಟ್ಟಿಸಿದ್ದಾರೆ. ಅದರಲ್ಲಿ ಶ್ರೀಗುರು ಮರುಳಸಿದ್ಧ ಮತ್ತು ತರಳಬಾಳು ಸಿದ್ಧೇಶ್ವರರ ಮುಂದೆ ಪೂಜ್ಯರಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಮತ್ತು ಬಾಗಳಿಯ ದೇವ ಕವಿಗಳ ವಿಗ್ರಹಗಳು ಕಣ್ಮನ ಸೆಳೆಯುತ್ತವೆ. ಸುತ್ತಲೂ ಕಟ್ಟಡಗಳು ನಿರ್ಮಾಣಗೊಂಡಿವೆ. ಪ್ರಾಚೀನ ಅವಶೇಷವಾಗಿ ಹಾಳು ಬಿದ್ದ ಬುರುಜಿನ ಪಕ್ಕದಲ್ಲಿ

ಶ್ರೀಗಳವರು ೧೯೭೮ರಲ್ಲಿ ಬುರುಜನ್ನ ಪುನರ್ ನಿರ್ಮಾಣ ಮಾಡಿಸಿದ್ದಾರೆ. ಅದನ್ನು "ತೆಲಗುಬಾಳು ಬುರ್ಜು" ಎಂದು ನಾಮಕರಣ ಮಾಡಲಾಗಿದೆ. ತೆಲಗುಬಾಳಿಗೆ ಸಮೀಪದಲ್ಲಿ ಒಂದು ಕೆರೆ ಇದೆ. ಪುರಾತನವಾದ ಈ ಕೆರೆಯನ್ನು ಶ್ರೀತರಳಬಾಳು ಪರಂಪರೆಯ ಜಂಬಪ್ಪ ಒಡೆಯರು ಸಮೀಕರಿಸಿದ್ದರಿಂದ ಇದಕ್ಕೆ 'ಜಂಬಪ್ಪನ ಕೆರೆ ಎಂದು ಕರೆಯುತ್ತಾರೆ[೫೮].

❖ **ದ್ವಾರಸಮುದ್ರ (ಹಾಸನ ಜಿಲ್ಲೆ) :**

ಮರುಳಸಿದ್ಧರು ದ್ವಾರಸಮುದ್ರಕ್ಕೆ ಹೋಗುತ್ತ ದಾರಿಯಲ್ಲಿ ಸಕ್ಕರೆ ಪಟ್ಟಣದ ಸಮೀಪದಲ್ಲಿರುವ ಕಲ್ಲುಮಾರಡಿಯಲ್ಲಿ ವಿಶ್ರಾಂತಿ ಪಡೆದನು ಎಂಬುದರ ಸ್ಮಾರಕವಾಗಿ ಮರುಳ-ಸಿದ್ಧೇಶ್ವರ ದೇವಾಲಯವಿದೆ. ಆದರೆ ದ್ವಾರಸಮುದ್ರಕ್ಕೆ ಮರುಳಸಿದ್ಧರು ಹೋಗಿರುವ ಬಗ್ಗೆ ದೇವ ಕವಿ ಕೃತ ಮರುಳಸಿದ್ಧ ಕಾವ್ಯದಲ್ಲಿ ಉಲ್ಲೇಖವಿದೆ. ಆದರೆ ಈ ಭಾಗದಲ್ಲಿ ಮರುಳಸಿದ್ಧರ ಯಾವುದೇ ಕುರುಹು ಇಲ್ಲ.

ತುಮಕೂರು ಜಿಲ್ಲೆಯ ಚಿಕ್ಕನಾಯ್ಕನಹಳ್ಳಿ ತಾಲೂಕಿನ ಗೋಡೆಕೆರೆ ಕ್ಷೇತ್ರದಲ್ಲಿ ರಾಮಿಸೆಟ್ಟಿಯ ದೇವಸ್ಥಾನವಿದೆ. ಈ ದೇವಾಲಯದಲ್ಲಿ ಮರುಳಸಿದ್ಧರು ಹಾಗೂ ಅವರ ಶಿಷ್ಯ ಗದ್ದುಗೆರಾಮಿತಂದೆ ಸ್ಮಾರಕಗಳಿವೆ.[೫೯]

❖ **ಚಿತ್ರದುರ್ಗ ಬೆಟ್ಟದಲ್ಲಿ :**

ಪಂಚಚಾರ್ಯ ಗುರುಗಳಾದ ರೇವಣಸಿದ್ಧರು ನೆಲೆಸಿದ ಸ್ಥಳವೆಂದು ಹೇಳಲಾಗುತ್ತಿದೆ. ಪ್ರಸಿದ್ಧ ವೀರಶೈವ ಸಿದ್ಧರಾದ ರೇವಣಸಿದ್ಧರು ಸ್ವಲ್ಪಕಾಲ ಇಲ್ಲಿನ ಸಿದ್ಧರ ಗವಿಗಳಲ್ಲಿದ್ದರೆಂದೂ, ಆಗ ಅವರನ್ನು ಹುಡುಕಿಕೊಂಡು ಇನ್ನೊಬ್ಬ ಸಿದ್ಧ ಮರುಳಸಿದ್ಧರು ಇಲ್ಲಿಗೆ ಬಂದು ಅವರನ್ನು ಭೇಟಿ ಮಾಡಿದರೆಂದೂ 'ಸಿದ್ಧಲಿಂಗ ಚಾರಿತ್ರ' ಎಂಬ ಕೃತಿಯಲ್ಲಿ ಹೇಳಿದೆ. ಪ್ರಸಿದ್ಧ ಶಿವಶರಣ ಅಲ್ಲಮ ಪ್ರಭುವು ಸ್ವಲ್ಪಕಾಲ ಇಲ್ಲಿ ನೆಲೆಸಿದ್ದರೆಂಬ ಪ್ರತೀತಿಯೂ ಇದೆ. ಸಂಪಿಗೆ ಸಿದ್ಧೇಶ್ವರ ದೇವಾಲಯದೊಳಗಿರುವ ಗವಿಗಳು 'ರಸಸಿದ್ಧರಗವಿ'ಗಳೆಂದೂ ಈ ಗುಡಿಯೊಳಗಿನ ಒಂದು ವಿಗ್ರಹ ಅಲ್ಲಮ ಪ್ರಭುವಿನದೆಂದೂ ರೇವಣಸಿದ್ಧರದೆಂದೂ ಜನರು ಹೇಳುವುದುಂಟು[೬೦]. ಹಾಗಾದರೆ ಮರುಳಸಿದ್ಧರು ರೇವಣಸಿದ್ಧನಿಂದ ದೀಕ್ಷೆ ಪಡೆದುದು ಚಿನ್ಮಯಗಿರಿ ಎಂಬಲ್ಲಿ ಚಿನ್ಮಯಗಿರಿ ಎಂಬುದು ಈಗಿನ ಚಿತ್ರದುರ್ಗದ ಬಳಿ ಇರುವ ಬೆಟ್ಟವೇ ಎಂಬುದು ದಾವಣಗೆರೆ ೧೬೪ ನೆಯ ಶಾಸನದಿಂದ ತಿಳಿದು ಬರುತ್ತದೆ. ಆ ಬೆಟ್ಟದ ಮೇಲಿರುವ ಸಂಪಿಗೆ ಸಿದ್ಧೇಶ್ವರ ದೇವಸ್ಥಾನದಲ್ಲಿಯೂ ಅಲ್ಲಿಗೆ ಆರು ಮೈಲಿ ದೂರದ ಹುಲ್ಲೂರು ಗ್ರಾಮದಲ್ಲಿರುವ ದೇವಸ್ಥಾನದಲ್ಲಿಯೂ ಮಾನವ ಕೃತಿಯ ರೇವಣಸಿದ್ಧ ಮರುಳಸಿದ್ಧರ

ವಿಗ್ರಹಗಳಿವೆಯೆಂದು ತರಳಬಾಳು ಜಗದ್ಗುರು ಶ್ರೀ ಶ್ರೀ ಶಿವಕುಮಾರ ಶಿವಾಚಾರ್ಯರು ತೋರಿಸಿ ಕೊಟ್ಟಿರುವರು[೮೧]. ಆ ಸ್ಥಳವನ್ನು ಕ್ಷೇತ್ರ ವೀಕ್ಷಣೆಗೈದಾಗ ತಿಳಿದುಬಂದ ಅಂಶವೇನೆಂದರೆ ಅಲ್ಲಿ ರೇವಣಸಿದ್ಧರ ದೇವಾಲಯವೆಂದು ಹೇಳಲಾಗುವ ಮಾನವ ಕೃತಿಯಲ್ಲಿರುವ ದೇವಾಲಯವಿದೆ. ಆದರೆ ಶ್ರೀ ಮರುಳಸಿದ್ಧರ ದೇವಾಲಯವು ಸು. ಕ್ರಿ.ಶ.೧೯೫೩ರ ಅವಧಿಯಲ್ಲಿ ನಿರ್ಮಿಸಿಲಾಗಿದೆ. ಈ ದೇವಾಲಯದಿಂದ ಸು.೧ ಕಿ.ಮೀ. ದೂರದಲ್ಲಿ ರೇವಣಸಿದ್ಧೇಶ್ವರ ದೇವಾಲಯವಿದೆ.

ಪ್ರಸ್ತುತ ಅಧ್ಯಯನದಲ್ಲಿ ಈ ಮೇಲೆ ತಿಳಿಸಲಾದ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು ಅನೇಕ ಸಂಗತಿಗಳನ್ನು ತಿಳಿಸುತ್ತವೆ. ಕನಾಟಕದಲ್ಲಿ ಅಡವಿ ಹಳ್ಳಿ- ನಗರ ಪ್ರಧೇಶ ಗಳಲ್ಲಿ ಮರುಳಸಿದ್ಧರ ಸ್ಮಾರಕಗಳು ಹೆಚ್ಚಾಗಿ ಕಂಡು ಬರುತ್ತವೆ. ಅವರ ಹುಟ್ಟು, ಬದುಕು, ವ್ಯಕ್ತಿತ್ವ ಚಿತ್ರಣ, ಶ್ರೀಸಾಮಾನ್ಯನ ಜೊತೆ ಒಡನಾಟ, ಸಮಾಜವನ್ನು ತಿದ್ದುವಲ್ಲಿ ನಿರಂತರ ಹೋರಾಟ. ಇತ್ಯಾದಿ ವಿವರಗಳು ಅವರ ಸ್ಮಾರಕಗಳಿಂದ ತಿಳಿದುಬರುತ್ತದೆ. ಚನಕಯುವವೃತ್ತಿಯಿಣದ ಪ್ರಾರಂಭಗೊಂಡು,ಸಾಮಾಜಿಕ ಕಳಕಳಿಯೊಂದಿಗೆ ಅನೇಕ ಪವಾಡಗಳನ್ನು ಮಾಡಿ, ಆ ಮುಖಾಂತರ ಸಾಮಾಜದಲ್ಲಿನ ಕತ್ತಲೆಯನ್ನು ಒಡಿಸಲು ಶ್ರಮಿಸಿದ ಪರಿ.ಸ್ತುತ್ಯಾರ್ಹ. ಮಾದಿಗ ಜಾತಿಯೊಂದರಲ್ಲಿ ಜನಿಸಿದ ಮರುಳಸಿದ್ಧರು ಉಜ್ಜಯಿನಿ ಮತ್ತು ಅದರ ಶಾಖಾಮಠಗಳ ಮೂಲ ಪುರುಷರಾಗಿದ್ದಾರೆ. ಸಿರಿಗೆರೆ, ಪಾಲ್ಕುರಿಕೆ, ಸಾಣೇಹಳ್ಳಿ, ಜಾಬಲಿಪುರ, ಭುಜಂಗ ನಗರ, ಯಲಹಂಕ, ಹಾಗೂ ಅರಳೀಕಟ್ಟೆ ಮೊದಲಾದ ಮಠಗಳ ಭಕ್ತ ಶಿಷ್ಯವರ್ಗದ ಸಂಖ್ಯೆ ಹೆಚ್ಚುತ್ತಿದೆ. ಸಿರಿಗೆರೆ ಸಂಸ್ಥಾನ ಮಠದ ವತಿಯಿಂದ ಮರುಳಸಿದ್ಧರ ಜೀವನ ಸಾಧನೆ ವ್ಯಕ್ತಿತ್ವ ಕುರಿತು ಹೆಚ್ಚಿನ ಪ್ರಚಾರವಾಗುತ್ತಿದ್ದು, ಇಂದಿನ ಜನಜೀವನದ ಮೇಲೆ ಮರುಳಸಿದ್ಧರ ಜೀವನದ ಮೌಲ್ಯಗಳು ಇಂದು ಉಳಿಯುವಂತಾಗಿದೆ.

❖ **ಅಡಿಟಿಪ್ಪಣಿಗಳು :**

೧) ಲಕ್ಷ್ಮಣ್ ತೆಲಗಾವಿ(ಸಂ), ಹರತಿಸಿರಿ. ಹೆಚ್. ವಿ. ವೀರನಾಯಕ್ ಹರತಿ ನೆನಪಿನ ಸಂಪುಟ ೧೯೮೭ ಪುಟ.೧೦೦.

೨) ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ೨೦೦೪ ಪುಟ.೪೨.

೩) ಪಂಡಿತ ಎಸ್. ಬಸಪ್ಪ (ಸಂ), ದೇವಕವಿ ಕೃತ ಮರುಳಸಿದ್ಧಕಾವ್ಯ, ೧೯೭೭, ಪುಟ.XXIV

೪) ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪುಟ.೪೭- ೪೮.

೫) ಡಾ. ಎಂ. ಚಿದಾನಂದಮೂರ್ತಿ, ಕರ್ನಾಟಕ ಸಂಸ್ಕೃತಿ, ೨೦೦೫, ಪುಟ.೩೩.

೬) ಡಾ. ಆರ್.ಎಂ.ಷಡಕ್ಷರಯ್ಯ, ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ, ೨೦೦೩ ಪುಟ.೧೭೯– ೧೮೦.

೭) ಅದೇ, ೨೦೦೩, ಪುಟ.೧೮೧–೧೮೨.

೮) ಡಾ. ರೇವಯ್ಯ ಒಡೆಯರ್, ಶ್ರೀಮದ್ ಉಜ್ಜಯಿನಿ ಸದ್ಧರ್ಮ ಶ್ರೀ ಪೀಠದರ್ಶನ ೨೦೦೪, ಪುಟ.೯.

೯) ಡಾ. ಆರ್.ಎಂ.ಷಡಕ್ಷರಯ್ಯ, ಪೂರ್ವೋಕ್ತ, ಪುಟ.೧೮೭.

೧೦) ಪಂಡಿತ್ ಎಸ್. ಬಸಪ್ಪ (ಸಂ), ಪೂರ್ವೋಕ್ತ, ಪುಟ. ೨೪–೨೫.

೧೧) ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪುಟ.೪೮– ೪೯.

೧೨) ಎನ್. ಎಂ. ರವಿಕುಮಾರ, ಡಾ. ವಿ. ವೃಷಬೇಂದ್ರಾಚಾರ್ (ಸಂ), ಮುನ್ನಡೆಯ ಕೂಡ್ಲಿಗಿ (ಕೂಡ್ಲಿಗಿ ತಾಲೂಕಿನ ಸಮಾಗ್ರ ದರ್ಶನ) ೧೯೯೮, ಪುಟ.೪೯.

೧೩) ಅದೇ, ೧೯೯೮, ಪುಟ.೪೬.

೧೪) ಅದೇ, ೧೯೯೮, ಪುಟ.೨೧.

೧೫) ಡಾ. ಆರ್. ಎಂ. ಷಡಕ್ಷರಯ್ಯ, ಪೂರ್ವೋಕ್ತ, ೨೦೦೩ ಪುಟ.೧೯೪.

೧೬) ಸೂರ್ಯನಾಥ್ ಯು. ಕಾಮತ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ ಮೂರು, ೧೯೮೬, ಪುಟ.೪೮೬.

೧೭) ಡಾ. ದೇವರಕೊಂಡಾರೆಡ್ಡಿ(ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೧, ಬಳ್ಳಾರಿ ಜಿಲ್ಲೆ, ೧೯೯೮, ಪುಟ.೨೨೭–೨೩೦.

೧೮) ಪಂಡಿತ್. ಎಸ್. ಬಸಪ್ಪ(ಸಂ), ಪೂರ್ವೋಕ್ತ, ಪುಟ.೫೪.

೧೯) ಅದೇ, ೧೯೭೭, ಪುಟ.೫೬.

೨೦) ಅದೇ, ೧೯೭೭, ಪುಟ.೭೪.

೨೧) ಅದೇ, ೧೯೭೭, ಪುಟ.೯೦.

೨೨) ಪ್ರೊ. ಬಿ. ರಾಜಶೇಖರಪ್ಪ, ಇತಿಹಾಸಕಥನ, ಪೂರ್ವೋಕ್ತ, ಪುಟ.೧೩೨.

೨೩) ಡಾ. ಆರ್. ಎಂ. ಷಡಕ್ಷರಯ್ಯ, ಪೂರ್ವೋಕ್ತ, ಪುಟ.೨೧೧.

೨೪) ಹೆಚ್. ದೇವೀರಪ್ಪ, ಮಹಾದೇವ ಬಣಕಾರ(ಸಂ), ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ, ೧೯೭೪, ಪುಟ.೧೫೯.

೨೫) ಮಹದೇವ ಬಣಕಾರ (ಸಂ), ದಿಟ್ಟ ಹೆಜ್ಜೆ ಧೀರ ಕ್ರಮ, ೨೦೦೩, ಪುಟ.೪೦. ಪರಿಷ್ಕೃತ ಮುದ್ರಣ.

೨೬) ಡಾ. ಆರ್. ಎಂ. ಷಡಕ್ಷರಯ್ಯ, ಪೂರ್ವೋಕ್ತ, ಪುಟ.೧೪೩.

೨೭) ಅದೇ, ೨೦೦೩, ಪು.೨೧೭.

೨೮) ಡಾ. ಎಂ. ಚಿದಾನಂದಮೂರ್ತಿ, ಡಾ.ಸಿ.ಯು.ಮಂಜುನಾಥ(ಸಂ), ಭೂಷಣ ಪುಟ.೧೦.

೨೯) ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪುಟ.೪೭.

೩೦) ಡಾ. ರೇವಯ್ಯ ಒಡೆಯರ್, ಪೂರ್ವೋಕ್ತ, ಪುಟ.೧೬.

೩೧) ಎನ್.ಎಂ. ರವಿಕುಮಾರ ಡಾ. ಎ. ವೃಷಭೇಂದ್ರಾಚಾರ್ (ಸಂ), ಪೂರ್ವೋಕ್ತ, ೧೯೯೮, ಪುಟ.೨೧, ೨೨.

೩೨) ಅ.ಸಿ. ಹಿರೇಮಠ (ಸಂ), ವೀರಶೈವ ಪಂಚಪೀಠ ಪರಂಪರೆ, (ಪರಿಷ್ಕೃತ ಅವೃತ್ತಿ) ೨೦೦೧, ಪುಟ.೪೨-೪೫.

೩೩) ತರಳಬಾಳು ಪಟ್ಟಾಭಿಷೇಕ ಸ್ಮರಣಸಂಚಿಕೆ, ಪೂರ್ವೋಕ್ತ, ಪುಟ.೨೦.

೩೪) ಹೆಚ್. ದೇವೀರಪ್ಪ ,ಮಹದೇವ ಬಣಕಾರ(ಸಂ), ಪೂರ್ವೋಕ್ತ, ಪುಟ.೧೮೧- ೧೮೨.

೩೫) ತರಳಬಾಳು ಪಟ್ಟಾಭಿಷೇಕ ಸ್ಮರಣಸಂಚಿಕೆ, ಪೂರ್ವೋಕ್ತ, ಪುಟ.೨೮.

೩೬) ಡಾ. ಸೂರ್ಯನಾಥ ಕಾಮತ್, ಕರ್ನಾಟಕದ ಇತಿಹಾಸ ಹಲವು ಮುಖಗಳು, ೨೦೦೬, ಪುಟ. ೭೪-೭೫.

೩೭) ಅದೇ, ೨೦೦೬, ಪುಟ.೭೫.

೩೮) ಮಹದೇವ ಬಣಕಾರ(ಸಂ), ಪೂರ್ವೋಕ್ತ, ೨೦೦೩, ಪರಿಷ್ಕೃತ ಮುದ್ರಣ ಪುಟ.೪೯.

೩೯) ಅದೇ, ೨೦೦೩, ಪುಟ.೪೯.

೪೦) ಪ್ರೊ. ಬಿ. ಷೇಕ್ ಆಲಿ, ಪ್ರೊ. ಕೆ.ಎಸ್. ಶಿವಣ್ಣ (ಸಂ), ಕರ್ನಾಟಕ ಚರಿತ್ರೆ (ಕ್ರಿ. ಶ. ೧೩೩೬–೧೭೬೦) ಸಂಪುಟ ೩, ೧೯೯೭, ಪುಟ.೯೪.

೪೧) ಅದೇ, ೧೯೯೭, ಪುಟ.೯೫.

೪೨) ಮಹದೇವ ಬಣಕಾರ (ಸಂ), ಪೂರ್ವೋಕ್ತ, ೨೦೦೩, ಪರಿಷ್ಕೃತ ಮುದ್ರಣ, ಪುಟ. ೫೦–೫

೪೩) ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪೂರ್ವೋಕ್ತ, ಪುಟ.೩೪.

೪೪) ಡಾ. ಆರ್. ಎಂ. ಷಡಕ್ಷರಯ್ಯ, ಪೂರ್ವೋಕ್ತ, ಪುಟ.೨೨೭.

೪೫) ಡಾ. ವಿರೂಪಾಕ್ಷಿ ಪೂಜಾರಹಾಳ್ಳಿ, ಪೂರ್ವೋಕ್ತ, ಪುಟ.೬೯.

೪೬) ಮಹದೇವ ಬಣಕಾರ (ಸಂ), ಪೂರ್ವೋಕ್ತ, ಪರಿಷ್ಕೃತ ಮುದ್ರಣ, ಪುಟ. ೫೨–೫೩.

೪೭) ಹೆಚ್. ದೇವೀರಪ್ಪ, ಮಹದೇವ ಬಣಕಾರ (ಸಂ), ಪೂರ್ವೋಕ್ತ, ಪುಟ.೧೧೮.

೪೮) ಮಹದೇವ ಬಣಕಾರ (ಸಂ), ಪೂರ್ವೋಕ್ತ, ಪರಿಷ್ಕೃತ ದ್ವಿತೀಯ ಮುದ್ರಣ ಪುಟ. ೫೩.

೪೯) ಡಾ. ಆರ್. ಎಂ. ಷಡಕ್ಷರಯ್ಯ, ಪೂರ್ವೋಕ್ತ, ಪುಟ.೨೪೧.

೫೦) ಡಾ. ಎಂ. ಚಿದಾನಂದಮೂರ್ತಿ ವೀರಶೈವ ಧರ್ಮ ಭಾರತೀಯ ಸಂಸ್ಕೃತಿ (ಹಿಂದೂ; ಲಿಂಗಾಯಿತ) ೨೦೦೦ ಪುಟ.೨೪೪–೨೪೫.

೫೧) ಮಹದೇವ ಬಣಕಾರ (ಸಂ), ೨೦೦೪, ಪರಿಷ್ಕೃತ ಮುದ್ರಣ ಪುಟ. ೬೧.

೫೨) ಚಂದ್ರಶೇಖರ ನಾರಾಣಾಪುರ(ಸಂ), ಕರ್ನಾಟಕದ ವೀರಶೈವ ಮಠಗಳು ಸಂ. ೧, ಮಠಗಳ ೨೦೦೨, ಪುಟ.೪೬೦.

೫೩) ಅದೇ, ೨೦೦೨, ಪುಟ. ೪೧೨.

೫೪) ಅದೇ, ೨೦೦೨, ಪುಟ. ೧೨೦೦.

೫೫) ಅದೇ, ೨೦೦೨, ಪುಟ. ೧೨೨೭.

೫೬) ಅದೇ, ೨೦೦೨, ಪುಟ. ೩೫೬.

೫೭) ಪಂಡಿತ್ ಎಸ್ ಬಸಪ್ಪ (ಸಂ), ಪೂರ್ವೋಕ್ತ,ಪುಟ. XXXV-XXXVI

೫೮) ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ ಹರಪನಹಳ್ಳಿ, ೯೯, ಪುಟ.೧೪೭–೧೪೯.

೫೯) ಹೆಚ್. ದೇವೀರಪ್ಪ, ಮಹದೇವ ಬಣಕಾರ(ಸಂ), ಪೂರ್ವೋಕ್ತ, ಪುಟ. ೧೬೨–೧೬೮

೬೦) ಪ್ರೊ. ಬಿ. ರಾಜಶೇಖರಪ್ಪ, ಪೂರ್ವೋಕ್ತ, ಪುಟ. ೫೩-೫೪

೬೧) ತರಳಬಾಳು ರಜತೋತ್ಸವ ಸಂಚಿಕೆ ೧೯೬೭, ಪುಟ. ೧೦.

ಅಧ್ಯಾಯ ೫

೫.೫. ಕೆಲವು ಜಿಜ್ಞಾಸೆಗಳು

೫.೫.೧. ಮರುಳಸಿದ್ಧರು ಧಾರ್ಮಿಕ ಪುರುಷರೇ ಒಂದು ಜಿಜ್ಞಾಸೆ.

೫.೫.೨. ಮರುಳಸಿದ್ಧರ ಚಾರಿತ್ರಿಕತೆ.

೫.೫.೩. ಆರಾಧ್ಯ ದೈವವಾಗಿ ಮರುಳಸಿದ್ಧರು.

೫.೫ ಕೆಲವು ಜಿಜ್ಞಾಸೆಗಳು :

ಧರ್ಮವನ್ನು ಸಾಧನವನ್ನಾಗಿ ಇಟ್ಟುಕೊಂಡು ಸಮಾಜದಲ್ಲಿ ಯಜಮಾನಿಕೆಯನ್ನು ಸ್ಥಾಪಿಸುವುದೇ ಧಾರ್ಮಿಕ ಪ್ರಭುತ್ವ. ಇದು ಸಮಾಜದಲ್ಲಿ ಶಾಶ್ವತವಾದ ಪರಿಣಾಮಗಳನ್ನು ಬೀರುತ್ತದೆ. ಧಾರ್ಮಿಕ ಪ್ರಭುತ್ವವು ರಾಜಪ್ರಭುತ್ವಕ್ಕಿಂತಲೂ ಹೆಚ್ಚು ಅಧಿಕಾರ ಸಾಮರ್ಥ್ಯವನ್ನು ಹೊಂದಿತ್ತು. ಅರಸರುಗಳು ತಮ್ಮನ್ನು ದೇವರಿಗೆ ಸಮಾನ ಅಥವಾ ದೇವರ ಪ್ರತಿನಿಧಿಗಳು ಮುಂತಾಗಿ ಕರೆದುಕೊಂಡಿರುವುದು ಈ ಕಾರಣದಿಂದಾಗಿಯೇ. ಧಾರ್ಮಿಕ ಪ್ರಭುತ್ವವು ಲೌಕಿಕದೊಂದಿಗೆ ಅಲೌಕಿಕ ಜಗತ್ತನ್ನು ನಿರ್ಮಿಸಿಕೊಂಡು ಜನರ ಬದುಕಿನ ಮೇಲೆ ನೇರ ಪ್ರವೇಶವನ್ನು ಪಡೆಯಿತು. ಆದರೆ ಧರ್ಮದ ಸರಳ ವ್ಯಾಖ್ಯಾನದಿಂದ ಈ ಸಾಂಸ್ಕೃತಿಕ ಯಜಮಾನಿಕೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಧಾರ್ಮಿಕ ಪ್ರಭುತ್ವವು ಮೇಲ್ನೋಟಕ್ಕೆ ಕೇವಲ ಧಾರ್ಮಿಕ ಆಚರಣೆಗಳಿಗಷ್ಟೇ ಸೀಮಿತಗೊಂಡ ವ್ಯವಸ್ಥೆಯಂತೆ ಕಂಡುಬರುತ್ತದೆ. ಆದರೆ ನಿಜಾರ್ಥದಲ್ಲಿ ಅದು ಬದುಕಿನ ಎಲ್ಲ ಕ್ಷೇತ್ರಗಳಿಗೂ ವಿಸ್ತರಿಸಿಕೊಂಡಿರುತ್ತದೆ. ಜಾತಿ ವ್ಯವಸ್ಥೆ ಮತ್ತು ದೇವಾಲಯಗಳು ಧಾರ್ಮಿಕ ಪ್ರಭುತ್ವವನ್ನು ನಿರಂತರವಾಗಿ ಮುಂದುವರಿಯುವಂತೆ ಮಾಡಿದವು[೧].

ಪ್ರಸ್ತುತ ಈ ಅಧ್ಯಯದಲ್ಲಿ ಕರ್ನಾಟಕದ ವೀರಶೈವಧರ್ಮದಲ್ಲಿನ ಒಳಪಂಗಡಗಳ ಕೆಲವು ವಿಷಯಗಳನ್ನು ಚರ್ಚಿಸಬೇಕಾಗಿದೆ. ೧೨ನೆಯ ಶತಮಾನದಲ್ಲಾದ ಕ್ರಾಂತಿಯಿಂದಾಗಿ ಕಲ್ಯಾಣದಲ್ಲಿದ್ದ ಸಹಸ್ರಾರು ಜಂಗಮರು, ಕರ್ನಾಟಕ, ಆಂಧ್ರಗಳಲ್ಲಿಯೂ ಚಲ್ಲಾಪಿಲ್ಲಿಯಾಗಿ ಹೋದರು. ಮುಂದೆ ಸುಮಾರು ಎರಡು ಶತಮಾನಗಳ ಕಾಲ ವೀರಶೈವ ಮಠಗಳಾಗಿ ಪರಿವರ್ತಿತವಾದ ಶೈವಮಠಗಳಲ್ಲಿ ಪಂಚಪೀಠಾಧಿಪತಿಗಳು, ವೀರಶೈವ ಧರ್ಮಾಚರಣೆ ಮತ್ತು ರಕ್ಷಣೆಗಾಗಿ ಮಠಗಳು ಸ್ಥಾಪಿಸಿದರು ಮಠಗಳಲ್ಲಿ ಹಾಗೂ ೧೫ನೆಯ ಶತಮಾನದ ವೇಳೆಗೆ ತೋಂಟದ ಸಿದ್ಧಲಿಂಗಯತಿಗಳ ನೇತೃತ್ವದಲ್ಲಿ ನೂರೊಂದು ವಿರಕ್ತರು ನಾಡಿನಾದ್ಯಂತ ಸಂಚರಿಸಿ, ಎಲ್ಲೆಡೆ ಸ್ಥಾಪಿಸಿದ ವಿರಕ್ತಮಠಗಳಲ್ಲಿ ವೀರಶೈವ ಧರ್ಮದ ಕೈಂಕರ್ಯ ಮುಂದುವರೆಯಿತು. ಕಲ್ಯಾಣದ ಕ್ರಾಂತಿಯಲ್ಲಿ ಹೊಮ್ಮಿದ ಜಂಗಮರು ಕಲ್ಯಾಣದಿಂದ ಹೊರಟು ಅಲ್ಲಲ್ಲಿ ಚದುರಿ ತಾವು ಉಳಿದುಕೊಂಡಲ್ಲೆ 'ಮಠ' ನಿರ್ಮಿಸಿಕೊಂಡು ಧಾರ್ಮಿಕ ಕಾರ್ಯವನ್ನು ನಡೆಸತೊಡಗಿದರು. ಹೀಗೆ ಪ್ರಾಚೀನ ಶೈವ-ವೀರಶೈವ ಆಚಾರ್ಯರ ಪರಂಪರೆಯಿಂದ ಬಂದ ಗುರುಸ್ಥಲ ಪುತ್ರವರ್ಗದ ಮಠಗಳು (ಪಟ್ಟದ ದೇವರ ಮಠಗಳು)ಮತ್ತು ಜಂಗಮರು ತಾವೇ ನಿರ್ಮಿಸಿಕೊಂಡ ಹಾಗೂ ತೋಂಟದ ಸಿದ್ಧಲಿಂಗಯತಿಗಳ ಕಾಲದಲ್ಲಿ

ಸ್ಥಾಪಿಸಲ್ಪಟ್ಟ ವಿರಕ್ತಮಠಗಳು, ಹೀಗೆ ಎರಡು ಬಗೆಯ ವೀರಶೈವ ಮಠಗಳು ಕಾರ್ಯನಿರ್ವಹಿಸತೊಡಗಿದವು[೨]. ಪ್ರಸ್ತುತ ಈ ಅಧ್ಯಯನದಲ್ಲಿ ವೀರಶೈವಧರ್ಮದಲ್ಲಿಯ ಒಳಪಂಗಡವಾದ ಗುರುಸ್ಥಲ (ಜಂಗಮರು) ಮಠದವರು ಮರುಳಸಿದ್ಧರನ್ನು ಆಚಾರ್ಯ ಪರಂಪರೆಗೆ ಸೇರ್ಪಡೆ ಮಾಡಿ ಪಂಚಪೀಠಾಧಿಪತಿಗಳೆಂದು ಹೇಳಿಕೊಂಡು ಒಬ್ಬ ಧಾರ್ಮಿಕ ಪುರುಷ ಎಂದು ಸಮರ್ಥಿಸಿಕೊಂಡಿದ್ದಾರೆ.

೫.೫.೧ ಮರುಳಸಿದ್ಧರು, ಧಾರ್ಮಿಕ ಪುರುಷರೆ – ಒಂದು ಜಿಜ್ಞಾಸೆ :

ಭಾರತವು ದಾರ್ಶನಿಕರ ತವರೂರು. ಅನಾದಿಕಾಲದಿಂದಲೂ ಕಾಲಾನುಸಾರವಾಗಿ ಸದ್ಧರ್ಮ ಸ್ಥಾಪನಾಚಾರ್ಯರಾದವರೆಲ್ಲರೂ ಜ್ಞಾನ ಪರಂಜ್ಯೋತಿಯ ದರ್ಶನದಿಂದ ಸ್ವಯಂಚೈತನ್ಯ ಸ್ವರೂಪಿಗಳಾಗಿ ತಮ್ಮದೇ ಆದ ಮಾರ್ಗದಲ್ಲಿ ಧರ್ಮದ ಸ್ವರೂಪವನ್ನು ಪ್ರತಿಪಾದಿಸಿದ್ದಾರೆ. ಆದ್ದರಿಂದಲೇ ನಮ್ಮ ದೇಶವು ಅನೇಕ ಧರ್ಮಗಳ ಉಗಮ ಸ್ಥಾನವಾಗಿ ಈ ಎಲ್ಲಾ ಧರ್ಮಗಳೂ ಅನೇಕ ಕಾರಣಗಳಿಂದಾಗಿ ಇಂದಿನ ಜನತೆಯ ಹೃದಯದಲ್ಲಿ ನೆಲೆಸಲು ಅವಕಾಶವಿಲ್ಲದಾಗಿದೆ. ಇದಕ್ಕೆ ಪ್ರತಿಯೊಂದು ಧರ್ಮದ ಅನುಯಾಯಿಗಳಲ್ಲಿಯೂ ಕೆಲವು ಪ್ರಭಾವಪೂರ್ಣ ವ್ಯಕ್ತಿಗಳು ಸೇರಿಕೊಂಡು, ಧರ್ಮತತ್ವವನ್ನು ತಮ್ಮ ಸ್ವಾರ್ಥಸಾಧನೆಗಳಿಗೆ ಅನುಕೂಲವಾಗುವಂತೆ ತಪ್ಪು ದಾರಿಯಲ್ಲಿ ಎಳೆದುಕೊಂಡು ಹೋಗಿರುವುದೇ ಪ್ರಬಲವಾದ ಕಾರಣವಾಗಿದೆ. ಸ್ವಧರ್ಮದ ಸತ್ವವನ್ನರಿಯದ ಮುಗ್ಧ ಜನತೆಯು ಜಾತಿವಾದಿಗಳ ಕೈಗೊಂಬೆಯಾಗಿ ಮೂಢನಂಬಿಕೆಗಳಿಗೆ ಬಲಿಯಾಗಿದ್ದಾರೆ. ಹೀಗೆ ಒಂದೊಂದು ಧರ್ಮವೂ ಜಾತಿಯ ಮಟ್ಟಕ್ಕೆ ಇಳಿದಾಗ ಹೊಸ ಹೊಸ ಧರ್ಮಗಳು ಉಗಮವಾಗಲು ಕಾರಣವಾಗಿದೆ.

ಕರ್ನಾಟಕದ ಮಟ್ಟಿಗೆ ಹೇಳಬೇಕಾದರೆ ಜೈನ, ಬೌದ್ಧ, ಶೈವ, ವೈಷ್ಣವ ಲಾಕುಲೀಶ ಪಾಶುಪತ, ಕಾಳಮುಖ, ಒಂದು ಕಾಲದಿಂದ ಧಾರ್ಮಿಕ ಕ್ಷೇತ್ರದಲ್ಲಿ ಒಂದು ಸ್ಥಾನಪಡೆದಿದ್ದವು. ೧೨ನೇ ಶತಮಾನದ ವೇಳೆಗೆ ವೀರಶೈವ ಧರ್ಮ ಪ್ರಚಾರವಾಗಲಾರಂಭಿಸಿತು. ವೀರಶೈವಧರ್ಮದ ಪ್ರಾಚೀನತೆಯ ಬಗೆಗೆ ಬಹಳ ಕಾಲದಿಂದಲೂ ವಿದ್ವಾಂಸರಲ್ಲಿ ಜಿಜ್ಞಾಸೆ, ಕುತೂಹಲ, ವಾದ–ವಿವಾದ ನಡೆಯುತ್ತಲೆ ಇದೆ. ಮಹಾತ್ಮಾ ಬಸವೇಶ್ವರರಿಂದಲೇ ವೀರಶೈವ ಧರ್ಮ ಆರಂಭವಾಯಿತೆಂದು ಬಹು ಸರಳವಾದ ವಾದವನ್ನು ಮಂಡಿಸುವ ಪಂಡಿತರು ಈಗಲೂ ಇದ್ದಾರೆ. ವೀರಶೈವ ಧರ್ಮ ಅತಿಪ್ರಾಚೀನ, ಅದು ಹರಪ್ಪ ಮೊಹೆಂಜೊದಾರೋದ ಪೂರ್ವಕಾಲದಿಂದಲೂ ಇತ್ತು ಎನ್ನುವ ಅತಿ ಅಭಿಮಾನಿಗಳೂ ಉಂಟು. ಹೀಗಾಗಿ ಜನಸಾಮಾನ್ಯರಿಗೆ ಯಾವುದೂ ಸುಸ್ಪಷ್ಟವಾಗದೆ ಗೊಂದಲದಲ್ಲಿ

ಸಿಲುಕಿ ಬಸವಾದಿ ಶರಣರಿಂದಲೇ ಆರಂಭವಾದುದೆಂಬುದನ್ನು ಸುಮ್ಮನೆ ಒಪ್ಪಿಕೊಂಡು ಬಿಡುವುದೊಳ್ಳೆಯದೆಂದು ಮುಗ್ಧ ನಿರ್ಣಯಕ್ಕೆ ಬಂದುಬಿಡುತ್ತಾರೆ[೩]. ಪಂಚಪೀಠಾಧಿಪತಿಗಳಾದ ರೇವಣಸಿದ್ಧ, ಮರುಳಸಿದ್ಧ, ಪಂಡಿತಾರಾಧ್ಯ, ವಿಶ್ವಾರಾಧ್ಯ ಏಕೋರಾಮ ಎಂಬುವರೇ ಲಿಂಗೋದ್ಭವರಾಗಿ ಪಂಚಪೀಠಾಧಿಪತಿಗಳಾದ ಇವರು ವೀರಶೈವಧರ್ಮಕ್ಕೆ ತಾವೇ ಸ್ಥಾಪಕರು, ಈ ಧರ್ಮವು ವೇದ ಪೂರ್ವವಾದುದೆಂದು ತಮ್ಮ ಹೆಚ್ಚುಗಾರಿಕೆಯನ್ನು ಪ್ರದರ್ಶಿಸುತ್ತಾರೆ. ತಮ್ಮ ಪ್ರಾಚೀನತೆಯನ್ನು ಸಮರ್ಥಿಸಲು ಅತ್ಯಂತ ಹಾಸ್ಯಾಸ್ಪದವಾದ ಮತ್ತು ಅವೈಜ್ಞಾನಿಕವಾದ ಮಿಥ್ಯಾಕಲ್ಪನೆಗಳನ್ನು ಆಶ್ರಯಿಸಿದ್ದಾರೆ. ಇವರ ಒಟ್ಟು ಧೋರಣೆ ಯಾವುದೇ ಪ್ರಜಾಸತ್ತಾತ್ಮಕವಾದ ಮತ್ತು ಸಮಾಜವಾದೀಯವಾದ ಪ್ರಕ್ರಿಯೆಗೆ ವ್ಯತಿರಿಕ್ತವಾಗಿದೆ.

ವೀರಶೈವ ಧರ್ಮ ಇಂದಿನ ಸಮಾಜಕ್ಕೆ ಮತ್ತು ವೀರಶೈವಯೇತರ ಜನವರ್ಗಗಳಿಗೆ ಪ್ರಸ್ತುತವಾಗುವುದು ಬಸವಣ್ಣನವರ ತತ್ವ ಮತ್ತು ಆಚರಣೆಗಳ ಮೂಲಕವೇ ಹೊರತು, ಪಂಚಾಚಾರ್ಯರ ಕಲಸುಮೇಲೋಗರ ತತ್ವದಿಂದ ಖಂಡಿತ ಅಲ್ಲ. ಇಂದಿನ ಶೋಷಿತ ವರ್ಗಗಳ ಜತೆ ಮಾತಾಡುವವರು ಬಸವಾದಿ ಪ್ರಮಥರೇ ಹೊರತು ರೇಣುಕಾದಿ ಆಚಾರ್ಯರಲ್ಲ. ಆ ಆಚಾರ್ಯರು ತಮ್ಮ ಜೀವನದಲ್ಲಿ ವ್ಯವಹರಿಸಿದ್ದು ಅಧಿಕಾರ ರೂಢ ಮೇಲ್ವರ್ಗದ ಜತೆಗೆ ಹೊರತು, ಕೆಳವರ್ಗಗಳ ಜತೆಗೆ ಸುತಾರಾಂ ಅಲ್ಲ. ಮೂಲತಃ ಅವರು ವೈಭವೀಕರಿಸುವ ಕೆಲವರು ಆಚಾರ್ಯರಾದರೂ ಚಾರಿತ್ರಿಕ ದೃಷ್ಟಿಯಿಂದ ನೋಡಿದಾಗ ಕೆಳವರ್ಗದ ಸಂತರು ಮತ್ತು ಬಸವಣ್ಣನ ಹಿರಿಯ ಸಮಕಾಲೀನರು, ರೇವಣಸಿದ್ಧ ಮೂಲತಃ ಕುರುಬ ಜನಾಂಗದಲ್ಲಿ ಹುಟ್ಟಿದ. ಮರುಳಸಿದ್ಧರು ಮೂಲತಃ ಮಾದಿಗ ಜಾತಿಯಲ್ಲಿ ಹುಟ್ಟಿದ ಸಂತರು. ಆದರೆ ಈ ಮಹಾನ್ ಸಂತರನ್ನು ಅನುಭಾವಿಗಳನ್ನು ಚರಿತ್ರೆಯ ಎಲ್ಲ ಸೂತ್ರಗಳಿಂದ ಬಿಡಿಸಿ ಮಿಥ್ಯಾಕಲ್ಪನೆಗಳ ಲೋಕದಲ್ಲಿ ವೈಭವೀಕರಿಸಿ ತಮ್ಮ ಶ್ರೇಷ್ಠತೆಗಾಗಿ ಪ್ರಯತ್ನಿಸಿದ್ದು ಪಂಚಾಚಾರ್ಯರು ಮಾಡಿದ ಒಂದು ತಾತ್ವಿಕ ಕುತಂತ್ರ. ಕೆಳಜಾತಿಯ ಮಹಾನ್ ಸಂತರನ್ನು ಕೆಳಜಾತಿಯ ವಿರುದ್ಧವಾದ ಸಂಕೇತಗಳನ್ನಾಗಿ ಏರ್ಪಡಿಸಿದ್ದು ಅತ್ಯಂತ ಕ್ರೂರವಾದ ವ್ಯಂಗ್ಯ. ಸನಾತನಿಗಳು ಸಮಾಜವನ್ನು ನಾಲ್ಕು ವರ್ಣಗಳಾಗಿ ಒಡೆದು ಭಾರತೀಯ ನಾಗರಿಕತೆಯ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸಕ್ಕೆ ಕುತ್ತು ತಂದರು.

ಕ್ರಿ.ಶ.೧೧ನೆಯ ಶತಮಾನದ ಕೊನೆಯ ಹಾಗೂ ೧೨ನೆಯ ಶತಮಾನದ ಆರಂಭದ ವೇಳೆಯಲ್ಲಿ ಜೇಡರ ದಾಸಿಮಯ್ಯ ಕೊಂಡಗುಳಿಕೇಶಿರಾಜ, ರೇವಣಸಿದ್ಧೇಶ್ವರ, ಏಕಾಂತ (ದ) ರಾಮಯ್ಯ ಮುಂತಾದ ಶಿವಶರಣರು ಆಗಿನ ವೀರಶೈವದ ಪ್ರಚಾರವನ್ನು ಕೈಗೊಂಡರು. ಇವರು

ಮಹಾ ಪ್ರಭಾವಿ ಶರಣರಾಗಿದ್ದರು. ಜೈನ ಮತ್ತು ವೈದಿಕ ಧರ್ಮಗಳನ್ನು ವಿರೋಧಿಸಿ ಜನಪರವಾದ ಹೊಸ ವೀರಶೈವ ಧರ್ಮದ ಉಗಮಕ್ಕೆ ತಳಪಾಯ ಹಾಕಿದ ಈ ಶರಣರ ಪ್ರಭಾವ ಎಷ್ಟು ಗಾಢವಾಗಿತ್ತೆಂದರೆ ವಾಮಶಕ್ತಿ ರಾಜಗುರುಗಳಂತಹ ಶ್ರೇಷ್ಠ ಕಾಳಮುಖ ಗುರುಗಳೂ ವೀರಶೈವವನ್ನು ಆಲಿಂಗಿಸಿದ್ದಾರೆ. ಇದಕ್ಕೆ ಶಾಸನಾಧಾರವನ್ನು ಡಾ.ಜಿ.ಎಸ್.ದೀಕ್ಷಿತ ಗುರುತಿಸಿದ್ದಾರೆ. ಶೈವದಿಂದ ಭಿನ್ನವಾಗಿ ಹೊಸ ರೂಪತಳೆದ ವೀರಶೈವವನ್ನು ಜನತೆಯ ಹತ್ತಿರ ಬಹುಬೇಗ ಬರುವಂತೆ ಮಾಡಿದ ಶ್ರೇಯಸ್ಸು ಮಹಾತ್ಮ ಬಸವೇಶ್ವರರದು. ತನಗಿಂತ ಪೂರ್ವದಲ್ಲಿ (ಸಿದ್ಧವಾದ ವೀರಶೈವದ ವಾತಾವರಣದಲ್ಲಿ ತನ್ನನ್ನು ತಾನು ಜಾಗ್ರತೆಯಿಂದ ಒಂದಾಗಿಸಿಕೊಂಡು ತನ್ನ ಅತ್ಯದ್ಭುತ ಕತೃತ್ವ ಶಕ್ತಿಯಿಂದ, ಚುಂಬಕ ವ್ಯಕ್ತಿತ್ವದಿಂದ, ಎಲ್ಲರನ್ನೂ 'ಇವ ನಮ್ಮವ' ನೆನೆಸಿ ವೀರಶೈವಕ್ಕೊಂದು ಹೊಸ ಆಯಾಮವನ್ನು ನಿರ್ದಿಷ್ಟ ಸ್ವರೂಪವನ್ನು ನೀಡಿದರು. ಬಸವ ಪೂರ್ವಕಾಲದಲ್ಲಿ ಪ್ರಾರಂಭವಾದ "ಶೈವದಿಂದ ವೀರಶೈವದೆಡೆಗಿನ ಪರಿವರ್ತನೆ" ಬಸವನ ಕಾಲದಲ್ಲಿ ಒಂದೇ ಸಮನೆ ಎಲ್ಲೆಡೆ ಒಮ್ಮೆಲೆ ನಡೆಯಿತು. ಶೈವ ಮಠಾಧೀಶ್ವರರು ಈ ಪರಿವರ್ತನೆಯನ್ನು ಒಪ್ಪಿಕೊಂಡು ತಮ್ಮ ಎಲ್ಲಾ ಮಠಗಳನ್ನು ವೀರಶೈವಮಠಗಳನ್ನಾಗಿಸಿದರು. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹೊಲಿಯ ಶೈವಮಠದ ಗುರುಪರಂಪರೆಯನ್ನು ಅಭ್ಯಸಿಸಿದರೆ, ಕ್ರಿ.ಶ.೧೨ನೆಯ ಶತಮಾನದ ವೇಳೆಗೆ ದಕ್ಷಿಣ ಕಾಶಿ ಎನಿಸುತ್ತಿದ್ದ ಈ ಸುಪ್ರಸಿದ್ಧ ಶೈವಮಠವು ವೀರಶೈವ ಮಠವಾಗಿ ಪರಿವರ್ತಿತವಾದುದನ್ನು ಡಾ.ಶಿ.ಚೆ.ನಂದಿಮಠ ಅವರು ಗುರುತಿಸಿದ್ದಾರೆ. ಇದರಿಂದ ಶೈವಮಠಗಳ ಪ್ರಭಾವ ಪರಂಪರೆ ತಂತಾನೆನಿಂತುಹೋಯಿತು. ಪಂಚಪೀಠಾದಿಯಾಗಿ ಎಲ್ಲ (ಶಾಖಾ) ಮಠಗಳೂ ವೀರಶೈವಕ್ಕೆ ಪರಿವರ್ತನೆಗೊಂಡ ಬಳಿಕ ಅವು ವೀರಶೈವ ಧರ್ಮತತ್ವಾನುಷ್ಠಾನಕ್ಕೆ ಸಂಬಂಧಿಸಿದಂತೆ ಕಾರ್ಯ ಚಟುವಟಿಕೆಯಲ್ಲಿ ತೊಡಗಿದವು.[೪] ಪಂಚಾಚಾರ್ಯರಿಂದ ಈ ವೀರಶೈವ ಧರ್ಮದ ಉದಯವಾಗಿದೆಯೆಂದು ಐವರು ಆಚಾರ್ಯರಿಗೆ ಆರೋಪಿಸುತ್ತದೆ.[೫] ಶೈವ ಪರಂಪರೆಯಲ್ಲೂ ಈ ಆಚಾರ್ಯರ ಉಲ್ಲೇಖವಿರುವುದರಿಂದ ಈ ಶೈವ ಆಚಾರ್ಯರು ವೀರಶೈವಧರ್ಮದಲ್ಲಿ ಪಂಚಾಚಾರ್ಯರೆಂಬುದಾಗಿ ಪರಿವರ್ತಿರಾದ ಬಗ್ಗೆ ಗ್ರಂಥಗಳಲ್ಲಿ ಉಲ್ಲೇಖವಿದೆ.

ಜಗತ್ತಿನ ಯಾವುದೇ ಧರ್ಮವಾಗಲಿ ಸಿದ್ಧಾಂತವಾಗಲಿ ಲೋಕದ ಬಳಕೆಗೆ ಬರುವ ಮುಂಚೆ ಇರಲೇ ಇಲ್ಲವೆಂದು ಎಂದಿಗೂ ಹೇಳಲಾಗುವುದಿಲ್ಲ. ಜೈನ ಬೌದ್ಧ, ಕ್ರೈಸ್ತ, ಇಸ್ಲಾಂ, ಸಿಖ್ ಹಾಗೂ ವಿಶ್ವದ ಇತರ ಧರ್ಮಗಳು ಒಬ್ಬೊಬ್ಬ ವ್ಯಕ್ತಿಯಿಂದ ಸ್ಥಾಪಿಸಲ್ಪಟ್ಟಂತವು. ಆದರೆ ವೀರಶೈವ ಧರ್ಮವು ವಯೋ-ಲಿಂಗ-ಜಾತಿಕುಲಗಳತೀತನಾಗಿ ಅನೇಕರ ಯತ್ನ ಫಲವಾಗಿ ಬೆಳಕಿಗೆ ಬಂದಿದೆ. ಆದ್ದರಿಂದಲೇ ಇದು ವ್ಯಕ್ತಿಯಿಂದ ವ್ಯಕ್ತಿಗಾಗಿ ಬಂದ ಧರ್ಮವಲ್ಲ, ಜನರಿಂದ ಜನತೆಗಾಗಿ ಬಂದ

ಜನತಾ ಧರ್ಮವೆಂದು ಹೇಳಬಹುದು. ಆ ಕಾರಣದಿಂದಲೇ ಅನುಭವಮಂಟಪದ ಹಿಂದಿನ ಎಲ್ಲಾ ಶೈವರೂ, ವೀರಶೈವರೂ, ಲಿಂಗವಂತರೂ ಇದಕ್ಕೆ ಕಾರಣಕರ್ತರೆಂದು ಹೇಳಬಹುದಾದರೂ ನೇರವಾಗಿ ಈ ಧರ್ಮದ ಹೊಣೆ ಹೊತ್ತವರು ೧೨ನೇ ಶತಮಾನದ ವೀರಶೈವರು ಅಥವಾ ಲಿಂಗವಂತರು ಅಥವಾ ಶರಣರು ಎಂದು ಹೇಳಬಹುದು. ಆದ್ದರಿಂದಲೇ ಈ ಮತವನ್ನು ಬಸವಣ್ಣನೇ ಸ್ಥಾಪಿಸಿದನೆಂಬುದಾಗಲೀ ರೇವಣಸಿದ್ಧ, ಮರುಳಸಿದ್ಧಾದಿ ಪಂಚಾಚಾರ್ಯರು ಸ್ಥಾಪಿಸಿದರೆಂದಾಗಲೀ ಹೇಳುವುದರಲ್ಲಿ ಎಷ್ಟು ಅಸತ್ಯ, ಅನೌಚಿತ್ಯವಿದೆಯೋ ಅಷ್ಟೇ ಸತ್ಯವೂ ಔಚಿತ್ಯವೂ ಇದೆ ಎಂದು ಹೇಳಿದರೆ ಯಾರೂ ಆಶ್ಚರ್ಯ ಪಡಬೇಕಾಗಿಲ್ಲ. ಈ ಧರ್ಮದ ಸ್ಥಾಪನೆಯ ಕಾರ್ಯದಲ್ಲಿ ಬಸವಣ್ಣನ ಪಾತ್ರ ಹಿರಿದೆಂದರೆ ಅನುಭವ ಮಂಟಪದ ಅಧ್ಯಕ್ಷತೆ ವಹಿಸಿದ್ದ ಪ್ರಭುವಿನ ಪಾತ್ರ ಅದಕ್ಕಿಂತಲೂ ಹಿರಿದು. ಪ್ರಭುವಿನ ವಾದದಲ್ಲಿ ಗೆದ್ದ ಅಕ್ಕನ ಪಾತ್ರ ಅದಕ್ಕಿಂತಲೂ ಹಿರಿದು. ಈ ಧರ್ಮದ ಮಹಾ ಬೆಳಕಿಗಾಗಿ ಮಾದಿಗನನ್ನಪ್ಪಿ ಪ್ರಾಣವನ್ನರ್ಪಿಸಿದ ಮಧುವರಸನ ಮಗಳು ನೀಲಮ್ಮನ ತ್ಯಾಗ, ಆಕೆಯ ಪಾತ್ರ ಇನ್ನೂ ಹಿರಿದಾದುದು. ಈ ಮಹಾಕ್ರಾಂತಿಯ ಫಲವಾಗಿ ತುಮುಲಕ್ಕೆ ಸಿಲುಕಿದ ಈ ಧರ್ಮವನ್ನು ರಕ್ಷಿಸಲು ರುದ್ರಮುನಿಯೆಂಬ ಔರಸ ಪುತ್ರನನ್ನು, ಮರುಳಸಿದ್ಧನೆಂಬ ಧರ್ಮಪುತ್ರನನ್ನು ಒದಗಿಸಿದ ರೇವಣಸಿದ್ಧನ ಪಾತ್ರ ಹಿರಿದು. ಇಂತಿರುವಲ್ಲಿ ಈ ಧರ್ಮದ ಸ್ಥಾಪನೆಯ ಪಟ್ಟವನ್ನು ಬಸವಾದಿ ಶರಣರಿಗಾಗಲೀ, ರೇವಣಸಿದ್ಧಾದಿಗಳಿಗಾಗಲೀ ಪ್ರತ್ಯೇಕ ಪ್ರತ್ಯೇಕವಾಗಿ ಕಟ್ಟುವ ಯತ್ನದಲ್ಲಿ ಪ್ರಾಮಾಣಿಕತೆಯಷ್ಟೆಯಲ್ಲ ಸದುದ್ದೇಶವೂ ಇಲ್ಲವೆಂದು ಸಾರಿ ಸಾರಿ ಹೇಳಬಹುದಾಗಿದೆ.

ಸ್ಥಿತಿಹೀಗಿದ್ದರೂ ನಮ್ಮವರು ರೇವಣಸಿದ್ಧಾದಿ ಪಂಚಕರನ್ನೂ ಕಲ್ಪಿಸಿಕೊಂಡು ಒಂದು ತಂಡವು, ಬಸವಾದಿ ಪ್ರಮಥರನ್ನು ಕಲ್ಪಿಸಿಕೊಂಡು ಮತ್ತೊಂದು ತಂಡವೂ ಲೋಕ ಕಲ್ಯಾಣದ ದೃಷ್ಟಿಯಿಲ್ಲದಿದ್ದರೂ ಒಂದು ಅವಾಸ್ತವ ಬಡಿದಾಟವನ್ನೇ ಎಬ್ಬಿಸಿದ್ದಾರೆ, ಅಲ್ಲದೆ ತಾವೂ ಧರ್ಮಕ್ಕೆ ವಂಚಿತರಾಗಿ ಜನತೆಯನ್ನೂ ಧರ್ಮಕ್ಕೆ ವಂಚಿತರನ್ನಾಗಿ ಮಾಡಿ ಅನೈತಿಹಾಸಿಕ ಅಸಂಬದ್ಧ ಕಲ್ಪನೆಗಳಿಗೀಡುಮಾಡಿ ನಮ್ಮ ಧಾರ್ಮಿಕ ಇತಿಹಾಸವನ್ನೇ ಶೋಚನೀಯ ಸ್ಥಿತಿಗೊಳಪಡಿಸಿದ್ದಾರೆ.[೬]

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿಗಳಿಸಿದ ವೀರಶೈವ ಧರ್ಮವು ಅತಿ ಪುರಾತನವೇ ಆದರೂ ಆ ಕಾಲದಲ್ಲಿ ಪುನರುತ್ಥಾನಗೊಂಡಿತು. ವೀರಶೈವ ಧರ್ಮವು ಎಲ್ಲರಿಗೂ ಮುಕ್ತ. ಬಸವೇಶ್ವರರು ಹಾಗೂ ಅವರ ಸಮಕಾಲೀನರಾದ ಚನ್ನಬಸವಣ್ಣ, ಅಲ್ಲಮ, ಸಿದ್ಧರಾಮ, ಅಕ್ಕಮಹದೇವಿ ಅಲ್ಲದೆ ೨೦೦ ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಶರಣರು ವೀರಶೈವ ಧರ್ಮದ

ಉನ್ನತಿಗಾಗಿ ಶ್ರಮಿಸಿದರು. ಇವರಲ್ಲದೆ ಕೆಳವರ್ಗದವರನ್ನು ತಟ್ಟಿದ ಈ ಧರ್ಮ ಜಾತ್ಯಾತೀತವಾದದ್ದು. ಇದರಲ್ಲಿ ಮಾದರ ಚನ್ನಯ್ಯ ಡೋಹರ ಕಕ್ಕಯ್ಯ, ಮಡಿವಾಳ ಮಾಚಿದೇವ, ಮೊಚ್ಚೆಕಾಯಕದ ಹರಳಯ್ಯ, ಮೇದಾರಕೇತಯ್ಯ, ಕುಂಬಾರ ಗುಂಡಯ್ಯ, ಅಂಬಿಗರ ಚೌಡಯ್ಯ, ದೇವರದಾಸಿಮಯ್ಯ, ಮಧುವರಸ, ರೇವಣಸಿದ್ಧ, ಮರುಳಸಿದ್ಧ ಮುಂತಾದವರೆಲ್ಲರೂ ವಿವಿಧ ಕುಲಗಳಲ್ಲಿ ಹುಟ್ಟಿದವರು. ಇವರೆಲ್ಲ ಅಲ್ಲಿನ ಮಾಲಿನ್ಯತೆಗೆ ಅಸಹ್ಯಗೊಂಡು, ಸತ್ಯಶುದ್ಧವಾದ ಶರಣಧರ್ಮದ ಅನುಯಾಯಿಗಳಾಗಿ ಮಾನವ ಕುಲ ಒಂದೆಂದು ಸಕಲ ಜೀವಿಗಳ ಏಳಿಗೆಗಾಗಿ ಶ್ರಮಿಸಿದರು. ಶರಣರಲ್ಲಿ ಗುಣಕ್ಕೆ ಪ್ರಾಮುಖ್ಯತೆಯಿತ್ತೇ ಹೊರತು ಹುಟ್ಟಿಗಲ್ಲ. ಇಲ್ಲಿ ಎಲ್ಲರಿಗೂ ಸಮಾನವಾದ ಸ್ಥಾನಮಾನಗಳುಂಟು.[೭] ಈ ಮೇಲೆ ಸೂಚಿಸಿದ ಶಿವಶರಣರು ವೀರಶೈವ ಮತ ಪ್ರಚಾರದಲ್ಲಿ ಪಾಲ್ಗೊಂಡವರು. ೧೨ನೇ ಶತಮಾನದ ಕಲ್ಯಾಣದಲ್ಲಿ ಆದ ಧಾರ್ಮಿಕ ಕ್ರಾಂತಿಯಲ್ಲಿ ಇವರೆಲ್ಲರೂ ಪ್ರಮುಖ ಪಾತ್ರದಾರಿಗಳು.

ವೀರಶೈವ (ಲಿಂಗಾಯಿತ) ಸಂವಿಧಾನದ ಮೂರು ಅಂಗಗಳಾದ-ಷಟ್‌ಸ್ಥಲವನ್ನು ವೀರಶೈವದ ಆತ್ಮವೆಂದೂ, ಅಷ್ಟಾವರಣಗಳನ್ನು ಅಂಗವೆಂದೂ, ಪಂಚಾಚಾರಗಳನ್ನು ಪ್ರಾಣವೆಂದು ಗುರುತಿಸಲಾಗಿದೆ. ಪಂಚಾಚಾರಗಳಾದ ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ ಮತ್ತು ಗಣಾಚಾರಗಳ ಆಧಾರದ ಮೇಲೆಯೇ ಬಸವಣ್ಣನವರು ಸಮಾಜವನ್ನು ಪುನರ್ಘಟಿಸಿದರು. ಇವುಗಳಲ್ಲಿ ಶಿವಾಚಾರವನ್ನು ಸಮಾಜದಲ್ಲಿ ಸರ್ವಸಮಾನತೆಯನ್ನು ತರಲು ಬಳಸಿಕೊಂಡರು. ಅಂಗದ ಮೇಲೆ ಇಷ್ಟಲಿಂಗವನ್ನು ಧರಿಸಿದವರೆಲ್ಲ ಸಮಾನರು. ಅವರಲ್ಲಿ ಹಿಂದಿನ ಕುಲಜಾತಿಗಳನ್ನೆಣಿಸಿ ಭೇದಭಾವವನ್ನು ಎಣಿಸಕೂಡದು; ಲಿಂಗಧರಿಸಿದ ಮೇಲೆ ಪೂರ್ವಕುಲವಳಿದು ಎಲ್ಲರೂ ದೈವ ಭಕ್ತರಾಗುತ್ತಾರೆ. ಹೀಗಾದಾಗ ವಿಪ್ರರಿಂದ ಅಂತ್ಯಜರವರೆಗೆ ಹಾರುವರಿಂದ ಶ್ವಪಚರವರೆಗೆ ಎಲ್ಲರೂ ಶಿವಸಮಾನರು. ಕಾರಣ ಅವರಲ್ಲಿ ಭೇದವನ್ನೆಣಿಸುವ ಪ್ರಶ್ನೆಯೇ ಇಲ್ಲ. ಅವರೀಗ ವರ್ಣಾಶ್ರಮ ಚೌಕಟ್ಟಿನ ಸಂಕೋಲೆಗಳನ್ನು ಕಡಿದುಹಾಕಿ ಸಮಾನತೆಯನ್ನು ಸಮಾಜದಲ್ಲಿ ನೆಲೆಗೊಳಿಸುತ್ತಾರೆ. ಇದು ಬಸವಣ್ಣ ರೂಪಿಸಿದ ಸಮಾನತೆಯ ಸೂತ್ರ[೮].

ಈ ಮೇಲಿನ ನಿರೂಪಣೆಯನ್ನು ಗ್ರಹಿಸಿ ನೋಡಿದಾಗ ಶರಣ ಪರಂಪರೆಯೇ ವೀರಶೈವ ಧರ್ಮ ಪ್ರಚಾರದಲ್ಲಿಯ ನಿಷ್ಠೆ ಏನೆಂಬುದನ್ನು ಗ್ರಹಿಸಬಹುದಾಗಿದೆ. ಇಲ್ಲಿ ಶಿವಶರಣರೆಲ್ಲರ ಪಂಗಡವು ಮೇಲು-ಕೀಳು ವರ್ಗದ ಭೇದವೆಣಿಸದೆ ಧರ್ಮ ಪ್ರಚಾರದ ಕಡೆ ಒಲವು ತೋರಿಸಿದರೆ ಹೊರತು, ಧಾರ್ಮಿಕ ದೈವಿಪುರುಷರೆಂಬ ಶ್ರೇಷ್ಠತೆಯನ್ನು ಹೆಚ್ಚಿಸಿಕೊಳ್ಳಲಿಲ್ಲ. ಬಸವಣ್ಣನು ಜಾತಿಯಿಂದ

ಬ್ರಾಹ್ಮಣವಾಗಿದ್ದು, ವೀರಶೈವನಾಗಿರುವಂತೆ, ಹರಳಯ್ಯ ಜಾತಿಯಿಂದ ಮಾದಿಗನಾಗಿದ್ದು ವೀರಶೈವನಾಗಿದ್ದಾನೆ. ಇವರಷ್ಟೆಯಲ್ಲದೆ ಅಂಬಿಗರ ಚೌಡಯ್ಯ, ಡೋಹರಕಕ್ಕಯ್ಯ, ಮಾದರ ಚನ್ನಯ್ಯ ಮೊದಲಾದವರು ತಮ್ಮ ಜಾತಿಯನ್ನು ತೊರೆದು ವೀರಶೈವದಲ್ಲಿ ದೀಕ್ಷೆ ಪಡೆದು, ಈ ಧರ್ಮ ಸ್ವೀಕರಿಸಿ ಅಮರಗಣಾಧೀಶ್ವರರಾದರು. ಈ ಎಲ್ಲ ಶಿವ ಶರಣರನ್ನು ದೈವತ್ವಕ್ಕೇರಿಸಿ ಧಾರ್ಮಿಕ ವ್ಯಕ್ತಿ ಎಂಬ ಪಟ್ಟವನ್ನು ಕಟ್ಟಲಾಗದು.

ಆದರೆ ಪ್ರಸ್ತುತ ಅಧ್ಯಯನ ಕೀಳು ಕುಲವಾದ ದಲಿತ ಶಿವಶರಣ ಮರುಳಸಿದ್ಧರು ೧೨ನೇ ಶತಮಾನದ ಕಲ್ಯಾಣ ಕ್ರಾಂತಿ, ಅಥವಾ ವಚನ ಚಳವಳಿಯಲ್ಲಿ ಗುರುತಿಸಲ್ಪಡದಿದ್ದರೂ ಅವರು ವಚನ ಚಳವಳಿಗಿಂತ ದೂರವೇ ಇದ್ದು ಹೋರಾಟದ ಕಾರ್ಯಕ್ಷೇತ್ರಕ್ಕೆ ತೊಡಗಿಸಿಕೊಂಡರು. ಬಸವಣ್ಣನವರಿಗೆ ಸಿಕ್ಕಷ್ಟು ಪ್ರಾಶಸ್ತ್ಯ ಮರುಳಸಿದ್ಧರಿಗೆ ಪ್ರಾಪ್ತವಾಗಲಿಲ್ಲ !? ಬಸವಣ್ಣನವರಿಗೆ ಹುಟ್ಟಿನಿಂದ ಬ್ರಾಹ್ಮಣರು ಅವರಿಗೆ ಹುಟ್ಟೇ ಭೂಷಣ, ಜೊತೆಗೆ ಅವರೊಂದಿಗೆ ಶರಣರೂ ಹುಟ್ಟಿಕೊಂಡರು. ಅಧಿಕಾರ, ಖಜಾನೆ ಶರಣರ, ಬೆಂಬಲದ ಬೆಂಗಾವಲಿನಲ್ಲಿ ಬಸವಣ್ಣ ಮಿಂಚಿದರು. ಜೊತೆಗೆ ಅವರ ಸರಳ ವಚನಗಳಲ್ಲಿನ ಗಟ್ಟಿತನ, ಹಾಗೂ ಒಬ್ಬ ಮೇಲ್ಭಾಗದ ವ್ಯಕ್ತಿಯಾಗಿಯೂ ತೋರಿದ ದಲಿತಪರ ಕಾಳಜಿಗಳೂ ಮೇಳೈಸಿದ್ದವು. ಅವರದ್ದು ಸಾಮೂಹಿಕ ಹೋರಾಟವಾಗಿದ್ದರಿಂದ ಹೆಚ್ಚು ಪ್ರಚಾರವೂ ದೊರೆಯಿತು. ಆದರೆ ಮರುಳಸಿದ್ಧ ಹುಟ್ಟಿನಿಂದ ಅಸ್ಪೃಶ್ಯ, ಆತನದು ಏಕಾಂಗಿ ಹೋರಾಟ. ಆತನ ಜಾತಿ ಅರಿಯುತ್ತಲೇ, ದೂರ ಸರಿವವರು, ಶಪಿಸುವವರು, ಅಸಹ್ಯಪಟ್ಟುಕೊಳ್ಳುವಂತವರ ನಡುವೆಯೇ ಅವರನೆಲ್ಲಾ ವಿರೋಧಿಸಿ, ಕೇವಲ ತನ್ನ ವೈಚಾರಿಕ ನಿಲುವು, ವಾಚಾಳಿತನ, ತನಗಿರುವ ಪ್ರಕಾಂಡ ಪಾಂಡಿತ್ಯದ ಬೆಂಬಲ, ನೈತಿಕ ಧೈರ್ಯದಿಂದ ಎಂಥವರನ್ನು ಮರುಳು ಮಾಡಿ, ತನ್ನತನದಿಂದಲೇ ಆಕರ್ಷಿಸಿ, ತನ್ನ ಸಮುದಾಯದಲ್ಲಿ ಗುರುತಿಸಿಕೊಂಡವರು.

ಬಸವಣ್ಣನನ್ನು ಪರಮೇಶ್ವರನ ವಾಹನ ನಂದಿಗೆ ಹೋಲಿಸಿ, ದೈವಸ್ವರೂಪ ಕೊಟ್ಟು, ಸಾಮಾನ್ಯರಲ್ಲಿ ಭಕ್ತಿಭಾವವನ್ನುಂಟು ಮಾಡಲು ದಂತಕಥೆಗಳನ್ನು ಕ್ಷಟ್ಟಿದಂತೆ, ಮರುಳಸಿದ್ಧರ ಜೀವನದಲ್ಲಿ ಈ ರೀತಿ ನಡೆಯುವುದಿಲ್ಲ. ಮರುಳಸಿದ್ಧರು ದೇವರ ಪಂಚಮುಖ ಒಂದರಿಂದ ಉದ್ಭವಿಸಿದ ಮರುಳಾರಾಧ್ಯರೆಂದೇ ಪಂಚಪೀಠಾಧೀಶರು ಆತನಿಗೆ ದೈವತ್ವಕೊಟ್ಟು ಅವರ ಹುಟ್ಟಿನಲ್ಲಿ ಅತಿಮಾನುಷ ಕಲ್ಪನೆ ಕಟ್ಟಿದರು. ಆದರೆ ಮರುಳಸಿದ್ಧರು ಹೊಸ ಧರ್ಮದ ಅಸ್ತಿತ್ವಕ್ಕೆ ಕಾರಣರಲ್ಲ. ಅವರು ದಲಿತ ವರ್ಗದ ಸಮಾಜದಲ್ಲಿ ಗುರುತಿಸಲ್ಪಟ್ಟಿದ್ದರು. ಸಮಾಜದ ಎಲ್ಲಾ ವರ್ಗದ ಶೋಷಣೆಯಿಂದ ತುಳಿತಕ್ಕೆ ಒಳಗಾದವರನ್ನು ಗುರುತಿಸಿ ಅಂತಹವರನ್ನು ಪರಿವರ್ತಿಸಿದ ಸಮಾಜ ಸುಧಾರಕ ಹೊರತು ಧಾರ್ಮಿಕ ಪುರುಷರಲ್ಲ.

೫.೫.೨ ಮರುಳಸಿದ್ಧರ ಚಾರಿತ್ರಿಕತೆ :

ಉಜ್ಜಯಿನಿ ಸದ್ಧರ್ಮ ಸಿಂಹಾಸನ ಸ್ಥಾಪಕರಾದ ಮರುಳಸಿದ್ಧರ ಚರಿತ್ರೆಯ ಕುರಿತು ಇದುವರೆಗೆ ದೊರೆತ ಕೃತಿಗಳು ಅತಿ ವಿರಳ. ಆದರೆ ಪ್ರಸ್ತುತ ಉಪಲಬ್ಧವಿರುವ ಸಾಹಿತ್ಯ, ಚಾರಿತ್ರಿಕ ದಾಖಲೆಗಳನ್ನು ಆಧರಿಸಿ ರಚಿಸಿರುವ ಬಾಗಳಿಯ ದೇವಕವಿಯ ಸಿದ್ಧಲಿಂಗ ಚಾರಿತ್ರ್ಯವೇ ಅತ್ಯಂತ ಪ್ರಾಚೀನ ದಾಖಲೆ. ಮರುಳಸಿದ್ಧರ ಜೀವನ ಚರಿತ್ರೆ ಕಟ್ಟಿಕೊಡುವ ಮೂಲ ದಾಖಲೆ ಇದು. ಶಾಲಿವಾಹನ ಶಕ ೧೫೦೯ ಅಂದರೆ ಕ್ರಿ.ಶ.೧೫೮೭ರಲ್ಲಿ ರಚಿಸಿದ್ದಾಗಿ ಕವಿ ಕಾವ್ಯದ ಆರಂಭದಲ್ಲಿ ಹೇಳಿದ್ದಾನೆ. ಈ ಕೃತಿಯಾದರು ಸ್ವತಂತ್ರ ಕೃತಿಯಲ್ಲ, ಮರುಳಸಿದ್ಧರ ಸಮಕಾಲೀನರಾದ ಅವರ ಶಿಷ್ಯರಾದ ಗದ್ದಿಗೆ ರಾಮಿತಂದೆಯು ರಚಿಸಿದ "ಗುರುಬೋಧ ಮಹಾತ್ಮೆ"ಯು ಈ ದೇವಕವಿಗೆ ಪ್ರೇರಣೆಯಾಗಿದೆ. ಆದರೆ ಇದು ಉಪಲಬ್ಧವಿಲ[೧೦], ಮಾದಿಗ ಜಾತಿಯಲ್ಲಿ ಜನ್ಮಪಡೆದ ಮರುಳಸಿದ್ಧ ದಲಿತಪರ ನಾಯಕ, ಸಾಮಾಜಿಕ ಹೋರಾಟಗಾರರ ನಾಯಕರನ್ನು ಚಿತ್ರಿಸಿಕೊಂಡು ಇವರನ್ನು ಮಹಾಮಾನವತಾವಾದಿ ಎಂದು ವೈಭವೀಕರಿಸಿದ್ದಾನೆ. ಇದೇ ಧೋರಣೆಯನ್ನು ಅನುಸರಿಸಿದ ಸಿರಿಗೆರೆಯ ಹೊಸಮಠದ ಗುರುಸಿದ್ಧ ಸ್ವಾಮಿಗಳ ಸಾಂಗತ್ಯ, ಆನಗೋಡು ರೇವಣಸಿದ್ಧ ಕವಿಯ ಸಾಂಗತ್ಯ, ಈ ಕೃತಿಗಳು ಮರುಳಸಿದ್ಧರ ಚರಿತ್ರೆಯನ್ನು ನಿರೂಪಿಸುತ್ತವೆ.

ಸಂಸ್ಕೃತದಲ್ಲಿರುವ ಆಗಮ ಸಾಹಿತ್ಯವಾದ ಸುಪ್ರಭೇಧಾಗಮ[೧೧]ದಲ್ಲಿ ಪಂಚಾಚಾರ್ಯರು ಶಿವನ ಪಂಚಮುಖಗಳಿಂದ ನಂದಿ, ಭೃಂಗಿ, ವೀರ, ವೃಷಭ, ಸ್ಕಂದ ಎಂಬ ಐವರು ಗಣಾಧೀಶ್ವರರು ಐದುಗೋತ್ರ ಪುರುಷರಾಗಿ ಅವತರಿಸಿದರು. ಈ ಪಂಚಾಚಾರ್ಯರು ದಾರುಕ, ರೇಣುಕ, ಶಂಕು ಕರ್ಣ, ಧೇನು ಕರ್ಣ ಮತ್ತು ವಿಶ್ವಕರ್ಣ ಎಂಬ ಹೆಸರುಗಳಿಂದ ಅವತರಿಸಿದರೆಂದಿದೆ. ಈ ಅಂಶವನ್ನು ಪುಷ್ಟಿಕರಿಸಿ ಚತುರಾಚಾರ್ಯರ ಪ್ರಬಂಧ, ಚತುರಾಚಾರ್ಯರ ಪುರಾಣ, ಶ್ರೀಕರ ಭಾಷ್ಯ, ನಾಗಭೂಷಣ ಕವಿಯ ಸಾಂಗತ್ಯ, ಉಜ್ಜಯಿನಿ ಗೊಂಗಡಿ ವೀರಭದ್ರಯ್ಯನವರ ಸಾಂಗತ್ಯ, ಮರುಳಾರಾಧ್ಯರ ವಿಜಯ ಚರಿತೆ, ಈ ಕೃತಿಗಳು ಕೇವಲ ಅವತಾರದ ರೀತಿಯನ್ನು ವಿವರಿಸಿವೆಯೇ ವಿನಾ ಚರಿತ್ರೆಯನ್ನು ವಿವರಿಸಿಲ್ಲ.[೧೨] ಈ ಸಾಹಿತ್ಯವು ಮರುಳಸಿದ್ಧರನ್ನು ಪಂಚಪೀಠದ ಪಂಚಾಚಾರ್ಯರ ಚರಿತ್ರೆಗೆ ಸೇರ್ಪಡೆ ಮಾಡಲಾಗಿದೆ. ಈ ಅಂಶವ ಅತಾರ್ಕಿಕ ಕಾಲ್ಪನಿಕತೆಯಿಂದ ಕೂಡಿರುವುದಾಗಿದೆ. ತಮ್ಮ ಪ್ರಾಚೀನತೆಯನ್ನು ಸಮರ್ಥಿಸಲು ಅತ್ಯಂತ ಹಾಸ್ಯಾಸ್ಪದವಾದ ಮತ್ತು ಅವೈಜ್ಞಾನಿಕವಾದ ಮಿಥ್ಯಾಕಲ್ಪನೆಗಳನ್ನು ಆಶ್ರಯಿಸಿದ್ದಾರೆ.

ರೇಣುಕಾದಿ ಪಂಚಾಚಾರ್ಯರು ಈ ಮಹಾತ್ಮರು ಪರಮೇಶ್ವರನ ಅಜ್ಞಾನುಸಾರವಾಗಿ

ಪ್ರತಿಯೊಂದು ಯುಗದ ಆದಿಯಲ್ಲಿಯೂ ಶಿವಲಿಂಗ ಮುಖದಿಂದ ದಿವ್ಯದೇಹಧಾರಿಗಳಾಗಿ ಅವತರಿಸಿ ಸರ್ವತ್ರ ಶಿವತತ್ವವನ್ನು ಪ್ರಕಾಶಪಡಿಸಿದರೆಂಬ ವಿಷಯವನ್ನು ಸಕಲ ಶಿವಾಗಮಗಳು ಮುಕ್ತ ಕಂಠದಿಂದ ಸಾರುತ್ತಿರುವವು. ಐದುಜನ ಯತಿಗಳಿಂದ ಪಂಚಪೀಠಗಳು ಪ್ರತಿಷ್ಠಾಪಿಸಲ್ಪಡುತ್ತವೆ[೧೩]. ಆದರೂ ಈ ಪಂಚಪೀಠ ಪರಂಪರೆಯ ವಿಚಾರವಾಗಿ ಯಾವುದೇ ಚಾರಿತ್ರಿಕ ಕಾಲಘಟ್ಟದಲ್ಲಿ ನಡೆದಿರಬಹುದು ಎಂಬುದಕ್ಕೆ ಸತ್ಯಾಂಶದ ದಾಖಲೆಯು ನಿರಾಧಾರವಾಗಿದೆ. ಕೇವಲ ಅವತಾರ ಪುರುಷರಾಗಿ ಕಟ್ಟು ಕಥೆಗಳಾಗಿರುವ್ಯದರಿಂದ, ಪವಾಡಗಳ ಸರಮಾಲೆಯೇ ಅಲ್ಲಿರುವುದರಿಂದ, ಇವುಗಳನ್ನು ಗಂಭೀರವಾಗಿ ಪರಿಗಣಿಸಲಿಕ್ಕಾಗುವುದಿಲ್ಲ. ಮಿ.ಇ.ಥರ್ಸಟನ್, ಡಾ.ಜಿ.ಎನ್.ಫಾರ್ಕ್ಯುಹಾರ್, ಮಿ. ಸಿ.ಪಿ.ಬ್ರೌನ್, ಡಾ. ಸರ್. ಆರ್.ಜಿ.ಭಂಡಾಕರ್ ಹಾಗೂ ರಾ.ಬ.ಎಲ್.ಕೆ.ಅನಂತಕೃಷ್ಣ ಅಯ್ಯರ್,[೧೪] ಮೊದಲಾದ ವಿದ್ವಾಂಸರು ಪಂಚಪೀಠ ಪರಂಪರೆಯು ವೇದಪೂರ್ವವಾದುದೆಂದು ಸಮರ್ಥಿಸಿಕೊಳ್ಳುತ್ತಾರೆ. ಇವರ ಒಟ್ಟು ಧೋರಣೆ ಯಾವುದೇ ಪ್ರಜಾಸತ್ತಾತ್ಮಕ ಮತ್ತು ಸಮಾಜವಾದೀಯವಾದ ಪ್ರಕ್ರಿಯೆಗೆ ವ್ಯತಿರಿಕ್ತವಾಗಿದೆ. ಒಟ್ಟಿನಲ್ಲಿ ಇವರು ಇತಿಹಾಸಕ್ಕೆ, ವರ್ತಮಾನಕ್ಕೆ ಮತ್ತು ಭವಿಷ್ಯದ ವಿಕಾಸದ ಸಾಧ್ಯತೆಗಳಿಗೆ ಸಂಪೂರ್ಣವಾಗಿ ವಿರುದ್ಧವಾದವರು ಮತ್ತು ಹೊರತಾದವರು.

ಪಂಚಪೀಠ ಪರಂಪರೆ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿಲ್ಲ. ಅದು ಇತ್ತೀಚಿನ ಬೆಳವಣಿಗೆ ಎಂಬುದಾಗಿ ಖ್ಯಾತ ಸಂಶೋಧಕರಾದ ಎಂ.ಎಂ.ಕಲಬುರ್ಗಿ ಈ ಕೆಳಗಿನ ನಿದರ್ಶನದೊಂದಿಗೆ ಸಮರ್ಥಿಸಿದ್ದಾರೆ. "ವೀರಶೈವ ಅನ್ನುವ ಶಬ್ದ ಕರ್ನಾಟಕದಲ್ಲಿ ಹುಟ್ಟಿದ್ದೇ ೧೩೬೮ಕ್ಕೆ ಬಸವ ಪುರಾಣದೊಳಗೆ ಮೊಟ್ಟಮೊದಲು ವೀರಶೈವ ಪದ ಬರುತ್ತದೆ. ಅದಕ್ಕಿಂತ ಮೊದಲು ಬರುವುದಿಲ್ಲ. ಪಂಚಾಚಾರ್ಯ ಪೀಠ ಅಥವಾ ಚತುರಾಚಾರ್ಯರ ಒಕ್ಕೂಟ ಹುಟ್ಟಿದ್ದು ೧೫೩೦ರೊಳಗೆ. ಅದು ಹುಟ್ಟಿದ್ದು ಶಿವಗಂಗೆ ಬೆಟ್ಟದೊಳಗೆ, ಆಂಧ್ರಪ್ರದೇಶದ ಮಾರ್ಗವಾಗಿ ಒಳಗೆ ಬಂದು ಶಿವಗಂಗೆಯ ಬೆಟ್ಟದೊಳಗೆ ಇವರು ಪಂಡಿತಾರಾಧ್ಯ ಪರಂಪರೆಯ ವ್ಯಕ್ತಿಗಳು ಒಂದು ಯೋಜನೆ ಮಾಡಿದರು. ಅವರ ಸಿದ್ಧಾಂತವಿನ್ನು ಬದುಕಿತು, ಜೀವಂತವಾಗಿತು. ಆದರೆ ಕರ್ನಾಟಕದಲ್ಲಿ ಇರುವಂತಹ ಎಲ್ಲ ಲಾಕುಲೀಶ, ಪಾಶುಪತ ಮುಂತಾದ ಸಿದ್ಧಾಂತವೆಲ್ಲ ಹಾಳಾಗಿ ಹೋಗಿಬಿಟ್ಟತ್ತು. ಬಸವಣ್ಣನ ಒಂದು ಬಿರುಗಾಳಿಗೆ ಆ ಪಂಡಿತಾರಾಧ್ಯ ಪೀಠದವರು ಅವರು ಕಲ್ಲೆಗೆ ಬರುತ್ತಾರೆ. ಆ ಮೇಲೆ ಶಿವಗಂಗೆ ಬೆಟ್ಟಕ್ಕೆ ಬರುತ್ತಾರೆ, ಶಿವಗಂಗೆ ಬೆಟ್ಟದ ಮೇಲೆ ಚತುರಾಚಾರ್ಯರ ಪೀಠ ಹುಟ್ಟಿದವು, ಒಂದು ರೇವಣಸಿದ್ಧ, ಒಂದು ಮರುಳಸಿದ್ಧ, ಇನ್ನೂ ಮೊದಲಾದ ಪಂಚಪೀಠ ಆಚಾರ್ಯರ ಪಂತವು ಕ್ರಿ.ಶ. ೧೫೩೦ರಲ್ಲಿ ಹುಟ್ಟಿದವು. ಅದಕ್ಕಿಂತ ಮೊದಲು ಚತುರಾಚಾರ್ಯರು

ಹುಟ್ಟಲೇ ಇಲ್ಲ, ಅಲ್ಲಿಯವರೆಗೂ ಎಲ್ಲಿಯೂ ಬರುವುದಿಲ್ಲ ಅದೇನಾದರೂ ಬಂದಿದ್ದರೆ ಅದೆಲ್ಲ ಕೃತಕವಾದ್ದು ಅಂತ ಹೇಳಬೇಕಾಗುತ್ತದೆ. ೧೫೩೦ಕ್ಕೆ ಅವರು ಇಲ್ಲಿ ಚತುರಾಚಾರ್ಯರ ಒಂದು ಪರಂಪರೆಯನ್ನು ಸ್ಥಾಪಿಸಿದರು. ವಿಶ್ವಾರಾಧ್ಯ ಹದಿನೇಳನೇ ಶತಮಾನದ ನಂತರದ ಸೇರ್ಪಡೆ. ಆನಂತರ ಪಂಚಪೀಠ ಪರಂಪರೆಯಲ್ಲಿ ಐದು ಮಠಗಳು ಸ್ಥಾಪಿಸಲ್ಪಟ್ಟವು. ಇವು ಲಿಂಗಾಯಿತರ ಮಠವಲ್ಲ. ಇವೆಲ್ಲ ಆರಾಧ್ಯ ಪೀಠಗಳು[೧೫] ಎಂಬುದಾಗಿ ಎಂ.ಎಂ.ಕಲಬುರ್ಗಿಯವರು ತಮ್ಮ ವಾದವನ್ನು ಸಮರ್ಥಿಸಿದ್ದಾರೆ.

ಬಸವಯುಗದ ಹಿರಿಯ ಸಮಕಾಲೀನ ಮತ್ತು ಪಂಚಾಚಾರ್ಯರಲ್ಲಿ ಒಬ್ಬರಾದ ರೇವಣಸಿದ್ಧರನ್ನು ಒಬ್ಬಚಾರಿತ್ರಿಕ ವ್ಯಕ್ತಿಯೆಂದು ಇದುವರೆಗಿನ ವಿದ್ವಾಂಸರು ಸಂಶೋಧಿಸಿ ನಿರೂಪಿಸಿದ್ದಾರೆ. ಇವರು ೧೨ನೇ ಶತಮಾನದಲ್ಲಿಯೇ ಜೀವಿಸಿದ್ದರು ಎಂಬುದಾಗಿ ಖ್ಯಾತ ವಿದ್ವಾಂಸರಾದ ಕರ್ಲಮಂಗಲಂ ಶ್ರೀಕಂಠಯ್ಯ, ಡಾ.ಎಂ.ಚಿದಾನಂದಮೂರ್ತಿ, ಶ್ರೀ ಎ.ಬಿ.ಹಾಲಭಾವಿ, ಡಾ.ಎಂ.ಎಂ.ಕಲಬುರ್ಗಿ[೧೬] ಮೊದಲಾದ ವಿದ್ವಾಂಸರು ನಿರ್ಣಯಿಸಿತ್ತಾರೆ. ವೀರಶೈವ ಪಂಚಪೀಠಾಧಿಪತಿಗಳಲ್ಲಿ ಒಬ್ಬರಾದ ಏಕಾಂತರಾಮಯ್ಯ, ಬಿಜ್ಜಳ (ಬಸವ)ನ ಸಮಕಾಲೀನನಾಗಿದ್ದ ಎಂಬುದಾಗಿ ಅಬ್ಬಲೂರು[೧೭] ಶಾಸನವು ಉಲ್ಲೇಖಿಸುತ್ತದೆ. ಆದ್ದರಿಂದ ಇವರೊಬ್ಬ ಚಾರಿತ್ರಿಕ ವ್ಯಕ್ತಿ ಎಂಬುದು ವ್ಯಕ್ತವಾಗುತ್ತದೆ. ಅವ್ವೆಯರ ಹಳ್ಳಿ ಶಾಸನದಲ್ಲಿ ಮರುಳಸಿದ್ಧೇಶ್ವರ ಉಲ್ಲೇಖವಿದೆ. ರೇವಣಸಿದ್ಧೇಶ್ವರನ ಮಗ ಮರುಳಸಿದ್ಧೇಶ್ವರ. ಈ ಶಾಸನದ ಕಾಲ ಕ್ರಿ.ಶ.೧೧೯೩. ರೇವಣಸಿದ್ಧರು ಈ ಕಾಲಕ್ಕೆ ಬದುಕಿದ್ದರು[೧೮]. ಇಲ್ಲಿ ಮಗ ಎಂಬುದು ಶಿಷ್ಯ ಎಂಬರ್ಥವಿರಬಹುದು. ರೇವಣಸಿದ್ಧರ ಶಿಷ್ಯ ಮರುಳಸಿದ್ಧ ಎಂಬುದು ಗಮನಾರ್ಹ. ಆದರೆ ಲಕ್ಷ್ಮೇಶ್ವರ ಶಾಸನದಲ್ಲಿ 'ದಾರುಕನಿಮಿತ್ತದ ಸೋಂಕಿನೊಳಂದು ರೇಣುಕಂ ಗೀಮಹಿಯಲ್ಲಿ ಲಿಂಗದುದರೋದ್ಭವ ನೇಮುವನಿತ್ತನಕ್ಕ. ಟುಂ॥[೧೯]. ಇದು ಪಂಚಾಪೀಠಧೀಪತಿಗಳ ವಿಚಾರವಾದರು. ಇದು ರೇವಣಸಿದ್ಧರು, ಮರುಳಸಿದ್ಧರು ಸಮಕಾಲೀನರು ಎಂಬುದನ್ನು ಉಲ್ಲೇಖಿಸುತ್ತದೆ.

ಬಸವಣ್ಣನವರ ಸಮಾಕಾಲೀನರೂ ರೇವಣಸಿದ್ಧರ ಶಿಷ್ಯರೂ ಆದ ಮರುಳಸಿದ್ಧರ ಹುಟ್ಟು ಹೋರಾಟ, ಇತ್ಯಾದಿ ವಿವರಗಳನ್ನು ಹಿಂದೆಯೇ ಗಮನಿಸಿದ್ದೇವೆ. ರೇವಣಸಿದ್ಧರಿಂದ ಉಪದೇಶ ಪಡೆದು ತೆಲಗುಬಾಲು ಸಿದ್ಧೇಶ್ವರರಿಗೆ ಪೀಠದ ಪಟ್ಟಾಧಿಕಾರ ನೀಡಿ ಉಜ್ಜಯಿನಿಯಲ್ಲಿ ಐಕ್ಯವಾದರು.

ಉಜ್ಜಯಿನಿ ಸದ್ಧರ್ಮ ಪೀಠದ ಮೂಲಪುರುಷ ಶ್ರೀ ಮರುಳಸಿದ್ಧ, ಈ ಪೀಠದ ಉಗಮದ ಕಾಲವನ್ನು ೧೨ನೇ ಶತಮಾನಕ್ಕಿಂತ ಮುಂಚಿತವಾಗಿಯೇ ಆಗಲಿ ಅಥವಾ ೧೨ನೇ

ಶತಮಾನದಲ್ಲಿಯೇ ಸ್ಥಾಪಿಸಿರಬಹುದೆಂದು ಕೊಟ್ರಯ್ಯ ಜಾನಕೋಟಿಮಠ ಅವರು ಅಭಿಪ್ರಾಯಪಟ್ಟಿರುತ್ತಾರೆ. ಇದಕ್ಕೆ ಆಧಾರವಾಗಿ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ ಗರ್ಭಗುಡಿಯ ಮುಂಭಾಗದ ಕಂಬದ ಮೇಲಿರುವ ಕ್ರಿ.ಶ.೧೨೬೮ನೇ ಶಾಸನ ಶ್ರೀ ಯಾದವರಾಜ ಮಹಾದೇವರಾಯನ ೯ನೇ ವರ್ಷದ ಆಡಳಿತ ಶಾಸನವು. ಕೆಲವು ಭಕ್ತರು ಶ್ರೀ ಸ್ವಾಮಿಯ ಸೇವೆಗಾಗಿ ಭೂಮಿಯನ್ನು ದಾನವಾಗಿ ಕೊಡುತ್ತಾರೆ[೨೦]. ಇದೇ ರೀತಿ ಮತ್ತೊಂದು ಶಾಸನ ಯಾದವ ಮಹಾದೇವನ ೧೦ನೆಯ ವರ್ಷ ಅಂದರೆ ಕ್ರಿ.ಶ.೧೨೬೭. ಇದು ಉಜ್ಜಯಿನಿ ಶ್ರೀ ಸದ್ಧರ್ಮ ಪೀಠದ ಮುಂದಿನ, ತುಂಡು ಶಾಸನ ಮತ್ತು ವಿಜಯನಗರ ಅರಸ ಅಚ್ಯುತರಾಯನ ಕ್ರಿ.ಶ.೧೫೩೯ರ ಶಾಸನವು ೧೫ನೇ ಶತಮಾನಕ್ಕೆ ಸೇರಿದ್ದು[೨೧]ಎಂಬುದಾಗಿ ಉಜ್ಜಯಿನಿ ಮಠದ ಆವರಣದಲ್ಲಿ ದೊರೆತ ಶಾಸನಗಳು ಮರುಳಸಿದ್ಧರ ಕಾಲಕ್ಕೆ ಸಂಬಂಧಪಟ್ಟವಲ್ಲ ಎಂಬುದು ಗೊತ್ತಾಗುತ್ತದೆ. ಈ ಶಾಸನಗಳಾವುವು ಮರುಳಸಿದ್ಧರ ಸಮಕಾಲೀನ ಜೀವನ ಚಿತ್ರಣವನ್ನು ಉಲ್ಲೇಖಿಸುವುದಿಲ್ಲ. ಉಲ್ಲೇಖಿತವಾಗಿರುವ ಶಾಸನಗಳೆಲ್ಲವು ಮರುಳಸಿದ್ಧ ದೇವಾಲಯಕ್ಕೆ ದಾನಕೊಟ್ಟಿರುವ ಶಾಸನಗಳೆಂಬುದು ಗಮನಾರ್ಹ, ಇಲ್ಲಿ ಉಲ್ಲೇಖಿಸಿರುವ ಶಾಸನಗಳ ಕಾಲ ೧೦, ೧೨ ಮತ್ತು ೧೫ನೇ ಶತಮಾನದ ಲಿಪಿಲಕ್ಷಣವಿರುವುದರಿಂದ ಮರುಳಸಿದ್ಧರ ಕಾಲ ೧೧, ೧೨ ಶತಮಾನವಿರಬಹುದೆಂಬುದು ಸ್ಪಷ್ಟ.

ಮರುಳಸಿದ್ಧ ಚಾರಿತ್ರಿಕ ವ್ಯಕ್ತಿ ಎಂಬುದಾಗಿ ನಿರೂಪಿಸಲು ಸಾಹಿತ್ಯದಲ್ಲಿ ಉಲ್ಲೇಖವಾದ ಕೆಲವು ಚಾರಿತ್ರಿಕ ಸಂಗತಿಗಳನ್ನು ಪರಿಶೀಲಿಸಿ ನೋಡಬಹುದಾಗಿದೆ. ಈ ಬಗ್ಗೆ ಹುಲ್ಲೂರು ಶ್ರೀನಿವಾಸ ಜೋಯಿಸರು ಮರುಳಸಿದ್ಧ ಒಬ್ಬ ಚಾರಿತ್ರಿಕ ವ್ಯಕ್ತಿ ಎಂಬುದಾಗಿ ಸಮರ್ಥಿಸುತ್ತಾ ಕೆಲವು ಕಾರಣ ಕೊಡುತ್ತಾರೆ. ದೇವಕವಿ ಕೃತ ಮರುಳಸಿದ್ಧ ಕಾವ್ಯದಲ್ಲಿ ವ್ಯಕ್ತವಾಗುವ ಚಾರಿತ್ರಿಕ ವ್ಯಕ್ತಿಗಳಾದ ನೊಣಬೇಶ, ಬಲ್ಲಾಳನೃಪ ಮತ್ತು ಗಣಪತಿ ಇವರ ಕಾಲವು ಕನ್ನಡ ನಾಡಿನ ಚರಿತ್ರೆಯಲ್ಲಿ ತಿಳಿದಿರುತ್ತದೆ. ರೇವಣಸಿದ್ಧರ ಕಾಲವೂ ಅನೇಕ ಸಂಶೋಧಕರ ಪ್ರಯತ್ನದಿಂದ ಗೊತ್ತುಹಚ್ಚಲ್ಪಟ್ಟಿದೆ. ಇವರು ಒಬ್ಬ ಚಾರಿತ್ರಿಕ ವ್ಯಕ್ತಿ ಎಂಬುದಾಗಿ ಅನೇಕ ವಿದ್ವಾಂಸರು ನಿರ್ಣಯಿಸಿರುತ್ತಾರೆ. ಮರುಳಸಿದ್ಧರು ಸಹ ಒಬ್ಬಚಾರಿತ್ರಿಕ ವ್ಯಕ್ತಿ ಎಂದು ನಿರೂಪಿಸಬೇಕಾದರೆ ಮರುಳಸಿದ್ಧರ ಬಗ್ಗೆ ದೊರೆತ ಕೆಲವು ಸಾಹಿತ್ಯಕ ಆಧಾರಗಳ ಮೊರೆ ಹೋಗಬೇಕಾಗುತ್ತದೆ. ಅ.ನ.ಕೃಷ್ಣರಾಯರು ದೇವಕವಿ ಕೃತ ಮರುಳಸಿದ್ಧ ಕಾವ್ಯದಲ್ಲಿ ಉಲ್ಲೇಖಿತವಾಗಿರುವ ನೊಣಬೇಶ, ಬಲ್ಲಾಳನೃಪ ಮತ್ತು ಗಣಪತಿ ಎಂಬುವರು ಚಾರಿತ್ರಿಕವಾಗಿ ಗುರುತಿಸಲ್ಪಟ್ಟಿದ್ದಾರೆ. ಆದ್ದರಿಂದ ಇವರ ಸಮಕಾಲೀನರಾದ ಮರುಳಸಿದ್ಧರು, ಎಂದು ಹೇಳಲು ಮರುಳಸಿದ್ಧ ಕಾವ್ಯದಲ್ಲಿ ಉಲ್ಲೇಖವಾದ ಕಾವ್ಯಗಳನ್ನಾಧರಿಸಿ ಶ್ರೀನಿವಾಸಜೋಯಿಸರು ಕೆಲವು

ಚಾರಿತ್ರಿಕ ಸತ್ಯಸಂಗತಿಗಳನ್ನು ಚರ್ಚಿಸಿದ್ದಾರೆ. ಇವರು ಹೇಳುವ ಪ್ರಕಾರ ಕಾಕತೀಯ ವಂಶದ ಗಣಪತಿಯು ಕ್ರಿ.ಶ.೧೧೯೯ ರಿಂದ ೧೨೬೦ರ ವರೆಗೆ ರಾಜ್ಯಭಾರ ಮಾಡಿದನು. ಹಳೆಯಬೀಡಿನ ಹೊಯ್ಸಳ ಅರಸರಲ್ಲಿ ಬಲ್ಲಾಳರೆಂಬುವರು ನಾಲ್ವರು ರಾಜರಿದ್ದರು. ಗಣಪತಿಯ ಕಾಲದಲ್ಲಿದ್ದ ರಾಜ ಇಮ್ಮಡಿ ಬಲ್ಲಾಳನು ಕ್ರಿ.ಶ.೧೧೭೩ ರಿಂದ ೧೨೨೦ ರವರೆಗೆ ರಾಜ್ಯಭಾರ ಮಾಡಿದನು. ನೊಣಬೇಶನು ಯಾರು ಎಂಬುದನ್ನು ನಿರ್ಧರಿಸಲು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಈ ಕಾವ್ಯದಲ್ಲಿ ವ್ಯಕ್ತವಾಗಿರುವ ಮರುಳಸಿದ್ಧರು ಸಂಚರಿಸಿದ ಸ್ಥಳಗಳೆಲ್ಲಾ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ಭಾಗದ ರಾಜ್ಯಕ್ಕೆ ಕ್ರಿ.ಶ.೧೦ ರಿಂದ ೧೨ನೆಯ ಶತಮಾನದಲ್ಲಿ ನೊಳಂಬವಾಡಿ ಎಂದು ಹೆಸರಿತ್ತು. ಮೊದಲು ವಿಸ್ತಾರವಾದ ನೊಳಂಬವಾಡಿ ೨೯೦೦೦ ರಾಜ್ಯಕ್ಕೆ ನಿಡುಗಲ್ಲಿನಿಂದ ಆಳುತ್ತಿದ್ದ ನೊಳಂಬ ಪಲ್ಲವರು ರಾಜರಾಗಿದ್ದರು. ಉಚ್ಚಂಗಿಯ ಪಾಂಡ್ಯರು ೧೦ನೆಯ ಶತಮಾನದ ಕೊನೆಯಲ್ಲಿ ನೊಳಂಬವಾಡಿ ೨೯೦೦೦ ಪ್ರಾಂತ್ಯವನ್ನು ವಶಮಾಡಿಕೊಂಡಾಗ ನಿಡುಗಲ್ಲು ನೊಳಂಬರು ಈ ಪಾಂಡ್ಯರಲ್ಲಿ ಐಕ್ಯವಾಗಿ ಹೋದರು. ಅನಂತರ ಪಾಂಡ್ಯರೇ ೧೨ನೇ ಶತಮಾನದ ಅಂತ್ಯದ ವರೆವಿಗೂ ಧರಣೀಯುವತಿಗೆ ಕಟನೂಪುರವೆನಿಪ ನೊಳಂಬವಾಡಿ ೨೯೦೦೦ ರಾಜ್ಯಕ್ಕೆ ಮಹಾಮಂಡಲೇಶ್ವರರಾಗಿದ್ದರು. ವಿಜಯ ಪಾಂಡ್ಯದೇವ ಅಥವಾ ಕಾಮದೇವನೆಂಬ ಮಹಾ ಪರಾಕ್ರಮಿಯಾದ ಮಹಾಮಂಡಲೇಶ್ವರನು ಕ್ರಿ.ಶ.೧೧೪೮ರಿಂದ ೧೧೮೭ರ ವರೆಗೂ ರಾಜನಾಗಿದ್ದನು. ಅನಂತರ ಕ್ರಿ.ಶ.೧೨೦೦ರ ವರೆಗೂ ಇವನು ಜೀವಿಸಿದ್ದಂತೆ ಆಧಾರಗಳಿವೆ[೨೨].

ಮರುಳಸಿದ್ಧರು ಜನಿಸಿದಂದಿನಿಂದಲೂ ಬೇತೂರು ಯಾಗವನ್ನು ಕೆಡಿಸುವವರೆಗೂ ಸಂಚರಿಸಿದ ಊರುಗಳನ್ನೊಳಗೊಂಡ ನೊಳಂಬವಾಡಿ ರಾಜ್ಯಕ್ಕೆ ಅರಸನಾದ ವಿಜಯ ಪಾಂಡ್ಯನನ್ನೇ ಕವಿದೇವನು ನೊಣಬೇಶ ಎಂದು ಸಂಬೋಧಿಸಿದಂತೆ ವ್ಯಕ್ತವಾಗುವುದು. ಉಜ್ಜಯಿನಿ ಸಿದ್ದೇಶ್ವರ ದೇವಾಲಯದ ಹೊರ ಆವರಣದಲ್ಲಿ ಬಿದ್ದಿರುವ ಜಗದ್ದಳ ಪಾಂಡ್ಯನ ಶಕ ೧೧೧೫ನೇ ಸಂವತ್ಸರದ (೧೧೯೨ ಕ್ರಿ.ಶ.) ಶಿಲಾಶಾಸನವು ಇದನ್ನು ಪುಷ್ಟೀಕರಿಸುತ್ತದೆ. ಕ್ರಿ.ಶ.೧೧೮೭ನೆಯ ಸಂವತ್ಸರದ ಸಿರಿವಾಳ ಶಾಸನದಲ್ಲಿ ಉಕ್ತವಾಗಿರುವ ದಾನವನ್ನು ಸ್ವೀಕರಿಸಿದ ರೇವಣಸಿದ್ಧರು ಮರಳಸಿದ್ಧರ ಗುರುವಾಗಿರುವರು. ಮರುಳಸಿದ್ಧರು ರೇವಣಸಿದ್ಧರಿಗಿಂತಲೂ ವಯಸ್ಸಿನಲ್ಲಿ ಚಿಕ್ಕವನಾಗಿಯೇ ಇರಬೇಕು ಎಂಬುದಾಗಿ ಶ್ರೀನಿವಾಸಜೋಯಿಸರು ಅಭಿಪ್ರಾಯವ್ಯಕ್ತಪಡಿಸಿದ್ದಾರೆ. ಮರುಳಸಿದ್ಧರು ಕ್ರಿ.ಶ.೧೧೪೦ರಲ್ಲಿ ಜನಿಸಿರಬಹುದು. ರೇವಣಸಿದ್ಧರ ಕಾಲ ಸುಮಾರು ೧೧೦೦ ರಿಂದ ಕ್ರಿ.ಶ.೧೨೦೦ ರವರೆಗೆ ಜೀವಿಸಿರಬಹುದೆಂದು ಅಭಿಪ್ರಾಯಪಡಲಾಗಿದೆ. ಈ ಮೇಲಿನ ಚಾರಿತ್ರಿಕ ಸಂಗತಿಗಳಲ್ಲಿ ನಿರೂಪಿತವಾದಂತೆ ಮರುಳಸಿದ್ಧರು ಸಹ ಒಬ್ಬಚಾರಿತ್ರಿಕ ವ್ಯಕ್ತಿ ಎಂದು ನಿರ್ಣಯಿಸಲು ಸಾದ್ಯವಿದೆ.

ಎಂಬುದಾಗಿ ಶ್ರೀನಿವಾಸ ಜೋಯಿಸರವರು ಅಭಿಪ್ರಾಯಪಡುತ್ತಾರೆ[೨೩]. ಇದೇ ಅಭಿಪ್ರಾಯವನ್ನು ಎಂ.ಗೋವಿಂದ ಪೈ, ಅ.ನ.ಕೃಷ್ಣರಾಯರು, ತರಳಬಾಳು ಜಗದ್ಗುರು ಶ್ರೀಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ಹಾಗೂ ಹೆಚ್.ದೇವೀರಪ್ಪ ಅವರ ನಿಲುವು ಸಹ ಇದೇ ಆಗಿದೆ. ಶ್ರೀ ಸಿದ್ಧರಾಮೇಶ್ವರ ತಮ್ಮ ವಚನವೊಂದರಲ್ಲಿ "ಮರುಳಸಿದ್ಧೇಶ್ವರ ವಚನ ಅಱುವತ್ತೆಂಟು ಸಾವಿರ" ಎಂದಿರುವರಲ್ಲದೆ "ಮರುಳಸಿದ್ಧಯ್ಯ ತನ್ನ ಮನವಕೊಟ್ಟು ಗಣ ಪ್ರಸಾದವ ಪಡೆದ" ಎಂದು ಆತನನ್ನು ಪ್ರಶಂಸಿಸಿದ್ದಾರೆ[೨೪].

ಕ್ರಿ.ಶ. ಸು ೧೧೫೦ ರಷ್ಟಕ್ಕೆ ಹುಟ್ಟಿ ಕ್ರಿ.ಶ. ಸು ೧೨೩೦–೧೨೩೫ ರಲ್ಲಿ ಶಿವೈಕ್ಯನಾದ ಹರಿಹರನು ಆದಯ್ಯನ ಮೇಲೆ ಒಂದು ರಗಳೆಯನ್ನು ಬರೆದಿರುತ್ತಾನೆ. ಆತ ಏವ ಬಸವೇಶ್ವರನನ್ನು ಹೆಸರಿಸಿರುವ ಹಾಗೂ ಅವನ ಕಿರಿಯ ಸಮಕಾಲೀನನಾದ ಆದಯ್ಯನ ಈ ಎರಡು ವಚನಗಳಲ್ಲಿ ಮರುಳಸಿದ್ಧಯ್ಯ ದೇವರ ಅದೃಷ್ಟ ಪ್ರಸಾದ ನಿಷ್ಠೆ ಹಾಗೂ ಮರುಳಸಿದ್ಧ ದೇವರ ಶ್ಲೋತ್ರ ಎಂಬಲ್ಲಿ ಮರುಳಸಿದ್ಧನ ಹೆಸರಿದೆ[೨೫].

ಈ ಮೇಲಿನ ನಿದರ್ಶನಗಳನ್ನು ಗಮನಿಸಿದಾಗ ಮರುಳಸಿದ್ಧರನ್ನು ಉಲ್ಲೇಖಿಸಿರುವ ಬಗ್ಗೆ ಸಿದ್ಧರಾಮ, ಆದಯ್ಯ ಇವರು ಚಾರಿತ್ರಿಕ ವ್ಯಕ್ತಿಗಳು ಮತ್ತು ವಚನಕಾರರು ಇವರು ಸು.೧೨ನೇ ಶತಮಾನದಲ್ಲಿ ಜೀವಿಸಿರುವ ಬಗ್ಗೆ ಉಲ್ಲೇಖವಿದೆ. ಇವರು ಚಾರಿತ್ರಿಕ ವ್ಯಕ್ತಿಗಳು ಎಂಬುದು ಉಲ್ಲೇಖವಾಗಿರುವುದರಿಂದ ಇವರೇ ಮರುಳಸಿದ್ಧರನ್ನು ಉಲ್ಲೇಖಿಸಿರುವುದರಿಂದ ಮರುಳಸಿದ್ಧ ಇವರ ಸಮಕಾಲೀನನಿರಬೇಕು. ಈ ಮೇಲಿನ ಚಾರಿತ್ರಿಕ ಸಂಗತಿಗಳ ಕೆಲವು ನಿದರ್ಶನಗಳನ್ನು ಗಮನಿಸಿದರೆ ಮರುಳಸಿದ್ಧ ಒಬ್ಬ ಚಾರಿತ್ರಿಕ ವ್ಯಕ್ತಿ ಎಂದು ನಿರ್ಣಯಿಸಬಹುದು.

೫.೫.೩ ಆರಾಧ್ಯ ದೈವವಾಗಿ ಮರುಳಸಿದ್ಧರು :

ಭಾರತ ದೇಶದಲ್ಲಿ ಹಿಂದೂ, ಜೈನ, ಬೌದ್ಧ, ಸಿಖ್, ಕ್ರಿಶ್ಚಿಯನ್, ಮಹಮದೀಯ ಮುಂತಾದ ಮತ ಧರ್ಮಗಳಿದ್ದು ಅವುಗಳಲ್ಲಿ ಪ್ರತಿಯೊಂದಕ್ಕೆ ತನ್ನದೇ ಆದ ಗುರುದೇವರು, ಆಚಾರ, ವಿಚಾರ, ತತ್ವ, ಗ್ರಂಥ ಇತ್ಯಾದಿಗಳಿವೆ. ಈ ಎಲ್ಲ ಧರ್ಮಗಳ ಸಾಂಸ್ಕೃತಿಕ ಪಂಪರೆಯಲ್ಲಿ ಸಂಸ್ಕಾರಗಳ ದೇವ ದೇವತೆಗಳ ಅಥವಾ ಆಚಾರ್ಯ ಮುನಿ–ಭಕ್ತರ ಹೆಸರಿನಲ್ಲಿ ಹಬ್ಬ, ಉತ್ಸವ, ಜಾತ್ರೆಗಳು ಸಾಮೂಹಿಕವಾಗಿ ತುಂಬಾ ಶ್ರದ್ಧೆ, ಭಕ್ತಿಗಳಿಂದ ಜರುಗುತ್ತವೆ. ಈ ಎಲ್ಲಾ ಮತ–ಧರ್ಮಗಳ ದೇವರು ಒಂದೇ, ಆಚಾರ ವಿಚಾರಗಳು ಮಾತ್ರ ಭಿನ್ನ ಒಂದೊಂದು ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಗುರು ಪುರೋಹಿತ ಮತ್ತು ಶಿಷ್ಯ ಭಕ್ತವರ್ಗಗಳು ಬೆಸೆದು ಕೊಂಡಿವೆ. ಈ ದೇಶದ

ಪ್ರತಿಯೊಂದು ಹಳ್ಳಿ ಗ್ರಾಮ, ಪಟ್ಟಣಗಳಲ್ಲಿ ವಾಸಿಸುವ ಜನರು ಈ ಆಚರಣೆಗಳಲ್ಲಿ ಭಿನ್ನತೆಯಿದ್ದರೂ ಏಕತೆಯನ್ನು ರೂಪಿಸಿಕೊಂಡಿರುವರು. ಮತ ಸಹಿಷ್ಣುತೆಯನ್ನು ರಕ್ಷಿಸಿಕೊಂಡು ಅವರ ಶಾಂತಿ ಸಮಾಧಾನದಿಂದ ಬಾಳುವುದನ್ನು ಕಲಿತಿದ್ದಾರೆ. ಹೀಗಾಗಿ ಭಾರತದ ಪ್ರತಿಯೊಂದು ಮತ-ಧರ್ಮದವರು ತಾವು ವಾಸಿಸುವ ತಾಣಗಳಲ್ಲಿ ತಮ್ಮದೇ ಆದ ದೇವ-ದೇವತೆಗಳ ಕುಲದೈವವಾಗಿ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಿಧ ಜಾತಿ ಧರ್ಮಗಳಲ್ಲಿ ಆರಾಧ್ಯ ದೈವವಾಗಿ ಆರಾಧಿಸಲ್ಪಡುವ ದೇವರುಗಳನ್ನು ಕಾಣಬಹುದಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ವೀರಶೈವ ಧರ್ಮವು ಜಾತಿ ಪದ್ಧತಿಯನ್ನು ಖಂಡಿಸುತ್ತಲೇ ಸತ್ವಯುತವಾದ ಮಾನವನ ಆಧ್ಯಾತ್ಮಿಕ ಸಾಧನೆಗಾಗಿ ಅನೇಕ ಆಚರಣೆಗಳನ್ನು ವಿಧಿವತ್ತಾಗಿ ನಿರೂಪಿಸುವುದು. ಈ ಧರ್ಮದಲ್ಲಿಯೂ ಮಹಾತ್ಮ ವ್ಯಕ್ತಿಗಳು ಆರಾಧ್ಯ ದೈವವಾಗಿ ಆರಾಧಿಸಲ್ಪಡುವುದು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಕಾಣಬಹುದಾಗಿದೆ. ಮಲೈಮಾದೇಶ್ವರ, ಕೊಡೇಕಲ್ ಬಸವೇಶ್ವರ, ಮೈಲಾರ ಲಿಂಗೇಶ್ವರ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ, ಎಡೆಯೂರು ಸಿದ್ಧಲಿಂಗೇಶ್ವರ ಮೊದಲಾದ ಶಿವಶರಣರು ದೈವಿಪುರುಷರಾಗಿ ಕುಲದೈವವಾಗಿ ಆರಾಧಿಸಲ್ಪಡುವಂತಹವುದನ್ನು ಕಾಣಬಹುದಾಗಿದೆ.

ಕರ್ನಾಟಕ ಕಲೆ ಸಂಸ್ಕೃತಿಗಳ ಬೀಡು ಉಜ್ಜಯಿನಿ (ಕೂಡ್ಲಿಗಿ ತಾಲೂಕು ಬಳ್ಳಾರಿ ಜಿಲ್ಲೆ) ಇಲ್ಲಿ ವಿವಿಧಜನಾಂಗಗಳು ವಾಸಿಸುವವರು ಮರುಳಸಿದ್ಧೇಶ್ವರನೇ ಆದಿ ದೈವ ಹಾಗೂ ಈ ಪರಿಸರದ ಜನತೆಯ ಉಸಿರು. ಮಧ್ಯ ಕರ್ನಾಟಕದ ಭಾಗವಾದ ದಾವಣಗೆರೆ ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು, ಬಳ್ಳಾರಿ ಈ ಭಾಗದ ಲಿಂಗಾಯಿತ ಸಮುದಾಯದ ಸಾದಲಿಂಗಾಯಿತರು, ತಮ್ಮ ಕುಲದೈವವಾಗಿ ಆರಾಧಿಸುತ್ತಾರೆ. ಅಲ್ಲದೆ ಮಾದಿಗ ಜನಾಂಗವು ನಮ್ಮ ಮೂಲ ಪುರುಷ ಮರುಳಸಿದ್ಧ ಎಂದು ಹೇಳುತ್ತಾರೆ. ಹಾಗೂ ತಮ್ಮ ಜನಾಂಗದಲ್ಲಿ ವ್ಯಕ್ತಿಗಳಿಗೆ ಮರುಳಸಿದ್ಧ ಹೆಸರಿನಿಟ್ಟು ಕರೆಯುವ ವಾಡಿಕೆ ಇದೆ.

ಬಳ್ಳಾರಿ ಜಿಲ್ಲೆಯಲ್ಲಿ ತಾಲ್ಲೂಕುಗಳಲ್ಲಿ ತೀರಾ ಹಿಂದುಳಿದ ತಾಲ್ಲೂಕಾಗಿರುವ ಕೂಡ್ಲಿಗಿಯಲ್ಲಿ ಧಾರ್ಮಿಕವಾಗಿ ಶ್ರೀಮಂತ ಪರಂಪರೆಯನ್ನು ಹೊಂದಿರುವ ಉಜ್ಜಯಿನಿ ಮರುಳಸಿದ್ಧರು ನೆಲೆಸಿದ ಕ್ಷೇತ್ರವಾಗಿದೆ. ಮರುಳಸಿದ್ಧರು ಇಲ್ಲಿ ನೆಲೆಸಿದ ಬಗ್ಗೆ ಹಲವು ಐತಿಹ್ಯಗಳಿವೆ. ಉಜ್ಜಯಿನಿಯು ವೀರಶೈವ ಪಂಚಪೀಠಗಳಲ್ಲಿ ಪ್ರಮುಖವಾದುದಾಗಿದೆ. ಮಧ್ಯ ಪ್ರದೇಶದ ಕಳಿಂಗ ನಗರದ ಉಜ್ಜಯಿನಿಯು ಅಂದಿನ ಮುಸ್ಲಿಂರ ದಾಳಿ (ಕೆಲವು ಗ್ರಂಥಗಳು ಜೈನಧರ್ಮದ ಕಿರುಕುಳ ಎಂದು

ಉಲ್ಲೇಖಿಸಿವೆ)ಯಿಂದ ತತ್ತರಿಸಿ ಹೋಯಿತು. ವೀರಶೈವ ಧರ್ಮದ ಉಳಿವಿಗಾಗಿ ದಕ್ಷಿಣ ಭಾರತದ ಕಡೆ ಅಲ್ಲಿನ ಗುರುಗಳು ತಮ್ಮ ಶಿಷ್ಯರೊಂದಿಗೆ ಬಂದರು. ಅವರಿಗೆ ಸರ್ವರೀತಿಯಿಂದಲೂ ಧರ್ಮ ಪ್ರಸಾರಕ್ಕಾಗಿ ಯೋಗ್ಯ ಸ್ಥಳವಾಗಿ ಕಂಡ ಉಜ್ಜಯಿನಿಯನ್ನು ಆಯ್ಕೆ ಮಾಡಿಕೊಂಡರು[೨]. ಅವರು ಮುಂದೆ ಇಲ್ಲಿಯೇ ಸಮಧಿಸ್ಥರಾದರು. ಈ ಸಮಧಿಸ್ಥ ಸ್ಥಳವೇ ಇಂದು ಶ್ರೀಮರುಳಸಿದ್ಧೇಶ್ವರ ದೇವಾಲಯವಾಗಿದೆ. ಹಾಗೂ ಶ್ರೀ ಮರುಳಸಿದ್ಧರಿಂದ ಸ್ಥಾಪಿತವಾದ ಸದ್ಧರ್ಮ ಪೀಠವಿದೆ.

ಮತ್ತೊಂದು ಐತಿಹ್ಯ ಮರುಳಸಿದ್ಧರು ಉಜ್ಜಯಿನಿಯಲ್ಲಿ ನೆಲೆಸಿರುವ ಬಗ್ಗೆ ದೇವಕವಿಯ 'ಸಿದ್ಧಲಿಂಗ ಚರಿತ್ರೆ'. ಮರುಳಸಿದ್ಧರು ದಲಿತರ ಮನೆಯಲ್ಲಿ ಜನ್ಮ ಪಡೆದವರು. ಇವರ ಕಾಲ ಕ್ರಿ.ಶ. ಸು.೧೨ನೇ ಶತಮಾನವಿರಬಹುದು.

ಉಜ್ಜಯಿನಿ ಶ್ರೀ ಸದ್ಧರ್ಮ ಪೀಠದ ಪ್ರಧಾನ ದೇವತೆಯಾದ ಜಗದ್ಗುರು ಶ್ರೀ ಮರುಳಸಿದ್ಧ ಸ್ವಾಮಿ ಅಥವಾ ಮರುಳಸಿದ್ಧೇಶ್ವರ ದೇವರ ಹಬ್ಬ ಉತ್ಸವಗಳನ್ನು ವೈಶಿಷ್ಟ್ಯ ಪೂರ್ಣವಾಗಿ ಆಚರಿಸಲಾಗುತ್ತಿದೆ. ಅವುಗಳಲ್ಲಿ ಶ್ರೀ ಸ್ವಾಮಿಯ ರಥೋತ್ಸವ, ಶಿಖರ ತೈಲಾಭಿಷೇಕ, ಶ್ರಾವಣ ಮಾಸದ ವಿಶೇಷ ಆರಾಧನೆ, ಕಾರ್ತಿಕೋತ್ಸವದಲ್ಲಿ ದೀಪತ್ಸೋವ ಮತ್ತು ಭಾರತ ಹುಣ್ಣಿಮೆ, ಪ್ರಮುಖವೆನಿಸಿವೆ. ಸಕಲ ಮತದವರು ಮೇಲುಕೀಳೆನ್ನದೆ ಶ್ರದ್ಧಾ-ಭಕ್ತಿಯಿಂದ ಶ್ರೀ ಪೀಠದ ಹಬ್ಬ ಉತ್ಸವಗಳನ್ನು ಆಚರಿಸುವರು. ಕೆಲವು ಮಹತ್ವದ ಉತ್ಸವಗಳಲ್ಲಿ ಹರಿಜನ-ಗಿರಿಜನರು ಪಾಲ್ಗೊಳ್ಳಲು ವಿಶೇಷ ಅವಕಾಶ ನೀಡಿರುವುದು ಔಚಿತ್ಯಪೂರ್ಣವೆನಿಸಿದೆ.

ರಥೋತ್ಸವ ಪ್ರತಿವರ್ಷ ಚೈತ್ರ ಮಾಸದ ಯುಗಾದಿಯ ದಿನ ತೇರಗಾಲಿ ಹೊರಹಾಕುವರು, ದವನದ ಹುಣ್ಣಿಮೆಯ ದಿನ ರಥೋತ್ಸವ ನಡೆಸುವರು. ರಥೋತ್ಸವಕ್ಕೆ ಎರಡು ದಿನ ಮೊದಲು ಶ್ರೀ ಮರುಳಸಿದ್ಧಸ್ವಾಮಿ ಮತ್ತು ಗೌರಮ್ಮರಿಗೆ ಲಗ್ನದ ದ್ಯೋತಕವಾಗಿ ಕಂಕಣಧಾರಣೆ ಮಾಡುವರು. ಆನೆ ಉಚ್ಚಾಯ, ಬಸವನ ಉಚ್ಚಾಯ ಕಾರ್ಯ ನೆರವೇರಿಸುವರು. ಮೂರನೇ ದಿನ ರಥೋತ್ಸವ ಬಾಯಿಬೀಗದಂತಹ ಹರಕೆ ಒಪ್ಪಿಸುವುದು, ಓಕುಳಿ ಶಾಸ್ತ್ರ, ಗುಡಿ ತುಂಬಿಸುವುದು. ಹಬ್ಬ ರಥೋತ್ಸವ ಆಚರಣೆಯು ಇಂದಿನ ಮರುಳಸಿದ್ಧರ ಸ್ಮಾರಕಗಳಿರುವ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕ್‌ನ ಮುಚ್ಚನೂರು, ದಾವಣಗೆರೆ ತಾಲೂಕ್‌ನ ಕುರುಡಿ, ಬೇತೂರು, ಆನಗೋಡು ಈ ಗ್ರಾಮಗಳಲ್ಲಿ ಈ ರೀತಿಯ ಉತ್ಸವ ನೆರವೇರುತ್ತದೆ.

ಉಜ್ಜಯಿನಿ (ಕೂಡ್ಲಿಗಿ ತಾಲ್ಲೂಕು)ಯಲ್ಲಿ ಪ್ರತಿವರ್ಷ ಚೈತ್ರಹುಣ್ಣಿಮೆ ಆದ ಐದು ದಿವಸಕ್ಕೆ ತೇರುಗಾಲಿಯನ್ನು ಹೊರಗೆ ಹಾಕುವರು. ಶ್ರೀ ಮರುಳಸಿದ್ಧ ಸ್ವಾಮಿಯ ರಥೋತ್ಸವ ಪ್ರತಿವರ್ಷ

ವೈಶಾಖ ಶುದ್ಧ ಅಮವಾಸ್ಯೆಯಿಂದ ಆರಂಭವಾಗುತ್ತದೆ. ಅಂದು ಶ್ರೀ ಮರುಳಸಿದ್ಧ ಸ್ವಾಮಿ ಮತ್ತು ಗೌರಮ್ಮರಿಗೆ ಲಗ್ನದ ಧ್ಯೋತಕವಾಗಿ ಕಂಕಣಧಾರಣ ಮಾಡುವರು. ಪಂಚಮಿಯದಿನ ಸಾಯಂಕಾಲ ಸುಮಾರು ೪ ಗಂಟೆಯ ನಂತರ ಶ್ರೀ ಸ್ವಾಮಿಯ ರಥೋತ್ಸವವು ಬಹು ವಿಜೃಂಭಣೆಯಿಂದ ನಡೆಯುತ್ತದೆ.

ಮಾದಿಗರು ಮರುಳಸಿದ್ಧರ ವಿಚಾರದಲ್ಲಿ ಹೆಚ್ಚಿನ ಭಕ್ತಿಯುಳ್ಳವರಾಗಿರುವುದು ಮತ್ತು ಮರುಳಸಿದ್ಧನ ಸಂಬಂಧವಾದ ಉತ್ಸವಾದಿ ಕಾರ್ಯಗಳಲ್ಲಿ ಹೆಚ್ಚಿನ ಹಕ್ಕನ್ನುಳ್ಳವರಾಗಿರುವುದೂ ಗಮನಾರ್ಹವಾದ ಅಂಶಗಳಾಗಿವೆ. ರಥೋತ್ಸವದಲ್ಲಿ ರಥದ ಗಾಲಿಗಳಿಗೆ ಎಡೆ ಹಾಕುವವರೂ ಮಾದಿಗರೇ ಆಗಿರುತ್ತಾರೆ ಮತ್ತು ರಥದ ಗಾಲಿಗಳ ಮೇಲೆ ಭಕ್ತರು ಒಡೆಯುವ ತೆಂಗಿನಕಾಯಿಗಳಲ್ಲಿ ಒಂದು ಭಾಗಕ್ಕೆ ಮಾದಿಗರೇ ಹಕ್ಕುಳ್ಳವರಾಗಿರುತ್ತಾರೆ[೨೭]. ದಾವಣಗೆರೆ ತಾಲೂಕ್‌ನ ಕುರುಡಿ, ಆನಗೋಡು ಗ್ರಾಮದಲ್ಲಿ ಮರುಳಸಿದ್ಧೇಶ್ವರ ರಥೋತ್ಸವದ ಕಾರ್ಯದಲ್ಲಿ ಮಾದಿಗರದೇ ಪ್ರಮುಖ ಪಾತ್ರವಿದೆ. ಈ ಭಾಗದಲ್ಲಿ ರಥವನ್ನು ತಳ್ಳುವ ಕಾರ್ಯದಲ್ಲಿ ಮಾದಿಗರೇ ಮುಖ್ಯರಾಗಿರುತ್ತಾರೆ.

ಉಜ್ಜಯಿನಿಯ ಶ್ರೀ ಮರಳಸಿದ್ಧ ಸ್ವಾಮಿಯ ರಥೋತ್ಸವ ನೆರವೇರಿದ ಮರುದಿನ ಅಂದರೆ ಷಷ್ಠಿ ದಿವಸ ಶ್ರೀ ಮರುಳಸಿದ್ಧ ಸ್ವಾಮಿಯ ದೇವಸ್ಥಾನದ ಶಿಖರಕ್ಕೆ ಬಹು ವಿಜೃಂಭಣೆಯಿಂದ ತೈಲಾಭಿಷೇಕ ಜರುಗುವುದು. ರಥೋತ್ಸವದ ಐದನೇ ದಿವಸಕ್ಕೆ ಶ್ರೀ ಸ್ವಾಮಿಯ ಕಂಕಣವನ್ನು ಬಿಚ್ಚಿ ವಿಸರ್ಜನೆ ಮಾಡುವರು[೨೮].

ಪ್ರತಿ ವರ್ಷದ ಶ್ರಾವಣ ಮಾಸದಲ್ಲಿ ಶ್ರೀ ಪೀಠದಲ್ಲಿ ವೈವಿದ್ಯಮಯ ಕಾರ್ಯಕ್ರಮಗಳು ಜರುಗುತ್ತವೆ. ಉಜ್ಜಯಿನಿ ಗ್ರಾಮದಿಂದ ಪಶ್ಚಿಮಕ್ಕೆ ಸುಮಾರು ೧ ಕಿ.ಮೀ. ಅಂತರದಲ್ಲಿ ಎತ್ತರದ ಗುಡ್ಡವಿದೆ. ಅದಕ್ಕೆ ಕರುವಿನ ಕಲ್ಲಗುಡ್ಡ ಎಂದು ಹೆಸರು. ಚಿಕ್ಕವನಿದ್ದಾಗ ಮರುಳಸಿದ್ಧ ಕಗ್ಗಲ್ಲು ಗೌಡರ ದನಗಳನ್ನು ಕಾಯುತ್ತಿದ್ದ, ಕರುಗಳಿಗೆ ಉರುಲು ಹಾಕುವುದು ಮೊದಲಾದ ತುಂಟತನದ ಪವಾಡಗಳನ್ನು ನಡೆಸಿದ ಸಂಗತಿಯಿದೆ. ಇದರ ಜ್ಞಾಪಕಾರ್ತವಾಗಿ ಶ್ರಾವಣಮಾಸದ ಕಡೆ ಶ್ರಾವಣ ಸೋಮವಾರ ಆ ಗುಡ್ಡದ ದೇವರಿಗೆ ಎಡೆ ಕೊಡುವರು. ಅಲ್ಲಿರುವ ಎರಡು ಸಣ್ಣ ಕಲ್ಲುಗಳನ್ನು ಕರುಗಳ ಸಂಕೇತವಾಗಿ ತಮ್ಮ ಮನೆಯಲ್ಲಿಟ್ಟು ವರ್ಷದವರೆಗೂ ಪೂಜಿಸುವರು ಮರು ವರ್ಷ ಶ್ರಾವಣಮಾಸದಲ್ಲಿ ಆ ಜೋಡಿಕಲ್ಲುಗಳನ್ನು ಗುಡ್ಡಕ್ಕೆ ತಂದು ಮತ್ತೆ ಹೊಸ ಜೋಡಿ ಕಲ್ಲು ತೆಗೆದುಕೊಂಡು ಹೋಗುವ ಸಂಪ್ರದಾಯವಿದೆ. ಕಾರ್ತಿಕೋತ್ಸವದಲ್ಲಿ ದೀಪೋತ್ಸವದ ಕಾರ್ಯ ನೆರವೇರಿಸುತ್ತಾರೆ. ಮುಚ್ಚನೂರು, ಕುರುಡಿ, ಬೇತೂರು, ಆನಗೋಡು, ತೂಲಹಳ್ಳಿಯಲ್ಲಿ ಮರುಳಸಿದ್ಧರ

ಸ್ಮಾರಕವಿರುವ ಈ ಗ್ರಾಮಗಳಲ್ಲಿ ಇದೇ ರೀತಿ ಕಾರ್ತಿಕೋತ್ಸವ ಆಚರಣೆಗಳು ನಡೆಯುತ್ತವೆ. ಶಿವರಾತ್ರಿ, ದಸರಾ ಉತ್ಸವ, ಶ್ರೀ ಮರುಳಸಿದ್ಧ ಸ್ವಾಮಿಯ ಭಾರತ ಹುಣ್ಣಿಮೆಯ ಆಚರಣೆ ತುಂಬಾ ವಿಶಿಷ್ಟವಾದದ್ದು. ಮಾಘ ಮಾಸದ ಭಾರತ ಹುಣ್ಣಿಮೆ ಆಚರಣೆಯಲ್ಲಿ ಉಜ್ಜಯಿನಿ ಮತ್ತು ಅದರ ಸುತ್ತಲಿನ ಎಂಟು ದಿಕ್ಕುಗಳಲ್ಲಿರುವ ಒಂಬತ್ತು ಪಾದಗಟ್ಟೆಗೆ ಶ್ರೀಸ್ವಾಮಿಯನ್ನು ಪಲ್ಲಕ್ಕಿಯಲ್ಲಿ ಕರೆದೊಯ್ಯುವರು[೨೯]. ಇಲ್ಲಿ ಪೂಜೆ, ಆರತಿ ಎತ್ತುವ ಕಾರ್ಯಗಳು ನಡೆಯುತ್ತಿವೆ. ಮಾಘಮಾಸದ ಭಾರತ ಹುಣ್ಣಿಮೆ ಆಚರಣೆಯ ಸಂಕೇತವಾಗಿ ಶ್ರೀಮರುಳಸಿದ್ಧರು ತೆಲಗುಬಾಳು ಸಿದ್ಧಯ್ಯನಿಗೆ ಉಜ್ಜಯಿನಿಯ ಸದ್ಧರ್ಮ ಪೀಠಕ್ಕೆ ಕುಳ್ಳಿರಿಸಿ ತರಳಬಾಳು ಎಂದು ಅನುಗ್ರಹಿಸಿದ ಸಂಕೇತವಾಗಿ ತರಳಬಾಳು ಹುಣ್ಣಿಮೆ ಆಚರಣೆಯನ್ನು ಸಿರಿಗೆರೆಯ ಶ್ರೀ ತರಳಬಾಳು ಬೃಹನ್ಮಠ ಕಳೆದ ಶತಮಾನದ ಐವತ್ತರ ದಶಕದಿಂದ ಆಚರಿಸುತ್ತಾ ಬಂದಿದೆ. ಹೀಗೆ ಮರುಳಸಿದ್ಧ ದೈವ ಆರಾಧನೆಯಾಗಿ ಕುಲದೈವವಾಗಿ ಆರಾಧಿಸಲ್ಪಟ್ಟಿದೆ.

ವೀರಗಾಸೆಯ ಸಾಹಿತ್ಯದಲ್ಲಿ ಅತ್ಯಂತ ವಿಶಿಷ್ಟವಾದ ಸ್ಥಾನ ಮರುಳುಸಿದ್ಧರನ್ನು ಕುರಿತು ಹೇಳುವ ಖಡ್ಗಗಳಿವೆ. ವೀರಭದ್ರನ ಪುರಾಣ ವಸ್ತುವಿಗೆ ಇರುವ ಮಹತ್ವವೇ ಮರುಳಸಿದ್ಧರಿಗೂ ಲಭ್ಯವಾಗಿದೆ. ಹನ್ನೆರಡನೇ ಶತಮಾನದ ಚಾರಿತ್ರಿಕ ವ್ಯಕ್ತಿಯಾಗಿ ಬಾಳಿ ಹೋದ ಈ ಸಾದಕನೊಬ್ಬನ ಕಥೆ ವೀರಗಾಸೆಯಲ್ಲಿ ಸೇರಿದ ಬಗೆಗೆ ಅಚ್ಚರಿಯೆನಿಸಿದರೂ, ಜನಾಂಗಿಕ ಅಧ್ಯಯನದ ಹಿನ್ನಲೆಯಲ್ಲಿ ಅಧ್ಯಯನ ನೆಡೆಸಿದರೆ ವೀರಗಾಸೆಗೂ ಮರುಳಸಿದ್ಧರ ಕಥೆಗೂ ಇರುವ ಸಂಬಂಧದ ಗುಟ್ಟುಬಿಚ್ಚಿಕೊಳ್ಳುತ್ತದೆ.[೩೦]

❖ **ಅಡಿಟಿಪ್ಪಣಿಗಳು :**

೧) ಡಾ. ಕೆ.ಮೋಹನಕೃಷ್ಣ ರೈ, ಪ್ರಭುತ್ವ ಮತ್ತು ಜನತೆ, ೨೦೦೪, ಪುಟ.೧೨೭.

೨) ಡಾ. ಸಂಗಮೇಶ ಸವದತ್ತಿ ಮಠ, ವೀರಶೈವ ವಿನ್ಯಾಸ, ೨೦೦೦, ಪುಟ.೪.

೩) ಅದೇ ಪುಟ.೨೩.

೪) ಅದೇ ಪುಟ.೧೭-೧೮ ೨೦೦೦.

೫) ಪ್ರೊ.ಬಿ.ಷೇಕ್‌ಅಲಿ, ಪ್ರೊ. ಬಿ.ಸುರೇಂದ್ರರಾವ್(ಸಂ),ಕರ್ನಾಟಕ ಚರಿತ್ರೆ(ಸಂ.೨) ೧೯೯೭, ಪುಟ.೨೩೨

೬) ಹೆಚ್.ದೇವೀರಪ್ಪ, ಮಹದೇವ ಬಣಕಾರ(ಸಂ), ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ, ೧೯೭೪. ಪುಟ.೪-೫,

೭) ತರಳಬಾಳು ರಜತೋತ್ಸವ ಸಂಚಿಕೆ, ೧೯೬೭.ಪುಟ.೭೪

೮) ಪ್ರೊ, ಬಿ.ವಿರೂಪಾಕ್ಷಪ್ಪ, ಶರಣ ದೀಪಿಕೆ ೨೦೦೪, ಪುಟ.೪೨೩

೯) ತರಳಬಾಳು ಹುಣ್ಣಿಮೆ ಹರಿಹರ ಸ್ಮರಣ ಸಂಚಿಕೆ ೨೦೦೭,ಪುಟ.೧೯೯-೨೦೦

೧೦) ಮಹದೇವ ಬಣಕಾರ (ಸಂ), ದಿಟ್ಟ ಹೆಜ್ಜೆ ಧೀರಕ್ರಮ, ೨೦೦೩ ಪರಿಷ್ಕೃತ ಮುದ್ರಣ, ಪುಟ.೩೨.

೧೧) ಡಾ. ಆರ್.ಎಮ್.ಷಡಕ್ಷರಯ್ಯ, ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ ೨೦೦೩, ಪುಟ.೩.

೧೨) ತರಳಬಾಳು ರಜತೋತ್ಸವ ಸಂಚಿಕೆ ೧೯೬೭, ಪುಟ.೨.

೧೩) ಪಂಡಿತ ಶ್ರೀ ಕಾಶೀನಾಥ ಶಾಸ್ತ್ರಿಗಳವರು, ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ ೧೯೬೪, ಪುಟ.೧-೩೭.

೧೪) ಅದೇ ಪುಟ.೩೫-೩೭,

೧೫) ಚಿಂತನ ದಾಸೋಹಿ ಬಸವಕೇಂದ್ರ, ಡಾ. ಎಂ.ಎಂ.ಕಲಬುರ್ಗಿ, ಅವರ ಭಾಷಣ ಪ್ರತಿ ಪುಟ.೮.

೧೬) ಶಕುಂತಲಾಗೋಪಶೆಟ್ಟಿ, ರೇವಣಸಿದ್ಧರು ಒಂದು ಅಧ್ಯಯನ,(ಅಪ್ರಕಟಿತ) ಪಿಹೆಚ್.ಡಿ. ಸಂಶೋಧನ ಸಪ್ರಂಧವಾಗಿ ಕನ್ನಡ ವಿಶ್ವವಿದ್ಯಾಲಯ ಸಲ್ಲಿಸಿರುವುದು, ೨೦೦೩, ಪುಟ.೩೭-೪೫.

೧೭) ಡಾ. ಎಂ.ಎಂ.ಕಲಬುರ್ಗಿ, ಶಾಸನಗಳಲ್ಲಿ ಶಿವಶರಣರು, ೧೯೭೦, ಪುಟ.೯೦-೯೧.

೧೮) ಅದೇ ಪುಟ.೪೭,

೧೯) ಅದೇ ಪುಟ.೪೮,

೨೦) ಎನ್.ಎಮ್.ರವಿಕುಮಾರ್, ಡಾ. ಎ.ವೃಷಬೇಂದ್ರಾಚಾರ್ (ಸಂ), ಮುನ್ನಡೆಯ ಕೂಡ್ಲಿಗಿ (ಕೂಡ್ಲಿಗಿ ತಾಲೂಕಿನ ಸಮಗ್ರ ದರ್ಶನ) ೧೯೯೮, ಪುಟ.೨೧.

೨೧) ಡಾ. ಆರ್.ಎಮ್.ಷಡಕ್ಷರಯ್ಯ, ಪೂರ್ವೋಕ್ತ, ಪುಟ.೨೭-೩೬.

೨೨) ಹೆಚ್.ದೇವೀರಪ್ಪ, ಮಹದೇವ ಬಣಕಾರ(ಸಂ), ಪೂರ್ವೋಕ್ತ, ಪುಟ.೭೭-೭೮.

೨೩) ಅದೇ ಪುಟ.೭೯

೨೪) ಪಂ.ಎಸ್.ಬಸಪ್ಪ(ಸಂ), ದೇವಕವಿ ಕೃತ ಮರುಳಸಿದ್ಧ ಕಾವ್ಯ, ೧೯೭೭, ಪುಟ.XII.

೨೫) ಹೆಚ್.ದೇವೀರಪ್ಪ , ಮಹದೇವಬಣಕಾರ (ಸಂ), ಪೂರ್ವೋಕ್ತ, ಪುಟ.೭೨,

೨೬) ಡಾ. ರೇವಯ್ಯ ಒಡೆಯರ್, ಶ್ರೀಮದ ಉಜ್ಜಯಿನಿ ಸದ್ಧರ್ಮ ಶ್ರೀ ಪೀಠ ದರ್ಶನ, ೨೦೦೪, ಪುಟ.೩.

೨೭) ಪಂ.ಎಸ್.ಬಸಪ್ಪ (ಸಂ), ಪೂರ್ವೋಕ್ತ, ಪುಟ. XXVII.

೨೮) ಡಾ. ಆರ್.ಎಮ್.ಷಡಕ್ಷರಯ್ಯ, ಪೂರ್ವೋಕ್ತ, ಪುಟ.೧೩೬.

೨೯) ಅದೇ ಪುಟ.೧೩,೧೩೮-೧೪೦.

೩೦) ಡಾ.ರಾಜಶೇಖರ ಹನುಮಲಿ, ವೀರಗಾಸೆ ಸಂಶೋಧನಾ ಮಹಾಪ್ರಬಂಧ, ೨೦೦೫, ಪುಟ.೯೧

ಅಧ್ಯಾಯ ೬

೬.೬. ಸಮಾರೋಪ.

೬.೬ ಸಮಾರೋಪ :

ಆದಿ ಮಾನವನು ತನ್ನ ಅಲೆಮಾರಿ ಜೀವನಕ್ಕೆ ವಿದಾಯ ಹೇಳಿ ಒಂದು ಕಡೆ ನೆಲೆ ನಿಂತು ವಾಸಿಸತೊಡಗಿದ ಮೇಲೆ ಗುಂಪು ಜೀವನಕ್ಕೆ ಹೆಚ್ಚಿನ ಮಹತ್ವ ಬಂದಿತು. ಇಂದಿಗೂ ಕೂಡ ಮಾನವ ಸಂಘ ಜೀವಿಯಾಗಿಯೇ ಬದುಕನ್ನು ಮುನ್ನಡೆಸುತ್ತಿದ್ದಾನೆ. ಪ್ರತಿಯೊಂದು ಸಮುದಾಯವು ತನ್ನ ಸದಸ್ಯರೆಲ್ಲರೂ ನೆಮ್ಮದಿಯಾದ ಬದುಕನ್ನು ನಡೆಸಬೇಕೆಂಬ ಸಾಮಾಜಿಕ ಉದ್ದೇಶಗಳನ್ನು ಇರಿಸಿಕೊಂಡಿರುತ್ತದೆ. ಇದು ವ್ಯಕ್ತಿ ಜೀವನಕ್ಕೂ ಮತ್ತು ಗುಂಪು ಜೀವನಕ್ಕೂ ಪರಸ್ಪರ ಹಿತವನ್ನು ಬಯಸುವಂತಹ ಆಶಯವನ್ನು ಒಳಗೊಂಡಿದೆ. ಕಾಲಾಂತರದಲ್ಲಿ ಇಂತಹ ಆಶಯಗಳಿಗೆ ಭಂಗವುಂಟಾಗಿದೆ. ಒಂದು ಗುಂಪಿನ ಜನಗಳು ಮತ್ತೊಂದು ಗುಂಪಿನ ಜನಗಳ ಜೊತೆ ಸಹ–ಬಾಳ್ವೆ ನಡೆಸುವಾಗ ಸೌಹಾರ್ದ ಜೀವನಕ್ಕೆ ಯಾವ ಯಾವದೋ ಕಾರಣಗಳಿಗೆ ಭಂಗವುಂಟಾಗಿದೆ. ಅಂತಹ ಸಂದರ್ಭಗಳಲ್ಲಿ ಮಾನವ ಸಮಾಜವು ಹಲವಾರು ಬಿಕ್ಕಟ್ಟುಗಳಿಗೆ ಗುರಿಯಾಗಿದೆ. ಇದು ಯಾವುದೇ ಪ್ರದೇಶಕ್ಕೆ ಮತಕ್ಕೆ ಸೀಮಿತವಾಗಿರದೆ ಒಟ್ಟಾರೆಯಾಗಿ ಜಾಗತಿಕ ಸಮಜವನ್ನೇ ಆವರಿಸಿಕೊಂಡು ಮನುಕುಲದ ಸುಖ ಶಾಂತಿ ನೆಮ್ಮದಿಗಳನ್ನೇ ಹಾಳು ಮಾಡಿದೆ.

ಇಂತಹ ಯಾತನಾಮಯ ಸನ್ನಿವೇಶಗಳಲ್ಲಿ ಮಾನವ ಸಮಾಜವನ್ನು ಸುಧಾರಿಸಲು ಪ್ರಾಚೀನ ಕಾಲದಿಂದಲೂ ಪ್ರಯತ್ನಗಳು ನಡೆದಿವೆ. ಇಂತಹ ಪ್ರಯತ್ನಗಳಿಂದ ಸಮಾಜದಲ್ಲಿ ಕೆಲಮಟ್ಟಿಗೆ ಸೌಹಾರ್ದತೆಯ ವಾತಾವರಣ ನಿರ್ಮಾಣವಾಗಿದೆ. ಆದರೆ ದಿನದಿಂದ ದಿನಕ್ಕೆ ಮಾನವ ಸಮಾಜವನ್ನು ಹಲವಾರು ಬಿಕ್ಕಟ್ಟುಗಳಿಗೆ ಗುರಿ ಮಾಡುವಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಕೆಲಸ ಮಾಡುತ್ತವೆ. ಇದರ ವಿರುದ್ಧ ದಿಕ್ಕಿನಲ್ಲಿ ಅಂತಹ ದಮನಕಾರಿ ಶಕ್ತಿಗಳ ವಿರುದ್ಧ ಹೋರಾಟ ಮಾಡುತ್ತಾ ಮಾನವ ಸಮಾಜವನ್ನು ಸುಧಾರಿಸುವ ಪ್ರಯತ್ನಗಳು ಜಗತ್ತಿನಾದ್ಯಂತ ನಡೆದಿವೆ.

ಇಂತಹ ಜಿಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯನ್ನು ಪರಿವರ್ತನೆಯ ಹಾದಿಗೆ ತರಲು ಶ್ರಮಿಸಿದ ಹಲವಾರು ಕ್ರಾಂತಿಕಾರರು, ಹೋರಾಟಗಾರರನ್ನು ಗುರುತಿಸಬಹುದಾಗಿದೆ. ಕರ್ನಾಟಕ ಚರಿತ್ರೆಯಲ್ಲಿ ೧೨ನೇ ಶತಮಾನದ ಕಾಲ ಇದೇ ಆಗಿತ್ತು. ಅಂತಹ ಸಾಮಾಜಿಕ ಹೋರಾಟಗಾರರಲ್ಲಿ ಬಸವೇಶ್ವರ, ಅಲ್ಲಮ ಪ್ರಭು, ಚನ್ನಬಸವಣ್ಣ ಸಿದ್ಧರಾಮ, ಮಹದೇವಿಯಕ್ಕ, ಮಡಿವಾಳ ಮಾಚಯ್ಯ, ಡೋಹರಕಕ್ಕಯ್ಯ, ಅಂಬಿಗರ ಚೌಡಯ್ಯ, ಹಾಗೆಯೇ ಮರುಳಸಿದ್ಧರು ಈ ಕಾಲಘಟ್ಟದಲ್ಲಿ ಮಿಂಚಿ ಬೆಳಗಿದ ಮಹಾಮಹಿಮರು ಎನಿಸಿದ್ದಾರೆ.

ಪ್ರಸ್ತುತ ಈ ಅಧ್ಯಯನ "ಕರ್ನಾಟಕದಲ್ಲಿ ಮರುಳಸಿದ್ಧ ನೆಲೆಗಳು ಮತ್ತು ಸ್ಮಾರಕಗಳು ಚಾರಿತ್ರಿಕ ಅಧ್ಯಯನ" ಎಂಬ ಈ ವಿಷಯದಲ್ಲಿ ಮರುಳಸಿದ್ಧರು ದಲಿತರು, ತುಳಿತಕ್ಕೊಳಗಾದ ಸಮಾಜದಲ್ಲಿ ಹೋರಾಟಗಾರರಾಗಿ ಕಾಣಿಸಿಕೊಂಡ ಒಬ್ಬ ಮಹಾಪುರುಷ ವೀರಶೈವಾಚಾರ್ಯನೂ, ಶಿವಯೋಗಿಯೂ ಉಜ್ಜಯಿನಿ ಸದ್ಧರ್ಮ ಸಿಂಹಾಸನ ಶ್ರೀ ತರಳಬಾಳು ಗುರುಪೀಠ ಸ್ಥಾಪಕರೂ ಆದ ಮರುಳಸಿದ್ಧರು ತೀರ ಕೆಳವರ್ಗದ ಜಾತಿಯೊಂದರಲ್ಲಿ ಜನಿಸಿ ಪವಾಡಗಳ ಮೂಲಕ ಸಾಮಾಜಿಕ, ಧಾರ್ಮಿಕ, ಕ್ಷೇತ್ರಗಳಲ್ಲಿ ಹೋರಾಡಿ ಅನ್ಯಾಯ ಅಧರ್ಮಗಳನ್ನು ಖಂಡಿಸಿರುವುದು, ಈತನ ಜೀವನದ ಚಿತ್ರಣದಲ್ಲಿ ತಿಳಿದುಬರುವ ಪ್ರಮುಖ ಅಂಶವಾಗಿದೆ.

ಸಮಾಜ ಯಾರನ್ನೂ ಅಂತ್ಯಜ, ಪಂಚಮ, ಹೊಲೆಯ, ಮಾದಿಗ ಎಂದು ಊರ ಹೊರಗಿಟ್ಟು ಅಮಾನವೀಯವಾಗಿ ಕಾಣುತ್ತ ಬಂದಿದೆಯೊ ಅಂತಹ ಮಾದಿಗರ ಮಗನಾಗಿ ಹುಟ್ಟಿದವರು. ಆದರೆ ವ್ಯಕ್ತಿತ್ವದ ವಿಕಾಸಕ್ಕೆ ಹುಟ್ಟಾಗಲಿ, ಜಾತಿಯಾಗಲಿ ಸಂಬಂಧವಿಲ್ಲ ಎಂಬುದನ್ನು ಲೋಕಕ್ಕೆ ತೋರಿದ ಮಹಾತ್ಮರು. ಅಂತ್ಯಜರಾಗಿ ಹುಟ್ಟಿಯು ತಮ್ಮ ಮಾನವೀಯ ಅನುಕಂಪ, ಸಾಮಾಜಿಕ ಕಳಕಳಿ, ವೈಯಕ್ತಿಕ ಸಾಧನೆಯ ಮೂಲಕ ಜನಮನದಲ್ಲಿ ನೆಲೆಗೊಂಡವರು. ಇಂಥ ದಲಿತ ಒಬ್ಬ ಹೋರಾಟಗಾರ ಸಾಮಾನ್ಯರಲ್ಲಿ ಸಾಮಾನ್ಯನಾಗಿದ್ದು ಸಾಧನೆಯ ಮೂಲಕ ಆಧ್ಯಾತ್ಮಿಕ ಸಿದ್ಧಿಯ ಶಿಖರಕ್ಕೇರಿದ ಅನುಭವಿ ಮರುಳಸಿದ್ಧ ಚರಿತ್ರೆ ಅಗೋಚರವಾಗಿರುವಂತಹ ಆ ವ್ಯಕ್ತಿ ಇದೇ ದಲಿತ ಸಮೂದಾಯರಿಗೆ ತಿಳಿದಾಗಿದೆ. ಈ ಸಮೂದಾಯ ಇಂಥ ವ್ಯಕ್ತಿಯ ಚರಿತ್ರೆಯನ್ನು ಅರಿಯಬೇಕಾಗಿದೆ.

ಅಧ್ಯಯನದ ವಿವಿಧ ನಿಲವುಗಳನ್ನು ಇಲ್ಲಿ ಚರ್ಚಿಸಲಾಗಿದೆ. ಪ್ರಸ್ತುತ ಮರುಳಸಿದ್ಧರಂತಹ ವ್ಯಕ್ತಿ ಕರ್ನಾಟಕದ ಚರಿತ್ರೆಯಲ್ಲಿ ಗುರುತಿಸಲ್ಪಡಬೇಕೆಂಬ ಉದ್ದೇಶದಿಂದ ಕರ್ನಾಟಕದ ಇಂದಿನ ಸಮಕಾಲೀನ ರಾಜ್ಯಾಡಳಿತಕ್ಕೊಳಪಟ್ಟ ಭೌಗೋಳಿಕ ಸೀಮೆಯ ವ್ಯಾಪ್ತಿಯಲ್ಲಿ ಗುರುತಿಸಲ್ಪಡುವ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು : ಬಹು ಮಹತ್ವ ಪಡೆದವಾಗಿವೆ. ಇಂತಹ ನೆಲೆಗಳು, ಸ್ಮಾರಕಗಳು ಸಹ ಮರುಳಸಿದ್ಧರ ಜೀವನ ಸಾಧನೆಯನ್ನು ಚಿತ್ರಿಸಲು ಈ ಕುರುಹುಗಳು ನೆರವಾಗುತ್ತವೆ. ಹೀಗಾಗಿ ಒಂದು ಭೌಗೋಳಿಕ ವ್ಯಾಪ್ತಿ ಚೌಕಟ್ಟಿನಲ್ಲಿ ಅಧ್ಯಯನ ಮಾಡಿ ನಮ್ಮ ಕ್ಷೇತ್ರ ಕಾರ್ಯದಿಂದ ಮರುಳಸಿದ್ಧರ ನೆಲೆ ಮತ್ತು ಸ್ಮಾರಕಗಳು ಗುರುತಿಸಿದ್ದು. ಆ ಮಹಾಪುರುಷರ ಸಾಮಾಜಿಕ ಕ್ರಾಂತಿಯ ಸಹಜವಾದ ಘಟನಾವಳಿಯಿಂದ ಮಾನವೀಯ ಅನುಕಂಪೆಯ ತೀರ್ವ ಮಿಡಿತವನ್ನು ಕಾಣಬಹುದಾಗಿದೆ.

ವೀರಶೈವ ಸಾಹಿತ್ಯದ ಬಹುಪಾಲು ಶರಣರ ಚರಿತ್ರೆಗೆ ಮೀಸಲು. ಅಲ್ಲಿ ಸ್ವತಂತ್ರ ಕೃತಿ ಇಲ್ಲವೆ,

ಉಪಕಥೆಯ ರೂಪದಲ್ಲಿ ಶರಣರ ಚರಿತ್ರೆ ಅರಳಿ ನಿಂತಿದೆ. ಆದರೆ ಮೂಲ ವಿಗ್ರಹವನ್ನು ಮರೆಗೊಳಿಸುವ ಅಲಂಕಾರದ ಹೊರೆಯಂತೆ ಇಲ್ಲಿ ಶರಣರ ಸುತ್ತ ಪವಾಡಗಳು ಹೆಣೆದು ನಿಂತಿವೆ. ಅಲ್ಲದೆ ಮರುಳಸಿದ್ಧರ ಜೀವನ ಚರಿತ್ರೆಯನ್ನು ನಿರೂಪಿಸುವ ಕೃತಿಗಳು, ಕೃತಿಯಿಂದ ಕೃತಿಗೆ ಭಿನ್ನವಾಗಿ ನಿರೂಪಿಸಲ್ಪಟ್ಟಿವೆ. ಸಂಸ್ಕೃತದಲ್ಲಿರುವ ಆಗಮಗಳು, ಉಜ್ಜಯಿನಿಯ ಗೊಂಗಡಿ ವೀರಭದ್ರಯ್ಯನವರ ಸಾಂಗತ್ಯ, ಚತುರಾಚಾರ್ಯ ಪ್ರಬಂಧ, ಚತುರಾಚಾರ್ಯ ಪುರಾಣ, ನಂದೀಶ ಕವಿಯ ಮರುಳಾರಾಧ್ಯ ವಿಜಯ ಚರಿತ್ರೆ, ಮೊದಲಾದ ಕೃತಿಗಳು, ಮರುಳಸಿದ್ಧರನ್ನು ಲಿಂಗೋದ್ಭವ ಅವತಾರದಲ್ಲಿ ಜನ್ಮ ಪಡೆದವರು ಎಂದು ಚಿತ್ರಿಸಿವೆ. ಹಾಗೂ ಪಂಚಪೀಠದ ಆಚಾರ್ಯ ಪರಂಪರೆಯಲ್ಲಿ ವೀರಶೈವ ಧರ್ಮದ ಪ್ರವರ್ತಕರೆಂಬುದಾಗಿ ಚಿತ್ರಿಸಲ್ಪಟ್ಟಿವೆ.

ಆದರೆ ದೇವಕವಿಯು ಮೂಲ ಗ್ರಂಥಕರ್ತನೆನಲ್ಲ, 'ಗುರುಭೋಧೆ ಮಹಾತ್ಮೆಯ' ಗ್ರಂಥ ಕರ್ತೃ ಗದ್ದುಗೆಯ ರಾಮಿ ತಂದೆ. ಈ ಕವಿಯು ಮರುಳಸಿದ್ಧ ಸಮಾಕಾಲೀನ, ಗುರುಬೋಧೆ ಮಹಾತ್ಮೆ ಉಪಲಬ್ದವಿಲ್ಲ. ಆದರೆ ಈ ಕೃತಿಯನ್ನು ಅನುಸರಿಸಿ ದೇವಕವಿಯು ಸಿದ್ಧಲಿಂಗಚರಿತೆ ಅಥವಾ ಮರುಳಸಿದ್ಧ ಕಾವ್ಯವನ್ನು ರಚಿಸಿದ (೧೫ನೇ ಶತಮಾನದಲ್ಲಿ) ಮರುಳಸಿದ್ಧರ ಜೀವನ ಚರಿತ್ರೆಯನ್ನು ನಿರೂಪಿಸುವ ಅತ್ಯಂತ ಸಮೀಪದ ಕೃತಿ ಎಂದು ಹೇಳಬಹುದು. ದೇವಕವಿಯ ಈ ಕೃತಿಯನ್ನು ಅ.ನ.ಕೃಷ್ಣರಾಯರು ಪ್ರಪ್ರಥಮವಾಗಿ ಸಂಪಾದಿಸಿದರು ಮತ್ತು ಇದೇ ಮರುಳಚರಿತೆಯನ್ನು ಆಧರಿಸಿ ಆನಗೋಡಿನ ರೇವಣಸಿದ್ಧ ಕವಿಗಳು. ' ಶ್ರೀ ಮರುಳಚರಿತ್ರೆ' ರಚಿಸಿದ್ದಾರೆ – ಶ್ರೀ ಮರುಳಚರಿತ್ರೆಯನ್ನು ಸಿರಿಗೆರೆಯ ಶಿವಮೂರ್ತಿ ಶಿವಚಾರ್ಯ ಸ್ವಾಮಿಗಳರವರು ಸಂಪಾದಿಸಿದ್ದಾರೆ. ಈ ಎಲ್ಲಾ ಕೃತಿಗಳಲ್ಲಿಯು ಈ ಹಿಂದೆ ತಿಳಿಸಿದಂತೆ ಮರುಳಸಿದ್ಧರ ಜನನದಿಂದ ಐಕ್ಯದವರೆಗಿನ ಧಾರ್ಮಿಕ, ಸಾಮಾಜಿಕ ನಿಲವುಗಳನ್ನು ಕಾಣಬಹುದಾಗಿದೆ.

ಮರುಳಸಿದ್ಧರ ಜೀವನ ಸಾಧನೆ, ವ್ಯಕ್ತಿತ್ವ ಮತ್ತು ಅವರ ಕೊಡುಗೆ ಇವೆ ಮೊದಲಾದ ಅಂಶಗಳನ್ನು ಚಾರಿತ್ರಿಕವಾಗಿ ಗುರುತಿಸಬೇಕಾಗಿದೆ. ಈ ಹಿನ್ನಲೆಯಲ್ಲಿ ನೋಡಿದಾಗ ವ್ಯಕ್ತವಾಗುವ ಅಭಿಪ್ರಾಯಗಳು ಹಲವು. ಆರಂಭಿಕವಾಗಿ ಮರುಳಸಿದ್ಧರ ಹುಟ್ಟು ಮೂಲ ಪರಿಸರ ವಿಭಿನ್ನ ಪವಾಡ ಕಥೆಗಳಿಂದ ಆರಂಭವಾಗುತ್ತದೆ. ಪವಾಡಗಳು ವಿಶ್ವದ ಮಟ್ಟದಲ್ಲಿ ಅನೇಕ ಐತಿಹಾಸಿಕ ಮತ್ತು ಧಾರ್ಮಿಕ ಮಹಾಪುರುಷರ ಸುತ್ತಾ ಹೆಣೆಯಲ್ಪಟ್ಟಿರುವುದು ಗಮನಾರ್ಹ ಆದರೂ ಮರುಳಸಿದ್ಧರ ಜೀವನವೃತ್ತಾಂತ ಕಥೆಯಲ್ಲಿ ಇಂತಹ ಅಂಶಗಳು ಉಲ್ಲೇಖನೀಯವಾಗಿವೆ. ಮರುಳಸಿದ್ಧರ ಹುಟ್ಟು ಜಾತಿ ಕುಲದ ವಿಚಾರವಾಗಿ ಹೇಳುವುದಾದರೆ ಸಮಾಜದಲ್ಲಿ ತುಳಿತಕ್ಕೆ ಒಳಗಾದ ಕೆಳಸ್ತರದ ಜಾತಿಯಾದ 'ಮಾದಿಗ' ಅಥವಾ ದಲಿತವರ್ಗ ಎಂಬ ಬಗ್ಗೆ ದೇವಕವಿಯ ಮರುಳಸಿದ್ಧ ಕಾವ್ಯದಲ್ಲಿ

ಸ್ಪಷ್ಟವಾಗಿ ಉಲ್ಲೇಖಿಸಿದೆ. ಉಜ್ಜಯಿನಿಯಲ್ಲಿ ಇಂದಿಗೂ ಮಾದಿಗರ ಕೇರಿಯಲ್ಲಿ ಮರುಳಸಿದ್ಧರ ಸ್ಮಾರಕವಿದೆ. ಉಜ್ಜಯಿನಿ ಹಾಗೂ ಇತರ ಮರುಳಸಿದ್ಧರ ಸ್ಮಾರಕಗಳು ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಇವೆ. ಈ ಭಾಗದಲ್ಲಿ ದಲಿತರ ಪಾತ್ರ ಬಹು ಮಹತ್ವ ಪಡೆಯುತ್ತಿರುವುದು ಗಮನಾರ್ಹವಾದ ಅಂಶವಾಗಿದೆ.

ದಲಿತರಾದ ಮರುಳಸಿದ್ಧರನ್ನು ಚಾರಿತ್ರಿಕವಾಗಿ ಉಲ್ಲೇಖಿಸುವ ಯಾವುದೇ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿಲ್ಲ. ಆದರೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಉಜ್ಜಯಿನಿಯ ಸದ್ಧರ್ಮ ಪೀಠದ ಆವರಣದಲ್ಲಿ ದೊರೆಯುವ ಶಾಸನಗಳು ಕ್ರಿ.ಶ.೧೦ ಮತ್ತು ೧೨ನೇ ಶತಮಾನಕ್ಕೆ ಸಂಬಂಧಿಸಿದಂತೆ ಉಲ್ಲೇಖಿಸಿದ್ದರು. ಆ ಶಾಸನಗಳು ಮಲ್ಲಿಕಾರ್ಜುನ ದೇವಾಲಯಕ್ಕೆ ದಾನ ಕೊಟ್ಟಿರುವು ವಿವರವನ್ನು ಉಲ್ಲೇಖಿಸುತ್ತವೆ. ಈ ಶಾಸನಗಳು ಯಾದವರು ಜಗದ್ದಳಪಾಂಡ್ಯರಸ, ಮತ್ತು ವಿಜಯನಗರ ಅರಸರ ಕಾಲಕ್ಕೆ ಸಂಬಂಧಿಸಿದವಾಗಿವೆ. ಈ ಶಾಸನದಲ್ಲಿ ಉಲ್ಲೇಖಿಸಿರುವ ಮಲ್ಲಿಕಾರ್ಜುನ ಎಂಬ ಹೆಸರು ದೇವರ ಕವಿಯ ಕಾವ್ಯದಲ್ಲಿ ಮರುಳಸಿದ್ಧರನ್ನು ಮಲ್ಲಿಕಾರ್ಜುನ ಎಂಬ ಹೆಸರಿನಿಂದ ಉಲ್ಲೇಖಿಸಿದ್ದಾನೆ. ಇದು ಈ ಕಾವ್ಯದಲ್ಲಿ ಹಲವು ಕಡೆ ವ್ಯಕ್ತವಾಗುತ್ತದೆ. ಆದ್ದರಿಂದ ಮಲ್ಲಿಕಾರ್ಜುನ ಎನ್ನುವುದು ಮರುಳಸಿದ್ಧ ಎಂಬುದರಲ್ಲಿ ಸಂದೇಹವೇ ಇರಲಾರದು. ಈ ಎರಡು ನಾಮಗಳು ಒಂದೇ ಎಂಬ ಅಭಿಪ್ರಾಯ ವ್ಯಕ್ತಪಡಿಸಬಹುದು.

ಮತ್ತೊಂದು ಶಾಸನ ದಾವಣಗೆರೆ ಜಿಲ್ಲೆಯ ಜಗಳೂರು ತಾಲೂಕು ಮುಚ್ಚನೂರು ಗ್ರಾಮದಲ್ಲಿ ಕ್ರಿ.ಶ. ಸು.೧೦ನೇ ಶತಮಾನದ ಉಲ್ಲೇಖಿತ ಶಾಸನ ಮರುಳಸಿದ್ಧ ದೇವಾಲಯದ ಆವರಣದಲ್ಲಿ ದೊರೆತಿದೆ. ಈ ಶಾಸನದಲ್ಲಿ ಮಹಾದೇವ ದೇವಾಲಯ ಎಂದು ಕರೆಯಲ್ಪಟ್ಟಿದೆ. ಮಹದೇವ ಎಂಬುದು ಸಹ ದೇವಕವಿಯ ಮರುಳಸಿದ್ಧ ಕಾವ್ಯದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಆದ್ದರಿಂದ ಮಹದೇವ ಎಂಬ ಹೆಸರು ಮರುಳಸಿದ್ಧ ಆಗಿರಬಹುದು ಎಂಬುದು ಮತ್ತೊಂದು ಗಮನಾರ್ಹವಾದ ಅಂಶವಾಗಿದೆ.

ಬೆಂಗಳೂರು ಜಿಲ್ಲೆಯ ರೇವಣಸಿದ್ಧೇಶ್ವರ ಬೆಟ್ಟದಲ್ಲಿ ಅವ್ವೆಯರಹಳ್ಳಿ ಶಾಸನ (ಕ್ರಿ.ಶ.೧೧೯೩) ಪವಾಡವನ್ನು ತೋರಿದವನು ಮರುಳಸಿದ್ಧೇಶ್ವರನೆಂದು ಆತನ ಗುರುವು ರೇವಣಸಿದ್ಧೇಶ್ವರನೆಂದೂ ಈ ಶಾಸನದ ಒಟ್ಟು ಅರ್ಥ. ಇಲ್ಲಿ ಮಗ ಎಂಬುದನ್ನೂ ಶಿಷ್ಯ ಎಂಬರ್ಥದಲ್ಲಿ ಗ್ರಹಿಸಬೇಕು.

ಸಿರಿವಾಳ ಶಾಸನ ಈ ಶಾಸನದ ಕಾಲ ಕ್ರಿ.ಶ.೧೧೮೭ ಮತ್ತೊಂದು ಲಕ್ಷ್ಮೇಶ್ವರ ಶಾಸನ ಈ ಶಾಸನದ ಕಾಲ ಕ್ರಿ.ಶ. ಸು.೧೫೧೩ ಇಲ್ಲಿ ರೇವಣಸಿದ್ಧ ಮರುಳಸಿದ್ಧರು ಪಂಚಾಚಾರ್ಯ ಅಥವಾ

ವೀರಶೈವಚಾರ್ಯರೆಂಬುದು ಉಲ್ಲೇಖಿಸಲ್ಪಡುತ್ತದೆ.

ಈ ಮೇಲೆ ಗಮನಿಸಿದ ಶಾಸನಗಳಾಧಾರದಿಂದ ಮರುಳಸಿದ್ಧರ ಕುರಿತು ಚಾರಿತ್ರಿಕವಾಗಿ ನಿರೂಪಿಸುವುದಕ್ಕೆ ಶಾಸನಗಳಲ್ಲಿನ ವಾಸ್ತವಾಂಶ ಅತ್ಯಲ್ಪವಮಾಹಿತಿ ತಿಳಿದು ಬರುತ್ತದೆ. ಆದರೆ ಸಾಹಿತ್ಯ ಚರಿತ್ರೆಯ ಕೃತಿಗಳು ಹಾಗೂ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು ಮಾತ್ರ ಮರುಳಸಿದ್ಧರ ಹುಟ್ಟು, ಕಾಲ ಮತ್ತು ಜನ್ಮಸ್ಥಳ ಕುರಿತು ಹೆಚ್ಚು ನಿರೂಪಿತವಾದ ಅಂಶವನ್ನು ಗಮನಿಸಬಹುದಾಗಿದೆ.

ಈ ದೇಶದ ಸಾಮಾನ್ಯ ಜನತೆಗೆ, ಹಳ್ಳಿಯ ಮುಗ್ಧರಿಗೆ ಪುರಾಣ ಪಾತ್ರಗಳಾದ ಬ್ರಹ್ಮ , ವಿಷ್ಣು, ಮಹೇಶ್ವರರು ಚಿರಪರಿಚಿತರಾಗಿ ಕಂಡರೆ ಚರಿತ್ರೆಯ ವ್ಯಕ್ತಿಗಳಾದ ಬುದ್ಧ, ಬಸವ, ಅಂಬೇಡ್ಕರ್‌ರಂತವರು ಅಪರಿಚಿತರಾಗಿ ಕಾಣುತ್ತಾರೆ. ಇಂತಹ ಸಂದರ್ಭದಲ್ಲಿ ಕೆಳವರ್ಗದಿಂದ ಬಂದ ಮಹತ್ತರ ಸಾಧನೆಯನ್ನು ಸಾಧಿಸಿದ ಮರುಳಸಿದ್ಧನಂತಹ ಮಹಾಮಹಿಮರನ್ನು ಮೂಲೆಗೆ ಸೇರಿಸಿದ್ದಾರೆ. ಆದರೂ ಕೊನೆಗೆ ಉಳಿಯುವುದು ಅಭಿಮಾನವಲ್ಲ ಸತ್ಯವೆನ್ನುವಂತೆ ಚರಿತ್ರೆ ಮತ್ತೆ ಮರುಕಳಿಸುತ್ತದೆ. ಸತ್ಯ ಸಂಗತಿ ಎದ್ದು ನಿಲ್ಲುತ್ತದೆ. ಹೊಸ ಇತಿಹಾಸ ಸೃಷ್ಟಿಯಾಗುತ್ತದೆ.

ಚರಿತ್ರೆಯ ಪುನರ್ ಸೃಷ್ಟಿಯ ಕಾರ್ಯವನ್ನು ನಮ್ಮ ಈ ಅಧ್ಯಯನದಲ್ಲಿ ಪ್ರಾಮಾಣಿಕವಾಗಿ ಮಾಡಿತೋರಿಸಿದ್ದೇವೆ. ಮರುಳಸಿದ್ಧನ ಸಾಧನೆಯನ್ನು ಬಹಳ ವೈವಿಧ್ಯಮಯವಾಗಿ ವಾಸ್ತವವಾಗಿ ಚಿತ್ರಿಸಿದ್ದಾರೆ. ಇಲ್ಲಿ ಭಕ್ತಿಯಿದ್ದರೂ ಭಾವಾವೇಶವಿಲ್ಲ, ಆಧ್ಯಾತ್ಮವಿದ್ದರೂ ಆಡಂಬರವಿಲ್ಲ. ಮಾದಿಗರ ಹೊಟ್ಟೆಯಲ್ಲಿ ಹುಟ್ಟಿ, ಒಕ್ಕಲಿಗರ ಆಶ್ರಯದಲ್ಲಿ ಬೆಳೆದು, ಆಧ್ಯಾತ್ಮದ ಕ್ಷೇತ್ರದಲ್ಲಿ ಸಾಗಿ ಅಸಮಾನತೆಯ ವಿರುದ್ಧ ಬಂಡೆದ್ದ ಮರುಳಸಿದ್ಧ, ಇಂದಿಗೂ ಪ್ರಸ್ತುತನಾಗುತ್ತಾನೆ. ಆತನ ನಿಷ್ಠೆ, ಸಾಧನೆ, ಆಲೋಚನೆ, ಹೋರಾಟ ಮನೋಭಾವ, ಸಂಘಟನೆ ಇವೆಲ್ಲ ಇಂದಿನ ಹೋರಾಟಗಾರರಿಗೆ ಸ್ಫೂರ್ತಿದಾಯಕವಾಗಬಲ್ಲವುಗಳಾಗಿವೆ.

ಪ್ರಸ್ತುತ ಅಧ್ಯಯನದಲ್ಲಿ ಉಜ್ಜಯಿನಿ ಸದ್ಧರ್ಮ ಪೀಠದಲ್ಲಿ ಅನೇಕ ಮರುಳಸಿದ್ಧರ ಪ್ರಸ್ತಾಪವಿರುವುದರಿಂದ ಪಂಚಪೀಠಾಚಾರ್ಯರಾಗಿ ಮರುಳಸಿದ್ಧರ ಅವತಾರವಾದದ್ದು ಮಧ್ಯಪ್ರದೇಶದ ಉಜ್ಜಯಿನಿಯ ಬಳಿ. ಅವರ ಪರಂಪರೆಯಲ್ಲಿ ಬಂದ ಇನ್ನೊಬ್ಬರು ಮರುಳಸಿದ್ಧರು ಈಗಿನ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು ಉಜ್ಜಯಿನಿಯಲ್ಲಿ ಪೀಠವನ್ನು ಹನ್ನೆರಡನೆ ಶತಮಾನದಲ್ಲಿ ಸ್ಥಾಪಿಸಿದರು ಎಂಬ ಜಿಜ್ಞಾಸೆ ಇದೆ.

ಪಂಚಪೀಠ ಪರಂಪರೆಯ ಬಗ್ಗೆ ನಿರ್ದಿಷ್ಟವಾಗಿ ಹೇಳಲು ಸಾಕಷ್ಟು ಸಾಮಗ್ರಿ ದೊರೆತಿಲ್ಲ. ಆ ವಿಚಾರವಾಗಿ ಯಾವ ನಿರ್ದಾರಕ್ಕೂ ಬರದಿರುವುದು ಸಧ್ಯಕ್ಕೆ ಒಳಿತು. ಅಲ್ಲದೆ ಧರ್ಮದ ತಾತ್ವಿಕ ವಿವೇಚನೆಗೆ ಮತ್ತು ಮೌಲ್ಯಮಾಪನಕ್ಕೆ ಅದು ಅಷ್ಟು ಅಗತ್ಯವಾದ ಅಂಶವೂ ಅಲ್ಲ. ಪ್ರಾಚೀನತೆಯೇ

ಶ್ರೇಷ್ಠತೆಯ ಒರೆಗಲಲ್ಲಿ ಹೊಸದಾದ ಒಂದು ತತ್ವವೇನು ಪ್ರಾರಂಭವಾದರೂ ಅದರಲ್ಲಿ ಸತ್ವವಿದ್ದರೆ ಸ್ವಾಗತಾರ್ಹವೆಂಬುದು ಇಂದಿನ ದೃಷ್ಟ.

ಪಂಚಾಚಾರ್ಯ ಗುರುಗಳಾದ ಶ್ರೀ ರೇವಣಸಿದ್ಧರು ಚಿನ್ಮೂಲಗಿರಿಯಲ್ಲಿದ್ದಾಗ ಶ್ರೀ ಮರುಳಸಿದ್ಧರು ಅವರ ಬಳಿಗೆ ಬಂದು ಉಪದೇಶವನ್ನು ಪಡೆದರು ಎಂದು ಸಿದ್ಧಲಿಂಗಚರಿತ್ರೆಯಲ್ಲಿ ಹೇಳಿದೆ. ಶ್ರೀ ರೇವಣಸಿದ್ಧರು ಬಹುಶಃ ಕೆಲವು ಕಾಲ ಈ ಆಶ್ರಮದಲ್ಲಿ ರಸಸಿದ್ಧರೊಂದಿಗೆ ನೆಲೆಸಿದ್ದಿರಬಹುದು ಎಂದು ದಿ. ಹುಲ್ಲೂರು ಶ್ರೀನಿವಾಸ ಜೋಯಿಸರು ಅಭಿಪ್ರಾಯಪಟ್ಟಿರುತ್ತಾರೆ. ರೇವಣಸಿದ್ಧರು ಐತಿಹಾಸಿಕ ಪುರುಷರೆಂದೂ ಕ್ರಿ.ಶ. ಸುಮಾರು ೧೧೯೫ರಲ್ಲಿ ಹುಟ್ಟು ಸುಮಾರು ೧೧೯೦ರವರೆಗೆ ಬದುಕಿದ್ದರೆಂದೂ ದಿ॥ ಗೋವಿಂದ ಪೈ ಹಾಗೂ ಮೊದಲಾದ ವಿದ್ವಾಂಸರು ಸಾಧಿಸಿದ್ದಾರೆ. ಈ ಹಿನ್ನಲೆಯಲ್ಲಿ ಮರುಳಸಿದ್ಧರ ಕಾಲ ಯಾವುದು ಎಂಬುದು ನಿರ್ಧಾರವಾಗುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಮರುಳಸಿದ್ಧರು ಒಬ್ಬ ದಲಿತ ನಾಯಕ ಎಂಬುದು ಅಭಿವ್ಯಕ್ತವಾದ ವಿಚಾರ. ದೇವಕವಿಯ ಸಿದ್ಧಲಿಂಗ ಚರಿತೆ, ಆನಗೋಡು ರೇವಣಸಿದ್ಧಕವಿಯ ಮರುಳಸಿದ್ಧ ಸಾಂಗತ್ಯ ಗುರುರಾಜ ಚರಿತೆ ಇನ್ನೂ ಮೊದಲಾದ ಗ್ರಂಥಗಳು ನಿರೂಪಿಸುತ್ತವೆ. ಕೆಳವರ್ಗದಿಂದ ಹುಟ್ಟಿ ಬಂದಿದ್ದರು ಜಿಡ್ಡುಗಟ್ಟಿದ ಸಾಮಾಜಿಕ ವ್ಯವಸ್ಥೆಯ ಪರಿವರ್ತನೆಗಾಗಿ ಪರಿತಪಿಸಿ ಜೀವನದುದ್ದಕ್ಕೂ ಹಲವು ನೋವುಂಡಂತಹ ವ್ಯಕ್ತಿ. ಪ್ರಾಣಿಬಲಿಯನ್ನು, ತಡೆಯೊಡ್ಡಿ ಬ್ರಾಹ್ಮಣರ ಯಾಗವನ್ನು, ತಡೆದು ಎಲ್ಲಾ ಜಾತಿಯು ಒಂದೇ ಎಂದು ಸಾರಿದರು. ರಾಜಪ್ರಭುತ್ವಗಳ ಆಕ್ರೋಶಕ್ಕೆ ಬಲಿಯಾಗಿ ಹಲವು ಯಾತನೆಗಳನ್ನು ಅನುಭವಿಸಿದರು. ಮಾನವ ಹಕ್ಕುಗಳ ರಕ್ಷಣೆಗಾಗಿ ಮೊದಲು ಧ್ವನಿ ಎತ್ತಿದ ಮರುಳಸಿದ್ಧರು, ದುರಾಚಾರ, ವಾಮಚಾರ ಮಾರ್ಗವನ್ನು ಹಿಡಿದ ದುಷ್ಟ ಜನರ ಪರಿವರ್ತನೆಗಾಗಿ ಶ್ರಮಿಸಿದವರು. ಸಮಾಜದ ಅಸಮಾನತೆಯನ್ನು ತೊಡೆದಹಾಕಿ ಸಮಾನತೆಯನ್ನು ಸಾರಿದ ಇವರು ಸಮಾಜ ಸುಧಾರಕರಾಗಿ ಏಕಾಂತದ ಹೋರಾಟಗಾರರಾಗಿ ಹೋರಾಡಿದ ಶರಣರು.

ಕರ್ನಾಟಕದ ಭೂ ಭಾಗದಲ್ಲಿ ನಡೆದಾಡಿದ ಮರುಳಸಿದ್ಧರು ೧೨ನೇ ಶತಮಾನದ ಕಲ್ಯಾಣದಲ್ಲಿ ಒಂದುಗೂಡಿದ ಶಿವಶರಣರ ಪರಂಪರೆಯವರಿಂದಲೂ ದೂರವೇ ಉಳಿದಿದ್ದರು. ಒಬ್ಬ ದಲಿತರಾಗಿ, ಶೋಷಿತ ಸಮಾಜದ, ಏಳಿಗೆಗಾಗಿ ಹೋರಾಡುತ್ತಲೆ ಬಂದ ಮರುಳಸಿದ್ಧರನ್ನು ಚರಿತ್ರೆಯಲ್ಲಿ ಗುರುತಿಸಬೇಕಾದ ಅಗತ್ಯವಿದೆ. ಇಂದಿಗು ನಮ್ಮ ಸಮಕಾಲೀನ ಪ್ರಪಂಚದಲ್ಲಿ ಪ್ರಸ್ತುತವೆನಿಸುವ ಅನೇಕ ಮಹಾನ್ ಮಹಾಪುರುಷರ ಆದರ್ಶ ಮೌಲ್ಯಗಳು ಮನೆಮಾತಾಗಿರುವಂತೆ ಮರುಳಸಿದ್ಧರ ಗುಪ್ತ ಸ್ಥಿತಿಯಲ್ಲಿರುವ ಅವರ ನೆಲೆಗಳು ಮತ್ತು ಸ್ಮಾರಕಗಳಾದ ದೇವಸ್ಥಾನಗಳು

ಮಠಗಳು, ಕಾಡು-ಬೆಟ್ಟಗಳಲ್ಲಿಯ ಬಂಡೆಕಲ್ಲು ಗುರುತು ಮತ್ತು ಗವಿಗಳು ಕೆರೆಕಟ್ಟೆ, ಹಳ್ಳ ದಿಣ್ಣೆಯಲ್ಲಿ ಕಂಡು ಬರುವ ಸ್ಮಾರಕಗಳು, ಹಗೇವುಗಳು, ಗದ್ದುಗೆಗಳು ಪೀಠಗಳು ಇಂತಹ ಎಷ್ಟೋ ಕುರುಹುಗಳು ನಾಡಿನಾದ್ಯಂತ ಹಬ್ಬಿವೆ. ಇವು ಅವರ ಜೀವನ ವ್ಯಕ್ತಿತ್ವ ಸಾಧನೆ, ಪವಾಡಗಳಿಗೆ ಸಾಕ್ಷಿಯಾಗಿವೆ. ಮರುಳಸಿದ್ಧರು ತಾವು ಸಂಚರಿಸಿದ ಭಾಗದಲ್ಲಿಯೂ ಅವರ ಸ್ಮಾರಕಗಳಿದ್ದು ಅಲ್ಲಿಯೂ ಆರಾಧ್ಯ ದೈವವಾಗಿ ಆರಾಧಿಸಲ್ಪಟ್ಟಿದ್ದಾರೆ.

ಪ್ರಸ್ತುತ ಅಧ್ಯಯನದಲ್ಲಿ ಉಜ್ಜಯಿನಿ ಸದ್ಧರ್ಮ ಪೀಠಕ್ಕೆ ತೆಲಗುಬಾಳು, ಸಿದ್ದೇಶ್ವರ ಅವರನ್ನು ಪೀಠಾಧಿಪತಿಯಾಗಿ ಉಪದೇಶಿಸಿ ಉಜ್ಜಯಿನಿಯಲ್ಲಿ 'ತರಳಬಾಳು' ಮಠ ಸ್ಥಾಪಿಸಿದ ಮರುಳಸಿದ್ಧರು ಎಂಬುದು ಒಂದು ವಾದವಾದರೆ ಪಂಚಾಪೀಠಾಧಿಪತಿಗಳಾದ ಮರುಳಾರಾಧ್ಯರಿಂದ ಈ ಪೀಠ ಸ್ಥಾಪಿಸಲ್ಪಟ್ಟಿತ್ತು ಎಂಬುದಾಗಿ ಮರುಳಸಿದ್ಧರ ಕುರಿತು ಅವರ ಸ್ಮಾರಕಗಳ ವಿಷಯವಾಗಿ ಮಠ-ಪೀಠಗಳು ಎಂಬ ವಿಷಯವನ್ನು ಸಹ ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅವರು ತನ್ನ ಗುರು ರೇವಣಸಿದ್ಧರ ಅನುಗ್ರಹದ ಉಪದೇಶದಿಂದ ಪ್ರಭಾವಿತರಾಗಿ ಅದೇ ಮಾರ್ಗವನ್ನು ಅನುಸರಿಸಲು ತೆಲಗುಬಾಳಿನಿಂದ ಕರೆತಂದಿದ್ದ ತನ್ನ ಶಿಷ್ಯ ತೆಲಗುಬಾಳು ಸಿದ್ಧೇಶ್ವರ ಇವರನ್ನೆ ಮುಂದಿನ ಸಮಾಜದ ಪರಿವರ್ತನೆಯ ಹರಿಕಾರರಾಗಿ ಉಜ್ಜಯಿನಿ ಎಂಬ ಸದ್ಧರ್ಮಪೀಠದ ಅಧಿಪತಿಯಾಗಿ ಅನುಗ್ರಹಿಸಿದರು. ಇದೇ ಮುಂದೆ ಉಜ್ಜಯಿನಿಯಲ್ಲಿ ತರಳಬಾಳು ಎಂಬ ಸಾಧು ಲಿಂಗಾಯಿತ ಪೀಠ ಪರಂಪರೆ ಇಲ್ಲಿ ತಮ್ಮ ಮಠದ ಅಸ್ತಿತ್ವ ಉಳಿಸಿಕೊಂಡು ಬಂದಿತು. ಆದರೆ ೧೪ ಮತ್ತು ೧೬ನೇ ಶತಮಾನದದಲ್ಲಿ ವೀರಶೈವ ಪಂಗಡದಲ್ಲಿನ ೧೦೧ ವಿರಕ್ತರು ಅಯ್ಯ-ಭಕ್ತ ಎಂಬ ಒಳಪಂಗಡಗಳು ಈ ವಿರಕ್ತ ಪರಂಪರೆಯವರು ಸಮಾಜದಲ್ಲಿ ತಾವೇ ಸರ್ವಶ್ರೇಷ್ಠ ಎಂಬ ವಾತಾವರಣ ಸೃಷ್ಟಿಸಿದ್ದರಿಂದ ಉಜ್ಜಯಿನಿ ಪೀಠವು ಪಂಚಪೀಠ ಪರಂಪರೆಯವರ ಹಿಡಿತಕ್ಕೆ ಸಿಕ್ಕಿಬಿಟ್ಟಿತು. ಇದರ ಪರಿಣಾಮವೇ ಸಾರಂಗ ಮಠಾಧೀಶ್ವರರು ಪಾಳೆಯಗಾರರ ಬೆಂಬಲ ಪಡೆದು ಕರ್ನಾಟಕದ ನಾಡಿನಾದ್ಯಂತ ಇಂತಹ ಮಠಗಳನ್ನು ಕಬಳಿಸಿದರು. ಇದರಿಂದಾಗಿಯೆ ಉಜ್ಜಯಿನಿಯ ತರಳಬಾಳು ಸದ್ಧರ್ಮ ಪೀಠ ಮುಂದೆ ನೆಲಸಮವಾಗಿಬಿಟ್ಟಿತು. ನಂತರ ಪಾಲ್ಕುರಿಕೆ ಮತ್ತು ಸಿರಿಗೆರೆಯಲ್ಲಿ ಈ ಪೀಠದ ಪರಂಪರೆ ಬೆಳೆದು ಬಂದಿತು. ಈ ಬಗ್ಗೆ ಮಠದ ಚಾರಿತ್ರಿಕ ದಾಖಲೆ ಹಾಗೂ ಮೌಖಿಕ ಆಕಾರಗಳು ಉಲ್ಲೇಖಿಸುತ್ತವೆ. ಇಂತಹ ಚಾರಿತ್ರಿಕ ವಿಷಯವನ್ನು ಇಂದಿನ ಈ ಸಮುದಾಯದ ಜನಾಂಗಕ್ಕೆ ಗುಪ್ತಸ್ಥಿತಿಯಲ್ಲಿರುವ ಚರಿತ್ರೆಯನ್ನು ತಿಳಿಯುವ ಅಗತ್ಯವಿರುವುದರಿಂದ ಈ ನಮ್ಮ ಅಧ್ಯಯನದಲ್ಲಿ ಚಾರಿತ್ರಿಕ ದಾಖಲೆಗಳನ್ನು ಪರಿಶೀಲಿಸಿ ಸತ್ಯವಾದ ವಾಸ್ತವಾಂಶವನ್ನು ಇಲ್ಲಿ ವಿಶ್ಲೇಷಿಸಿದ್ದೇವೆ.

ಧಾರ್ಮಿಕ ಮಹಾಪುರುಷರು ಒಂದು ಧರ್ಮದ ಅಸ್ತಿತ್ವಕ್ಕೆ ಕಾರಣ ಎಂಬುದು ಚಾರಿತ್ರಿಕವಾಗಿ ಅವಲೋಕಿಸಿದರೆ ಜಗತ್ತಿನಲ್ಲಿ ಪ್ರಮುಖವಾಗಿ ಬೌದ್ಧ-ಜೈನ, ಕ್ರೈಸ್ತ, ಇಸ್ಲಾಂ ಪಾರ್ಸಿ, ಎಂಬ ಮೊದಲಾದ ಧರ್ಮಗಳು ಸ್ಥಾಪನೆಗೆ ಒಬ್ಬೊಬ್ಬ ವ್ಯಕ್ತಿಗಳಿರುವುದು ನಿರೂಪಿತವಾಗುತ್ತದೆ. ಆದರೆ ಬಹುದೊಡ್ಡ ಧರ್ಮವಾದ ಹಿಂದೂ ಧರ್ಮ ಯಾವುದೇ ಒಬ್ಬ ವ್ಯಕ್ತಿಯಿಂದ ಅಥವಾ ಸ್ಥಾಪಕರು ಯಾರು ಎಂಬ ಬಗ್ಗೆ ಖಚಿತ ಉತ್ತರವೂ ದೊರಕಲಾರದು. ಹಾಗಾದರೆ ವೀರಶೈವ ಮತ ಹಿಂದೂಧರ್ಮದ ಶಾಖಾಪಂಥವಾದ ಶೈವದಿಂದ ವೀರಶೈವವಾಗಿ ೧೨ನೇ ಶತಮಾನದಿಂದ ಜನಪ್ರಿಯವಾದ, ಈ ಧರ್ಮದ ಸ್ಥಾಪನೆಯನ್ನು ಪಂಚಪೀಠ ಪರಂಪರೆಯವರು ಆ ಪ್ರಾಚೀನ ಆಗಮ ಗ್ರಂಥಗಳೇ ಆಧಾರವೆಂದು ಸಮರ್ಥಿಸುತ್ತಾ. ಮರುಳಸಿದ್ಧರಂತವರನ್ನು ಒಬ್ಬ ಧಾರ್ಮಿಕ ಮಹಾಪುರುಷ ಎಂದು ಪ್ರತಿಪಾದಿಸಲು ಹೊರಟಿದ್ದಾರೆ. ಚಾರಿತ್ರಿಕವಾಗಿ ಇದನ್ನು ನಂಬಲು ಸಾಧ್ಯವಿಲ್ಲ ಹಿಂದೂ ಧರ್ಮದ ಮೂಲಸ್ಥಾಪಕರ ಅಸ್ತಿತ್ವವೇ ದೊರೆಯದೆ ಇರುವಾಗ ಅದರ ಶಾಖಪಂಥವಾದ ಈ ಧರ್ಮಕ್ಕೆ ಸ್ಥಾಪಕರೆಲ್ಲಿಂದ ಬರಬೇಕು ?

ಆದರೆ ಇಲ್ಲಿ ಮರುಳಸಿದ್ಧರು ಧಾರ್ಮಿಕ ಪುರುಷರಲ್ಲ ಈ ಬಗ್ಗೆ ನನ್ನ ಅಧ್ಯಯನದಲ್ಲಿ ಆಧಾರಗಳ ಸಹಿತ ನಿರೂಪಿಸಲಾಗಿದೆ. ಮಧ್ಯಕಾಲೀನ ಚರಿತ್ರೆಯಲ್ಲಿ ತುಳಿತಕ್ಕೆ ಒಳಗಾದ ಸಮುದಾಯವೊಂದಾದ ದಲಿತ ಸಮುದಾಯದಲ್ಲಿ ಹುಟ್ಟಿದ ಇವರು ಸಂಪೂರ್ಣವಾಗಿ ಅಂದಿನ ಸಮಾಜದ ದಲಿತರ ಮೇಲಿನ ಶೋಷಣೆ, ಮೂಢನಂಬಿಕೆ, ಅಜ್ಞಾನ ಕಂದಾಚಾರಗಳು ಪ್ರಾಣಬಲಿ ಜಾತಿ ಪದ್ಧತಿ, ಅನಾಚಾರಗಳ ವಿರುದ್ಧ ಧ್ವನಿ ಎತ್ತಿದ ಬಗ್ಗೆ ದೇವಕವಿಯ ಸಿದ್ಧಲಿಂಗ ಚರಿತ್ರೆ, ಆನಗೋಡು ರೇವಣಸಿದ್ಧ ಕವಿಯ ಮರುಳಸಿದ್ಧ ಸಾಂಗತ್ಯ, ಗುರುಸಿದ್ಧ ಸ್ವಾಮಿಗಳ ಸಾಂಗತ್ಯ, ಗೊಂಗಡಿ ವೀರಭದ್ರಯ್ಯನವರ ಮರುಳಸಿದ್ಧ ಸಾಂಗತ್ಯಗಳು, ಶಾಸನಗಳು, ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು ಹಾಗೂ ಜನಪದರ ಮಾತಿನಲ್ಲಿ ನಿರೂಪಿತವಾದ ಮರುಳಸಿದ್ಧರ ಕಥೆಗಳು. ಇಂತಹ ಆಕರ ಸಾಮಗ್ರಿ ಹತ್ತಿರವಾಗಿರುವುದರಿಂದ ಮರುಳಸಿದ್ಧ ಜೀವನ ದೃಷ್ಟಾಂತಗಳು ಸಂಪೂರ್ಣ ಹೋರಾಟದ ಚಿತ್ರಣಗಳನ್ನು ಅವಲೋಕಿಸಿದಾಗ ಮರುಳಸಿದ್ಧ ಧಾರ್ಮಿಕ ಪುರುಷನಾಗಲಿಕ್ಕೆ ಸಾಧ್ಯವಿಲ್ಲ. ಆತ ಒಬ್ಬ ಸಮಾಜ ಸುಧಾರಕ ಎಂಬುದನ್ನು ಈ ನಮ್ಮ ಅಧ್ಯಯನದಲ್ಲಿ ನಿರೂಪಿಸಲಾಗಿದೆ.

ಮರುಳಸಿದ್ಧರು ಒಬ್ಬ ಚಾರಿತ್ರಿಕ ವ್ಯಕ್ತಿ ಎಂದು ನಿರೂಪಿಸಲಾಗುತ್ತದೆ ಎನ್ನುವುದಕ್ಕೆ ಸಾಧ್ಯತೆಗಳಿವೆ. ಈ ಬಗ್ಗೆ ರೇವಣಸಿದ್ಧರು, ಸಿದ್ಧಪರಂಪರೆ ಅಥವಾ ಪಂಚಪೀಠ ಪಂಪರೆಯಲ್ಲಿ

ಗುರುತಿಸಲ್ಪಟ್ಟಿದ್ದಾರೆ. ಇಂತಹ ಒಬ್ಬ ವ್ಯಕ್ತಿಯನ್ನು ಐತಿಹಾಸಿಕ ಪುರುಷರು ಎಂದು ಹಲವು ಇತಿಹಾಸಕಾರರು ನಿರೂಪಿಸಿರುವುದರಿಂದ ಬಸವೇಶ್ವರ ಸಮಕಾಲೀನರೂ ಎಂಬುದಾಗಿ ಬಹುತೇಕ ವಿದ್ವಾಂಸರು ಸಾಬೀತುಪಡಿಸಿದ್ದಾರೆ. ಹಾಗಾದರೆ ರೇವಣಸಿದ್ಧರ ಶಿಷ್ಯರಲೊಬ್ಬರಾದ ಮರುಳಸಿದ್ಧರು ಸಹ ರೇವಣಸಿದ್ಧರ ಸಮಕಾಲೀನ ಎಂಬುದನ್ನು ನಿರೂಪಿಸಿದ್ದಾರೆ. ಎಂ.ಗೋವಿಂದ ಪೈ, ಅ.ನ.ಕೃಷ್ಣರಾಯರು, ದಿ. ಹುಲ್ಲೂರ ಶ್ರೀನಿವಾಸ ಜೋಯಿಸ, ಸಿರಿಗೆರೆಯ ತರಳಾಬಾಳು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮಿ, ಡಾ. ಎಂ.ಚಿದಾನಂದಮೂರ್ತಿ, ಡಾ. ಎಂ.ಎಂ.ಕಲಬುರ್ಗಿ ಮೊದಲಾದ ವಿದ್ವಾಂಸರು ತಮ್ಮ ವಾದಗಳನ್ನು ವ್ಯಕ್ತಪಡಿಸಿದ್ದಾರೆ. ರೇವಣಸಿದ್ಧರ ಸಮಕಾಲೀನ ಮರುಳಸಿದ್ಧ ಕಲ್ಯಾಣದ ಬಸವೇಶ್ವರ ಹಾಗೂ ಅವರ ಸಮಕಾಲೀನ ವಚನಕಾರರಿಂದ ದೂರವೇ ಇದ್ದ ಮರುಳಸಿದ್ಧರು ಉಜ್ಜಯಿನಿ ಅವರ ಕಾರ್ಯಕ್ಷೇತ್ರ ಅವರು ದಲಿತ ಸಮುದಾಯದ ವರ್ಗದಲ್ಲಿ ಹುಟ್ಟಿ ಪಟ್ಟಾಭದ್ರ ಹಿತಾಸಕ್ತಿಗಳ ವಿರುದ್ಧ ಪ್ರತಿಭಟಿಸಿದ ಅವರು ರಾಜಪ್ರಭುತ್ವದ ಆಕ್ರೋಶಕ್ಕೂ ವಿರೋಧಿಯಾಗಿ ಹೋರಾಟಗಾರರಾಗಿ ಕಾಣಿಸಿಕೊಂಡ ಇಂತಹವರನ್ನು ಇಂದು ಚರಿತ್ರೆಯಲ್ಲಿ ಗುರುತಿಸಬೇಕಾಗಿದೆ. ಮರುಳಸಿದ್ಧರು ಸಹ ಒಬ್ಬ ಐತಿಹಾಸಿಕ ಪುರುಷ ಎಂಬುದನ್ನು ಈ ಅಧ್ಯಯನದಲ್ಲಿ ನಿರೂಪಿಸಲಾಗಿದೆ.

ಮಂಟೇಸ್ವಾಮಿ, ಮಾದೆಮಾದೇಶ್ವರ, ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಇವರೆಲ್ಲಾ ಕೆಳವರ್ಗದಿಂದ ಬಂದವರು. ಇವರು ಪವಾಡಪುರುಷರು, ಐತಿಹಾಸಿಕ ಪುರುಷರು, ಒಂದುಕಾಲಕ್ಕೆ ತುಳಿತದ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಬಂಡೆದ್ದವರು. ಇಂತಹ ನಾಯಕರಾದ ಇವರು ಸಾಂಸ್ಕೃತಿಕ ನಾಯಕರಾಗಿ ಮೈಸೂರು, ಕೊಳ್ಳೆಗಾಲ ಚಾಮರಾಜನಗರ ಭಾಗಗಳಲ್ಲಿ ಮಂಟೇಸ್ವಾಮಿ, ಮಾದೆಮಾದೇಶ್ವರರು ಆರಾಧ್ಯ ದೈವವಾಗಿ ಅಲ್ಲಿನ ಜನಮನದಲ್ಲಿ ಜನಪ್ರಿಯರಾಗಿದ್ದಾರೆ. ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಮಧ್ಯಕರ್ನಾಟಕದಲ್ಲಿ ಆರಾಧ್ಯ ದೈವವಾಗಿ ಕಾಣಿಸಿಕೊಂಡಿದ್ದಾರೆ. ಆದರೆ ಇವರೆಲ್ಲ ಚರಿತ್ರೆಯಲ್ಲಿಯು ಗುರುತಿಸಲ್ಪಡುತ್ತಾರೆ. ಇದೇ ತತ್ವಸಿದ್ಧಾಂತ ನೀತಿಯನ್ನು ಅಳವಡಿಸಿಕೊಂಡ ಮರುಳಸಿದ್ಧರು ಕರ್ನಾಟಕದ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ತುಮಕೂರು, ಹಾಸನ ಮೊದಲಾದ ಜಿಲ್ಲೆಗಳಲ್ಲಿ ಸಾಧು ಲಿಂಗಾಯಿತ ಸಮುದಾಯದ ಜನಾಂಗವು ಮರುಳಸಿದ್ಧರನ್ನು ಕುಲದೈವ, ಮನೆದೇವರು ಎಂದು ಆರಾಧಿಸುವ ಭಕ್ತರು ಹೆಚ್ಚಿದ್ದಾರೆ. ಉಜ್ಜಯಿನಿ (ಬಳ್ಳಾರಿ ಜಿಲ್ಲೆ) ಇಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿದೆ. ಹೀಗೆ ವೀರಶೈವ ಪರಂಪರೆಯಲ್ಲಿ ಮರುಳಸಿದ್ಧರು ಆರಾಧ್ಯ ದೈವವಾಗಿ ಜನಪ್ರಿಯವಾಗಿದ್ದು, ಬಳ್ಳಾರಿ, ಚಿತ್ರದುರ್ಗ, ದಾವಣಗೆರೆ,

ಶಿವಮೊಗ್ಗ, ತುಮಕೂರು, ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಅವರ ಸ್ಮಾರಕಗಳು ಕಾಣಸಿಗುತ್ತವೆ. ಈ ಭಾಗದ ಜನರು ಮರುಳಸಿದ್ಧರ ಆರಾಧ್ಯದೈವ ಜಾತ್ರೆ ಉತ್ಸವಗಳು ಜನಪ್ರಿಯವಾಗಿವೆ.

ಒಟ್ಟಿನಲ್ಲಿ ಈ ನಮ್ಮ ಅಧ್ಯಯನವು 'ಕರ್ನಾಟಕದಲ್ಲಿ ಮರುಳಸಿದ್ಧರ ನೆಲೆಗಳು ಮತ್ತು ಸ್ಮಾರಕಗಳು', ಚಾರಿತ್ರಿಕ ಅಧ್ಯಯನ. ಈ ಅಧ್ಯಯನದಲ್ಲಿ ಮುಖ್ಯವಾಗಿ ಕರ್ನಾಟಕದಲ್ಲಿ ಶಿವಶರಣರ ಪರಂಪರೆಯಲ್ಲಿ ಗುರುತಿಸಲ್ಪಡುವ ಶರಣರಾದ 'ಮರುಳಸಿದ್ಧರು' ಇವರ ಜೀವನ ಸಾಧನೆ ವ್ಯಕ್ತಿತ್ವ ಹಲವು ವಿಚಾರಗಳು. ಚಾರಿತ್ರಿಕವಾಗಿ ಗುರುತಿಸಲ್ಪಟ್ಟಿಲ್ಲ. ಆದ್ದರಿಂದ ಇಂತಹ ಚರಿತ್ರೆಗಳ ಸ್ಪಷ್ಟ ರೂಪವನ್ನು ಇಂದಿನ ಜಾಗತಿಕ ವಿದ್ಯಮಾನಗಳು ಸಮಕಾಲೀನ ಸಂದರ್ಭಗಳು ಹಾಗೂ ಸಾಂಸ್ಕೃತಿಕ ಮತ್ತು ಚಾರಿತ್ರಿಕ ವಿಷಯಗಳನ್ನು ಸವಾಲಾಗಿ ಸ್ವೀಕರಿಸಲು ನಿರ್ಧರಿಸಿರುವ ಈ ಹೊಸ ಶತಮಾನದಲ್ಲಿ ಈ ಅಧ್ಯಯನದ ವಸ್ತು ಸ್ಥಿತಿಯನ್ನು ಈಗಿನ ವಾಸ್ತವಿಕ ನೆಲೆಗಟ್ಟಿನಲ್ಲಿ ನಿರೂಪಿಸುವಾಗ ಮಾದಿಗರ ಹೊಟ್ಟೆಯಲ್ಲಿ ಹುಟ್ಟಿ, ಒಕ್ಕಲಿಗರ ಆಶ್ರಯದಲ್ಲಿ ಬೆಳೆದು, ಆಧ್ಯಾತ್ಮದ ಕ್ಷೇತ್ರದಲ್ಲಿ ಸಾಗಿ, ಅಸಮಾನತೆಯ ವಿರುದ್ಧ ಬಂಡೆದ್ದ ಮರುಳಸಿದ್ಧ, ಇಂದಿಗೂ ಪ್ರಸ್ತುತನಾಗುತ್ತಾನೆ. ಆತನ ನಿಷ್ಠೆ, ಸಾಧನೆ, ಆಲೋಚನೆ, ಹೋರಾಟ ಮನೋಭಾವ, ಸಂಘಟನೆ ಇವೆಲ್ಲ ಇಂದಿನ ಹೋರಾಟಗಾರರಿಗೆ ಸ್ಫೂರ್ತಿದಾಯಕವಾಗಬಲ್ಲವುಗಳಾಗಿವೆ.

ಅನುಬಂಧಗಳು

- ಶಾಸನಗಳ ಸೂಚಿ
- ಶ್ರೀ ಮರುಳಚರಿತ್ರೆ ನೆರಳಚ್ಚು ಪ್ರತಿ
- ದೇವಕವಿ ಕೃತ 'ಮರುಳಸಿದ್ಧ ಚರಿತೆ'ಯ ಎರಡು ಗರಿಗಳ ಛಾಯಾಚಿತ್ರ,
- ತರಳಬಾಳು ಸಂಸ್ಥಾನ ಮಠದ ಗುರುವರ್ಗದ ಪಟ್ಟವಲ್ಲರಿ,
- ತರಳಬಾಳು ಸಂಸ್ಥಾನ ಮಠದ ಗುರುವರ್ಗದ ಪಟ್ಟವಲ್ಲರಿಯ ಛಾಯಾಚಿತ್ರ
  ಹಳೆಯ ದಾಖಲೆಯ ನಕಲು ಪ್ರತಿ
- ಜನಪದ ಹಾಡುಗಳು
- ವಕ್ತೃಗಳು

ಅನುಬಂಧ-೧

೧. ಶಾಸನಸೂಚಿ

❖ **ಶಾಸನ ಸಂಖ್ಯೆ-೧**

ದೊರೆತ ಊರು : ಉಜ್ಜಿನಿ, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.

ದೊರೆತ ಸ್ಥಳ : ಸಿದ್ಧೇಶ್ವರ ದೇವಾಲಯದ ಗರ್ಭಗುಡಿಯ ಬಲಕಂಬದ ಮೇಲಿರುವ ಶಾಸನ

ಸಾಮ್ರಾಟ : ಯಾದವ ಅರಸರ ಮಹಾದೇವ

ಕಾಲ : ತ್ರುಟಿತಯಾದವ ಅರಸು ಮಹಾದೇವನ ೧೦ನೆಯ ವರ್ಷದ ...... ಜೇಷ್ಠ ಬ ೧೦ ಸೋಮವಾರದಂದು ಮಲ್ಲಿನಾಥದೇವರ ನಂದಾದೀವಿಗೆಗೆ ದಾನ ನೀಡಿದ ಉಲ್ಲೇಖವಿದೆ.

ಆಧಾರ : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ನಂ.೭

❖ **ಶಾಸನ ಸಂಖ್ಯೆ -೨**

ದೊರೆತ ಊರು : ಉಚ್ಚಂಗಿದುರ್ಗ, ದಾವಣಗೆರೆ ತಾಲೂಕು, ದಾವಣಗೆರೆ ಜಿಲ್ಲೆ.

ದೊರೆತ ಸ್ಥಳ : ಆಂಜನೇಯ, ದೇವಾಲಯದ ಬಳಿ ನಿಲ್ಲಿಸಿರುವ ಶಾಸನ.

ಸಾಮ್ರಾಟ : ನೊಳಂಬರಾಜನಾದ ನೊಳಂಬಪಲ್ಲವ ಪೆರ್ಮಾಡಿದೇವ.

ಕಾಲ : ಕ್ರಿ.ಶ.೧೦೭೦ ಜುಲೈ ೧೦ ಶನಿವಾರ

ಆಧಾರ : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಪು.೪೬೯.

❖ **ಶಾಸನ ಸಂಖ್ಯೆ-೩**

ದೊರೆತ ಊರು : ಕೂಡ್ಲಿಗಿ ತಾಲೂಕು ಕೇಂದ್ರ, ಬಳ್ಳಾರಿ ಜಿಲ್ಲೆ.

ದೊರೆತ ಸ್ಥಳ : ಕಲ್ಲೇಶ್ವರ ದೇವಸ್ಥಾನ

ಸಾಮ್ರಾಟ : ಕಲ್ಯಾಣ ಚಾಲುಕ್ಯ ಅರಸ ೬ನೇ ವಿಕ್ರಮಾದಿತ್ಯ

ಕಾಲ : ಕ್ರಿ.ಶ.೧೦೮೧-೮೨.

ಆಧಾರ : ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ಮೂರು, (೧೯೮೬), ಪು.೪೮೬.

❖ **ಶಾಸನ ಸಂಖ್ಯೆ-೪**

ದೊರೆತ ಊರು : ಕೂಡ್ಲಿಗಿ ತಾಲೂಕು ಕೇಂದ್ರ, ಬಳ್ಳಾರಿ ಜಿಲ್ಲೆ

ದೊರೆತ ಸ್ಥಳ : ಕಲ್ಲೇಶ್ವರ ದೇವಾಲಯ

ಸಾಮ್ರಾಟ : ಕಲ್ಯಾಣ ಚಾಲುಕ್ಯ ಅರಸ ೬ನೇ ವಿಕ್ರಮಾದಿತ್ಯ

ಕಾಲ : ಕ್ರಿ.ಶ.೧೧೧೦೫-೧೧೧೦೬.

ಆಧಾರ : ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ ಮೂರು (೧೯೮೬) ಪು.೪೮೬.

❖ **ಶಾಸನ ಸಂಖ್ಯೆ-೫**

ದೊರೆತ ಊರು : ಉಚ್ಚಂಗಿದುರ್ಗ, ದಾವಣಗೆರೆ ತಾಲೂಕು, ದಾವಣಗೆರೆ ಜಿಲ್ಲೆ

ದೊರೆತ ಸ್ಥಳ : ಬಡಗೇರಮಟ್ಟಿ ದಿಣ್ಣೆಯಲ್ಲಿರುವ ಶಾಸನ

ಸಾಮ್ರಾಟ : ವಿಜಯ ಪಾಂಡ್ಯದೇವ, ನೊಳಂಬವಾಡಿ ನಾಡನ್ನು ಉಚ್ಚಂಗಿದುರ್ಗವನ್ನು ಆಳುತ್ತಿದ್ದಾಗ

ಕಾಲ : ಕ್ರಿ.ಶ.೧೧೬೫ ಜೂನ್ ೨೫ ಪೂರ್ಣಿಮ ಚಂದ್ರಗ್ರಹಣದ ದಿನ

ಆಧಾರ : ಕನ್ನಡ ವಿಶ್ವ ವಿದ್ಯಾಲಯ ಶಾಸನ ಸಂಪುಟ-೧, ಪು.೪೭೦.

❖ **ಶಾಸನ ಸಂಖ್ಯೆ-೬**

ದೊರೆತ ಊರು : ಸಿರಿವಾಳ, ರೇವಣಸಿದ್ಧ, ಶಾಂತಮಯ್ಯರ ವಿಚಾರ ತಿಳಿಸುತ್ತದೆ.

ಕಾಲ : ಕ್ರಿ.ಶ.೧೧೮೭

ಆಧಾರ : ಶಾಸನಗಳಲ್ಲಿ ಶಿವಶರಣರು, (೧೯೭೦), ಪು.೪೫-೪೬

❖ **ಶಾಸನ ಸಂಖ್ಯೆ-೭**

ದೊರೆತ ಊರು : ಅವ್ವೆಯರಹಳ್ಳಿ, ಬೆಂಗಳೂರು ಜಿಲ್ಲೆ

ದೊರೆತ ಸ್ಥಳ : ಭೀಮೇಶ್ವರ ದೇವಾಲಯ.

ರೇವಣಸಿದ್ಧ ಮರುಳಸಿದ್ಧ ಮತ್ತು ಪವಾಡ ಎಂಬ ಪದಗಳು ಗಮನಿಸಬೇಕು

ಕಾಲ : ಕ್ರಿ.ಶ.೧೧೯೩

ಆಧಾರ : ಶಾಸನಗಳಲ್ಲಿ ಶಿವಶರಣರು, (೧೯೭೦), ಪು.೪೭

❖ **ಶಾಸನ ಸಂಖ್ಯೆ-೮**

ದೊರೆತ ಊರು : ಉಜ್ಜಿನಿ ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ

ದೊರೆತ ಸ್ಥಳ : ಸಿದ್ದೇಶ್ವರ, ದೇವಾಲಯದ ಪೌಳಿಯಲ್ಲಿರುವ ಶಾಸನ

ಸಾಮ್ರಾಟ : ಜಗದ್ದಳಪಾಂಡ್ಯದೇವನ ಪ್ರಶಸ್ತಿ

ಕಾಲ : ಕ್ರಿ.ಶ.೧೨ನೇ ಶತಮಾನ


ಆಧಾರ : ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧-ನಂ.೬

ಸನ್ ೧೯೧೯ನೇ ಇಸ್ವಿ ಜನವರಿ ತಾ|| ೩೧ ನೆಯ್ಯ ಸರಿಯಾದ ಕಾ
ಳಯುಕ್ತನಾಮ ಸಂವತ್ಸರದ ಪುಷ್ಯ ಬಹುಳ ೮ ರಲ್ಲಿ ದಾ
ವಣಗೆರೆ ತಾಲ್ಲೂಕು ಆನಗೋಡು ಹೋಬಳಿ ಸಿದ್ಧನೂರು ಗ್ರಾ
ಮದಲ್ಲಿರುವ ದೊಡ್ಡೀರಪ್ಪ ಗಂಗಪ್ಪನ ಮಗ ಸಿದ್ದಪ್ಪನು ಬ
ರವಣಿಗೆಯಿಂದ ಮರುಳ ಚರಿತ್ರೆಯನ್ನು ಬರಿಯುವದಕ್ಕೆ ಶು
ಭಮಸ್ತು ಶೋಭನಮಸ್ತು ಸಿದ್ಧಿರಸ್ತು ॥ ॥ ॥ ॥

ಪದನು || ಸೂಚನೆ || ಸಾಂಗತ್ಯ ||

ಶ್ರೀ ಗಿರಿಜಾರಮಣವರ | ಶ್ರೀ ಭಾನುಶಶಿಧರ | ಶ್ರೀ ಗಣನಾಥನ
ಪಿತನೇ || ಶ್ರೀ ಗೌರೀರಮಣನೆ | ಶ್ರೀ ಗುಹಸ್ತೋತ್ರಯ್ಯನೆ |
ಶ್ರೀ ಗುರುಸಿದ್ಧನೆ ಜಯತು || ೧ || ಎಂದು ರಚಿಸುವದುಸ್ತಾ
ರಾನುಗ್ರಹ ದಿವ್ಯಾನೆ | ಕರಿದೈತ್ಯನನು ಕೊಂದವನೇ
|| ೧ || ರುದ್ರಾಕ್ಷಿ ಕಾಯನಾಗೆ ಧಾತ್ರಿಯ ಧಾರೆಯು | ನರದ
ದೇವನೆ ಜಯ ಜಯ ಜಯತೂ || ೨ || ತ್ರಿಪುರದಹನದಿಂದು
ದಕ್ಷನ ಗರ್ವ ಭಂಗದು | ಪುಷ್ಪಬಾಣನ ದಹಿಸಿದಂದೂ ||
ಈ ಪರಿಯ ಚರಿತ್ರೆಯಾಂಗುಲಿ ಭಾಸಿರವಿಟ್ಟು | ಕಾಪಾಲ
ಧರ ಕೊಡು ಮತಿಯೋ || ೩ || ಜಗದ ಗುಪ್ತದ ರಾಜನೆಂಬಾ
ನ ಗಹ್ವಾನದ | ವಿಗಡ ವೀರಭದ್ರ ಬಿಟ್ಟು ಜನಿಸಿ || ಜಗತೇರಾ
ಎಂದು ದಂಡ ರಾಜನ ಧೀರನ ದಾನಂಗೆ ಒಲಿದ ಸಾವನರಿ ಕೊ
ಡು ಮರಿಯೋ || ೪ || ಶಂಭು ಪುತ್ರನಾಗ ...

ದೇವಕವಿ ಕೃತ ಮರುಳಸಿದ್ಧ ಚರಿತೆಯ ಎರಡು ಗರಿಗಳ ಛಾಯಾಚಿತ್ರ
ಕೃಪೆ: ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ



ಅನುಬಂಧ–೪

<u>ತರಳಬಾಳು ಪಟ್ಟವಲ್ಲರಿ</u>


ವಿಶ್ವಬಂಧು ಮರುಳಸಿದ್ಧರು ಉಜ್ಜಯಿನಿಯಲ್ಲಿ ಸದ್ಧರ್ಮ ಪೀಠವನ್ನು ಸ್ಥಾಪಿಸಿ ಅದರ ಮೇಲೆ ತನ್ನ ಉತ್ತರಾಧಿಕಾರಿಯನ್ನಾಗಿ ತೆಲಗುಬಾಳು ಸಿದ್ಧಯ್ಯನನ್ನು ಕುಳ್ಳಿರಿಸಿ, ಮಾಘಶುದ್ಧ ಹುಣ್ಣಿಮೆಯಂದು 'ತರಳ, ಬಾಳು' ಎಂದು ಹರಸಿ, ಬಯಲಾದನು. ತೆಲುಗುಬಾಳು ಸಿದ್ಧಯ್ಯನು 'ತರಳಬಾಳು ಸಿದ್ಧೇಶ್ವರ'ನೆಂಬ ಅಭಿದಾನದಿಂದ ತನ್ನ ಗುರುವಿನ 'ತರಳ, ಬಾಳು' ಎಂಬ ಆಶೀರ್ವಚನ–ಪಂಚಾಕ್ಷರಿಯನ್ನು ಶಿರದಲಾಂತು, ವಿಶ್ವದ ತರಳರೆಲ್ಲರು (ಇಲ್ಲಿ ತರಳರೆಂದರೆ ಸಾಮಾನ್ಯ ಮಾನವರು) ಬಾಳನ್ನು ಬೆಳಗಿಸಲು ಗುರು ಮರುಳಸಿದ್ಧರ ಧಾರ್ಮಿಕ ಸ್ವಾತಂತ್ರ್ಯ ಮತ್ತು ಸಮಾನತೆಗಳನ್ನು ಪ್ರಸಾರ ಮಾಡುತ್ತಾ ತನ್ನ ತರುವಾಯ ಗಡ್ಡದ ಸಿದ್ಧಲಿಂಗದೇವರಿಗೆ ಅಧಿಕಾರ ವಹಿಸಿ ಬಯಲನ್ನೈದಿದನು ಈತನ ಬಳಿವಿಡಿದು ಉಜ್ಜಯಿನಿಯಲ್ಲಿ ತರಳಬಾಳು ಗುರುಪರಂಪರೆಯು ಈ ಮುಂದೆ ನಮೂದಿಸಿರುವಂತೆ ಬೆಳೆದು ಬಂದಿದೆ.

- ವಿಶ್ವಬಂಧು ಮರುಳಸಿದ್ಧ
- ತರಳಬಾಳು ಸಿದ್ಧೇಶ್ವರ
- ಗಡ್ಡದ ಸಿದ್ಧಲಿಂಗದೇವರು
- ಕೆಂಪಪ್ಪ ದೇವರು
- ಚನ್ನಬಸವ ದೇವರು
- ಗುರುಸಿದ್ಧ ದೇವರು
- ಶಿವಲಿಂಗ ದೇವರು
- ಗುರುಬಸವ ದೇವರು
- ಕರಿಸಿದ್ಧ ದೇವರು
- ಶಾಂತವೀರ ದೇವರು
- ಕರಿಸಿದ್ಧ ದೇವರು
- ಜಂಬಪ್ಪ ದೇವರು (ನಂತರ ಸಿರಿಗೆರೆಯಲ್ಲಿ)
- ಗುರುಸಿದ್ಧ ದೇವರು
- ಸಿದ್ಧಲಿಂಗ ದೇವರು

- ಗುರುಸಿದ್ಧ ದೇವರು
- ಶಿವಲಿಂಗ ದೇವರ

- ಗುರುಸಿದ್ಧ ದೇವರು
- ಶಿವಲಿಂಗ ದೇವರು
- ಗುರುಶಾಂತ ದೇವರು
- ಶಿವಕುಮಾರ ಶಿವಾಚಾರ್ಯರು
- ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ದಿನಾಂಕ : ೧೧-೦೨-೧೯೭೯ ರಂದು ಪಟ್ಟಾಭಿಷಕ್ತರಾಗಿ ಪ್ರಸ್ತುತ ಪೀಠಸ್ಥರಾಗಿರುವರು.

ತರಳಬಾಳು ಪಟ್ಟವಲ್ಲರಿಯ ಹಳೆಯ ದಾಖಲೆ ಕಾಲ ಕ್ರಿ.ಶ. 1800
ನಕಲು ಛಾಯಾಚಿತ್ರ ಪ್ರತಿ. ಕೃಪೆ: ದಿಟ್ಟಹೆಜ್ಜೆ-ದೀರಕ್ರಮ



ಅನುಬಂಧ-೬

PROCEEDINGS OF THE GOVERNMENT OF KARNATAKA

Sub : Installation of successor to Sri Swamiji of Sreemadhujjani Sadharma Simhasanadeesha Sreemathpalkurike-Sirigere Sree Taralabalu Jagadguru, Bruhanmath, Sirigere, Chitradurga Taluk.

Order No.RD.173 MET 76 Bangalore Dated the 2nd May 1977.

ORDER

Government after considering all aspects of the matter are pleased to recognise the installation of Sri Taralabalu Shivamurthy as successor Sri Taralabalu Jagadguru Sri 1108 Shivakumara Shivacharya Swamiji of Sreemadhujjini Sadharma Simhasanadeesha Sreemath Palkurike-Sirigere, Sree Taralabalu Jagadguru Bruhanmath, Sirigere, Chitradurga Taluk.

By order and in the name of the
Government of Karnataka

Sd/-
(N.V.Doraswamy)
Under Secretary to Government
Revenue Department

೧೯೧೮ರಲ್ಲಿ ಉಜ್ಜಯಿನಿಯಲ್ಲಿದ್ದ ಚರಪಟ್ಟದ ಸಿದ್ಧಲಿಂಗ ಸ್ವಾಮಿಗಳು, 'ಸಿರಿಗೆರೆಯ ಗುರುಶಾಂತಸ್ವಾಮಿಗಳು ಶ್ರೀಮದುಜ್ಜಯಿನಿ ಸದ್ಧರ್ಮ ಸಿಂಹಾನಾದೀಶ ಜಗದ್ಗುರು' ಎಂದು ಬರೆದುಕೊಳ್ಳಕೂಡದು ಎಂದು ಬಳ್ಳಾರಿ ಸಿವಿಲ್ ಜಡ್ಜ್ ಕೋರ್ಟಿನಲ್ಲಿ ಅರ್ಜಿಯಿಟ್ಟಿದ್ದರು. ಸದರಿ ಸಿವಿಲ್ ಜಡ್ಜ್‌ರವರು ಉಜ್ಜಯಿನಿ ಸಿದ್ದಲಿಣಗ ಸ್ವಾಮಿಗಳ ಅರ್ಜಿಯನ್ನು ತಿರಸ್ಕರಿಸಿ ನಮಗೆ ೧೫೦/- ರೂ. ೮ ಆಣೆ ಕೋರ್ಟು ಖರ್ಚನ್ನು ಅವರಿಂದ ಕೊಡಿಸಿದರು. ಕೋರ್ಟಿನ ಆದೇಶದ ಪ್ರತಿಯನ್ನು ಮುಂದಿನ ಪುಟದಲ್ಲಿ ಪ್ರಕಟಿಸಲಾಗಿದೆ.

ಅನುಬಂಧ-೭

IN THE COURT OF THE DISTRICT JUDGE OF BELLARY

Present : H.R.Bardswell Ewquire, M.A.,

District Judge, Saturday the 7th day of September 1918

BETWEEN

Srimath Ujjini Saddharma Simhasanadeswara Charapattadhyaksha Siddalingaraja Desikendra Mahaswamulu, Successor of Siddalinga Swamalu, aged 25, Lingayet Guru residing at Ujjini, Kudligi Taluk.

Plaintiff

AND

Taralabalu Gurushanthappa alias Gurushantha Swami son of Shivalinga Swamy, aged 23 years, Sada Lingayet, Cultivator, residing at Sirigere, Chitradurga taluk, Mysore province now at Bennihalli, Harapanahalli Taluk.

Defendant

Suit for permanent injunction restraining the defendant from using the name "Srimath Ujjini Saddharma Simhasana Pattadhyaksha" and also from using the insignia mentioned in the plaint schedule and for Rs.3,000/- as damages Value of the claim is Rs.3,100/- Cause of action arose in May and June 1918. the suit was filed on 04.07.1918.

DECREE

This suit coming on for final hearing on the 6th day of September 1918 in the presence of Mr. N.C.Grant, Counsel for the plaintiff and of Mr. T.Sankarlingama Pillai Vakil for the defendant and having stood over to this day for consideration, this court doth order and decree that the plaintiff's suit be and the same hereby is dismissed. This court doth further order for his costs in this suit.

	Cost of Suit Plaintiff's cost	Defendant's Costs
Stamp on plaint do on power	180.00	-

Vakil's fee	-	0-8-0
	Not certified	155-0-0
120 (not legible)	180-0-0	155-8-0

Given under my hand and the seal of the court this 7th day of September 1918.

Cor 1
Total 1
Sd/- V.Narasimhachar
(Not legible)

Sd. E.P.WALSH
for H.R.Bardswell
District Judge

Sd. For Superintendent

ಅನುಬಂಧ–೮

ಮರುಳಸಿದ್ಧೇಶ್ವರರ ಜೀವನದ ಸನ್ನಿವೇಶಗಳನ್ನು ಸ್ಮರಿಸಿರುವ ಭಕ್ತಿ ಪ್ರಧಾನವಾದ ಜನಪದ ಹಾಡು

ಮರುಳಸಿದ್ಧೇಶ ಪರಮಪ್ರಕಾಶ । ಮರುಳಸಿದ್ಧೇಶ ಪರಮಪ್ರಕಾಶ ॥ಪ॥
ಪೊರೆಯು ನಿರಂತರ ನಿಗಮಗೋಚರನೆ । ಪೊರೆಯುನಿರಂತರ ನಿಗಮ ಗೋಚರನೆ
ಮರುಳಸಿದ್ಧೇಶ ಪರಮಪ್ರಕಾಶ ।

ವರಗಿರಿ ಶೈವ ಗುರು ಸಾರ್ವಬೌಮ ಶರಣ ಸುಪ್ರಭೆಯ
ಉದರದಿ ಜನಿಸಿದೆ ಧರೆಯಾಳು ಕಗ್ಗಲ್ಲು ಪುರದೊಳು ಮೆರೆದೆ
ಮರುಳಸಿದ್ಧೇಸ ಪರಮ ಪ್ರಕಾಶ ।

ಕೈಲಾಸದಿ ಶಿವನಾಜ್ಞಾಯನ್ನೊಂದು ಕಾಲಕಂದರ ಮತವು । ಇಳೆಯಾಳು ಬೆಳೆಸಿದೆ.
ಮರುಳಸಿದ್ಧೇಶ ಪರಮಪ್ರಕಾಶ ॥
ಪರಿ ಪರಿ ಲೀಲೆಯಿಂದ ಚರಿಸುತೆ ಜಗದಿ
ಶರಣಗತ ಜನರಕ್ಷಕ ನಾದೆ
ಮರುಳಸಿದ್ಧೇಶ ಪರಮ ಪ್ರಕಾಶ॥

ಕೊಲ್ಲೂರು ರಸಿಯ ಮೊಲೆ ಮೂಗನರಿದು ಲೀಲೆಯಿಂದ
ಭಕ್ತರ ಸೆರೆಯನು ಬಿಡಿಸಿದೆ
ಮರುಳಸಿದ್ಧೇಶ ಪರಮಪ್ರಕಾಶ॥
ಮಾಯಿಕೋಲಾಹರ ಮಾಯಿಮಸ್ತಕ ಶೂಲ।
ಮಾಯಿ ಮರ್ಧನ ಗುರುವೆನಿಸಿ ಮೆರೆದೆ।
ಮರುಳಸಿದ್ಧೇಶ ಪರಮಪ್ರಕಾಶ॥
ಬಾಲಸಿದ್ಧೇಶಗೆ ತರಳಬಾಳು ಎನ್ನುತ । ಬಾಲಸಿದ್ಧೇಶಗೆ
ತರಳಬಾಳು ಎನ್ನುತ ।
ವರವಿಂಪೀಠದಿ ಮೂರು ಮುದ್ರೆಗಳಿಟ್ಟೆ
ಮರುಳಸಿದ್ಧೇಶ ಪರಮಪ್ರಕಾಶ॥
ಕಗ್ಗಲ್ಲುಸೂತ್ರದಿ ತರಳಬಾಳು ಪಟ್ಟವು ಉಜ್ಜನಿ
ಪೀಠಕ್ಕೆ, ಸ್ಥಿರವೆಂದು ಹರಿಸದೆ
ಮರುಳಸಿದ್ಧೇಶ ಪರಮಪ್ರಕಾಶ ॥
ತರಳಬಾಳು ವಂಶಕ್ಕೆ ತರಳಬಾಳು ಪೀಠಕ್ಕೆ
ತರಳಬಾಳು ವಂಶಕ್ಕೆ ತರಳಬಾಳು ಪೀಠಕ್ಕೆ
ವಿಜಯವಾಗಲಿ ನಿನ್ನ ದಯದಿಂದ ಜಗದೊಳು
ವಿಜಯವಾಗಲಿ ನಿನ್ನ ದಯದಿಂದ ಜಗದೊಳು
ಮರುಳಸಿದ್ಧೇಶ ಪರಮಪ್ರಕಾಶ । ಮರುಳಸಿದ್ಧೇಶ ಪರಮಪ್ರಕಾಶ॥

ಹಾಡಿದವರು
ಉತ್ತಂಗಿ ಗುರುಶಾಂತಯ್ಯ, ವಯಸ್ಸು ೬೭
ಆನಗೋಡು ಗ್ರಾಮ, ದಾವಣಗೆರೆ ತಾ॥
ದಿನಾಂಕ : ೧೯–೦೫–೨೦೦೭ರಂದು ಧ್ವನಿ ಸಂಗ್ರಹಿಸಲಾಗಿದೆ.

ಅನುಬಂಧ-೯

ಮರುಳಸಿದ್ಧೇಶ್ವರ ಮತ್ತು ರೇವಣಸಿದ್ಧೇಶ್ವರ ಕುರಿತು ಹಾಡುವ ಸೊಬಾನದ ಜನಪದ ಹಾಡು
ಬಾಳೊಳ್ಳಿ ಸ್ವಾಮಿ ಭಗತರನೇ ಭಗತರೆಂದಾ ಸಿಂಹಾಸನನೇ॥ಪ॥
ಹೊನ್ನ ಹೂವಿನ ಗದ್ದಿಗೆಯೇ ಹೊನ್ನ ಹೂವಿನ ಗದ್ದಿಗೆಯ ಮೇಲೆ
ರೇಣುಕ ಸ್ವಾಮಿ ಕುಳಿತರಲಿ ಮುತ್ತಿನ ಆರುತಿ ಬೆಳುಗುವೇನು।
ಲೋಕ ಲೋಕಂಪರ ಪರಂಜ್ಯೋತಿ ಪ್ರಜೆಯೊಳಗೆ ನಾ ಬೆಳುಗುವೇನು॥
ಕಾಳಿಕದಡಿ ಹೋರಾಡುತಲಿ ಹರನೇ ಶಿವನೇ ನೋಡುತಲಿ।
ಹೊನ್ನ ಹೂವಿನ ಗದ್ದಿಗೇಯೋ ಹೊನ್ನ ಹೂವಿನ ಗದ್ದಿಗೆ ಮೇಲೆ
ರೇಣುಕ ಸ್ವಾಮಿ ಕುಳಿತಿರಲು ಹವಳದ ಆರತಿ ಬೆಳಗುವೇನು॥
ಕಂಕಣ ಕಸ್ತೂರಿ ಎಂಥರಿಗುಂಟು ಕಾಂತಿಯೊಳಗೆ ಸಿಂಹಾಸನನೆ
ಶಂಕರಲಿಂಗನ ಲಘ್ನವೇ ತಾವರೆ ಹೂವಿನ ಗದ್ದುಗೆಯೇ
ತಾವರೆ ಹೂವಿನ ಗದ್ದಿಗೆ ಮೇಲೆ ಶಂಕರಲಿಂಗನ ಕುಳಿತರಲಿ
ಕುಂಕುಮದ ಆರತಿ ಬೆಳಗುವೇನು॥
ಮೂರು ಲೋಕಕೆ ಮರುಳಸಿದ್ಧ ಲಿಂಗನೇ ಅಧಿಕವಾದೆ
ಮೂರುತಿಗೆ ಚನ್ನಷಡಕ್ಷರಿ ನೋಡುತಲಿ
ಸಂಪಿಗೆ ಹೂವಿನ ಗದ್ದಿಗೆಯೇ ಸಂಪಿಗೆ ಹೂವಿನ ಗದ್ದಿಗೇ ಮೇಲೆ
ರೇಣುಕ ಸ್ವಾಮಿ ಕುಳಿತಿರಲು ನೀಲದ ಆರತಿ ಬೆಳಗುವೇನು॥
ತಾಯಿಯಿದ್ದರೆ ತವರಿಗೆ ಶಾಂತಿ ತಾಯಿಯಿಲ್ಲದ ಹರುಷಲ್ಲ
ಹಾವಿನ ಕೋಟೆ ಸರಸಲ್ಲ ಯಾರ್‍ಯಾರ ಮನದೊಳಗೆ
ಪಾರುಮಾಡಿದ ಬಸವಣ್ಣ
ಹೊನ್ನ ಹೂವಿನ ಗದ್ದಿಗೆಯೋ ಹೊನ್ನ ಹೂವಿನ ಗದ್ದಿಗೆ ಮೇಲೆ
ರೇಣುಕ ಸ್ವಾಮಿ ಕುಳಿತಿರಲಿ ಮಾಣಿಕದ ಆರತಿ ಬೆಳಗುವೆನು॥

ಹಾಡಿದವರು
ಪತ್ರೆಮ್ಮ (ವಯಸ್ಸು ೬೫)
ಬಸಮ್ಮ (ವಯಸ್ಸು ೬೦)
ಮುಚ್ಚನೂರು, ಜಗಳೂರು ತಾ॥
ದಿನಾಂಕ : ೧೦-೦೪-೨೦೦೭ರಂದು ಈ
ಸೊಬಾನ ಜನಪದ ಹಾಡನ್ನು ಸಂಗ್ರಸಲಾಗಿದೆ.

ಅನುಬಂಧ-೧೦

ಈ ಜನಪದ ಹಾಡುಗಾರರು ಸೊಬಾನಪದದಲ್ಲಿ ಮರುಳಸಿದ್ಧರ ಸ್ಮಾರಕ ಸ್ಥಳಗಳನ್ನು ಸ್ಮರಿಸುತ್ತ ಹಾಡುವ ಬಗೆ ಹೀಗೆ ಇದೆ.

ಉಜ್ಜಿನಿ ಸಿದ್ಧಣ್ಣ ಉಳಿಯೋ ನಮ್ಮನಿಯೊಗ
ನೀರೇ ಕಾದವ್ರೊ ಜಳಕಾಕೆ ನೀರೇನೇ ಕಾದವೇ ಸಿದ್ಧಣ್ಣನ ಜಳಕಾಕೆ॥
ಹಾಲಕಾದವೆ ಬೋಜನಕೆ ಹಾಲ ಕಾದವೆ ಬೋಜನಕೆ।
ಮುಚ್ಚನೂರ ಸಿದ್ಧಣ್ಣ ಉಳಿಯೋ ನಮ್ಮನಿಯಾಗ॥
ನೀರೇ ಕಾದವ್ರೂ ಜಳಕಾಕೆ ನೀರೇನೇ ಕಾದವೇ ಸಿದ್ಧಣ್ಣನ ಜಳಕಾಕೆ
ಹಾಲಕಾದವೆ ಬೋಜನಕೆ।
ಆನಗೋಡಸಿದ್ಧಣ್ಣ ಉಳಿಯೋ ನಮ್ಮ ನಿಯಾಗ॥
ನೀರೇ ಕಾದವ್ರೂ ಜಳಕಾಕೆ ನೀರೇನೇ ಕಾದವೇ ಸಿದ್ಧಣ್ಣನ ಜಳಕಾಕೆ
ಸಿದ್ಧನೂರು ಸಿದ್ಧಣ್ಣ ಉಳಿಯೋ ನಮ್ಮ ನಿಯಾಗ।
ನೀರೇ ಕಾದವ್ರೂ ಜಳಕಾಕೆ ನೀರೇನೇ ಕಾದವೇ ಸಿದ್ಧಣ್ಣನ ಜಳಕಾಕೆ
ಹಾಲ ಕಾದವೆ ಬೋಜನಕೆ।
ಬೇತೂರು ಸಿದ್ಧಣ್ಣ ಉಳಿಯೋ ನಮ್ಮ ನಿಯಾಗ॥
ನೀರೆ ಕಾದವ್ರೂ ಜಳಕಾಕೆ ನೀರೇನೇ ಕಾದವೇ ಸಿದ್ಧಣ್ಣನ ಜಳಕಾಕೆ
ಬಾತಿಯ ಸಿದ್ಧಣ್ಣ ಉಳಿಯೋ ನಮ್ಮ ನಿಯಾಗ।
ನೀರೆ ಕಾದವ್ರೂ ಜಳಕಾಕೆ ನೀರೇನೇ ಕಾದವೇ ಸಿದ್ಧಣ್ಣನ ಜಳಕಾಕೆ
ಹಾಲಕಾದವೆ ಬೋಜನಕೆ।
ಕುರುಡಿಯ ಸಿದ್ಧಣ್ಣ ಉಳಿಯೋ ನಮ್ಮ ನಿಯಾಗ॥
ನೀರೇ ಕಾದವ್ರೂ ಜಳಕಾಕೆ ನೀರೇನೇ ಕಾದವೇ ಸಿದ್ಧಣ್ಣನ ಜಳಕಾಕೆ
ಹಾಲ ಕಾದವೆ ಬೋಜನಕೆ ಹಾಲಕಾದವೆ ಬೋಜನಕೆ॥

ಹಾಡಿದವರ ದ್ವನಿ ಸಂಗ್ರಹ :
ಪತ್ರೆಮ್ಮ (ವಯಸ್ಸು : ೬೫)
ಬಸಮ್ಮ (ವಯಸ್ಸು : ೬೦)
ಮುಚ್ಚನೂರು ಜಗಲೂರು ತಾ॥

ದಿನಾಂಕ : ೧೦-೦೪-೨೦೦೭ರಂದು ಈ ಜನಪದ ಹಾಡು ದ್ವನಿ ಸಂಗ್ರಹಿಸಲಾಗಿದೆ.

ಅನುಬಂಧ-೧೧

ವಕ್ತೃಗಳು

ಕ್ರ ಸಂ.	ಹೆಸರು	ಊರು	ವಯಸ್ಸು	ದಿನಾಂಕ
೦೧	ಗೊಂಗಡಿ ವೀರಭದ್ರಯ್ಯ	ಉಜ್ಜಿನಿ	೬೦	೦೬.೦೬.೨೦೦೫
೦೨	ಮರುಳಸಿದ್ಧನಗೌಡ	ಉಜ್ಜಿನಿ	೬೫	೦೯.೦೯.೨೦೦೫
೦೩	ಬಸವರಾಜಪ್ಪ ನಿವೃತ್ತ ಶಿಕ್ಷಕರು	ತೂಲಹಳ್ಳಿ	೬೦	೧೦.೦೯.೨೦೦೫
೦೪	ಮಹೇಶ್ವರಪ್ಪ	ಊರುಲುಕಟ್ಟೆ	೭೦	೧೦.೦೯.೨೦೦೫
೦೫	ಮಂಜಣ್ಣ, ಶಿಕ್ಷಕರು	ಪಲ್ಲಾಗಟ್ಟೆ	೫೦	೧೦.೦೯.೨೦೦೫
೦೬	ಪೂಜಾರ ಹನುಮಂತಪ್ಪ	ಅಸಗೋಡು	೭೦	೧೦.೦೯.೨೦೦೫
೦೭	ಗೌಡ್ರು ಸಂಗಪ್ಪ	ಮುಚ್ಚನೂರು	೭೫	೧೨.೧೨.೨೦೦೫
೦೮	ಗೌಡ್ರು ನ್ವಂಜಪ್ಪ	ಉಳುಪನಕಟ್ಟೆ	೭೦	೧೫.೧೨.೨೦೦೫
೦೯	ವೆಂಕಣ್ಣಚಾರ್	ಆನಗೋಡು	೭೦	೧೫.೧೨.೨೦೦೫
೧೦	ಮಲ್ಲಿಕಾರ್ಜುನ	ಸಿದ್ಧನೂರು	೫೦	೧೫.೧೨.೨೦೦೫
೧೧	ಎ.ಎಂ.ವೀರಯ್ಯ	ಅಣಜಿ	೬೦	೧೬.೧೨.೨೦೦೫
೧೨	ಹುಲ್ಲುಮನೆ ಸಿದ್ದಪ್ಪ	ಹೆಮ್ಮನಬೇತೂರು	೮೦	೧೬.೧೨.೨೦೦೫
೧೩	ಓಂಕಾರಪ್ಪ ನಿವೃತ್ತ ಶಿಕ್ಷಕರು	ಕುರುಡಿ	೭೫	೧೦.೦೧.೨೦೦೬
೧೪	ಮಹೇಶ್ವರಪ್ಪ	ಬೆಳವನೂರು	೭೦	೧೦.೦೫.೨೦೦೭
೧೫	ಮಾಸಣ್ಣನವರ ಅಜ್ಜಪ್ಪ	ಮೂಡೂರು	೯೪	೧೬.೦೮.೨೦೦೭
೧೬	ಎಸ್.ವಿ.ಕುಗ್ಗು	ಅಳವಂಡಿ ಸಂಸ್ಥಾನಮಠ	೬೦	೧೮.೦೮.೨೦೦೭
೧೭	ಮಹಾರುದ್ರಪ್ಪ	ಚಿಲುಕನಹಟ್ಟಿ	೬೦	೨೦.೦೯.೨೦೦೭
೧೮	ಬೂಸಪ್ಪ	ತೆಲಗುಬಾಳು	೬೦	೨೦.೦೯.೨೦೦೭
೧೯	ಈಶ್ವರಶರ್ಮ	ಸಿರಿಗೆರೆ	೬೩	೧೦.೧೦.೨೦೦೭
೨೦	ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು	ಸಾಣೇಹಳ್ಳಿ	೫೦	೨೫.೦೩.೨೦೦೭

(ಇವರು ಮರುಳಸಿದ್ಧರನ್ನು ಕುರಿತು ಕಥೆಗಳ ರೂಪದಲ್ಲಿ ನೀಡಿರುವ ಮಾಹಿತಿಯನ್ನು ಸಂಗ್ರಹಿಸಲಾಗಿದೆ)

ಗ್ರಂಥಋಣ

ಡಾ. ಅಬ್ದುಲ್ ಹಮೀದ್, ೧೯೯೮ ಸೂಫಿಪಥ ಮತ್ತು ಶರಣ ಪಥಗಳ ತೌಲನಿಕ ಅಧ್ಯಯನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು-೪೦.
ಅಮರೇಶ ನುಗಡೋಣಿ (ಸಂ), ೨೦೦೪, ಬಸವಣ್ಣನ ವಚನಗಳು ಸಾಂಸ್ಕೃತಿಕ ಮುಖಾಮುಖಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ, ವಿದ್ಯಾರಣ್ಯ,
ಡಾ.ಕೆ.ಅನಂತರಾಮು, ೧೯೯೧, ಕವಿ ಬ್ರಹ್ಮಶಿವ ಒಂದು ಅಧ್ಯಯನ; ಅನಂತಪ್ರಕಾಶನ, ದೇವಾಂಬಾ ಅಗ್ರಹಾರ ಮೈಸೂರು.
ಪ್ರೊ . ಅರವಿಂದ ಮಾಲಗತ್ತಿ, ೨೦೦೪ , ಜಾನಪದ ಅಭಿಯಾನ, ರಾಜ್ ಪ್ರಕಾಶನ, ಹನುಮಂತನಗರ ಬನ್ನಿಮಂಟಪ, ಮೈಸೂರು.
ಕೂ,ಸ. ಅಪರ್ಣ, ೧೯೯೯, ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ,
ಡಾ. ಎಂ.ಜಿ. ಈಶ್ವರಪ್ಪ (ಸಂ), ೨೦೦೧, ಶತಮಾನದ ದಾವಣಗೆರೆ, ಪ್ರಕಾಶನ ಚಂಪಾಲಾಲ್. ಬಿ.ಡೆಲ್ಪರಿಯಾ ಶ್ರೀಭಗವಾನ್ ಆಧಿನಾಥ ಪ್ರತಿಷ್ಠಾನ (ರಿ) ಶಾಮನೂರು ರಸ್ತೆ, ದಾವಣಗೆರೆ. ೪
ಪ್ರೊ .ಒಡೆಯರ್, ಡಿ. ಹೆಗ್ಗಡೆ, ೨೦೦೫, ಶ್ರೀ ರೇವಣಸಿದ್ಧೇಶ್ವರ ಮತ್ತು ಶ್ರೀ ಬೀರೇಶ್ವರರು, ಅಖಿಲಾ ಏಜನ್ಸೀಸ್ ಅಂಜನಾದ್ರಿ ರೇಣುಚಾರ್ಯ,. ದೇವಸ್ಥಾನದ ರಸ್ತೆ ಲಕ್ಷ್ಮಿ ಟಾಕೀಸ್ ಹಿಂಬಾಗ, ಮೈಸೂರು.
ಮ.ಸು. ಕೃಷ್ಣಮೂರ್ತಿ, ೧೯೮೨, ಸಿದ್ಧಸಾಹಿತ್ಯ, ನಿರ್ದೇಶಕರು ಪ್ರಸಾರಾಂಗ, ಮಾನಸ ಗಂಗೋತ್ರಿ ಮೈಸೂರು.
ಡಾ.ಎಂ.ಎಂ.ಕಲಬುರ್ಗಿ,೧೯೭೭,ಶಾಸನ ಸೂಕ್ತಿ ಸುಧಾರ್ಣವ, ಕರ್ನಾಟಕ ಸಾಹಿತ್ಯ ಅಕಾಡೆಮೆ ನೃಪತುಂಗ ರಸ್ತೆ, ಬೆಂಗಳೂರು-೨
ಡಾ.ಎಂ.ಎಂ.ಕಲಬುರ್ಗಿ,೧೯೭೦, ಶಾಸನಗಳಲ್ಲಿ ಶಿವಶರಣರು, ಸಿರಿಗನ್ನಡ ಪ್ರಕಾಶನ, ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ-೩
ಡಾ.ಎಂ.ಎಂ. ಕಲಬುರ್ಗಿ, (ಸಂ), ೧೯೭೫ , ಧಾರವಾಡ ಜಿಲ್ಲೆಯ ಶಾಸನ ಸೂಚಿ, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.
ಡಾ.ಎಂ.ಎಂ. ಕಲಬುರ್ಗಿ, ೧೯೯೮, ಮಾರ್ಗ ಸಂಪುಟ ಮೂರು ಸಂಶೋಧನ ಪ್ರಬಂಧಗಳ ಸಂಕಲನ, ಕರ್ನಾಟಕ ಬುಕ್ ಏಜನ್ಸಿ, ತುಂಗಾ ಕಾಂಪ್ಲೆಕ್ಸ್ ಗಾಂಧಿನಗರ, ಬೆಂಗಳೂರು.

ಡಾ.ಎಂ.ಎಂ. ಕಲಬುರ್ಗಿ, ೨೦೦೪, ಮಾರ್ಗ ಸಂಪುಟ ನಾಲ್ಕು ಸಂಶೋಧನ ಪ್ರಬಂಧಗಳ ಸಂಕಲನ, ಸಪ್ನ ಬುಕ್ ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು

ಡಾ.ಎಂ.ಎಂ. ಕಲಬುರ್ಗಿ, ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಅ.ನ. ಕೃಷ್ಟರಾಯ (ಸಂ), ದೇವಕವಿಯ ಮರುಳಸಿದ್ಧ ಕಾವ್ಯ, ವಿಶ್ವವಾಣಿ ಪ್ರಕಾಟನ, ಮಂದಿರ ಅನ್ನಪೂರ್ಣ ವಿಶ್ವೇಶ್ವರಪುರಂ, ಬೆಂಗಳೂರು.

ಡಿ.ಡಿ.ಕೂಸಾಂಬಿ, ೨೦೦೩, ಪುರಾಣ ಮತ್ತು ವಾಸ್ತವ, (ಅನು.ಟಿ.ಎಸ್.ವೇಣುಗೋಪಾಲ್, ಶೈಲಜಾ) ಚಿಂತನಾ ಪ್ರಕಾಶನ, ಹಳೆ ಬಸ್ ಸ್ಟ್ಯಾಂಡ್ ಹತ್ತಿರ ಶಿರಸಿ, ಉತ್ತರಕನ್ನಡ ಜಿಲ್ಲೆ.

ಡಾ. ಗುರುಲಿಂಗ ಕಾಪಸೆ(ಸಂ), ೧೯೯೯, ಶರಣ ಕಿರಣ, ನಾಗನೂರು ರುದ್ರಾಕ್ಷಿ ಮಠ ಶಿವಬಸವ ನಗರ, ಬೆಳಗಾವಿ.

ಟಿ.ಗಿರಿಜ (ಸಂ), ೧೯೯೧, ಚಿತ್ರದುರ್ಗ ಜಿಲ್ಲಾ ದರ್ಶಿನಿ, ರೇಖಾ ಪ್ರಕಾಶನ ೧/೮೯೮ ಮೈಸೂರು ಮಠದ ರಸ್ತೆ, ದಾವಣಗೆರೆ-೧.

ಗೋನವಾರ್ ಕಿಶನ್‌ರಾವ್ (ಅನು), ೧೯೯೫, ಶ್ರೀ ಶೈಲ ಇತಿಹಾಸ ಮತ್ತು ಉಪಾಸನೆ, ವೆಂಗಲಶಂಕರ ರೆಡ್ಡಿ ಕಾರ್ಯನಿರ್ವಾಹಕ ಶ್ರೀ ಶೈಲ ದೇವಾಸ್ಥಾನ, ಶ್ರೀ ಶೈಲ.

ಡಾ.ಎಚ್.ಎಸ್. ಗೋಪಾಲ ರಾವ್ (ಸಂ), ೨೦೦೫, ಹೊಸತು ವಾಚಿಕೆ ಇತಿಹಾಸದ ಪರಾಮರ್ಶೆ, (ಇತಿಹಾಸ ಕುರಿತ ಲೇಖನಗಳು), ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಚಂದ್ರಶೇಖರ ನಾರಾಣಾಪುರ (ಸಂ), ೨೦೦೨, ಮಠಗಳ ಪರಂಪರೆ ಮಾಹಿತಿಕೋಶ ವೀರಶೈವ ಮಠಗಳು ಸಂ-೧, ಗೆಳೆಯರ ಪ್ರಕಾಶನ, ವಿನಾಯಕನಗರ, ಚಿಕ್ಕಮಗಳೂರು.

ಸಿ.ಎನ್.ಚನ್ನವೀರಯ್ಯ (ಸಂ), ೧೯೯೦, ಷಟಸ್ಥಲ ಸೋಪಾನ, ಜ್ಞಾನವಾಹಿನಿ ನಂ ೫೮೮-೮ನೇ ಮುಖ್ಯ ರಸ್ತೆ ವಿಜಯನಗರ ವಿಸ್ತರಣೆ ಬೆಂಗಳೂರು.

ಡಾ. ಎಂ. ಚಿದಾನಂದಮೂರ್ತಿ, ೨೦೦೦, ವೀರಶೈವ ಧರ್ಮ ಭಾರತೀಯ ಸಂಸ್ಕೃತಿ , ಮಿಂಚು ಪ್ರಕಾಶನ, ಬೆಂಗಳೂರು.

ಡಾ. ಎಂ. ಚಿದಾನಂದಮೂರ್ತಿ, ೨೦೦೪, ಬಸವಣ್ಣ : ಕರ್ನಾಟಕ : ಭಾರತ, ಸಪ್ನ ಬುಕ್ ಹೌಸ್ ತುಂಗಾ ಕಾಂಪ್ಲೆಕ್ಸ್ ಗಾಂಧಿನಗರ, ಬೆಂಗಳೂರು-೦೯.

ಡಾ. ಎಂ. ಚಿದಾನಂದಮೂರ್ತಿ, ೧೯೯೮, ವಚನ ಶೋಧ-೨, ಪ್ರಿಯದರ್ಶಿನಿ ಪ್ರಕಾಶನ ೧೩೮, ೭ನೇ ಸಿ ಮುಖ್ಯ ರಸ್ತೆ ವಿಜಯನಗರ, ೨೭ನೇ ಹಂತ ಬೆಂಗಳೂರು.

ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಯು. ಮಂಜುನಾಥ (ಸಂ), ೧೯೯೯, ಭೂಷಣ, ಶ್ರೀ ಸರ್ಪ ಭೂಷಣ ಶಿವಯೋಗಿಶ್ವರ ಮಠ ಕೆಂಪೇಗೌಡ ವೃತ್ತ, ಬೆಂಗಳೂರು.

ಡಾ. ಎಂ. ಚಿದಾನಂದಮೂರ್ತಿ, ೨೦೦೫, ಕರ್ನಾಟಕ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ ಚಾಮರಾಜಪೇಟೆ, ಬೆಂಗಳೂರು.

ಡಾ. ಎಂ. ಚಿದಾನಂದಮೂರ್ತಿ, ೨೦೦೫, ಭಾಷಿಕ ಬೃಹತ್ ಕರ್ನಾಟಕ (ನೀಲಗಿರಿಯಿಂದ ನಾಸಿಕ್‌ವರೆಗೆ), ಸಪ್ನ ಬುಕ್‌ಹೌಸ್, ತುಂಗಾ ಕಾಂಪ್ಲೆಕ್ಸ್, ಗಾಂಧಿನಗರ, ಬೆಂಗಳೂರು.

ಡಾ. ಎನ್. ಚಿನ್ನಸ್ವಾಮಿ ಸೋಸಲೆ, ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ. ಚನ್ನಕ್ಕ ಪಾವಟೆ, ೨೦೦೪, ಶರಣ ಸಂಸ್ಕೃತಿ : ಮುಖಾಮುಖಿ, ಚಿತ್ತರಗಿ ಪ್ರಕಾಶನ, ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನ ಮಠ, ಇಲಕಲ್ಲ.

ಶ್ರೀ ಬಿ. ಡಿ. ಜತ್ತಿ (ಸಂ), ೧೯೬೮, ಬಸವೇಶ್ವರರ ಸಮಕಾಲೀನರು, ಶ್ರೀ ಅನ್ನದಾನಯ್ಯ ಪುರಾಣಿಕ ಜನರಲ್ ಸೆಕ್ರೆಟರಿ, ಬಸವಸದನ, ಬೆಂಗಳೂರು.

ಡಾ ಜಯಶ್ರೀದಂಡೆ , ೧೯೯೪, ವಚನಗಳಲ್ಲಿ ಶೈವ ಹಾಗು ವೀರಶೈವ, ಕವಿಮಾರ್ಗ ಪ್ರಕಾಶನ, ತೇಜಶ್ವಿನಿ ಸರಸ್ವತಿಪುರ, ವಿ. ವಿ
ಅಂಚೆ, ಕಲಬುರ್ಗಿ–೬

ತರಳಬಾಳು ಶಿವಮೂರ್ತಿ(ಸಂ), ೧೯೭೦, ಮರುಳಸಿದ್ಧ ದೇವರ ಚರಿತ್ರೆ (ಸಾಂಗತ್ಯ), ತರಳಬಾಳು ಪ್ರಕಾಶನ, ಸಿರಿಗೆರೆ.

ಡಾ. ಎಚ್. ತಿಪ್ಪೇರುದ್ರಸ್ವಾಮಿ, ೧೯೬೯, ವಚನಗಳಲ್ಲಿ ವೀರಶೈವ ಧರ್ಮ, ಡಿ.ವಿ.ಕೆ. ಮೂರ್ತಿ ಪ್ರಕಾಶನ ಕೃಷ್ಣಮೂರ್ತಿಪುರಂ, ಮೈಸೂರು–೪.

ಡಾ. ಎಚ್. ತಿಪ್ಪೇರುದ್ರಸ್ವಾಮಿ, ೧೯೯೭, ಕರ್ಣಾಟಕ ಸಂಸ್ಕೃತಿ ಸಮೀಕ್ಷೆ. ಡಿ.ವಿ.ಕೆ. ಮೂರ್ತಿ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು–೪.

ತಂಬಂಡ ವಿಜಯ ಪೂಣಚ್ಚ (ಸಂ), ೨೦೦೧, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ : ೪ ಚರಿತ್ರೆ , ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹೆಚ್. ದೇವೀರಪ್ಪ, ಮಹದೇವ ಬಣಕಾರ (ಸಂ), ೧೯೭೪, ವಿಶ್ವಬಂಧು ಮರುಳಸಿದ್ಧ ಹಾಗೂ ಆತನ ಪರಂಪರೆ, ತರಳಬಾಳು ಪ್ರಕಾಶನ, ಸಿರಿಗೆರೆ.

ಡಾ.ಡಿ.ಎಲ್.ನರಸಿಂಹಾಚಾರ್ (ಸಂ), ೧೯೭೦, ಕನ್ನಡ ನಿಘಂಟು ಸಂಪುಟ–೧, ಕನ್ನಡ ಸಾಹಿತ್ಯ ಪರಿಷತ್ತು ಚಾಮರಾಜಪೇಟೆ, ಬೆಂಗಳೂರು.

ಡಾ. ಹಾ.ಮಾ. ನಾಯಕ್ (ಸಂ), ೧೯೮೧, ಕನ್ನಡ ಸಾಹಿತ್ಯ ಚರಿತ್ರೆ (ಸಂ–೫), ಕನ್ನಡ ಅಧ್ಯಯನ ಸಂಸ್ಥೆ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಡಾ. ಹಾ. ಮಾ. ನಾಯಕ್, ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ (ಸಂ), ೧೯೭೭, ಕನ್ನಡ ಸಾಹಿತ್ಯ ಚರಿತ್ರೆ (ಸಂ–೪), ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ನಗುವನಹಳ್ಳಿ ಪಿ. ರತ್ನ(ಸಂ), ೧೯೮೯, ತಿಲಕಪುರ ಸೋಮ ವಿರಚಿತ ಚತುರಾಚಾರ್ಯ ಪ್ರಬಂಧ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ವಿಶ್ವವಿದ್ಯಾನಿಲಯ ಮೈಸೂರು.

ಎಂ. ಹೆಚ್. ನಾಗರಾಜು, ೨೦೦೩, ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ, ಅನಿಕೇತನ ಪ್ರಕಾಶನ, ತುಮಕೂರು,

ಡಾ. ಎಂ. ಜಿ. ನಾಗರಾಜು, ಡಾ. ಪಿ. ವಿ. ಕೃಷ್ಣಮೂರ್ತಿ(ಸಂ), ೨೦೦೭, ಇತಿಹಾಸ ದರ್ಶನ ಸಂಪುಟ ೨೨, ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು.

ಜಿ.ನಾರಾಯಣಸ್ವಾಮಿ, ೨೦೦೩, ವಚನ ಸಾಹಿತ್ಯದಲ್ಲಿ ದಲಿತ ಸಂವೇದನೆ, ಮೋಹನ ಪ್ರಕಾಶನ ಹೊಸಕೋಟೆ ತಾ. ಬೆಂಗಳೂರು ಜಿಲ್ಲೆ.

ಡಾ. ನೀಲಮ್ಮ ಕತ್ನಳ್ಳಿ, ೧೯೯೯, ಮಹಾದೇವಬಣಕಾರರ ಕೃತಿಗಳು, ರೇಣುಕ ಪ್ರಕಾಶನ, ಶರಣ ನಗರ ಶಹಾಬಾದ್.

ಡಾ. ವಿ. ಜಿ. ಪೂಜಾರ್, ೧೯೯೧ , ವೀರಶೈವ ಸಾಹಿತ್ಯದಲ್ಲಿ ಪವಾಡ ಕಥೆಗಳು, ಗುಲ್ಬರ್ಗ ವಿಶ್ವವಿದ್ಯಾನಿಲಯಕ್ಕೆ ಅರ್ಪಿಸಿದ ಪಿಹೆಚ್.ಡಿ. ಪ್ರಬಂಧ, ಪುಸ್ತಕ ಅಕಾಡೆಮಿ ಕಲಬುರ್ಗಿ.

ಪಂಡಿತ್ ಶ್ರೀ ಕಾಶೀನಾಥ ಶಾಸ್ತ್ರಿಗಳವರು, ೧೯೬೪, ಶ್ರೀ ಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ, ಮಹಾಚಾರ್ಯತ್ವ ಪ್ರಕಾಶನ, ಮೈಸೂರು.

ಪಂಡಿತ್ ಎಸ್. ಬಸಪ್ಪ (ಸಂ), ೧೯೭೭, ದೇವಕವಿ ಕೃತ ಮರುಳಸಿದ್ಧ ಕಾವ್ಯ, ತರಳಬಾಳು ಪ್ರಕಾಶನ, ಸಿರಿಗೆರೆ.

ಡಾ. ಪೂನ್ನಪ್ಪ ಎಸ್. ಮಾಳ್ಗೆ, ೨೦೦೪, ಬಸವೇಶ್ವರ ಮತ್ತು ಅಂಬೇಡ್ಕರ್ ಚಿಂತನೆಗಳಲ್ಲಿ ಸಾಮಾಜಿಕ ನ್ಯಾಯ, ರಾಜ್ ಪ್ರಕಾಶನ, ಹನುಮಂತನಗರ ಬನ್ನಿಮಂಟಪ ರಸ್ತೆ, ಮೈಸೂರು.

ಎನ್. ಬಸವರಾಧ್ಯ (ಸಂ), ೧೯೮೬, ಚತುರಾಚಾರ್ಯ ಚಾರಿತ್ರ , ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ವಿಶ್ವವಿದ್ಯಾಲಯ ಮೈಸೂರು.

ಎನ್. ಬಸವರಾಧ್ಯ (ಸಂ), ೧೯೯೩, ಕನ್ನಡ ನಿಘಂಟು (ಸಂ-೭), ಪ್ರಕಾಶನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಡಾ. ಬಸವರಾಜ ಸಬರದ, ೧೯೯೩, ಬಸವೇಶ್ವರ ಮತ್ತು ಪುರಂದರ ದಾಸ ಒಂದು ಸಾಹಿತ್ಯಕ ಅಧ್ಯಯನ, ತರಳಬಾಳು ಪ್ರಕಾಶನ, ಸಿರಿಗೆರೆ.

ಡಾ. ಬಸವರಾಜ ಸಬರದ, ೨೦೦೪, ಬಸವ ಪ್ರಜ್ಞೆ-ಅಪವರ್ಗೀಕರಣ ಹಾಗೂ ವೈರುಧ್ಯಗಳು, ಕನ್ನಡ ಸಾಹಿತ್ಯ ಪರಿಷತ್ತು ಪಂಪಮಹಾಕವಿ ರಸ್ತೆ ಚಾಮರಾಜಪೇಟೆ, ಬೆಂಗಳೂರು.

ಬಸವರಾಜ ಕಲ್ಗುಡಿ, ೨೦೦೧, ಅನುಭಾವ ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಕರ್ನಾಟಕ ಸರ್ಕಾರ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಬಸವಣ್ಣೆಪ್ಪ ನೀಲಪ್ಪ ಹಳವಳ್ಳಿ, ೧೯೯೯, ಹಾಲುಮತದ ಪುರಾಣವು ,ವಿದ್ಯಾನಿಧಿ ಪ್ರಕಾಶನ, ಗದಗ.

ಪ್ರೊ . ಸಂ.ಶಿ.ಭೂಸನೂರ ಮಠ (ಸಂ), ೧೯೫೦, ಸಿದ್ಧನಂಜೇಶ ವಿರಚಿತ ಗುರುರಾಜ ಚಾರಿತ್ರ, ಶ್ರೀ.ಮು.ನಿ. ಪ್ರ ಮುರಾಘಮಠ, ಧಾರವಾಡ,

ಮಹದೇವಬಣಕಾರ (ಸಂ), ೧೯೮೮, ದಿಟ್ಟ ಹೆಜ್ಜೆ – ಧೀರ ಕ್ರಮ, ತರಳಬಾಳು ಪ್ರಕಾಶನ, ಸಿರಿಗೆರೆ.

ಎಂ. ಮರಿಯಪ್ಪಭಟ್ (ಸಂ), ೧೯೭೭. ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಿಘಂಟು (ಸಂ೩), ಕನ್ನಡ ಸಾಹಿತ್ಯ ಪರಿಷತ್ತು. ಚಾಮರಾಜಪೇಟೆ, ಬೆಂಗಳೂರು.

ಡಾ.ರಂ.ಶ್ರೀ ಮುಗಳಿ(ಸಂ), ೧೯೭೮, ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂ-೪), ಭಾಗ-೩, ಪ್ರಸಾರಾಂಗ, ಜ್ಞಾನಭಾರತಿ ಬೆಂಗಳೂರು, ವಿಶ್ವವಿದ್ಯಾನಿಲಯ ಬೆಂಗಳೂರು.

ಡಾ.ಸಿ.ಮಹದೇವ, ಡಾ.ಎ.ಸುಬ್ಬಣ್ಣ ರೈ, ಡಾ,ಮಾಧವ ಪೆರಾಜೆ (ಸಂ), ೨೦೦೨, ಹೊಸಪೇಟೆ ತಾಲೂಕು ದರ್ಶನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಮೈಲಹಳ್ಳಿ ರೇವಣ್ಣ, ೨೦೦೪, ಮಾದರ ಸಂಸ್ಕೃತಿ ಮತ್ತು ಸಾಹಿತ್ಯ, ರಾಜ್ ಪ್ರಕಾಶನ ನಂ.೮೩,ಕೆ.ಎಸ್.ಆರ್.ಟಿ.ಸಿ. ಬಡಾವಣೆ ಬನ್ನಿಮಂಟಪ, ಮೈಸೂರು-೧೫

ಡಾ.ಕೆ.ಮೋಹನ ಕೃಷ್ಣ ರೈ , ೨೦೦೬ , ವಸಾಹತು ಪೂರ್ವ ಕರ್ನಾಟಕದ ನಗರಚರಿತೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,

ರಹಮತ್ ತರೀಕೆರೆ (ಸಂ) , ೨೦೦೦, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೩ ಧರ್ಮ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,

ರಹಮತ್ ತರೀಕೆರೆ, ೧೯೯೮, ಕರ್ನಾಟಕದ ಸೂಫಿಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಎನ್.ಎಮ್. ರವಿಕುಮಾರ್, ಡಾ.ಎ.ವೃಷಬೇಂದ್ರಾಚಾರ್(ಸಂ) , ೧೯೯೮ , ಮುನ್ನಡೆಯ ಕೂಡ್ಲಿಗಿ (ಕೂಡ್ಲಿಗಿ ತಾಲೂಕು ಸಮಗ್ರ ದರ್ಶನ) , ಹಿಮಂತ ಪ್ರಕಾಶನ, ಎಮ್.ಬಿ.ಅಯ್ಯನಹಳ್ಳಿ.

ಡಾ.ರಾಮರೆಡ್ಡಿ ಎಸ್.ರಡ್ಡೇರ , ೨೦೦೫ , ದೇವರ ದಾಸಿಮಯ್ಯನ ಜೀವನ ಮತ್ತು ಸಾಹಿತ್ಯ, ವೆಂಕಾಮಣಿ ಪ್ರಕಾಶನ ಉಮಾಶಂಕರನಗರ, ರಾಣೇಬೆನ್ನೂರು,

ಪ್ರೊ. ಬಿ. ರಾಜಶೇಖರಪ್ಪ , ೨೦೦೧ , ಇತಿಹಾಸ ಕಥನ ,ಸಿ.ವಿ.ಜಿ. ಪಬ್ಲಿಕೇಷನ್ಸ್ , ಬೆಂಗಳೂರು-೩

ರಮೇಶ ನಾಯಕ್(ಸಂ) , ೨೦೦೭ , ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಡಾ.ರೇವಯ್ಯ ಒಡೆಯರ್, ೨೦೦೪ , ಶ್ರೀಮದ್ ಉಜ್ಜಯಿನಿ ಸದ್ಧರ್ಮಶ್ರೀ ಪೀಠದರ್ಶನ, ಅನನ್ಯ ಪ್ರಕಾಶನ, ಆಂಜನೇಯ, ಯುವಕ ಸಂಘ ಉಜ್ಜಯಿನಿ, ಬಳ್ಳಾರಿ ಜಿಲ್ಲೆ.

ರಾಬರ್ಟ ಸೆವೆಲ್, ೨೦೦೬ , ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, (ಅನು. ಸದಾನಂದ ಕನವಳ್ಳಿ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಡಾ. ಕೆ. ರವೀಂದ್ರನಾಥ(ಸಂ) , ೨೦೦೫ , ಲಕ್ಕಣ್ಣ ದಂಡೇಶನ ಶಿವ ತತ್ವ ಚಿಮತಾಮಣಿ ವಿವೇಚನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ರೊಮಿಲ ಥಾಪರ್,ಹರ್ಬನ್ಸ್ ಮುಖಿಯ, ೧೯೯೮ ,ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ, (ಅನು,ಕೆ.ಎಲ್.ಗೋಪಾಲಕೃಷ್ಣರಾವ್), ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಡಾ. ರಾಜಶೇಖರ ಹನುಮಲಿ, ೨೦೦೫, ವೀರಗಾಸೆ ಸಂಶೋಧನಾ ಮಹಾಪ್ರಬಂಧ, ಸಾಹಿತ್ತಸಿರಿ, ಶ್ರೀ ತರಳಬಾಳು ಜಗದ್ಗುರು, ಬೃಹನ್ಮಠ, ಸಿರಿಗೆರೆ.

ಪ್ರೊ.ಲಕ್ಷ್ಮಣ್ ತೆಲಗಾವಿ, ೧೯೯೯ , ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು (ಸಂ-೫), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ,

ಪ್ರೊ.ಲಕ್ಷ್ಮಣ್ ತೆಲಗಾವಿ, ೨೦೦೪, ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆ ಒಂದು ಶತಮಾನ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಹಿರಿಯೂರು (ತಾ), ಚಿತ್ರದುರ್ಗ (ಜಿಲ್ಲೆ).

ಪ್ರೊ.ಲಕ್ಷ್ಮಣ್ ತೆಲಗಾವಿ(ಸಂ), ೧೯೮೭, ಹರತಿ ಸಿರಿ, ಹೆಚ್.ವಿ. ವೀರನಾಯಕ ಹರತಿ ನೆನಪಿನ ಸಂಪುಟ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಹಿರಿಯೂರು (ತಾ), ಚಿತ್ರದುರ್ಗ (ಜಿಲ್ಲೆ)

ಪ್ರೊ.ಲಕ್ಷ್ಮಣ್ ತೆಲಗಾವಿ (ಸಂ), ೧೯೯೧ , ಸಂಶೋಧನ ಡಾ॥ ಎಂ. ಚಿದಾನಂದಮೂರ್ತಿ ಗೌರವ ಸಂಪುಟ, ೩ನೇ ರಾಗಿಣಿ ಸರ್ವಿಸ್ ರಸ್ತೆ, ವಿಜಯನಗರ ೭ನೇ ಹಂತ, ಬೆಂಗಳೂರು.

ಪ್ರೊ.ಲಕ್ಷ್ಮಣ್ ತೆಲಗಾವಿ, ಡಾ.ಎಂ.ವಿ.ಶ್ರೀನಿವಾಸ್ (ಸಂ), ೧೯೭೬, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ.

ಪ್ರೊ.ಲಕ್ಷ್ಮಣ್ ತೆಲಗಾವಿ, ೨೦೦೪, ಮೌರ್ಯ ಮತ್ತು ಶಾತವಾಹನ ಯುಗ , ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪ್ರೊ.ಲಕ್ಷ್ಮಣ್ ತೆಲಗಾವಿ, ೨೦೦೪, ಇತಿಹಾಸಕಾರ ಹೆಚ್.ವಿ.ವೀರನಾಯಕ ಹರತಿ ಜೀವನಚಿತ್ರ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ ಹಿರಿಯೂರು (ತಾ), ಚಿತ್ರದುರ್ಗ (ಜಿಲ್ಲೆ).

ಪ್ರೊ.ಲಕ್ಷ್ಮಣ್ ತೆಲಗಾವಿ(ಸಂ), ೨೦೦೩ , ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾ.ಲೋಕೇಶ್ ಒಡೆಯರ್ (ಸಂ), ೧೯೯೦, ವಿಮರ್ಶಕರ ಕಣ್ಣಲ್ಲಿ ಬಣಕಾರರ ಮರುಳಸಿದ್ಧ ಕಾವ್ಯ, ಯುವ ಹಿರಿಯ ವಿಧ್ಯಾರ್ಥಿ ಸಂಘ ಪ್ರಕಾಶನ, ಸಿರಿಗೆರೆ.

ಡಾ. ವಸು ಎಂ.ವಿ. (ಸಂ), ೨೦೦೧ , ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಾಸುದೇವ ಬಡಿಗೇರ, ೧೯೯೭, ಸಂಡೂರು ಪರಿಸರದ ಕಾರ್ತಿಕೇಯ ತಪೋವನ ಚಾರಿತ್ರಿಕ ಅಧ್ಯಯನ, ಮಾಯ ಪ್ರಕಾಶನ, ಕಮಲಾಪುರ.

ಡಾ.ವಿದ್ಯಾಶಂಕರ(ಸಂ), ೧೯೮೫ , ಚಿಕ್ಕರಾಚನ ಮಹಾದೇವಿಯಕ್ಕನ (ಸಾಂಗತ್ಯ), ತರಳಬಾಳುಪ್ರಕಾಶನ, ಸಿರಿಗೆರೆ.

ಡಾ.ವಿದ್ಯಾಶಂಕರ, ೧೯೮೨, ವೀರಶೈವ ಪುರಾಣಗಳು ಒಂದು ಆಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು.

ಡಾ. ವಿದ್ಯಾಶಂಕರ, (ಸಂ), ೧೯೯೯, ವಚನ ಸಾಹಿತ್ಯ-ದ್ವಿತೀಯ ಘಟ್ಟ, ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠ, ಕೆಂಪೇಗೌಡ ವೃತ್ತ , ಬೆಂಗಳೂರು.

ಡಾ. ವಿರೂಪಾಕ್ಷಿ ಪೂಜಾರಹಳ್ಳಿ (ಸಂ), ೨೦೦೫, ದಲಿತರು ಮತ್ತು ಚರಿತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೪, ಬಳ್ಳಾರಿ ಜಿಲ್ಲೆಯ ಪಾಳೆಯಗಾರರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ.ಬಿ. ವಿರೂಪಾಕ್ಷಪ್ಪ , ೨೦೦೪ , ಶರಣ ದೀಪಿಕೆ, ಬಸವನ ಸಮಿತಿ ಬಸವಭವನ ಬಸವೇಶ್ವರ ವೃತ್ತ , ಬೆಂಗಳೂರು-೧

ರಾ.ವೆಂಕಟೇಶ್ ಇಂದ್ವಾಡಿ , ೧೯೯೯ , ಮಂಟೇಸ್ವಾಮಿ ಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ತ.ಸು. ಶಾಮರಾಯ, ೧೯೬೭, ಶಿವಶರಣಕಥಾ ರತ್ನ ಕೋಶ , ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥ ಮಾಲೆ, ಮೈಸೂರು-೪

ಡಾ.ಜಿ.ಎಸ್.ಶಿವರುದ್ರಪ್ಪ (ಸಂ), ೧೯೭೮ , ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಪ್ರಸಾರಾಂಗ, ಜ್ಞಾನ ಭಾರತಿ ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಡಾ.ಜಿ.ಎಸ್.ಶಿವರುದ್ರಪ್ಪ (ಸಂ), ೧೯೭೬ , ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ (ಸಂ-೩), ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

ಡಾ.ವಿ.ಶಿವಾನಂದ (ಸಂ) , ೧೯೭೪ , ಗುಂಡ ಬ್ರಹ್ಮಯ್ಯಗಳ ಚರಿತ್ರೆ, ಅಖಂಡೇಶ್ವರ ಗ್ರಂಥಮಾಲೆ ಜೇವರಗಿ (ತಾ), ಗುಲಬರ್ಗ ಜಿಲ್ಲೆ.

ಡಾ. ಶಶಿಕಲಾ ಶಿವಶಂಕರ್ , ೨೦೦೦ , ದೀಪಕ್ಕೆ ದೀಪ್ತಿ (ವಚನಕಾರ್ತಿಯರು ಮಹಿಳಾ ಸಂವೇದನೆ), ಜ್ಞಾನೋದಯ ಪ್ರಕಾಶನ, ಬೆಂಗಳೂರು-೭೯.

ಆರ್.ಎಸ್.ಶರ್ಮ , ೨೦೦೪ , ಪ್ರಾಚೀನ ಭಾರತದಲ್ಲಿ ಶೂದ್ರರು , (ಅನು, ಡಾ.ಜೆ.ಶ್ರೀನಿವಾಸಮೂರ್ತಿ, ಡಾ.ಅರ್.ಶೋಭಾ), ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಆರ್.ಎಸ್.ಶರ್ಮ, ೧೯೯೭ , ಪ್ರಾಚೀನ ಭಾರತ , (ಅನು,ಎನ್.ಪಿ. ಶಂಕರ್‌ನಾರಾಯಣ ರಾವ್), ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಆರ್.ಎಸ್.ಶರ್ಮ, ೧೯೯೮ , ಭಾರತಕ್ಕೆ ಆರ್ಯರ ಪ್ರವೇಶ , (ಅನು,ಎಸ್. ಗುರುದತ್), ನವಕರ್ನಾಟಕ ಪ್ರಕಾಶನ, ಬೆಂಗಳೂರು.

ಪ್ರೊ. ಬಿ.ಷೇಕ್ ಆಲಿ, ಪ್ರೊ. ಅ. ಸುಂದರ (ಸಂ), ೧೯೯೭, ಕರ್ನಾಟಕ ಚರಿತ್ರೆ (ಸಂ-೧), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರೊ. ಬಿ.ಷೇಕ್ ಆಲಿ ಪ್ರೊ. ಬಿ. ಸುರೇಂದ್ರ ರಾವ್ (ಸಂ) ೧೯೯೭. ಕರ್ನಾಟಕ ಚರಿತ್ರೆ (ಸಂ-೨), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪ್ರೊ. ಬಿ.ಷೇಕ್ ಆಲಿ, ಪ್ರೊ ಎಸ್.ಚಂದ್ರಶೇಖರ್ (ಸಂ) , ೧೯೯೭ , ಕರ್ನಾಟಕ ಚರಿತ್ರೆ (ಸಂ-೭), ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ. ಆರ್.ಎಮ್. ಷಡಕ್ಷರಯ್ಯ , ೨೦೦೩ , ಉಜ್ಜಯಿನಿ ಸದ್ಧರ್ಮ ಪೀಠದ ಸಾಂಸ್ಕೃತಿಕ ಅಧ್ಯಯನ , ಶ್ರೀ ಜಗದ್ಗುರು ಸದ್ಧರ್ಮ ಪೀಠ, ಉಜ್ಜಯಿನಿ, ಬಳ್ಳಾರಿ ಜಿಲ್ಲೆ.

ಸದಾನಂದ ಕನವಳ್ಳಿ , ಚನ್ನಪ್ಪ ಕೆರಿಮನಿ (ಸಂ) , ೧೯೭೬ , ವೀರಶೈವ ಸಾಹಿತ್ಯ ಸಮೀಕ್ಷೆ, ಮಹಾಕವಿ ಪಂಪ ಪ್ರಕಾಶನ, ಲಕ್ಷ್ಮೇಶ್ವರ.

ಡಾ.ಎಂ.ಎಸ್. ಸುಂಕಪುರ (ಸಂ), ೧೯೭೮, ಸಕಲ ಪುರಾತನರ ವಚನಗಳು (ಸಂ–೩), ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

ಡಾ. ಸುಶೀಲಾ ಎಸ್. ನರಕೆ, ೨೦೦೦, ಮೋಳಿಗೆ ಮಾರಯ್ಯ ಮತ್ತು ಮಹಾದೇವಿಯಮ್ಮ ಒಂದು ಅಧ್ಯಯನ, ಲಕ್ಷ್ಮೀ ಪ್ರಕಾಶನ, ಧಾರವಾಡ.

ಡಾ.ಬಿ.ಎಸ್.ಸ್ವಾಮಿ (ಸಂ), ೧೯೯೭, ಬಸವಯುಗದ ಶರಣರು, ನವೀನ ಪ್ರಕಾಶನ, ಬೆಂಗಳೂರು.

ಶ್ರೀ ಕೆ.ಸಂಪದ್ಗಿರಿ ರಾವ್, ೧೯೭೦, ಕರ್ನಾಟಕದ ಪರಂಪರೆ (ಸಂಪುಟ–೧), ಪ್ರಕಾಶನ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಇಲಾಖೆ ಮೈಸೂರು ಸರ್ಕಾರ, ಬೆಂಗಳೂರು.

ಡಾ.ಸೂರ್ಯನಾಥ ಕಾಮತ್, ೧೯೯೯, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಜೂಪಿಟರ್ ಬುಕ್ಸ್ ಎಂ.ಸಿ.ಸಿ. ಪಬ್ಲಿಕೇಷನ್ಸ್ ಪಠ್ಯಪುಸ್ತಕ ವಿಭಾಗ, ಬೆಂಗಳೂರು.

ಡಾ.ಸೂರ್ಯನಾಥ ಕಾಮತ್, ೨೦೦೬, ಕರ್ನಾಟಕದ ಇತಿಹಾಸ ಹಲವು ಮುಖಗಳು, ಸುಮುಖ ಪ್ರಕಾಶನ ವಿದ್ಯಾರಣ್ಯನಗರ ಮಾಗಡಿರಸ್ತೆ, ಬೆಂಗಳೂರು.

ಡಾ.ಸಂಗಮೇಶ ಸವದತ್ತಿಮಠ , ೨೦೦೦ ,ವೀರಶೈವ ವಿನ್ಯಾಸ (ವೀರಶೈವ ವಾಗ್ಮಿಯ ಸಂಶೋಧನ ಲೇಖನಗಳು), ಕನ್ನಡ ಸಾಹಿತ್ಯ ಪರಿಷತ್ತು, ಪಂಪಮಹಾಕವಿ ರಸ್ತೆ , ಬೆಂಗಳೂರು.

ಸಿದ್ದಾರಾಮ ಸೊ. ಪೂಜಾರಿ, (ಗುಡ್ಡಾಪೂರ) , ೨೦೦೦ , ವೀರಶೈವ/ಲಿಂಗಾಯಿತ ಧರ್ಮದ ಮಠ–ಪೀಠಗಳ ಮೂಲಾಧಾರ, ಬಸವ ಚೇತನ ಪ್ರಕಾಶನ, ಮಿರಜ್.

ಬಿ.ಸೂರ್ಯನಾರಾಯಣ ರಾವ್ , ೨೦೦೦, ಮರೆಯಲಾಗದ ಮಹಾಸಾಮ್ರಾಜ್ಯ, (ಅನು. ಬಾಲಸುಬ್ರಹ್ಮಣ್ಯ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

ಕೆ.ಎಮ್.ಸುರೇಶ್, ವಾಸುದೇವ ಬಡಿಗೇರ (ಸಂ), ೧೯೯೯ , ಕರ್ನಾಟಕದ ದೇವಾಲಯ ಕೋಶ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಪ್ರೋ.ವೀ.ವೀ. ಸಂಗಮದ್, ೧೯೯೯ , ಬಸವಣ್ಣನವರು ಲಿಂಗಾಯಿತ ಧರ್ಮಸ್ಥಾಪಕರು (ಸಂಶೋಧನಾತ್ಮ ಕೃತಿ), ಬಸವ ಬಳಗ ಅಕ್ಕ ಮಹಾದೇವಿ ರಸ್ತೆ , ದಾವಣಗೆರೆ–೩

ಎಚ್.ಡಿ.ಸಂಕಾಲಿಯಾ , ೨೦೦೬ , ಇತಿಹಾಸದ ಕಣ್ಣಲ್ಲಿ ರಾಮಾಯಣ, (ಅನು,ಮಹಾಬಲ್ಲೇಶ್ವರ ರಾವ್), ನವ ಕರ್ನಾಟಕ ಪ್ರಕಾಶನ, ಬೆಂಗಳೂರು.

ಡಾ.ಬಿ.ಎ.ಸಾಲೆತ್ತೊರೆ, ಡಾ.ದೇಸಾಯಿ ಪಾಂಡುರಂಗರಾಯರು, ೨೦೦೫ , ಕನ್ನಡ ನಾಡಿನಚರಿತ್ರೆ ಭಾಗ–೧, ಕನ್ನಡ ಸಾಹಿತ್ಯಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ , ಬೆಂಗಳೂರು.

ಹೆರಂಜೆ ಕೃಷ್ಣಭಟ್ಟ , ಮುರಳೀಧರ ಉಪಾಧ್ಯ ಹಿರಿಯಡಕ್ (ಸಂ), ೧೯೯೫, ಗೋವಿಂದ ಪೈ ಸಂಶೋಧನ ಸಂಪುಟ, ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು, ಉಡುಪಿ.

ಡಾ.ಎಸ್.ಎಂ.ಹಿರೇಮಠ, ೨೦೦೬ , ಶಬ್ದಲಜ್ಜೆ , ವಿದ್ಯಾನಿಧಿ ಪ್ರಕಾಶನ, ಗದಗ.

ಡಾ.ಬಿ.ಅರ್.ಹಿರೇಮಠ (ಸಂ) , ೧೯೯೩ , ಸಂಕೀರ್ಣ ವಚನ ಸಂಪುಟ : ಮೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

ಎ.ಹೆಚ್.ಹುಚ್ಚಪ್ಪ, ೨೦೦೫, ಲಿಂಗಾಯಿತ ಧರ್ಮಕ್ಕೂ ಮತ್ತು ವೀರಶೈವಕ್ಕೂ ಇರುವ ತಾತ್ವಿಕ ವ್ಯತ್ಯಾಸ, ಪ್ರಕಾಶಕರು. ಬಸವ ಪ್ರಭು ನಿಲಯ, ನಂ ೭೫, ಲೆನಿನ್ ನಗರ ದಾವಣಗೆರೆ.

ಅ.ಸಿ.ಹಿರೇಮಠ (ಸಂ) , ೨೦೦೧ , ವೀರಶೈವ ಪಂಚಪೀಠ ಪರಂಪರೆ (ಪರಿಷ್ಕೃತ ಆವೃತ್ತಿ), ಪ್ರಕಾಶಕರು ಶ್ರೀ ಜಗದ್ಗುರು ಜ್ಞಾನ ಸಿಂಹಾಸನ ಜ್ಞಾನ ಗುರು ವಿದ್ಯಾಪೀಠ, ಉಜ್ಜಯಿನಿ, ಬಳ್ಳಾರಿ ಜಿಲ್ಲೆ.

Bhattacharya, B. 1958, the Indian Buddhist , publication Iconography, Calcutta.

C.Hayavadan Rao (Ed), 1936, The Srikara Bhashya (vol I), Bangalore press, Mysore road, Bangalore.

Channabasappa , S.patil ,vinoda C.Patil (Ed), 1997, Inscriptions of Bellary Distric, Directorate of Archaeology & museums Mysore.

Dr.B.Subrahamanyam, 1997, pre-proto & Early Historic cultures of Krishna tungabhadra vally , Bharatiya kala prakashan, Delhi.

J.A. Simpson ,& E.S.C . weiner (Ed), 1989,The oxford English Dictionary, clarendon press, oxford university, New york.

John Bowker (Ed),1997, The oxford Dictionary of world Religions, oxford university press, oxford, New york.

K. Ishwaran (Atu), 1983, Religion & society among the Lingayats of south India, vikas publishing House Pvt Ltd, Ghaziabad (U.P)

K.A. Nilakanta sastri , 1963, Development of Religion in south India, Orient Longmans, New Delhi.

Mircea Eliode (Ed),1987, The Encyclopaedia of Religion Macmillan publishing company, Newyork.

Prof. M.Mariappa Bhat (Ed), 1969,Kittels kannda English,Dictionary vol II, publication, University of madras.

R,N.saletore, 1984, Encyclopaedia of Indian culture, vol IV, R-v sterling publication private Ltd, New Delhi.

R,N.saletore, 1985, Encyclopaedia of Indian culture vol, (v-z) sterling publication private Ltd, New Delhi.

R,N.saletore,1981, Encyclopaedia of Indian culture, vol I, sterling publication private Ltd, New Delhi.

R.C.Dwivedi (Ed), 1986, An outline of History of Saiva philosophy,Motilal Banarsidass, Delhi.

Suboda kapoor (Ed), 2000, The Hindus Encyclopaedia of Hinduism Vol V, Cosmo publication, New Delhi.

Swami prakashan, & saraswati, 2004, the True History&the Religion of India a concise, Encyclopaedia of Authentic Hinduism, motilal Banarsidass pub Delhi.

Vijiyalakshmi K.S.(Ed), 2006, studies in Karnataka History & culture proceedings vol VII, Karnataka History, congress.

ಗೆಜೆಟಿಯರಗಳು

ಸೂರ್ಯನಾಥ,ಯು.ಕಾಮತ್ (ಸಂ), ೧೯೮೪ , ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ ಒಂದು, ಕರ್ನಾಟಕ ಗೆಜೆಟಿಯರ್. ಇಲಾಖೆ ೮ನೇ ಮಹಡಿ ಜಲಮಂಡಳಿ ಕಟ್ಟಡ, ಕಾವೇರಿಭವನ, ಬೆಂಗಳೂರು.

ಸೂರ್ಯನಾಥ,ಯು.ಕಾಮತ್ (ಸಂ) , ೧೯೮೬ , ಕರ್ನಾಟಕ ರಾಜ್ಯ ಗೆಜೆಟಿಯರ್ ಭಾಗ ಮೂರು, ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ, ಬೆಂಗಳೂರು.

Francis,W. (Ed), 1904, Madras district gazetteer, Bellary district, Madras.

Kelshall , J . 1872 , Madras district gazetteer Bellary district vol V Madras

Suryanath, U. Kamath (Ed), 1982 , Karnataka state gazetteer part I, Government of Karnataka Publication, Bangalore.

ಶಾಸನ ಸಂಪುಟಗಳು

ಡಾ.ದೇವರಕೊಂಡಾರೆಡ್ಡಿ (ಸಂ), ೧೯೯೮ , ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ-೧, ಬಳ್ಳಾರಿ ಜಿಲ್ಲೆ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ.ಕೆ.ಆರ್.ಗಣೇಶ, ಡಾ.ಆರ್.ಶೇಷಶಾಸ್ತ್ರಿ (ಸಂ), ೨೦೦೧, ಆಂಧ್ರಪ್ರದೇಶದ ಶಾಸನಗಳು ಭಾಗ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ.ಜಿ.ಎನ್.ಉಪಾಧ್ಯ, ಡಾ. ದೇವರಕೊಂಡರೆಡ್ಡಿ (ಸಂ) , ೨೦೦೧, ಮಹಾರಾಷ್ಟ್ರದ ಕನ್ನಡ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ.ಎ.ವಿ.ನರಸಿಂಹಮೂರ್ತಿ (ಸಂ) , ೧೯೯೮ , ಎಪಿಗ್ರಾಫಿಯ ಕರ್ನಾಟಕ ಸಂ-೧೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಬಾ.ರಾ.ಗೋಪಾಲ (ಸಂ), ೧೯೭೪, ಎಪಿಗ್ರಾಫಿಕ್ ಕರ್ನಾಟಕ ಸಂ-೩, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

ಬಾ.ರಾ.ಗೋಪಾಲ (ಸಂ), ೧೯೭೯ , ಎಪಿಗ್ರಾಫಿಕ್ ಕರ್ನಾಟಕ ಸಂ-೭, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

B.L.Rais (Ed), 1903, Eprigraghica.carnatic vol XI, publication, Government of Mysore.

ವಿಶ್ವಕೋಶಗಳು

ಹೆಚ್.ತಿಪ್ಪೇರುದ್ರಸ್ವಾಮಿ (ಸಂ), ೧೯೮೬, ಕನ್ನಡ ವಿಶ್ವಕೋಶ, ಸಂ-೧೨, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

ಎಂ.ಫಿಲ್. ನಿಬಂಧಗಳು (ಅಪ್ರಕಟಿತ)

ರಮೇಶ .ಕೆ. ಉಜ್ಜನಿ ಗ್ರಾಮಾಧ್ಯಯನ, ಜಾನಪದ ವಿಭಾಗ , ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೨.

ಪಿಹೆಚ್.ಡಿ. ಪ್ರಬಂಧಗಳು (ಅಪ್ರಕಟಿತ)

ವಿರೂಪಾಕ್ಷ, ಮಧ್ಯಕಾಲೀನ ಕನ್ನಡಕಾವ್ಯಗಳಲ್ಲಿ ನಿರೂಪಿತವಾಗಿರುವ ಬೇಟೆ ಮತ್ತು ಬೇಡರ ಸಂದರ್ಭಗಳು : ಒಂದು ಚಾರಿತ್ರಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೨೦೦೦.

ಶಕುಂತಲಾ ಗೋಪಶೆಟ್ಟಿ, ರೇವಣಸಿದ್ಧರು ಒಂದು ಅಧ್ಯಯನ , ಹಸ್ತ ಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೨೦೦೩.

ಡಾ.ಎಂ.ಚಿದಾಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ , ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ೧೯೭೯.

ಎಮ್.ಜವರಯ್ಯ, ದಲಿತ ವರ್ಗದ ಕೆಲವು ಶರಣರು ಒಂದು ವಿಶ್ಲೇಷಣೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.೧೯೮೬.

ವಾರ್ಷಿಕ ಸಂಚಿಕೆಗಳು

ಆರ್.ಚಂದ್ರಶೇಖರಪ್ಪ (ಸಂ) , ೧೯೬೭. ತರಳುಬಾಳು ರಜತೋತ್ಸವ ಸಂಚಿಕೆ, ತರಳುಬಾಳು ಪ್ರಕಾಶನ, ಸಿರಿಗೆರೆ.

ಎಸ್.ಬಿ.ರಂಗನಾಥ, ನಾ. ಲೋಕೇಶ್ ಒಡೆಯರ್(ಸಂ) , ೧೯೭೯ ಪಟ್ಟಾಭಿಷೇಕ ಸ್ಮರಣ ಸಂಚಿಕೆ, ತರಳುಬಾಳು ಪ್ರಕಾಶನ, ಸಿರಿಗೆರೆ.

ಹೆಚ್.ದೇವೀರಪ್ಪ(ಸಂ) , ೧೯೮೩, ತರಳುಬಾಳು ಶಂಕುಸ್ಥಾಪನೆ ಸಮಾರಂಭದ ನೆನಪಿನ ಸಂಚಿಕೆ, ಪ್ರಕಾಶನ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರ ಬೆಂಗಳೂರು.

ಎಸ್.ಬಿ.ರಂಗನಾಥ, (ಸಂ) , ೧೯೭೭ , ಆರೋಹಣ ಸಾಣೇಹಳ್ಳಿ ಶ್ರೀ ಮಠದಪಟ್ಟಾಧಿಕಾರ ಪ್ರಧಾನ ಮಹೋತ್ಸವ ಸ್ಮರಣ ಸಂಚಿಕೆ, ತರಳುಬಾಳು ಪ್ರಕಾಶನ, ಸಿರಿಗೆರೆ.

ಆರ್.ಬಿ.ಮಜ್ಜಗಿ (ಸಂ) , ೧೯೭೫ , ತರಳುಬಾಳು ಹುಣ್ಣಿಮೆ ಮಹೋತ್ಸವ ಸ್ಮರಣ ಸಂಚಿಕೆ, ಸೊಲ್ಲಾಪುರ ಸ್ವಾಗತ ಸಮಿತಿ, ಸೊಲ್ಲಾಪುರ, ಮಹಾರಾಷ್ಟ್ರ.

ರಾಂ.ವೆಂಕಟೇಶ ಶೆಟ್ಟಿ, (ಸಂ) , ೧೯೯೭, ತರಳುಬಾಳು ಹುಣ್ಣಿಮೆ ಸ್ಮರಣ ಸಂಚಿಕೆ, ರಾಣೆಬೆನ್ನೂರು, ಸ್ವಾಗತ ಸಮಿತಿ, ರಾಣೆಬೆನ್ನೂರು.

ಪ್ರೊ, ರಾಜಶೇಖರ ಹನುಮಲಿ (ಸಂ) , ೧೯೯೮, ತರಳುಬಾಳು ಹುಣ್ಣಿಮೆ ಸ್ಮರಣ ಸಂಚಿಕೆ, ಹೊಸದುರ್ಗ, ಸ್ವಾಗತ ಸಮಿತಿ, ಹೊಸದುರ್ಗ ಚಿತ್ರದುರ್ಗ (ಜಿಲ್ಲೆ).

ಬಿ. ತಿಪ್ಪೇರುದ್ರಸ್ವಾಮಿ (ಸಂ) , ೧೯೯೯, ತರಳುಬಾಳು ಹುಣ್ಣಿಮೆ ಸ್ಮರಣ ಸಂಚಿಕೆ, ಸ್ವಾಗತ ಸಮಿತಿ, ತರಳುಬಾಳು ಹುಣ್ಣಿಮೆ ಮಹೋತ್ಸವ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ.

ರಾ.ವೆಂಕಟೇಶಶೆಟ್ಟಿ (ಸಂ) , ೨೦೦೨ , ತರಳುಬಾಳು ಹುಣ್ಣಿಮೆ ಸ್ಮರಣ ಸಂಚಿಕೆ, ಹರಿಹರ, ತರಳುಬಾಳು ಹುಣ್ಣಿಮೆ ಮಹೋತ್ಸವ, ಸ್ವಾಗತ ಸಮಿತಿ, ಹರಿಹರ, ದಾವಣಗೆರೆ ಜಿಲ್ಲೆ.

Annual Report of the Mysore Archaeological Department, 1939.

ಅರ್ಧ ವಾರ್ಷಿಕ ಸಂಚಿಕೆಗಳು

ಡಾ. ಸಿ.ಆರ್.ಗೋವಿಂದರಾಜು (ಸಂ), ಚರಿತ್ರೆ ಅಧ್ಯಯನ ಸಂಪುಟ-೨, ಸಂಚಿಕೆ-೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಜುಲೈ-ಡಿಸೆಂಬರ್ ೨೦೦೬,

ಪ್ರೊ. ಲಕ್ಷ್ಮಣ ತೆಲಗಾವಿ (ಸಂ), ಚರಿತ್ರೆ ಅಧ್ಯಯನ, ಸಂಪುಟ-೧, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಜನವರಿ-ಜೂನ್ ೨೦೦೬.

ಪ್ರೊ. ಲಕ್ಷ್ಮಣ ತೆಲಗಾವಿ (ಸಂ), ಚರಿತ್ರೆ ಅಧ್ಯಯನ, ಸಂಪುಟ-೧, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಜುಲೈ-ಡಿಸೆಂಬರ್ ೨೦೦೫,

ಕೆ.ಜಿ.ಭಟಸೂರಿ (ಸಂ), ಶಾಸನ ಅಧ್ಯಯನ ಸಂಪುಟ-೨ , ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೨೦೦೫.

ಡಾ.ದೇವರಕೊಂಡಾರೆಡ್ಡಿ (ಸಂ), ಶಾಸನ ಅಧ್ಯಯನ ಗೌರಿಸಂಚಿಕೆ, ಸಂಪುಟ-೧, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೨೦೦೩,

ಕೆ.ಜಿ.ಭಟಸೂರಿ (ಸಂ), ಶಾಸನ ಅಧ್ಯಯನ ಸಂಪುಟ-೨, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.೨೦೦೫,

ಎ.ವಿ.ನಾವಡ (ಸಂ), ಕನ್ನಡ ಅಧ್ಯಯನ ಸಂಪುಟ-೧೦ , ಸಂಚಿಕೆ-೧, ಮತ್ತು ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಜುಲೈ-ಸೆಪ್ಟಂಬರ್ ೨೦೦೩ ಮತ್ತು ಅಕ್ಟೋಬರ್- ಡಿಸೆಂಬರ್ ೨೦೦೩.

ಎ.ವಿ.ನಾವಡ (ಸಂ), ಕನ್ನಡ ಅಧ್ಯಯನ ಸಂಪುಟ-೧೧, ಸಂಚಿಕೆ-೧ ಮತ್ತು ೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೫.

ತ್ರೈಮಾಸಿಕ

ರಹಮತ್ ತರೀಕೆರೆ (ಸಂ), ಕನ್ನಡ ಅಧ್ಯಯನ ಸಂಪುಟ–೮, ಸಂಚಿಕೆ–೪, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಏಪ್ರಿಲ್, ಮೇ, ಜೂನ್ ೨೦೦೭.

ತರಳುಬಾಳು ತ್ರೈಮಾಸಿಕ, ಸಂಪುಟ–೧, ಸಂಚಿಕೆ–೧, ತರಳುಬಾಳು ಪ್ರಕಾಶನ, ಸಿರಿಗೆರೆ. ಅಕ್ಟೋಬರ್ ೧೯೭೮.

ದಿನಪತ್ರಿಕೆಗಳು

ಕನ್ನಡಪ್ರಭ–ಫೆಬ್ರವರಿ ೨೭–೨೦೦೨,

ಕನ್ನಡಪ್ರಭ–ಮೇ ೦೬ –೨೦೦೩,

ಪ್ರಜಾವಾಣಿ–ಮೇ ೧೮–೨೦೦೨,

ಪ್ರಜಾವಾಣಿ–ಏಪ್ರಿಲ್ ೨೪–೨೦೦೩,

ಪ್ರಜಾವಾಣಿ–ಅಗಸ್ಟ ೦೪–೨೦೦೨,

ವಿಜಯಕರ್ನಾಟಕ – ಸೆಪ್ಟಂಬರ್ ೧೬–೨೦೦೩,

ವಿಜಯಕರ್ನಾಟಕ–ಜುಲೈ ೦೭–೨೦೦೪,

ವಿಜಯಕರ್ನಾಟಕ–ಸೆಪ್ಟಂಬರ್ ೧೩ –೨೦೦೨,

ಜನವಾಹಿನಿ–ಮೇ ೨೯ –೨೦೦೨,

ಜನತಾವಾಣಿ–ಏಪ್ರಿಲ್ ೩೦–೨೦೦೬,

ಜನತಾವಾಣಿ–ಫೆಬ್ರವರಿ ೨೪–೨೦೦೨,

ಜನತಾವಾಣಿ––ಫೆಬ್ರವರಿ ೦೩ –೨೦೦೨,

ಜನತಾವಾಣಿ–ಸೆಪ್ಟಬರ್ ೦೯–೨೦೦೨,

ಜನತಾವಾಣಿ–ಜನವರಿ ೨೭–೨೦೦೩,

ಜನತಾವಾಣಿ–ಮೇ ೨೯–೨೦೦೨,

ಜನತಾವಾಣಿ–ಮಾರ್ಚ್ ೦೬–೨೦೦೩,

ಜನತಾವಾಣಿ–ಮಾರ್ಚ್ ೦೭–೨೦೦೩,

ಛಾಯಾಚಿತ್ರಗಳು



ಕೃಪೆ : ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ ೯೯, ಹರಪನಹಳ್ಳಿ



ತರಳಬಾಳು ಬೃಹನ್ಮಠದ ಮೂಲ ಪುರುಷ ಮರುಳಸಿದ್ಧ
ಕೃಪೆ : ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ ೯೯, ಹರಪನಹಳ್ಳಿ



ಮರುಳಸಿದ್ಧರ ಜನ್ಮಸ್ಥಳ ಕಗ್ಗಲ್ಲುಪುರ ಬೇಚಾರಕು ಗ್ರಾಮ



ಉಜ್ಜಿನಿಯ ಮರುಳಸಿದ್ಧ ದೇವಾಲಯದ ದ್ವಾರ ಗೋಪುರ



ಉಜ್ಜಿನಿ ಮರುಳಸಿದ್ಧೇಶ್ವರ ದೇವಾಲಯದ ಒಳಾಂಗಣ



ಉಜ್ಜಿನಿ ಮರುಳಸಿದ್ಧೇಶ್ವರ ದೇವಾಲಯದ ನವರಂಗ



ಉಜ್ಜಿನಿ ಮರುಳಸಿದ್ಧೇಶ್ವರ ಉದ್ಭವಲಿಂಗ ಹಾಗೂ ಕಂಚಿನ ಮುಖವಾಡ



ಕಗ್ಗಲ್ಲುಮರದ ಬಾಚನಗೌಡ ವಿಗ್ರಹ, ಉಜ್ಜಿನಿ



ಮರುಳಸಿದ್ಧೇಶ್ವರರ ಶಿಷ್ಯ ಜಟ್ಟಿಗೇಶ್ವರ ದೇವಾಲಯ, ಉಜ್ಜಿನಿ



ಮಾದಿಗರ ಕೇರಿಯ ಮರುಳಸಿದ್ಧ ದೇವಾಲಯ, ಉಜ್ಜಿನಿ



ವಟಕ್ಷೇತ್ರ ಸಿದ್ಧನವರ್ತಿ, ಉಜ್ಜಿನಿ



ಕರುಗಳ ಕಾಯುವ ಸ್ಥಳ ಕರುಗಲ್ಲು ಗುಡ್ಡ
ತುರುಮಂದೆ ಸ್ಮಾರಕ, ಉಜ್ಜಿನಿ



ಉಜ್ಜಿನಿ ಗ್ರಾಮದ ಸುತ್ತಾ ಮರುಳಸಿದ್ಧೇಶ್ವರರ
ಪಾದಗಟ್ಟೆಯ ಸ್ಮಾರಕ



ಮರುಳಸಿದ್ಧರ ಶಿಷ್ಯ ಗದ್ದಿಗೆ ರಾಮಿ ತಂದೆಯ ದೇವಸ್ಥಾನ, ಉಜ್ಜಿನಿ



ಭೈರಸಿದ್ಧ ಸ್ಮಾರಕ ಭೈರ ದೇವರ ಬೆಟ್ಟ, ಉಜ್ಜಿನಿ



ಉಜ್ಜಿನಿ ಸಿದ್ಧಪ್ಪ ದೇವಾಲಯ ಪಲ್ಲಾವಗಟ್ಟೆ, ಜಗಳೂರು ತಾ.



ಜಗಳೂರು ತಾ. ಅಸಗೋಡಿನ ಶಂಭುಲಿಂಗೇಶ್ವರ ಉದ್ಭವಲಿಂಗ



ಮರುಳಸಿದ್ಧರು ಯಜ್ಞ ಶಾಲೆ ಪ್ರತಿಭಟಿಸಿದ ಕುರುಹುಗಳು, ಹೆಮ್ಮನಬೇತೂರು



ಹಗೇವು ಸಿದ್ಧೇಶ್ವರ ಸ್ಮಾರಕ ಕುರುಡಿ, ದಾವಣಗೆರೆ ತಾ.



ಮರುಳಸಿದ್ಧೇಶ್ವರ ದೇವಸ್ಥಾನ ಮುಚ್ಚನೂರು, ಜಗಳೂರು ತಾ.




ಮರುಳಸಿದ್ಧೇಶ್ವರ ಸ್ಮಾರಕ ಆನಗೋಡು, ದಾವಣಗೆರೆ ತಾ.



ದೋಣಿಕ್ಷೇತ್ರ ಸಿದ್ಧನೂರು, ದಾವಣಗೆರೆ ತಾ.



ಸಂಪಿಗೆಸಿದ್ಧೇಶ್ವರ ದೇವಾಲಯ ಚಿತ್ರದುರ್ಗ ಬೆಟ್ಟ


ಸಿದ್ಧೇಶ್ವರ ಉದ್ಭವಲಿಂಗ ಬಾತಿ, ದಾವಣಗೆರೆ ತಾ.


ಮರುಳಸಿದ್ಧೇಶ್ವರ ದೇವಾಲಯ ಎಲೆಬೇತೂರು, ದಾವಣಗೆರೆ ತಾ.


ಗದ್ದಿಗೆ ರಾಮಿ ತಂದೆ, ಮರುಳಸಿದ್ಧರ ಸ್ಮಾರಕ ಗೋಡೆಕೆರೆ ಚಿಕ್ಕನಾಯ್ಕನ ಹಳ್ಳಿ ತಾ.,
ತುಮಕೂರು ಜಿಲ್ಲೆ



ಜಟ್ಟಿಗೇಶ್ವರ ಸ್ಮಾರಕ ಹೆಮ್ಮನಬೇತೂರು, ದಾವಣಗೆರೆ ತಾ.



ತೆಲಗುಬಾಳು ಸಿದ್ಧನಿಗೆ 'ತರಳುಬಾಳು' ಎಂದು ಆಶೀರ್ವದಿಸಿದ ಮರುಳಸಿದ್ಧರ ಸ್ಮಾರಕ, ತೆಲಗುಬಾಳು, ಹೊಸಪೇಟೆ ತಾ.




ತರಳಬಾಳು ಶಾಖಾ ಮಠ, ಯಲಹಂಕ, ಬೇಲೂರು ತಾ., ಹಾಸನ ಜಿಲ್ಲೆ



ತರಳಬಾಳು ಶಾಖಾ ಮಠ, ಪಾಲ್ಕುರಿಕೆ, ತಿಪಟೂರು ತಾ.



ತರಳಬಾಳು ಬೃಹನ್ಮಠ, ಸಿರಿಗೆರೆ, ಚಿತ್ರದುರ್ಗ ತಾ.



ಶ್ರೀ ಮಠದ ನೂತನ ಕಟ್ಟಡ, ಸಾಣೆ ಹಳ್ಳಿ ತರಳಬಾಳು ಶಾಖಾ ಮಠ



ತರಳಬಾಳು ಹುಣ್ಣಿಮೆಯ ಮಹಾಮಂಟಪ – ಹರಪನಹಳ್ಳಿ ೧೯೯೯
ಕೃಪೆ : ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ ೯೯, ಹರಪನಹಳ್ಳಿ



ಸರ್ವಧರ್ಮ ಚಿಹ್ನೆಗಳು, ತರಳಬಾಳು ಹುಣ್ಣಿಮೆ, ಹರಪನಹಳ್ಳಿ
ಕೃಪೆ : ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ ೯೯, ಹರಪನಹಳ್ಳಿ




ತರಳಬಾಳು ಸದ್ಧರ್ಮ ಪೀಠಾರೋಹಣ



ಲಿಂ|| ಶ್ರೀ ಗುರುಶಾಂತರಾಜ ದೇಶಿಕೇಂದ್ರ
ಮಹಾಸ್ವಾಮಿಗಳವರು – ಸಿರಿಗೆರೆ




ಲಿಂ|| ಶ್ರೀ ಕಾಶಿಮಹಲಿಂಗ ಸ್ವಾಮಿಗಳವರು – ಸಿರಿಗೆರೆ
ಕೃಪೆ : ತರಳಬಾಳು ಹುಣ್ಣಿಮೆ ಸ್ಮರಣ ಸಂಚಿಕೆ ೯೯, ಹರಪನಹಳ್ಳಿ



ಲಿಂ॥ ಶ್ರೀ ಶಿವಕುಮಾರ ಶಿವಾಚಾರ್ಯ
ಮಹಾಸ್ವಾಮಿಗಳವರು, ಸಿರಿಗೆರೆ



ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು,
ತರಳಬಾಳು ಜಗದ್ಗುರು, ಸಿರಿಗೆರೆ



ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರು,
ಚರಪಟ್ಟಾಧ್ಯಕ್ಷರು, ಸಿರಿಗೆರೆ



ಶ್ರೀ ಶಿವಪ್ರಕಾಶ ಶಿವಾಚಾರ್ಯ ಸ್ವಾಮಿಗಳು
ತರಳಬಾಳು ಶಾಖಾ ಮಠ ಅರಳೀಕಟ್ಟೆ,
ಅರಸಿಕೇರೆ ತಾ.



ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ
ಸ್ವಾಮಿಗಳವರು ಸಾಣೆಹಳ್ಳಿ ಪಟ್ಟಾಧ್ಯಕ್ಷರು
ತರಳಬಾಳು ಶಾಖಾಮಠ



ಮರುಳಸಿದ್ಧೇಶ್ವರ ರಥೋತ್ಸವ ಆನಗೋಡು, ದಾವಣಗೆರೆ ತಾ.